ಶ್ರೀಮದ್‌ಭಗವತ್ಕುಂದಕುಂದಾಚಾರ್ಯದೇವವಿರಚಿತ

ಶ್ರೀ

ಪಂಚಾಸ್ತಿಕಾಯ ಸಂಗ್ರಹ

ಪ್ರಾಕೃತ ಗಾಥೆಗಳು, ಸಂಸ್ಕೃತಛಾಯೆ, ಕನ್ನಡ ಪದ್ಯಾನುವಾದ
ಶ್ರೀ ಪದ್ಮಪ್ರಭಮಲಧಾರಿದೇವವಿರಚಿತ 'ತಾತ್ಪರ್ಯವೃತ್ತಿ' ಟೀಕೆಯೊಡನೆ

ಗುಜರಾತಿ ಅನುವಾದಕರು :

ಶ್ರೀ ಹಿಂಮತಲಾಲ ಜೇಠಾಲಾಲ ಶಾಹ, ಬಿ.ಎಸ್ಸಿ.,

ಕನ್ನಡ ಅನುವಾದಕರು :

ಶ್ರೀ ಎಂ. ಬಿ. ಪಾಟೀಲ, ಸೇಡಬಾಳ

'ಶುದ್ಧಾತ್ಮಸದನ', ಶಹಾಪುರ - ಬೆಳಗಾವಿ.

ಪ್ರಕಾಶಕರು :

ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,
ಬೆಂಗಳೂರು.

ಮೊದಲನೆಯ ಆವೃತ್ತಿ : ಒಂದು ಸಾವಿರ ಪ್ರತಿಗಳು,
೧೯೮೬
ಎರಡನೆಯ ಆವೃತ್ತಿ : ಒಂದು ಸಾವಿರ ಪ್ರತಿಗಳು,
೨೦೦೦

(ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ)

ಬೆಲೆ : (ಐವತ್ತು ರೂಪಾಯಿ) ೫೦/-
(ಮೂಲ ಬೆಲೆ : ೮೫ ರೂ.)

ದೊರಕುವ ಸ್ಥಳ :

❄ ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ
೧೪೧, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - ೫೬೦ ೦೫೩.

❄ ''ಶ್ರುತ ಭಂಡಾರ'',
೩೬, ಶುದ್ಧಾತ್ಮ ಸದನ, ಹುಳಬತ್ತಿ ಕಾಲೋನಿ,
ಶಹಾಪುರ-ಬೆಳಗಾವಿ.
ಫೋನ ಃ ೨೪೬೬೯೧

❄ ಮುದ್ರಕರು :
ಇಮೇಜ ಪ್ರಿಂಟ್ಸ,
೨೩೯, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
ಫೋನ : ೨೪೨೬೧೩೭

ಸಹಜಾನಂದಚೈತನ್ಯಪ್ರಕಾಶಾಯ ಮಹೀಯಸೇ ।
ನಮೋऽನೇಕಾಂತವಿಶ್ರಾಂತಮಹಿಮ್ನೇ ಪರಮಾತ್ಮನೇ ॥

ಉವಸಂತಖೀಣಮೋಹೋ ಮಗ್ಗಂ ಜಿಣಬಾಸಿದೇಣ ಸಮುವಗದೋ ।
ಣಾಣಾಣುಮಗ್ಗಚಾರೀ ಣೆವ್ವಾಣಪುರಂ ವಜದಿ ಧೀರೋ ॥
ಜೀವಸಹಾವಂ ಣಾಣಂ ಅಪ್ಪಡಿಹದದಂಸಣಂ ಅಣಣ್ಣಮಯಂ ।
ಚರಿಯಂ ಚ ತೇಸು ಣಿಯದಂ ಅತ್ಥಿತ್ತಮಣಿಂದಿಯಂ ಭಣಿಯಂ ॥
ಜಸ್ಸ ಹಿದಏಣುಮೇತ್ತಂ ವಾ ಪರದವ್ವಮ್ಹಿ ವಿಜ್ಜದೇ ರಾಗೋ ।
ಸೋ ಣ ವಿಜಾಣದಿ ಸಮಯಂ ಸಗಸ್ಸ ಸವ್ವಾಗಮಧರೋ ವಿ ॥
ತಮ್ಹಾ ಣೆವ್ವುದಿಕಾಮೋ ರಾಗಂ ಸವ್ವತ್ಥ ಕುಣದು ಮಾ ಕಿಂಚಿ ।
ಸೋ ತೇಮ ವೀದರಾಗೋ ಭವಿಓ ಭವಸಾಯರಂ ತರದಿ ॥

– ಭ. ಕುಂದಕುಂದಾಚಾರ್ಯದೇವ

ಪರಮಜಿನೇಂದ್ರವಾಣಿಯೆ ಸರಸ್ವತಿ ಬೇರದು ಪೆಣ್ಮರೂಪಮಂ
ಧರಿಯಿಸಿ ನಿಂದುದಲ್ತದುವೇ ಭಾವಿಸಿಯೋದುವ ಕೇಳ್ವ ಪೂಜಿಪಾ
ಧರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯೆ ಮಾಳ್ಕೆಮಗಿಲ್ಲಿಯೆ ವಾಗ್ವಿಳಾಸಮಂ

–ಮಹಾಕವಿ ಪಂಪ

ಹೃದಯೋದ್ಗಾರ

ಭಗವಾನ ಶ್ರೀ ಕುಂದಕುಂದಾಚಾರ್ಯದೇವರು ಈ ಸಮಯಪಾಹುಡದಲ್ಲಿ ಹೀಗೆ ಅಪ್ಪಣೆ ಕೊಡಿಸುತ್ತಾರೆ - ಈ ಯಾವ ಭಾವವನ್ನು ನಾವು ಹೇಳಲಪೇಕ್ಷಿಸುತ್ತೇವೆ. ಅದನ್ನು ತಾವು ಅಂತರಂಗದ ಆತ್ಮಾನುಭವದಿಂದ ಪ್ರಮಾಣ ಮಾಡಿ ಪರೀಕ್ಷಿಸಿ ನೋಡಿಕೊಳ್ಳಬೇಕು. ಏಕೆಂದರೆ ಈ ಸಮಯಸಾರವು ಅನುಭವ ಪ್ರಧಾನವಾದ ಶಾಸ್ತ್ರವಿದೆ, ಅದರಲ್ಲಿ ನನಗೆ ವರ್ತಮಾನದಲ್ಲಿ ಯಾವ ಶುದ್ಧ ಪರಿಣತಿಯು ಪ್ರಾಪ್ತವಾಗಿದೆ - ಸ್ವಾತ್ಮವೈಭವವಿದೆ ಅದರ ಮುಖಾಂತರ ನಾನು ಹೇಳಲಪೇಕ್ಷಿಸುತ್ತೇನೆ - ಎಂದು ಪ್ರಸ್ತಾವನೆ ಮಾಡಿ ಆರನೆಯ ಗಾಥೆಯನ್ನು ಹೇಳುವಾಗ ಆಚಾರ್ಯಭಗವಂತರು ''ಆತ್ಮದ್ರವ್ಯವು ಅಪ್ರಮತ್ತವೂ ಇಲ್ಲ ಮತ್ತು ಪ್ರಮತ್ತವೂ ಇಲ್ಲ ಎಂದರೆ ಈ ಎರಡೂ ಅವಸ್ಥೆಗಳನ್ನು ನಿಷೇಧ ಮಾಡುತ್ತಿರುವ ನಾನು ಕೇವಲ ಜ್ಞಾತಾಸ್ವರೂಪಿಯಾದ ಅಖಂಡ ಆತ್ಮನಿದ್ದೇನೆ, ಈ ನನ್ನ ಪ್ರವರ್ತಮಾನವಾದ ವರ್ತಮಾನ ಅವಸ್ಥೆಯಿಂದ ನಾನು ಹೇಳುತ್ತಲಿದ್ದೇನೆ.'' ಮುನಿ ಅವಸ್ಥೆಯ ಯಾವ ಅಪ್ರಮತ್ತ ಮತ್ತು ಪ್ರಮತ್ತವೆಂಬ ಎರಡು ಭೂಮಿಕೆಗಳಿವೆ ಅವುಗಳಲ್ಲಿ ಸಾವಿರ ಸಲ ಬರಹೋಗುವ ಕಾರ್ಯಕ್ರಮವು ನಡೆದಿರುತ್ತದೆ. ಅಂಥ ಭೂಮಿಕೆಯಲ್ಲಿ ಪ್ರವರ್ತಿಸುತ್ತಿರುವ ಮಹಾಮುನಿಗಳು ಹೇಳಿದ ಕಥನವು ಇದಾಗಿದೆಯೆಂದು ಹೇಳುತ್ತಾರೆ.

ಸಮಯಪಾಹುಡವೆಂದರೆ ಸಮಯಸಾರರೂಪದ ಕಾಣಿಕೆಯಿದೆ. ಯಾವ ಪ್ರಕಾರ ರಾಜನಿಗೆ ಭೆಟ್ಟಿಯಾಗುವ ಪ್ರಸಂಗ ಬರುತ್ತದೆ. ಆಗ ಕಾಣಿಕೆ ಸಲ್ಲಿಸಬೇಕಾಗುತ್ತದೆ. ಅದೇ ಪ್ರಕಾರ ತನ್ನ ಪರಮೋತ್ಕೃಷ್ಟವಾದ ಆತ್ಮದೆಶೆಸ್ವರೂಪದ ಪರಮಾತ್ಮಾವಸ್ಥೆಯನ್ನು ಪ್ರಕಟಪಡಿಸಿಕೊಳ್ಳಬೇಕಾದರೆ ಸಮಯಸಾರ ಎಂದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಸ್ವರೂಪ ಆತ್ಮನ ಪರಿಣತಿರೂಪದ ಕಾಣಿಕೆಯನ್ನು ಸಲ್ಲಿಸಿದರೆ ಪರಮಾತ್ಮದಶೆಯು - ಸಿದ್ಧಾವಸ್ಥೆಯು ಪ್ರಕಟವಾಗುತ್ತದೆ.

ಈ ಶಬ್ದಬ್ರಹ್ಮರೂಪವಾದ ಪರಮಾಗಮದ ಮುಖಾಂತರ ತೋರಿಸಿಕೊಟ್ಟ ಏಕತ್ವ-ವಿಭಕ್ತ ಆತ್ಮನನ್ನು ಪ್ರಮಾಣ ಮಾಡು, ಸತ್ಯವೆಂದು ನಂಬು, ಅಹುದೆಂದು ಒಪ್ಪು, ಕೇವಲ ಕಪೋಲ ಕಲ್ಪನೆಯಿದೆಯೆಂದು ನಿರಾಕರಿಸಬೇಡ. ಭರತ ಕ್ಷೇತ್ರದ ಭಗವಾನ ಸ್ವರೂಪವಾದ ಈ ಸಮಯಸಾರದ ಗೌರವ ಮಾಡುವವರು ಸಾತಿಶಯ ಭಾಗ್ಯಶಾಲಿಗಳಾಗಿದ್ದಾರೆ.

- ಪೂ. ಗುರುದೇವ

ಪ್ರಕಾಶಕೀಯ

ಭಗವಾನ ಕುಂದಕುಂದಾಚಾರ್ಯದೇವ ವಿರಚಿತ ಪಂಚಪರಮಾಗಮಗಳೆಲ್ಲವು ಪ್ರತಿಯೊಂದು ತನ್ನಷ್ಟಕ್ಕೆ ತಾನು ಅಪೂರ್ವವೇ ಇದೆ. ಅಲೌಕಿಕವೇ ಇದೆ. ಯಾವ ಪ್ರಕಾರ ಪಂಚ ಪರಮೇಷ್ಠಿಗಳಲ್ಲಿ ಅರಹಂತ-ಸಿದ್ಧರುಗಳನ್ನು ಮೇಲೆ ಮತ್ತು ಆಚಾರ್ಯ-ಉಪಾಧ್ಯಾಯ-ಸಾಧುಪರಮೇಷ್ಠಿಗಳನ್ನು ಕೆಳಗೆ ಸ್ಥಾಪನೆ ಮಾಡಲಿಕ್ಕೆ ಬರುವುದಿಲ್ಲವೋ ಅದೇ ಪ್ರಕಾರ ಸಮಯಸಾರ-ನಿಯಮಸಾರಗಳನ್ನು ಶ್ರೇಷ್ಠವೆಂದು ಮತ್ತು ಪ್ರವಚನಸಾರ-ಪಂಚಾಸ್ತಿಕಾಯಸಂಗ್ರಹ - ಅಷ್ಟಪಾಹುಡಗಳನ್ನು ಕನಿಷ್ಠವೆಂದು ಯಾವುದೇ ಸ್ಥಿತಿಯಲ್ಲಿ ಯಾವುದೇ ರೀತಿಯಿಂದ ಹೇಳಲಿಕ್ಕೆ ಬರುವುದೇ ಇಲ್ಲ - ಹಾಗೆ ಹೇಳ ಹೋದರೆ ಅದು ನಿಜವಾಗಿ ಅಪರಾಧವೇ ಆಗುವುದು. ಇದರ ಪ್ರಾತ್ಯಕ್ಷಿಕೆಗಾಗಿ ಪಂಚಪರಮಾಗಮಗಳ ಅಧ್ಯಯನ ಮಾಡಿ ನೋಡುವುದು ತಿಳಿದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

'ಪವಯಣಸಾರಂ ಪಂಚತ್ಥಿಯ ಸಂಗಹಂ ಸುತ್ತಂ' ಎಂದು ಮೂಲ ಆಚಾರ್ಯ ಭಗವಂತರೇ ಹೇಳಿರುವಂತೆ ಎಂದರೆ ಪ್ರತ್ಯಕ್ಷ ಸರ್ವಜ್ಞ ಭಗವಂತರ ದಿವ್ಯ ಧ್ವನಿಯ ಸಂದೇಶವನ್ನೇ ಒಳಗೊಂಡಿರುವ ಈ ಪಂಚಾಸ್ತಿಕಾಯಸಂಗ್ರಹ ಗ್ರಂಥವನ್ನು 'ಭಣಿಯಂ' ಹೇಳಿದ್ದೇನೆಂದು ಹೇಳಿಕೊಂಡಿದ್ದಾರೆ. ನಮಗೆ ಸರಿಯಾದ ಅಧ್ಯಯನವಿಲ್ಲದ ಕಾರಣ ಇಂಥ ಮಹಿಮಾನ್ವಿತ ಗ್ರಂಥಗಳ ನೆಲೆ-ಬೆಲೆಯೇ ನಮಗೆ ತಿಳಿದು ಬರುತ್ತಿಲ್ಲ. ಆದುದರಿಂದ ಪಾಠಕರು ಆತ್ಮಲಕ್ಷಿ ್ಯಯಾಗಿ ಅವಲೋಕನೆ ಮಾಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈ 'ಪಂಚಾಸ್ತಿಕಾಯಸಂಗ್ರಹ' ಗ್ರಂಥವು ನಮ್ಮ ಸಂಸ್ಥೆಯಿಂದ ೧೯೮೯ ರಲ್ಲಿ ಮೊದಲು ಬಾರಿ ಪ್ರಕಟವಾದ ಗ್ರಂಥಗಳೆಲ್ಲವೂ ಎಂದೋ ತೀರಿಹೋಗಿ, ಅವುಗಳ ಕುರಿತು ಸತತ ಬೇಡಿಕೆ ಬರುತ್ತಿದ್ದರೂ ನಮಗೆ ಈ ಎರಡನೆಯ ಆವೃತ್ತಿಯನ್ನು ಬೇಗನೆ ತರಲು ಸಾಧ್ಯವಾಗದಿರುವುದಕ್ಕಾಗಿ ಪಾಠಕರ ಕ್ಷಮೆ ಕೋರುತ್ತೇವೆ. ಇಂದು ಈ ಸುಂದರವಾದ ಆವೃತ್ತಿಯನ್ನು ಹೊರಗೆ ತರುತ್ತಿರುವುದು ನಮಗೆಲ್ಲರಿಗೂ ಪರಮ ಸಂತೋಷದ ವಿಷಯವಾಗಿದೆ. ಇದನ್ನು ಕನ್ನಡಿಗರೆಲ್ಲರೂ ಆದರದಿಂದ ಬರಮಾಡಿಕೊಂಡು ಪರಮ ಗೌರವದಿಂದ ಅಧ್ಯಯನ ಮಾಡಿ ತಮ್ಮ-ತಮ್ಮ ಆತ್ಮಸ್ವರೂಪವನ್ನು ತಿಳಿದುಕೊಂಡು ಮೋಕ್ಷ ಮಾರ್ಗದಲ್ಲಿ ಆರೂಢರಾಗಿ ಬೇಗನೆ ಮೋಕ್ಷಲಕ್ಷಿ ್ಮಯ ಅಧಿಪತಿಗಳಾಗಲೆಂದು ಹಾರ್ದಿಕವಾಗಿ ಬಯಸುತ್ತೇವೆ, ಇಚ್ಛಿಪಡುತ್ತೇವೆ.

ಇಂಥ ಪರಮ ಪವಿತ್ರವೂ ಭ. ಕುಂದಕುಂದಾಚಾರ್ಯದೇವರ ಪ್ರಥಮ ಕೃತಿ ರತ್ನವೂ ಆದ ಈ 'ಪಂಚಾಸ್ತಿಕಾಯಸಂಗ್ರಹ' ಗ್ರಂಥದ ಮುದ್ರಣದ ಸಮಸ್ತ ಭಾರವನ್ನು ತಾವೊಬ್ಬರೇ ವಹಿಸಿಕೊಂಡು ಮತ್ತು ಇದನ್ನು ಅದೇ ಆಚಾರ್ಯಭಗವಂತರ ಸಮಾಧಿ ಸ್ಥಾನವಾದ ಪವಿತ್ರ ಕುಂದಾದ್ರಿಯಲ್ಲಿ ಬಿಡುಗಡೆ ಮಾಡಲು ಸಂಪೂರ್ಣ ಅನುಕೂಲತೆ ಒದಗಿಸಿಕೊಟ್ಟ ಹುಬ್ಬಳ್ಳಿಯ ಶ್ರೀಮತಿ ಸುಭದ್ರಾ ಧರಣಪ್ಪ ಸೂಜಿ ಇವರ ಪವಿತ್ರ ಪ್ರೇರಣೆಯಿಂದ ಶ್ರೀ ಪ್ರಶಾಂತಕುಮಾರ ಸೂಜಿ ಹಾಗೂ ಅವರ ಧರ್ಮಪತ್ನಿ ಪದ್ಮಲತಾ ಸೂಜಿ ಇವರೀರ್ವರಿಗೂ ನಾವು ನಮ್ಮ ಸಂಸ್ಥೆಯ ಪರವಾಗಿ ಅನೇಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಈ ಕೃತಿಯನ್ನು ಸರ್ವಾಂಗಸುಂದರವಾಗಿ ಮುದ್ದು-ಮುದ್ದಾಗಿ ಮುದ್ರಿಸಿಕೊಟ್ಟ ಶ್ರೀ ಮಾಲಗತ್ತಿಯವರಿಗೂ ಹಾಗೂ ಅಲ್ಲಿನ ಕುಶಲಕಾರ್ಮಿಕರೆಲ್ಲರಿಗೂ ಅನೇಕ ಧನ್ಯವಾದಗಳು.

ಬೆಂಗಳೂರು.
ದಿ. ೧೩-೨-೨೦೦೦

ಶ್ರೀ ಸಿ.ಬಿ. ಭಂಡಾರಿ
ಅಧ್ಯಕ್ಷರು, ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ, ಬೆಂಗಳೂರು.

ಪ್ರಸ್ತಾವನೆ

ಭಗವಾನ ಕುಂದಕುಂದಾಚಾರ್ಯದೇವರು ರಚಿಸಿರುವ ಈ 'ಪಂಚಾಸ್ತಿಕಾಯಸಂಗ್ರಹ'ವೆಂಬ ಹೆಸರಿನ ಶಾಸ್ತ್ರವು 'ದ್ವಿತೀಯ ಶ್ರುತಸ್ಕಂಧ'ದ ಸರ್ವೋತ್ಕೃಷ್ಟ ಆಗಮಗಳಲ್ಲಿ ಒಂದಾಗಿದೆ.

'ದ್ವಿತೀಯ ಶ್ರುತಸ್ಕಂಧ'ದ ಉತ್ಪತ್ತಿಯು ಯಾವ ಪ್ರಕಾರವಾಯಿತೆಂಬುದನ್ನು ಮೊದಲು ನಾವು ನಮ್ಮ ಪಟ್ಟಾವಲಿಗಳ ಆಧಾರದ ಮೇಲಿಂದ ಸಂಕ್ಷಿಪ್ತದಲ್ಲಿ ಅವಲೋಕಿಸೋಣ.

ಇಂದಿಗೆ ಸುಮಾರು ೨೫೦೦ ವರ್ಷಗಳ ಮೊದಲು ಈ ಭರತಕ್ಷೇತ್ರದ ಪುಣ್ಯಭೂಮಿಯಲ್ಲಿ ಜಗತ್ಪೂಜ್ಯರೂ ಪರಮಭಟ್ಟಾರಕರೂ ಎನಿಸಿದ ಭಗವಾನ ಶ್ರೀ ಮಹಾವೀರ ಪ್ರಭುಗಳು ಮೋಕ್ಷಮಾರ್ಗದ ಮೇಲೆ ಬೆಳಕು ಬೀರುವುದಕ್ಕಾಗಿ ಸಮಸ್ತ ಪದಾರ್ಥಗಳ ಸ್ವರೂಪವನ್ನು ತಮ್ಮ ಸಾತಿಶಯ ದಿವ್ಯಧ್ವನಿಯ ಮುಖಾಂತರ ಪ್ರಕಟಪಡಿಸುತ್ತಲಿದ್ದರು. ಅವರುಗಳ ಮಹಾನಿರ್ವಾಣದ ನಂತರ ಐವರು ಶ್ರುತಕೇವಲಿಗಳಾದರು. ಅವರುಗಳಲ್ಲಿ ಶ್ರೀ ಭದ್ರಬಾಹು ಸ್ವಾಮಿಗಳು ಅಂತಿಮಶ್ರುತಕೇವಲಿಗಳಿದ್ದರು. ಅವರುಗಳವರೆಗಂತೂ ದ್ವಾದಶಾಂಗ ಶಾಸ್ತ್ರಗಳ ಪ್ರರೂಪಣೆಯಿಂದ ವ್ಯವಹಾರ ನಿಶ್ಚಯಾತ್ಮಕವಾದ ಮೋಕ್ಷಮಾರ್ಗವು ಯಥಾರ್ಥರೂಪದಲ್ಲಿ ಪ್ರವರ್ತಮಾನವಿತ್ತು. ಅವರುಗಳ ನಂತರ ಕಾಲದೋಷದಿಂದ ಕ್ರಮಕ್ರಮವಾಗಿ ಅಂಗಗಳ ಜ್ಞಾನದ ವ್ಯುಚ್ಛಿತ್ತಿಯಾಗುತ್ತ ಹೋಯಿತು. ಹೀಗೆ ಅಪಾರ ಜ್ಞಾನ ಸಾಗರದ ಬಹಳಷ್ಟು ಭಾಗವು ವಿಚ್ಛೇದವಾಗಿ ಹೋದ ನಂತರ ಎರಡನೆಯ ಶ್ರೀ ಭದ್ರಬಾಹು ಸ್ವಾಮಿಗಳ ಆಚಾರ್ಯ ದರಂಪರೆಯಲ್ಲಿ ಶ್ರೀ ಧರಸೇನಾಚಾರ್ಯ ಮತ್ತು ಶ್ರೀ ಗುಣಧರ ಆಚಾರ್ಯರೆಂಬ ಮಹಾ ಸಮರ್ಥಶಾಲಿಗಳಾದ ಈರ್ವರು ಮುನಿಗಳಾದರು. ಅವರುಗಳಿಂದ ಲಭ್ಯವಾದ ಜ್ಞಾನದ ಮುಖಾಂತರ ಅವರುಗಳ ಪರಂಪರೆಯಲ್ಲಿ ಆಗಿರುವಂಥ ಆಚಾರ್ಯರುಗಳು ಶಾಸ್ತ್ರಗಳ ರಚನೆಯನ್ನು ಮಾಡಿದರು. ಮತ್ತು ಶ್ರೀ ಮಹಾವೀರ ಪ್ರಭುಗಳ ಉಪದೇಶದ ಪ್ರವಾಹವನ್ನು ಹರಿಗೆಡದಂತೆ ಕಾಯ್ದುಕೊಂಡು ಬಂದರು.

ಶ್ರೀ ಧರಸೇನಾಚಾರ್ಯರಿಗೆ ಅಗಾರಯಣೀಪೂರ್ವದ ಐದನೇಯ ವಸ್ತು ಅಧಿಕಾರದ ಮಹಾಕರ್ಮ ಪ್ರಕೃತಿಯೆಂಬ ಹೆಸರಿನ ನಾಲ್ಕನೆಯ ಪ್ರಾಭೃತದ ಜ್ಞಾನವಿತ್ತು. ಆ ಜ್ಞಾನಾಮೃತದೊಳಗಿಂದ ಅನುಕ್ರಮವಾಗಿ ಅವರುಗಳ ನಂತರದ ಆಚಾರ್ಯರುಗಳ ಮುಖಾಂತರ ಷಟ್‌ಖಂಡಾಗಮ, ಧವಲ, ಮಹಾಧವಲ, ಜಯಧವಲ, ಗೊಮ್ಮಟಸಾರ, ಲಬ್ಧಿಸಾರ, ಕ್ಷಪಣಾಸಾರ ಮೊದಲಾದ ಶಾಸ್ತ್ರಗಳ ರಚನೆಯಾಯಿತು. ಈ ಪ್ರಕಾರ ಪ್ರಥಮ ಶ್ರುತಸ್ಕಂಧದ ಉತ್ಪತ್ತಿಯಾಯಿತು. ಅದರಲ್ಲಿ ಮುಖ್ಯವಾಗಿ ಜೀವ ಮತ್ತು ಕರ್ಮದ ಸಂಯೋಗದಿಂದ ಉತ್ಪನ್ನವಾಗುವಂಥ ಆತ್ಮನ ಸಂಸಾರ-ಪರ್ಯಾಯದ-ಗುಣಸ್ಥಾನ, ಮಾರ್ಗಣಾಸ್ಥಾನ ಮೊದಲಾದವುಗಳ ವರ್ಣನೆಯಿದೆ; ಪರ್ಯಾಯಾರ್ಥಿಕನಯವನ್ನು ಮುಖ್ಯ ಮಾಡಿಕೊಂಡ ಕಥನವಿದೆ. ಈ ನಯವನ್ನು ಅಶುದ್ಧ ದ್ರವ್ಯಾರ್ಥಿಕನಯವೆಂದೂ ಹೇಳುತ್ತಾರೆ ಮತ್ತು ಅಧ್ಯಾತ್ಮ ಭಾಷೆಯಲ್ಲಿ ಅಶುದ್ಧನಿಶ್ಚಯನಯ ಅಥವಾ ವ್ಯವಹಾರವೆಂದು ಹೇಳಲಾಗುತ್ತದೆ.

ಶ್ರೀ ಗುಣಧರ ಆಚಾರ್ಯರಿಗೆ ಜ್ಞಾನಪ್ರವಾದಪೂರ್ವದ ಹತ್ತನೆಯ ವಸ್ತುವಿನ ಮೂರನೆಯ ಪ್ರಾಭೃತದ ಜ್ಞಾನವಿತ್ತು. ಆ ಜ್ಞಾನದೊಳಗಿಂದ ಅವರ ನಂತರದ ಆಚಾರ್ಯರುಗಳು ಅನುಕ್ರಮದಿಂದ ಸಿದ್ಧಾಂತಗಳ ರಚನೆ ಮಾಡಿದರು. ಈ ಪ್ರಕಾರ ಸರ್ವಜ್ಞ ಭಗವಂತರಾದ ಶ್ರೀ ಮಹಾವೀರ ಪ್ರಭುಗಳಿಂದ ಪ್ರವಾಹರೂಪವಾಗಿ ಬಂದ ಜ್ಞಾನವು ಆಚಾರ್ಯರುಗಳ ಪರಂಪರೆಯಿಂದ ಭಗವಾನ ಕುಂದಕುಂದಾಚಾರ್ಯದೇವರಿಗೆ ಪ್ರಾಪ್ತವಾಯಿತು. ಅವರು ಪಂಚಾಸ್ತಿಕಾಯಸಂಗ್ರಹ, ಪ್ರವಚನಸಾರ, ಸಮಯಸಾರ, ನಿಯಮಸಾರ, ಅಷ್ಟಪಾಹುಡ ಮೊದಲಾದ ಶಾಸ್ತ್ರಗಳ ರಚನೆ ಮಾಡಿದರು. ಹೀಗೆ ದ್ವಿತೀಯ ಶ್ರುತಸ್ಕಂಧದ ಉತ್ಪತ್ತಿಯಾಯಿತು. ಇದರಲ್ಲಿ ಜ್ಞಾನವನ್ನು ಮುಖ್ಯ ಮಾಡಿಕೊಂಡು ಶುದ್ಧದ್ರವ್ಯಾರ್ಥಿಕನಯದಿಂದ ಕಥನವಿದೆ. ಆತ್ಮನ ಶುದ್ಧಸ್ವರೂಪದ ವರ್ಣನೆಯಿದೆ.

ಭಗವಾನ ಕುಂದಕುಂದಾಚಾರ್ಯದೇವರು ವಿಕ್ರಮಸಂವತದ ಪ್ರಾರಂಭದಲ್ಲಿ ಆಗಿ ಹೋಗಿದ್ದಾರೆ. ದಿಗಂಬರ ಜೈನ ಪರಂಪರೆಯಲ್ಲಿ ಭಗವಾನ ಕುಂದಕುಂದಾಚಾರ್ಯದೇವರ ಸ್ಥಾನವು ಸರ್ವೋತ್ಕೃಷ್ಟವಿದೆ.

ಮಂಗಲಂ ಭಗವಾನ ವೀರೋ ಮಂಗಲಂ ಗೌತಮೋ ಗಣೀ ।
ಮಂಗಲಂ ಕುಂದಕುಂದಾರ್ಯೋ ಜೈನಧರ್ಮೋಽಸ್ತು ಮಂಗಲಂ ॥

ಈ ಶ್ಲೋಕವನ್ನು ಎಲ್ಲ ದಿಗಂಬರ ಜೈನರು ಶಾಸ್ತ್ರಾಧ್ಯಯನವನ್ನು ಪ್ರಾರಂಭ ಮಾಡುವ ಸಮಯದಲ್ಲಿ ಮಂಗಲಾಚರಣೆಯ ರೂಪದಿಂದ ಹೇಳುತ್ತಾರೆ. ಇದರ ಮೇಲಿಂದ ಸರ್ವಜ್ಞ ಭಗವಂತರಾದ ಶ್ರೀ ಮಹಾವೀರ ಪ್ರಭುಗಳು ಮತ್ತು ಗಣಧರ ಭಗವಂತರಾದ ಶ್ರೀ ಗೌತಮಸ್ವಾಮಿಗಳ ನಂತರ ಕೂಡಲೆ ಭಗವಾನ ಕುಂದಕುಂದಾಚಾರ್ಯದೇವರ ಸ್ಥಾನವು ಬರುತ್ತದೆಯೆಂಬುದು ಸಿದ್ಧವಾಗುತ್ತದೆ. ದಿಗಂಬರ ಜೆನ ಸಾಧು ಸಮೂಹವು ತಮ್ಮನ್ನು ಶ್ರೀ ಕುಂದಕುಂದಾಚಾರ್ಯದೇವರ ಶಾಸ್ತ್ರಗಳು ಪ್ರತ್ಯಕ್ಷ ಗಣಧರದೇವರ ವಚನಗಳಂತೆಯೇ ಪ್ರಮಾಣಭೂತವೆಂದು ಮನ್ನಿಸುತ್ತಾರೆ. ಅವರ ನಂತರ ಆದಂಥ ಗ್ರಂಥಕಾರರಾದ ಆಚಾರ್ಯರುಗಳು ತಮ್ಮ ಯಾವುದೇ ಕಥನವನ್ನು ಸಿದ್ಧ ಮಾಡುವುದಕ್ಕಾಗಿ ಶ್ರೀ ಕುಂದಕುಂದಾಚಾರ್ಯದೇವರ ಶಾಸ್ತ್ರಗಳ ಪ್ರಮಾಣ ಕೊಡುತ್ತಾರೆ, ಅದರಿಂದ ಆ ಕಥನವು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ನಿಜವಾಗಿ ಭ. ಕುಂದಕುಂದಾಚಾರ್ಯದೇವರು ತಮ್ಮ ಪರಮಾಗಮಗಳಲ್ಲಿ ತೀರ್ಥಂಕರದೇವರುಗಳಿಂದ ಪ್ರರೂಪಿತವಾದ ಉತ್ತಮೋತ್ತಮವಾದ ಸಿದ್ಧಾಂತಗಳ ಆಶಯವನ್ನು ಸುರಕ್ಷಿತಗೊಳಿಸಿ ಮೋಕ್ಷಮಾರ್ಗವನ್ನು ಸ್ಥಿರವಾಗಿ ಇಟ್ಟಿದ್ದಾರೆ. ವಿ.ಸಂ. ೯೯೦ ರಲ್ಲಿ ಆಗಿಹೋದ ಶ್ರೀ ದೇವಸೇನಾಚಾರ್ಯವರ್ಯರು ತಮ್ಮ 'ದರ್ಶನಸಾರ'ವೆಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ'' - ''ವಿದೇಹಕ್ಷೇತ್ರದ ವರ್ತಮಾನ ತೀರ್ಥಂಕರರಾದ ಶ್ರೀ ಸೀಮಂಧರ ಪ್ರಭುಗಳ ಸಮವಸರಣದಲ್ಲಿ ಹೋಗಿ ಶ್ರೀ ಪದ್ಮನಂದಿನಾಥರು (ಶ್ರೀ ಕುಂದಕುಂದಾಚಾರ್ಯದೇವರು) ತಾವು ಪ್ರಾಪ್ತಮಾಡಿಕೊಂಡ ದಿವ್ಯಜ್ಞಾನದ ಮುಖಾಂತರ ಉಪದೇಶ ಕೊಡದೇ ಹೋಗಿದ್ದರೆ ಮುನಿಜನರು ನಿಜವಾದ ಮಾರ್ಗವನ್ನು ಹೇಗೆ ತಿಳಿಯುತ್ತಿದ್ದರು ? ಇನ್ನೊಂದು ಉಲ್ಲೇಖವನ್ನೂ ನೋಡಿರಿ, ಅದರಲ್ಲಿ ಶ್ರೀ ಕುಂದಕುಂದಾಚಾರ್ಯದೇವರಿಗೆ ಕಲಿಕಾಲ ಸರ್ವಜ್ಞರೆಂದು ಹೇಳಲಾಗಿದೆ. ''ಪದ್ಮನಂದಿ, ಕುಂದಕುಂದಾಚಾರ್ಯ, ವಕ್ರಗ್ರೀವಾಚಾರ್ಯ, ಏಲಾಚಾರ್ಯ, ಗೃದ್ಧಪಿಚ್ಛಾಚಾರ್ಯರೆಂದು ಐದು ಹೆಸರುಗಳಿಂದ ವಿರಾಜಿಸುತ್ತ, ನೆಲಬಿಟ್ಟು ನಾಲ್ಕು ಅಂಗುಲ ಮೇಲೆ ಆಕಾಶದಲ್ಲಿ ಗಮನ ಮಾಡುವ ಋದ್ಧಿಯಿರುವಂಥ ಅವರು ಪೂರ್ವ ವಿದೇಹಕ್ಕೆ ಹೋಗಿ ಶ್ರೀ ಸೀಮಂಧರ ಭಗವಂತರ ದರ್ಶನ ಮಾಡಿ, ಅವರಿಂದ ದೊರೆತ ಶ್ರುತಜ್ಞಾನದ ಮುಖಾಂತರ ಈ ಭರತಕ್ಷೇತ್ರದ ಭವ್ಯ ಜೀವರುಗಳನ್ನು ಪ್ರತಿಬೋಧಿಸಿರುವಂಥ ಆ ಜಿನಚಂದ್ರಸೂರಿ ಭಟ್ಟಾರಕರ ಪಟ್ಟದ ಆಭರಣರೂಪರಾದ ಕಲಿಕಾಲ ಸರ್ವಜ್ಞರ (ಭ. ಕುಂದಕುಂದಾಚಾರ್ಯದೇವರ) ಮುಖಾಂತರ ರಚಿಸಲ್ಪಟ್ಟ ಈ ಷಟ್ ಪ್ರಾಭೃತ ಗ್ರಂಥದಲ್ಲಿ..... ಸೂರೀಶ್ವರ ಶ್ರೀ ಶ್ರುತಸಾಗರರ ಮುಖಾಂತರ ರಚಿಸಲ್ಪಟ್ಟ ಮೋಕ್ಷ ಪ್ರಾಭೃತದ ಟೀಕೆಯು ಸಮಾಪ್ತವಾಯಿತು.'' ಎಂದು ಶ್ರೀ ಶ್ರುತಸಾಗರಸೂರಿಗಳು ಬರೆದ ಷಟ್‌ಪ್ರಾಭೃತದ ಟೀಕೆಯ ಕೊನೆಯಲ್ಲಿ ಬಂದಿದೆ. ಭಗವಾನ ಕುಂದಕುಂದಾಚಾರ್ಯದೇವರ ಮಹತ್ವವನ್ನು ಎತ್ತಿ ತೋರಿಸುವಂಥ ಅದೆಷ್ಟೋ ಉಲ್ಲೇಖಗಳು ಜೈನ ಸಾಹಿತ್ಯದಲ್ಲಿ ದೊರಕುತ್ತವೆ. ಅದೆಷ್ಟೋ ಶಿಲಾಲೇಖಗಳೂ ಇವೆ. ಈ ಪ್ರಕಾರ ಸನಾತನ ದಿಗಂಬರ ಜೈನ ಸಂಪ್ರದಾಯದಲ್ಲಿ ಕಲಿಕಾಲ ಸರ್ವಜ್ಞರಾದ ಭ. ಕುಂದಕುಂದಾಚಾರ್ಯದೇವರ ಸ್ಥಾನವು ಅದ್ವಿತೀಯ- ವಾಗಿದೆಯೆಂಬುದು ಸುಸ್ಪಷ್ಟವಿದೆ.

ಭ. ಕುಂದಕುಂದಾಚಾರ್ಯದೇವರು ಅನೇಕ ಶಾಸ್ತ್ರಗಳನ್ನು ರಚಿಸಿದ್ದಾರೆ ; ಅವುಗಳಲ್ಲಿ ಈಗ ಕೆಲವು ಮಾತ್ರ ಉಪಲಬ್ಧವಿವೆ. ತ್ರಿಲೋಕಪತಿ ಶ್ರೀ ಸರ್ವಜ್ಞದೇವರ ಮುಖಕಮಲದಿಂದ ಪ್ರವಹಿಸುವ ಶ್ರುತಾಮೃತದ ಪ್ರವಾಹದಿಂದ ಯಾವ ಅಮೃತ-ಕುಂಭಗಳನ್ನು ತುಂಬಿಕೊಳ್ಳಲಾಗಿದೆ ಅವು ವರ್ತಮಾನದಲ್ಲೂ ಕೂಡ ಅನೇಕ ಆತ್ಮಾರ್ಥಿಗಳಿಗೆ

ಆತ್ಮ-ಜೀವನವನ್ನು ಅರ್ಪಣ ಮಾಡುತ್ತಲಿವೆ. ಅವರ ಸಮಯಸಾರ, ನಿಯಮಸಾರ ಮತ್ತು ಪಂಚಾಸ್ತಿಕಾಯ ಸಂಗ್ರಹವೆಂಬ ಹೆಸರಿನ ಉತ್ತಮೋತ್ತಮವಾದ ಪರಮಾಗಮಗಳಲ್ಲಿ ಸಾವಿರಾರು ಶಾಸ್ತ್ರಗಳ ಸಾರವು ಬಂದು ಬಿಡುತ್ತದೆ. ಭ. ಕುಂದಕುಂದಾಚಾರ್ಯದೇವರ ನಂತರ ಬರೆಯಲ್ಪಟ್ಟ ಅನೇಕ ಗ್ರಂಥಗಳ ಬೀಜವು ಈ ಪರಮಾಗಮಗಳಲ್ಲಿ ನಿಹಿತವಾಗಿದೆಯೆಂಬುದು ಸೂಕ್ಷ್ಮ ದೃಷ್ಟಿಯಿಂದ ಅಭ್ಯಾಸ ಮಾಡಿದ ಮೇಲೆ ತಿಳಿದುಬರುತ್ತದೆ. ಶ್ರೀ ಸಮಯಸಾರವು ಈ ಭರತ ಕ್ಷೇತ್ರದ ಸರ್ವೋತ್ಕೃಷ್ಟ ಪರಮಾಗಮವಿದೆ. ಅದರಲ್ಲಿ ಶುದ್ಧನಯದ ದೃಷ್ಟಿಯಿಂದ ಒಂಭತ್ತು ತತ್ತ್ವಗಳ ನಿರೂಪಣೆ ಮಾಡಿ ಜೀವದ ಶುದ್ಧಸ್ವರೂಪವನ್ನು ಎಲ್ಲ ಪ್ರಕಾರದಿಂದ - ಆಗಮ, ಯುಕ್ತಿ, ಅನುಭವ ಮತ್ತು ಪರಂಪರೆಯಿಂದ - ಅತ್ಯಂತ ವಿಸ್ತಾರಪೂರ್ವಕವಾಗಿ ತಿಳಿಸಿದ್ದಾರೆ. ಶ್ರೀ ಪ್ರವಚನಸಾರದಲ್ಲಿ ಅದರ ಹೆಸರಿನಂತೆ ಜಿನ ಪ್ರವಚನದ ಸಾರವನ್ನು ಸಂಗ್ರಹಿಸಲಾಗಿದೆ ಮತ್ತು ಅದನ್ನು ಜ್ಞಾನತತ್ತ್ವ ಜ್ಞೇಯತತ್ತ್ವ ಹಾಗೂ ಚರಣಾನುಯೋಗವೆಂದು ಮೂರು ಅಧಿಕಾರಗಳಲ್ಲಿ ವಿಭಾಜಿತಗೊಳಿಸಲಾಗಿದೆ. ಶ್ರೀ ನಿಯಮಸಾರದಲ್ಲಿ ಮೋಕ್ಷಮಾರ್ಗದ ಸ್ಪಷ್ಟ ಸತ್ಯಾರ್ಥ ನಿರೂಪಣೆಯಿದೆ. ಯಾವ ಪ್ರಕಾರ ಸಮಯಸಾರದಲ್ಲಿ ಶುದ್ಧನಯದಿಂದ ನವತತ್ತ್ವಗಳ ನಿರೂಪಣೆ ಮಾಡಿದೆ ಅದೇ ಪ್ರಕಾರ ನಿಯಮಸಾರದಲ್ಲಿ ಮುಖ್ಯವಾಗಿ ಶುದ್ಧನಯದಿಂದ ಜೀವ, ಅಜೀವ, ಶುದ್ಧಭಾವ, ಪ್ರತಿಕ್ರಮಣ, ಪ್ರತ್ಯಾಖ್ಯಾನ, ಆಲೋಚನೆ, ಪ್ರಾಯಶ್ಚಿತ್ತ, ಸಮಾಧಿ, ಭಕ್ತಿ, ಆವಶ್ಯಕ, ಶುದ್ಧೋಪಯೋಗ ಮೊದಲಾದವುಗಳ ವರ್ಣನೆಯಿದೆ. ಶ್ರೀ ಪಂಚಾಸ್ತಿಕಾಯಸಂಗ್ರಹದಲ್ಲಿ ಕಾಲಸಹಿತವಾಗಿ ಐದು ಅಸ್ತಿಕಾಯಗಳ (ಎಂದರೆ ಆರು ದ್ರವ್ಯಗಳ) ಮತ್ತು ಒಂಭತ್ತು ಪದಾರ್ಥಗಳೊಡನೆ ಮೋಕ್ಷಮಾರ್ಗದ ನಿರೂಪಣೆಯಿದೆ.

ಆ ಪಂಚಾಸ್ತಿಕಾಯಸಂಗ್ರಹ ಪರಮಾಗಮವನ್ನು ಪ್ರಾರಂಭಮಾಡುತ್ತ ಶಾಸ್ತ್ರಕರ್ತೃಗಳು ಇದನ್ನು 'ಸರ್ವಜ್ಞ ಮಹಾಮುನಿಯ ಮುಖದಿಂದ ಹೇಳಲ್ಪಟ್ಟ ಪದಾರ್ಥಗಳ ಪ್ರತಿಪಾದಕ, ಚತುರ್ಗತಿನಾಶಕ ಮತ್ತು ನಿರ್ವಾಣದ ಕಾರಣ'ವೆಂದು ಹೇಳಿದ್ದಾರೆ. ಇದರಲ್ಲಿ ಹೇಳಲ್ಪಟ್ಟ ವಸ್ತುತ್ತ್ವದ ಸಾರವು ಈ ಪ್ರಕಾರವಿದೆ -

ಅನಾದಿ - ಅನಂತ ಸ್ವಯಂಸಿದ್ಧ ಸತ್‌ದಂಥ ಅನಂತಾನಂತ ವಸ್ತುಗಳು (ಆರು ದ್ರವ್ಯಗಳ) ಸಮುದಾಯವೆಂದರೆ ವಿಶ್ವವಿದೆ. ಅದರಲ್ಲಿ ಪ್ರತಿಯೊಂದು ವಸ್ತುವು ಅನುತ್ಪನ್ನ ಮತ್ತು ವಿನಾಶಿಯಿದೆ. ಪ್ರತಿಯೊಂದು ವಸ್ತುವಿನಲ್ಲಿ ಅನಂತಶಕ್ತಿಗಳು ಅಥವಾ ಗುಣಗಳಿವೆ ಅವು ತ್ರೈಕಾಲಿಕ ನಿತ್ಯವಿವೆ. ಪ್ರತಿಯೊಂದು ವಸ್ತುವು ಪ್ರತಿಕ್ಷಣದಲ್ಲೂ ತನ್ನೊಳಗೆ ತನ್ನ ಕಾರ್ಯ ಮಾಡುತ್ತಲಿದ್ದರೂ ಅದು ಹೊಸ ದಶೆ-ಅವಸ್ಥೆ-ಪರ್ಯಾಯಗಳನ್ನು ಧಾರಣ ಮಾಡುತ್ತದೆ. ಆದಾಗ್ಯೂ ವಸ್ತುವು ತನ್ನ ಜಾತಿಯನ್ನು ಬಿಟ್ಟುಕೊಡದೆ ಎಂದರೆ ಅದರ ಶಕ್ತಿಗಳೊಳಗಿಂದ ಒಂದೂ ಹೆಚ್ಚು - ಕಡಿಮೆಯಾಗದೆ ಆ ಪರ್ಯಾಯಗಳು ತಮ್ಮ ಮರ್ಯಾದೆಯಲ್ಲಿದ್ದುಕೊಂಡು ಆಗುತ್ತವೆ. ವಸ್ತುಗಳ (ದ್ರವ್ಯಗಳ) ಭಿನ್ನ-ಭಿನ್ನ ಶಕ್ತಿಗಳ ಅಪೇಕ್ಷೆಯಿಂದ ಅವುಗಳಲ್ಲಿ ಜೀವದ್ರವ್ಯ, ಪುದ್ಗಲದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ, ಆಕಾಶದ್ರವ್ಯ ಮತ್ತು ಕಾಲದ್ರವ್ಯವೆಂದು (ದ್ರವ್ಯಗಳಲ್ಲಿ) ಆರು ಜಾತಿಗಳಿವೆ. ಅದರಲ್ಲಿ ಯಾವಾಗಲೂ ಜ್ಞಾನ, ದರ್ಶನ, ಚಾರಿತ್ರ, ಸುಖ ಮೊದಲಾದ ಅನಂತ ಗುಣಗಳು (ಶಕ್ತಿಗಳು) ಇರುವಂಥದು ಅದು ಜೀವದ್ರವ್ಯವಿದೆ; ಅದರಲ್ಲಿ ಯಾವಾಗಲೂ ಸ್ಪರ್ಶ, ರಸ, ಗಂಧ, ವರ್ಣ ಮೊದಲಾದ ಅನಂತ ಗುಣಗಳಿರುವಂಥದು ಅದು ಪುದ್ಗಲದ್ರವ್ಯವಿದೆ; ಉಳಿದ ನಾಲ್ಕು ದ್ರವ್ಯಗಳ ವಿಶಿಷ್ಟ ಗುಣಗಳು ಅನುಕ್ರಮದಿಂದ ಗತಿಹೇತುತ್ವ, ಸ್ಥಿತಿಹೇತುತ್ವ, ಅವಗಾಹಹೇತುತ್ವ ಹಾಗೂ ವರ್ತನಾಹೇತುತ್ವವಿವೆ. ಈ ಆರು ದ್ರವ್ಯಗಳಲ್ಲಿ ಮೊದಲಿನ ಐದು ದ್ರವ್ಯಗಳು ಸತ್ ಇರುವುದರಿಂದ ಮತ್ತು ಶಕ್ತಿ ಅಥವಾ ವ್ಯಕ್ತಿ ಅಪೇಕ್ಷೆಯಿಂದ ವಿಶಾಲ ಕ್ಷೇತ್ರವುಳ್ಳವುಗಳಿರುವುದರಿಂದ 'ಅಸ್ತಿಕಾಯ'ವಿವೆ; ಕಾಲದ್ರವ್ಯವು 'ಅಸ್ತಿ'ಯಿದೆ ಆದರೆ 'ಕಾಯ'ವಿಲ್ಲ.

ಜಿನೇಂದ್ರದೇವರ ಜ್ಞಾನದರ್ಪಣದಲ್ಲಿ ಹೊಳೆಯುತ್ತಿರುವ ಈ ಎಲ್ಲ ದ್ರವ್ಯಗಳ - ಅನಂತ ಜೀವದ್ರವ್ಯ, ಅನಂತಾನಂತ ಪುದ್ಗಲದ್ರವ್ಯ, ಒಂದು ಧರ್ಮದ್ರವ್ಯ, ಒಂದು ಅಧರ್ಮದ್ರವ್ಯ, ಒಂದು ಆಕಾಶದ್ರವ್ಯ ಮತ್ತು ಅಸಂಖ್ಯ

ಕಾಲದ್ರವ್ಯಗಳು- ಸ್ವಯಂಪರಿಪೂರ್ಣವಿವೆ ಮತ್ತು ಅನ್ಯದ್ರವ್ಯಗಳಿಂದ ತೀರ ಸ್ವತಂತ್ರವಿವೆ; ಅವು ನಿಜವಾಗಿ ಎಂದೂ ಒಂದು ಇನ್ನೊಂದರಲ್ಲಿ ಕೂಡಿಕೊಳ್ಳುವುದಿಲ್ಲ. ಭಿನ್ನವಾಗಿಯೇ ಇರುತ್ತವೆ. ದೇವ, ಮನುಷ್ಯ , ತಿರ್ಯಂಚ, ನಾರಕ, ಏಕೇಂದ್ರಿಯ, ದ್ವೀಂದ್ರಿಯ ಮೊದಲಾದ ಜೀವಗಳಲ್ಲಿ ಜೀವ-ಪುದ್ಗಲಗಳು ಬೆರೆತು ಹೋದಂತೆನಿಸಿದರೂ ವಾಸ್ತವಿಕವಾಗಿ ಹಾಗಿಲ್ಲ ; ಅವು ಅತ್ಯಂತ ಭಿನ್ನವಾಗಿವೆ, ಸಮಸ್ತ ಜೀವಗಳು ಅನಂತ ಜ್ಞಾನಸುಖದ ನಿಧಿಗಳಿದ್ದರೂ, ಪರದಿಂದ ಅವಕ್ಕೆ ಯಾವತರದ ಸುಖ-ದುಃಖಗಳಿರದಿದ್ದರೂ, ಅಜ್ಞಾನಿಯಾದ ಸಂಸಾರೀ ಜೀವಗಳು ಅನಾದಿಕಾಲದಿಂದ ತಾವು ಅಜ್ಞಾನಪರ್ಯಾಯರೂಪವಾಗಿ ಪರಿಣಮನ ಮಾಡಿ ತಮ್ಮ ಜ್ಞಾನಾನಂದಸ್ವಭಾವವನ್ನು, ಪರಿಪೂರ್ಣತೆಯನ್ನು, ಸ್ವಾತಂತ್ರತೆಯನ್ನು ಮತ್ತು ಅಸ್ತಿತ್ವವನ್ನು ಕೂಡ ಮರೆತು ಬಿಡುತ್ತಿವೆ ಅಲ್ಲದೆ ಪರಪದಾರ್ತಗಳನ್ನು ಸುಖದುಃಖದ ಕಾರಣವೆಂದು ಮನ್ನಿಸಿ ಅವುಗಳ ಕುರಿತು ರಾಗ-ದ್ವೇಷಗಳನ್ನು ಮಾಡುತ್ತಿರುತ್ತವೆ; ಜೀವಗಳ ಇಂಥ ಭಾವಗಳ ನಿಮಿತ್ತವಾಗಿ ಪುದ್ಗಲಗಳು ಸ್ವಯಂ ಜ್ಞಾನಾವರಣ ಮೊದಲಾದ ಕರ್ಮಪರ್ಯಾಯರೂಪವಾಗಿ ಪರಿಣಮಿಸಿ ಜೀವದ ಜೊತೆ ಸಂಯೋಗದಲ್ಲಿಬರುತ್ತವೆ ಮತ್ತು ಅದರಿಂದ ಜೀವನಿಗೆ ಅನಾದಿ ಕಾಲದಿಂದ ಪೌದ್ಗಲಿಕ ದೇಹವು ಸಂಯೋಗವು ಆಗುತ್ತಿರುತ್ತದೆ. ಆದರೆ ಜೀವ ಮತ್ತು ದೇಹದ ಸಂಯೋಗದಲ್ಲೂ ಜೀವ ಮತ್ತು ಪುದ್ಗಲಗಳು ಅತ್ಯಂತ ಭಿನ್ನವಾಗಿವೆ ಅಲ್ಲದೆ ಅವುಗಳ ಕಾರ್ಯಗಳೂ ಒಂದು ಇನ್ನೊಂದರಿಂದ ತೀರ ಭಿನ್ನ ಹಾಗೂ ನಿರಪೇಕ್ಷವಿವೆಯೆಂದು ಜಿನೇಂದ್ರದೇವರು ನೋಡಿದ್ದಾರೆ, ಸಮ್ಯಗ್ಜ್ಞಾನಿಗಳು ತಿಳಿದುಕೊಂಡಿದ್ದಾರೆ ಮತ್ತು ಅನುಮಾನಗಮ್ಯವೂ ಇದೆ. ಜೀವವು ಕೇವಲ ಭ್ರಾಂತಿವಶದಿಂದಲೇ ದೇಹದ ದಶೆಯಿಂದ ಹಾಗೂ ಇಷ್ಟಾನಿಷ್ಟ ಪರಪದಾರ್ಥಗಳಿಂದ ತನ್ನನ್ನು ಸುಖಿ-ದುಃಖಿಯಾಗಿ ಮನ್ನಿಸುತ್ತಿದೆ ನಿಜವಾಗಿ ತನ್ನ ಸುಖಗುಣವನ್ನು ವಿಕಾರಿಪರ್ಯಾಯರೂಪವಾಗಿ ಪರಿಣಮಿಸಿ ಅದು ಅನಾದಿ ಕಾಲದಿಂದ ದುಃಖಿಯಾಗುತ್ತಲಿದೆ.

ಜೀವ ದ್ರವ್ಯವು ಗುಣದಿಂದ ಯಾವಾಗಲೂ ಶುದ್ಧವಾಗಿದ್ದರೂ ಪರ್ಯಾಯ ಅಪೇಕ್ಷೆಯಿಂದ ಶುಭಾಶುಭ ಭಾವರೂಪದಲ್ಲಿ ಅಂಶಿಕಶುದ್ಧಿರೂಪದಲ್ಲಿ, ಶುದ್ಧಿಯ ವೃದ್ಧಿರೂಪದಲ್ಲಿ ಮತ್ತು ಪೂರ್ಣ ಶುದ್ಧಿರೂಪದಲ್ಲಿ ಪರಿಣಮಿಸುತ್ತದೆ ಮತ್ತು ಆ ಭಾವಗಳ ನಿಮಿತ್ತದಿಂದ ಶುಭಾಶುಭ ಪುದ್ಗಲ ಕರ್ಮಗಳ ಆಸ್ರವಣ, ಬಂಧನ ಹಾಗೂ ಅವುಗಳ ತಡೆಯುವಿಕೆ, ಉದುರುವಿಕೆ ಮತ್ತು ಸಂಪೂರ್ಣ ಬಿಡುಗಡೆಯಾಗುತ್ತದೆ. ಆ ಭಾವಗಳನ್ನು ತಿಳಿದುಕೊಳ್ಳುವುದಕ್ಕಾಗಿ ಜಿನೇಂದ್ರ ಭಗವಂತರುಗಳು ಒಂಭತ್ತು ಪದಾರ್ಥಗಳ ಉಪದೇಶ ಮಾಡಿದ್ದಾರೆ. ಆ ಒಂಭತ್ತು ಪದಾರ್ಥಗಳನ್ನು ಸಮ್ಯಕ್‌ರೂಪದಿಂದ ತಿಳಿದುಕೊಂಡ ಮೆಲೆ ಜೀವನಿಗೆ ಯಾವುದು ಹಿತಕರವಿದೆ,ಯಾವುದು ಅಹಿತಕರವಿದೆ, ಶಾಶ್ವತವಾದ ಹಿತವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕಾಗಿ ಜೀವನು ಏನು ಮಾಡಬೇಕಾಗುತ್ತದೆ, ಪರ ಪದರ್ತಗಳೊಡನೆ ತನ್ನದು ಯಾವ ಸಂಬಂಧವಿದೆ - ಇವೇ ಮೊದಲಾದ ಮಾತುಗಳು ಯಥಾರ್ಥರೂಪದಿಂದ ತಿಳುವಳಿಕೆಯಲ್ಲಿ ಬರುತ್ತವೆ ಮತ್ತು ತನ್ನ ಸುಖವು ತನ್ನಲ್ಲಿಯೇ ಇದೆಯೆಂದು ತಿಳಿದುಕೊಂಡು, ತನ್ನ ಎಲ್ಲ ಪರ್ಯಾಯಗಳಲ್ಲೂ ಜ್ಞಾನಾನಂದ ಸ್ವಭಾವವಾದ ನಿಜ ಜೀವದ್ರವ್ಯಸಾಮಾನ್ಯವು ಯಾವಾಗಲೂ ಏಕರೂಪವಿರುತ್ತದೆಯೆಂದು ತಿಳಿದುಕೊಂಡು, ಆ ಅನಾದಿ ಅಪ್ರಾಪ್ತವಾದಂಥ ಕಲ್ಯಾಣಬೀಜವಾದ ಸಮ್ಯಗ್ದರ್ಶನವನ್ನು ಮತ್ತು ಸಮ್ಯಗ್ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತಾತ್ತನೆ. ಅವುಗಳ ಪ್ರಾಪ್ತಿಯಾದ ನಂತರ ಜೀವನು ತನ್ನನ್ನು ದ್ರವ್ಯ ಅಪೇಕ್ಷೆಯಿಂದ ಕೃತಕೃತ್ಯವೆಂದು ಮನ್ನಿಸುತ್ತಾನ ಮತ್ತು ಆ ಕೃತಕೃತ್ಯ ದ್ರವ್ಯದ ಪರಿಪೂರ್ಣ ಆಶ್ರಯ ಮಾಡುವುದರಿಂದಲೇ ಶಾಶ್ವತಸುಖದ-ಮೋಕ್ಷದ- ಪ್ರಾಪ್ತಿಯಾಗುತ್ತದೆಯೆಂದು ತಿಳಿದುಕೊಳ್ಳುತ್ತಾನೆ.

ಸಮ್ಯಗ್ದರ್ಶನದ ಪ್ರಾಪ್ತಿಯಾದ ಮೇಲೆ ಜೀವನಿಗೆ ಶುದ್ಧಾತ್ಮ ದ್ರವ್ಯದ ಯಾವ ಅಲ್ಪ ಅವಲಂಬನೆಯಾಗುತ್ತದೆ ಅವರಲ್ಲಿ ವೃದ್ಧಿಯಾದ ಮೇಲೆ ಕ್ರಮದಿಂದ ದೇಶವಿರತ ಶ್ರಾವಕತ್ವ ಹಾಗೂ ಮುನಿತ್ವವು ಪ್ರಾಪ್ತವಾಗುತ್ತದೆ. ಸ್ರಾವಕನಿಗೆ ಮತ್ತು ಮುನಿಗೆ ಶುದ್ಧಾತ್ಮದ್ರವ್ಯದ ಮಧ್ಯಮ ಅವಲಂಬನರೂಪ ಅಂಶಿಕ ಶುದ್ಧಿಯಾಗುತ್ತದೆ ಅದು ಕರ್ಮಗಳನ್ನು ತಡೆಯುವಲ್ಲಿ ಹಾಗೂ ಉದುರಿಸುವಲ್ಲಿ ನಿಮಿತ್ತವಾಗುತ್ತದೆ, ಮತ್ತು ಯಾವ ಶುದ್ಧಿರೂಪದ ಅಂಶವಿರುತ್ತದೆ ಅದು

ಶ್ರಾವಕನಿಗೆ ದೇಶವ್ರತಾದಿರೂಪದಿಂದ ಹಾಗೂ ಮುನಿಗೆ ಮಹಾವ್ರತಾದಿರೂಪದಿಂದ ಕಂಡು ಬರುತ್ತದೆ. ಅನುಕ್ರಮದಿಂದ ಆ ಜೀವನು ಜ್ಞಾನಾನಂದಸ್ವಭಾವಿಯಾದ ಶುದ್ಧಾತ್ಮದ್ರವ್ಯದ ಅವಲಂಬನೆಯನ್ನು ಅತ್ಯಂತ ಉಗ್ರರೂಪದಿಂದ ಮಾಡಿ, ಎಲ್ಲ ವಿಕಲ್ಪಗಳಿಂದ ಬಿಡುಗಡೆ ಹೊಂದಿ, ಎಲ್ಲ ರಾಗ-ದ್ವೇಷಗಳಿಂದ ರಹಿತನಾಗಿ, ಕೇವಲಜ್ಞಾನವಲನ್ನು ಪ್ರಾಪ್ತಮಾಡಿಕೊಂಡು, ಆಯುಷ್ಯವು ಪೂರ್ಣವಾದ ಮೇಲೆ ದೇಹಾದಿ ಸಂಯೋಗಗಳಿಂದ ವಿಮುಕ್ತನಾಗಿ, ಸದಾಕಾಲವೂ ಜ್ಞಾನದರ್ಶನರೂಪದಿಂದ ಮತ್ತು ಅತೀಂದ್ರಿಯ ಅನಂತ ಅವ್ಯಾಬಾಧ ಆನಂದರೂಪದಿಂದ ಇರುತ್ತಾನೆ.

ಇದು ಭಗವಾನ ಕುಂದಕುಂದಾಚಾರ್ಯದೇವರು ಪಂಚಾಸ್ತಿಕಾಯಸಂಗ್ರಹ ಶಾಸ್ತ್ರದಲ್ಲಿ ಅತ್ಯಂತ ಕರುಣಾಬುದ್ಧಿಯಿಂದ ಪ್ರಸಿದ್ಧಪಡಿಸಿದ ವಸ್ತುತತ್ತ್ವದ ಸಂಕ್ಷಿಪ್ತ ಸಾರವಿದೆ. ಇದರಲ್ಲಿ ಯಾವ ರೀತಿಯನ್ನು ತಿಳಿಸಲಾಗಿದೆ ಅದನ್ನು ಹೊರತುಪಿಡಿಸಿ ಬೇರೆ ಯಾವ ರೀತಿಯಿಂದಲೂ ಜೀವನು ಅನಾದಿಕಾಲೀನವಾದ ಭಯಂಕರ ದುಃಖದಿಂದ ಬಿಡುಗಡೆಯಾಗುವ ಸಾಧ್ಯತೆಯಿಲ್ಲ. ಎಲ್ಲಿಯವರೆಗೆ ಜೀವನು ವಸ್ತುತತ್ತ್ವವನ್ನು ತಿಳಿದುಕೊಳ್ಳುವುದಿಲ್ಲ ಅಲ್ಲಿಯವರೆಗೆ ಇತರ ಕೋಟಿ ಪ್ರಯತ್ನದಿಂದಲೂ ಅವನಿಗೆ ಮೋಕ್ಷದ ಉಪಾಯವು ಕೈಗೆ ಬರುವುದಿಲ್ಲ. ಆದುದರಿಂದ ಈ ಶಾಸ್ತ್ರದಲ್ಲಿ ಎಲ್ಲಕ್ಕೂ ಮೋದಲು ಪಂಚಾಸ್ತಿಕಾಯ ಮತ್ತು ನವಪದಾರ್ಥಗಳ ಸ್ವರೂಪವನ್ನು ತಿಳಿಸಿಕೊಡಲಾಗಿದೆ. ಅದರಿಂದ ಜೀವನು ವಸ್ತುಸ್ವರೂಪವನ್ನು ತಿಳಿದುಕೊಂಡು ಮೋಕ್ಷ ಮಾರ್ಗದ ಮೂಲಭೂತವಾದ ಸಮ್ಯಗ್ದರ್ಶನವನ್ನು ಪ್ರಾಪ್ತ ಮಾಡಿಕೊಳ್ಳಬೇಕು.

ಅಸ್ತಿಕಾಯಗಳ ಮತ್ತು ಪದಾರ್ಥಗಳ ನಿರೂಪಣೆಯ ನಂತರ ಈ ಶಾಸ್ತ್ರದಲ್ಲಿ ಮೋಕ್ಷಮಾರ್ಗಸೂಚಕ ಚೂಲಿಕೆಯಿದೆ. ಈ ಕೊನೆಯ ಅಧಿಕಾರವು ಶಾಸ್ತ್ರರೂಪದ ಮಂದಿರದ ಮೇಲೆ ರತ್ನಕಳಸದ ಹಾಗೆ ಶೋಭೆ ಕೊಡುತ್ತದೆ. ಅಧ್ಯಾತ್ಮರಸಿಕರಾದ ಆತ್ಮಾರ್ಥಿಜೀವರುಗಳಿಗೆ ಇದು ಅತ್ಯಂತ ಪ್ರಿಯವಾದ ಅಧಿಕಾರವಿದೆ. ಈ ಅಧಿಕಾರದ ರಸಾಸ್ವಾದನೆ ಮಾಡುತ್ತಿರುವವರಿಗೆ ತೃಪ್ತಿಯೇ ಆಗುವುದಿಲ್ಲ ! ಇದರಲ್ಲಿ ಮುಖ್ಯವಾಗಿ ವೀತರಾಗ ಚಾರಿತ್ರದ ಸ್ವಸಮಯದ - ಶುದ್ಧ ಮುನಿದಸೆಯ-ಪಾರಮಾರ್ಥಿಕ ಮೋಕ್ಷಮಾರ್ಗದ ಭಾವಪೂರ್ಣ ಮಧುರ ಪ್ರತಿಪಾದನೆಯಿದೆ, ಮತ್ತು ಮುನಿಗೆ ಸರಾಗ ಚಾರಿತ್ರದ ದಶೆಯಲ್ಲಿ ಆಂಸಿಕ ಶುದ್ಧಿಯ ಜೊತೆ-ಜೊತೆಯಲ್ಲಿ ಶುಭಭಾವಗಳ ಸುಮೇಳವು ಹೇಗೆ ಆವಶ್ಯವಾಗಿರುತ್ತದೆಂಬುದರದೂ ಸ್ಪಷ್ಟನಿರ್ದೇಶನವಿದೆ. ಹೃದಯದಲ್ಲಿ ವೀತರಾಗ ಭಾವನೆಯ ಮಂಥನ ನಡೆಯುತ್ತಿರುವಂಥ ಶಾಸ್ತ್ರಕಾರ ಮತ್ತು ಟೀಕಾಕಾರರಾದ ಮುನೀಂದ್ರರುಗಳು ಈ ಅಧಿಕಾರದಲ್ಲಿ ಶಆಂತ ವೀತರಾಗ ರಸದ ಪ್ರವಾಹವನ್ನೇ ಹರಿಸಿದ್ದಾರೆ. ಧೀರವೂ, ಗಂಭೀರವೂ ಆದ ಗತಿಯಿಂದ ಪ್ರವಹಿಸುತ್ತಿರುವ ಆ ಶಾಂತರಸದ ಅಧ್ಯಾತ್ಮಗಂಗೆಯಲ್ಲಿ ಸ್ನಾನ ಮಾಡುವುದರಿಂದ ತತ್ತ್ವಜಿಜ್ಞಾಸೆಯುಳ್ಳ ಭಾವುಕ ಜೀವರುಗಳು ಶೀತಲತಾಭಿಭೂತರಾಗುತ್ತಾರೆ ಮತ್ತು ಅವರುಗಳ ಹೃದಯವು ಶಾಂತ-ಸಾಂತವಾಗಿ ಮುನೀಂದ್ರರುಗಳ ಆತ್ಮಾನುಭವಮೂಲಕವಾದ ಸಹಜಶುದ್ಧ ಉದಾಸೀನ ದಶೆಯ ಕುರಿತು ಗೌರವದೊಂದಿಗೆ ವಿನಮಿತರಾಗಿ ಹೋಗುತ್ತಾರೆ. ಈ ಅಧಿಕಾರದ ಮನನ ಮಾಡುವುದರಿಂದ ಸುಪ್ತಾರ ಮುಮುಕ್ಷು ಜೀವರುಗಳ ತಿಳಿವಳಿಕೆಯಲ್ಲಿ 'ಶುದ್ಧಾತ್ಮದ್ರವ್ಯದ ಆಶ್ರಯದಿಂದ ಸ್ವಾಭಾವಿಕದಶೆಯ ಅಂಶವನ್ನು ಪ್ರಕಟಮಾಡಿದಲ್ಲದೆ ಮೋಕ್ಷದ ಉಪಾಯದ ಅಂಶವೂ ಪ್ರಾಪ್ತವಾಗುವುದಿಲ್ಲ'ವೆಂಬುದು ಬಂದು ಬಿಡುತ್ತದೆ.

ಈ ಪವಿತ್ರಶಾಸ್ತ್ರದ ಕರ್ತೃ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವರ ಕುರಿತು ಪೂ. ಗುರುದೇವರದು ಅಪಾರ ಭಕ್ತಿಯಿದೆ. ಈ ಸಮಯಸಾರ, ನಿಯಮಸಾರ, ಪ್ರವಚನಸಾರ, ಪಂಚಾಸ್ತಿಕಾಯಸಂಗ್ರಹ ಮೊದಲಾದ ಶಾಸ್ತ್ರಗಳ ಪ್ರತಿಯೊಂದು ಗಾಥೆಯಲ್ಲಿ ದಿವ್ಯಧ್ವನಿಯ ಸಂದೇಶವಿದೆಯೆಂದು ಅವರು ಅನೇಕ ಬಾರಿ ಹೇಳುತ್ತಾರೆ. ಈ ಗಾಥೆಗಳಲ್ಲಿನ ಆಳವನ್ನು ಅಳೆಯ ಹೋದವರಿಗೆ ತಮ್ಮದೇ ಶಕ್ತಿಯ ಅಳತೆಯು ಹೊರಡುತ್ತದೆ. ಈ ಸಾರಗಂಭೀರ ಶಾಸ್ತ್ರಗಳ ರಚಯಿತರಾದ ಪರಮಕೃಪಾಳು ಆಚಾರ್ಯ ಭಗವಂತರಿಗೆ ಯಾವುದೋ ಪರಮ ಅಲೌಕಿಕ ಸಾಮರ್ಥ್ಯವಿತ್ತು.

ಪರಮ ಅದ್ಭುತ ಸಾತಿಶಯ ಅಂತರ್ಬಾಹ್ಯ ಯೋಗಗಳಿಲ್ಲದೆ ಈ ಶಾಸ್ತ್ರಗಳ ರಚನೆಯು ಶಕ್ಯವಿಲ್ಲ. ಈ ಶಾಸ್ತ್ರಗಳ ವಾಣಿಯು ಮುಕ್ತವಾಗುತ್ತಿರುವ ಪುರುಷನ ವಾಣಿಯಿದೆಯೆಂಬುದನ್ನು ನಾವು ಸ್ಪಷ್ಟವಾಗಿ ತಿಳಿಯುತ್ತೇವೆ. ಇದರ ಪ್ರತಿಯೊಂದು ಗಾಥೆಯು ಆರನೆಯ-ಏಳನೆಯ ಗುಣಸ್ಥಾನದಲ್ಲಿ ಜೀಕುತ್ತಿರುವ ಮಹಾಮುನಿಯ ಆತ್ಮಾನುಭವದಿಂದ ಪ್ರಕಟವಾಗಿದೆ. ಈ ಶಾಸ್ತ್ರಗಳ ರಚಯಿತರು ಭಗವಾನ ಕುಂದಕುಂದಾಚಾರ್ಯದೇವರು ಮಹಾವಿದೇಹಕ್ಷೇತ್ರದಲ್ಲಿ ಸರ್ವಜ್ಞವೀತರಾಗ ಸೀಮಂಧರ ಭಗವಂತರ ಸಮವಸರಣಕ್ಕೆ ಹೋಗಿದ್ದರು. ಮತ್ತು ಅಲ್ಲಿ ಅವರು ಎಂಟು ದಿವಸಗಳವರೆಗೆ ಇದ್ದರೆಂಬ ಮಾತು ಯಥಾತಥ್ಯವಿದೆ, ಕ್ಷರಶಃ ಸತ್ಯವಿದೆ, ಪ್ರಮಾಣ ಸಿದ್ಧವಿದೆ. ಆ ಪರಮೋಪಕಾರಿಗಳಾದ ಆಚಾರ್ಯ ಭಗವಂತರ ಮುಕಾಂತರ ರಚಿಸಲ್ಪಟ್ಟ ಸಮಯಸಾರ ಮೊದಲಾದ ಶಾಸ್ತ್ರಗಳಲ್ಲಿ ತೀರ್ಥಂಕರದೇವರ ಓಂಕಾರಧ್ವನಿಯಿಂದ ಹೊರ ಹೊರಟ ಉಪದೇಶವಿದೆ.

ಈ ಶಾಸ್ತ್ರದಲ್ಲಿ ಭಗವಾನ ಕುಂದಕುಂದಾಚಾರ್ಯದೇವರ ಪ್ರಾಕೃತ ಗಾಥೆಗಳ ಮೇಲೆ ಸಮಯವ್ಯಾಖ್ಯೆಯೆಂಬ ಹೆಸರಿನ ಸಂಸ್ಕೃತ ಟೀಕೆಯ ಲೇಖಕರು (ಸು.ವಿ.ಸಂ. ಹತ್ತನೆಯ ಶತಾಬ್ದಿಯಲ್ಲಾದ) ಶ್ರೀ ಅಮೃತಚಂದ್ರಾಚಾರ್ಯ ದೇವರಿದ್ದಾರೆ. ಯಾವ ಪ್ರಕಾರ ಈ ಶಾಸ್ತ್ರದ ಮೂಲಕರ್ತೃಗಳು ಅಲೌಕಿಕ ಪುರುಷರಿದ್ದಾರೆ ಅದೇ ಪ್ರಕಾರ ಇದರ ಟೀಕಾಕಾರರೂ ಅತ್ಯಂತ ಸಮರ್ಥ ಆಚಾರ್ಯರಿದ್ದಾರೆ; ಅವರು ಸಮಯಸಾರದ ಹಾಗೂ ಪ್ರವಚನಸಾರದ ಟೀಕೆಯನ್ನೂ ಬರೆದಿದ್ದಾರೆ ಮತ್ತು ತತ್ತ್ವಾರ್ಥಸಾರ, ಪುರುಷಾರ್ಥಸಿದ್ಧ್ಯುಪಾಯ ಮೊದಲಾದ ಸ್ವತಂತ್ರ ಗ್ರಂಥಗಳನ್ನೂ ರಚಿಸಿದ್ದಾರೆ. ಅವರ ಟೀಕೆಗಳಂಥ ಟೀಕೆಯನ್ನು ಇದುವರೆಗೆ ಯಾವ ಜೈನಗ್ರಂಥದ ಮೇಲೂ ಬರೆಯಲಾಗಿಲ್ಲ. ಅವರ ಟೀಕೆಗಳನ್ನು ಓದುವವರಿಗೆ ಅವರ ಅಧ್ಯಾತ್ಮರಸಿಕತೆ, ಆತ್ಮಾನುಭವ, ಪ್ರಖರವಿದ್ವತ್ತೆ, ವಸ್ತುಸ್ವರೂಪವನ್ನು ನ್ಯಾಯದಿಂದ ಸಿದ್ಧಮಾಡುವ ಅಸಾದಾರಣಶಕ್ತಿ, ಜಿನಶಾಸನದ ಸಾತಿಶಯ ಅಗಾಧಜ್ಞಾನ, ನಿಶ್ಚಯ-ವ್ಯವಹಾರದ ಸಂಧಿಬದ್ಧವಾಗಿ ನಿರೂಪಣೆ ಮಾಡುವ ವಿರಲಶಕ್ತಿ ಮತ್ತು ಉತ್ತಮ ಕಾವ್ಯಶಕ್ತಿಯ ಸಂಪೂರ್ಣ ಪ್ರತೀತಿಯಾಗಿ ಹೋಗುತ್ತದೆ. ಅತ್ಯಂತ ಸಂಕ್ಷೇಪದಲ್ಲಿ ಗಂಭೀರವಾದ ರಹಸ್ಯವನ್ನು ತುಂಬಿಬಿಡುವ ಅವರ ಶಕ್ತಿಯು ವಿದ್ವಾಂಸರನ್ನು ಆಶ್ಚಯಚಕಿತ ಮಾಡಿಬಿಡುತ್ತದೆ. ಅವರ ದೈವೀಟೀಕೆಗಳು ಶ್ರುತಕೇವಲಿಗಳ ವಚನದಂತೆ ಇವೆ. ಯಾವ ಪ್ರಕಾರ ಮೂಲಶಾಸ್ತ್ರಕಾರರ ಶಾಸ್ತ್ರಗಳು ಅನುಭವ, ಯುಕ್ತಿ ಮೊದಲಾದ ಸಮಸ್ತ ಸಮೃದ್ಧಿಯಿಂದ ಸಮೃದ್ಧವಿವೆ ಅದೇ ಪ್ರಕಾರ ಟೀಕಾರರ ಟೀಕೆಗಳೂ ಅವೆಲ್ಲ ಸಮೃದ್ಧಿಗಳಿಂದ ವಿಭೂಷಿತವಿವೆ. ಸಾಸನ ಮಾನ್ಯರಾದ ಭಗವಾನ ಕುಂದಕುಂದಾದೇವರು ಈ ಕಲಿಕಾಲದಲ್ಲಿ ಜಗದ್ಗುರು ತೀರ್ಥಂಕರದೇವರಂಥ ಕಾರ್ಯ ಮಾಡಿದ್ದಾರೆ ಮತ್ತು ಶ್ರೀ ಅಮೃತಚಂದ್ರಾಚಾರ್ಯ ದೇವರು ಅವರು ಶ್ರೀ ಕುಂದಕುಂದ ಭಗವಂತರ ಹೃದಯವನ್ನು ಪ್ರವೇಶಿಸಿಬಿಟ್ಟಿದ್ದಾರೋ ಏನೋ ಎನ್ನುವಂತೆ ಅವರ ಗಂಭೀರ ಆಶಯಗಳನ್ನು ಯಥಾರ್ಥರೂಪದಿಂದ ವ್ಯಕ್ತ ಮಾಡಿ ಅವರ ಗಣಧರರಂತೆ ಕಾರ್ಯ ಮಾಡಿದ್ದಾರೆ. ಶ್ರೀ ಅಮೃತಚಂದ್ರಾಚಾರ್ಯದೇವರು ರಚಿಸಿದ ಕಾವ್ಯಗಳೂ ಅಧ್ಯಾತ್ಮರಸ ಹಾಗೂ ಆತ್ಮನುಭವದ ಮದದಿಂದ ಪರಿಪೂರ್ಣವಿವೆ. ಶ್ರೀ ಸಮಯಸಾರದ ಟೀಕೆಯಲ್ಲಿ ಬರುವಂಥ ಕಾವ್ಯ(ಕಲಶ)ಗಳು ಶ್ರೀ ಪದ್ಮಪ್ರಭಮಲಧಾರಿದೇವರಂಥ ಸಮರ್ಥ ಮುನಿವರರ ಮೇಲೆ ಅತ್ಯಂತ ಪ್ರಭಾವಬೀರಿವೆ ಮತ್ತು ಇಂದೂ ಅವು ತತ್ತ್ವಜ್ಞಾನ ಹಾಗೂ ಅಧ್ಯಾತ್ಮರಸದಿಂದ ಪರಿಪೂರ್ಣವಾದ ಮಧುರ ಕಲಶಗಳು ಅಧ್ಯಾತ್ಮಿರಸಿಕರ ಹೃದಯ ತಂತಿಯನ್ನು ಝಂಕೃತಗೊಳಿಸಿ ಬಿಡುತ್ತವೆ. ಅಧ್ಯಾತ್ಮಕವಿಯ ರೂಪದಲ್ಲಿ ಶ್ರೀ ಅಮೃತಚಂದ್ರಾಚಾರ್ಯದೇವರ ಸ್ಥಾನವು ಅದ್ವಿತೀಯವಾಗಿದೆ.

ಪಂಚಾಸ್ತಿಕಾಯಸಂಗ್ರಹದಲ್ಲಿ ಭಗವಾನ ಕುಂದಕುಂದಾಚಾರ್ಯದೇವರು ೧೭೩ ಗಾಥೆಗಳ ರಚನೆಯನ್ನು ಪ್ರಾಕೃತದಲ್ಲಿ ಮಾಡಿದ್ದಾರೆ. ಅದರ ಮೇಲೆ ಶ್ರೀ ಅಮೃತಚಂದ್ರಾಚಾರ್ಯದೇವರು ಸಮಯವ್ಯಾಖ್ಯೆಯೆಂಬ ಹೆಸರಿನ

ಹಾಗೂ ಶ್ರೀ ಜಯಸೇನಾಚಾರ್ಯದೇವರು ತಾತ್ಪರ್ಯವೃತ್ತಿಯೆಂಬ ಹೆಸರಿನ ಸಂಸ್ಕೃತ ಟೀಕೆಗಳನ್ನು ಬರೆದಿದ್ದಾರೆ. ಶ್ರೀ ಪಾಂಡೆ ಹೇಮರಾಜರು ಸಮಯವ್ಯಾಖ್ಯೆಯ ಭಾವಾರ್ಥವನ್ನು (ಪ್ರಾಚೀನ) ಹಿಂದಿಯಲ್ಲಿ ಬರೆದಿದ್ದಾರೆ, ಅದರ ಹೆಸರು ಬಾಲಾವಬೋಧ ಭಾಷಾ ಟೀಕೆಯಿದೆ. ವಿಕ್ರಮ ಸಂವತ ೧೬೭೨ ರಲ್ಲಿ ಶ್ರೀ ಪರಮ ಶ್ರುತ ಪ್ರಭಾವಕ ಮಂಡಲದಿಂದ ಪ್ರಕಟವಾದ ಹಿಂದೀ ಪಂಚಾಸ್ತಿಕಾಯದಲ್ಲಿ ಮೂಲ ಗಾಥೆಗಳು, ಎರಡೂ ಸಂಸ್ಕೃತ ಟೀಕೆಗಳು ಮತ್ತು ಶ್ರೀ ಹೇಮರಾಜಕೃತ ಬಾಲಾವಬೋಧ ಭಾಷಾ ಟೀಕೆಯನ್ನು (ಶ್ರೀ ಪನ್ನಾಲಾಲ ಬಾಕಲಿವಾಲರಿಂದ ಪ್ರಚಲಿತ ಹಿಂದೀ ಭಾಷೆಯ ಪರಿವರ್ತಿತ ಸ್ವರೂಪದಲ್ಲಿ) ಕೊಡಲಾಗಿದೆ. ಇದರ ನಂತರ ಪ್ರಕಟವಾಗುವಂಥ ಗುಜರಾತಿ ಪಂಚಾಸ್ತಿಕಾಯಸಂಗ್ರಹದಲ್ಲಿ ಮೂಲಗಾಥೆಗಳು ಅವುಗಳ ಗುಜರಾತಿ ಪದ್ಯಾನುವಾದ, ಸಂಸ್ಕೃತ ಸಮಯವ್ಯಾಕ್ಯೆ - ಟೀಕೆ ಮತ್ತು ಆ ಗಾಥಾ ಟೀಕೆಯ ಅಕ್ಷರಶಃ ಗುಜರಾತಿ ಅನುವಾದವನ್ನು ಪ್ರಕಾಶಿತ ಮಾಡಲಾಗಿದೆ, ಅದರದು ಇದು ಕನ್ನಡ ಅನುವಾದವಿದೆ. ಸ್ಪಷ್ಟತೆಯ ಅವಶ್ಯಕತೆ ತೋರಿದಲ್ಲೆಲ್ಲ 'ಕೌಸ'ದಲ್ಲಿ 'ಭಾವಾರ್ಥ'ದಲ್ಲಿ ಟಿಪ್ಪಣಿಯಲ್ಲಿ ಸ್ಪಷ್ಟ ಮಾಡಿದೆ. ಸ್ಪಷ್ಟ ಮಾಡುವಾಗ ಅನೇಕ ಸ್ಥಳಗಳಲ್ಲಿ ಶ್ರೀ ಜಯಸೇನಾಚಾರ್ಯ ದೇವಕೃತ ತಾತ್ಪರ್ಯವೃತ್ತಿಯು ಹೆಚ್ಚು ಉಪಯೋಗವಾಗಿದೆ ; ಕೆಲವು ಸ್ಥಾನಗಳಲ್ಲಂತೂ ತ್ಪಾರ್ಯವೃತ್ತಿಯ ಒಂದೊಂದು ಭಾಗದ ಅಕ್ಷರಶಃಅನುವಾದವನ್ನೇ 'ಭಾವಾರ್ಥ' ಅಥವಾ ಟಿಪ್ಪಣಿಯರೂಪದಲ್ಲಿ ಮಾಡಲಾಗಿದೆ. ಕೆಲವು ಸ್ಥಾನಗಳಲ್ಲಿ ಶ್ರೀ ಹೇಮರಾಜಕೃತ ಬಾಲಾವಬೋಧ ಭಾಷಾ ಟೀಕೆಯ ಆದಾರವನ್ನೂ ತೆಗೆದುಕೊಳ್ಳಲಾಗಿದೆ. ಶ್ರೀ ಪರಮಶ್ರುತ ಪ್ರಭಾವಕ ಮಂಡಲದಿಂದ ಮುದ್ರಣಗೊಂಡ ಪಂಚಾಸ್ತಿಕಾಯದೊಡನೆ ಹಸ್ತಲಿಖಿತ ಪ್ರತಿಗಳನ್ನು ಹೊಂದಿಸಿ ನೋಡಿದ ಮೇಲೆ ಅದರಲ್ಲಿ ಒಂದಿಷ್ಟು ಅಶುದ್ಧಗಳು ಕಂಡು ಬಂದವು ಅವನ್ನು ಇದರಲ್ಲಿ ತಿದ್ದುಪಡಿ ಮಾಡಿಕೊಳ್ಳಲಾಗಿದೆ.

ಈ ಶಾಸ್ತ್ರದ ಟೀಕೆಯ ಅನುವಾದ ಮಾಡುವ ಮಹಾಭಾಗ್ಯವು ನನಗೆ ಪ್ರಾಪ್ತವಾದದ್ದು ಅದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಪರಮಪೂಜ್ಯ ಗುರುದೇವರ ಆಶ್ರಯದಲ್ಲಿ ಈ ಮಹಾನ್ ಶಾಸ್ತ್ರದ ಅನುವಾದವಾಗಿದೆ. ಅನುವಾದ ಮಾಡುವ ಸಂಪೂರ್ಣಶಕ್ತಿಯು ನನಗೆ ಗುರುದೇವರಿಂದಲೇ ಪ್ರಾಪ್ತವಾಗಿದೆ. ಗುರುದೇವರ ಪವಿತ್ರ ಜೀವನದ ಪ್ರತ್ಯಕ್ಷ ಪರಿಚಯವಿಲ್ಲದೆ ಮತ್ತು ಅವರ ಆಧ್ಯಾತ್ಮಿಕ ಉಪದೇಶವಿಲ್ಲದೆ ಈ ಪಾಮರನಿಗೆ ಜಿನವಾಣಿಯ ಕುರಿತು ಸ್ವಲ್ಪಾದರೂ ಭಕ್ತಿ ಅಥವಾ ಶ್ರದ್ಧೆಯು ಎಲ್ಲಿಂದ ಪ್ರಕಟವಾಗುತ್ತಿತ್ತು ? ಭಗವಾನ ಕುಂದಕುಂದದೇವರ ಮತ್ತು ಅವರ ಶಾಸ್ತ್ರಗಳ ಸ್ವಲ್ಪಮಾತ್ರವಾದರೂ ಮಹಿಮೆ ಎಲ್ಲಿಂದ ಬರುತ್ತಿತ್ತು ? ಹಾಗೂ ಆ ಶಾಸ್ತ್ರಗಳ ಅರ್ಥವನ್ನು ತಿಳಿದುಕೊಳ್ಳುವ ಸ್ವಲ್ಪಮಾತ್ರವಾದರೂ ಶಕ್ತಿಯು ಎಲ್ಲಿಂದ ಬರುತ್ತಿತ್ತು ? ಈ ಪ್ರಕಾರ ಅನುವಾದ ಸಮಸ್ತ ಶಕ್ತಿಯ ಮೂಲವು ಶ್ರೀ ಗುರುದೇವರೇ ಇರುವುದರಿಂದ ವಾಸ್ತವಿಕವಾಗಿ ಗುರುದೇವರ ಅಮೃತವಾಣಿಯ ಸ್ತೋತ್ರವೇ - ಅವರಿಂದ ಪ್ರಾಪ್ತವಾದ ಅಮೌಲ್ಯ ಉಪದೇಶವೇ - ಯಥಾಸಮಯ ಈ ಅನುವಾದರೂಪದಲ್ಲಿ ಪರಿಣಮಿತವಾಗಿದೆ. ಅವರ ಶಕ್ತಿಸಿಂಚನ ಹಾಗೂ ಛತ್ರಛಾಯೆಯಿಂದ ನಾನು ಈ ಮಹಾನ್ ಶಾಸ್ತ್ರದ ಅನುವಾದ ಮಾಡುವ ಸಾಹಸ ಮಾಡಿದ್ದೇನೆ. ಮತ್ತು ಅವರ ಕೃಪೆಯಿಂದ ಇದು ನಿವಿಘ್ನವಾಗಿ ಪರಿಪೂರ್ಣವಾಗಿದೆ. ಆ ಪರಮಪೂಜ್ಯ ಗುರುದೇವರ ಚರಣಾರವಿಂದದಲ್ಲಿ ನಾನು ಅತ್ಯಂತ ಭಕ್ತಿಭಾವದೊಡನೆ ವಂದನೆ ಮಾಡುತ್ತೇನೆ.

ಪರಮಪೂಜ್ಯ ಸೋದರಿಶ್ರೀ ಚಂಪಾಬಹನ ಹಾಗೂ ಪರಮಪೂಜ್ಯ ಶ್ರೀ ಶಾಂತಾಬಹನರ ಕುರಿತೂ ಈ ಅನುವಾದದ ಪೂರ್ಣಾಹುತಿ ಮಾಡುತ್ತ ಉಪಕಾರವಶದ ಉಗ್ರವೃತ್ತಿಯ ಅನುಭವವಾಗುತ್ತದೆ ಅವರ ಪವಿತ್ರ ಜೀವನ ಮತ್ತು ಬೋಧವು ಈ ಪಾಮರನಿಗೆ ಶ್ರೀ ಪಂಚಾಸ್ತಿಕಾಯಸಂಗ್ರಹದ ಕುರಿತು, ಪಂಚಾಸ್ತಿಕಾಯ ಸಂಗ್ರಹದ ಮಹಾನ್ ಕರ್ತೃವಿನ ಕುರಿತು ಹಾಗೂ ಪಂಚಾಸ್ತಿಕಾಯ ಸಂಗ್ರಹದಲ್ಲಿ ಉಪದೇಶಿಸಲ್ಪಟ್ಟ ವೀತರಾಗ ವಿಜ್ಞಾನತೆಯ ಕುರಿತು ಗೌರವ ವೃದ್ಧಿಸುವಲ್ಲಿ ವಿಶೇಷ ನಿಮಿತ್ತವಾಗಿರುವಂಥ ಆ ಪರಮಪೂಜ್ಯ ಸಹೋದರಿಯರ ಚರಣಕಮಲಗಳಲ್ಲಿ ಈ ಹೃದಯವು

ನಮನಮಾಡುತ್ತದೆ.

ಈ ಅನುವಾದದಲ್ಲಿ ಆದರಣೀಯ ಶ್ರೀ ರಾಮಜೀಭಾಯಿ ಮಾಣಿಕಚಂದ ದೋಸಿ ವಕೀಲ ಹಾಗೂ ಬಾಲಬ್ರಹ್ಮಚಾರಿ ಶ್ರೀ ಚಂದುಲಾಲ ಖೀಮಚಂದ ಜೋಬಾಲಿಯಾರದು ಹಾರ್ದಿಕ ಸಹಕಾರವಿದೆ, ಆದರಣೀಯ ಶ್ರೀ ರಾಮಜೀಭಾಯಿಯವರು ತಮ್ಮ ವ್ಯಸ್ತಧಾರ್ಮಿಕ ವ್ಯವಸಾಯಗಳೊಳಗಿಂದ ಸಮಯಮಾಡಿಕೊಂಡು ಸಂಪೂರ್ಣ ಅನುವಾದವನ್ನು ಸೂಕ್ಷ್ಮತೆಯಿಂದ ಪರಿಶೀಲನೆ ಮಾಡಿದ್ದಾರೆ. ಯಥೋಚಿತ ಸೂಚನೆಗಳನ್ನು ನೀಡಿದ್ದಾರೆ ಮತ್ತು ಅನುವಾದದಲ್ಲಿ ಬರುವಂಥ ಚಿಕ್ಕ-ಪುಟ್ಟ ಕಠಿಣತೆಗಳ ನಿರಾಕರಣೆಯನ್ನು ತಮ್ಮ ವಿಶಾಲ ಶಾಸ್ತ್ರಜ್ಞಾನದಿಂದ ಮಾಡಿದ್ದಾರೆ. ಅವರ ಸೂಚನೆಗಳು ನಮಗೆ ಅತ್ಯಂತ ಉಪಯುಕ್ತವೆಂದು ಸಿದ್ಧವಾಗಿವೆ. ಬ್ರಹ್ಮಚಾರಿ ಚಂದೂಲಾಲರು ಸಂಪೂರ್ಣ ಅನುವಾದವನ್ನು ಅತ್ಯಂತ ಸೂಕ್ಷ್ಮತೆಯಿಂದ ಪರಿಶೀಲಿಸಿ ಉಪಯುಕ್ತ ಸೂಚನೆ ನೀಡಿದ್ದಾರೆ, ಅತ್ಯಂತ ಪರಿಶ್ರಮಪೂರ್ವಕಹಸ್ತಲಿಖಿತ ಪ್ರತಿಗಳ ಆಧಾರದಿಂದ ಸಂಸ್ಕೃತ ಟೀಕೆಯನ್ನು ಸುಧಾರಿಸಿದ್ದಾರೆ, ಅನುಕ್ರಮಣಿಕೆ, ಗಾಥಾಸೂಚಿ, ಶುದ್ಧಿಪತ್ರ ಮೊದಲಾದುವನ್ನು ಸಿದ್ಧಪಡಿಸಿದ್ದಾರೆ ಮತ್ತು ತುಂಬ ಸಾವಧಾನತೆಯೊಡನೆ ಕರಡು ಸಂಶೋಧನೆ ಮಾಡಿದ್ದಾರೆ. - ಈ ಪ್ರಕಾರ ಅತ್ಯಂತ ಪರಿಶ್ರಮ ಹಾಗೂ ಸಾವದಾನತೆಯೊಡನೆ ಸರ್ವತೋಮುಖ ಸಹಾಯ ಮಾಡಿದ್ದಾರೆ ಇಂಥ ಹಾರ್ದಿಕ ಸಹಾಯ ನೀಡಿದುದಕ್ಕೆ ನಾನು ಅಂತಃಕರಣಪೂರ್ವಕ ಅವರೀರ್ವರ ಆಭಾರ ಮನ್ನಿಸುತ್ತೇನೆ. ಅವರುಗಳ ಹಾರ್ದಿಕ ಸಹಾಯವಿಲ್ಲದೆ ಹೋಗಿದ್ದರೆ ಈ ಅನುವಾದದಲ್ಲಿ ಅನೇಕ ಕೊರತೆಗಳು ಉಳಿಯುತ್ತಿದ್ದವು. ನಾನು ಯಾವ - ಯಾವ ಟೀಕೆಗಳ ಹಾಗೂ ಶಾಸ್ತ್ರಗಳ ಆಧಾರ ಪಡೆದುಕೊಂಡಿದ್ದೇನೆ ಅವೆಲ್ಲವುಗಳ ರಚನೆಕಾರರಿಗೂ ನಾನು ತುಂಬ ಋಣಿಯಾಗಿದ್ದೇನೆ.

ಈ ಅನುವಾದವನ್ನು ನಾನು ಪಂಚಾಸ್ತಿಕಾಯಸಂಗ್ರಹದ ಕುರಿತು ಭಕ್ತಿ ಹಾಗೂ ಗುರುದೇವರ ಪ್ರೇರಣೆಯಿಂದ ಪ್ರೇರಿತನಾಗಿ ನಿಜಕಲ್ಯಾಣದ ಉದ್ದೇಶದಿಂದ ಹೆದರುತ್ತ -ಹೆದರುತ್ತ ಮಾಡಿದ್ದೇನೆ. ಅನುವಾದ ಮಾಡುವ ಸಮಯದಲ್ಲಿ ನಾನು ಶಾಸ್ತ್ರದ ಮೂಲ ಆಶಯಗಳಲ್ಲಿ ಸ್ವಲ್ಪ ಮಾತ್ರವೂ ಪರಿವರ್ತನೆಯಾಗದಂತೆ ತುಂಬ ಜಾಗರೂಕತೆ ವಹಿಸಿದ್ದೇನೆ. ಆದಾಗ್ಯೂ ಅಲ್ಪಜ್ಞತೆಯ ಕಾರಣವಾಗಿ ಇದರಲ್ಲಿ ಎಲ್ಲಿಯಾದರೂ ಆಶಯವು ಪರಿವರ್ತನವಾಗಿದ್ದರೆ ಅತವಾ ದೋಷಗಳು ಉಳಿದುಕೊಂಡಿದ್ದರೆ ಅದಕ್ಕಾಗಿ ನಾನು ಶಾಸ್ತ್ರಕಾರರಾದ ಭಗವಾನ ಕುಂದಕುಂದಾಚಾರ್ಯದೇವ, ಟೀಕಾಕಾರರಾದ ಶ್ರೀ ಅಮೃತಚಂದ್ರಾಚಾರ್ಯದೇವ, ಪರಮಕೃಪಾಳು ಶ್ರೀ ಗುರುದೇವ ಹಾಗೂ ಮುಮುಕ್ಷು ಪಾಠಕರುಗಳ ಹಾರ್ದಿಕ ಕ್ಷಮಾಯಾಚನೆ ಮಾಡುತ್ತೇನೆ.

ಸಂಕ್ಷೇಪದಲ್ಲಿ ಜಿನೇಂದ್ರ ಶಾಸನವನ್ನು ಪ್ರತಿಪಾದನೆ ಮಾಡುವಂಥ ಈ ಪವಿತ್ರ ಶಾಸ್ತ್ರದ ಅಧ್ಯಯನ ಮಾಡಿ ಜೀವನು ಇದರ ಆಶಯಗಳನ್ನು ಚನ್ನಾಗಿ ತಿಳಿದುಕೊಂಡರೆ ಅವನು ಖಂಡಿತವಾಗಿ ಈ ಚತುರ್ಗತಿಯ ಅನಂತ ದುಃಖವನ್ನು ನಾಶ ಮಾಡಿ ನಿರ್ವಾಣಕ್ಕೆಪ್ರಾಪ್ತನಾಗುತ್ತಾನೆ. ಇದರ ಆಶಯಗಳನ್ನು ಸಮ್ಯಕ್ ಪ್ರಕಾರದಿಂದ ತಿಳಿದುಕೊಳ್ಳುವುದಕ್ಕಾಗಿ ನಿಮ್ನೋಕ್ತ ಮಾತುಗಳನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳುವುದು ಅವಶ್ಯಕವಿದೆ.

ಈ ಶಾಸ್ತ್ರದಲ್ಲಿ ಕೆಲವು ಕಥನವು ಸ್ವಾಶ್ರಿತ ನಿಶ್ಚಯನಯದ್ದಿದೆ (ಅದು ತನ್ನನ್ನು ಪರದಿಂದ ಭಿನ್ನವಾಗಿ ನಿರೂಪಣೆ ಮಾಡುತ್ತದೆ) ಮತ್ತು ಕೆಲವು ಕಥನವು ಪರಾಶ್ರಿತ ವ್ಯವಹಾರನಯದ್ದಿದೆ (ಅದು ತನ್ನನ್ನು ಪರದೊಡನೆ ಸಂಬಂಧವಿರುವ ರೂಪದಿಂದ ನಿರೂಪಣೆ ಮಾಡುತ್ತದೆ); ಇನ್ನು ಕೆಲವು ಕಥನವು ಅಭಿನ್ನಸಾಧ್ಯ ಸಾಧನ ಭಾವಾಶ್ರಿತವಾದ ನಿಶ್ಚಯನಯದ್ದಿದೆ ಮತ್ತುಕೆಲವು ಭಿನ್ನಸಾಧ್ಯಸಾದನ ಬಾವಾಶ್ರಿತವಾದ ವ್ಯವಹಾರನಯದ್ದಿದೆ. ಅಲ್ಲಿ ನಿಶ್ಚಯ ಕಥನಗಳದ್ದಂತೂ ನೇರವಾಗಿಯೇ ಅರ್ಥ ಮಾಡಬೇಕಾಗುವುದು ಮತ್ತು ವ್ಯವಹಾರ ಕಥನಗಳನ್ನು ಅಭೂತಾರ್ಥವೆಂದು ತಿಳಿದುಕೊಂಡು ಅವುಗಳ

ನಿಜವಾದ ಆಶಯವೇನಿದೆಯೆಂಬುದನ್ನು ಕಂಡುಕೊಳ್ಳಬೇಕಾಗುವುದು. ಒಂದು ವೇಳೆ ಹೀಗೆ ಮಾಡದೆ ಹೋದರೆ ವಿಪರೀತವಾಗಿ ತಿಳಿದುಕೊಳ್ಳುವುದರಿಂದ ಅನರ್ಥವಾಗಿ ಹೋಗಬಹುದಾಗಿದೆ. 'ಪ್ರತಿಯೊಂದು ದ್ರವ್ಯವು ಸ್ವತಂತ್ರವಿದೆ ಅದು ತನ್ನದೇ ಗುಣ ಪರ್ಯಾಯಗಳನ್ನು ಹಾಗೂ ಉತ್ಪಾದವ್ಯಯಧ್ರೌವ್ಯಗಳನ್ನು ಮಾಡುತ್ತದೆ. ಅದು ಪರದ್ರವ್ಯದ ಗ್ರಹಣತ್ಯಾಗಮಾಡುವ ಸಾಧ್ಯತೆಯಿಲ್ಲ ಮತ್ತು ಪರದ್ರವ್ಯವು ವಾಸ್ತವಿಕವಾಗಿ ಅದಕ್ಕೆ ಯಾವ ಲಾಭ-ಹಾನಿಯನ್ನಾಗಲಿ ಅಥವಾ ಸಹಾಯವನ್ನಾಗಲಿ ಮಾಡುವ ಸಾಧ್ಯತೆಯಿಲ್ಲ. ಜೀವದ ಶುದ್ಧ ಪರ್ಯಾಯವು ಸಂವರ-ನಿರ್ಜರೆ-ಮೋಕ್ಷಕ್ಕೆ ಕಾರಣಭೂತವಿದ್ದರೆ ಅಶುದ್ಧ ಪರ್ಯಾಯವು ಆಸ್ರವ-ಬಂಧಕ್ಕೆ ಕಾರಣಭೂತವಿದೆ' - ಇಂಥ ಮೂಲಭೂತ ಸಿದ್ಧಾಂತಗಳನ್ನು ಎಲ್ಲಿಯೂ ಬಾಧೆತಲುಪದಂತೆ ಯಾವಾಗಲೂ ಶಾಸ್ತ್ರದ ಕತನಗಳ ಅರ್ಥಮಾಡಬೇಕಾಗುವುದು. ಈ ಶಾಸ್ತ್ರದಲ್ಲಿ ಕೆಲವು ಪ್ರಯೋಜನಭೂತವಾದ ಭಾವಗಳ ನಿರೂಪಣೆಯನ್ನು ಅತ್ಯಂತ ಸಂಕ್ಷೇಪದಲ್ಲಿಯೇ ಮಾಡಲಾಗಿರುವುದರಿಂದ ಈ ಶಾಸ್ತ್ರದ ಅಭ್ಯಾಸದ ಪೂರ್ಣತೆಯು ಸಮಯಸಾರ, ನಿಯಮಸಾರ, ಪ್ರವಚನಸಾರ ಮೊದಲಾದ ಅನ್ಯ ಶಾಸ್ತ್ರಗಳ ಅಭ್ಯಾಸದಿಂದ ಮಾಡಿದರೆ ಮುಮುಕ್ಷುಗಳಿಗೆ ಈ ಶಾಸ್ತ್ರದ ಆಶಯವನ್ನು ತಿಳಿದುಕೊಳ್ಳುವಲ್ಲಿ ವಿಸೇಷ ಸುಲಭವಾಗಬಹುದು. ಆಚಾರ್ಯ ಭಗವಂತರು ಸಮ್ಯಗ್ಜ್ಞಾನದ ಪ್ರಸಿದ್ಧಿಯ ಉದ್ದೇಶದಿಂದ ಹಾಗೂ ಮಾರ್ಗದ ಪ್ರಭಾವನೆಯ ಉದ್ದೇಶದಿಂದ ಈ ಪಂಚಾಸ್ತಿಕಾಯಸಂಗ್ರಹ ಶಾಸ್ತ್ರವನ್ನು ಹೇಳಿದ್ದಾರೆ. ನಾವು ಇದರ ಅಧ್ಯಯನ ಮಾಡಿ, ಎಲ್ಲ ದ್ರವ್ಯಗಳ ಸ್ವತಂತ್ರತೆಯನ್ನು ತಿಳಿದುಕೊಂಡು, ಒಂಭತ್ತು ಪದಾರ್ಥಗಳ ಯತಾರ್ಥ ಜ್ಞಾನ ಮಾಡಿಕೊಂಡು, ಚೈತನ್ಯಗುಣಮಯವಾದ ಜೀವದ್ರವ್ಯಸಾಮಾನ್ಯದ ಆಶ್ರಯ ಮಾಡಿ, ಸಮ್ಯಗ್ದರ್ಶನ ಸಮ್ಯಗ್ಜ್ಞಾನಗಳನ್ನು ಪ್ರಕಟಮಾಡಿಕೊಂಡು ಮಾರ್ಗವನ್ನು ಪ್ರಾಪ್ತಮಾಡಿಕೊಂಡು ಭವಭ್ರಮಣದ ದುಃಖಗಳಿಂದ ಮುಕ್ತವಾಗಬೇಕೆಂಬುದೇ ಭಾವನೆಯಿದೆ. ಈ ಅಮೃತಚಂದ್ರಾಚಾರ್ಯದೇವರು ಪಂಚಾಸ್ತಿಕಾಯ ಸಂಗ್ರಹದ ಸಮ್ಯಕ್ ಅವಬೋಧನೆಯ ಫಲವನ್ನು ಈ ಕೆಳಗಿನ ಶಬ್ದಗಳಿಂದ ವರ್ಣನೆ ಮಾಡಿದ್ದಾರೆ.

''ಯಾವ ಪುರುಷನು ನಿಜವಾಗಿ ಸಮಸ್ತ ವಸ್ತುತತ್ತ್ವದ ಕಥನ ಮಾಡುವಂಥ ಈ 'ಪಂಚಾಸ್ತಿಕಾಯಸಂಗ್ರಹ'ವನ್ನು ಅರ್ಥೀರೂಪದಿಂದ ತಿಳಿದುಕೊಂಡು, ಇದರಲ್ಲಿ ಹೇಳಲಾದ ಜೀವಾಸ್ತಿಕಾಯದಲ್ಲಿ ಅಂತರ್ಗತವಾದ ವಿದ್ಯಮಾನ ತನ್ನನ್ನು (ನಿಜಾತ್ಮನನ್ನು) ಸ್ವರೂಪದಿಂದ ಅತ್ಯಂತ ವಿಶುದ್ಧ ಚೈತನ್ಯಸ್ವಭಾವವುಳ್ಳವನೆಂದು ನಿಶ್ಚಿತ ಮಾಡಿ, ಪರಸ್ಪರ ಕಾರ್ಯಕಾರಣಭೂತವಾದಂಥ ಅನಾದಿರಾಗದ್ವೇಷ ಪರಿಣಾಮ ಹಾಗೂ ಕರ್ಮಬಂಧದ ಪರಂಪರೆಯಿಂದ ಸ್ವರೂಪವಿಕಾರವು ಆರೋಪಿತವಿರುವಂಥ ತನ್ನನ್ನು (ನಿಜಾತ್ಮನನ್ನು) ಆ ಸಮಯ ಅನುಭವದಲ್ಲಿ ಬರುವುದರ ಅವಲೋಕನ ಮಾಡಿ, ಆ ಸಮಯದಲ್ಲಿ ವಿವೇಕಜ್ಯೋತಿಯು ಪ್ರಕಟವಾಗುವುದರಿಂದ (ಎಂದರೆ ಅತ್ಯಂತ ವಿಶುದ್ಧ ಚೈತನ್ಯಸ್ವಭಾವದ ಹಾಗೂ ವಿಕಾರದ ಭೇದಜ್ಞಾನವು ಆ ಕಾಲದಲ್ಲಿಯೇ ಪ್ರಕಟಪ್ರವರ್ತಮಾನವಾಗುವುದರಿಂದ) ಕರ್ಮಬಂಧದ ಪರಂಪರೆಯನ್ನು ಪ್ರವರ್ತನ ಮಾಡುವಂಥ ಜಘನ್ಯ ಸ್ನೇಹಗುಣದ ಸಮ್ಮುಖವಾಗಿ ವರ್ತಿಸುತ್ತಿರುವ ಪರಮಾಣುವಿನಂತೆ ಭಾವೀ ಬಂಧದಿಂದ ಪರಾಙ್ಮುಖವಾಗಿ ವರ್ತಿಸುತ್ತ, ಪೂರ್ವ ಬಂಧದಿಂದ ಬಿಡುಗಡೆ ಹೊಂದುತ್ತ, ಅಗ್ನಿತಪ್ತ ಜಲದ ದುಃಸ್ಥಿತಿಯಂತೆ ಆ ದುಃಖದಿಂದ ಪರಿಮುಕ್ತನಾಗುತ್ತಾನೆ.

ಕಾರ್ತಿಕ ವದ್ಯ ೪,
ವಿ.ಸಂ. ೨೦೧೩

ಹಿಮ್ಮತಲಾಲ ಜೇಠಾಲಾಲ ಶಾಹ,
ಸೋನಗಢ.

ಅನುವಾದಕರ ನಿವೇದನೆ

ಭಗವಾನ ಕುಂದಕುಂದಾಚಾರ್ಯದೇವ ಪ್ರಣೀತ 'ರತ್ನಚತುಷ್ಟಯ'ಗಳಲ್ಲಿ ಅತ್ಯಂತ ಮಹತ್ವಪೂರ್ಣವೂ ಪರಮ ಪವಿತ್ರವೂ ಆದ ಶ್ರೀ ಸಮಯಸಾರವು ಆಚಾರ್ಯ ಅಮೃತಚಂದ್ರದೇವ ವಿರಚಿತ 'ಆತ್ಮಖ್ಯಾತಿ'ಯೆಂಬ ಟೀಕೆಯೊಡನೆ ಸಂಪೂರ್ಣವಾಗಿ ಕನ್ನಡದಲ್ಲಿ ಅನುವಾದವಾಗಿ ಬೆಳಕುಕಂಡು ಜನರ ಕೈಸೇರಿಯಾಗಿದೆ. ಈಗ ಅದೇ ಆಚಾರ್ಯ ಭಗವಂತರ 'ಪಂಚಾಸ್ತಿಕಾಯಸಂಗ್ರಹ'ವೆಂಬ ದಿವ್ಯ ಕೃತಿಯು ಆಚಾರ್ಯ ಅಮೃತಚಂದ್ರದೇವ ವಿರಚಿತ 'ಸಮಯವ್ಯಾಖ್ಯೆ'ಯೆಂಬ ಟೀಕೆಯೊಂದಿಗೆ ಸಂಪೂರ್ಣವಾಗಿ ಕನ್ನಡದಲ್ಲಿ ಇಳಿದು ಬರುತ್ತಿರುವುದು ಇದೇ ಮೊದಲು ಬಾರಿಯಾಗಿದೆ. ಭ. ಕುಂದಕುಂದಾಚಾರ್ಯದೇವರು ಈ ಭಾರತ ಭೂಮಿಯಲ್ಲಿ ಜನ್ಮತಾಳಿ ಮಾನವ ಕೋಟಿಗೆ ಅತ್ಯಂತ ಪ್ರಯೋಜನಭೂತವಾದ ಅನೇಕ ದಿವ್ಯ ಕೃತಿಗಳನ್ನು ರಚಿಸಿ ಇಂದಿಗೆ ಸುಮಾರು ಎರಡು ಸಾವಿರ ವರುಷಗಳು ಕಳೆದುಹೋಗಿದ್ದರೂ ಕೂಡ ಅವರ ಆ ದಿವ್ಯ ಕೃತಿಗಳು ಪಾಕೃತ-ಸಂಸ್ಕೃತಕ ಭಾಷೆಗಳಿಂದ ಇಂದಿನ ಜನ ಬಳಕೆಯ ಸುಲಭ ಭಾಷೆಗಳಲ್ಲಿ ಇಳಿದು ಬಂದು ಶ್ರೀ ಸಾಮಾನ್ಯನವರೆಗೆ ತಲುಪಲಿಲ್ಲವೆಂದು ಅತ್ಯಂತ ದುಃಖದಿಂದ ಹೇಳಲೇಬೇಕಾದ ಪ್ರಸಂಗವು ಬಂದೊದಗಿದೆ. ಉತ್ತರ ಭಾರತದಲ್ಲಿ ಶ್ರೀ ಕುಂದಕುಂದ ಸಾಹಿತ್ಯದ ಪ್ರಸಾರ ಕಾರ್ಯವು ಈ ಮೊದಲು ಸ್ವಲ್ಪ ಮಟ್ಟಿಗೆ ಆಗಿದ್ದರೂ ಕೂಡ ಅದು ಅಷ್ಟೊಂದು ತೃಪ್ತಿಕರವಾಗಿರಲಿಲ್ಲ. ಎಂದರೆ ಜನ ಸಾಮಾನ್ಯನವರೆಗೆ ತಲುಪಿರಲಿಲ್ಲ. ಅಂದರೆ ಇಂದಿನ ಇಪ್ಪತ್ತನೆಯ ಶತಮಾನದ ನವೋದಯ ಕಾಲದಲ್ಲಿ ಸೌರಾಷ್ಟ್ರ ಸೌಂದರಿಯ ಪುಣ್ಯೋದಯದಿಂದ ಭಾನುವಿನಂತೆ ಬೆಳಕಿಗೆ ಬಂದ ಪೂ. ಗುರುದೇವ ಶ್ರೀ ಕಾನಜಿಸ್ವಾಮಿಗಳವರು ಭ. ಕುಂದಕುಂದಸಾಹಿತ್ಯದ ಗರ್ಭಸ್ಥ ನಿಧಿಯನ್ನು - ಭಗವಾನಾತ್ಮನ ವಿರಾಟ ವೈಭವವನ್ನು ತಮ್ಮ ತೀಕ್ಷ್ಣವಾದ ಜ್ಞಾನದೃಷ್ಟಿಯಿಂದ ದರ್ಶಿಸಿ, ಅದನ್ನು ಆತ್ಮಸಾತ್ ಮಾಡಿಕೊಂಡ ನಂತರ ಅಧ್ಯಾತ್ಮ ಕ್ಷೇತ್ರದೊಳಗೆ ಒಂದು ಅಭೂತಪೂರ್ವವಾದ ಕ್ರಾಂತಿಯನ್ನೇ ಉಂಟು ಮಾಡಿದರು. ತಮ್ಮ ಪ್ರವಚನಗಳ ಮುಖಾಂತರ ಭ. ಕುಂದಕುಂದದೇವ ವಿರಚಿತ ಪವಿತ್ರ ಗ್ರಂಥಗಳ ಸತ್ಯದರ್ಶನ ಮಾಡಿಸಿದರು. ಆ ಗ್ರಂಥಗಳನ್ನು ವಿವಿಧ ಭಾಷೆಯೊಳಗೆ ಅನುವಾದ ಮಾಡಿಸಿ ಅವನ್ನು ಲಕ್ಷಾಂತರ ಸಂಖ್ಯೆಯಲ್ಲಿ ಮುದ್ರಿಸಿ ಜನಸಾಮಾನ್ಯನವರೆಗೆ ತಲುಪಿಸಿದರು. ಅವರದೇ ಒಂದು ಪವಿತ್ರ ಪ್ರೇರಣೆಯಿಂದ ನಮ್ಮ ಕರ್ನಾಟಕದಲ್ಲಿ ಸ್ಥಾಪನೆಯಾದ ಶ್ರೀ ದಿಗಂಬರ ಜೈನ ಟ್ರಸ್ಟ, ಬೆಂಗಳೂರಿನ ವತಿಯಿಂದ ಈಗಾಗಲೇ ಅನೇಕ ಪವಿತ್ರ ಗ್ರಂಥಗಳು ಪ್ರಕಟವಾಗಿದ್ದು ಈಗ ಕುಂದಕುಂದ ಸಾಹಿತ್ಯದ ಎರಡನೆಯ ಕೃತಿಯಾಗಿ 'ಪಂಚಾಸ್ತಿಕಾಯಸಂಗ್ರಹ'ವು ಪ್ರಕಟವಾಗುತ್ತಿರುವುದು ಇಡೀ ಕನ್ನಡನಾಡಿಗೇನೇ ಅತ್ಯಂತ ಸಂತೋಷದ ಸಂಗತಿಯಾಗಿದೆ.

ವಾಸ್ತವಿಕವಾಗಿ ದ್ವಾದಶಾಂಗರೂಪದಿಂದ ವಿಸ್ತೀರ್ಣವಾದಂಥ ಪ್ರವಚನವು ಕಾಲಸಹಿತವಾಗಿ ಪಂಚಾಸ್ತಿಕಾಯದಿಂದ ಬೇರೆಯಾದುದೇನನ್ನೂ ಪ್ರತಿಪಾದನೆ ಮಾಡುವುದಿಲ್ಲ; ಅದಕ್ಕಾಗಿ ಪ್ರವಚನದ ಸಂಪೂರ್ಣ ಸಾರವೆಂದರೇನೇ ಈ 'ಪಂಚಾಸ್ತಿಕಾಯಸಂಗ್ರಹ'ವಿದೆ. ಇದರಲ್ಲಿ ಬರುವ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶಕ್ಕೆ ದ್ರವ್ಯದ ಸಮಸ್ತ ಲಕ್ಷಣಗಳು ಸದ್ಭಾವವಿರುವುದರಿಂದ ಅದೂ ಕೂಡ ದ್ರವ್ಯ ಸಂಜ್ಞೆಗೆ ಪ್ರಾಪ್ತವಾಗುತ್ತದೆ. ಈ ಪ್ರಕಾರವಾಗಿ ಆರು ದ್ರವ್ಯಗಳಿವೆ. ಆದಾಗ್ಯೂ ಯಾವ ಪ್ರಕಾರ ಜೀವ-ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶಕ್ಕೆ ಎರಡು ಅಥವಾ ಹೆಚ್ಚು ಪ್ರದೇಶಗಳಷ್ಟು ಅಸಂಖ್ಯವಾಗಿದ್ದರೂ ಅವಕ್ಕೆ ಏಕಪ್ರದೇಶಿತನದ ಕಾರಣ ಅಸ್ತಿಕಾಯತ್ವವಿಲ್ಲ. ಹೀಗಿರುವುದರಿಂದಲೇ ಇಲ್ಲಿ ಪಂಚಾಸ್ತಿಕಾಯದ ಪ್ರಕರಣದಲ್ಲಿ ಮುಖ್ಯವಾಗಿ ಕಾಲದ ಕಥನವನ್ನು ಮಾಡಲಾಗಿಲ್ಲ. ಆದರೆ ಜೀವ-ಪುದ್ಗಲಗಳ ಪರಿಣಾಮದ ಮುಖಾಂತರ ತಿಳಿದು ಬರುವಂತೆ ಅದರ ಪರ್ಯಾಯಗಳಿರುವುದರಿಂದ ಅದನ್ನೂ ಇಲ್ಲಿ ಅಂತರ್ಭೂತಗೊಳಿಸಲಾಗಿದೆ. ಹೀಗೆ ಐದು ಮುಖ್ಯ ಮತ್ತು ಒಂದು ಗೌಣರೂಪವಾಗಿ ಸಮಸ್ತ ವಸ್ತು ತತ್ತ್ವದ ಕಥನ ಮಾಡುವಂಥ ಈ 'ಪಂಚಾಸ್ತಿಕಾಯಸಂಗ್ರಹ'ವನ್ನು ಯಾವನು ಯಥಾರ್ಥರೂಪದಿಂದ ತಿಳಿದುಕೊಂಡು ಇದರಲ್ಲಿ ಹೇಳಿದ ಜೀವಾಸ್ತಿಕಾಯದಲ್ಲಿ ಅಂತರ್ಗತವಾಗಿರುವ ತನ್ನನ್ನು ಸ್ವರೂಪದಿಂದ ಅತ್ಯಂತ ವಿಶುದ್ಧ

ಚೈತನ್ಯಸ್ವಭಾವವುಳ್ಳವನೆಂದು ನಿಶ್ಚಿತ ಮಾಡಿ, ಪರಸ್ಪರ ಕಾರ್ಯಕಾರಣಭೂತವಾದಂಥ ಅನಾದಿ ರಾಗದ್ವೇಷ ಪರಿಣಾಮಗಳು ಮತ್ತು ಕರ್ಮಬಂಧದ ಪರಂಪರೆಯಿಂದ ಸ್ವರೂಪ ವಿಕಾರವು ಆರೋಪಿತವಾಗುವಂಥ ತನ್ನನ್ನು ಆ ರಾಗ-ದ್ವೇಷಗಳ ಪರಿಣತಿಯಿಂದ ಭಿನ್ನವಾಗಿ ಅನುಭವ ಮಾಡಿದರೆ ಭಾವೀ ಬಂಧದಿಂದ ಪರಾಙ್ಮುಖನಾಗಿ ದುಃಖದಿಂದ ಪರಿಮುಕ್ತನಾಗುತ್ತಾನೆ.

ಈ ಪರಮ ಪವಿತ್ರವಾದ ಶಾಸ್ತ್ರದಲ್ಲಿ ವಸ್ತು ತತ್ತ್ವದ ಸಂಕ್ಷಿಪ್ತ ಸಾರವು ಒಳಗೊಂಡಿದ್ದು ಇದರಲ್ಲಿ ತಿಳಿಸಿಕೊಟ್ಟ ರೀತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕಾರದಿಂದ ಜೀವನು ತನ್ನ ಅನಾದಿ ಕಾಲೀನವಾದ ದುಃಖದಿಂದ ಬಿಡುಗಡೆ ಹೊಂದುವ ಸಾಧ್ಯತೆಯೇ ಇಲ್ಲ. ಜೀವನು ಎಲ್ಲಿಯವರೆಗೆ ವಸ್ತುತತ್ತ್ವವನ್ನೇ ತಿಳಿದುಕೊಳ್ಳುವುದಿಲ್ಲ ಮತ್ತು ತಿಳಿದುಕೊಂಡು ತನ್ನ ಜೀವತತ್ತ್ವದಲ್ಲಿ ಸ್ಥಿರಗೊಳ್ಳುವುದಿಲ್ಲ ಅಲ್ಲಿಯವರೆಗೆ ಅವನು ಕೋಟಿ ಉಪಾಯಗಳನ್ನು ಮಾಡಿದರೂ ಕೂಡ ವಾಸ್ತವಿಕವಾಗಿ ಸುಖವು ಅವನಿಗೆ ಲಬಿಸುವ ಸಾಧ್ಯತೆಯೇ ಇಲ್ಲ. ಅದಕ್ಕಾಗಿಯೇ ಆಚಾರ್ಯ ಭಗವಂತರು ಇಂಥ ಮೂಲಭೂತವೂ ಪ್ರತಿಯೊಂದು ಜೀವಿಗೆ ಅತ್ಯಂತ ಪ್ರಯೋಜನಕರವೂ ಆದ ಈ 'ಪಂಚಾಸ್ತಿಕಾಯಸಂಗ್ರಹ' ಗ್ರಂಥವನ್ನು ರಚಿಸಿ ಅನಂತ ಉಪಕಾರ ಮಾಡಿದ್ದಾರೆ. ಇಂಥ ಮಹತ್ವಪೂರ್ಣವಾದ ಶಾಸ್ತ್ರವನ್ನು ಕನ್ನಡಿಸುವ ಪುಣ್ಯಯೋಗವು ನನಗೆ ಲಭಿಸಿದ್ದು ನನ್ನ ಸೌಭಾಗ್ಯವೆಂದೇ ಭಾವಿಸಿದ್ದೇನೆ. ಏಕೆಂದರೆ ಆ ನಿಮಿತ್ತದಿಂದ ನನಗೆ ಈ ಗ್ರಂಥದ ಯಥಾರ್ಥ ಅಧ್ಯಯನವಾಗಿ ನನ್ನ ಸ್ವರೂಪವನ್ನು ತಿಳಿದುಕೊಳ್ಳಲು ಉಪಯೋಗವಾಗಿದೆ. ನಾನು ಇದರ ಅನುವಾದವನ್ನು ತುಂಭ ಭಕ್ತಿ-ಶ್ರದ್ಧೆಯೊಡನೆ ಮಾಡಿದ್ದೇನೆ. ಮೂಲಭಾವಕ್ಕೆ ಎಲ್ಲಿಯೂ ಲೋಪ ಬಾರದಂತೆ ಪ್ರತಿಯೊಂದು ಶಬ್ದದ ಮೇಲೆ ದೃಷ್ಟಿಯಿಟ್ಟು ಭಾವವು ತಪ್ಪಿಹೋಗದಂತೆ ನೋಡಿಕೊಂಡಿದ್ದೇನೆ. ಇನ್ನು ಆಚಾರ್ಯ ಭಗವಂತರ ಮೂಲ ಪ್ರಾಕೃತ ಗಾಥೆಗಳನ್ನು ಕನ್ನಡದೊಳಗೆ ಇಳಿಸಿಕೊಳ್ಳುವಾಗಂತೂ ತುಂಬ ಎಚ್ಚರಿಕೆಯಿಂದ ಮೈಯೆಲ್ಲ ಕಣ್ಣಾಗಿ ಮಾಡಿಕೊಂಡು ಕಾರ್ಯನಿರ್ವಹಿಸಿದ್ದೇನೆ ಆದರೂ ನನ್ನ ಬುದ್ಧಿಯ ಅಲ್ಪತೆಯಿಂದಾಗಿ ಎಲ್ಲಿಯಾದರೂ ದೋಷಗಳು ಉಳಿದುಕೊಂಡಿದ್ದರೆ ಅದರ ಕುರಿತು ಮೂಲಗ್ರಂಥಕರ್ತರಾದ ಆಚಾರ್ಯ ಭಗವಂತರಲ್ಲಿ ವಿನಯಪೂರ್ವಕ ಕ್ಷಮೆ ಕೋರುತ್ತೇನೆ. ಅದೇ ಪ್ರಕಾರ ಅಧ್ಯಾತ್ಮ ರಸಿಕರು ಈ ನನ್ನ ಕಾರ್ಯದಲ್ಲಿನ ತೋಪದೋಷಗಳನ್ನು ತಿಳಿಸಿಕೊಟ್ಟಲ್ಲಿ ಅವನ್ನು ಆದರದಿಂದ ಸ್ವೀಕರಿಸಿ ಮುಂದಿನ ಆವೃತ್ತಿಯಲ್ಲಿ ತಿದ್ದುಪಡಿ ತಂದುಕೊಳ್ಳುತ್ತೇನೆಂದು ಭರವಸೆ ನೀಡುತ್ತೇನೆ.

ಇನ್ನು ಈ ಅನುವಾದವನ್ನು ಆದಿಯಿಂದ ಅಂತ್ಯದವರೆಗೆ ಅತ್ಯಂತ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಒಳ್ಳೆಯ ಸಲಹೆ ಸೂಚನೆಗಳನ್ನು ನೀಡಿ, ಗ್ರಂಥವು ನಿರ್ದೋಷವಾಗುವಲ್ಲಿ ಸಹಕರಿಸಿದ ಬ್ರ. ಶ್ರೀ ಯಶಪಾಲ ಜೈನ, ಎಂ.ಎ., ಅವರಿಗೆ ನಾನು ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದೇ ಪ್ರಕಾರ ಈ ಗ್ರಂಥದ ಅನುವಾದ ಮಾಡುವ ಸುಯೋಗವನ್ನು ಒದಗಿಸಿಕೊಟ್ಟ ಬೆಂಗಳೂರಿನ ದಿಗಂಬರ ಜೈನ ಸಂಸ್ಥೆಯ ಅಧಿಕಾರಿಗಳಿಗೂ ಮತ್ತು ಈ ಗ್ರಂಥದ ಸಂಪೂರ್ಣ ಖರ್ಚಿನ ಹೊಣೆಹೊತ್ತ ಧರ್ಮಾನುರಾಗಿ ಶ್ರೀ ಪ್ರಶಾಂತಕುಮಾರ ಸೂಜಿ, ಹುಬ್ಬಳ್ಳಿ ಅವರಿಗೂ ಹಾಗೂಈ ಕಾರ್ಯದಲ್ಲಿ ಎಲ್ಲ ರೀತಿಯಿಂದ ನೆರವು ನೀಡಿ ಸಹಕರಿಸಿದ ಆತ್ಮೀಯ ಧರ್ಮಬಂಧುಗಳೆಲ್ಲರಿಗೂ ನಾನು ತುಂಬು ಹೃದಯದಿಂದ ಕೃತಜ್ಞತೆಗಳನ್ನು ಸೂಚಿಸುತ್ತೇನೆ. ಕೊನೆಯದಾಗಿ ನಮ್ಮ ಕನ್ನಡ ನಾಡಿನ ಸಾಧರ್ಮಿ ಸೋದರರೆಲ್ಲರು ಈ ಕೃತಿಯನ್ನು ಆದರಿಂದ ಬರಮಾಡಿಕೊಂಡು ಇದರ ಸದುಪಯೋಗಪಡಿಸಿಕೊಂಡು ತಮ್ಮ ಜೀವನದ ಮೇಲ್ಮೈಯನ್ನು ಸಾಧಿಸಿಕೊಳ್ಳುತ್ತೀರೆಂಬ ಪರಮಪಾವನ ಭಾವನೆಯಿಂದ ಈ ದಿವ್ಯಕೃತಿಯನ್ನು ತಮ್ಮಗಳ ಕರಕಮಲಗಳಲ್ಲಿ ಅರ್ಪಿಸುತ್ತಿದ್ದೇನೆ.

ಬೆಳಗಾವಿ. ಶ್ರೀ ಎಂ. ಬಿ. ಪಾಟೀಲ

ದಿ. ೧೩-೨-೨೦೦೦ ಸೇಡಬಾಳ.

ವಿಷಯಾನುಕ್ರಮಣಿಕೆ

ಅ.ನಂ.	ವಿಷಯ	ಪುಟ ಸಂಖ್ಯೆ
೧.	ಷಡ್‌ದ್ರವ್ಯಪಂಚಾಸ್ತಿಕಾಯದ ಸಾಮಾನ್ಯ ವ್ಯಾಖ್ಯಾನರೂಪವಾದ ಪೀಠಿಕೆ	೧-೨೬
೨	ಜೀವದ್ರವ್ಯಾಸ್ತಿಕಾಯದ ವ್ಯಾಖ್ಯಾನ	೨೭-೭೩
೩	ಪುದ್ಗಲದ್ರವ್ಯಾಸ್ತಿಕಾಯದ ವ್ಯಾಖ್ಯಾನ	೭೪-೮೨
೪	ಧರ್ಮದ್ರವ್ಯಾಸ್ತಿಕಾಯ ಮತ್ತು ಅಧರ್ಮದ್ರವ್ಯಾಸ್ತಿಕಾಯದ ವ್ಯಾಖ್ಯಾನ	೮೩-೮೯
೫	ಆಕಾಶದ್ರವ್ಯಾಸ್ತಿಕಾಯದ ವ್ಯಾಖ್ಯಾನ	೯೦-೯೬
೬	ಚೂಲಿಕೆ	೯೭-೯೯
೭	ಕಾಲದ್ರವ್ಯದ ವ್ಯಾಖ್ಯಾನ	೧೦೦-೧೦೨
೮	ಉಪಸಂಹಾರ	೧೦೩-೧೦೪
೯	ನವಪದಾರ್ಥಪೂರ್ವಕ ಮೋಕ್ಷಮಾರ್ಗ ಪ್ರಪಂಚ ವರ್ಣನೆ	೧೦೫-೧೦೮
೧೦	ಜೀವಪದಾರ್ಥದ ವ್ಯಾಖ್ಯಾನ	೧೦೯-೧೨೩
೧೧	ಅಜೀವಪದಾರ್ಥದ ವ್ಯಾಖ್ಯಾನ	೧೨೪-೧೩೦
೧೨	ಪುಣ್ಯ-ಪಾಪ ಪದಾರ್ಥದ ವ್ಯಾಖ್ಯಾನ	೧೩೦-೧೩೪
೧೩	ಆಸ್ರವಪದಾರ್ಥದ ವ್ಯಾಖ್ಯಾನ	೧೩೫-೧೪೦
೧೪	ಸಂವರಪದಾರ್ಥದ ವ್ಯಾಖ್ಯಾನ	೧೪೧-೧೪೩
೧೫	ನಿರ್ಜರಾ ಪದಾರ್ಥದ ವ್ಯಾಖ್ಯಾನ	೧೪೪-೧೪೬
೧೬	ಬಂಧಪದಾರ್ಥದ ವ್ಯಾಖ್ಯಾನ	೧೪೭-೧೪೯
೧೭	ಮೋಕ್ಷಪದಾರ್ಥದ ವ್ಯಾಖ್ಯಾನ	೧೫೦-೧೫೩
೧೮	ಮೋಕ್ಷಮಾರ್ಗ ಪ್ರಪಂಚಸೂಚಕ ಚೂಲಿಕೆ	೧೫೪-೧೭೩
೧೯	ಗಾಥೆಗಳ ವರ್ಣಾನುಕ್ರಮ ಸೂಚಿಗಳ ಪುಟ ಸಂಖ್ಯೆ	೨೪೯-೨೫೨



ಭಗವಾನ ಕುಂದಕುಂದಾಚಾರ್ಯದೇವರ ಸಂಬಂಧದಲ್ಲಿ ಉಲ್ಲೇಖ

ವಂದ್ಯೋ ವಿಭುರ್ಭುವಿ ನ ಕೈರಿಹ ಕೊಂಡಕುಂದಃ
ಕುಂದ-ಪ್ರಭಾ-ಪ್ರಣಯಿ-ಕೀರ್ತಿ-ವಿಭೂಷಿತಾಶಃ।
ಯಶ್ಚಾರು-ಚಾರಣ-ಕರಾಂಬುಜಚಂಚರೀಕ-
ಶ್ಚಕ್ರೇ ಶ್ರುತಸ್ಯ ಭರತೇ ಪ್ರಯತಃ ಪ್ರತಿಷ್ಠಾಮ್ ॥

- ಚಂದ್ರಗಿರಿ ಪರ್ವತದ ಶಿಲಾಲೇಖ

ಅರ್ಥ :- ಕುಂದಪುಷ್ಪದ ಪ್ರಭೆಯನ್ನು ಧಾರಣೆ ಮಾಡುವಂಥ ಯಾರ ಕೀರ್ತಿಯ ಮುಖಾಂತರ ದಶ ದಿಕ್ಕುಗಳು ವಿಭೂಷಿತವಾಗಿವೆ, ಯಾರು ಚಾರಣರ-ಚಾರಣಋದ್ಧಿಸಂಪನ್ನರಾದ ಮಹಾಮುನಿಗಳ ಸುಂದರ ಹಸ್ತ-ಕಮಲಗಳ ಭ್ರಮರವಿದ್ದರು ಮತ್ತು ಯಾವ ಪವಿತ್ರಾತ್ಮರು ಭರತಕ್ಷೇತ್ರದಲ್ಲಿ ಶ್ರುತದ ಪ್ರತಿಷ್ಠೆ ಮಾಡಿದ್ದಾರೆ. ಆ ಕುಂದಕುಂದವಿಭುಗಳು ಈ ಭೂಮಂಡಲದಲ್ಲಿ ಯಾರಿಂದ ವಂದ್ಯರಾಗಿಲ್ಲ ?

..... ಕೊಂಡಕುಂದೋ ಯತೀಂದ್ರಃ ॥
ರಜೋಭಿರಸ್ಪೃಷ್ಟತಮತ್ವಮಂತ-
ರ್ಬಾಹ್ಯೋಪಿ ಸಂವ್ಯಂಜಯಿತುಂ ಯತೀಶಃ।
ರಜಃಪದಂ ಭೂಮಿತಲಂ ವಿಹಾಯ
ಚಚಾರ ಮನ್ಯೇ ಚತುರಂಗುಲಂ ಸಃ ॥

-ವಿಂದ್ಯಗಿರಿ-ಶಿಲಾಲೇಖ

ಅರ್ಥ :- ಯತೀಶ್ವರರು (ಶ್ರೀ ಕುಂದಕುಂದಸ್ವಾಮಿಗಳು) ರಜಃಸ್ಥಾನವನ್ನು - ಭೂಮಿತಲವನ್ನು - ಬಿಟ್ಟುಕೊಟ್ಟು, ನಾಲ್ಕು ಅಂಗುಲಮೇಲೆ ಆಕಾಶದಲ್ಲಿ ಗಮನಮಾಡುತ್ತಿದ್ದರು. ಅದರಿಂದ ಅವರು ಆಂತರ್ಯದಲ್ಲಿ ಹಾಗೂ ಬಾಹ್ಯದಲ್ಲಿ ರಜದಿಂದ (ತಮ್ಮ) ಅತ್ಯಂತ ಅಸ್ಪೃಷ್ಟತೆಯನ್ನು ವ್ಯಕ್ತಪಡಿಸುತ್ತಿದ್ದರೆಂದು ನಾನು ತಿಳಿದುಕೊಳ್ಳುತ್ತೇನೆ. (ಅವರು ಆಂತರ್ಯದಲ್ಲಿ ರಾಗ ಮೊದಲಾದ ಮಲದಿಂದ ಅಸ್ಪಷ್ಟರಿದ್ದರು ಮತ್ತು ಬಾಹ್ಯದಲ್ಲಿ ಧೂಳಿನಿಂದ ಅಸ್ಪೃಷ್ಟರಿದ್ದರು.)

ಜಇ ಪಉಪಣಂದಿಣಾಹೋ ಸೀಮಂಧರಸಾಮಿದಿವ್ವಣಾಣೇಣ ।
ಣ ವಿದೋಹಇ ತೋ ಸಮಣಾ ಕಹಂ ಸಮಗ್ಗಂ ಪಯಾಣಂತಿ ॥

-ದರ್ಶನಸಾರ

ಅರ್ಥ :- (ಮಹಾವಿದೇಹಕ್ಷೇತ್ರದ ವರ್ತಮಾನ ತೀರ್ಥಂಕರದೇವರಾದ) ಶ್ರೀ ಸೀಮಂಧರ ಪ್ರಭುಗಳಿಂದ ಪ್ರಾಪ್ತವಾದ ದಿವ್ಯಜ್ಞಾನದ ಮುಖಾಂತರ ಶ್ರೀ ಪದ್ಮನಂದಿನಾಥರು (ಶ್ರೀ ಕುಂದಕುಂದಾಚಾರ್ಯದೇವರು) ಬೋಧನೆ ಮಾಡದೆ ಹೋಗಿದ್ದರೆ ಮುನಿಜನರು ನಿಜವಾದ ಮಾರ್ಗವನ್ನು ಹೇಗೆ ತಿಳಿಯುತ್ತಿದ್ದರು ?

ಓ ಕುಂದಕುಂದದೇವ ಮೊದಲಾದ ಆಚಾರ್ಯರುಗಳೇ ! ಸ್ವರೂಪಾನು ಸಂಧಾನದಲ್ಲಿ ತಮ್ಮ ವಚನಗಳೇ ಈ ಪಾಮರನಿಗೆ ಪರಮೋಪಕಾರಭೂತವಾಗಿವೆ ಅದಕ್ಕಾಗಿ ನಾನು ತಮ್ಮಗಳಿಗೆ ಅತ್ಯಂತ ಭಕ್ತಿಭಾವದಿಂದ ನಮಸ್ಕಾರ ಮಾಡುತ್ತೇನೆ.

-ಶ್ರೀಮದ್ ರಾಜಚಂದ್ರ

ಶ್ರೀ ಭಗವಾನ ಕುಂದಕುಂದಾಚಾರ್ಯದೇವರು ಮಹಾವಿದೇಹಕ್ಷೇತ್ರದಲ್ಲಿ ವಿರಾಜಮಾನರಾದ ಶ್ರೀ ಸೀಮಂಧರ ಭಗವಂತರ ಸಮವಸರಣಕ್ಕೆ ಹೋಗಿದ್ದರು ಮತ್ತು ಅಲ್ಲಿ ಅವರು ಎಂಟು ದಿವಸಗಳವರೆಗೆ ಇದ್ದರೆಂಬ ಮಾತು ಯಥಾತಥ್ಯವಿದೆ, ಅಕ್ಷರಶಃ ಸತ್ಯವಿದೆ, ಪ್ರಮಾಣಸಿದ್ಧವಿದೆ, ಅದರಲ್ಲಿ ತಿಲಮಾತ್ರವೂ ಸಂದೇಹಕ್ಕೆ ಆಸ್ಪದವಿಲ್ಲ. ಪರಮೋಪಕಾರಿಗಳಾದ ಆ ಆಚಾರ್ಯಭಗವಂತರು ರಚಿಸಿದ ಈ ಸಮಯಸಾರದಲ್ಲಿ ತೀರ್ಥಂಕರದೇವರ ನಿರಕ್ಷರವಾದ ಓಂಕಾರ ಧ್ವನಿಯೊಳಗಿಂದ ಹೊರ ಹೊರಟಂಥ ಉಪದೇಶವೇ ಇದೆ.

-ಪೂಜ್ಯ ಶ್ರೀ ಕಾನಜಿಸ್ವಾಮಿ

॥ ಶ್ರೀ ಸರ್ವಜ್ಞವೀತರಾಗಾಯ ನಮಃ ॥

ಶಾಸ್ತ್ರ-ಸ್ವಾಧ್ಯಾಯದ ಪ್ರಾರಂಭದ ಮಂಗಲಾಚರಣೆ

ಓಂಕಾರಂ ಬಿಂದುಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ ।
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋನಮಃ ॥೧॥

ಅವಿರಲಶಬ್ದಘನೌಘಪ್ರಕ್ಷಾಲಿತಸಕಲಭೂತಲಕಲಂಕಾ ।
ಮುನಿಭಿರುಪಾಸಿತತೀರ್ಥಾ ಸರಸ್ವತೀ ಹರತು ನೋ ದುರಿತಾನ್ ॥೨॥

ಅಜ್ಞಾನತಿಮಿರಾಂಧಾನಾಂ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ ॥೩॥

॥ಶ್ರೀ ಪರಮಗುರುವೇನಮಃ । ಪರಂಪರಾಚಾರ್ಯಗುರುವೇನಮಃ ॥

ಸಕಲಕಲುಷವಿಧ್ವಂಸಕಂ, ಶ್ರೇಯಸಾಂ ಪರಿವರ್ಧಕಂ, ಧರ್ಮಸಂಬಂಧಕಂ, ಭವ್ಯಜೀವಮನಃ ಪ್ರತಿಬೋಧಕಾರಕಂ, ಪುಣ್ಯಪ್ರಕಾಶಕಂ, ಪಾಪಪ್ರಣಾಶಕಮಿದಂ ಶಾಸ್ತ್ರಂ ಶ್ರೀ ಪಂಚಾಸ್ತಿಕಾಯಸಂಗ್ರಹ ನಾಮಧೇಯಂ, ಅಸ್ಯ ಮೂಲಗ್ರಂಥಕರ್ತಾರಃ ಶ್ರೀ ಸರ್ವಜ್ಞದೇವಾಸ್ತದುತ್ತರ ಗ್ರಂಥಕರ್ತಾರಃ ಶ್ರೀ ಗಣಧರದೇವಾಃ ಪ್ರತಿಗಣಧರದೇವಾಸ್ತೇಷಾಂ ವಚನಾನುಸಾರಮಾಸಾದ್ಯ ಆಚಾರ್ಯ ಶ್ರೀ ಕುಂದಕುಂದಾಚಾರ್ಯದೇವ-ವಿರಚಿತಂ, ಶ್ರೋತಾರಃ ಸಾವಧಾನತಯಾ ಶ್ರುಣ್ವಂತು ॥

ಮಂಗಲಂ ಭಗವಾನ ವೀರೋ ಮಂಗಲಂ ಗೌತಮೋ ಗಣೀ ।
ಮಂಗಲಂ ಕುಂದಕುಂದಾರ್ಯೋ ಜೈನಧರ್ಮೋಽಸ್ತು ಮಂಗಲಂ ॥೧॥

ಸರ್ವಮಂಗಲಮಾಂಗಲ್ಯಂ ಸರ್ವಕಲ್ಯಾಣಕಾರಕಂ ।
ಪ್ರಧಾನಂ ಸರ್ವಧರ್ಮಾಣಾಂ ಜೈನಂ ಜಯತು ಶಾಸನಮ್ ॥೨॥

ಓಂ

॥ ಶ್ರೀ ಸರ್ವಜ್ಞ ವೀತರಾಗಾಯ ನಮಃ ॥

ಶ್ರೀಮದ್‌ಭಗವತ್ಕುಂದಕುಂದಾಚಾರ್ಯದೇವಪ್ರಣೀತ

ಪಂಚಾಸ್ತಿಕಾಯ ಸಂಗ್ರಹ

೧

ಷಡ್‌ದ್ರವ್ಯ - ಪಂಚಾಸ್ತಿಕಾಯ ವರ್ಣನೆ

ಸಹಜಾನಂದಚೈತನ್ಯಪ್ರಕಾಶಾಯ ಮಹೀಯಸೇ ।
ನಮೋऽನೇಕಾಂತವಿಶ್ರಾಂತಮಹಿಮ್ನೇ ಪರಮಾತ್ಮನೇ ॥೧॥

ಮೂಲ ಗಾಥೆಗಳ ಹಾಗೂ ಸಮಯವ್ಯಾಖ್ಯೆಯೆಂಬ ಹೆಸರಿನ ಟೀಕೆಯ

ಕನ್ನಡ ಅನುವಾದ

[ಮೊದಲು ಗ್ರಂಥದ ಆರಂಭದಲ್ಲಿ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವಪ್ರಣೀತ ಪ್ರಾಕೃತ ಗಾಥಾಬದ್ಧವಾದ ಈ ''ಪಂಚಾಸ್ತಿಕಾಯಸಂಗ್ರಹ''ವೆಂಬ ಹೆಸರಿನ ಶಾಸ್ತ್ರದ ''ಸಮಯವ್ಯಾಖ್ಯೆ''ಯೆಂಬ ಹೆಸರಿನ ಸಂಸ್ಕೃತ ಟೀಕೆಯನ್ನು ರಚಿಸುವಂಥ ಆಚಾರ್ಯ ಶ್ರೀ ಅಮೃತಚಂದ್ರದೇವರು ಶ್ಲೋಕದ ಮುಖಾಂತರ ಮಂಗಲದ ಉದ್ದೇಶದಿಂದ ಪರಮಾತ್ಮನಿಗೆ ನಮಸ್ಕಾರ ಮಾಡುತ್ತಾರೆ.]

ಶ್ಲೋಕಾರ್ಥ :- ಸ್ವಾಭಾವಿಕವಾದ ಆನಂದ ಹಾಗೂ ಸ್ವಾಭಾವಿಕವಾದ ಚೈತನ್ಯಪ್ರಕಾಶಮಯನಾಗಿರುವುದರಿಂದ ಯಾವನು ಅತ್ಯಂತ ಶ್ರೇಷ್ಠನಿದ್ದಾನೆ ಮತ್ತು ಯಾವನ ಮಹಿಮೆಯು ಅನೇಕಾಂತದಲ್ಲಿ ಸ್ಥಿರವಾಗಿದೆ ಅಂಥ ಆ ಪರಮಾತ್ಮನಿಗೆ ನನ್ನ ನಮಸ್ಕಾರವಿರಲಿ. (೧)

ದುರ್ನಿವಾರನಯಾನೀಕವಿರೋಧಧ್ವಂಸನೌಷಧಿಃ ।
ಸ್ಯಾತ್ಕಾರಜೀವಿತಾ ಜೀಯಾಜ್ಜೈನೀ ಸಿದ್ಧಾಂತಪದ್ಧತಿಃ ॥೨॥

ಸಮ್ಯಗ್ಜ್ಞಾನಾಮಲಜ್ಯೋತಿರ್ಜನನೀ ದ್ವಿನಯಾಶ್ರಯಾ ।
ಅಥಾತಃ ಸಮಯವ್ಯಾಖ್ಯಾ ಸಂಕ್ಷೇಪೇಣಾಭಿಧೀಯತೇ ॥೩॥

[ಈಗ ಟೀಕಾಕಾರರಾದ ಆಚಾರ್ಯದೇವರು ಶ್ಲೋಕದ ಮುಖಾಂತರ ಜಿನವಾಣಿಯ ಸ್ತುತಿ ಮಾಡುತ್ತಾರೆ, -]

ಶ್ಲೋಕಾರ್ಥ :- ಯಾವುದರ ಜೀವನವು ಸ್ಯಾತ್ಕಾರವಿದೆ[೧] ಅಂಥ ಜೈನ (ಜಿನಭಗವಂತರ ಸಿದ್ಧಾಂತ ಪದ್ಧತಿಯು - ಅದು ದುರ್ನಿವಾರವಾದ[೨] ನಯಸಮೂಹದ ವಿರೋಧದ ನಾಶಮಾಡುವಂಥ ಔಷಧಿಯಿದೆ ಅದು ಜಯವಂತವಾಗಿರಲಿ ! (೨)

[ಈಗ ಟೀಕಾಕಾರರಾದ ಆಚಾರ್ಯದೇವರು ಶ್ಲೋಕದ ಮುಖಾಂತರ ಈ ಪಂಚಾಸ್ತಿಕಾಯ ಸಂಗ್ರಹವೆಂಬ ಹೆಸರಿನ ಶಾಸ್ತ್ರದ ಟೀಕೆ ರಚಿಸುವ ಪ್ರತಿಜ್ಞೆಯನ್ನು ಮಾಡುತ್ತಾರೆ,-]

ಶ್ಲೋಕಾರ್ಥ :- ಈಗ ಇಲ್ಲಿಂದ, ಯಾವ ಸಮ್ಯಗ್ಜ್ಞಾನರೂಪ ನಿರ್ಮಲ ಜ್ಯೋತಿಯ ಜನನಿಯಿದೆ ಅಂಥ ದ್ವಿನಯಾಶ್ರಿತವಾದ[೩](ಎರಡು ನಯಗಳ ಆಶ್ರಯ ಮಾಡುವಂಥ) ಸಮಯವ್ಯಾಖ್ಯೆಯನ್ನು[೪], (ಪಂಚಾಸ್ತಿಕಾಯ ಸಂಗ್ರಹವೆಂಬ ಹೆಸರಿನ ಶಾಸ್ತ್ರದ ಸಮಯವ್ಯಾಖ್ಯೆಯೆಂಬ ಹೆಸರಿನ ಟೀಕೆಯನ್ನು) ಸಂಕ್ಷೇಪದಿಂದ ಹೇಳಲಾಗುತ್ತದೆ.(೩)

---

೧. 'ಸ್ಯಾತ್' ಪದವು ಜಿನದೇವರಸಿದ್ಧಾಂತಪದ್ಧತಿಯ ಜೀವನವಿದೆ. (ಸ್ಯಾತ್ - ಕಥಂಚಿತ್ ಯಾವುದೇ ಒಂದು ಅಪೇಕ್ಷೆಯಿಂದ ; ಯಾವುದೇ ಒಂದು ಪ್ರಕಾರದಿಂದ.)

೨. ದುರ್ನಿವಾರ = ನಿವಾರಣೆ ಮಾಡುವುದು ಕಠಿಣ ; ದೂರ ಮಾಡುವುದು ಕಠಿಣ.

೩. ಪ್ರತಿಯೊಂದು ವಸ್ತುವು ನಿತ್ಯತ್ವ, ಅನಿತ್ಯತ್ವ ಮೊದಲಾಗಿ ಅನೇಕ ಅಂತಮಯ (ಧರ್ಮಮಯ)ವಾಗಿದೆ. ವಸ್ತುವನ್ನು ಸರ್ವಥಾ ನಿತ್ಯತೆ ಹಾಗೂ ಸರ್ವಥಾ ಅನಿತ್ಯತೆಯನ್ನು ಮನ್ನಿಸುವಲ್ಲಿ ಪರಿಪೂರ್ಣ ವಿರೋಧವು ಬರುತ್ತಿದ್ದರೂ ಕೂಡ, ಕಥಂಚಿತ್ (ಎಂದರೆ ದ್ರವ್ಯ-ಅಪೇಕ್ಷೆಯಿಂದ) ನಿತ್ಯತೆ ಮತ್ತು ಕಥಂಚಿತ್ (ಎಂದರೆ ಪರ್ಯಾಯ-ಅಪೇಕ್ಷೆಯಿಂದ) ಅನಿತ್ಯತೆಯನ್ನು ಮನ್ನಿಸುವಲ್ಲಿ ಸ್ವಲ್ಪವೂ ಕೂಡ ವಿರೋಧ ಬರುವುದಿಲ್ಲವೆಂದು ಜಿನವಾಣಿಯು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಈ ಪ್ರಕಾರವಾಗಿ ಜಿನೇಂದ್ರ ಭಗವಂತರ ವಾಣಿಯು ಸ್ಯಾದ್ವಾದದ ಮುಖಾಂತರ (ಅಪೇಕ್ಷೆಯ ಕಥನದಿಂದ) ವಸ್ತುವಿನ ಪರಮ ಯಥಾರ್ಥ ನಿರೂಪಣೆ ಮಾಡಿ, ನಿತ್ಯತ್ವ-ಅನಿತ್ಯತ್ವ ಮೊದಲಾದ ಧರ್ಮಗಳಲ್ಲಿ (ಮತ್ತು ಆಯಾ ಧರ್ಮಗಳನ್ನು ತಿಳಿಸಿಕೊಡುವಂಥ ನಯಗಳಲ್ಲಿ) ಅವಿರೋಧ (ಸುಮೇಲ)ವನ್ನು ಅಬಾಧಿತರೂಪದಿಂದ ಸಿದ್ಧ ಮಾಡುತ್ತದೆ ಮತ್ತು ಆ ಧರ್ಮಗಳಿಲ್ಲದೆ ವಸ್ತುವಿನ ನಿಷ್ಪತ್ತಿಯೇ ಆಗುವ ಸಾಧ್ಯತೆಯಿಲ್ಲವೆಂದು ನಿರ್ಬಾಧರೂಪದಿಂದ ಸ್ಥಾಪನೆ ಮಾಡುತ್ತದೆ.

೪. ಸಮಯವ್ಯಾಖ್ಯೆ = ಸಮಯದ ವ್ಯಾಖ್ಯೆ ; ಪಂಚಾಸ್ತಿಕಾಯದ ವ್ಯಾಖ್ಯೆ ; ದ್ರವ್ಯದ ವ್ಯಾಖ್ಯೆ ; ಪದಾರ್ಥದ ವ್ಯಾಖ್ಯೆ .

[ವ್ಯಾಖ್ಯೆ = ವ್ಯಾಖ್ಯಾನ ; ಸ್ಪಷ್ಟಕಥನ ; ವಿವರಣೆ ; ಸ್ಪಷ್ಟೀಕರಣ.]

ಪಂಚಾಸ್ತಿಕಾಯಷಡ್‌ದ್ರವ್ಯಪ್ರಕಾರೇಣ ಪ್ರರೂಪಣಮ್ ।
ಪೂರ್ವಂ ಮೂಲಪದಾರ್ಥಾನಾಮಿಹ ಸೂತ್ರಕೃತಾ ಕೃತಮ್ ॥೪॥

ಜೀವಾಜೀವದ್ವಿಪರ್ಯಾಯರೂಪಾಣಾಂ ಚಿತ್ರವರ್ತ್ಮನಾಮ್ ।
ತತೋ ನವಪದಾರ್ಥಾನಾಂ ವ್ಯವಸ್ಥಾ ಪ್ರತಿಪಾದಿತಾ ॥೫॥

ತತಸ್ತತ್ತ್ವಪರಿಜ್ಞಾನಪೂರ್ವೇಣ ತ್ರಿತಯಾತ್ಮನಾ ।
ಪ್ರೋಕ್ತಾ ಮಾರ್ಗೇಣ ಕಲ್ಯಾಣೀ ಮೋಕ್ಷಪ್ರಾಪ್ತಿರಪಶ್ಚಿಮಾ ॥೬॥

(ಈಗ ಮೂರು ಶ್ಲೋಕಗಳ ಮುಖಾಂತರ ಟೀಕಾಕಾರರಾದ ಆಚಾರ್ಯದೇವರು ಈ ಪಂಚಾಸ್ತಿಕಾಯ ಸಂಗ್ರಹವೆಂಬ ಹೆಸರಿನ ಶಾಸ್ತ್ರದಲ್ಲಿ ಯಾವ ಯಾವ ವಿಷಯಗಳ ನಿರೂಪಣೆಯಿದೆಯೆಂಬುದನ್ನು ಅತ್ಯಂತ ಸಂಕ್ಷೇಪದಲ್ಲಿ ತೋರಿಸಿಕೊಡುತ್ತಾರೆ,-)

ಶ್ಲೋಕಾರ್ಥ :- ಇಲ್ಲಿ ಮೊದಲು ಸೂತ್ರಕರ್ತರು[೧] ಮೂಲ ಪದಾರ್ಥಗಳ ಪಂಚಾಸ್ತಿಕಾಯ ಹಾಗೂ ಷಡ್‌ದ್ರವ್ಯದ ಪ್ರಕಾರದಿಂದ ಪ್ರರೂಪಣೆ ಮಾಡಿದ್ದಾರೆ (ಎಂದರೆ ಈ ಶಾಸ್ತ್ರದ ಮೊದಲನೆಯ ಅಧಿಕಾರದಲ್ಲಿ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವರು ವಿಶ್ವದ ಮೂಲ ಪದಾರ್ಥಗಳ ಐದು ಅಸ್ತಿಕಾಯ ಮತ್ತು ಆರು ದ್ರವ್ಯದ ಪದ್ಧತಿಯಿಂದ ನಿರೂಪಣೆ ಮಾಡಿದ್ದಾರೆ.) (೪)

ಶ್ಲೋಕಾರ್ಥ :- ಅನಂತರ (ಎರಡನೆಯ ಅಧಿಕಾರದಲ್ಲಿ), ಜೀವ ಮತ್ತು ಅಜೀವ-ಇವೆರಡರ ಪರ್ಯಾಯಗಳ ರೂಪ ನವಪದಾರ್ಥಗಳ - ಎಂದರೆ ಯಾವವುಗಳ ಮಾರ್ಗ ಎಂದರೆ ಕಾರ್ಯಗಳು ಬೇರೆ ಬೇರೆ ಪ್ರಕಾರದ್ದಿವೆ ಅವುಗಳ ವ್ಯವಸ್ಥೆಯನ್ನು ಪ್ರತಿಪಾದಿಸಲಾಗಿದೆ. (೫)

ಶ್ಲೋಕಾರ್ಥ :- ಅನಂತರ (ಎರಡನೆಯ ಅಧಿಕಾರದ ಕೊನೆಯಲ್ಲಿ) ತತ್ವದ ಪರಿಜ್ಞಾನದೊಡನೆ (ಪಂಚಾಸ್ತಿಕಾಯ, ಷಡ್‌ದ್ರವ್ಯ ಹಾಗೂ ನವಪದಾರ್ಥಗಳ ಯಥಾರ್ಥ ಜ್ಞಾನದೊಡನೆ) ತ್ರಯಾತ್ಮಕ ಮಾರ್ಗದಿಂದ (ಸಮ್ಯಗ್ದರ್ಶನಜ್ಞಾನಚಾರಿತ್ರಾತ್ಮಕ ಮಾರ್ಗದಿಂದ) ಕಲ್ಯಾಣಸ್ವರೂಪವಾದ ಉತ್ತಮ ಮೋಕ್ಷಪ್ರಾಪ್ತಿಯನ್ನು ಹೇಳಲಾಗಿದೆ. (೬)

---

೧. ಈ ಶಾಸ್ತ್ರದ ಕರ್ತೃಗಳು ಶ್ರೀಮದ್‌ಭಗವತ್ಕುಂದಕುಂದಾಚಾರ್ಯದೇವರಿದ್ದಾರೆ. ಅವರ ಇನ್ನುಳಿದ ಹೆಸರುಗಳು ವಕ್ರಗ್ರೀವಾಚಾರ್ಯ, ಏಲಾಚಾರ್ಯ, ಗೃದ್ಧ್ರಪಿಚ್ಛಾಚಾರ್ಯ ಮತ್ತು ಪದ್ಮನಂದಿ ಎಂದಿವೆ. ಶ್ರೀ ಜಯಸೇನಾಚಾರ್ಯದೇವರು ಈ ಶಾಸ್ತ್ರದ ತಾತ್ಪರ್ಯವೃತ್ತಿಯೆಂಬ ಹೆಸರಿನ ಟೀಕೆಯನ್ನು ಪ್ರಾರಂಭ ಮಾಡುತ್ತ ಹೀಗೆ ಬರೆಯುತ್ತಾರೆ - ''ಈಗ ಶ್ರೀ ಕುಮಾರನಂದಿ - ಸಿದ್ಧಾಂತಿದೇವರ ಶಿಷ್ಯರಾದ ಶ್ರೀಮದ್‌ಕುಂದಕುಂದಾಚಾರ್ಯದೇವರು - ಅವರಿಗೆ ಬೇರೆ ಪದ್ಮನಂದಿ ಮೊದಲಾದ ಹೆಸರುಗಳಿವೆ ಅವರು ಪ್ರಸಿದ್ಧವಾದ ಕಥಾನ್ಯಾಯದಿಂದ ಪೂರ್ವವಿದೇಹಕ್ಕೆ ಹೋಗಿ ವೀತರಾಗ-ಸರ್ವಜ್ಞ ಸೀಮಂಧರಸ್ವಾಮಿ ತೀರ್ಥಂಕರ ಪರಮದೇವರ ದರ್ಶನ ಮಾಡಿ, ಅವರ ಮುಖ ಕಮಲದಿಂದ ಹೊರ ಹೊರಟಂಥ ದಿವ್ಯಧ್ವನಿಯ ಶ್ರವಣದಿಂದ ಅವಧರಿಸಲ್ಪಟ್ಟ ಪದಾರ್ಥಗಳ ಮುಖಾಂತರ ಶುದ್ಧಾತ್ಮತತ್ತ್ವ ಮೊದಲಾದ ಸಾರಭೂತ ಅರ್ಥವನ್ನು ಗ್ರಹಣ ಮಾಡಿ, ಅಲ್ಲಿಂದ ಮರಳಿ ಬಂದು ಅಂತಃತತ್ತ್ವ ಮತ್ತು ಬಹಿಃತತ್ತ್ವದ ಗೌಣ-ಮುಖ್ಯ ಪ್ರತಿಪಾದನೆಯ ಉದ್ದೇಶ ಅಥವಾ ಶಿವಕುಮಾರ ಮಹಾರಾಜ ಮೊದಲಾದ ಸಂಕ್ಷೇಪ ರುಚಿಯುಳ್ಳ ಶಿಷ್ಯರುಗಳ ಪ್ರತಿಬೋಧನಾರ್ಥವಾಗಿ ವಿರಚಿಸಿದ ಪಂಚಾಸ್ತಿಕಾಯಪ್ರಾಭೃತಶಾಸ್ತ್ರದ ಯಥಾಕ್ರಮದಿಂದ ಅಧಿಕಾರಶುದ್ಧಿಯೊಡನೆ ತಾತ್ಪರ್ಯಾರ್ಥರೂಪವಾದ ವ್ಯಾಖ್ಯಾನವನ್ನು ಮಾಡಲಾಗುತ್ತದೆ.

ಅಥ ಸೂತ್ರಾವತಾರ ಃ-

ಇಂದಸದವಂದಿಯಾಣಂ ತಿಹುವಣಹಿದಮಧುರವಿಸದವಕ್ಕಾಣಂ ।
ಅಂತಾತೀದಗುಣಾಣಂ ಣಮೋ ಜಿಣಾಣಂ ಜಿದಭವಾಣಂ ॥೧॥

ಇಂದ್ರಶತವಂದಿತೇಭ್ಯಸ್ತ್ರಿಭುವನಹಿತಮಧುರವಿಶದವಾಕ್ಯೇಭ್ಯಃ ।
ಅಂತಾತೀತಗುಣೇಭ್ಯೋ ನಮೋ ಜಿನೇಭ್ಯೋ ಜಿತಭವೇಭ್ಯಃ ॥೧॥

ಅಥಾತ್ರ 'ನಮೋ ಜಿನೇಭ್ಯಃ' ಇತ್ಯನೇನ ಜಿನಭಾವನಮಸ್ಕಾರರೂಪಮಸಾಧಾರಣಂ ಶಾಸ್ತ್ರಸ್ಯಾದೌ ಮಂಗಲ-ಮುಪಾತ್ತಮ್ । ಅನಾದಿನಾ ಸಂತಾನೇನ ಪ್ರವರ್ತಮಾನಾ ಅನಾದಿನೈವ ಸಂತಾನೇನ ಪ್ರವರ್ತಮಾನೈರಿಂದ್ರಾಣಾಂ ಶತೈರ್ವಂದಿತಾ ಯೇ ಇತ್ಯನೇನ ಸರ್ವದೈವ ದೇವಾಧಿದೇವತಾತ್ವೇಷಾಮೇವಾಸಾಧಾರಣನಮಸ್ಕಾರಾರ್ಹತ್ವ-ಮುಕ್ತಮ್ । ತ್ರಿಭುವನಮೂರ್ಧ್ವಾಧೋಮಧ್ಯಲೋಕವರ್ತೀ ಸಮಸ್ತ ಏವ ಜೀವಲೋಕಸ್ತಸ್ಯೈನಿರ್ವ್ಯಾಬಾಧವಿಶುದ್ಧಾತ್ಮ

ಈಗ ಗಾಥಾಸೂತ್ರದ ಅವತಾರವಾಗುತ್ತದೆ,-

ಗಾಥೆ - ೧

ಗಾಥಾರ್ಥ ಃ- [ಇಂದಸದವಂದಿಯಾಣಂ] ಯಾರು ನೂರು ಜನ ಇಂದ್ರರುಗಳಿಂದ ವಂದಿತರಿದ್ದಾರೆ, [ತಿಹುವಣಹಿದಮಧುರವಿಸದವಕ್ಕಾಣಂ] ಯಾರ ವಾಣಿಯು ಮೂರು ಲೋಕಕ್ಕೆ ಹಿತಕರ, ಮಧುರ ಹಾಗೂ ವಿಶದ (ನಿರ್ಮಲ, ಸ್ಪಷ್ಟ)ವಾಗಿದೆ, [ಅಂತಾತೀದಗುಣಾಣಂ] ಯಾರಿಗೆ (ಚೈತನ್ಯದ ಅನಂತವಿಲಾಸ ಸ್ವರೂಪವಾದ) ಅನಂತಗುಣಗಳು ವರ್ತಿಸುತ್ತವೆ ಮತ್ತು [ಜಿದಭವಾಣಂ] ಯಾರು ಭವದ ಮೇಲೆ ವಿಜಯ ಪ್ರಾಪ್ತಮಾಡಿಕೊಂಡಿದ್ದಾರೆ, [ಜಿಣಾಣಂ] ಆ ಜಿನೇಶ್ವರರುಗಳಿಗೆ [ಣಮೋ] ನಮಸ್ಕಾರವಿರಲಿ.

ಟೀಕೆ ಃ- ಇಲ್ಲಿ (ಈ ಗಾಥೆಯಲ್ಲಿ) ''ಜಿನೇಶ್ವರರುಗಳಿಗೆ ನಮಸ್ಕಾರವಿರಲಿ'' ಎಂದು ಹೇಳಿ ಶಾಸ್ತ್ರದ ಪ್ರಾರಂಭದಲ್ಲಿ ಜಿನರಿಗೆ ಭಾವನಮಸ್ಕಾರರೂಪವಾದ ಅಸಾಧಾರಣ ಮಂಗಲವನ್ನು[೧] ಹೇಳಿದೆ. ''ಯಾರು ಅನಾದಿ ಪ್ರವಾಹದಿಂದ ಪ್ರವರ್ತಿಸು (ನಡೆದು ಬರು)ತ್ತ ಅನಾದಿ ಪ್ರವಾಹದಿಂದಲೇ ಪ್ರವರ್ತಮಾನ (ನಡೆದು ಬಂದ) ನೂರು-ನೂರು[೨] ಇಂದ್ರರುಗಳಿಂದ ವಂದಿತರಿದ್ದಾರೆ'' - ಎಂದು ಹೇಳಿ ಯಾವಾಗಲೂ ದೇವಾಧಿದೇವತನದ

ಶತೇಂದ್ರವಂದಿತನು ತ್ರಿಜಗಹಿತನು ನಿರ್ಮಲಮಧುರವಾಣಿಯುತನು ।
ಜಿತಭವನು ನಿಸ್ಸೀಮಗುಣಧರನುಮಾದ ಜಿನವರಗೆ ನಮಿಸುವೆನು ॥೧॥

---

೧. ಮಲವನ್ನು ಎಂದರೆ ಪಾಪವನ್ನು ಗಾಲೆ-ನಾಶಮಾಡುವುದು ಅದು ಮಂಗಲವಿದೆ; ಅಥವಾ ಸುಖವನ್ನು ಪ್ರಾಪ್ತ ಮಾಡುವುದು-ತರುವುದು ಅದು ಮಂಗಲವಿದೆ.

೨. ೪೦ ಭವನವಾಸಿ ದೇವರುಗಳ, ೩೨ ವ್ಯಂತರವಾಸಿ ದೇವರುಗಳ, ೨೪ ಕಲ್ಪವಾಸಿ ದೇವರುಗಳ, ೨ ಜ್ಯೋತಿಷ್ಕವಾಸಿ ದೇವರುಗಳ, ೧ ಮನುಷ್ಯರುಗಳ ಮತ್ತು ೧ ತಿರ್ಯಂಚಗಳ - ಈ ಪ್ರಕಾರವಾಗಿ ಒಟ್ಟು ನೂರು ಇಂದ್ರರು ಅನಾದಿ ಪ್ರವಾಹ ರೂಪದಿಂದ ನಡೆಯುತ್ತ ಬರುತ್ತಿದ್ದಾರೆ.

ತತ್ತೊ ್ವಪಲಂಭೋಪಾಯಾಭಿಧಾಯಿತ್ವಾದ್ಧಿತಂ, ಪರಮಾರ್ಥರಸಿಕಜನಮನೋಹಾರಿತ್ವಾನ್ಮಧುರಂ, ನಿರಸ್ತಸಮಸ್ತ-ಶಂಕಾದಿದೋಷಾಸ್ಪದತ್ವಾದ್ವಿಶದಂ ವಾಕ್ಯಂ ದಿವ್ಯೋ ಧ್ವನಿರ್ಯೇಷಮಿತ್ಯನೇನ ಸಮಸ್ತವಸ್ತುಯಾಥಾತ್ಮೊ್ಯ ಪದೇಶಿತ್ವಾತ್ಪ್ರೇಕ್ಷಾವತ್ಪ್ರೇಕ್ಷ್ಯತ್ವಮಾಖ್ಯಾತಮ್ । ಅಂತಮತೀತಃ ಕ್ಷೇತ್ರಾನವಚ್ಛಿನ್ನಃ ಕಾಲಾನವಚ್ಛಿನ್ನಶ್ಚ ಪರಮಚ್ಛಿತನ್ಯಶಕ್ತಿ-ವಿಲಾಸಲಕ್ಷಣೋ ಗುಣೋ ಯೇಷಾಮಿತ್ಯನೇನ ತು ಪರಮಾದ್ಭುತಜ್ಞಾನಾತಿಶಯಪ್ರಕಾಶನಾದವಾಪ್ತಜ್ಞಾನಾತಿ ಶಯಾನಾಮಪಿ ಯೋಗೀಂದ್ರಾಣಾಂ ವಂದ್ಯತ್ವಮುದಿತಮ್ । ಜಿತೋ ಭವ ಆಜವಂಜವೋ ಯೈರಿತ್ಯನೇನ ತು ಕೃತ ಕೃತ್ಯತ್ವಪ್ರಕಟನಾತ್ತ ಏವಾನ್ಯೇಷಾಮಕೃತಕೃತ್ಯಾನಾಂ ಶರಣಮಿತ್ಯುಪದಿಷ್ಟಮ್ । ಇತಿ ಸರ್ವಪದಾನಾಂ ತಾತ್ಪರ್ಯಮ್।

ಕಾರಣವಾಗಿ ಅವರೇ (ಜಿನದೇವರೇ) ಅಸಾಧಾರಣವಾದ ನಮಸ್ಕಾರಕ್ಕೆ ಯೋಗ್ಯರಿದ್ದಾರೆಂದು ಹೇಳಿದೆ, ''ಜಿನರ ವಾಣಿಯು ಎಂದರೆ ದಿವ್ಯಧ್ವನಿಯು ಮೂರುಲೋಕಕ್ಕೆ - ಊರ್ಧ್ವ-ಅಧೋ-ಮಧ್ಯಲೋಕವರ್ತಿಯಾದ ಸಮಸ್ತ ಜೀವಸಮೂಹಕ್ಕೆ - ನಿರ್ಬಾಧವೂ, ವಿಶುದ್ಧವೂ ಆದ ಆತ್ಮತತ್ತ್ವದ ಉಪಲಬ್ಧಿಯ ಉಪಾಯವನ್ನು ಹೇಳುವಂತಹುದಾಗಿರುವುದರಿಂದ ಮಧುರವಿದೆ ಮತ್ತು ಸಮಸ್ತ ಸಂದೇಹ ಮೊದಲಾದ ದೋಷಗಳ ಸ್ಥಾನಗಳನ್ನು ದೂರಮಾಡಿ ಬಿಡುವುದರಿಂದ ವಿಶದ (ನಿರ್ಮಲ, ಸ್ಪಷ್ಟ)ವಿದೆ''ಯೆಂದು ಹೇಳಿ (ಜಿನದೇವರು) ಸಮಸ್ತ ವಸ್ತುಗಳ ಯಥಾರ್ಥ ಸ್ವರೂಪದ ಉಪದೇಶಕರಾಗಿರುವುದರಿಂದ ವಿಚಾರವಂತರೂ, ಬುದ್ಧಿವಂತರೂ ಆದ ಪುರುಷರ ಮನ್ನಣೆಗೆ ಯೋಗ್ಯರಿದ್ದಾರೆ (ಎಂದರೆ ಅವರ ಉಪದೇಶವು ವಿಚಾರವಂತರೂ, ಬುದ್ಧಿವಂತರೂ ಆದ ಪುರುಷರು ಗೌರವದೊಂದಿಗೆ ಲಕ್ಷ್ಯಕೊಡುವಂತಹುದಾಗಿದೆ) - ಎಂದು ಹೇಳಿದೆ. ''ಅನಂತ-ಕ್ಷೇತ್ರದಿಂದ ಅಂತವಿಲ್ಲದ ಮತ್ತುಕಾಲದಿಂದ ಅಂತವಿಲ್ಲದ - ಪರಮಚೈತನ್ಯಶಕ್ತಿಯ ವಿಲಾಸಸ್ವರೂಪವಾದ ಗುಣಗಳು ಅವರಿಗೆ ವರ್ತಿಸುತ್ತವೆ''ಯೆಂದು ಹೇಳಿ (ಜಿನರಿಗೆ ಪರಮ ಅದ್ಭುತ ಜ್ಞಾನಾತಿಶಯವು ಪ್ರಕಟವಾಗಿರುವ ಕಾರಣದಿಂದ ಜ್ಞಾನಾತಿಶಯಕ್ಕೆ ಪ್ರಾಪ್ತರಾದ ಯೋಗೀಂದ್ರರುಗಳಿಂದಲೂ ಕೂಡ ವಂದ್ಯರಾಗಿದ್ದಾರೆಂದು ಹೇಳಿದೆ. ''ಭವ ಎಂದರೆ ಸಂಸಾರದ ಮೇಲೆ ಅವರು ವಿಜಯವನ್ನು ಪ್ರಾಪ್ತ ಮಾಡಿದ್ದಾರೆ''ಂದು ಹೇಳಿ ಕೃತಕೃತ್ಯತೆಯು ಪ್ರಕಟವಾಗಿ ಹೋಗಿರುವುದರಿಂದ ಅವರೇ (ಜಿನರೇ) ಇತರ ಅಕೃತಕೃತ್ಯ ಜೀವರುಗಳಿಗೆ ಶರಣಭೂತರಾಗಿದ್ದಾರೆಂದು ಉಪದೇಶವಿತ್ತಿದೆ, - ಹೀಗೆ ಎಲ್ಲ ಪದಗಳ ತಾತ್ಪರ್ಯವಿದೆ.

ಭಾವಾರ್ಥ :- ಇಲ್ಲಿ ಜಿನೇಂದ್ರ ಭಗವಂತರ ನಾಲ್ಕು ವಿಶೇಷಣಗಳ ವರ್ಣನೆ ಮಾಡಿ ಅವರಿಗೆ ಭಾವ ನಮಸ್ಕಾರ ಮಾಡಲಾಗಿದೆ. ೧) ಮೊದಲನೆಯದಾಗಿ ಜಿನೇಂದ್ರ ಭಗವಂತರು ನೂರು ಇಂದ್ರರುಗಳಿಂದ ವಂದ್ಯರಿದ್ದಾರೆ. ಇಂಥ ಅಸಾಧಾರಣವಾದ ನಮಸ್ಕಾರಕ್ಕೆ ಬೇರೆಯಾರೂ ಯೋಗ್ಯರಿಲ್ಲ; ಏಕೆಂದರೆ ದೇವ ಹಾಗೂ ಅಸುರರುಗಳಲ್ಲಿ ಯುದ್ಧವಾಗುತ್ತಿರುವುದರಿಂದ (ದೇವಾಧಿದೇವರಾದ ಜಿನೇಂದ್ರ ಭಗವಂತರನ್ನು ಹೊರತುಪಡಿಸಿ) ಬೇರೆಯಾವ ದೇವರೂ ಕೂಡ ನೂರು ಇಂದ್ರರುಗಳಿಂದ ವಂದಿತರಿಲ್ಲ. ೨) ಎರಡನೆಯದಾಗಿ ಜಿನೇಂದ್ರ ಭಗವಂತರ ವಾಣಿಯು ಮೂರು ಲೋಕಕ್ಕೆ ಶುದ್ಧ ಆತ್ಮಸ್ವರೂಪದ ಪ್ರಾಪ್ತಿಯ ಉಪಾಯವನ್ನು ತೋರಿಸಿಕೊಡುತ್ತಿರುವುದರಿಂದ ಹಿತಕಾರಕವಿದೆ; ವೀತರಾಗ ನಿರ್ವಿಕಲ್ಪ ಸಮಾಧಿಯಿಂದ ಉತ್ಪನ್ನವಾದ ಸಹಜ-ಅಪೂರ್ವ-ಪರಮಾನಂದರೂಪ ಪಾರಮಾರ್ಥಿಕ ಸುಖದ ರಸಾಸ್ವಾದವುಳ್ಳ ರಸಿಕ ಜನರ ಮನಸ್ಸನ್ನು ಸೆಳೆಯುತ್ತಿರುವುದರಿಂದ (ಎಂದರೆ ಪರಮ ಸಮರಸಭಾವದ ರಸಿಕರಾದ ಜನರನ್ನು ಪ್ರಸನ್ನಗೊಳಿಸುತ್ತಿರುವುದರಿಂದ) ಮಧುರವಿದೆ; ಶುದ್ಧ ಜೀವಾಸ್ತಿಕಾಯ ಮೊದಲಾದ ಏಳು ತತ್ತ್ವಗಳು, ಒಂಭತ್ತು ಪದಾರ್ಥಗಳು ಆರು ದ್ರವ್ಯಗಳು ಮತ್ತು ಐದು ಅಸ್ತಿಕಾಯಗಳ

ಸಮಣಮುಹುಗ್ಗದಮಟ್ಠಂ ಚದುಗ್ಗದಿಣಿವಾರಣಂ ಸಣಿವ್ವಾಣಂ ।
ಏಸೋ ಪಣಮಿಯ ಸಿರಸಾ ಸಮಯಮಿಣಂ ಸುಣಹ ವೋಚ್ಛಾಮಿ ॥೨॥

श्रमणमुखोद्गतार्थं चतुर्गतिनिवारणं सनिर्वाणम् ।
एषः प्रणम्य शिरसा समयमिमं शृणुत वक्ष्या ्यमि ॥२॥

ಸಂಶಯ-ವಿಮೋಹ-ವಿಭ್ರಮ ರಹಿತವಾಗಿ ನಿರೂಪಣೆ ಮಾಡುತ್ತಿರುವುದರಿಂದ ಅಥವಾ ಪೂರ್ವಾಪರ ವಿರೋಧ ಮೊದಲಾದ ದೋಷರಹಿತವಾಗಿರುವುದರಿಂದ ಅಥವಾ ಎಲ್ಲ ಜೀವಗಳಿಗೆ ತಮ್ಮ-ತಮ್ಮ ಭಾಷೆಗಳಲ್ಲಿ ಯುಗಪದ್ ಸ್ಪಷ್ಟ ಅರ್ಥದ ಪ್ರತಿಪಾದನೆ ಮಾಡುತ್ತಿರುವುದರಿಂದ ವಿಶದವೂ, ಸ್ಪಷ್ಟವೂ ಆಗಿ ವ್ಯಕ್ತವಿದೆ. ಈ ಪ್ರಕಾರವಾಗಿ ಜಿನೇಂದ್ರ ಭಗವಂತರ ವಾಣಿಯೇ ಪ್ರಮಾಣಭೂತವಿದೆ; ಏಕಾಂತರೂಪವಾದ ಅಪೌರುಷೇಯ ವಚನವಾಗಲಿ ಅಥವಾ ವಿಚಿತ್ರ ಕಥಾರೂಪವಾದ ಕಲ್ಪಿತ ಪುರಾಣ ವಚನವಾಗಲಿ ಪ್ರಮಾಣಭೂತವಾಗಿಲ್ಲ. ೩) ಮೂರನೆಯದಾಗಿ ಅನಂತ ದ್ರವ್ಯ-ಕ್ಷೇತ್ರ-ಕಾಲ-ಭಾವಗಳನ್ನು ತಿಳಿಯುವಂಥ ಅನಂತ ಕೇವಲಜ್ಞಾನಗುಣವು ಜಿನೇಂದ್ರಭಗವಂತರಿಗೆ ವರ್ತಿಸುತ್ತದೆ. ಹೀಗೆ ಬುದ್ಧಿ ಮೊದಲಾದ ಏಳು ಋದ್ಧಿಗಳು ಮತ್ತು ಮತಿಜ್ಞಾನ ಮೊದಲಾದ ನಾಲ್ಕು ಜ್ಞಾನಗಳಿಂದ ಸಂಪನ್ನರಾದ ಗಣಧರ ದೇವಾದಿ ಯೋಗೀಂದ್ರರುಗಳಿಂದಲೂ ಅವರು ವಂದ್ಯರಿದ್ದಾರೆ. ೪)ನಾಲ್ಕನೆಯದಾಗಿ ಐದು ಪ್ರಕಾರದ ಸಂಸಾರವನ್ನು ಜಿನೇಂದ್ರ ಭಗವಂತರು ಜಯಿಸಿದ್ದಾರೆ. ಹೀಗೆ ಕೃತಕೃತ್ಯತೆಯ ಕಾರಣದಿಂದ ಅವರೇ ಇತರ ಕೃತಕೃತ್ಯರಲ್ಲದ ಜೀವರುಗಳಿಗೆ ಶರಣಭೂತರಿದ್ದಾರೆ. ಬೇರೆ ಯಾರೂ ಇಲ್ಲ. ಹೀಗೆ ನಾಲ್ಕು ವಿಶೇಷಣಗಳಿಂದ ಯುಕ್ತರಾದ ಜಿನೇಂದ್ರ ಭಗವಂತರಿಗೆ ಗ್ರಂಥದ ಆರಂಭದಲ್ಲಿ ಭಾವನಮಸ್ಕಾರ ಮಾಡಿ ಮಂಗಲ ಮಾಡಿದೆ.

ಪ್ರಶ್ನೆ :- ಯಾವ ಶಾಸ್ತ್ರವು ಸ್ವಯಂ ಮಂಗಲವಿದೆ, ಅದರ ಮಂಗಲವನ್ನು ಏತಕ್ಕಾಗಿ ಮಾಡಲಾಗುತ್ತದೆ?

ಉತ್ತರ :- ಭಕ್ತಿಯ ಉದ್ದೇಶದಿಂದ ಮಂಗಲದ್ದೂ ಕೂಡ ಮಂಗಲ [೧] ಮಾಡಲಾಗುತ್ತದೆ. ಸೂರ್ಯನನ್ನು ದೀವಿಗೆಯಿಂದ, ಮಹಾಸಾಗರವನ್ನು ನೀರಿನಿಂದ, ವಾಗೀಶ್ವರಿ (ಸರಸ್ವತಿ)ಯನ್ನು ವಾಣಿಯಿಂದ ಮತ್ತು ಮಂಗಲವನ್ನು ಮಂಗಲದಿಂದ ಅರ್ಚನೆ ಮಾಡಲಾಗುತ್ತದೆ.

ಗಾಥೆ - ೨

ಗಾಥಾರ್ಥ :- [ಸಮಣಮುಹುಗ್ಗದಮಟ್ಠಂ] ಶ್ರಮಣರ ಮುಖದಿಂದ ಹೊರ ಹೊರಟ ಅರ್ಥಮಯವು (ಸರ್ವಜ್ಞ ಮಹಾಮುನಿಯ ಮುಖದಿಂದ ಹೇಳಲ್ಪಟ್ಟ ಪದಾರ್ಥಗಳ ಕಥನ ಮಾಡುವಂಥದು),

ಶ್ರಮಣಮುಖೋದ್ಗತ ಅರ್ಥಮಯ ಚತುರ್ಗತಿಹರಣ ಶಿವಹೇತುಮಾದೀ ।
ಸಮಯವನು ಶಿರನಮನಪೂರ್ವಕ ಪೇಳುವೆನು ತಾವು ಕೇಳುವುದು ॥೨॥

೧. ಈ ಗಾಥೆಯ ಶ್ರೀ ಜಯಸೇನಾಚಾರ್ಯದೇವ ಕೃತ ಟೀಕೆಯಲ್ಲಿ ಶಾಸ್ತ್ರದ ಮಂಗಲ, ಶಾಸ್ತ್ರದ ನಿಮಿತ್ತ, ಶಾಸ್ತ್ರದ ಹೇತು (ಫಲ), ಶಾಸ್ತ್ರದ ಪರಿಣಾಮ, ಶಾಸ್ತ್ರದ ಹೆಸರು ಮತ್ತು ಶಾಸ್ತ್ರದ ಕರ್ತೃ - ಹೀಗೆ ಆರು ವಿಷಯಗಳ ಕುರಿತು ವಿಸ್ತೃತವಾದ ವಿವೇಚನೆ ಮಾಡಿದೆ.

ಮತ್ತೆ ಶ್ರೀ ಜಯಸೇನಾಚಾರ್ಯದೇವರು ಈ ಗಾಥೆಯ ಶಬ್ದಾರ್ಥ, ನಯಾರ್ಥ, ಮತಾರ್ಥ, ಆಗಮಾರ್ಥ ಹಾಗೂ ಭಾವಾರ್ಥವನ್ನು ತಿಳಿದುಕೊಂಡು ''ಈ ಪ್ರಕಾರ ವ್ಯಾಖ್ಯಾನ ಕಾಲದಲ್ಲಿ ಎಲ್ಲೆಡೆಗೆ ಶಬ್ದಾರ್ಥ, ನಯಾರ್ಥ, ಮತಾರ್ಥ, ಆಗಮಾರ್ಥ ಮತ್ತು ಭಾವಾರ್ಥ ಪ್ರಯುಕ್ತವಾಗಿ ಮಾಡಲು ಯೋಗ್ಯವಿದೆ''ಯೆಂದು ಹೇಳಿದ್ದಾರೆ.

समयो ह्यागमः । तस्य प्रणामपूर्वकमात्मनाभिधानमत्र प्रतिज्ञातम् । युज्यते हि स प्रणंतुमभिधातुं चाप्तोपदिष्टत्वे सति सफलत्वात् । तत्प्राप्तोपदिष्टत्वमस्य श्रमण मुखोद्गतार्थत्वात् । श्रमणा हि महाश्रमणाः सर्वज्ञा वीतरागाः । अर्थः पुनरनेकशब्द संबंधेनाभिधीयमानो वस्तुतयैकोऽभिधेयः । सफलत्वं तु चतसृणां नारकतिर्यग्मनुष्य देवत्वलक्षणानां गतीनां निवारणत्वात् पारतंत्र्य-निवृत्तिलक्षणस्य निर्वाणस्य शुद्धात्म-तत्त्वोपलंभरूपस्य परंपरया कारणत्वात् स्वातंत्र्यप्राप्तिलक्षणस्य फलस्य सद्भावादिति ।

[चदुग्गदिणिवारणं] ಚತುರ್ಗತಿಗಳ ನಿವಾರಣೆ ಮಾಡುವಂಥದು ಮತ್ತು [सणिव्वाणं] ನಿರ್ವಾಣ ಸಹಿತವಾದ (ನಿರ್ವಾಣಕ್ಕೆ ಕಾರಣಭೂತವಾದ) - [इणं समयं] ಇಂಥ ಈ ಸಮಯವನ್ನು [सिरसा-पणमिय] ಶಿರಸಾ ವಂದಿಸಿ [एसो वोच्छामि] ನಾನು ಅದರ ಕಥನ ಮಾಡುತ್ತೇನೆ ; [सुणह] ಅದನ್ನು ಕೇಳಿರಿ.

ಟೀಕೆ :- ಸಮಯ ಎಂದರೆ ಆಗಮ ; ಅದಕ್ಕೆ ನಮಸ್ಕಾರ ಮಾಡಿ ತಾವು ಅದರ ಕಥನ ಮಾಡುವೆವು ಎಂದು ಇಲ್ಲಿ (ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವರು) ಪ್ರತಿಜ್ಞೆ ಮಾಡಿದ್ದಾರೆ. ಆ ಸಮಯವು ನಮಸ್ಕಾರ ಮಾಡಲು ಹಾಗೂ ಕಥನ ಮಾಡಲು ಯೋಗ್ಯವಿದೆ.; ಏಕೆಂದರೆ ಅದು ಆಪ್ತರ[೧] ಮುಖಾಂತರ ಉಪದಿಷ್ಟವಾಗಿರುವುದರಿಂದ ಸಫಲವಿದೆ. ಅದು ''ಶ್ರಮಣರ ಮುಖದಿಂದ ಹೊರ ಹೊರಟಂಥ ಅರ್ಥಮಯ'' ವಾಗಿರುವುದರಿಂದ ಅಲ್ಲಿ ಅದರದು ಆಪ್ತರ ಮುಖಾಂತರ ಉಪದಿಷ್ಟತನವಿದೆ, ''ಶ್ರಮಣ'' ಎಂದರೆ ಮಹಾಶ್ರಮಣ -ಸರ್ವಜ್ಞವೀತರಾಗದೇವರು; ಮತ್ತು 'ಅರ್ಥ' ಎಂದರೆ ಅನೇಕ ಶಬ್ದಗಳ ಸಂಬಂಧದಿಂದ ಹೇಳಲಾಗುತ್ತಿರುವಂಥ, ವಸ್ತುರೂಪದಿಂದ ಒಂದಾದಂಥ ಪದಾರ್ಥ, ಪುನಃ ಅದರ (-ಸಮಯದ) ಸಫಲತೆಯು ಅದು ಸಮಯವಿರುವುದರಿಂದ ಇದೆ. ೧) ''ನಾರಕತ್ವ, ತಿರ್ಯಂಚತ್ವ, ಮನುಷ್ಯತ್ವ ಹಾಗೂ ದೇವತ್ವಸ್ವರೂಪವಾದ ನಾಲ್ಕುಗತಿಗಳ ನಿವಾರಣೆ'' ಮಾಡುವುದಕ್ಕೆ ಕಾರಣವು ಮತ್ತು ೨) ಶುದ್ಧಾತ್ಮತತ್ತ್ವದ ಉಪಲಬ್ಧಿರೂಪವಾದ ''ನಿರ್ವಾಣಕ್ಕೆ ಪರಂಪರೆಯಿಂದ ಕಾರಣ''ವಾಗಿರುವ ಕಾರಣದಿಂದ ೧) ಯಾವುದರ ಲಕ್ಷಣವು ಪರತಂತ್ರ ನಿವೃತ್ತಿಯಿದೆ ಮತ್ತು ೨) ಯಾವುದರ ಲಕ್ಷಣವು ಸ್ವಾತಂತ್ರ್ಯತೆಯ ಪ್ರಾಪ್ತಿಯಿದೆ - ಇಂಥ[೨] ಫಲ ಸಹಿತವಾಗಿದೆ.

ಭಾವಾರ್ಥ :- ವೀತರಾಗಸರ್ವಜ್ಞ ಮಹಾಶ್ರಮಣರ ಮುಖದಿಂದ ಹೊರ ಹೊರಟಂಥ ಶಬ್ದ ಸಮಯವನ್ನು ಯಾವನೋ ಆಸನ್ನಭವ್ಯ ಪುರುಷನು ಕೇಳಿ, ಆ ಶಬ್ದಸಮಯದ ವಾಚ್ಯಭೂತವಾದ ಪಂಚಾಸ್ತಿಕಾಯಸ್ವರೂಪವಾದ ಅರ್ಥಸಮಯವನ್ನು ತಿಳಿಯುತ್ತಾನೆ ಮತ್ತು ಅದರಲ್ಲಿ ಬಂದು ಬಿಡುವಂಥ ಶುದ್ಧ ಪಂಚಾಸ್ತಿಕಾಯಸ್ವರೂಪ ಅರ್ಥದಲ್ಲಿ (ಪದಾರ್ಥದಲ್ಲಿ) ವೀತರಾಗ ನಿರ್ವಿಕಲ್ಪ ಸಮಾಧಿಯ ಮುಖಾಂತರ ಸ್ಥಿರವಿದ್ದು ನಾಲ್ಕು ಗತಿಗಳ ನಿವಾರಣೆ ಮಾಡಿ, ನಿರ್ವಾಣವನ್ನು ಪ್ರಾಪ್ತಮಾಡಿಕೊಂಡು, ಸ್ವಾತ್ಮೋತ್ಪನ್ನವೂ ಅನಾಕುಲತೆಯ

---

೧. B±Ö¯ ËÍ ÝÖÏÝÝÖÏÝÝÖ ±ÖÏÖ¯| »ÖÏÖ¯Ü¿ ÆÝ¥Ü ÊÖÏÖÆÖÏÖ¯ [ಸರ್ವಜ್ಞದೇವರು ಸಂಪೂರ್ಣ ವಿಶ್ವವನ್ನು ಪ್ರತಿಯೊಂದು ಸಮಯದಲ್ಲಿ ಸಂಪೂರ್ಣರೂಪದಿಂದ ತಿಳಿಯುತ್ತಲಿದ್ದಾರೆ ಮತ್ತು ಅವರು ವೀತರಾಗ (ಮೋಹರಾಗದ್ವೇಷರಹಿತ)ರಾಗಿರುವ ಕಾರಣದಿಂದ ಅವರನ್ನು ಅಸತ್ಯವೆಂದು ಹೇಳುವ ಪ್ರಯೋಜನವು ಲೇಶಮಾತ್ರವೂ ಉಳಿದಿಲ್ಲವಾದುದರಿಂದ ವೀತರಾಗ ಸರ್ವಜ್ಞದೇವರು ನಿಜವಾದ ಆಪ್ತರಿದ್ದಾರೆ. ಇಂಥ ಆಪ್ತರುಗಳ ಮುಖಾಂತರ ಆಗಮವು ಉಪದಿಷ್ಟವಾಗಿರುವುದರಿಂದ ಅದು (ಆಗಮವು) ಸಫಲವಿದೆ.]

೨. ನಾಲ್ಕು ಗತಿಯ ನಿವಾರಣೆ (ಎಂದರೆ ಪಾರತಂತ್ರ್ಯತೆಯ ನಿವೃತ್ತಿ) ಮತ್ತು ನಿರ್ವಾರ್ಣದ ಉತ್ಪತ್ತಿ (ಎಂದರೆ ಸ್ವಾತಂತ್ರ್ಯತೆಯ ಪ್ರಾಪ್ತಿ) ಅದು ಸಮಯದ ಫಲವಿದೆ.

ಸಮವಾಓ[೧] ಪಂಚಣ್ಹಂ ಸಮಉ ತ್ತಿ ಜಿಣುತ್ತಮೇಹಿಂ ಪಣ್ಣತ್ತಂ ।
ಸೋ ಚೇವ ಹವದಿ ಲೋಓ ತತ್ತೋ ಅಮಿಓ ಅಲೋಓ ಖಂ ॥೩॥

ಸಮವಾದಃ[೧] ಸಮವಾಯೋ ವಾ ಪಂಚಾನಾಂ ಸಮಯ ಇತಿ ಜಿನೋತ್ತಮೈಃ ಪ್ರಜ್ಞಪ್ತಮ್ ।
ಸ ಚ ಏವ ಭವತಿ ಲೋಕಸ್ತತೋಽಮಿತೋಽಲೋಕಃ ಖಮ್ ॥೩॥

ಅತ್ರ ಶಬ್ದಜ್ಞಾನಾರ್ಥರೂಪೇಣ ತ್ರಿವಿಧಾऽಭಿಧೇಯತಾ ಸಮಯಶಬ್ದಸ್ಯ ಲೋಕಾಲೋಕವಿಭಾಗಶ್ಚಾಭಿಹಿತಃ। ತತ್ರ ಚ ಪಂಚಾನಾಮಸ್ತಿಕಾಯಾನಾಂ ಸಮೋ ಮಧ್ಯಸ್ಥೋ ರಾಗದ್ವೇಷಾಭ್ಯಾಮನುಪಹತೋ ವರ್ಣಪದವಾಕ್ಯ-ಸನ್ನಿವೇಶವಿಶಿಷ್ಟಃ ಪಾಠೋ ವಾದಃ ಶಬ್ದಸಮಯಃ ಶಬ್ದಾಗಮ ಇತಿ ಯಾವತ್ । ತೇಷಾಮೇವ ಮಿಥ್ಯಾದರ್ಶನೋದಯೋಚ್ಛೇದೇ ಸತಿ ಸಮ್ಯಗವಾಯಃ ಪರಿಚ್ಛೇದೋ ಜ್ಞಾನಸಮಯೋ ಜ್ಞಾನಾಗಮ ಇತಿ ಯಾವತ್। ತೇಷಾಮೇವಾಭಿಧಾನಪ್ರತ್ಯಯಪರಿಚ್ಛಿನ್ನಾನಾಂ ವಸ್ತುರೂಪೇಣ ಸಮವಾಯಃ ಸಂಘಾತೋऽರ್ಥಸಮಯಃ ಸರ್ವಪದಾರ್ಥ ಸಾರ್ಥ ಇತಿ ಯಾವತ್ । ತದತ್ರ ಜ್ಞಾನಸಮಯಪ್ರಸಿದ್ಧ್ಯರ್ಥಂ ಶಬ್ದಸಮಯಸಂಬಂಧೇನಾರ್ಥ-ಸಮಯೋऽಭಿಧಾತುಮಭಿಪ್ರೇತಃ ಅಥ ತಸ್ಯೈವಾರ್ಥಸಮಯಸ್ಯ ದ್ವೈವಿಧ್ಯಂ ಲೋಕಾಲೋಕವಿಕಲ್ಪಾತ್ । ಸ ಏವ ಪಂಚಾಸ್ತಿಕಾಯಸಮವಾಯೋ ಯಾವಾಂಸ್ತಾವಾಲ್ಲೋಕಸ್ತತಃ ಪರಮಮಿತೋऽನಂತೋ ಹ್ಯಲೋಕಃ, ಸ ತು ನಾಭಾವಮಾತ್ರಂ ಕಿಂತು ಸತ್ಸಮವಾಯಾತಿರಿಕ್ತಪರಿಮಾಣನಂತಕ್ಷೇತ್ರಂ ಖಮಾಕಾಶಮಿತಿ ।

ಲಕ್ಷಣವೂ ಆದ ಅನಂತ ಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಈ ಕಾರಣದಿಂದ ದ್ರವ್ಯಾಗಮರೂಪವಾದ ಶಬ್ದಸಮಯವು ನಮಸ್ಕಾರ ಮಾಡಲು ಹಾಗೂ ವ್ಯಾಖ್ಯಾನ ಮಾಡಲು ಯೋಗ್ಯವಾಗಿದೆ.

ಗಾಥೆ - ೩

ಗಾಥಾರ್ಥ ಃ- [ಪಂಚಣ್ಹಂ ಸಮವಾಓ] ಸಮಭಾವದೊಡನೆ ಐದು ಅಸ್ತಿಕಾಯಗಳ ನಿರೂಪಣೆ ಅಥವಾ ಅವುಗಳ ಸಮವಾಯವು (ಪಂಚಾಸ್ತಿಕಾಯದ ಸಮ್ಯಕ್‌ಬೋಧ ಅಥವಾ ಸಮೂಹವು) [ಸಮಉ] ಅದು ಸಮಯವಿದೆ [ತ್ತಿ] ಎಂದು [ಜಿಣುತ್ತಮೇಹಿಂ ಪಣ್ಣತ್ತಂ] ಜಿನವರರು ಹೇಳಿದ್ದಾರೆ. [ಸೋ ಚೇವ ಲೋಓ ಹವದಿ] ಅದೇ ಲೋಕವಿದೆ (ಐದು ಅಸ್ತಿಕಾಯಗಳ ಸಮೂಹವಿಷ್ಟೇ ಲೋಕವಿದೆ). [ತತ್ತೋ] ಅದರಿಂದ ಮುಂದೆ [ಅಮಿಓ ಅಲೋಓ] ಅಳತೆಯಿಲ್ಲದ ಅಲೋಕ [ಖಂ] ಆಕಾಶಸ್ವರೂಪವಿದೆ.

ಟೀಕೆ ಃ- ಇಲ್ಲಿ (ಈ ಗಾಥೆಯಲ್ಲಿ) ಶಬ್ದರೂಪದಿಂದ, ಜ್ಞಾನರೂಪದಿಂದ ಮತ್ತು ಅರ್ಥರೂಪದಿಂದ (ಶಬ್ದಸಮಯ, ಜ್ಞಾನಸಮಯ ಮತ್ತು ಅರ್ಥಸಮಯ) - ಹೀಗೆ ಮೂರು ಪ್ರಕಾರದ ''ಸಮಯ'' ಶಬ್ದದ ಅರ್ಥವನ್ನು ಹೇಳಿದೆ ಮತ್ತು ಲೋಕ-ಅಲೋಕರೂಪ ವಿಭಾಗವನ್ನು ಹೇಳಿದೆ.

ಅಲ್ಲಿ ೧) 'ಸಮ' ಎಂದರೆ ಮಧ್ಯಸ್ಥ ಎಂದರೆ ಯಾವುದು ರಾಗದ್ವೇಷಗಳಿಂದ ವಿಕೃತವಾಗಿಲ್ಲ ; 'ವಾದ'

ಸಮವಾದವಿಲ್ಲವೆ ಸಮವಾಯವೈದಕೆ ಸಮಯವೆಂದು ಜಿನರು ಪೇಳಿಹರು ।
ಅಮಾಪ ಅಲೋಕಾಕಾಶ ಸ್ವರೂಪವಿದೆ ಉಳಿದುದದು ತಾನೆ ಲೋಕವಿದೆ ॥೩॥

---

೧ ಮೂಲ ಗಾಥೆಯಲ್ಲಿ ಸಮವಾಓ ಶಬ್ದವಿದೆ ; ಸಂಸ್ಕೃತ ಭಾಷೆಯಲ್ಲಿ ಅದರ ಅರ್ಥವು ಸಮವಾದಃ ಎಂದೂ ಆಗುತ್ತದೆ ಮತ್ತು ಸಮವಾಯಃ ಎಂದೂ ಆಗುತ್ತದೆ.

ಜೀವಾ ಪೋಗ್ಗಲಕಾಯಾ ಧಮ್ಮಾಧಮ್ಮಾ ತಹೇವ ಆಗಾಸಂ ।
ಅತ್ಥಿತ್ತಮ್ಹಿ ಯ ಣಿಯದಾ ಅಣಣ್ಣಮಇಯಾ ಅಣುಮಹಂತಾ ॥೪॥

ಜೀವಾಃಪುದ್ಗಲಕಾಯಾ ಧರ್ಮಾಧರ್ಮೌ ತಥೈವ ಆಕಾಶಮ್ ।
ಅಸ್ತಿತ್ವೇ ಚ ನಿಯತಾ ಅನನ್ಯಮಯಾ ಅಣುಮಹಾಂತಃ ॥೪॥

ಎಂದರೆ ವರ್ಣ (ಅಕ್ಷರ), ಪದ (ಶಬ್ದ) ಮತ್ತು ವಾಕ್ಯದ ಸಮೂಹವುಳ್ಳಪಾಠ. ಐದು ಅಸ್ತಿಕಾಯಗಳ 'ಸಮವಾದ' ಎಂದರೆ ಮಧ್ಯಸ್ಥ (ರಾಗದ್ವೇಷಗಳಿಂದ ವಿಕೃತವಾಗದ) ಪಾಠ (ಮೌಖಿಕ ಅಥವಾ ಶಾಸ್ತ್ರಾರೂಢವಾದ ನಿರೂಪಣೆ) ಅದು ಶಬ್ದಸಮಯವಿದೆ ಎಂದರೆ ಶಬ್ದಾಗಮವು ಅದು ಶಬ್ದ ಸಮಯವಿದೆ. ೨) ಮಿಥ್ಯಾದರ್ಶನದ ಉದಯದ ನಾಶವಾದ ಮೇಲೆ, ಆ ಪಂಚಾಸ್ತಿಕಾಯದ್ದೇ ಸಮ್ಯಕ್[೧] ಅವಾಯ ಎಂದರೆ ಸಮ್ಯಕ್ ಜ್ಞಾನವು ಅದು ಜ್ಞಾನಸಮಯವಿದೆ, ಎಂದರೆ ಜ್ಞಾನಾಗಮವು ಅದು ಜ್ಞಾನಸಮಯವಿದೆ. ೩) ಕಥನದ ನಿಮಿತ್ತದಿಂದ ಜ್ಞಾತವಾದ ಆ ಪಂಚಾಸ್ತಿಕಾಯದ್ದೇ ವಸ್ತುರೂಪದಿಂದ ಸಮವಾಯ[೧] ಎಂದರೆ ಸಮೂಹವು ಅದು ಅರ್ಥಸಮಯವಿದೆ, ಎಂದರೆ ಸರ್ವಪದಾರ್ಥ ಸಮೂಹವು ಅದು ಅರ್ಥಸಮಯವಿದೆ. ಅದರಲ್ಲಿ ಇಲ್ಲಿ ಜ್ಞಾನಸಮಯದ ಪ್ರಸಿದ್ಧಿಯ ಉದ್ದೇಶ ಶಬ್ದಸಮಯದ ಸಂಬಂಧದಿಂದ ಅರ್ಥಸಮಯದ ಕಥನವನ್ನು (ಶ್ರೀಮದ್ ಭಗವತ್ಕುಂದಕುಂದಾ-ಚಾರ್ಯದೇವರು) ಮಾಡಲಪೇಕ್ಷಿಸುತ್ತಾರೆ.

ಈಗ ಲೋಕ[೨] ಮತ್ತು ಅಲೋಕದ ಭೇದದ ಕಾರಣವಾಗಿ ಅರ್ಥಸಮಯದ್ದು ದ್ವಿವಿಧತೆಯಿದೆ. ಅದೇ ಪಂಚಾಸ್ತಿಕಾಯಸಮೂಹವು ಎಷ್ಟಿದೆ ಅಷ್ಟು ಲೋಕವಿದೆ. ಅದರಿಂದ ಮುಂದೆ ಅಮಾಪ ಎಂದರೆ ಅನಂತ ಅಲೋಕವಿದೆ. ಆ ಅಲೋಕವು ಅಭಾವಮಾತ್ರವಾಗಿಲ್ಲ ಆದರೆ ಪಂಚಾಸ್ತಿಕಾಯಸಮೂಹದಷ್ಟು ಕ್ಷೇತ್ರವನ್ನು ಬಿಟ್ಟುಕೊಟ್ಟು ಉಳಿದ ಅನಂತಕ್ಷೇತ್ರವುಳ್ಳ ಆಕಾಶವಿದೆ. (ಎಂದರೆ ಅಲೋಕವು ಶೂನ್ಯರೂಪವಾಗಿಲ್ಲ ಆದರೆ ಶುದ್ಧ ಆಕಾಶದ್ರವ್ಯರೂಪವಾಗಿದೆ.)

ಜೀವದ್ರವ್ಯ ಪುದ್ಗಲಕಾಯ ಧರ್ಮ ಅಧರ್ಮ ಮತ್ತದರಂತೆ ಆಕಾಶಸಹಿತ ।
ಈ ವಸ್ತುಗಳಸ್ತಿತ್ವನಿಯತ ಅನನ್ಯಮಯ ಮೇಣ್ ಅಣುಮಹಾನವಿವೆ ॥೪॥

---

೧ ಸಮವಾಯಃ ೧) ಸಮ್ + ಅವಾಯ ; ಸಮ್ಯಕ್ ಅವಾಯ ; ಸಮ್ಯಕ್ ಜ್ಞಾನ. ೨) ಸಮೂಹ - [ಈ ಪಂಚಾಸ್ತಿಕಾಯಸಂಗ್ರಹ ಶಾಸ್ತ್ರದಲ್ಲಿ ಇಲ್ಲಿ ಕಾಲದ್ರವ್ಯ - ಎಂದರೆ ಯಾವುದು ದ್ರವ್ಯವಾಗಿದ್ದರೂ ಕೂಡ ಅಸ್ತಿಕಾಯವಿಲ್ಲ ಅದನ್ನು ವಿವಕ್ಷೆಯಲ್ಲಿ ಗೌಣ ಮಾಡಿ 'ಪಂಚಾಸ್ತಿಕಾಯದ ಸಮವಾಯವು ಅದು ಸಮಯವಿದೆ'ಯೆಂದು ಹೇಳಿರುವುದರಿಂದ 'ಆರು ದ್ರವ್ಯಗಳ ಸಮವಾಯವು ಅದು ಸಮಯವಿದೆ' ಯೆಂಬ ಕಥನದ ಭಾವದೊಡನೆ ಈ ಕಥನದ ಭಾವದ ವಿರೋಧವನ್ನು ತಿಳಿದುಕೊಳ್ಳಬಾರದು ; ಕೇವಲ ವಿವಕ್ಷಾಭೇದವಿದೆಯೆಂದು ತಿಳಿದುಕೊಳ್ಳಬೇಕು. ಮತ್ತು ಇದೇ ಪ್ರಕಾರ ಇತರ ಸ್ಥಾನಗಳಲ್ಲೂ ಕೂಡ ವಿವಕ್ಷೆಯನ್ನು ತಿಳಿದುಕೊಂಡು ಅವಿರುದ್ಧವಾದ ಅರ್ಥವನ್ನು ತಿಳಿದುಕೊಳ್ಳಬೇಕು.]

೨ ಲೋಕ್ಯಂತೇ ದೃಶ್ಯಂತೇ ಜೀವಾದಿಪದಾರ್ಥಾ ಯತ್ರ ಸ ಲೋಕಃ ಎಂದರೆ ಎಲ್ಲಿ ಜೀವ ಮೊದಲಾದ ಪದಾರ್ಥಗಳು ಕಂಡು ಬರುತ್ತವೆ ಅದು ಲೋಕವಿದೆ.

अत्र पंचास्तिकायानाम् विशेषसंज्ञा सामान्यविशेषास्तित्वं कायत्वं चोक्तम् । तत्र जीवाःपुद्गलाः धर्माधर्मौ आकाशमिति तेषाम् विशेषसंज्ञा अन्वर्थाः प्रत्येयाः । सामान्य विशेषास्तित्वं च तेषामुत्पादव्ययध्रौव्यमय्यां सामान्यविशेषसत्तायाम् नियतत्वाद्व्यवस्थित-त्वादवसेयम् । अस्तित्वे नियतानामपि न तेषामन्यमयत्वम्, यशस्ते सर्वदैवानन्यमया आत्मनिर्वृत्ताः । अनन्यमयत्वेऽपि तेषामस्तित्वनियतत्वं नयप्रयोगात् । द्वौ हि नयौ भगवता प्रणीतौ-द्रव्यार्थिकः पर्यायार्थिकश्च । तत्र न खल्वेकनयायत्ता देशना किंतु तदुभयायत्ता । ततः पर्यायार्थादेशादस्तित्वे स्वतः कथंचिद्भिन्नेऽपि व्यवस्थिताः द्रव्यार्थादेशात्स्वयमेव संतः सतोऽनन्यमया भवंतीति । कायत्वमपि तेषामणुमहत्त्वात् । अणवोऽत्र प्रदेशा

ಗಾಥೆ - ೪

ಗಾಥಾರ್ಥ :- [ಜೀವಾ] ಜೀವ, [ಪೋಗ್ಗಲಕಾಯಾ] ಪುದ್ಗಲಕಾಯ, [ಧಮ್ಮಾಧಮ್ಮಾ] ಧರ್ಮ, ಅಧರ್ಮ [ತಹೇವ] ಹಾಗೂ [ಆಗಾಸಂ] ಆಕಾಶ ಇವು [ಅತ್ಥಿತ್ತಮ್ಹಿ ಣಿಯದಾ] ಅಸ್ತಿತ್ವದಲ್ಲಿ ನಿಯತ [ಅಣಣ್ಣಮಇಯಾ] (ಅಸ್ತಿತ್ವದಿಂದ) ಅನನ್ಯಮಯ [ಯ] ಮತ್ತು [ಅಣುಮಹಂತಾ] ಅಣುಮಹಾನ್[೧] (ಪ್ರದೇಶದಲ್ಲಿ ದೊಡ್ಡದು) ಇವೆ.

ಟೀಕೆ :- ಇಲ್ಲಿ (ಈ ಗಾಥೆಯಲ್ಲಿ) ಐದು ಅಸ್ತಿಕಾಯಗಳ ವಿಶೇಷಸಂಜ್ಞೆ, ಸಾಮಾನ್ಯವಿಶೇಷ ಅಸ್ತಿತ್ವ ಹಾಗೂ ಕಾಯತ್ವವನ್ನು ಹೇಳಿದೆ.

ಅಲ್ಲಿ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ - ಇವು ಅವುಗಳ ವಿಶೇಷ ಸಂಜ್ಞೆಗಳು ಅನ್ವರ್ಥ[೨]ವೆಂದು ತಿಳಿಯಬೇಕು.

ಅವು ಉತ್ಪಾದ-ವ್ಯಯ-ಧ್ರೌವ್ಯಮಯವಾದ ಸಾಮಾನ್ಯ ವಿಶೇಷ ಸತ್ತಾದಲ್ಲಿ ನಿಯತ-ವ್ಯವಸ್ಥಿತ (ನಿಶ್ಚಿತ ವಿದ್ಯಮಾನ)ವಾಗಿರುವುದರಿಂದ ಅವುಗಳಿಗೆ ಸಾಮಾನ್ಯ ವಿಶೇಷ-ಅಸ್ತಿತ್ವವೂ ಇದೆಯೆಂದು ನಿರ್ಣಯ ಮಾಡಬೇಕಾಗುವುದು. ಅವು ಅಸ್ತಿತ್ವದಲ್ಲಿ ನಿಯತವಾಗಿದ್ದರೂ ಕೂಡ (ಯಾವ ಪ್ರಕಾರ ಪಾತ್ರೆಯಲ್ಲಿ ಇರುವಂಥ ತುಪ್ಪವು ಪಾತ್ರೆಯಿಂದ ಅನ್ಯಮಯವಾಗಿದೆ ಅದೇ ಪ್ರಕಾರ) ಅಸ್ತಿತ್ವದಿಂದ ಅನ್ಯಮಯವಾಗಿಲ್ಲ- ಏಕೆಂದರೆ ಅವು ಯಾವಾಗಲೂ ತಮ್ಮಿಂದ ನಿಷ್ಪನ್ನ (ಎಂದರೆ ತಮ್ಮಿಂದ ಸತ್) ವಾಗಿರುವ ಕಾರಣ (ಅಸ್ತಿತ್ವದಿಂದ) ಅನನ್ಯಮಯವಾಗಿವೆ. (ಯಾವ ಪ್ರಕಾರ ಬೆಂಕಿಯು ಉಷ್ಣತೆಯಿಂದ ಅನನ್ಯಮಯವಿದೆ ಅದೇ ಪ್ರಕಾರ) ''ಅಸ್ತಿತ್ವದಿಂದ ಅನನ್ಯಮಯ''ವಾಗಿದ್ದರೂ ಕೂಡ ಅವುಗಳ ''ಅಸ್ತಿತ್ವದಲ್ಲಿ ನಿಯತತೆಯು'' ನಯಪ್ರಯೋಗದಿಂದಿದೆ. ಭಗವಂತರು ದ್ರವ್ಯಾರ್ಥಿಕ ಮತ್ತು ಪರ್ಯಾಯಾರ್ಥಿಕವೆಂದು ಎರಡು ನಯಗಳನ್ನು ಹೇಳಿದ್ದಾರೆ. ಅಲ್ಲಿ ಕಥನವು ಒಂದು ನಯದ ಆಧೀನವಿರುವುದಿಲ್ಲ ಆದರೆ ಎರಡೂ ನಯಗಳ ಆಧೀನವಾಗಿರುತ್ತದೆ. ಆದುದರಿಂದ ಅವು ಪರ್ಯಾಯಾರ್ಥಿಕ ಕಥನದಿಂದ ಅವು ತಮ್ಮಿಂದ ಕಥಂಚಿತ್ ಭಿನ್ನವೂ ಇರುವಂಥ ಅಸ್ತಿತ್ವದಲ್ಲಿ ವ್ಯವಸ್ಥಿತ (ನಿಶ್ಚಿತ ಸ್ಥಿರ) ವಿವೆ ಮತ್ತು ದ್ರವ್ಯಾರ್ಥಿಕ ಕಥನದಿಂದ ತಾವಾಗಿಯೇ ಸತ್ (-ವಿದ್ಯಮಾನ) ವಾಗಿರುವ ಕಾರಣ ಅಸ್ತಿತ್ವದಿಂದ ಅನನ್ಯಮಯವಾಗಿವೆ.

---

೧ ಅಣುಮಹಾನ = (೧) ಪ್ರದೇಶದಲ್ಲಿ ದೊಡ್ಡದು ಎಂದರೆ ಅನೇಕ ಪ್ರದೇಶಿ; (೨) ಏಕಪ್ರದೇಶಿ (ವ್ಯಕ್ತ-ಅಪೇಕ್ಷೆಯಿಂದ) ಹಾಗೂ ಅನೇಕ ಪ್ರದೇಶಿ (ಶಕ್ತಿ-ಅಪೇಕ್ಷೆಯಿಂದ),

೨ ಅನ್ವರ್ಥ = ಅರ್ಥದ ಅನುಸರಣೆ ಮಾಡುತ್ತಿರುವ ; ಅರ್ಥಾನುಸಾರ. (ಐದು ಅಸ್ತಿಕಾಯಗಳ ಹೆಸರುಗಳು ಅವುಗಳ ಅರ್ಥಾನುಸಾರವಿವೆ.)

ಮೂರ್ತಾऽಮೂರ್ತಾಶ್ಚ ನಿರ್ವಿಭಾಗಾಂಶಾಸ್ತೈಃ ಮಹಾಂತೋऽಣುಮಹಾಂತಃ ಪ್ರದೇಶಪ್ರಚಯಾತ್ಮಕಾಃ । ಇತಿ ಸಿದ್ಧಂ ತೇಷಾಂ ಕಾಯತ್ವಮ್ । ಅಣುಭ್ಯಾಂ ಮಹಾಂತ ಇತಿ ವ್ಯುತ್ಪತ್ತ್ಯಾ ದ್ವ್ಯಣುಕಪುದ್ಗಲಸ್ಕಂಧಾನಾಮಪಿ ತಥಾವಿಧತ್ವಮ್ । ಅಣವಶ್ಚ ಮಹಾಂತಶ್ಚ ವ್ಯಕ್ತಿಶಕ್ತಿ- ರೂಪಾಭ್ಯಾಮಿತಿ ಪರಮಾಣೂನಾಮೇಕಪ್ರದೇಶಾತ್ಮಕತ್ವೇऽಪಿ ತತ್ಸಿದ್ಧಿಃ । ವ್ಯಕ್ತ್ಯಪೇಕ್ಷಯಾ ಶಕ್ತ್ಯಪೇಕ್ಷಯಾ ಚ ಪ್ರದೇಶ ಪ್ರಚಯಾತ್ಮಕಸ್ಯ ಮಹತ್ತ್ವಸ್ಯಾಭಾವಾತ್ಕಾಲಾಣೂ-ನಾಮಸ್ತಿತ್ವನಿಯತತ್ವೇऽಪ್ಯಕಾಯತ್ವಮನೇನೈವ ಸಾಧಿತಮ್ । ಅತ ಏವ ತೇಷಾಮಸ್ತಿಕಾಯಪ್ರಕರಣೇ ಸತಾಮಪ್ಯನುಪಾದಾನಮಿತಿ ।

ಅವಕ್ಕೆ ಕಾಯತ್ವವೂ ಇದೆ ಏಕೆಂದರೆ ಅಣುಮಹಾನವಿದೆ. ಇಲ್ಲಿ ಅಣು ಎಂದರೆ ಪ್ರದೇಶ-ಮೂರ್ತ ಮತ್ತು ಅಮೂರ್ತ ನಿರ್ವಿಭಾಗ (ಎಲ್ಲಕ್ಕಿಂತ ಚಿಕ್ಕ) ಅಂಶ; 'ಅವುಗಳ ಮುಖಾಂತರ (ಬಹುಪ್ರದೇಶಗಳ ಮುಖಾಂತರ) ಮಹಾನವಿರುವುದು' ಅದು ಅಣು ಮಹಾನವಿದೆ; ಎಂದರೆ ಪ್ರದೇಶ ಪ್ರಚಯಾತ್ಮಕ (ಪ್ರದೇಶಗಳ ಸಮೂಹಮಯ) ವಿರುವುದು ಅದು ಅಣುಮಹಾನವಿದೆ. ಹೀಗೆ ಅವಕ್ಕೆ (ಉಪರೋಕ್ತ ಐದು ದ್ರವ್ಯಗಳಿಗೆ) ಕಾಯತ್ವವು ಸಿದ್ಧವಾಯಿತು. (ಮೇಲೆ ಯಾವ ಅಣುಮಹಾನದ ವ್ಯುತ್ಪತ್ತಿ ಮಾಡಿದೆ ಅದರಲ್ಲಿ ಅಣುಗಳ ಎಂದರೆ ಪ್ರದೇಶಗಳ ಕುರಿತು ಬಹುವಚನದ ಉಪಯೋಗ ಮಾಡಿದೆ ಮತ್ತು ಸಂಸ್ಕೃತ ಭಾಷೆಯ ನಿಯಮಕ್ಕನುಸರಿಸಿ ಬಹುವಚನದಲ್ಲಿ ದ್ವಿವಚನದ ಸಮಾವೇಶ ವಾಗುವುದಿಲ್ಲವಾದ್ದರಿಂದ ಈಗ ವ್ಯುತ್ಪತ್ತಿಯಲ್ಲಿ ಸ್ವಲ್ಪ ಭಾಷೆಯಪರಿವರ್ತನ ಮಾಡಿ ದ್ವಿ-ಅಣುಕ ಸ್ಕಂಧಗಳಿಗೂ ಕೂಡ ಅಣುಮಹಾನವೆಂದು ತೋರಿಸಿಕೊಟ್ಟು ಅವುಗಳ ಕಾಯತ್ವವನ್ನು ಸಿದ್ಧಮಾಡಲಾಗುತ್ತದೆ;) 'ಎರಡು ಅಣುಗಳ (ಎರಡು ಪ್ರದೇಶಗಳ) ಮುಖಾಂತರ ಮಹಾನವಿರುವುದು' ಅದು ಅಣುಮಹಾನವೆಂಬ ವ್ಯುತ್ಪತ್ತಿಯಿಂದ ದ್ವಿ-ಅಣುಕ ಪುದ್ಗಲ ಸ್ಕಂಧಗಳಿಗೂ ಕೂಡ (ಅಣು ಮಹಾನತೆಯಿರುವುದರಿಂದ) ಕಾಯತ್ವವಿದೆ. (ಈಗ ಪರಮಾಣುಗಳಿಗೂ ಅಣುಮಹಾನತೆಯು ಯಾವ ಪ್ರಕಾರವಿದೆ ಅದನ್ನು ತಿಳಿಸಿಕೊಟ್ಟು ಪರಮಾಣುಗಳಿಗೂ ಕಾಯತ್ವವನ್ನು ಸಿದ್ಧ ಮಾಡಲಾಗುತ್ತದೆ;) ವ್ಯಕ್ತ ಮತ್ತು ಶಕ್ತಿರೂಪದಿಂದ 'ಅಣು ಹಾಗೂ ಮಹಾನ' ವಿರುವುದರಿಂದ (ಎಂದರೆ ಪರಮಾಣುವು ವ್ಯಕ್ತ ರೂಪದಿಂದ ಏಕಪ್ರದೇಶಿ ಮತ್ತು ಶಕ್ತಿರೂಪದಿಂದ ಅನೇಕ ಪ್ರದೇಶಿಯಾಗಿರುವ ಕಾರಣ) ಪರಮಾಣುಗಳಿಗೂ, ಅವಕ್ಕೆ ಏಕಪ್ರದೇಶಾತ್ಮಕತನವಿದ್ದರೂ ಕೂಡ, (ಅಣುಮಹಾನತನವು ಸಿದ್ಧವಾಗುವುದರಿಂದ ಕಾಯತ್ವವು ಸಿದ್ಧವಾಗುತ್ತದೆ.ಕಾಲಾಣುಗಳಿಗೆ ವ್ಯಕ್ತ-ಅಪೇಕ್ಷೆಯಿಂದ ಹಾಗೂ ಶಕ್ತಿ-ಅಪೇಕ್ಷೆಯಿಂದ ಪ್ರದೇಶ ಪ್ರಚಯಾತ್ಮಕವಾದ ಮಹಾನತನದ ಅಭಾವವಿರುವುದರಿಂದ, ಒಂದು ವೇಳೆ ಅವು ಅಸ್ತಿತ್ವದಲ್ಲಿ ನಿಯತವಿದ್ದರೂ, ಅವಕ್ಕೆ ಅಕಾಯತ್ವ ವಿದೆಯೆಂಬುದು ಇದರಿಂದಲೇ (ಈ ಕಥನದಿಂದಲೇ) ಸಿದ್ಧವಾಯಿತು, ಒಂದು ವೇಳೆ ಅವು ಸತ್ (ವಿದ್ಯಮಾನ) ವಿದ್ದರೂ ಅವನ್ನು ಅಸ್ತಿಕಾಯದ ಪ್ರಕರಣದಲ್ಲಿ ಸ್ವೀಕರಿಸಲಾಗಿಲ್ಲ.

ಭಾವಾರ್ಥ :- ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶವೆಂದು ಐದು ಅಸ್ತಿಕಾಯಗಳ ಹೆಸರುಗಳಿವೆ. ಈ ಹೆಸರುಗಳು ಅವುಗಳ ಅರ್ಥಾನುಸಾರವಿದೆ.

ಈ ಐದೂ ದ್ರವ್ಯಗಳು ಪರ್ಯಾಯಾರ್ಥಿಕನಯದಿಂದ ತಮ್ಮಿಂದ ಕಥಂಚಿತ್ ಭಿನ್ನವಾದಂಥ ಅಸ್ತಿತ್ವದಲ್ಲಿ ವಿದ್ಯಮಾನವಿವೆ ಮತ್ತು ದ್ರವ್ಯಾರ್ಥಿಕನಯದಿಂದ ಅಸ್ತಿತ್ವದಿಂದ ಅನನ್ಯವಿವೆ.

ಪುನಃ ಈ ಐದೂ ದ್ರವ್ಯಗಳು ಕಾಯತ್ವವುಳ್ಳವುಗಳಾಗಿವೆ ಏಕೆಂದರೆ ಅವು ಅಣುಮಹಾನವಿವೆ. ಅವು ಯಾವ ಪ್ರಕಾರ ಅಣುಮಹಾನವಿವೆಯೆಂಬುದನ್ನು ಹೇಳುತ್ತಾರೆ - 'ಅಣುಮಹಾಂತಃ'ದ ವ್ಯುತ್ಪತ್ತಿಯು ಮೂರು ಪ್ರಕಾರದಿಂದಿದೆ. ೧) ಅಣುಭಿಃ ಮಹಾಂತಃ ಅಣುಮಹಾಂತಃ ಎಂದರೆ ಯಾವವು ಬಹು ಪ್ರದೇಶಗಳ ಮುಖಾಂತರ

ಜೇಸಿಂ ಅತ್ಥಿ ಸಹಾಓ ಗುಣೇಹಿಂ ಸಹ ಪಜ್ಜಏಹಿಂ ವಿವಿಹೇಹಿಂ ।
ತೇ ಹೋಂತಿ ಅತ್ಥಿಕಾಯಾ ಣಿಪ್ಪಣ್ಣಂ ಜೇಹಿಂ ತೇಲ್ಲೋಕ್ಕಂ ॥೫॥

ಯೇಷಾಮಸ್ತಿ ಸ್ವಭಾವಃ ಗುಣೈಃ ಸಹ ಪರ್ಯಯೈರ್ವಿವಿಧೈಃ ।
ತೇ ಭವಂತ್ಯಸ್ತಿಕಾಯಾಃ ನಿಷ್ಪನ್ನಂ ಯೈಸ್ತ್ರಿಲೋಕ್ಯಮ್ ॥೫॥

(ಎರಡಕ್ಕಿಂತ ಹೆಚ್ಚು ಪ್ರದೇಶಗಳ ಮುಖಾಂತರ) ವಿಶಾಲವಿವೆ ಅವು ಅಣುಮಹಾನವಿವೆ. ಈ ವ್ಯುತ್ಪತ್ತಿಗೆ ಅನುಸರಿಸಿ ಜೀವ, ಧರ್ಮ ಮತ್ತು ಅಧರ್ಮಗಳು ಅಸಂಖ್ಯ ಪ್ರದೇಶಿಯಾಗಿರುವುದರಿಂದ ಅಣುಮಹಾನವಿವೆ; ಆಕಾಶವು ಅನಂತಪ್ರದೇಶಿಯಾಗಿರುವುದರಿಂದ ಅಣುಮಹಾನವಿದೆ; ಮತ್ತು ತ್ರಿ-ಅಣುಕ ಸ್ಕಂಧದಿಂದಹಿಡಿದು ಅನಂತಾಣುಕ ಸ್ಕಂಧದವರೆಗೆ ಎಲ್ಲ ಸ್ಕಂಧಗಳು ಬಹು ಪ್ರದೇಶಿಯಾಗಿರುವುದರಿಂದ ಅಣು ಮಹಾನವಿವೆ. ೨) ಅಣುಭ್ಯಾಮ್ ಮಹಾಂತಃ ಅಣುಮಹಾಂತಃ ಎಂದರೆ ಯಾವವು ಎರಡು ಪ್ರದೇಶಗಳ ಮುಖಾಂತರ ದೊಡ್ಡವಿವೆ ಅವು ಅಣುಮಹಾನವಿವೆ. ಈ ವ್ಯುತ್ಪತ್ತಿಗೆ ಅನುಸರಿಸಿ ದ್ವಿ-ಅಣುಕ ಸ್ಕಂಧಗಳು ಅಣುಮಹಾನವಿವೆ. ೩) ಅಣುವಶ್ಚಮಹಾಂತಶ್ಚ ಅಣುಮಹಾಂತಃ ಎಂದರೆ ಯಾವವು ಅಣುರೂಪವೂ (-ಏಕ ಪ್ರದೇಶಿಯೂ) ಇವೆ ಮತ್ತು ಮಹಾನವೂ (ಅನೇಕ ಪ್ರದೇಶಿಯೂ) ಇವೆ ಅವು ಅಣುಮಹಾನವಿವೆ. ಈ ವ್ಯುತ್ಪತ್ತಿಗೆ ಅನುಸರಿಸಿ ಪರಮಾಣುಗಳು ಅಣುಮಹಾನವಿವೆ; ಏಕೆಂದರೆ ವ್ಯಕ್ತ-ಅಪೇಕ್ಷೆಯಿಂದ ಅವು ಏಕ ಪ್ರದೇಶಿಯಿವೆ ಮತ್ತು ಶಕ್ತಿ-ಅಪೇಕ್ಷೆಯಿಂದ ಅನೇಕ ಪ್ರದೇಶಿಯೂ (ಉಪಚಾರದಿಂದ) ಇವೆ. ಈ ಪ್ರಕಾರವಾಗಿ ಮೇಲೆ ಹೇಳಿದ ಐದೂ ದ್ರವ್ಯಗಳು ಅಣುಮಹಾನವಾಗಿರುವುದರಿಂದ ಕಾಯತ್ವವುಳ್ಳವುಗಳಿವೆಯೆಂಬುದು ಸಿದ್ಧವಾಯಿತು.

ಕಾಲಾಣುವಿಗೆ ಅಸ್ತಿತ್ವವಿದೆ ಆದರೆ ಯಾವುದೇ ಪ್ರಕಾರದಿಂದಲೂ ಕಾಯತ್ವವಿಲ್ಲ, ಆದುದರಿಂದ ಅದು ದ್ರವ್ಯವಿದೆ ಆದರೆ ಅಸ್ತಿಕಾಯವಿಲ್ಲ.

ಗಾಥೆ - ೫

ಗಾಥಾರ್ಥ :- [ಜೇಸಿಂ] ಯಾವುದಕ್ಕೆ [ವಿವಿಹೇ ಹಿಂ] ವಿವಿಧ [ಗುಣೇಹಿಂ] ಗುಣಗಳು ಮತ್ತು [ಪಜ್ಜಏಹಿಂ] ಪರ್ಯಾಯಗಳು[೧] (-ಪ್ರವಾಹಕ್ರಮದ ಹಾಗೂ ವಿಸ್ತಾರಕ್ರಮದ ಅಂಶಗಳ) [ಸಹ] ಜೊತೆಯಲ್ಲಿ [ಸಹಾಓ] ತಮ್ಮತನ [ಅತ್ಥಿ] ಇದೆ [ತೇ] ಅವು [ಅತ್ಥಿಕಾಯಾ ಹೋಂತಿ] ಅಸ್ತಿ ಕಾಯಗಳಿವೆ [ಜೇ ಹಿಂ] ಏಕೆಂದರೆ ಅವುಗಳಿಂದ [ತೇಲ್ಲೋಕಂ] ಮೂರು ಲೋಕಗಳು [ಣಿಪ್ಪಣ್ಣಂ] ನಿಷ್ಪನ್ನವಿವೆ.

ವಿವಿಧಗುಣಮೇಣ್ ಪರ್ಯಾಯಗಳೊಡನೆ ಯಾವವುಗಳಿಗನನ್ಯತೆಯಿದೆ ।
ಅವು ಅಸ್ತಿಕಾಯವೆಂದರಿವುದವುಗಳಿಂ ನಿಷ್ಪನ್ನವಿವೆ ಮೂರು ಲೋಕಗಳು ॥೫॥

---

೧ ಪರ್ಯಾಯಗಳು - (ಪ್ರವಾಹಕ್ರಮದ ಹಾಗೂ ವಿಸ್ತಾರಕ್ರಮದ) ನಿರ್ವಿಭಾಗ ಅಂಶಗಳು. [ಪ್ರವಾಹಕ್ರಮದ ಅಂಶಗಳಂತೂ ಪ್ರತಿಯೊಂದು ದ್ರವ್ಯಕ್ಕೆ ಇರುತ್ತವೆ. ಆದರೆ ವಿಸ್ತಾರಕ್ರಮದ ಅಂಶಗಳು ಅಸ್ತಿಕಾಯಕ್ಕೇನೇ ಇರುತ್ತವೆ.]

ಅತ್ರ ಪಂಚಾಸ್ತಿಕಾಯಾನಾಮಸ್ತಿತ್ವಸಂಭವಪ್ರಕಾರಃ ಕಾಯತ್ವಸಂಭವಪ್ರಕಾರಶ್ಚೋಕ್ತಃ । ಅಸ್ತಿಹ್ಯಾಸ್ತಿಕಾಯಾನಾಂ ಗುಣೈಃ ಪರ್ಯಾಯೈಶ್ಚ ವಿವಿಧೈ[೧]ಃ ಸಹ ಸ್ವಭಾವೋ ಆತ್ಮಭಾವೋ೨ನನ್ಯತ್ವಮ್ । ವಸ್ತುನೋ ವಿಶೇಷಾ ಹಿ ವ್ಯತಿರೇಕಿಣಃಪರ್ಯಾಯಾ ಗುಣಾಸ್ತು ತ ಏವಾನ್ವಯಿನಃ । ತತ ಏಕೇನ ಪರ್ಯಾಯೇಣ ಪ್ರಲೀಯಮಾನಸ್ಯಾನ್ಯೇನೋಪಜಾಯಮಾನಸ್ಯಾನ್ವಯಿನಾ ಗುಣೇನ ಧ್ರೌವ್ಯಂ ಬಿಭ್ರಾಣಸ್ಯೈಕಸ್ಯಾಪಿ ವಸ್ತುನಃ ಸಮುಚ್ಛೇದೋತ್ಪಾದಧ್ರೌವ್ಯಲಕ್ಷಣಮಸ್ತಿತ್ವಮುಪಪದ್ಯತ ಏವ । ಗುಣಪರ್ಯಾಯೈಃ ಸಹ ಸರ್ವಥಾನ್ಯತ್ವೇ ತ್ವನ್ಯೋ ವಿನಶ್ಯತ್ಯನ್ಯಃ ಪ್ರಾದುರ್ಭವತ್ಯನ್ಯೋ ಧ್ರುವತ್ವಮಾಲಂಬತ ಇತಿ ಸರ್ವಂ ವಿಪ್ಲವತೇ । ತತಃ ಸಾಧ್ವಸ್ತಿತ್ವಸಂಭವಪ್ರಕಾರಕಥನಮ್ ।

ಟೀಕೆ :- ಇಲ್ಲಿ ಐದು ಅಸ್ತಿಕಾಯಗಳಿಗೆ ಅಸ್ತಿತ್ವವು ಯಾವ ಪ್ರಕಾರವಿದೆ ಮತ್ತು ಕಾಯತ್ವವು ಯಾವ ಪ್ರಕಾರವಿದೆ ಅದನ್ನು ಹೇಳಿದ್ದಾರೆ.

ವಾಸ್ತವದಲ್ಲಿ ಅಸ್ತಿಕಾಯಗಳಿಗೆ ವಿವಿಧ ಗುಣಗಳೊಡನೆ ಮತ್ತು ಪರ್ಯಾಯಗಳೊಡನೆ ಸ್ವತನ-ತನ್ನತನ-ಅನನ್ಯತನವಿದೆ. ವಸ್ತುವಿನ ವ್ಯತಿರೇಕ[೧] ವಿಶೇಷಗಳು ಅವು ಪರ್ಯಾಯಗಳಿವೆ ಮತ್ತು ಅನ್ವಯ[೨] ವಿಶೇಷಗಳು ಅವು ಗುಣಗಳಿವೆ. ಆದುದರಿಂದ ಒಂದು ಪರ್ಯಾಯದಿಂದ ಉತ್ಪನ್ನವಾಗುವಂಥ ಮತ್ತು ಅನ್ವಯ ಗುಣದಿಂದ ಧ್ರುವವಿರುವಂಥ ಒಂದೇ ವಸ್ತುವಿಗೆ ವ್ಯಯ[೩] - ಉತ್ಪಾದ-ಧ್ರೌವ್ಯ ಲಕ್ಷಣ ಅಸ್ತಿತ್ವವು ಘಟಿತವೇ ಆಗುತ್ತದೆ ಮತ್ತು ಒಂದು ವೇಳೆ ಗುಣಗಳ ಹಾಗೂ ಪರ್ಯಾಯಗಳೊಡನೆ (ವಸ್ತುವಿಗೆ) ಸರ್ವಥಾ ಅನ್ಯತ್ವವಾದರೆ ಆಗಂತೂ ಬೇರೆ ಯಾವುದೇ ಒಂದು ವಿನಾಶಕ್ಕೆ ಪ್ರಾಪ್ತವಾಗಬಹುದು, ಬೇರೆ ಯಾವುದೇ ಒಂದು ಪ್ರಾದುರ್ಭಾವಕ್ಕೆ (ಉತ್ಪಾದಕ್ಕೆ) ಪ್ರಾಪ್ತವಾಗಬಹುದು ಮತ್ತು ಬೇರೆ ಯಾವುದೇ ಒಂದು ಧ್ರುವವಿರಬಹುದು - ಈ ಪ್ರಕಾರ ಎಲ್ಲವೂ ವಿಪ್ಲವಕ್ಕೆ[೪] ಪ್ರಾಪ್ತವಾಗಿಬಿಡಬಹುದು. ಆದುದರಿಂದ (ಐದು ಅಸ್ತಿಕಾಯಗಳಿಗೆ) ಅಸ್ತಿತ್ವವು ಯಾವ ಪ್ರಕಾರವಿದೆಯೆಂಬುದರ ಸಂಬಂಧದಲ್ಲಿ ಈ (ಉಪರೋಕ್ತ) ಕಥನವು ಸತ್ಯ-ಯೋಗ್ಯ-ನ್ಯಾಯಯುಕ್ತವಿದೆ.

ಈಗ (ಅವಕ್ಕೆ) ಕಾಯತ್ವವು ಯಾವ ಪ್ರಕಾರವಿದೆಯೆಂಬುದರ ಉಪದೇಶ ಮಾಡಲಾಗುತ್ತದೆ - ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಈ ಪದಾರ್ಥಗಳು ಅವಯವಿಯಿವೆ[೫] ಪ್ರದೇಶವೆಂಬ ಹೆಸರಿನ ಅವುಗಳ ಯಾವ

---

೧. ವ್ಯತಿರೇಕ ಭೇದ ; ಒಂದರದು ಇನ್ನೊಂದರ ರೂಪವಾಗದಿರುವುದು ; 'ಇದು ಅದು ಅಲ್ಲ' - ಎಂಬ ಜ್ಞಾನದ ನಿಮಿತ್ತಭೂತ ಭಿನ್ನರೂಪತೆ. [ಒಂದು ಪರ್ಯಾಯವು ಇನ್ನೊಂದು ಪರ್ಯಾಯರೂಪವಾಗದಿರುವುದರಿಂದ ಪರ್ಯಾಯಗಳಲ್ಲಿ ಪರಸ್ಪರ ವ್ಯತಿರೇಕವಿದೆ; ಆದುದರಿಂದ ಪರ್ಯಾಯಗಳು ದ್ರವ್ಯದ ವ್ಯತಿರೇಕ (ವ್ಯತಿರೇಕವುಳ್ಳ) ವಿಶೇಷಗಳಿವೆ.]

೨. ಅನ್ವಯ ಏಕರೂಪತೆ ; ಸಾದೃಶ್ಯತೆ ; 'ಇದು ಅದೇ ಇದೆ' - ಎಂಬ ಜ್ಞಾನದ ಕಾರಣಭೂತ ಏಕರೂಪತೆ, [ಗುಣಗಳಲ್ಲಿ ಯಾವಾಗಲೂ ಸಾದೃಶ್ಯತೆಯಿರುತ್ತದೆ ಆದುದರಿಂದ ಅವುಗಳಲ್ಲಿ ಯಾವಾಗಲೂ ಅನ್ವಯವಿದೆ, ಆದ್ದರಿಂದ ಗುಣಗಳು ದ್ರವ್ಯದ ಅನ್ವಯ ವಿಶೇಷ (ಅನ್ವಯವುಳ್ಳ ಭೇದ)ಗಳಿವೆ.]

೩. ಅಸ್ತಿತ್ವದ ಲಕ್ಷಣವು ಅಥವಾ ಸ್ವರೂಪವು ವ್ಯಯ-ಉತ್ಪಾದ-ಧ್ರೌವ್ಯವಿದೆ.

೪. ವಿಪ್ಲವ = ಗೊಂದಲ ; ತಿರುವು ಮುರುವು ; ಅಸ್ತವ್ಯಸ್ತ ; ವಿರೋಧ.

೫. ಅವಯವಿ ಅವಯವವುಳ್ಳ ; ಸಾವಯವ ; ಅಂಶವುಳ್ಳ ; ಅಂಶಿ ; ಯಾವುದಕ್ಕೆ ಅವಯವ (ಎಂದರೆ ಒಂದಕ್ಕಿಂತ ಹೆಚ್ಚು ಪ್ರದೇಶ)ವಿವೆ ಅಂಥವು

ಕಾಯತ್ವಸಂಭವಪ್ರಕಾರಸ್ತ್ವಯಮುಪದಿಶ್ಯತೇ । ಅವಯವಿನೋ ಹಿ ಜೀವಪುದ್ಗಲಧರ್ಮಾಧರ್ಮಾಕಾಶ-ಪದಾರ್ಥಾಸ್ತೇಷಾಮವಯವಾ ಅಪಿ ಪ್ರದೇಶಾಖ್ಯಾಃ ಪರಸ್ಪರವ್ಯತಿರೇಕಿತ್ವಾತ್ಪರ್ಯಾಯಾಃ ಉಚ್ಯಂತೇ । ತೇಷಾಂ ತೈಃ ಸಹಾನನ್ಯತ್ವೇಕಾಯತ್ವಸಿದ್ಧಿರುಪಪತ್ತಿಮತೀ । ನಿರವಯವಸ್ಯಾಪಿ ಪರಮಾಣೋಃ ಸಾವಯವತ್ವಶಕ್ತಿಸದ್ಭಾವಾತ್ ಕಾಯತ್ವಸಿದ್ಧಿರನಪವಾದಾ । ನ ಚೈತದಾಶಂಕ್ಯಮ್ ಪುದ್ಗಲಾದನ್ಯೇಷಾಮಮೂರ್ತತ್ವಾದವಿಭಾಜ್ಯಾನಾಂ ಸಾವಯವತ್ವಕಲ್ಪನಮನ್ಯಾಯ್ಯಮ್ । ದೃಶ್ಯತ ಏವಾವಿಭಾಜ್ಯೇಽಪಿ ವಿಹಾಯಸೀದಂ ಘಟಾಕಾಶಮಿದಮ-ಘಟಾಕಾಶಮಿತಿ ವಿಭಾಗಕಲ್ಪನಮ್ । ಯದಿ ತತ್ರ ವಿಭಾಗೋ ನ ಕಲ್ಪೇತ ತದಾ ಯದೇವ ಘಟಾಕಾಶಂ ತದೇವಾಘಟಾಕಾಶಂ ಸ್ಯಾತ್ । ನ ಚ ತದಿಷ್ಟಮ್ । ತತಃ ಕಾಲಾಣುಭ್ಯೋಽನ್ಯತ್ರ ಸರ್ವೇಷಾಂ ಕಾಯತ್ವಾಖ್ಯಂ ಸಾವಯವತ್ವಮವಸೇಯಮ್ ।

ಅವಯವಗಳಿವೆ ಅವೇ ಪರಸ್ಪರ ವ್ಯತಿರೇಕವುಳ್ಳವುಗಳಾಗಿರುವುದರಿಂದ ಪರ್ಯಾಯಗಳೆಂದು[೧] ಕರೆಯಿಸಿಕೊಳ್ಳುತ್ತವೆ. ಅವುಗಳೊಡನೆ ಆ (ಐದು) ಪದಾರ್ಥಗಳಿಗೆ ಅನನ್ಯತನವಿರುವುದರಿಂದ ಕಾಯತ್ವದ ಸಿದ್ಧಿಯು ಸಂಭವಿಸುತ್ತದೆ. ಪರಮಾಣುವು (ವ್ಯಕ್ತ-ಅಪೇಕ್ಷೆಯಿಂದ) ನಿರವಯವ[೨]ವಾಗಿದ್ದರೂ ಕೂಡ ಅವಕ್ಕೆ ಸಾವಯವತನದ ಶಕ್ತಿಯ ಸದ್ಭಾವವಿರುವುದರಿಂದ ಕಾಯತ್ವಸಿದ್ಧಿಯು ನಿರಪವಾದ[೩] ವಿದೆ. ಅಲ್ಲಿ ಪುದ್ಗಲವನ್ನು ಹೊರತುಪಡಿಸಿ ಇತರ ಪದಾರ್ಥಗಳು ಅಮೂರ್ತತೆಯ ಕಾರಣ ಅವಿಭಾಜ್ಯ[೪]ವಾಗಿರುವುದರಿಂದ ಅವಕ್ಕೆ ಸಾವಯವತನದ ಕಲ್ಪನೆಯು ನ್ಯಾಯವಿರುದ್ಧ (ಅನುಚಿತ)ವಿದೆಯೆಂಬ ಆಶಂಕೆ ಮಾಡುವುದು ಯೋಗ್ಯವಲ್ಲ. ಆಕಾಶವು ಅವಿಭಾಜ್ಯವಿದ್ದರೂ ಅದರಲ್ಲಿ 'ಇದು ಘಟಾಕಾಶವಿದೆ. ಇದು ಅಘಟಾಕಾಶ (ಪಟಾಕಾಶ)ವಿದೆ'ಯೆಂಬ ವಿಭಾಗ ಕಲ್ಪನೆಯು ದೃಷ್ಟಿಗೋಚರವಾಗೇ ಆಗುತ್ತದೆ. ಒಂದು ವೇಳೆ ಅಲ್ಲಿ (ಕಥಂಚಿತ್) ವಿಭಾಗದ ಕಲ್ಪನೆ ಮಾಡದೆ ಹೋದರೆ ಯಾವ ಘಟಾಕಾಶವಿದೆ ಅದೇ (ಸರ್ವಥಾ) ಅಘಟಾಕಾಶವಾಗಿ ಬಿಡಬಹುದು ; ಮತ್ತು ಅದಂತೂ ಇಷ್ಟ(ಮಾನ್ಯ)ವಿಲ್ಲ. ಆದುದರಿಂದ ಕಾಲಾಣುಗಳನ್ನು ಹೊರತುಪಡಿಸಿ ಉಳಿದೆಲ್ಲವುಗಳಲ್ಲಿ ಕಾಯತ್ವವೆಂಬ ಹೆಸರಿನ ಸಾವಯವತನವನ್ನು ನಿಶ್ಚಿತಪಡಿಸಬೇಕಾಗುವುದು.

ಅವುಗಳ ಯಾವ ಮೂರು ಲೋಕರೂಪವಾದ ನಿಷ್ಪನ್ನತೆ (ರಚನೆ)ಯನ್ನು ಹೇಳಿದೆ ಅದೂ ಅವುಗಳ ಅಸ್ತಿ-ಕಾಯತನ (ಅಸ್ತಿತ್ವ ಹಾಗೂ ಕಾಯತ್ವ)ವನ್ನು ಸಿದ್ಧಮಾಡುವ ಸಾಧನರೂಪದಿಂದ ಹೇಳಿದೆ. ಅದು ಹೀಗಿದೆ,-

೧) ಊರ್ಧ್ವ-ಅಧೋ-ಮಧ್ಯ ಹೀಗೆ ಮೂರು ಲೋಕಗಳ ಉತ್ಪಾದ-ವ್ಯಯ-ಧ್ರೌವ್ಯವುಳ್ಳ ಭಾವಗಳು. ಅವು ಮೂರು ಲೋಕಗಳ ವಿಶೇಷಸ್ವರೂಪವಿವೆ ಅವು-ಭವನರೂಪವಾಗುತ್ತ (ಪರಿಣಮನ ಮಾಡುತ್ತ) ತಮ್ಮ ಮೂಲ

---

೧ ಪರ್ಯಾಯದ ಲಕ್ಷಣವು ಪರಸ್ಪರ ವ್ಯತಿರೇಕವಿದೆ. ಆ ಲಕ್ಷಣವು ಪ್ರದೇಶಗಳಲ್ಲೂ ವ್ಯಾಪ್ತವಿದೆ. ಏಕೆಂದರೆ ಒಂದು ಪ್ರದೇಶವು ಇನ್ನೊಂದು ಪ್ರದೇಶರೂಪವಾಗದಿರುವುದರಿಂದ ಪ್ರದೇಶಗಳಲ್ಲಿ ಪರಸ್ಪರ ವ್ಯತಿರೇಕವಿದೆ ; ಆದುದರಿಂದ ಪ್ರದೇಶಗಳೂ ಪರ್ಯಾಯಗಳೆಂದು ಕರೆಯಿಸಿಕೊಳ್ಳುತ್ತವೆ.

೨. ನಿರವಯವ = ಅವಯವವಿಲ್ಲದ ; ಅಂಶವಿಲ್ಲದ ; ನಿರಂಶ ; ಒಂದಕ್ಕಿಂತ ಹೆಚ್ಚು ಪ್ರದೇಶವಿಲ್ಲದ.

೩. ನಿರಪವಾದ ಅಪವಾದವಿಲ್ಲದ ; (ಐದು ಅಸ್ತಿಕಾಯಗಳಿಗೆ ಕಾಯತ್ವವಿರುವಲ್ಲಿ ಒಂದೂ ಅಪವಾದವಿಲ್ಲ ; ಏಕೆಂದರೆ (ಉಪಚಾರದಿಂದ) ಪರಮಾಣುಗಳಿಗೂ ಶಕ್ತಿ ಅಪೇಕ್ಷೆಯಿಂದ ಅವಯವ ಪ್ರದೇಶಗಳಿವೆ.)

೪. ಅವಿಭಾಜ್ಯ - ಯಾವವುಗಳಲ್ಲಿ ವಿಭಾಗಮಾಡುವ ಸಾಧ್ಯತೆಯಿಲ್ಲ ಅಂಥವು.

ತ್ರೈಲೋಕ್ಯರೂಪೇಣ ನಿಷ್ಪನ್ನತ್ವಮಪಿ ತೇಷಾಮಸ್ತಿಕಾಯತ್ವಸಾಧನಪರಮುಪನ್ಯಸ್ತಮ್ । ತಥಾ ಚ- ತ್ರಯಾಣಾಮೂರ್ಧ್ವಾಧೋಮಧ್ಯಲೋಕಾನಾಮುತ್ಪಾದವ್ಯಯಧ್ರೌವ್ಯವಂತಸ್ತದ್ವಿಶೇಷಾತ್ಮಕಾ ಭಾವಾ ಭವಂತಸ್ತೇಷಾಂ ಮೂಲಪದಾರ್ಥಾನಾಂ ಗುಣಪರ್ಯಾಯಯೋಗಪೂರ್ವಕರ್ಮಾಸ್ತಿತ್ವಂ ಸಾಧಯಂತಿ । ಅನುಮೀಯತೇ ಚ ಧರ್ಮಾಧರ್ಮಾಕಾಶಾನಾಂ ಪ್ರತ್ಯೇಕಮೂರ್ಧ್ವಾಧೋಮಧ್ಯಲೋಕವಿಭಾಗರೂಪೇಣ ಪರಿಣಮನಾತ್ಕಾಯತ್ವಾಖ್ಯಂ ಸಾವಯವತ್ವಮ್ । ಜೀವಾನಾಮಪಿ ಪ್ರತ್ಯೇಕಮೂರ್ಧ್ವಾಧೋಮಧ್ಯಲೋಕವಿಭಾಗರೂಪೇಣ ಪರಿಣಮನಾಲ್ಲೋಕ- ಪೂರಣಾವಸ್ಥಾವ್ಯವಸ್ಥಿತವ್ಯಕ್ತೇಸ್ಸದಾ ಸನ್ನಿಹಿತಶಕ್ತೇಸ್ತದನುಮೀಯತ ಏವ । ಪುದ್ಗಲಾನಾಮಪ್ಯೂರ್ಧ್ವಾಧೋಮಧ್ಯಲೋಕ- ವಿಭಾಗರೂಪಪರಿಣತಮಹಾಸ್ಕಂಧತ್ವಪ್ರಾಪ್ತಿವ್ಯಕ್ತಿಶಕ್ತಿಯೋಗಿತ್ವಾತ್ತಥಾವಿಧಾ ಸಾವಯವತ್ವಸಿದ್ಧಿರಸ್ತ್ಯೇವೇತಿ ।

ಪದಾರ್ಥಗಳ ಗುಣಪರ್ಯಾಯಯುಕ್ತ ಅಸ್ತಿತ್ವವನ್ನು ಸಿದ್ಧಮಾಡುತ್ತವೆ. (ಮೂರು ಲೋಕದ ಭಾವಗಳು ಯಾವಾಗಲೂ ಕಥಂಚಿತ್ ಸದೃಶವಾಗಿರುತ್ತವೆ ಮತ್ತು ಕಥಂಚಿತ್ ಪರಿವರ್ತಿತವಾಗುತ್ತಿರುತ್ತವೆ ಎಂದರೆ ಆ ಮೂಲಪದಾರ್ಥಗಳಿಗೆ ಉತ್ಪಾದ-ವ್ಯಯ-ಧ್ರೌವ್ಯವುಳ್ಳ ಅಥವಾ ಗುಣಪರ್ಯಾಯವುಳ್ಳ ಅಸ್ತಿತ್ವವಿದೆ.)

೨) ಪುನಃ ಧರ್ಮ, ಅಧರ್ಮ ಮತ್ತು ಆಕಾಶಗಳಲ್ಲಿ ಪ್ರತಿಯೊಂದು ಪದಾರ್ಥವು ಊರ್ಧ್ವ-ಅಧೋ- ಮಧ್ಯ ಹೀಗೆ ಲೋಕದ (ಮೂರು)[೧] ವಿಭಾಗರೂಪದಿಂದ ಪರಿಣಮಿಸುವುದರಿಂದ ಅವುಗಳ ಕಾಯತ್ವವೆಂಬ ಹೆಸರಿನ ಸಾವಯವತನವಿದೆಯೆಂಬ ಅನುಮಾನ ಮಾಡಲಾಗುತ್ತದೆ. ಪ್ರತಿಯೊಂದು ಜೀವದ್ದೂ ಊರ್ಧ್ವ-ಮಧ್ಯ- ಅಧೋ ಹೀಗೆ ಮೂರು ಲೋಕದ (ಮೂರು) ವಿಭಾಗರೂಪದಿಂದ ಪರಿಣಮಿತ ಲೋಕಪೂರಣ[೨] ಅವಸ್ಥೆಯರೂಪ ವ್ಯಕ್ತತೆಯ ಶಕ್ತಿಯ ಸದ್ಭಾವವು ಯಾವಾಗಲೂ ಇರುವುದರಿಂದ ಜೀವಗಳಿಗೂ ಕಾಯತ್ವವೆಂಬ ಹೆಸರಿನ ಸಾವಯವತನವಿದೆಯೆಂಬ ಅನುಮಾನವನ್ನು ಮಾಡಲಾಗುವ ಸಾಧ್ಯತೆಯೇ ಇದೆ. ಪುದ್ಗಲವೂ ಊರ್ಧ್ವ-ಅಧೋ-ಮಧ್ಯವೆಂಬ ಲೋಕದ (ಮೂರು) ವಿಭಾಗರೂಪದಿಂದ ಪರಿಣಮಿತ ಮಹಾಸ್ಕಂಧತ್ವದ ಪ್ರಾಪ್ತಿಯ ಅವಸ್ಥೆಯರೂಪ ಅಥವಾ ಶಕ್ತಿರೂಪವಿರುವುದರಿಂದ ಅವಕ್ಕೂ ಅಂಥ (ಕಾಯತ್ವ ಹೆಸರಿನ) ಸಾವಯವತನದ ಸಿದ್ಧಿಯೇ ಇದೆ.

---

೧. ಊರ್ಧ್ವ, ಅಧೋ ಮತ್ತು ಮಧ್ಯವೆಂದು ಲೋಕದ ಮೂರು ಭಾಗಗಳಿವೆ. ಆದಾಗ್ಯೂ 'ಇದು ಊರ್ಧ್ವ ಲೋಕದ ಆಕಾಶಭಾಗವಿದೆ, ಇದು ಅಧೋಲೋಕದ ಆಕಾಶಭಾಗವಿದೆ ಮತ್ತು ಇದು ಮಧ್ಯಲೋಕದ ಆಕಾಶಭಾಗವಿದೆ'ಯೆಂದು ಆಕಾಶದಲ್ಲೂ ವಿಭಾಗಗಳನ್ನು ಮಾಡಲಾಗುತ್ತದೆ. ಆದ್ದರಿಂದ ಅದು ಸಾವಯವ ಎಂದರೆ ಕಾಯತ್ವವುಳ್ಳದ್ದಿದೆಯೆಂದು ಸಿದ್ಧವಾಗುತ್ತದೆ. ಹೀಗೆ ಧರ್ಮ ಮತ್ತು ಅಧರ್ಮಗಳೂ ಸಾವಯವ ಎಂದರೆ ಕಾಯತ್ವವುಳ್ಳವುಗಳಿವೆ.

೨. ಲೋಕಪೂರಣ = ಲೋಕವ್ಯಾಪಿ, (ಕೇವಲ ಸಮುದ್ಘಾತದ ಸಮಯದಲ್ಲಿ ಜೀವದ ಅವಸ್ಥೆಯು ತ್ರಿಲೋಕವ್ಯಾಪ್ತಿಯಾಗುತ್ತದೆ. ಆ ಸಮಯದಲ್ಲಿ 'ಇದು ಊರ್ಧ್ವಲೋಕದ ಜೀವಭಾಗವಿದೆ, ಇದು ಅಧೋಲೋಕದ ಜೀವಭಾಗವಿದೆ ಮತ್ತು ಇದು ಮಧ್ಯಲೋಕದ ಜೀವಭಾಗವಿದೆಯೆಂದು ವಿಭಾಗ ಮಾಡಲಾಗುತ್ತದೆ. ಇಂಥ ತ್ರಿಲೋಕವ್ಯಾಪಿ ಅವಸ್ಥೆಯ ಶಕ್ತಿಯಂತೂ ಜೀವದಲ್ಲಿ ಯಾವಾಗಲೂ ಇರುವುದರಿಂದ ಜೀವವು ಯಾವಾಗಲೂ ಸಾವಯವ ಎಂದರೆ ಕಾಯತ್ವವುಳ್ಳದ್ದಿದೆಯೆಂದು ಸಿದ್ಧವಾಗುತ್ತದೆ.

ತೇ ಚೇವ ಅತ್ಥಿ ಕಾಯಾ ತೇಕ್ಕಾಲಿಯಭಾವಪರಿಣದಾ ಣಿಚ್ಚಾ।
ಗಚ್ಛಂತಿ ದವಿಯ ಭಾವಂ ಪರಿಯಟ್ಟಣಲಿಂಗಸಂಜುತ್ತಾ ॥೬॥

ತೇ ಚೈವಾಸ್ತಿಕಾಯಾಃ ತ್ರೈಕಾಲಿಕಭಾವಪರಿಣತಾ ನಿತ್ಯಾಃ।
ಗಚ್ಛಂತಿ ದ್ರವ್ಯಭಾವಂ ಪರಿವರ್ತನಲಿಂಗಸಂಯುಕ್ತಾಃ ॥೬॥

ತತ್ರ ಪಂಚಾಸ್ತಿಕಾಯಾನಾಂ ಕಾಲಸ್ಯ ಚ ದ್ರವ್ಯತ್ವಮುಕ್ತಮ್ । ದ್ರವ್ಯಾಣಿ ಹಿ ಸಹಕ್ರಮಭುವಾಂ ಗುಣಪರ್ಯಾಯಾಣಾಮನನ್ಯತಯಾಧಾರಭೂತಾನಿ ಭವಂತಿ । ತತೋ ವೃತ್ತವರ್ತಮಾನವರ್ತಿಷ್ಯಮಾಣಾನಾಂ ಭಾವಾನಾಂ ಪರ್ಯಾಯಾಣಾಂ ಸ್ವರೂಪೇಣ ಪರಿಣತತ್ವಾದಸ್ತಿಕಾಯಾನಾಂ ಪರಿವರ್ತನಲಿಂಗಸ್ಯ ಕಾಲಸ್ಯ ಚಾಸ್ತಿ

ಗಾಥೆ - ೬

ಗಾಥಾರ್ಥ :- [ತೇಕ್ಕಾಲಿಯ ಭಾವಪರಿಣದಾ] ಯಾವವು ಮೂರು ಕಾಲಗಳ ಭಾವಗಳ ರೂಪವಾಗಿ ಪರಿಣಮಿತವಾಗುತ್ತವೆ ಹಾಗೂ [ಣಿಚ್ಚಾ] ನಿತ್ಯವಿವೆ [ತೇ ಚೇವ ಅತ್ಥಿಕಾಯಾ] ಅಂಥ ಅವೇ ಅಸ್ತಿಕಾಯಗಳು [ಪರಿಯಟ್ಟಣಲಿಂಗಸಂಜುತ್ತಾ] ಪರಿವರ್ತನಲಿಂಗ (ಕಾಲ)ದೊಡನೆ [ದವಿಯಭಾವಂ ಗಚ್ಛಂತಿ] ದ್ರವ್ಯತ್ವಕ್ಕೆ ಪ್ರಾಪ್ತವಾಗುತ್ತವೆ. (ಎಂದರೆ ಅವು ಆರು ದ್ರವ್ಯಗಳಿವೆ.)

ಟೀಕೆ :- ಇಲ್ಲಿ ಐದು ಅಸ್ತಿಕಾಯಗಳಿಗೆ ಹಾಗೂ ಕಾಲಕ್ಕೆ ದ್ರವ್ಯತ್ವವನ್ನು ಹೇಳಿದೆ.

ದ್ರವ್ಯಗಳು ವಾಸ್ತವದಲ್ಲಿ ಸಹಭಾವಿ ಗುಣಗಳಿಗೆ ಹಾಗೂ ಕ್ರಮಭಾವಿ ಪರ್ಯಾಯಗಳಿಗೆ ಅನನ್ಯರೂಪದಿಂದ[೧] ಆಧಾರಭೂತವಾಗಿವೆ. ಆದುದರಿಂದ ಯಾವವು ವರ್ತಿಸಲ್ಪಟ್ಟಿವೆ, ವರ್ತಿಸುತ್ತಿವೆ ಮತ್ತು ಭವಿಷ್ಯದಲ್ಲಿ ವರ್ತಿಸಲಿವೆ ಆ ಭಾವಗಳ-ಪರ್ಯಾಯಗಳ ರೂಪವಾಗಿ ಪರಿಣಮಿಸುವ ಕಾರಣವಾಗಿ (ಐದು) ಅಸ್ತಿಕಾಯಗಳು ಮತ್ತು ಪರಿವರ್ತನಲಿಂಗ[೨]ವಾದ ಕಾಲವು (ಅವು ಆರೂ) ದ್ರವ್ಯಗಳಿವೆ. ಭೂತ, ವರ್ತಮಾನ ಮತ್ತು ಭವಿಷ್ಯ ಭಾವಗಳ ಸ್ವರೂಪವಾಗಿ ಪರಿಣಮಿಸುವುದರಿಂದ ಅವೇನು ಅನಿತ್ಯವಾಗಿಲ್ಲ, ಏಕೆಂದರೆ ಭೂತ, ವರ್ತಮಾನ ಮತ್ತು ಭವಿಷ್ಯ ಭಾವರೂಪ ಅವಸ್ಥೆಗಳಲ್ಲಿಯೂ ಪ್ರತಿನಿಯತ (ತಮ್ಮ ತಮ್ಮ ನಿಶ್ಚಿತ) ಸ್ವರೂಪವನ್ನು ಬಿಡುವುದಿಲ್ಲವಾದ್ದರಿಂದ ಅವು ನಿತ್ಯವೇ ಇವೆ.

ಯಾವವು ತ್ರಿಕಾಲಭಾವಗಳರೂಪದಿಂ ಪರಿಣಮಿಸುವವು ಮೇಣ್ ನಿತ್ಯವಿವೆ ।
ಅವು ಅಸ್ತಿಕಾಯಗಳಿದ್ದು ಪರಿವರ್ತನಲಿಂಗಸಹ ದ್ರವ್ಯತ್ವ ಪಡೆಯುವವು ॥೬॥

---

೧ ಅನನ್ಯರೂಪ : ಅಭಿನ್ನರೂಪ. [ಯಾವ ಪ್ರಕಾರ ಬೆಂಕಿಯು ಆಧಾರವಿದೆ ಮತ್ತು ಉಷ್ಣತೆಯು ಆಧೇಯವಿದೆಯಾದರೂ ಅವು ಅಭಿನ್ನವಾಗಿವೆ ; ಅದೇ ಪ್ರಕಾರ ದ್ರವ್ಯವು ಆಧಾರವಿದೆ ಮತ್ತು ಗುಣ-ಪರ್ಯಾಯಗಳು ಆಧೇಯವಿವೆಯಾದರೂ ಅವು ಅಭಿನ್ನವಾಗಿವೆ.]

೨. ಪರಿವರ್ತನಲಿಂಗ = ಪುದ್ಗಲಾದಿಗಳ ಪರಿವರ್ತನವು ಯಾವುದರ ಲಿಂಗವಿದೆ ; ಪುದ್ಗಲಾದಿಗಳ ಪರಿಣಮನದಿಂದ ಯಾವುದು ತಿಳಿದು ಬರುತ್ತದೆ - (ಲಿಂಗ=ಚಿಹ್ನ ; ಸೂಚಕ ; ಗಮಕ ; ಗಮಿಸುವಂಥ ; ತೋರಿಸಿಕೊಡುವಂಥ ; ತಿಳಿಸಿಕೊಡುವಂಥ.)

ದ್ರವ್ಯತ್ವಮ್ । ನ ಚ ತೇಷಾಂ ಭೂತಭವದ್ಭವಿಷ್ಯದ್ಭಾವಾತ್ಮನಾ ಪರಿಣಮಮಾನಾನಾಮನಿತ್ಯತ್ವಮ್ ಯತಸ್ತೇ ಭೂತಭವದ್ಭವಿಷ್ಯದ್ಭಾವಾವಸ್ಥಾಸ್ವಪಿ ಪ್ರತಿನಿಯತಸ್ವರೂಪಾಪರಿತ್ಯಾಗಾನ್ನಿತ್ಯಾ ಏವ । ಅತ್ರ ಕಾಲಃ ಪುದ್ಗಲಾದಿಪರಿವರ್ತನಹೇತುತ್ವಾತ್ಪುದ್ಗಲಾದಿಪರಿವರ್ತನಗಮ್ಯಮಾನಪರ್ಯಾಯತ್ವಾಚ್ಚಾಸ್ತಿಕಾಯೇಷ್ವಂತರ್ಭಾವಾರ್ಥಂ ಸ ಪರಿವರ್ತನಲಿಂಗ ಇತ್ಯುಕ್ತ ಇತಿ ।

ಅಣ್ಣೋಣ್ಣಂ ಪವಿಸಂತಾ ದೇಂತಾ ಓಗಾಸಮಣ್ಣಮಣ್ಣಸ್ಸ ।
ಮೇಲಂತಾ ವಿ ಯ ಣಿಚ್ಚಂ ಸಗಂ ಸಭಾವಂ ಣ ವಿಜಹಂತಿ ॥೭॥

ಅನ್ಯೋನ್ಯಂ ಪ್ರವಿಶಂತಿ ದದಂತ್ಯವಕಾಶಮನ್ಯೋಽನ್ಯಸ್ಯ ।
ಮಿಲಂತ್ಯಾಪಿ ಚ ನಿತ್ಯಂ ಸ್ವಕಂ ಸ್ವಭಾವಂ ನ ವಿಜಹಂತಿ ॥೭॥

ಇಲ್ಲಿ ಕಾಲವು ಪುದ್ಗಲ ಮೊದಲಾದವುಗಳ ಪರಿವರ್ತನದ ಹೇತುವಾಗಿರುವುದರಿಂದ ಹಾಗೂ ಪುದ್ಗಲಾದಿಗಳ ಪರಿವರ್ತನದಿಂದ ಕಾಲದ ಪರ್ಯಾಯಗಳು ತಿಳಿದುಬರುವುದರಿಂದ ಅಸ್ತಿಕಾಯಗಳಲ್ಲಿ ಅದರ ಸಮಾವೇಶ ಮಾಡುವ ಉದ್ದೇಶದಿಂದ ಅದಕ್ಕೆ 'ಪರಿವರ್ತನಲಿಂಗ'[೧] ವೆಂದು ಹೇಳಿದೆ. [ಪುದ್ಗಲ ಮೊದಲಾದ ಅಸ್ತಿಕಾಯಗಳ ವರ್ಣನೆ ಮಾಡುತ್ತ ಅವುಗಳ ಪರಿವರ್ತನ (ಪರಿಣಮನ)ದ ವರ್ಣನೆ ಮಾಡಬೇಕಾಗುವುದು. ಮತ್ತು ಅವುಗಳ ಪರಿವರ್ತನದ ವರ್ಣನೆ ಮಾಡುತ್ತ ಆ ಪರಿವರ್ತನದಲ್ಲಿ ನಿಮಿತ್ತಭೂತ ಪದಾರ್ಥದ (ಕಾಲದ) ಅಥವಾ ಆ ಪರಿವರ್ತನದಿಂದ ಯಾವವುಗಳ ಪರ್ಯಾಯಗಳು ವ್ಯಕ್ತವಾಗುತ್ತವೆ ಆ ಪದಾರ್ಥದ (ಕಾಲದ) ವರ್ಣನೆ ಮಾಡುವುದು ಅನುಚಿತವೆಂದು ಹೇಳಲಾಗುವುದಿಲ್ಲ. ಈ ಪ್ರಕಾರವಾಗಿ ಪಂಚಾಸ್ತಿಕಾಯದ ವರ್ಣನೆಯಲ್ಲಿ ಕಾಲದ ವರ್ಣನೆಯನ್ನು ಸಮಾವೇಶ ಮಾಡುವುದು ಅನುಚಿತವಲ್ಲ - ಹೀಗೆ ತೋರಿಸಿಕೊಡುವ ಉದ್ದೇಶದಿಂದ ಈ ಗಾಥಾ ಸೂತ್ರದಲ್ಲಿ ಕಾಲದ ಸಲುವಾಗಿ 'ಪರಿವರ್ತನಲಿಂಗ' ಶಬ್ದದ ಉಪಯೋಗ ಮಾಡಿದೆ.]

ಗಾಥೆ - ೭

ಗಾಥಾರ್ಥ :- [ಅಣ್ಣೋಣಂ ಪವಿಸಂತಾ] ಅವು ಒಂದು - ಇನ್ನೊಂದರಲ್ಲಿ ಪ್ರವೇಶ ಮಾಡುತ್ತವೆ, [ಅಣ್ಣಮಣ್ಣಸ್ಸ] ಒಂದು ಇನ್ನೊಂದಕ್ಕೆ [ಓಗಾಸಂ ದೇಂತಾ] ಅವಕಾಶ ಕೊಡುತ್ತವೆ. [ಮೇಲಂತಾ] ಪರಸ್ಪರ

ಅನ್ಯೋನ್ಯದಿಂ ಪ್ರವೇಶಿಸುವವು ಮೇಣ್ ಅನ್ಯೋನ್ಯದಿಂದವಕಾಶಕೊಡುವವು ।
ಅನ್ಯೋನ್ಯದಿಂದೊಡಗೂಡಿದರು ನಿತ್ಯ ತಮ್ಮ ಸ್ವಭಾವವನು ಬಿಡಲಾರವು ॥೭॥

---

೧. ೧) ಒಂದು ವೇಳೆ ಪುದ್ಗಲ ಮೊದಲಾದವುಗಳ ಪರಿವರ್ತನವಾಗುತ್ತದೆಂದರೆ ಯಾವುದಾದರೂ ಅದರ ನಿಮಿತ್ತವಿರಬೇಕಾಗುವುದು - ಈ ರೀತಿಯಾಗಿ ಪರಿವರ್ತನರೂಪ ಚಿಹ್ನದ ಮುಖಾಂತರ ಕಾಲದ ಅನುಮಾನವಾಗುತ್ತದೆ (ಯಾವ ಪ್ರಕಾರ ಹೊಗೆಯ ರೂಪ ಚಿಹ್ನದ ಮುಖಾಂತರ ಬೆಂಕಿಯ ಅನುಮಾನವಾಗುತ್ತದೆ ಅದೇ ಪ್ರಕಾರ) ; ಆದುದರಿಂದ ಕಾಲವು 'ಪರಿವರ್ತನಲಿಂಗ' ವಿದೆ. ಮತ್ತು ೨) ಪುದ್ಗಲ ಮೊದಲಾದವುಗಳ ಪರಿವರ್ತನದ ಮುಖಾಂತರ ಕಾಲದ ಪರ್ಯಾಯಗಳು ('ಕಡಿಮೆ-ಸಮಯ', 'ಹೆಚ್ಚು ಸಮಯ'ವೆಂಬ ಕಾಲದ ಅವಸ್ಥೆಗಳು) ತಿಳಿದು ಬರುತ್ತವೆ. ಆದುದರಿಂದಲೂ ಕಾಲವು 'ಪರಿವರ್ತನಲಿಂಗವಿದೆ.

ಅತ್ರ ಷಣ್ಣಾಂ ದ್ರವ್ಯಾಣಾಂ ಪರಸ್ಪರಮತ್ಯಂತಸಂಕರೇಽಪಿ ಪ್ರತಿನಿಯತಸ್ವರೂಪಾದಪ್ರಚ್ಯವನ ಮುಕ್ತಮ್ ।

ಅತ ಏವ ಶೇಷಾಂ ಪರಿಣಾಮವತ್ತೆ ್ವೇऽಪಿ ಪ್ರಾಗ್ವಿತ್ಯತ್ವಮುಕ್ತಮ್ । ಅತ ಏವ ಚ ನ ತೇಷಾಮೇಕತ್ವಾಪತ್ತಿರ್ನ ಚ ಜೀವಕರ್ಮಣೋರ್ವ್ಯವಹಾರನಯಾದೇಶಾದೇಕತ್ವೇऽಪಿ ಪರಸ್ಪರಸ್ವರೂಪೋಪಾದಾನಮಿತಿ ।

ಸತ್ತಾ ಸವ್ವಪಯತ್ಥಾ ಸವಿಸ್ಸರೂವಾ ಅಣಂತಪಜ್ಜಾಯಾ ।
ಭಂಗುಪ್ಪಾದಧುವತ್ತಾ ಸಪ್ಪಡಿವಕ್ಖಾ ಹವದಿ ಏಕ್ಕಾ ॥೮॥

ಸತ್ತಾ ಸರ್ವಪದಾರ್ಥಾ ಸವಿಶ್ವರೂಪಾ ಅನಂತಪರ್ಯಾಯಾ ।
ಭಂಗೋತ್ಪಾದಧ್ರೌವ್ಯಾತ್ಮಿಕಾ ಸಪ್ರತಿಪಕ್ಷಾ ಭವತ್ಯೇಕಾ ॥೮॥

(ಕ್ಷೀರ ನೀರಿನಂತೆ) ಬೆರೆತು ಹೋಗುತ್ತವೆ, [ಏ ಯ] ಆದಾಗ್ಯೂ [ಣೆಚ್ಚಂ] ಯಾವಾಗಲೂ [ಸಗಂ ಸಭಾವಂ] ತಮ್ಮ ತಮ್ಮ ಸ್ವಭಾವಗಳನ್ನು [ಣ ವಿಜಹಂತಿ] ಬಿಟ್ಟು ಕೊಡುವುದಿಲ್ಲ.

ಟೀಕೆ :- ಇಲ್ಲಿ ಆರು ದ್ರವ್ಯಗಳಲ್ಲಿ ಪರಸ್ಪರ ಅತ್ಯಂತ ಸಂಕರ[೧]ವಿದ್ದರೂ ಕೂಡ ಅವು ಪ್ರತಿನಿಯತ (ತಮ್ಮ-ತಮ್ಮ ನಿಶ್ಚಿತ) ಸ್ವರೂಪದಿಂದ ಚ್ಯುತವಾಗುವುದಿಲ್ಲವೆಂಬುದನ್ನು ಹೇಳಿದೆ. ಆದುದರಿಂದ (ತಮ್ಮ-ತಮ್ಮ ಸ್ವಭಾವದಿಂದ ಚ್ಯುತವಾಗುವುದಿಲ್ಲವಾದ್ದರಿಂದ) ಅವು ಪರಿಣಮನಶೀಲವುಳ್ಳವುಗಳಾಗಿದ್ದರೂ ಕೂಡ ನಿತ್ಯವಿವೆಯೆಂದು ಮೊದಲು (ಆರನೆಯ ಗಾಥೆಯಲ್ಲಿ) ಹೇಳಿತ್ತು; ಆದುದರಿಂದಲೇ ಅವು ಏಕತ್ವಕ್ಕೆ ಪ್ರಾಪ್ತವಾಗುವುದಿಲ್ಲ ; ಮತ್ತು ಜೀವ ಹಾಗೂ ಕರ್ಮಕ್ಕೆ ವ್ಯವಹಾರನಯದ ಕಥನದಿಂದ ಏಕತ್ವವಿದೆ (ಎಂದು ಹೇಳಲಾಗುತ್ತದೆ)ಯಾದರೂ ಅವು (ಜೀವ ಮತ್ತು ಕರ್ಮ) ಒಂದು ಇನ್ನೊಂದರ ಸ್ವರೂಪವನ್ನು ಗ್ರಹಣ ಮಾಡುವುದಿಲ್ಲ.

ಗಾಥೆ - ೮

ಗಾಥಾರ್ಥ :- [ಸತ್ತಾ] ಸತ್ತಾ [ಭಂಗುಪ್ಪಾದ ಧುವತ್ತಾ] ಉತ್ಪಾದವ್ಯಯಧ್ರೌವ್ಯಾತ್ಮಕ, [ಏಕ್ಕಾ] ಏಕ, [ಸವ್ವಪಯತ್ಥಾ] ಸರ್ವಪದಾರ್ಥ ಸ್ಥಿತ, [ಸವಿಸ್ಸರೂವಾ] ಸವಿಶ್ವರೂಪ, [ಅಣಂತಪಜ್ಜಾಯಾ] ಅನಂತ ಪರ್ಯಾಯಮಯ ಮತ್ತು [ಸಪ್ಪಡಿವಕ್ಖಾ] ಸಪ್ರತಿಪಕ್ಷ [ಹವದಿ] ಇದೆ.

ಟೀಕೆ :- ಇಲ್ಲಿ ಅಸ್ತಿತ್ವದ ಸ್ವರೂಪವನ್ನು ಹೇಳಿದೆ .

ಸವಿಶ್ವರೂಪ ಸರ್ವಪದಾರ್ಥಸ್ಥಿತ ಅನಂತಪರ್ಯಾಯಮಯವಾದಾಸತ್ತಾ ।
ಸವಿಪಕ್ಷವಿದೆ ಮತ್ತೇಕವಿದೆ ಉತ್ಪಾದವ್ಯಯಧ್ರೌವ್ಯಮಯ ತಾನಾಗಿದೆ ॥೮॥

---

೧ ಸಂಕರ = ಸೇರಿಕೆ ; ಸಂಯೋಗ ; (ಅನ್ಯೋನ್ಯ - ಅವಗಾಹರೂಪ) ಮಿಶ್ರಿತತನ.

ಅತ್ರಾಸ್ತಿತ್ವಸ್ವರೂಪಮುಕ್ತಮ್ ।

ಅಸ್ತಿತ್ವಂ ಹಿ ಸತ್ತಾ ನಾಮ ಸತೋ ಭಾವಃ ಸತ್ತ್ವಮ್ । ನ ಸರ್ವಥಾ ನಿತ್ಯತಯಾ ಸರ್ವಥಾ ಕ್ಷಣಿಕತಯಾ ವಾ ವಿದ್ಯಮಾನಮಾತ್ರಂ ವಸ್ತು । ಸರ್ವಥಾ ನಿತ್ಯಸ್ಯ ವಸ್ತುನಸ್ತತ್ತ್ವತಃ ಕ್ರಮಭುವಾಂ ಭಾವಾನಾಮಭಾವಾತ್ಕುತೋ ವಿಕಾರವತ್ತ್ವಮ್ । ಸರ್ವಥಾ ಕ್ಷಣಿಕಸ್ಯ ಚ ತತ್ತ್ವತಃ ಪ್ರತ್ಯಭಿಜ್ಞಾನಾಭಾವಾತ್ ಕುತ ಏಕಸಂತಾನತ್ವಮ್ । ತತಃ ಪ್ರತ್ಯಭಿಜ್ಞಾನಹೇತುಭೂತೇನ ಕೇನಚಿತ್ಸ್ವರೂಪೇಣ ಧ್ರೌವ್ಯಮಾಲಂಬ್ಯಮಾನಂ ಕಾಭ್ಯಾಂಚಿತ್ಕ್ರಮಪ್ರವೃತ್ತಾಭ್ಯಾಂ ಸ್ವರೂಪಾಭ್ಯಾಂ ಪ್ರಲೀಯಮಾನಮುಪಜಾಯಮಾನಂ ಚೈಕಕಾಲಮೇವ ಪರಮಾರ್ಥತಸ್ತ್ರಿತಯೀಮವಸ್ಥಾಂ ಬಿಭ್ರಾಣಂ ವಸ್ತು ಸದವಬೋಧ್ಯವ್ಯಮ್ । ಅತ ಏವ ಸತ್ತಾಪ್ಯುತ್ಪಾದವ್ಯಯಧ್ರೌವ್ಯಾತ್ಮಿಕಾऽವಬೋದ್ಧವ್ಯಾಂ ಭಾವಭಾವವತೋಃ ಕಥಂಚಿದೇಕಸ್ವರೂಪತ್ವಾತ್ । ಸಾ ಚ ತ್ರಿಲಕ್ಷಣಸ್ಯ ಸಮಸ್ತಸ್ಯಾಪಿ ವಸ್ತುವಿಸ್ತಾರಸ್ಯ ಸಾದೃಶ್ಯಸೂಚಕತ್ವಾದೇಕಾ । ಸರ್ವಪದಾರ್ಥಸ್ಥಿತಾ ಚ ತ್ರಿಲಕ್ಷಣಸ್ಯ ಸದಿತ್ಯಭಿಧಾನಸ್ಯ ಸದಿತಿ ಪ್ರತ್ಯಯಸ್ಯ ಚ

ಅಸ್ತಿತ್ವ ಎಂದರೆ ಸತ್ತಾವೆಂಬ ಹೆಸರಿನ ಸತ್‌ದ ಭಾವ ಎಂದರೆ ಸತ್ವ.[೧]

ವಿದ್ಯಮಾನಮಾತ್ರ ವಸ್ತುವು ಸರ್ವಥಾ ನಿತ್ಯರೂಪವೂ ಇಲ್ಲ ಮತ್ತು ಸರ್ವಥಾ ಕ್ಷಣಿಕರೂಪವೂ ಇಲ್ಲ. ಸರ್ವಥಾ ನಿತ್ಯವಾದ ವಸ್ತುವಿಗೆ ವಾಸ್ತವದಲ್ಲಿ ಕ್ರಮಭಾವಿಭಾವಗಳ ಅಭಾವವಿರುವುದರಿಂದ ವಿಕಾರಗಳು (-ಪರಿವರ್ತನ, ಪರಿಣಾಮಗಳು) ಎಲ್ಲಿಂದ ಸಂಭವಿಸುತ್ತವೆ ? ಮತ್ತು ಸರ್ವಥಾ ಕ್ಷಣಿಕವಾದ ವಸ್ತುವಿನಲ್ಲಿ ನಿಜವಾಗಿ ಪ್ರತ್ಯಭಿಜ್ಞಾನದ[೨] ಅಭಾವವಿರುವುದರಿಂದ ಏಕಪ್ರವಾಹತನವು ಎಲ್ಲಿಂದ ಇರುತ್ತದೆ ? ಆದುದರಿಂದ ಪ್ರತ್ಯಭಿಜ್ಞಾನದ ಹೇತುಭೂತವಾದ ಯಾವುದೇ ಒಂದು ಸ್ವರೂಪದಿಂದ ಧ್ರುವವಿರುತ್ತ ಮತ್ತು ಯಾವುದೇ ಎರಡು ಕ್ರಮವರ್ತಿಸ್ವರೂಪಗಳಿಂದ ನಷ್ಟವಾಗುತ್ತ ಹಾಗೂ ಉತ್ಪನ್ನವಾಗುತ್ತ ಹೀಗೆ ಪಾರಮಾರ್ಥ್ಯದಿಂದ ಒಂದೇ ಕಾಲದಲ್ಲಿ ತ್ರಿಗುಣ (ಮೂರು ಅಂಶವುಳ್ಳ) ಅವಸ್ಥೆಯನ್ನು ಧಾರಣೆ ಮಾಡುತ್ತಿರುವ ವಸ್ತುವು ಸತ್ಯವಿದೆಯೆಂದು ತಿಳಿಯುವುದು. ಆದುದರಿಂದ 'ಸತ್ತಾ' ಕೂಡ 'ಉತ್ಪಾದವ್ಯಯಧ್ರೌವ್ಯಾತ್ಮಕ' (ಮೂರು ಲಕ್ಷಣವುಳ್ಳ) ವೆಂದು ತಿಳಿಯುವುದು ; ಏಕೆಂದರೆ ಭಾವ[೩] ಮತ್ತು ಭಾವವಾನ ಇವುಗಳದು ಕಥಂಚಿತ್ ಏಕಸ್ವರೂಪವಿರುತ್ತದೆ - ಮತ್ತು ಅದು (ಸತ್ತಾ) 'ಏಕ'ವಿದೆ, ಏಕೆಂದರೆ ಅದು ಮೂರು ಲಕ್ಷಣವುಳ್ಳ ಸಮಸ್ತ ವಸ್ತುವಿಸ್ತಾರದಸಾದೃಶ್ಯವನ್ನು ಸೂಚಿತಗೊಳಿಸುತ್ತದೆ. ಮತ್ತು ಅದು (ಸತ್ತಾ) 'ಸರ್ವಪದಾರ್ಥಸ್ಥಿತ'ವಿದೆ ; ಏಕೆಂದರೆ ಅದರ ಕಾರಣದಿಂದಲೇ (ಸತ್ತಾದ ಕಾರಣದಿಂದಲೇ) ಎಲ್ಲ ಪದಾರ್ಥಗಳಲ್ಲಿ ಮೂರು ಲಕ್ಷಣಗಳ (-ಉತ್ಪಾದವ್ಯಯಧ್ರೌವ್ಯಗಳ), 'ಸತ್' ಎಂಬ ಕಥನದ ಹಾಗೂ 'ಸತ್' ಎಂಬ ಪ್ರತೀತಿಯ ಉಪಲಬ್ಧಿಯಾಗುತ್ತದೆ. ಮತ್ತು ಅದು (ಸತ್ತಾ) 'ಸವಿಶ್ವರೂಪ' ವಿದೆ, ಏಕೆಂದರೆ ಅದು ವಿಶ್ವದರೂಪಗಳ ಸಹಿತವಾಗಿ ಎಂದರೆ ಸಮಸ್ತ ವಸ್ತು ವಿಸ್ತಾರದಮೂರು ಲಕ್ಷಣವುಳ್ಳ ಸ್ವಭಾವಗಳ ಸಹಿತವಾಗಿ ವರ್ತಿಸುತ್ತದೆ. ಮತ್ತು ಅದು (ಸತ್ತಾ) 'ಅನಂತಪರ್ಯಾಯಮಯ'ವಿದೆ. ಏಕೆಂದರೆ ಅದು ಮೂರು ಲಕ್ಷಣವುಳ್ಳ ಅನಂತ ದ್ರವ್ಯಪರ್ಯಾಯರೂಪ ವ್ಯಕ್ತತೆಗಳಿಂದ ವ್ಯಾಪ್ತವಿದೆ. (ಈ ಪ್ರಕಾರವಾಗಿ

---

೧. ಸತ್ವ = ಸತ್‌ತನ ; ಅಸ್ತಿತ್ವತನ ; ವಿದ್ಯಮಾನತೆ ; ಅಸ್ತಿತ್ವದಭಾವ ; 'ಇದೆ'ಯೆಂಬ ಭಾವ.

೨. ವಸ್ತುವು ಸರ್ವಥಾ ಕ್ಷಣಿಕವಾದರೆ 'ಯಾವುದು ಮೊದಲು ನೋಡುವುದರಲ್ಲಿ (ತಿಳಿದುಕೊಳ್ಳುವುದರಲ್ಲಿ) ಬಂದಿತ್ತು ಅದೇ ಈ ವಸ್ತುವಿದೆ'ಯೆಂಬ ಜ್ಞಾನವಾಗುವ ಸಾಧ್ಯತೆಯಿಲ್ಲ.

೩. ಸತ್ತಾ ಇದು ಭಾವವಿದೆ ಮತ್ತು ವಸ್ತುವು ಭಾವವಾನವಿದೆ ಎಂದರೆ ಭಾವವಂತವಿದೆ.

ಸರ್ವಪದಾರ್ಥೇಷು ತನ್ಮೂಲಸ್ಯೈವೋಪಲಂಭಾತ್ ಸವಿಶ್ವರೂಪಾ ಚ ವಿಶ್ವಸ್ಯ ಸಮಸ್ತವಸ್ತುವಿಸ್ತಾರಸ್ಯಾಪಿ ರೂಪೈಸ್ತ್ರೈ-ಲಕ್ಷಣ್ಯೈಃ ಸ್ವಭಾವೈಃ ಸಹ ವರ್ತಮಾನತ್ವಾತ್, ಅನಂತಪರ್ಯಾಯಾ ಚಾನಂತಾಭಿರ್ವ್ಯವಪರ್ಯಾಯವ್ಯಕ್ತಿಭಿಸ್ತ್ರಿ-ಲಕ್ಷಣಾಭಿಃ ಪರಿಗಮ್ಯಮಾನತ್ವಾತ್ । ಏವಂಭೂತಾಪಿ ಸಾ ನ ಖಲು ನಿರಂಕುಶಾ ಕಿಂತು ಸಪ್ರತಿಪಕ್ಷಾ । ಪ್ರತಿಪಕ್ಷೋ ಹ್ಯಸತ್ತಾ ಸತ್ತಾಯಾಃ, ಅತ್ರಿಲಕ್ಷಣತ್ವಂ ತ್ರಿಲಕ್ಷಣಾಯಾಃ, ಅನೇಕತ್ವಮೇಕಸ್ಯಾಃ , ಏಕಪದಾರ್ಥಸ್ಥಿತತ್ವಂ ಸರ್ವಪದಾರ್ಥಸ್ಥಿತಾಯಾಃ, ಏಕರೂಪತ್ವಂ ಸವಿಶ್ವರೂಪಾಯಾಃ, ಏಕಪರ್ಯಾಯತ್ವಮನಂತಪರ್ಯಾಯಾ ಇತಿ । ದ್ವಿವಿಧಾ ಹಿ ಸತ್ತಾ-ಮಹಾಸತ್ತಾವಾಂತರಸತ್ತಾ ಚ । ತತ್ರ ಸರ್ವಪದಾರ್ಥಸಾರ್ಥವ್ಯಾಪಿನೀ ಸಾದೃಶ್ಯಾಸ್ತಿತ್ವಸೂಚಿಕಾ ಮಹಾಸತ್ತಾ ಪ್ರೋಕ್ತೈವ । ಅನ್ಯಾ ತು ಪ್ರತಿನಿಯತವಸ್ತುವರ್ತಿನೀ ಸ್ವರೂಪಾಸ್ತಿತ್ವಸೂಚಿಕಾऽವಾಂತರಸತ್ತಾ । ತತ್ರ ಮಹಾಸತ್ತಾऽವಾಂತರಸತ್ತಾರೂಪೇಣಾऽಸತ್ತಾऽವಾಂತರಸತ್ತಾ ಚ ಮಹಾಸತ್ತಾರೂಪೇಣಾऽಸತ್ತೇತ್ಯಸತ್ತಾ ಸತ್ತಾಯಾಃ । ಯೇನ ಸ್ವರೂಪೇಣೋತ್ಪಾದಸ್ತತ್ಥೋತ್ಪಾದೈಕಲಕ್ಷಣಮೇವ, ಯೇನ ಸ್ವರೂಪೇಣೋಚ್ಛೇದಸ್ತತ್ಥೋಚ್ಛೇ-ದೈಕಲಕ್ಷಣಮೇವ, ಯೇನ ಸ್ವರೂಪೇಣ ಧ್ರೌವ್ಯಂ ತತ್ತಥಾ ಧ್ರೌವ್ಯೈಕಲಕ್ಷಣಮೇವ, ತತ ಉತ್ಪಾದ್ಯ-

---

ಸಾಮಾನ್ಯ-ವಿಶೇಷಾತ್ಮಕ[೧] ಸತ್ತಾದ ಅದರ ಸಾಮಾನ್ಯಪಕ್ಷದ ಅಪೇಕ್ಷೆಯಿಂದ ಎಂದರೆ ಮಹಾಸತ್ತಾರೂಪ ಪಕ್ಷದ ಅಪೇಕ್ಷೆಯಿಂದ ವರ್ಣನೆಯಾಯಿತು.)

ಹೀಗಿದ್ದರೂ ಕೂಡ ವಾಸ್ತವಿಕವಾಗಿ ನಿರಂಕುಶ[೨] ವಿಲ್ಲ ಆದರೆ ಸಪ್ರತಿಪಕ್ಷ[೩] ವಿದೆ. ೧) ಸತ್ತಾಗೆ ಅಸತ್ತಾ ಇದು ಪ್ರತಿಪಕ್ಷವಿದೆ ; ೨) ತ್ರಿಲಕ್ಷಣಕ್ಕೆ ಅತ್ರಿಲಕ್ಷಣತೆಯು ಪ್ರತಿಪಕ್ಷವಿದೆ ; ೩) ಒಂದಕ್ಕೆ ಅನೇಕತೆಯು ಪ್ರತಿಪಕ್ಷವಿದೆ ; ೪) ಸರ್ವಪದಾರ್ಥಸ್ಥಿತಕ್ಕೆ ಏಕಪದಾರ್ಥಸ್ಥಿತತ್ವವು ಪ್ರತಿಪಕ್ಷವಿದೆ ; ೫) ಸವಿಶ್ವರೂಪಕ್ಕೆ ಏಕರೂಪತ್ವವು ಪ್ರತಿಪಕ್ಷವಿದೆ ; ೬) ಅನಂತಪರ್ಯಾಯಮಯಕ್ಕೆ ಏಕಪರ್ಯಾಯತ್ವವು ಪ್ರತಿಪಕ್ಷವಿದೆ.

(ಮೇಲೆ ಹೇಳಿದ ಸಪ್ರತಿಪಕ್ಷತೆಯನ್ನು ಸ್ಪಷ್ಟವಾಗಿ ತಿಳಿಸಿಕೊಡಲಾಗುತ್ತದೆ-) ಸತ್ತಾ ಇದು ಮಹಾ ಸತ್ತಾ ಮತ್ತು ಅವಾಂತರಸತ್ತಾ ಎಂದು ಎರಡು ಪ್ರಕಾರವಿದೆ. ಅವುಗಳಲ್ಲಿ, ಎಲ್ಲ ಪದಾರ್ಥಸಮೂಹದಲ್ಲಿ ವ್ಯಾಪ್ತವಾಗುವಂಥ ಸಾದೃಶ್ಯ-ಅಸ್ತಿತ್ವವನ್ನು ಸೂಚಿತಗೊಳಿಸುವಂಥ ಮಹಾಸತ್ತಾ (ಸಾಮಾನ್ಯಸತ್ತಾ)ವನ್ನಂತೂ ಹೇಳಿ ಬಿಡಲಾಗಿದೆ. ಎರಡನೆಯದು ಪ್ರತಿನಿಶ್ಚಿತ (-ಒಂದೊಂದು ನಿಶ್ಚಿತ) ವಸ್ತುವಿನಲ್ಲಿರುವಂಥ, ಸ್ವರೂಪ ಅಸ್ತಿತ್ವವನ್ನು ಸೂಚಿತಗೊಳಿಸುವಂಥ ಅವಾಂತರಸತ್ತಾ (ವಿಶೇಷಸತ್ತಾ) ಇದೆ. ೧) ಅಲ್ಲಿ ಮಹಾಸತ್ತಾವು ಅವಾಂತರಸತ್ತಾರೂಪದಿಂದ ಅಸತ್ತಾವಿದೆ ಮತ್ತು ಅವಾಂತರ ಸತ್ತಾವು ಮಹಾಸತ್ತಾರೂಪದಿಂದ ಅಸತ್ತಾವಿರುವುದರಿಂದ ಸತ್ತಾದ ಪ್ರತಿಪಕ್ಷವು ಅಸತ್ತಾವಿದೆ (ಎಂದರೆ ಯಾವ ಸಾಮಾನ್ಯವಿಶೇಷಾತ್ಮಕ ಸತ್ತಾವು ಮಹಾಸತ್ತಾರೂಪವಾಗುವುದರಿಂದ 'ಸತ್ತಾ' ಇದೆ ಅದುವೇ ಅವಾಂತರಸತ್ತಾರೂಪವೂ ಆಗುವುದರಿಂದ 'ಅಸತ್ತಾ'ವೂ ಇದೆ. ೨) ಯಾವ ಸ್ವರೂಪದಿಂದ ಉತ್ಪಾದವಿದೆ ಅದರ (ಆ-ಸ್ವರೂಪದ) ಆ ಪ್ರಕಾರದಿಂದ

---

೧ ಇಲ್ಲಿ 'ಸಾಮಾನ್ಯಾತ್ಮಕ'ದ ಅರ್ಥವನ್ನು 'ಮಹಾ' ಎಂದು ತಿಳಿದುಕೊಳ್ಳಬೇಕು ಮತ್ತು 'ವಿಶೇಷಾತ್ಮಕ'ದ ಅರ್ಥವನ್ನು 'ಅವಾಂತರ'ವೆಂದು ತಿಳಿದುಕೊಳ್ಳಬೇಕು. ಇಲ್ಲಿ ಸಾಮಾನ್ಯ - ವಿಶೇಷದ ಬೇರೆ ಅರ್ಥವನ್ನು ತಿಳಿದುಕೊಳ್ಳಬಾರದು.

೨. ನಿರಂಕುಶ-ಅಂಕುಶವಿಲ್ಲದ ; ವಿರುದ್ಧಪಕ್ಷವಿಲ್ಲದ ; ನಿಃಪ್ರತಿಪಕ್ಷ. [ಮೇಲೆ ಯಾವ ಸಾಮಾನ್ಯ ವಿಶೇಷಾತ್ಮಕ ಸತ್ತಾದ ವರ್ಣನೆ ಮಾಡಿದೆ ಅದು ಹಾಗಿದ್ದರೂ ಕೂಡ ಸರ್ವಥಾ ಹಾಗೆ ಇಲ್ಲ ; ಕಥಂಚಿತ್ (ಸಾಮಾನ್ಯ - ಅಪೇಕ್ಷೆಯಿಂದ) ಹಾಗೆ ಇದೆ ಮತ್ತು ಕಥಂಚಿತ್ (ವಿಶೇಷ-ಅಪೇಕ್ಷೆಯಿಂದ) ವಿರುದ್ಧ ಪ್ರಕಾರದ್ದಿದೆ.]

೩. ಸಪ್ರತಿಪಕ್ಷ - ಪ್ರತಿಪಕ್ಷಸಹಿತವಾದ ; ವಿಪಕ್ಷಸಹಿತವಾದ ; ವಿರುದ್ಧಪಕ್ಷ ಸಹಿತವಾದ.

ಮಾನೋಚ್ಛಿದ್ಯಮಾನಾವತಿಷ್ಠಮಾನಾನಾಂ ವಸ್ತುನಃ ಸ್ವರೂಪಾಣಾಂ ಪ್ರತ್ಯೇಕಂ ತ್ರೈಲಕ್ಷಣ್ಯಾಭಾವಾದತ್ರಿಲಕ್ಷಣತ್ವಂ ತ್ರಿಲಕ್ಷಣಾಯಾಃ । ಏಕಸ್ಯ ವಸ್ತುನಃ ಸ್ವರೂಪಸತ್ತಾ ನಾನ್ಯಸ್ಯ ವಸ್ತುನಃ ಸ್ವರೂಪಸತ್ತಾ ಭವತೀತ್ಯನೇಕತ್ವಮೇಕಸ್ಯಾಃ । ಪ್ರತಿನಿಯತಪದಾರ್ಥಸ್ಥಿತಾಭಿರೇವ ಸತ್ತಾಭಿಃ ಪದಾರ್ಥಾನಾಂ ಪ್ರತಿನಿಯಮೋ ಭವತೀತ್ಯೇಕಪದಾರ್ಥಸ್ಥಿತತ್ವಂ ಸರ್ವಪದಾರ್ಥಸ್ಥಿತಾಯಾಃ । ಪ್ರತಿನಿಯತೈಕರೂಪಾಭಿರೇವ ಸತ್ತಾಭಿಃ ಪ್ರತಿನಿಯತೈಕರೂಪತ್ವಂ ವಸ್ತೂನಾಂ ಭವತೀತ್ಯೇಕರೂಪತ್ವಂ ಸವಿಶ್ವರೂಪಾಯಾಃ । ಪ್ರತಿಪರ್ಯಾಯನಿಯತಾಭಿರೇವ ಸತ್ತಾಭಿಃ ಪ್ರತಿನಿಯತೈಕಪರ್ಯಾಯಾಣಾಮಾನಂತ್ಯಂ ಭವತೀತ್ಯೇಕಪರ್ಯಾಯತ್ವಮನಂತಪರ್ಯಾಯಾಯಾಃ । ಇತಿ ಸರ್ವಮನವದ್ಯಂ ಸಾಮಾನ್ಯವಿಶೇಷಪ್ರರೂಪಣಪ್ರವಣನಯದ್ವಯಾಯತ್ತತ್ವಾತ್ತದ್ದೇಶನಾಯಾಃ ।

ಉತ್ಪಾದವೊಂದೇ ಲಕ್ಷಣವಿದೆ ; ಯಾವ ಸ್ವರೂಪದಿಂದ ವ್ಯಯವಿದೆ ಅದರ (ಆ-ಸ್ವರೂಪದ) ಆ ಪ್ರಕಾರದಿಂದ ವ್ಯಯವೊಂದೇ ಲಕ್ಷಣವಿದೆ ಮತ್ತು ಯಾವ ಸ್ವರೂಪದಿಂದ ಧ್ರೌವ್ಯವಿದೆ ಅದರ (-ಆ ಸ್ವರೂಪದ) ಆ ಪ್ರಕಾರದಿಂದ ಧ್ರೌವ್ಯವೊಂದೇ ಲಕ್ಷಣವಿದೆ. ಅದಕ್ಕಾಗಿ ವಸ್ತುವಿನ ಉತ್ಪನ್ನವಾಗುವಂಥ, ನಷ್ಟವಾಗುವಂಥ ಮತ್ತು ಧ್ರುವವಿರುವಂಥ ತಮ್ಮ ಸ್ವರೂಪಗಳಲ್ಲಿ ಪ್ರತಿಯೊಂದಕ್ಕೆ ತ್ರಿಲಕ್ಷಣದ ಅಭಾವವಿರುವುದರಿಂದ ತ್ರಿಲಕ್ಷಣ (ಸತ್ತಾ) ಕ್ಕೆ ಅತ್ರಿಲಕ್ಷಣತ್ವವಿದೆ (ಎಂದರೆ ಯಾವ ಸಾಮಾನ್ಯ ವಿಶೇಷಾತ್ಮಕ ಸತ್ತಾವು ಮಹಾಸತ್ತಾರೂಪವಾಗುವುದರಿಂದ 'ತ್ರಿಲಕ್ಷಣ'ವಿದೆ ಅದೇ ಇಲ್ಲಿ ಹೇಳಲಾದ ಅವಾಂತರಸತ್ತಾರೂಪವೂ ಆಗುವುದರಿಂದ 'ಅತ್ರಿಲಕ್ಷಣ'ವೂ ಇದೆ. ೩) ಒಂದು ವಸ್ತುವಿನ ಸ್ವರೂಪಸತ್ತಾವು ಇನ್ನೊಂದು ವಸ್ತುವಿನ ಸ್ವರೂಪಸತ್ತಾ ಇಲ್ಲದಿರುವುದರಿಂದ ಒಂದಕ್ಕೆ (ಸತ್ತಾಗೆ) ಅನೇಕತ್ವವಿದೆ (ಎಂದರೆ ಯಾವ ಸಾಮಾನ್ಯ ವಿಶೇಷಾತ್ಮಕ ಸತ್ತಾವು ಮಹಾಸತ್ತಾರೂಪದಿಂದಾಗುವುದರಿಂದ 'ಏಕ'ವಿದೆ ಅದೇ ಇಲ್ಲಿ ಹೇಳಲಾದ ಅವಾಂತರಸತ್ತಾರೂಪವೂ ಆಗುವುದರಿಂದ 'ಅನೇಕ'ವೂ ಇದೆ.) ೪) ಪ್ರತಿನಿಶ್ಚಿತ (ವ್ಯಕ್ತಿಗತ ನಿಶ್ಚಿತ)ವಾದ ಪದಾರ್ಥದಲ್ಲಿ ಸ್ಥಿರವಾದ ಸತ್ತಾಗಳ ಮುಖಾಂತರವೇ ಪದಾರ್ಥಗಳ ಪ್ರತಿನಿಶ್ಚಿತತನ (ಬೇರೆ ಬೇರೆ ನಿಶ್ಚಿತ ವ್ಯಕ್ತಿತ್ವ)ವಾಗುತ್ತದೆಂದು ಸರ್ವಪದಾರ್ಥಸ್ಥಿತ (ಸತ್ತಾ) ಕ್ಕೆ ಏಕಪದಾರ್ಥಸ್ಥಿತತ್ವವಿದೆ (ಎಂದರೆ ಯಾವ ಸಾಮಾನ್ಯ ವಿಶೇಷಾತ್ಮಕವಾದ ಸತ್ತಾವು ಮಹಾಸತ್ತಾ ರೂಪವಾಗುವುದರಿಂದ 'ಸರ್ವಪದಾರ್ಥಸ್ಥಿತ'ವಿದೆ ಅದೇ ಇಲ್ಲಿ ಹೇಳಲಾದ ಅವಾಂತರಸತ್ತಾರೂಪವೂ ಇರುವುದರಿಂದ 'ಏಕಪದಾರ್ಥಸ್ಥಿತ'ವೂ ಇದೆ.) ೫) ಪ್ರತಿನಿಶ್ಚಿತ ಒಂದೊಂದು ರೂಪವುಳ್ಳ ಸತ್ತಾಗಳ ಮುಖಾಂತರವೇ ವಸ್ತುಗಳ ಪ್ರತಿನಿಶ್ಚಿತವಾದ ಒಂದೊಂದು ರೂಪವಾಗುತ್ತಿರುವುದರಿಂದ ಸವಿಶ್ವರೂಪ (ಸತ್ತಾ) ಕ್ಕೆ ಏಕರೂಪತ್ವವಿದೆ (ಎಂದರೆ ಯಾವ ಸಾಮಾನ್ಯ ವಿಶೇಷಾತ್ಮಕವಾದ ಸತ್ತಾವು ಮಹಾಸತ್ತಾರೂಪವಾಗುವುದರಿಂದ 'ಸವಿಶ್ವರೂಪ'ವಿದೆ ಅದೇ ಇಲ್ಲಿ ಹೇಳಲಾದ ಅವಾಂತರ ಸತ್ತಾರೂಪವೂ ಇರುವುದರಿಂದ 'ಏಕರೂಪ'ವೂ ಇದೆ.) ೬) ಪ್ರತಿಯೊಂದು ಪರ್ಯಾಯ-ದಲ್ಲಿ ಸ್ಥಿರ (ವ್ಯಕ್ತಿಗತ ಬೇರೆ ಬೇರೆ)ವಾದ ಸತ್ತಾಗಳ ಮುಖಾಂತರವೇ ಪ್ರತಿನಿಶ್ಚಿತ ಒಂದೊಂದು ಪರ್ಯಾಯಗಳ ಅನಂತತೆಯಿರುವುದರಿಂದ ಅನಂತ ಪರ್ಯಾಯಮಯ (ಸತ್ತಾ)ಕ್ಕೆ ಏಕ ಪರ್ಯಾಯಮಯತ್ವವಿದೆ (ಎಂದರೆ ಯಾವ ಸಾಮಾನ್ಯ ವಿಶೇಷಾತ್ಮಕವಾದ ಸತ್ತಾವು ಮಹಾಸತ್ತಾರೂಪವಿರುವುದರಿಂದ 'ಅನಂತ ಪರ್ಯಾಯ- ಮಯ'ವಿದೆ ಅದೇ ಇಲ್ಲಿ ಹೇಳಲಾದ ಅವಾಂತರಸತ್ತಾರೂಪವು ಇರುವುದರಿಂದ 'ಏಕಪರ್ಯಾಯಮಯ'ವೂ ಇದೆ.)

ಈ ಪ್ರಕಾರವಾಗಿ ಎಲ್ಲವೂ ನಿರವದ್ಯವಿದೆ (ಎಂದರೆ ಮೇಲೆ ಹೇಳಿದ ಎಲ್ಲ ಸ್ವರೂಪವು ನಿರ್ದೋಷವಿದೆ, ನಿರ್ಬಾಧವಿದೆ, ಸ್ವಲ್ಪವೂ ವಿರೋಧವುಳ್ಳದ್ದಿಲ್ಲ-) ಏಕೆಂದರೆ ಅದರ (ಸತ್ತಾಸ್ವರೂಪದ) ಕಥನವು ಸಾಮಾನ್ಯ ಮತ್ತು ವಿಶೇಷದ ಪ್ರರೂಪಣೆಯತ್ತ ಒಲಿಯುತ್ತ ಎರಡು ನಯಗಳ ಆಧೀನವಿದೆ.

ದವಿಯದಿ ಗಚ್ಛದಿ ತಾಇಂ ತಾಇಂ ಸಬ್ಭಾವಪಜ್ಜಯಾಇಂ ಜಂ ।
ದವಿಯಂ ತಂ ಭಣ್ಣಂತೇ ಅಣಣ್ಣಭೂದಂ ತು ಸತ್ತಾದೋ ॥೯॥

ದ್ರವತಿ ಗಚ್ಛತಿ ತಾಂಸ್ತಾನ್ ಸದ್ಭಾವಪರ್ಯಾಯಾನ್ ಯತ್ ।
ದ್ರವ್ಯಂ ತತ್ ಭಣಂತಿ ಅನನ್ಯಭೂತಂ ತು ಸತ್ತಾತಃ ॥೯॥

ಭಾವಾರ್ಥ :- ಸಾಮಾನ್ಯವಿಶೇಷಾತ್ಮಕವಾದ ಸತ್ತಾದಲ್ಲಿ ಮೊದಲನೆಯದು ಮಹಾಸತ್ತಾಪಕ್ಷ ಮತ್ತು ಎರಡನೆಯದು ಅವಾಂತರಸತ್ತಾಪಕ್ಷವೆಂದು ಎರಡು ಪಕ್ಷಗಳಿವೆ. ೧) ಮಹಾಸತ್ತಾವು ಅವಾಂತರ ಸತ್ತಾರೂಪದಿಂದ ಅಸತ್ತಾ ಇದೆ ಮತ್ತು ಅವಾಂತರಸತ್ತಾವು ಮಹಾಸತ್ತಾರೂಪದಿಂದ ಅಸತ್ತಾ ಇದೆ ; ಆದುದರಿಂದ ಒಂದು ವೇಳೆ ಮಹಾಸತ್ತಾಗೆ 'ಸತ್ತಾ' ಎಂದು ಹೇಳಿದರೆ ಅವಾಂತರಸತ್ತಾಗೆ 'ಅಸತ್ತಾ' ಎಂದು ಹೇಳಲಾಗುವುದು. ೨) ಮಹಾಸತ್ತಾ ಇದು ಉತ್ಪಾದ, ವ್ಯಯ ಮತ್ತು ಧ್ರೌವ್ಯವೆಂದು ಮೂರು ಲಕ್ಷಣವುಳ್ಳದ್ದಿರುವುದರಿಂದ ಅದು 'ತ್ರಿಲಕ್ಷಣ'ವಿದೆ. ವಸ್ತುವಿನ ಉತ್ಪನ್ನವಾಗುವಂಥ ಸ್ವರೂಪದ ಉತ್ಪಾದವೇ ಒಂದು ಲಕ್ಷಣವಿದೆ, ನಷ್ಟವಾಗುವಂಥ ಸ್ವರೂಪದ ವ್ಯಯವೇ ಒಂದು ಲಕ್ಷಣವಿದೆ ಮತ್ತು ಧ್ರುವವಿರುವಂಥ ಸ್ವರೂಪದ ಧ್ರೌವ್ಯವೇ ಒಂದು ಲಕ್ಷಣವಿರುವುದರಿಂದ ಅವು ಮೂರು ಸ್ವರೂಪಗಳೊಳಗಿಂದ ಪ್ರತಿಯೊಂದರ ಅವಾಂತರಸತ್ತಾವು ಒಂದೇ ಲಕ್ಷಣವುಳ್ಳದ್ದಿರುವುದರಿಂದ 'ಅತ್ರಿಲಕ್ಷಣ'ವಿದೆ. ೩) ಮಹಾಸತ್ತಾವು ಸಮಸ್ತ ಪದಾರ್ಥಸಮೂಹದಲ್ಲಿ 'ಸತ್, ಸತ್, ಸತ್' ಎಂಬ ಸಮಾನತೆಯನ್ನು ದರ್ಶಿಸುತ್ತಿರುವುದರಿಂದ ಏಕವಿದೆ. ಒಂದು ವಸ್ತುವಿನ ಸ್ವರೂಪಸತ್ತಾವು ಬೇರೆ ಯಾವುದೇ ವಸ್ತುವಿನ ಸ್ವರೂಪಸತ್ತಾವಿಲ್ಲದಿರುವುದರಿಂದ ಎಷ್ಟು ವಸ್ತುಗಳಿವೆ ಅಷ್ಟು ಸ್ವರೂಪಸತ್ತಾಗಳಿವೆ ; ಅದಕ್ಕಾಗಿ ಇಂಥ ಸ್ವರೂಪಸತ್ತಾಗಳು ಅಥವಾ ಅವಾಂತರಸತ್ತಾಗಳು 'ಅನೇಕ'ವಿವೆ. ೪) ಎಲ್ಲ ಪದಾರ್ಥಗಳು ಸತ್ ಇರುವುದರಿಂದ ಮಹಾಸತ್ತಾವು 'ಎಲ್ಲ ಪದಾರ್ಥಗಳಲ್ಲಿ ಸ್ಥಿರ'ವಿದೆ. ವ್ಯಕ್ತಿಗತ ಪದಾರ್ಥಗಳಲ್ಲಿ ಸ್ಥಿರವಾದ ಬೇರೆ ಬೇರೆ ವ್ಯಕ್ತಿಗತ ಸತ್ತಾಗಳ ಮುಖಾಂತರವೇ ಪದಾರ್ಥಗಳ ಬೇರೆ-ಬೇರೆ ನಿಶ್ಚಿತ ವ್ಯಕ್ತಿತ್ವವಿರುವ ಸಾಧ್ಯತೆಯಿದೆ, ಅದಕ್ಕಾಗಿ ಆಯಾ ಪದಾರ್ಥದ ಅವಾಂತರ ಸತ್ತಾವು ಆಯಾಯ 'ಒಂದು ಪದಾರ್ಥದಲ್ಲಿಯೇ ಸ್ಥಿರ'ವಿದೆ. ೫) ಮಹಾಸತ್ತಾವು ಎಲ್ಲ ವಸ್ತುಸಮೂಹದ ರೂಪಗಳ (ಸ್ವಭಾವಗಳ) ಸಹಿತವಾಗಿರುವುದರಿಂದ ಅದು 'ಸವಿಶ್ವರೂಪ' (ಎಲ್ಲ ರೂಪವುಳ್ಳದ್ದು) ಇದೆ. ವಸ್ತುವಿನ ಸತ್ತಾದ (ಕಥಂಚಿತ್) ಒಂದು ರೂಪವಿದ್ದಾಗಲೇ ಆ ವಸ್ತುವಿನ ನಿಶ್ಚಿತವಾದ ಒಂದು ರೂಪು (-ನಿಶ್ಚಿತವಾದ ಒಂದು ಸ್ವಭಾವವು) ಇರುವ ಸಾಧ್ಯತೆಯಿದೆ, ಅದಕ್ಕಾಗಿ ಪ್ರತಿಯೊಂದು ವಸ್ತುವಿನ ಅವಾಂತರಸತ್ತಾವು ನಿಶ್ಚಿತವಾಗಿ 'ಒಂದು ರೂಪವುಳ್ಳ'ದ್ದೇ ಇದೆ. ೬) ಮಹಾಸತ್ತಾವು ಎಲ್ಲ ಪರ್ಯಾಯಗಳಲ್ಲಿ ಸ್ಥಿರವಿರುವುದರಿಂದ ಅದು 'ಅನಂತಪರ್ಯಾಯಮಯ'ವಿದೆ. ಬೇರೆ ಬೇರೆ ಪರ್ಯಾಯಗಳಲ್ಲಿ(ಕಥಂಚಿತ್) ಬೇರೆ - ಬೇರೆ ಸತ್ತಾಗಳಿದ್ದಾಗಲೇ ಪ್ರತಿಯೊಂದು ಪರ್ಯಾಯವು ಬೇರೆ-ಬೇರೆಯಿದ್ದು ಅನಂತಪರ್ಯಾಯಗಳು ಸಿದ್ಧವಾಗುವವು, ಇಲ್ಲದಿದ್ದರೆ ಪರ್ಯಾಯಗಳ ಅನಂತತೆಯೇ ಉಳಿಯಲಾರದು, ಏಕತ್ವವಾಗಿ ಹೋಗುವುದು ; ಅದಕ್ಕಾಗಿ ಪ್ರತಿಯೊಂದು ಪರ್ಯಾಯದ ಅವಾಂತರಸತ್ತಾವು ಆಯಾಯ 'ಏಕಪರ್ಯಾಯಮಯ'ವೇ ಇದೆ.

ಆವುದು ಆಯಾಯಸದ್ಭಾವಪರ್ಯಾಯಗಳಿಗೆ ದ್ರವಿತಮೇಣ್ಪ್ಪವಾಗುವುದು ।
ದ್ರವ್ಯವೆಂದದಕೆ ಸರ್ವಜ್ಞ ಪೇಳಿಹರು ಸತ್ತಾದಿಂದನನ್ಯ ತಾನಾಗಿದೆ ॥೯॥

ಅತ್ರ ಸತ್ತಾದ್ರವ್ಯಯೋರರ್ಥಾಂತರತ್ವಂ ಪ್ರತ್ಯಾಖ್ಯಾತಮ್ ।

ದ್ರವತಿ ಗಚ್ಛತಿ ಸಾಮಾನ್ಯರೂಪೇಣ ಸ್ವರೂಪೇಣ ವ್ಯಾಪ್ನೋತಿ ತಾಂಸ್ತಾನ್ ಕ್ರಮಭುವಃ ಸಹಭುವಶ್ಚ ಸದ್ಭಾವಪರ್ಯಾಯಾನ್ ಸ್ವಭಾವವಿಶೇಷಾನಿತ್ಯನುಗತಾರ್ಥಯಾ ನಿರುಕ್ತ್ಯಾ ದ್ರವ್ಯಂ ವ್ಯಾಖ್ಯಾತಮ್ । ದ್ರವ್ಯಂ ಚ ಲಕ್ಷ್ಯಲಕ್ಷಣಭಾವಾದಿಭ್ಯಃ ಕಥಂಚಿದ್ಭೇದೇಽಪಿ ವಸ್ತುತಃ ಸತ್ತಾಯಾ ಅಪೃಥಗ್ಭೂತಮೇವೇತಿ ಮಂತವ್ಯಮ್ । ತತೋ ಯತ್ಪೂರ್ವಂ ಸತ್ತ್ವಮಸತ್ತ್ವಂ ತ್ರಿಲಕ್ಷಣತ್ವಮತ್ರಿಲಕ್ಷಣತ್ವಮೇಕತ್ವಮನೇಕತ್ವಂ ಸರ್ವಪದಾರ್ಥಸ್ಥಿತತ್ವಮೇಕಪದಾರ್ಥ-ಸ್ಥಿತತ್ವಂ ವಿಶ್ವರೂಪತ್ವಮೇಕರೂಪತ್ವಮನಂತಪರ್ಯಾಯತ್ವಮೇಕಪರ್ಯಾಯತ್ವಂ ಚ ಪ್ರತಿಪಾದಿತಂ ಸತ್ತಾಯಾಸ್ತತ್ಸರ್ವಂ ತದನರ್ಥಾಂತರಭೂತಸ್ಯ ದ್ರವ್ಯಸ್ಯೈವ ದ್ರಷ್ಟವ್ಯಮ್ । ತತೋ ನ ಕಶ್ಚಿದಪಿ ತೇಷು ಸತ್ತಾವಿಶೇಷೋಽವ ಶಿಷ್ಯೇತ ಯಃ ಸತ್ತಾಂ ವಸ್ತುತೋ ದ್ರವ್ಯಾತ್ಪೃಥಕ್ ವ್ಯವಸ್ಥಾಪಯೇದಿತಿ ।

ಹೀಗೆ ಸಾಮಾನ್ಯ ವಿಶೇಷಾತ್ಮಕ ಸತ್ತಾ , ಮಹಾಸತ್ತಾರೂಪ ಹಾಗೂ ಅವಾಂತರ ಸತ್ತಾರೂಪವಾಗುವುದರಿಂದ, ೧) ಸತ್ತಾವೂ ಇದೆ ಮತ್ತು ಅಸತ್ತಾವೂ ಇದೆ, ೨) ತ್ರಿಲಕ್ಷಣವೂ ಇದೆ ಮತ್ತು ಅತ್ರಿಲಕ್ಷಣವೂ ಇದೆ, ೩) ಏಕವೂ ಇದೆ ಮತ್ತು ಅನೇಕವೂ ಇದೆ, ೪) ಸರ್ವಪದಾರ್ಥಸ್ಥಿತವೂ ಇದೆ ಮತ್ತು ಏಕಪದಾರ್ಥಸ್ಥಿತವೂ ಇದೆ. ೫) ಸವಿಶ್ವರೂಪವೂ ಇದೆ ಮತ್ತು ಏಕರೂಪವೂ ಇದೆ, ೬) ಅನಂತಪರ್ಯಾಯಮಯವೂ ಇದೆ ಮತ್ತು ಏಕಪರ್ಯಾಯಮಯವೂ ಇದೆ.

ಗಾಥೆ - ೯

ಗಾಥಾರ್ಥ :- [ತಾಇಂ ತಾಇಂ ಸಬ್ಭಾವಪಜ್ಜಯಾಇಂ] ಆಯಾಯ ಸದ್ಭಾವಪರ್ಯಾಯಗಳಿಗೆ [ಜಂ) ಯಾವುದು [ದವಿಯದಿ) ದ್ರವಿತವಾಗುತ್ತದೆ - [ಗಚ್ಛದಿ] ಪ್ರಾಪ್ತವಾಗುತ್ತದೆ, [ತಂ] ಅದಕ್ಕೆ [ದವಿಯಂ ಭಣ್ಣಂತಿ] (ಸರ್ವಜ್ಞರು) ದ್ರವ್ಯವೆಂದು ಹೇಳುತ್ತಾರೆ ; [ಸತ್ತಾದೋ ಅಣ್ಣಭೂದಂ ತು] ಏಕೆಂದರೆ ಅದು ಸತ್ತಾದಿಂದ ಅನನ್ಯಭೂತ - ಅಭಿನ್ನವಿದೆ.

ಟೀಕೆ :- ಇಲ್ಲಿ ಸತ್ತಾ ಮತ್ತು ದ್ರವ್ಯಕ್ಕೆ ಅರ್ಥಾಂತರತೆ (ಭಿನ್ನಪದಾರ್ಥತೆ, ಅನನ್ಯ ಪದಾರ್ಥತೆ) ಯಾಗುವುದರ ಖಂಡನೆ ಮಾಡಲಾಗಿದೆ.

'ಆಯಾಯ ಕ್ರಮಭಾವಿ ಮತ್ತು ಸಹಭಾವಿಯಾದ ಸದ್ಭಾವಪರ್ಯಾಯಗಳಿಗೆ ಎಂದರೆ ಸ್ವಭಾವ ವಿಶೇಷಗಳಿಗೆ ಯಾವುದು ದ್ರವಿತ[೧]ವಾಗುತ್ತದೆ - ಪ್ರಾಪ್ತವಾಗುತ್ತದೆ - ಸಾಮಾನ್ಯರೂಪ ಸ್ವರೂಪದಿಂದ ವ್ಯಾಪ್ತವಾಗುತ್ತದೆ ಅದು ದ್ರವ್ಯವಿದೆ' - ಹೀಗೆ ಅನುಗತ[೨] ಅರ್ಥವುಳ್ಳ ನಿರುಕ್ತಿಯಿಂದ ದ್ರವ್ಯದ ವ್ಯಾಖ್ಯೆ ಮಾಡಿತು. ಮತ್ತು ಒಂದು ವೇಳೆ ಲಕ್ಷ್ಯಲಕ್ಷಣ[೩] ಭಾವಾದಿಕದ ಮುಖಾಂತರ ದ್ರವ್ಯಕ್ಕೆ ಸತ್ತಾದಿಂದ ಕಥಂಚಿತ್ ಭೇದವಿದ್ದಾಗ್ಯೂ ವಸ್ತುತಃ

---

೧. ಶ್ರೀ ಜಯಸೇನಾಚಾರ್ಯದೇವರ ಟೀಕೆಯಲ್ಲೂ ಇಲ್ಲಿಯಂತೆಯೇ 'ದ್ರವತಿ ಗಚ್ಛತಿ'ಯ ಒಂದು ಅರ್ಥವನ್ನಂತೂ 'ದ್ರವಿತವಾಗುತ್ತದೆ' ಎಂದರೆ 'ಪ್ರಾಪ್ತವಾಗುತ್ತದೆ' - ಎಂದೇ ಮಾಡಲಾಗಿದೆ ; ಅನಂತರ 'ದ್ರವಿತ ಎಂದರೆ ಸ್ವಭಾವಪರ್ಯಾಯಗಳಿಗೆ ದ್ರವಿತವಾಗುತ್ತದೆ ಮತ್ತು ಗಚ್ಛತಿ ಎಂದರೆ ವಿಭಾವಪರ್ಯಾಯಗಳಿಗೆ ಪ್ರಾಪ್ತವಾಗುತ್ತದೆ'ಂಬ ಎರಡನೆಯ ಅರ್ಥವನ್ನೂ ಅಲ್ಲಿ ಮಾಡಲಾಗಿದೆ.

೨. ಇಲ್ಲಿ ದ್ರವ್ಯದ ಯಾವ ನಿರುಕ್ತಿ ಮಾಡಲಾಗಿದೆ ಅದು 'ದ್ರು' ಧಾತುವಿನ ಅನುಸರಣೆ ಮಾಡುತ್ತಿರುವ (ಬೆರೆಯುತ್ತಿರುವ) ಅರ್ಥವುಳ್ಳದ್ದಿದೆ.

೩. ಸತ್ತಾ ಇದು ಲಕ್ಷಣವಿದೆ ಮತ್ತು ದ್ರವ್ಯವು ಲಕ್ಷ್ಯವಿದೆ.

ದವ್ವಂ ಸಲ್ಲಕ್ಖಣೆಯಂ ಉಪ್ಪಾದವ್ವಯಧುವತ್ತಸಂಜುತ್ತಂ ।
ಗುಣಪಜ್ಜಯಾಸಯಂ ವಾ ಜಂ ತಂ ಭಣ್ಣಂತಿ ಸವ್ವಣ್ಹೂ ॥೧೦॥

ದ್ರವ್ಯಂ ಸಲ್ಲಕ್ಷಣಕಂ ಉತ್ಪಾದವ್ಯಯಧ್ರುವತ್ವಸಂಯುಕ್ತಮ್ ।
ಗುಣಪರ್ಯಾಯಾಶ್ರಯಂ ವಾ ಯತ್ತದ್ಭಣಂತಿ ಸರ್ವಜ್ಞಾಃ ॥೧೦॥

ಅತ್ರ ತ್ರೇಧಾ ದ್ರವ್ಯಲಕ್ಷಣಮುಕ್ತಮ್

ಸದ್ದ್ರವ್ಯಲಕ್ಷಣಮ್ । ಉಕ್ತಲಕ್ಷಣಾಯಾಃ ಸತ್ತಾಯಾ ಅವಿಶೇಷಾದ್ದ್ರವ್ಯಸ್ಯ ಸತ್ಸ್ವರೂಪಮೇವ ಲಕ್ಷಣಮ್ । ನ ಚಾನೇಕಾಂತಾತ್ಮಕಸ್ಯ ದ್ರವ್ಯಸ್ಯ ಸನ್ಮಾತ್ರಮೇವ ಸ್ವಂ ರೂಪಂ ಯತೋ ಲಕ್ಷ್ಯಲಕ್ಷಣವಿಭಾಗಾಭಾವ । ಇತಿ ಉತ್ಪಾದವ್ಯಯಧ್ರೌವ್ಯಾಣಿ ವಾ ದ್ರವ್ಯಲಕ್ಷಣಮ್ । ಏಕಜಾತ್ಯವಿರೋಧಿನಿ ಕ್ರಮಭುವಾಂ ಭಾವಾನಾಂ ಸಂತಾನೇ ಪೂರ್ವಭಾವವಿನಾಶಃ ಸಮುಚ್ಛೇದಃ, ಉತ್ತರಭಾವಪ್ರಾದುರ್ಭಾವಶ್ಚ ಸಮುತ್ಪಾದಃ, ಪೂರ್ವೋತ್ತರ-

---

(ಪರಮಾರ್ಥತಃ) ದ್ರವ್ಯವು ಸತ್ತಾದಿಂದ ಅಪೃಥಕ್ಕವೇ ಇದೆಯೆಂದು ಮನ್ನಿಸುವುದು ಅದಕ್ಕಾಗಿ ಮೊದಲು (ಇನೇ ಗಾಥೆಯಲ್ಲಿ) ಸತ್ತಾಕ್ಕೆ ಯಾವ ಸತ್‌ತನ, ಅಸತ್‌ತನ, ತ್ರಿಲಕ್ಷಣತನ, ಅತ್ರಿಲಕ್ಷಣತನ, ಏಕತನ, ಅನೇಕತನ, ಸರ್ವಪದಾರ್ಥಸ್ಥಿತತನ, ಏಕಪದಾರ್ಥಸ್ಥಿತತನ, ವಿಶ್ವರೂಪತನ, ಏಕರೂಪತನ, ಅನಂತಪರ್ಯಾಯಮಯತನ ಮತ್ತು ಏಕಪರ್ಯಾಯಮಯತನಗಳನ್ನು ಹೇಳಲಾಗಿದೆ. ಅವೆಲ್ಲವೂ ಸತ್ತಾದಿಂದ ಅನರ್ಥಾಂತರಭೂತ (ಅಭಿನ್ನಪದಾರ್ಥಭೂತ, ಅನನ್ಯಪದಾರ್ಥಭೂತ)ವಾದ ದ್ರವ್ಯವನ್ನೇ ನೋಡುವುದು (ಎಂದರೆ ಸತ್‌ತನ, ಅಸತ್‌ತನ, ತ್ರಿಲಕ್ಷಣತನ, ಅತ್ರಿಲಕ್ಷಣತನ ಮೊದಲಾದುವೆಲ್ಲ ಸತ್ತಾದ ವಿಶೇಷಗಳು ದ್ರವ್ಯದ್ದೇ ಇವೆಯೆಂದು ಮನ್ನಿಸುವುದು). ಅದಕ್ಕಾಗಿ ಅವುಗಳಲ್ಲಿ (ಆ ಸತ್ತಾದ ವಿಶೇಷಗಳಲ್ಲಿ) ಸತ್ತಾವನ್ನು ವಸ್ತುತಃ (ಪರಮಾರ್ಥತಃ) ದ್ರವ್ಯದಿಂದ ಬೇರೆಯಾಗಿ ಸ್ಥಾಪನೆ ಮಾಡುವಂಥ ಯಾವ ಸತ್ತಾ ವಿಶೇಷಗಳು ಬಾಕಿ ಉಳಿಯುವುದಿಲ್ಲ.

ಗಾಥೆ - ೧೦

ಗಾಥಾರ್ಥ ಃ- [ಜಂ] ಯಾವುದು [ಸಲ್ಲಕ್ಖಣಿಯಂ] 'ಸತ್' ಲಕ್ಷಣವುಳ್ಳದ್ದಿದೆ, [ಉಪ್ಪಾದವ್ವಯಧುವತ್ತಸಂಜುತ್ತ] ಯಾವುದು ಉತ್ಪಾದವ್ಯಯಧ್ರೌವ್ಯಸಂಯುಕ್ತವಿದೆ [ವಾ] ಅಥವಾ [ಗುಣಪಜ್ಜಯಾಸಯಂ] ಯಾವುದು ಗುಣಪರ್ಯಾಯಗಳ ಆಶ್ರಯವಿದೆ [ತಂ] ಅದಕ್ಕೆ [ಸವ್ವಣ್ಹೂ] ಸರ್ವಜ್ಞರು [ದವ್ವಂ] ದ್ರವ್ಯವೆಂದು [ಭಣ್ಣಂತಿ] ಹೇಳುತ್ತಾರೆ.

ಟೀಕೆ ಃ- ಇಲ್ಲಿ ದ್ರವ್ಯದ ಲಕ್ಷಣವನ್ನು ಮೂರು ಪ್ರಕಾರದಿಂದ ಹೇಳಿದೆ.

'ಸತ್' ಇದು ದ್ರವ್ಯದ ಲಕ್ಷಣವಿದೆ. ಪೂರ್ವೋಕ್ತ ಲಕ್ಷಣವುಳ್ಳ ಸತ್ತಾದಿಂದ ದ್ರವ್ಯವು ಅಭಿನ್ನವಾಗಿರುವ ಕಾರಣ 'ಸತ್' ಸ್ವರೂಪವೇ ದ್ರವ್ಯದ ಲಕ್ಷಣವಿದೆ ಮತ್ತು ಯಾವುದರಿಂದ ಲಕ್ಷ್ಯಲಕ್ಷಣ ವಿಭಾಗದ ಅಭಾವವಾಗುವುದು

ಯಾವುದು ಉತ್ಪಾದವ್ಯಯಧ್ರೌವ್ಯಸಂಯುಕ್ತ ಮೇಣ್ ಸಲಕ್ಷಣವುಳ್ಳುದಿಲ್ಲವೆ ।
ಈವುದು ಗುಣಪರ್ಯಾಯಗಳಿಗಾಸರೆಯದಕೆ ಸರ್ವಜ್ಞದ್ರವ್ಯವೆಂದಿಹರು ॥೧೦॥

ಭಾವೋಚ್ಛೇದೋತ್ಪಾದಯೋರಪಿ ಸ್ವಜಾತೇರಪರಿತ್ಯಾಗೋಧ್ರೌವ್ಯಮ್ । ತಾನಿ ಸಾಮಾನ್ಯಾದೇಶಾದಭಿನ್ನಾನಿ ವಿಶೇಷಾದೇಶಾದ್ಭಿನ್ನಾನಿ ಯುಗಪದ್ಭಾವೀನಿ ಸ್ವಭಾವಭೂತಾನಿ ದ್ರವ್ಯಸ್ಯ ಲಕ್ಷಣಂ ಭವಂತೀತಿ । ಗುಣಪರ್ಯಾಯಾ ವಾ ದ್ರವ್ಯಲಕ್ಷಣಮ್ । ಅನೇಕಾಂತಾತ್ಮಕಸ್ಯ ವಸ್ತುನೋಽನ್ವಯಿನೋ ವಿಶೇಷಾ ಗುಣಾ ವ್ಯತಿರೇಕಿಣಃ ಪರ್ಯಾಯಾಸ್ತೇ ದ್ರವ್ಯೇ ಯೌಗಪದ್ಯೇನ ಕ್ರಮೇಣ ಚ ಪ್ರವರ್ತಮಾನಾಃ ಕಥಂಚಿದ್ಭಿನ್ನಾಃ ಕಥಂಚಿದಭಿನ್ನಾಃ ಸ್ವಭಾವಭೂತಾಃ ದ್ರವ್ಯ-ಲಕ್ಷಣತಾಮಾಪದ್ಯಂತೇ । ತ್ರಯಾಣಾಮಪ್ಯಮೀಷಾಂ ದ್ರವ್ಯಲಕ್ಷಣಾನಾಮೇಕಸ್ಮಿನ್ನಭಿಹಿತೇಽನ್ಯದುಭಯಮರ್ಥಾ-ದೇವಾಪದ್ಯತೇ । ಸಚ್ಚೈದುತ್ಪಾದವ್ಯಯಧ್ರೌವ್ಯವಚ್ಚ ಗುಣಪರ್ಯಾಯವಚ್ಚ । ಉತ್ಪಾದವ್ಯಯಧ್ರೌವ್ಯವಚ್ಚೈತ್ಸಚ್ಚ ಗುಣಪರ್ಯಾಯವಚ್ಚ । ಗುಣಪರ್ಯಾಯವಚ್ಚೈತ್ಸಚ್ಚೋತ್ಪಾದವ್ಯಯಧ್ರೌವ್ಯವಚ್ಚೈತಿ । ಸದ್ಧಿ ನಿತ್ಯಾನಿತ್ಯಸ್ವಭಾವತ್ವಾದ್ ಧ್ರುವತ್ವಮುತ್ಪಾದವ್ಯಯಾತ್ಮಕತಾಂ ಚ ಪ್ರಥಯತಿ, ಧ್ರುವತ್ವಾತ್ಮಕೈರ್ಗುಣೈರುತ್ಪಾದವ್ಯಯಾತ್ಮಕೈಃ ಪರ್ಯಾಯೈಶ್ಚ ಸಹೈಕತ್ವಂ ಚಾಖ್ಯಾತಿ । ಉತ್ಪಾದವ್ಯಯಧ್ರೌವ್ಯಾಣಿ ತು ನಿತ್ಯಾನಿತ್ಯಸ್ವರೂಪಂ ಪರಮಾರ್ಥಂ ಸದಾವೇದಯಂತಿ, ಗುಣಪರ್ಯಾಯಾಂಶ್ಚಾತ್ಮಲಾಭನಿಬಂಧನಭೂತಾನ್ ಪ್ರಥಯಂತಿ । ಗುಣಪರ್ಯಾಯಾಸ್ತ ನ್ವಯವ್ಯತಿರೇಕಿತ್ವಾದ್ ಧ್ರೌವ್ಯೋತ್ಪತ್ತಿವಿನಾಶಾನ್ ಸೂಚಯಂತಿ, ನಿತ್ಯಾನಿತ್ಯಸ್ವಭಾವಂ ಪರಮಾರ್ಥಂ ಸಚ್ಚೋಪಲಕ್ಷಯಂತೀತಿ ।

ಅಂಥ ಅನೇಕಾಂತಾತ್ಮಕವಾದ ದ್ರವ್ಯದ ಸತ್ ಮಾತ್ರವೇ ಸ್ವರೂಪವಲ್ಲ. (ದ್ರವ್ಯವು ಸತ್ತಾದಿಂದ ಅಭಿನ್ನವಿರುವುದರಿಂದ ಯಾವ ಸತ್ತಾರೂಪವಾದ ದ್ರವ್ಯದ ಸ್ವರೂಪವಿದೆ ಅದೇ ದ್ರವ್ಯದ ಲಕ್ಷಣವಿದೆ.

ಪ್ರಶ್ನೆ :- ಒಂದು ವೇಳೆ ಸತ್ತಾ ಮತ್ತು ದ್ರವ್ಯ ಇವು ಅಭಿನ್ನವಿದ್ದು ಸತ್ತಾ ಇದು ದ್ರವ್ಯದ ಸ್ವರೂಪವೇ ಇದ್ದರೆ 'ಸತ್ತಾ ಲಕ್ಷಣವಿದೆ ಮತ್ತು ದ್ರವ್ಯವು ಲಕ್ಷ್ಯವಿದೆ'ಯೆಂಬ ವಿಭಾಗವು ಯಾವ ಪ್ರಕಾರ ಘಟಿತವಾಗುತ್ತದೆ ?

ಉತ್ತರ :- ಅನೇಕಾಂತಾತ್ಮಕವಾದ ದ್ರವ್ಯದ ಅನಂತ ಸ್ವರೂಪಗಳಿವೆ, ಅವುಗಳೊಳಗೆ ಸತ್ತಾವೂ ಕೂಡ ಅದರ ಒಂದು ಸ್ವರೂಪವಿದೆ ; ಅದಕ್ಕಾಗಿ ಅನಂತಸ್ವರೂಪವುಳ್ಳ ದ್ರವ್ಯವು ಲಕ್ಷ್ಯವಿದೆ ಮತ್ತು ಅದರ ಸತ್ತಾಯೆಂಬ ಹೆಸರಿನ ಸ್ವರೂಪವು ಲಕ್ಷಣವಿದೆ - ಇಂಥ ಲಕ್ಷ್ಯಲಕ್ಷಣವಿಭಾಗವು ಅವಶ್ಯವಾಗಿ ಸಂಭವಿಸುತ್ತದೆ. ಈ ಪ್ರಕಾರವಾಗಿ ಅಬಾಧಿತರೂಪದಿಂದ ಸತ್ ಇದು ದ್ರವ್ಯದ ಲಕ್ಷಣವಿದೆ.)

ಅಥವಾ ಉತ್ಪಾದವ್ಯಯಧ್ರೌವ್ಯವು ದ್ರವ್ಯದ ಲಕ್ಷಣವಿದೆ. ಒಂದು[೧] ಜಾತಿಯ ಅವಿರೋಧವಾದಂಥ ಯಾವ ಕ್ರಮಭಾವಿಯಾದ ಭಾವಗಳ ಪ್ರವಾಹವಿದೆ ಅದರಲ್ಲಿ ಮೊದಲಿನ ಭಾವದ ವಿನಾಶವು ಅದು ವ್ಯಯವಿದೆ, ಉತ್ತರಭಾವದ ಪ್ರಾದುರ್ಭಾವವು (-ಅನಂತರ ಭಾವದ ಎಂದರೆ ವರ್ತಮಾನ ಭಾವದ ಉತ್ಪತ್ತಿಯು) ಅದು ಉತ್ಪಾದವಿದೆ ಮತ್ತು ಪೂರ್ವ-ಉತ್ತರ ಭಾವಗಳ ವ್ಯಯ-ಉತ್ಪಾದಗಳಾದರೂ ಕೂಡ ತನ್ನ ಜಾತಿಯ ತ್ಯಾಗವಾಗದಿರುವುದು ಅದು ಧ್ರೌವ್ಯವಿದೆ. ಆ ಉತ್ಪಾದ-ವ್ಯಯ-ಧ್ರೌವ್ಯಗಳು ಸಾಮಾನ್ಯ ಆದೇಶದಿಂದ ಅಭಿನ್ನವಿವೆ (ಎಂದರೆ ಸಾಮಾನ್ಯ ಕಥನದಿಂದ ದ್ರವ್ಯದಿಂದ ಅಭಿನ್ನವಾಗಿವೆ), ವಿಶೇಷ ಆದೇಶದಿಂದ (ದ್ರವ್ಯದಿಂದ) ಭಿನ್ನವಿವೆ, ಅವು ಯುಗಪತ್ ವರ್ತಿಸುತ್ತವೆ ಮತ್ತು ಸ್ವಭಾವಭೂತವಾಗಿವೆ ಅವು ದ್ರವ್ಯದ ಲಕ್ಷಣವಾಗಿದೆ.

ಅಥವಾ ಗುಣಪರ್ಯಾಯಗಳು ದ್ರವ್ಯದ ಲಕ್ಷಣವಿದೆ. ಅನೇಕಾಂತಾತ್ಮಕವಾದ ವಸ್ತುವಿನ ಅನ್ವಯ[೨] ವಿಶೇಷಗಳು ಅವು ಗುಣಗಳಿವೆ ಮತ್ತು ವ್ಯತಿರೇಕ ವಿಶೇಷಗಳು ಅವು ಪರ್ಯಾಯಗಳಿವೆ. ಆ ಗುಣ ಪರ್ಯಾಯಗಳು

---

೧. ದ್ರವ್ಯದಲ್ಲಿ ಕ್ರಮಭಾವಿ ಭಾವಗಳ ಪ್ರವಾಹವು ಒಂದು ಜಾತಿಯನ್ನು ಖಂಡನೆ ಮಾಡುವುದಿಲ್ಲ ನಾಶಮಾಡುವುದಿಲ್ಲ ಎಂದರೆ ಜಾತಿಯ ಅಪೇಕ್ಷೆಯಿಂದ ಯಾವಾಗಲೂ ಏಕತ್ವವನ್ನೇ ಸ್ಥಾಪಿಸುತ್ತದೆ.

೨. ಅನ್ವಯ ಮತ್ತು ವ್ಯತಿರೇಕದ ಅರ್ಥದ ಕುರಿತು ಪುಟ ೧೩ರ ಮೇಲಿನ ಟಿಪ್ಪಣಿ ನೋಡುವುದು.

ಉಪ್ಪತ್ತೀ ವ ವಿಣಾಸೋ ದವ್ವಸ್ಸ ಯ ಣತ್ಥಿ ಅತ್ಥಿ ಸಬ್ಭಾವೋ ।
ವಿಗಮುಪ್ಪಾದಧುವತ್ತಂ ಕರೇಂತಿ ತಸ್ಸೇವ ಪಜ್ಜಾಯಾ ॥೧೧॥

ಉತ್ಪತ್ತಿರ್ವಾವಿನಾಶೋ ದ್ರವ್ಯಸ್ಯ ಚ ನಾಸ್ತ್ಯಸ್ತಿ ಸದ್ಭಾವಃ ।
ವಿಗಮೋತ್ಪಾದಧ್ರುವತ್ವಂ ಕುರ್ವಂತಿ ತಸ್ಯೈವ ಪರ್ಯಾಯಾಃ ॥೧೧॥

ಅತ್ರೋಭಯನಯಾಭ್ಯಾಂ ದ್ರವ್ಯಲಕ್ಷಣಂ ಪ್ರವಿಭಕ್ತಮ್ ।

(ಗುಣ ಮತ್ತು ಪರ್ಯಾಯಗಳು) - ಅವು ದ್ರವ್ಯದಲ್ಲಿ ಯುಗಪತ್ ಹಾಗೂ ಕ್ರಮದಿಂದ ಪ್ರವರ್ತಿಸುತ್ತವೆ, (ದ್ರವ್ಯದಿಂದ) ಕಥಂಚಿತ್ ಭಿನ್ನ ಮತ್ತು ಕಥಂಚಿತ್ ಅಭಿನ್ನವಿವೆ ಮತ್ತು ಸ್ವಭಾವ ಭೂತವಿವೆ ಅವು - ದ್ರವ್ಯದ ಲಕ್ಷಣವಿದೆ.

ದ್ರವ್ಯದ ಇವು ಮೂರು ಲಕ್ಷಣಗಳೊಳಗಿಂದ (-ಸತ್, ಉತ್ಪಾದ-ವ್ಯಯ ಧ್ರೌವ್ಯ ಹಾಗೂ ಗುಣ ಪರ್ಯಾಯಗಳು ಇವು ಮೂರೂ ಲಕ್ಷಣಗಳೊಳಗಿಂದ) ಒಂದರ ಕಥನ ಮಾಡಿದ ಮೇಲೆ ಉಳಿದ ಎರಡು (ಕಥನ ಮಾಡದೆ) ಅರ್ಥದಿಂದಲೇ ಬಂದು ಬಿಡುತ್ತವೆ. ಒಂದು ವೇಳೆ ದ್ರವ್ಯವು ಸತ್ ಇದ್ದರೆ ಅದು ೧) ಉತ್ಪಾದವ್ಯಯ ಧ್ರೌವ್ಯವುಳ್ಳ ಮತ್ತು ೨) ಗುಣಪರ್ಯಾಯವುಳ್ಳದ್ದಾಗುವುದು ; ಒಂದು ವೇಳೆ ಉತ್ಪಾದವ್ಯಯಧ್ರೌವ್ಯವುಳ್ಳದ್ದಾದರೆ ಅದು ೧) ಸತ್ ಮತ್ತು ೨) ಗುಣಪರ್ಯಾಯವುಳ್ಳದ್ದಾಗುವುದು. ಒಂದು ವೇಳೆ ಗುಣಪರ್ಯಾಯವುಳ್ಳದ್ದಾದರೆ ಅದು ೧) ಸತ್ ಮತ್ತು ೨) ಉತ್ಪಾದವ್ಯಯಧ್ರೌವ್ಯವುಳ್ಳದ್ದಾಗುವುದು. ಅದು ಈ ಪ್ರಕಾರ-ಸತ್ ನಿತ್ಯಾನಿತ್ಯಸ್ವಭಾವವುಳ್ಳದ್ದಿರುವುದರಿಂದ ೧) ಧ್ರೌವ್ಯವನ್ನು ಮತ್ತು ಉತ್ಪಾದವ್ಯಯಾತ್ಮಕತೆಯನ್ನು ಪ್ರಕಟಮಾಡುತ್ತದೆ ಹಾಗೂ ೨) ಧ್ರೌವ್ಯಾತ್ಮಕಗುಣಗಳೊಡನೆ ಮತ್ತು ಉತ್ಪಾದವ್ಯಯಾತ್ಮಕ ಪರ್ಯಾಯಗಳೊಡನೆ ಏಕತ್ವವನ್ನು ದರ್ಶಿಸುತ್ತದೆ - ಉತ್ಪಾದವ್ಯಯಧ್ರೌವ್ಯಗಳು ೧) ನಿತ್ಯಾನಿತ್ಯಸ್ವರೂಪ ಪಾರಮಾರ್ಥಿಕ[೧] ಸತ್‌ವನ್ನು ತಿಳಿಸಿಕೊಡುತ್ತವೆ ಹಾಗೂ ೨) ತನ್ನ[೨] ಸ್ವರೂಪದ ಪ್ರಾಪ್ತಿಗೆ ಕಾರಣಭೂತಗಳಾದ ಗುಣಪರ್ಯಾಯಗಳನ್ನು ಪ್ರಕಟಪಡಿಸುತ್ತವೆ.

ದ್ರವ್ಯಕೆ ಉತ್ಪಾದವಿಲ್ಲವೆ ನಾಶತಾನಿಲ್ಲ ಅದಕೆ ಸದ್ಭಾವವಿರುವುದು ।
ದ್ರವ್ಯದ ಪರ್ಯಾಯಗಳು ಮಾತ್ರ ಉತ್ಪಾದವ್ಯಯಧ್ರೌವ್ಯಗಳನು ಮಾಡುವವು ॥೧೧॥

೧. ಪಾರಮಾರ್ಥಿಕ ವಾಸ್ತವಿಕ ; ಯಥಾರ್ಥ ; ನಿಜವಾದ - (ವಾಸ್ತವಿಕ ಸತ್ ನಿತ್ಯಾನಿತ್ಯಸ್ವರೂಪವಿರುತ್ತದೆ. ಉತ್ಪಾದ ವ್ಯಯಗಳು ಅನಿತ್ಯತೆಯನ್ನು ಮತ್ತು ಧ್ರೌವ್ಯವು ನಿತ್ಯತೆಯನ್ನು ತಿಳಿಸಿಕೊಡುತ್ತಿರುವುದರಿಂದ ಉತ್ಪಾದ ವ್ಯಯ ಧ್ರೌವ್ಯಗಳು ನಿತ್ಯಾನಿತ್ಯಸ್ವರೂಪವಾದ ವಾಸ್ತವಿಕ ಸತ್‌ನ್ನು ತಿಳಿಸಿಕೊಡುತ್ತವೆ. ಹೀಗೆ 'ದ್ರವ್ಯವು ಉತ್ಪಾದವ್ಯಯಧ್ರೌವ್ಯವುಳ್ಳದ್ದಿದೆ'ಯೆಂದು ಹೇಳುವುದರಿಂದ 'ಅದು ಸತ್ ಇದೆ' - ಎಂಬುದೂ ಹೇಳದೆಯೇ ಬಂದು ಬಿಡುತ್ತದೆ.)

೨. ತನ್ನ = ಉತ್ಪಾದವ್ಯಯಧ್ರೌವ್ಯದ (ಒಂದು ವೇಳೆ ಗುಣವಿದ್ದಾಗಲೇ ಧ್ರೌವ್ಯವಿರುತ್ತದೆ, ಮತ್ತು ಒಂದು ವೇಳೆ ಪರ್ಯಾಯಗಳಿದ್ದಾಗಲೇ ಉತ್ಪಾದವ್ಯಯಗಳಿರುತ್ತವೆ ; ಅದಕ್ಕಾಗಿ ಒಂದು ವೇಳೆ ಗುಣಪರ್ಯಾಯಗಳಿಲ್ಲದಿದ್ದರೆ ಉತ್ಪಾದವ್ಯಯಧ್ರೌವ್ಯಗಳು ತಮ್ಮ ಸ್ವರೂಪಕ್ಕೆ ಪ್ರಾಪ್ತವಾಗುವ ಸಾಧ್ಯತೆಯೇ ಇಲ್ಲ. 'ಹೀಗೆ ದ್ರವ್ಯವು ಉತ್ಪಾದವ್ಯಯಧ್ರೌವ್ಯವುಳ್ಳದ್ದಿದೆ'ಯೆಂದು ಹೇಳುವುದರಿಂದ ಅದು ಗುಣಪರ್ಯಾಯವುಳ್ಳದ್ದೆಂದೂ ಸಿದ್ಧವಾಗಿ ಹೋಗುತ್ತದೆ.)

ದ್ರವ್ಯಸ್ಯ ಹಿ ಸಹಕ್ರಮಪ್ರವೃತ್ತಗುಣಪರ್ಯಾಯಸದ್ಭಾವರೂಪಸ್ಯ ತ್ರಿಕಾಲಾವಸ್ಥಾಯಿನೋಽನಾದಿ ನಿಧನಸ್ಯ ನ ಸಮುಚ್ಛೇದಸಮುದಯೌ ಯುಕ್ತೌ । ಅಥ ತಸ್ಯೈವ ಪರ್ಯಾಯಾಣಾಂ ಸಹಪ್ರವೃತ್ತಿ ಭಾಜಾಂ ಕೇಷಾಂಚಿತ್ ಧ್ರೌವ್ಯಸಂಭವೇಽಪ್ಯಪರೇಷಾಂ ಕ್ರಮಪ್ರವೃತ್ತಿಭಾಜಾಂ ವಿನಾಶಸಂಭವಸಂಭಾವನಮುಪಪನ್ನಮ್ । ತತೋ ದ್ರವ್ಯಾರ್ಥಾರ್ಪಣಾಯಾಮನುತ್ಪಾದಮನುಚ್ಛೇದಂ ಸತ್ಸ್ವಭಾವಮಮೇವ ದ್ರವ್ಯಂ, ತದೇವ ಪರ್ಯಾಯಾರ್ಥಾರ್ಪಣಾಯಾಂ ಸೋತ್ಪಾದಂ ಸೋಚ್ಛೇದಂ ಚಾವಬೋದ್ಧವ್ಯಮ್ । ಸರ್ವಮಿದಮನವದ್ಯಂ ಚ ದ್ರವ್ಯಪರ್ಯಾಯಾಣಾಮಭೇದಾತ್ ।

ಗುಣಪರ್ಯಾಯಗಳು[೧] ಅನ್ವಯ ಮತ್ತು ವ್ಯತಿರೇಕವುಳ್ಳವುಗಳಿರುವುದರಿಂದ ೧) ಧ್ರೌವ್ಯವನ್ನು ಮತ್ತು ಉತ್ಪಾದವ್ಯಯಗಳನ್ನು ಸೂಚಿತಗೊಳಿಸುತ್ತವೆ ಹಾಗೂ ೨) ನಿತ್ಯಾನಿತ್ಯಸ್ವಭಾವವುಳ್ಳ ಪಾರಮಾರ್ಥಿಕ ಸತ್‌ನ್ನು ತಿಳಿಸಿಕೊಡುತ್ತವೆ.

ಗಾಥೆ - ೧೧

ಗಾಥಾರ್ಥ :- [ದವ್ವಸ್ಸ ಯ] ದ್ರವ್ಯದ [ಉಪ್ಪತ್ತೀ] ಉತ್ಪಾದ [ವ] ಅಥವಾ [ವಿಣಾಸೋ] ವಿನಾಶವು [ಣತ್ಥಿ] ಇಲ್ಲ, [ಸಬ್ಭಾವೋ ಅತ್ಥಿ] ಸದ್ಭಾವವಿದೆ. [ತಸ್ಸೇವ ಪಜ್ಜಾಯಾ] ಅದರ ಪರ್ಯಾಯಗಳು [ವಿಗಮುಪ್ಪಾದಧುವತ್ತಂ] ವಿನಾಶ, ಉತ್ಪಾದ ಮತ್ತು ಧ್ರುವತೆಯನ್ನು [ಕರೇಂತಿ] ಮಾಡುತ್ತವೆ.

ಟೀಕೆ :- ಇಲ್ಲಿ ಎರಡೂ ನಯಗಳ ಮುಖಾಂತರ ದ್ರವ್ಯದ ಲಕ್ಷಣದ ವಿಭಾಗ ಮಾಡಿದೆ. (ಎಂದರೆ ಎರಡೂ ನಯಗಳ ಅಪೇಕ್ಷೆಯಿಂದ ದ್ರವ್ಯದ ಲಕ್ಷಣದ ಎರಡು ವಿಭಾಗ ಮಾಡಲಾಗಿದೆ.)

ಸಹವರ್ತಿ ಗುಣಗಳ ಮತ್ತು ಕ್ರಮವರ್ತಿ ಪರ್ಯಾಯಗಳ ಸದ್ಭಾವರೂಪ, ತ್ರಿಕಾಲ-ಅವಸ್ಥೆಯ (ತ್ರಿಕಾಲ ಸ್ಥಿರವಿರುವಂಥ), ಅನಾದಿ-ಅನಂತ ದ್ರವ್ಯದ ವಿನಾಶ ಮತ್ತು ಉತ್ಪಾದ ಉಚಿತವಿಲ್ಲ. ಆದರೆ ಅದರದೇ ಪರ್ಯಾಯಗಳ - ಸಹವರ್ತಿ ಕೆಲವವು (ಪರ್ಯಾಯ)ಗಳ ಧ್ರೌವ್ಯವಿದ್ದರೂ ಕೂಡ ಇತರ ಕ್ರಮವರ್ತಿ (ಪರ್ಯಾಯ)ಗಳ - ವಿನಾಶ ಮತ್ತು ಉತ್ಪಾದವಾಗುವುದು ಸಂಭವಿಸುತ್ತವೆ. ಅದಕ್ಕಾಗಿ ದ್ರವ್ಯವು ದ್ರವ್ಯಾರ್ಥಿಕದ ಆದೇಶದಿಂದ (-ಕಥನದಿಂದ) ಉತ್ಪಾದವಿಲ್ಲದ, ವಿನಾಶವಿಲ್ಲದ, ಸತ್ ಸ್ವಭಾವವುಳ್ಳದ್ದೆಂದೇ ತಿಳಿಯಬೇಕಾಗುವುದು ಮತ್ತು ಅದೇ (ದ್ರವ್ಯವು) ಪರ್ಯಾಯಾರ್ಥಿಕದ ಆದೇಶದಿಂದ ಉತ್ಪಾದವುಳ್ಳದ್ದು ಹಾಗೂ ವಿನಾಶವುಳ್ಳದ್ದೆಂದು ತಿಳಿಯಬೇಕಾಗುವುದು.

ಇದೆಲ್ಲವೂ ನಿರವದ್ಯ (-ನಿರ್ದೋಷ, ನಿರ್ಬಾಧ, ಅವಿರುದ್ಧ)ವಿದೆ, ಏಕೆಂದರೆ ದ್ರವ್ಯ ಮತ್ತು ಪರ್ಯಾಯಗಳದ್ದು ಅಭೇದವಿದೆ - ಅಭಿನ್ನತೆಯಿದೆ.

---

೧. ಮೊದಲಂತೂ ಗುಣಪರ್ಯಾಯಗಳು ಅನ್ವಯ ಮುಖಾಂತರ ಧ್ರೌವ್ಯವನ್ನು ಸೂಚಿತಗೊಳಿಸುತ್ತವೆ ಮತ್ತು ವ್ಯತಿರೇಕ ಮುಖಾಂತರ ಉತ್ಪಾದವ್ಯಯಗಳನ್ನು ಸೂಚಿತಗೊಳಿಸುತ್ತವೆ ; ಹೀಗೆ ಅವು ಉತ್ಪಾದವ್ಯಯಧ್ರೌವ್ಯಗಳನ್ನು ಸೂಚಿತಗೊಳಿಸುತ್ತವೆ. ಎರಡನೆಯದಾಗಿ ಗುಣ ಪರ್ಯಾಯಗಳು, ಅನ್ವಯ ಮುಖಾಂತರ ನಿತ್ಯತೆಯನ್ನು ತಿಳಿಸುತ್ತವೆ ಮತ್ತು ವ್ಯತಿರೇಕ ಮುಖಾಂತರ ಅನಿತ್ಯತೆಯನ್ನು ತಿಳಿಸುತ್ತವೆ, ಹೀಗೆ ಅವು ನಿತ್ಯಾನಿತ್ಯಸ್ವರೂಪವಾದ ಸತ್‌ನ್ನು ತಿಳಿಸಿಕೊಡುತ್ತವೆ.

ಪಜ್ಜಯವಿಜುದಂ ದವ್ವಂ ದವ್ವವಿಜುತ್ತಾ ಯ ಪಜ್ಜಯಾ ಣತ್ಥಿ ।
ದೋಣ್ಹಂ ಅಣಣ್ಣಭೂದಂ ಭಾವಂ ಸಮಣಾ ಪರೂವೇಂತಿ ॥೧೨॥

ಪರ್ಯಾಯವಿಯುತಂ ದ್ರವ್ಯಂ ದ್ರವ್ಯವಿಯುಕ್ತಾಶ್ಚ ಪರ್ಯಾಯಾ ನ ಸಂತಿ ।
ದ್ವಯೋರನನ್ಯಭೂತಂ ಭಾವಂ ಶ್ರಮಣಾಃ ಪ್ರರೂಪಯಂತಿ ॥೧೨॥

ಅತ್ರ ದ್ರವ್ಯಪರ್ಯಾಯಾಣಾಮಭೇದೋ ನಿರ್ದಿಷ್ಟಃ ।

ದುಗ್ಧದಧಿನವನೀತಘೃತಾದಿವಿಯುತಗೋರಸವತ್ಪರ್ಯಾಯವಿಯುತಂ ದ್ರವ್ಯಂ ನಾಸ್ತಿ । ಗೋರಸವಿಯುಕ್ತದುಗ್ಧದಧಿನವನೀತಘೃತಾದಿವದ್ದ್ರವ್ಯವಿಯುಕ್ತಾಃ ಪರ್ಯಾಯಾ ನ ಸಂತಿ । ತತೋ ದ್ರವ್ಯಸ್ಯ ಪರ್ಯಾಯಾಣಾಂ ಚಾದೇಶವಶಾತ್ಕಥಂಚಿದ್ಭೇದೇऽಪ್ಯೇಕಾಸ್ತಿತ್ವನಿಯತತ್ವಾದನ್ಯೋನ್ಯಾಜಹದ್ವೃತ್ತೀನಾಂ ವಸ್ತುತ್ವೇನಾಭೇದ ಇತಿ ।

ಗಾಥಾ - ೧೨

ಗಾಥಾರ್ಥ ಃ- [ಪಜ್ಜಯವಿಜುದಂ] ಪರ್ಯಾಯಗಳಿಲ್ಲದ [ದವ್ವಂ] ದ್ರವ್ಯವು [ಯ] ಮತ್ತು [ದವ್ವವಿಜುತ್ತಾ] ದ್ರವ್ಯವಿಲ್ಲದೆ [ಪಜ್ಜಯಾ] ಪರ್ಯಾಯಗಳು [ಣತ್ಥಿ] ಇರುವುದಿಲ್ಲ ; [ದೋಣ್ಹಂ] ಎರಡವುಗಳ [ಅಣಣ್ಣಭೂದಂ ಭಾವಂ] ಅನನ್ಯಭಾವವನ್ನು (ಅನನ್ಯತನವನ್ನು) [ಸಮಣಾ] ಶ್ರಮಣರು [ಪರೂವೇಂತಿ] ಪ್ರರೂಪಣೆ ಮಾಡುತ್ತಾರೆ.

ಟೀಕೆ ಃ- ಇಲ್ಲಿ ದ್ರವ್ಯ ಮತ್ತು ಪರ್ಯಾಯಗಳ ಅಭೇದವನ್ನು ದರ್ಶಿಸಲಾಗಿದೆ.

ಯಾವ ಪ್ರಕಾರ ಹಾಲು, ಮೊಸರು, ಬೆಣ್ಣೆ, ತುಪ್ಪ ಇವೇ ಮೊದಲಾದವುಗಳಿಂದ ರಹಿತವಾದ ಗೋರಸವಿರುವುದಿಲ್ಲ ಅದೇ ಪ್ರಕಾರ ಪರ್ಯಾಯಗಳಿಂದ ರಹಿತವಾದ ದ್ರವ್ಯವಿರುವುದಿಲ್ಲ ; ಯಾವ ಪ್ರಕಾರ ಗೋರಸದಿಂದ ರಹಿತವಾದ ಹಾಲು, ಮೊಸರು, ಬೆಣ್ಣೆ, ತುಪ್ಪ ಇವೇ ಮೊದಲಾದವುಗಳಿರುವುದಿಲ್ಲ ಅದೇ ಪ್ರಕಾರ ದ್ರವ್ಯದಿಂದ ರಹಿತವಾದ ಪರ್ಯಾಯಗಳಿರುವುದಿಲ್ಲ. ಅದಕ್ಕಾಗಿ, ಒಂದು ವೇಳೆ ದ್ರವ್ಯ ಮತ್ತು ಪರ್ಯಾಯಗಳ ಆದೇಶವಶದಿಂದ (ಕಥನ ವಶದಿಂದ) ಕಥಂಚಿತ್ ಭೇದವಿದ್ದಾಗ್ಯೂ ಅವು ಒಂದು ಅಸ್ತಿತ್ವದಲ್ಲಿ ನಿಯತ (ದೃಢರೂಪದಿಂದ ಸ್ಥಿರ)ವಿರುವ ಕಾರಣ ಅನ್ಯೋನ್ಯವೃತ್ತಿಯನ್ನು ಬಿಟ್ಟುಕೊಡುವುದಿಲ್ಲವಾದ್ದರಿಂದ ವಸ್ತುರೂಪದಿಂದ ಅವುಗಳದು ಅಭೇದವಿದೆ.

ಪರ್ಯಾಯಗಳಿಲ್ಲದೆ ದ್ರವ್ಯವಿಲ್ಲ ದ್ರವ್ಯವಿಲ್ಲದೆ ಪರ್ಯಾಯಗಳು ತಾನಿಲ್ಲ ।
ಪರ್ಯಾಯದ್ರವ್ಯಗಳಿವೆರಡರಲಿ ಅನನ್ಯತೆಯ ಶ್ರಮಣ ಪೇಳಿಹರು ॥೧೨॥

---

೧. ಅನ್ಯೋನ್ಯವೃತ್ತಿ = ಒಂದು ಇನ್ನೊಂದರ ಆಶ್ರಯದಿಂದ ನಿರ್ವಾಹ ಮಾಡುವುದು ; ಒಂದು ಇನ್ನೊಂದರ ಆಶ್ರಯದಿಂದ ಸ್ಥಿರವಿರುವುದು ; ಒಂದು ಇನ್ನೊಂದರ ಕಾರಣ ಜೀವಿತವಿರುವುದು.

ದವ್ವೇಣ ವಿಣಾ ಣ ಗುಣಾ ಗುಣೇಹಿಂ ದವ್ವಂ ವಿಣಾ ಣ ಸಂಭವದಿ ।
ಅವ್ವದಿರಿತ್ತೋ ಭಾವೋ ದವ್ವಗುಣಾಣಂ ಹವದಿ ತಮ್ಹಾ ॥೧೩॥

ದ್ರವ್ಯೇಣ ವಿನಾ ನ ಗುಣಾ ಗುಣೈರ್ದ್ರವ್ಯಂ ವಿನಾ ನ ಸಂಭವತಿ ।
ಅವ್ಯತಿರಿಕ್ತೋ ಭಾವೋ ದ್ರವ್ಯಗುಣಾನಾಂ ಭವತಿ ತಸ್ಮಾತ್ ॥೧೩॥

ಅತ್ರ ದ್ರವ್ಯಗುಣಾನಾಮಭೇದೋ ನಿರ್ದಿಷ್ಟಃ ।

ಪುದ್ಗಲಪೃಥಗ್ಭೂತಸ್ಪರ್ಶರಸಗಂಧವರ್ಣವದ್ದ್ರವ್ಯೇಣ ವಿನಾ ನ ಗುಣಾಃ ಸಂಭವಂತಿ । ಸ್ಪರ್ಶರಸಗಂಧವರ್ಣ-ಪೃಥಗ್ಭೂತಪುದ್ಗಲವದ್‌ಗುಣೈರ್ವಿನಾ ದ್ರವ್ಯಂ ನ ಸಂಭವತಿ । ತತೋ ದ್ರವ್ಯಗುಣಾನಾಮಪ್ಯಾದೇಶವತಾತ್ ಕಥಂಚಿದ್ಭೇದೇऽಪ್ಯೇಕಾಸ್ತಿತ್ವನಿಯತತ್ವಾದನ್ಯೋನ್ಯಾಜಹದ್ವೃತ್ತೀನಾಂ ವಸ್ತುತ್ವೇನಾಭೇದ ಇತಿ ।

ಗಾಥೆ - ೧೩

ಗಾಥಾರ್ಥ ಃ- [ದವ್ವೇಣ ವಿಣಾ] ದ್ರವ್ಯವಿಲ್ಲದೆ [ಗುಣಾ ಣ] ಗುಣಗಳಿರುವುದಿಲ್ಲ, [ಗುಣೇಹಿಂ ವಿಣಾ] ಗುಣಗಳಿಲ್ಲದೆ [ದವ್ವಂ ಣ ಸಂಭವದಿ] ದ್ರವ್ಯವಿರುವುದಿಲ್ಲ ; [ತಮ್ಹಾ] ಆದುದರಿಂದ [ದವ್ವಗುಣಾಣಂ] ದ್ರವ್ಯ ಮತ್ತು ಗುಣಗಳ [ಅವ್ವದಿರಿತ್ತೋ ಭಾವೋ] ಅವ್ಯತಿರಿಕ್ತಭಾವ (ಅಭಿನ್ನತೆ) [ಹವದಿ] ಇದೆ.

ಟೀಕೆ ಃ- ಇಲ್ಲಿ ದ್ರವ್ಯ ಮತ್ತು ಗುಣಗಳ ಅಭೇದವನ್ನು ದರ್ಶಿಸಲಾಗಿದೆ.

ಯಾವ ಪ್ರಕಾರ ಪುದ್ಗಲದಿಂದ ಸ್ಪರ್ಶ-ರಸ-ಗಂಧ-ವರ್ಣಗಳು ಬೇರೆಯಾಗಿ ಇರುವುದಿಲ್ಲ ಅದೇ ಪ್ರಕಾರ ದ್ರವ್ಯವಿಲ್ಲದೆ ಗುಣಗಳಿರುವುದಿಲ್ಲ ; ಯಾವ ಪ್ರಕಾರ ಸ್ಪರ್ಶ-ರಸ-ಗಂಧ-ವರ್ಣಗಳಿಂದ ಬೇರೆಯಾಗಿ ಪುದ್ಗಲವಿರುವುದಿಲ್ಲ ಅದೇ ಪ್ರಕಾರ ಗುಣಗಳಿಲ್ಲದೆ ದ್ರವ್ಯವಿರುವುದಿಲ್ಲ. ಆದುದರಿಂದ ಒಂದು ವೇಳೆ ದ್ರವ್ಯ ಮತ್ತು ಗುಣಗಳ ಆದೇಶವಶದಿಂದ ಕಥಂಚಿತ್ ಭೇದವಿದ್ದರೂ ಅವು ಒಂದು ಅಸ್ತಿತ್ವದಲ್ಲಿ ನಿಯತವಿರುವ ಕಾರಣ ಅನ್ಯೋನ್ಯವೃತ್ತಿಯನ್ನು ಬಿಟ್ಟುಕೊಡುವುದಿಲ್ಲವಾದ್ದರಿಂದ ವಸ್ತುರೂಪದಿಂದ ಅವುಗಳದೂ ಅಭೇದವಿದೆ. (ಎಂದರೆ ದ್ರವ್ಯ ಮತ್ತು ಪರ್ಯಾಯಗಳಂತೆ ದ್ರವ್ಯ ಮತ್ತು ಗುಣಗಳದೂ ವಸ್ತುರೂಪದಿಂದ ಅಭೇದವಿದೆ.)

ದ್ರವ್ಯವಿಲ್ಲದೆ ಗುಣಗಳಿಲ್ಲ ಗುಣಗಳಿಲ್ಲದೆ ದ್ರವ್ಯ ತಾ ಸಂಭವಿಸದು ।
ದ್ರವ್ಯ-ಗುಣಗಳಿವೆರಡರಲಿ ಅವ್ಯತಿರಿಕ್ತಭಾವ ನಿರ್ದಿಷ್ಟವಾಗಿಹುದು ॥೧೩॥

ಸಿಯ ಅತ್ಥಿ ಣತ್ಥಿ ಉಹಯಂ ಅವ್ವತ್ತವ್ವಂ ಪುಣೋ ಯ ತತ್ತಿದಯಂ ।
ದವ್ವಂ ಖು ಸತ್ತಭಂಗಂ ಆದೇಸವಸೇಣ ಸಂಭವದಿ ॥೧೪॥

ಸಾದಸ್ತಿ ನಾಸ್ತ್ಯುಭಯಮವಕ್ತವ್ಯಂ ಪುನಶ್ಚ ತತ್ತ್ರಿತಯಮ್ ।
ದ್ರವ್ಯಂ ಖಲು ಸಪ್ತಭಂಗಮಾದೇಶವಶೇನ ಸಂಭವತಿ ॥೧೪॥

ಅತ್ರ ದ್ರವ್ಯಸ್ಯಾದೇಶವಶೇನೋಕ್ತಾ ಸಪ್ತಭಂಗೀ ।

ಸ್ಯಾದಸ್ತಿದ್ರವ್ಯಂ, ಸ್ಯಾನ್ನಾಸ್ತಿ ದ್ರವ್ಯಂ, ಸ್ಯಾದಸ್ತಿ ಚ ನಾಸ್ತಿ ಚ ದ್ರವ್ಯಂ, ಸ್ಯಾದವಕ್ತವ್ಯಂ ದ್ರವ್ಯಂ, ಸ್ಯಾದಸ್ತಿ ಚಾವಕ್ತವ್ಯಂ ಚ ದ್ರವ್ಯಂ, ಸ್ಯಾನ್ನಾಸ್ತಿ ಚಾವಕ್ತವ್ಯಂ ಚ ದ್ರವ್ಯಂ, ಸ್ಯಾದಸ್ತಿ ಚ ನಾಸ್ತಿ ಚಾವಕ್ತವ್ಯಂ ಚ ದ್ರವ್ಯಮಿತಿ । ಅತ್ರ ಸರ್ವಥಾತ್ವನಿಷೇಧಕೋऽನೇಕಾಂತದ್ಯೋತಕಃ ಕಥಂಚಿದರ್ಥೇ ಸ್ಯಾಚ್ಛಬ್ದೋ ನಿಪಾತಃ । ತತ್ರ ಸ್ವದ್ರವ್ಯಕ್ಷೇತ್ರಕಾಲಭಾವೈರಾದಿಷ್ಟಮಸ್ತಿ ದ್ರವ್ಯಂ, ಪರದ್ರವ್ಯಕ್ಷೇತ್ರಕಾಲಭಾವೈರಾದಿಷ್ಟಂ ನಾಸ್ತಿ ದ್ರವ್ಯಂ, ಸ್ವದ್ರವ್ಯಕ್ಷೇತ್ರಕಾಲಭಾವೈಃ ಪರದ್ರವ್ಯಕ್ಷೇತ್ರಕಾಲಭಾವೈಶ್ಚ ಕ್ರಮೇಣಾದಿಷ್ಟಮಸ್ತಿ ಚ ನಾಸ್ತಿ ಚ ದ್ರವ್ಯಂ, ಸ್ವದ್ರವ್ಯಕ್ಷೇತ್ರ-

ಗಾಥೆ - ೧೪

ಗಾಥಾರ್ಥ ಃ- [ದವ್ವಂ] ದ್ರವ್ಯವು [ಆದೇಸವಸೇನ] ಆದೇಶವಶದಿಂದ (ಕಥನದ ವಶದಿಂದ) [ಖು] ನಿಜವಾಗಿ [ಸಿಯ ಅತ್ಥಿ] ಸ್ಯಾತ್ ಅಸ್ತಿ, [ಣತ್ಥಿ] ಸ್ಯಾತ್ ನಾಸ್ತಿ, [ಉಹಯಂ) ಸ್ಯಾತ್ ಅಸ್ತಿ-ನಾಸ್ತಿ, [ಅವ್ವತ್ತವ್ವಂ] ಸ್ಯಾತ್ ಅವಕ್ತವ್ಯ [ಪುಣೋ ಯ] ಮತ್ತೆ ಪುನಃ [ತತ್ತಿದಯಂ) ಅವಕ್ತವ್ಯತೆಯಿಂದ ಕೂಡಿದ ಮೂರು ಭಂಗವುಳ್ಳ (-ಸ್ಯಾತ್ ಅಸ್ತಿ-ಅವಕ್ತವ್ಯ, ಸ್ಯಾತ್ ನಾಸ್ತಿ-ಅವಕ್ತವ್ಯ ಮತ್ತು ಸ್ಯಾತ್ ಅಸ್ತಿ-ನಾಸ್ತಿ-ಅವಕ್ತವ್ಯ) - [ಸತ್ತಭಂಗಂ] ಹೀಗೆ ಏಳು ಭಂಗವುಳ್ಳದ್ದು [ಸಂಭವದಿ] ಇದೆ.

ಟೀಕೆ ಃ- ಇಲ್ಲಿ ದ್ರವ್ಯದ ಆದೇಶವಶದಿಂದ ಸಪ್ತಭಂಗಿಗಳನ್ನು ಹೇಳಿದೆ.

೧) ದ್ರವ್ಯವು 'ಸ್ಯಾತ್ ಅಸ್ತಿ' ಇದೆ. ೨) ದ್ರವ್ಯವು 'ಸ್ಯಾತ್ ನಾಸ್ತಿ' ಇದೆ ; ೩) ದ್ರವ್ಯವು 'ಸ್ಯಾತ್ ಅಸ್ತಿ ಮತ್ತು ನಾಸ್ತಿ' ಇದೆ; ೪) ದ್ರವ್ಯವು 'ಸ್ಯಾತ್ ಅವಕ್ತವ್ಯ' ಇದೆ; ೫) ದ್ರವ್ಯವು 'ಸ್ಯಾತ್ ಅಸ್ತಿ ಮತ್ತು ಅವಕ್ತವ್ಯ' ಇದೆ; ೬) ದ್ರವ್ಯವು 'ಸ್ಯಾತ್ ನಾಸ್ತಿ ಮತ್ತು ಅವಕ್ತವ್ಯ' ಇದೆ; ೭) ದ್ರವ್ಯವು 'ಸ್ಯಾತ್ ಅಸ್ತಿ, ನಾಸ್ತಿ ಮತ್ತು ಅವಕ್ತವ್ಯ' ಇದೆ.

ಇಲ್ಲಿ (ಸಪ್ತಭಂಗಿಯಲ್ಲಿ) ಸರ್ವಥಾತನದ ನಿಷೇಧಕವೂ, ಅನೇಕಾಂತದ ದ್ಯೋತಕವೂ ಆದ 'ಸ್ಯಾತ್'[೧] ಶಬ್ದವು 'ಕಥಂಚಿತ್' ಎಂಬ ಅರ್ಥದಲ್ಲಿ ಅವ್ಯಯರೂಪದಿಂದ ಪ್ರಯುಕ್ತವಾಗಿದೆ. ಅಲ್ಲಿ - ೧) ದ್ರವ್ಯವು

ಸ್ಯಾದಸ್ತಿ, ನಾಸ್ತಿ, ಉಭಯಮತ್ತದರಂತೆ ಅವಕ್ತವ್ಯ ಮೊದಲಾದ ಭಂಗಗಳು ।
ಆದೇಶವಶದಿಂದಿವು ಏಳು ಭಂಗಗಳಿಂದಯುಕ್ತವಿವೆ ಎಲ್ಲ ದ್ರವ್ಯಗಳು ॥೧೪॥

೧. ಸ್ಯಾತ್ = ಕಥಂಚಿತ್ ; ಯಾವುದೇ ಒಂದು ಪ್ರಕಾರ ; ಯಾವುದೇ ಒಂದು ಅಪೇಕ್ಷೆಯಿಂದ ('ಸ್ಯಾತ್' ಶಬ್ದವು) ಸರ್ವಥಾತನದ ನಿಷೇಧ ಮಾಡುತ್ತದೆ ಮತ್ತು ಅನೇಕಾಂತವನ್ನು ಪ್ರಕಾಶಿತಪಡಿಸುತ್ತದೆ - ದರ್ಶಿಸುತ್ತದೆ.

ಕಾಲಭಾವೈಃ ಪರದ್ರವ್ಯಕ್ಷೇತ್ರಕಾಲಭಾವೈಶ್ಚ ಯುಗಪದಾದಿಷ್ಟಮವಕ್ತವ್ಯಂ ದ್ರವ್ಯಂ , ಸ್ವದ್ರವ್ಯಕ್ಷೇತ್ರಕಾಲಭಾವೈರ್ಯುಗ-ಪತ್ಸ್ವಪರದ್ರವ್ಯಕ್ಷೇತ್ರಕಾಲಭಾವೈಶ್ಚಾದಿಷ್ಟಮಸ್ತಿ ಚಾವಕ್ತವ್ಯಂ ಚ ದ್ರವ್ಯಂ ಪರದ್ರವ್ಯಕ್ಷೇತ್ರಕಾಲಭಾವೈರ್ಯುಗ ಪತ್ಸ್ವಪರ ದ್ರವ್ಯಕ್ಷೇತ್ರಕಾಲಭಾವೈಶ್ಚಾದಿಷ್ಟಂ ನಾಸ್ತಿ ಚಾವಕ್ತವ್ಯಂ ಚ ದ್ರವ್ಯಂ , ಸ್ವದ್ರವ್ಯಕ್ಷೇತ್ರಕಾಲಭಾವೈಃ ಪರದ್ರವ್ಯಕ್ಷೇತ್ರಕಾಲಭಾವೈಶ್ಚ ಯುಗಪತ್ಸ್ವಪರದ್ರವ್ಯಕ್ಷೇತ್ರಕಾಲಭಾವೈಶ್ಚಾದಿಷ್ಟಮಸ್ತಿ ಚ ನಾಸ್ತಿ ಚಾವಕ್ತವ್ಯಂ ಚ ದ್ರವ್ಯಮಿತಿ। ನ ಚೈತದನುಪಪನ್ನಮ್ ; ಸರ್ವಸ್ಯ ವಸ್ತುನಃ ಸ್ವರೂಪಾದಿನಾ ಅಶೂನ್ಯತ್ವಾತ್, ಪರರೂಪಾದಿನಾ ಶೂನ್ಯತ್ವಾತ್, ಉಭಾಭ್ಯಾಮಶೂನ್ಯ-ಶೂನ್ಯತ್ವಾತ್, ಸಹಾವಾಚತ್ವಾತ್, ಭಂಗಸಂಯೋಗಾರ್ಪಣಾಯಾಮಶೂನ್ಯಾವಾಚ್ಯತ್ವಾತ್, ಶೂನ್ಯಾವಾಚ್ಯತ್ವಾತ್, ಅಶೂನ್ಯಶೂನ್ಯಾವಾಚ್ಯತ್ವಾಚ್ಚೇತಿ ।

ಸ್ವದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಕಥನ ಮಾಡಿದ ಮೇಲೆ 'ಅಸ್ತಿ' ಇದೆ ; ೨) ದ್ರವ್ಯವು ಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಕಥನ ಮಾಡಿದ ಮೇಲೆ 'ನಾಸ್ತಿ' ಇದೆ ; ೩) ದ್ರವ್ಯವು ಸ್ವದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಮತ್ತು ಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಕ್ರಮವಾಗಿ ಕಥನ ಮಾಡಿದ ಮೇಲೆ 'ಅಸ್ತಿ ಮತ್ತು ನಾಸ್ತಿ' ಇದೆ ; ೪) ದ್ರವ್ಯವು ಸ್ವದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಮತ್ತು ಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಯುಗಪದ್ ಕಥನ ಮಾಡಿದ ಮೇಲೆ 'ಅವಕ್ತವ್ಯ'[೧] ಇದೆ ; ೫) ದ್ರವ್ಯವು ಸ್ವದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಮತ್ತು ಯುಗಪದ್ ಸ್ವಪರ-ದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಕಥನ ಮಾಡಿದ ಮೇಲೆ 'ಅಸ್ತಿ ಮತ್ತು ಅವಕ್ತವ್ಯ' ಇದೆ; ೬) ದ್ರವ್ಯವು ಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಮತ್ತು ಯುಗಪದ್ ಸ್ವಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಕಥನ ಮಾಡಿದ ಮೇಲೆ 'ನಾಸ್ತಿ ಮತ್ತು ಅವಕ್ತವ್ಯ' ಇದೆ ; ೭) ದ್ರವ್ಯವು ಸ್ವದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಮತ್ತು ಯುಗಪದ್ ಸ್ವಪರದ್ರವ್ಯ-ಕ್ಷೇತ್ರ-ಕಾಲ-ಭಾವಗಳಿಂದ ಕಥನ ಮಾಡಿದ ಮೇಲೆ 'ಅಸ್ತಿ, ನಾಸ್ತಿ ಮತ್ತು ಅವಕ್ತವ್ಯ' ಇದೆ. ಇದು (ಮೇಲಿನ ಮಾತು) ಅಯೋಗ್ಯವಿಲ್ಲ, ಏಕೆಂದರೆ ಎಲ್ಲ ವಸ್ತುಗಳು ೧) ಸ್ವರೂಪಾದಿಯಿಂದ 'ಅಶೂನ್ಯ'[೨] ಇವೆ,. ೨) ಪರರೂಪಾದಿಯಿಂದ 'ಶೂನ್ಯ'[೩] ಇವೆ, ೩) ಎರಡವುಗಳಿಂದ (ಸ್ವರೂಪಾದಿಯಿಂದ ಮತ್ತು ಪರರೂಪಾದಿಯಿಂದ) 'ಅಶೂನ್ಯ ಮತ್ತು ಶೂನ್ಯ' ಇವೆ, ೪) ಎರಡವುಗಳಿಂದ (ಸ್ವರೂಪಾದಿಯಿಂದ ಮತ್ತು ಪರರೂಪಾದಿಯಿಂದ) ಯುಗಪದ್ 'ಅವಾಚ್ಯ' ಇವೆ, ಭಂಗಗಳ ಸಂಯೋಗದಿಂದ ಕಥನ ಮಾಡಿದ ಮೇಲೆ ೫) 'ಅಶೂನ್ಯ ಮತ್ತು ಅವಾಚ್ಯ' ಇವೆ, ೬) 'ಶೂನ್ಯ ಮತ್ತು ಅವಾಚ್ಯ' ಇವೆ, ೭) 'ಅಶೂನ್ಯ, ಶೂನ್ಯ ಮತ್ತು ಅವಾಚ್ಯ' ಇವೆ.

ಭಾವಾರ್ಥ :- ೧) ದ್ರವ್ಯವು ಸ್ವಚತುಷ್ಟಯದ[೪] ಅಪೇಕ್ಷೆಯಿಂದ 'ಇದೆ' ೨) ದ್ರವ್ಯವು ಪರಚತುಷ್ಟಯದ ಅಪೇಕ್ಷೆಯಿಂದ 'ಇಲ್ಲ'. ೩) ದ್ರವ್ಯವು ಕ್ರಮದಿಂದ ಸ್ವಚತುಷ್ಟಯದ ಮತ್ತು ಪರಚತುಷ್ಟಯದ ಅಪೇಕ್ಷೆಯಿಂದ 'ಇದೆ ಮತ್ತು ಇಲ್ಲ.' ೪) ದ್ರವ್ಯವು ಯುಗಪದ್ ಸ್ವಚತುಷ್ಟಯದ ಮತ್ತು ಪರಚತುಷ್ಟಯದ ಅಪೇಕ್ಷೆಯಿಂದ 'ಅವಕ್ತವ್ಯ

೧. ಅವಕ್ತವ್ಯ - ಯಾವುದನ್ನು ಹೇಳುವ ಸಾಧ್ಯತೆಯಿಲ್ಲ ; ಅವಾಚ್ಯ - (ಯುಗಪದ್ ಸ್ವಚತುಷ್ಟಯ ಮತ್ತು ಪರಚತುಷ್ಟಯದ ಅಪೇಕ್ಷೆಯಿಂದ ದ್ರವ್ಯವು ಕಥನದಲ್ಲಿ ಬರುವ ಸಾಧ್ಯತೆಯಿಲ್ಲವಾದ್ದರಿಂದ 'ಅವಕ್ತವ್ಯ' ಇದೆ)

೨. ಅಶೂನ್ಯ = ಯಾವುದು ಶೂನ್ಯವಿಲ್ಲ ಅಂಥದು ; ಅಸ್ತಿತ್ವವುಳ್ಳದ್ದು ; ಸತ್.

೩. ಶೂನ್ಯ = ಯಾವುದರ ಅಸ್ತಿತ್ವವಿಲ್ಲ ಅಂಥದು ; ಅಸತ್.

೪. ಸ್ವದ್ರವ್ಯ, ಸ್ವಕ್ಷೇತ್ರ, ಸ್ವಕಾಲ ಮತ್ತು ಸ್ವಭಾವವನ್ನು ಸ್ವಚತುಷ್ಟಯವೆಂದು ಹೇಳಲಾಗುತ್ತದೆ, ಸ್ವದ್ರವ್ಯ ಎಂದರೆ ತನ್ನ ಗುಣ-ಪರ್ಯಾಯಗಳಿಗೆ ಆಧಾರಭೂತವಾದ ಸ್ವಯಂ ವಸ್ತು ; ಸ್ವಕ್ಷೇತ್ರ ಎಂದರೆ ವಸ್ತುವಿನ ನಿಜವಿಸ್ತಾರ ಎಂದರೆ ತನ್ನ ಪ್ರದೇಶ ಸಮೂಹ ; ಸ್ವಕಾಲ ಎಂದರೆ ವಸ್ತುವಿನ ತನ್ನ ವರ್ತಮಾನಪರ್ಯಾಯ ; ಸ್ವಭಾವ ಎಂದರೆ ನಿಜಗುಣಸ್ವಶಕ್ತಿ.

ಭಾವಸ್ಸ ಣತ್ಥಿ ಣಾಸೋ ಣತ್ಥಿ ಅಭಾವಸ್ಸ ಚೇವ ಉಪ್ಪಾದೋ ।
ಗುಣಪಜ್ಜಏಸು ಭಾವಾ ಉಪ್ಪಾದವಏ ಪಕುವ್ವಂತಿ ॥೧೫॥

ಭಾವಸ್ಯ ನಾಸ್ತಿ ನಾಶೋ ನಾಸ್ತಿ ಅಭಾವಸ್ಯ ಚೈವ ಉತ್ಪಾದಃ ।
ಗುಣಪರ್ಯಾಯೇಷು ಭಾವಾ ಉತ್ಪಾದವ್ಯಯಾನ್ ಪ್ರಕುರ್ವಂತಿ ॥೧೫॥

ಅತ್ರಾಸತ್ಪ್ರಾದುರ್ಭಾವತ್ವಮುತ್ಪಾದಸ್ಯ ಸದುಚ್ಛೇದತ್ವಂ ವಿಗಮಸ್ಯ ನಿಷಿದ್ಧಮ್ ।

ಭಾವಸ್ಯ ಸತೋ ಹಿ ದ್ರವ್ಯಸ್ಯ ನ ದ್ರವ್ಯತ್ವೇನ ವಿನಾಶಃ, ಅಭಾವಸ್ಯಾಸತೋऽನ್ಯದ್ರವ್ಯಸ್ಯ ನ ದ್ರವ್ಯತ್ವೇನೋತ್ಪಾದಃ, ಕಿಂತು ಭಾವಾಃ ಸಂತಿ ದ್ರವ್ಯಾಣಿ ಸದುಚ್ಛೇದಮಸದುತ್ಪಾದಂ ಚಾಂತರೇಣೈವ ಗುಣಪರ್ಯಾಯೇಷು ವಿನಾಶಮುತ್ಪಾದಂ ಚಾರಭಂತೇ । ಯಥಾ ಹಿ ಘೃತೋತ್ಪತ್ತೌ ಗೋರಸಸ್ಯ ಸತೋ ನ ವಿನಾಶಃ, ನ ಚಾಪಿ ಗೋರಸವ್ಯತಿರಿಕ್ತಸ್ಯಾರ್ಥಾಂತರಸ್ಯಾಸತಃ ಉತ್ಪಾದಃ ಕಿಂತು ಗೋರಸಸ್ಯೈವ ಸದುಚ್ಛೇದಮಸದುತ್ಪಾದಂ ಚಾನುಪಲಭಮಾನಸ್ಯ ಸ್ಪರ್ಶರಸಗಂಧವರ್ಣಾದಿಷು ಪರಿಣಾಮಿಷು ಗುಣೇಷು ಪೂರ್ವಾವಸ್ಥಯಾ ವಿನಶ್ಯತ್ಸೂತ್ತರಾವಸ್ಥಯಾ ಪ್ರಾದುರ್ಭವತ್ಸು ನಶ್ಯತಿ ಚ ನವನೀತಪರ್ಯಾಯೋ ಘೃತಪರ್ಯಾಯ ಉತ್ಪದ್ಯತೇ, ತಥಾ ಸರ್ವಭಾವಾನಾಮಪೀತಿ ।

ಇದೆ.' ೫) ದ್ರವ್ಯವು ಸ್ವಚತುಷ್ಟಯದ ಮತ್ತು ಯುಗಪದ್ ಸ್ವಪರಚತುಷ್ಟಯದ ಅಪೇಕ್ಷೆಯಿಂದ 'ಇದೆ ಮತ್ತು ಅವಕ್ತವ್ಯ ಇದೆ.' ೬) ದ್ರವ್ಯವು ಪರಚತುಷ್ಟಯದ ಮತ್ತು ಯುಗಪದ್ ಸ್ವಪರಚತುಷ್ಟಯದ ಅಪೇಕ್ಷೆಯಿಂದ 'ಇಲ್ಲ ಮತ್ತು ಅವಕ್ತವ್ಯ ಇದೆ.' ೭) ದ್ರವ್ಯವು ಸ್ವಚತುಷ್ಟಯದ, ಪರಚತುಷ್ಟಯದ ಮತ್ತು ಯುಗಪದ್ ಸ್ವಪರಚತುಷ್ಟಯದ ಅಪೇಕ್ಷೆಯಿಂದ 'ಇದೆ, ಇಲ್ಲ ಮತ್ತು ಅವಕ್ತವ್ಯ ಇದೆ' - ಹೀಗೆ ಇಲ್ಲಿ ಸಪ್ತಭಂಗಿಗಳನ್ನು ಹೇಳಲಾಗಿದೆ.

ಗಾಥೆ - ೧೫

ಗಾಥಾರ್ಥ :- [ಭಾವಸ್ಸ] ಭಾವದ (ಸತ್‌ದ) [ಣಾಸೋ] ನಾಶವು [ಣತ್ಥಿ] ಆಗುವುದಿಲ್ಲ [ಚೇವ] ಅದರಂತೆ [ಅಭಾವಸ್ಸ] ಅಭಾವದ (ಅಸತ್‌ದ) [ಉಪ್ಪಾದೋ] ಉತ್ಪಾದವು [ಣತ್ಥಿ] ಆಗುವುದಿಲ್ಲ; [ಭಾವಾ] ಭಾವಗಳು (ಸತ್‌ದ್ರವ್ಯಗಳು) [ಗುಣಪಜ್ಜಏಸು] ಗುಣಪರ್ಯಾಯಗಳನ್ನು [ಉಪ್ಪಾದವಏ] ಉತ್ಪಾದ ವ್ಯಯಗಳನ್ನು [ಪಕುವ್ವಂತಿ] ಮಾಡುತ್ತವೆ.

ಟೀಕೆ :- ಇಲ್ಲಿ ಉತ್ಪಾದದಲ್ಲಿ ಅಸತ್‌ದ ಪ್ರಾದುರ್ಭಾವದ ಮತ್ತು ವ್ಯಯದಲ್ಲಿ ಸತ್‌ದ ವಿನಾಶದ ನಿಷೇಧ ಮಾಡಿದೆ. (ಎಂದರೆ ಉತ್ಪಾದವಿರುವುದರಿಂದ ಎಲ್ಲೂ ಅಸತ್ ಉತ್ಪತ್ತಿಯಾಗುವುದಿಲ್ಲ ಮತ್ತು ವ್ಯಯವಿರುವುದರಿಂದ ಎಲ್ಲೂ ಸತ್‌ದ ವಿನಾಶವಾಗುವುದಿಲ್ಲ - ಎಂಬುದಾಗಿ ಈ ಗಾಥೆಯಲ್ಲಿ ಹೇಳಿದೆ.)

ಭಾವದ ನಾಶವಿಲ್ಲ ಮತ್ತದರಂತೆ ಅಭಾವದ ಉತ್ಪಾದಕೂಡ ತಾನಿಲ್ಲ ।
ಭಾವಗಳು ಗುಣ-ಪರ್ಯಾಯಗಳಲಿ ಮಾಡುವವು ಉತ್ಪಾದ-ನಾಶಗಳ ॥೧೫॥

ಭಾವಾ ಜೀವಾದೀಯಾ ಜೀವಗುಣಾ ಚೇದಣಾ ಯ ಉವಓಗೋ ।
ಸುರಣರಣಾರಯತಿರಿಯಾ ಜೀವಸ್ಸ ಯ ಪಜ್ಜಯಾ ಬಹುಗಾ ॥೧೬॥

ಭಾವಾ ಜೀವಾದ್ಯಾ ಜೀವಗುಣಶ್ಚೇತನಾ ಚೋಪಯೋಗಃ ।
ಸುರನರನಾರಕತಿರ್ಯಂಚೋ ಜೀವಸ್ಯ ಚ ಪರ್ಯಾಯಾಃ ಬಹವಃ ॥೧೬॥

ದ್ರವ್ಯರೂಪದಿಂದ ಭಾವದ - ಸತ್‌ದ್ರವ್ಯದ - ವಿನಾಶವಾಗುವುದಿಲ್ಲ, ದ್ರವ್ಯರೂಪದಿಂದ ಅಭಾವದ - ಅಸತ್ ಅನ್ಯ ದ್ರವ್ಯದ - ಉತ್ಪಾದವಾಗುವುದಿಲ್ಲ ; ಆದರೆ ಭಾವಗಳು - ಸತ್ ದ್ರವ್ಯಗಳು, ಸತ್‌ದ ವಿನಾಶ ಮತ್ತು ಅಸತ್‌ದ ಉತ್ಪಾದವಿಲ್ಲದೆಯೇ, ಗುಣಪರ್ಯಾಯಗಳಲ್ಲಿ ವಿನಾಶ ಮತ್ತು ಉತ್ಪಾದವನ್ನು ಮಾಡುತ್ತವೆ. ಯಾವ ಪ್ರಕಾರ ತುಪ್ಪದ ಉತ್ಪತ್ತಿಯಲ್ಲಿ ಗೋರಸದ-ಸತ್‌ದ-ವಿನಾಶವಾಗುವುದಿಲ್ಲ ಅದರಂತೆ ಗೋರಸದಿಂದ ಬೇರೆಯಾದ ಪದಾರ್ಥಾಂತರದ - ಅಸತ್‌ದ ಉತ್ಪಾದವಾಗುವುದಿಲ್ಲ, ಆದರೆ ಗೋರಸದ್ದೇ ಸತ್‌ದ ವಿನಾಶ ಮತ್ತು ಅಸತ್‌ದ ಉತ್ಪಾದ ಮಾಡದೆಯೇ, ಮೊದಲಿನ ಅವಸ್ಥೆಯಿಂದ ವಿನಾಶಕ್ಕೆ ಪ್ರಾಪ್ತವಾಗುವಂಥ ಮತ್ತು ಉತ್ತರ ಅವಸ್ಥೆಯಿಂದ ಉತ್ಪನ್ನವಾಗುವಂಥ ಸ್ಪರ್ಶ-ರಸ-ಗಂಧ-ವರ್ಣ ಮೊದಲಾದ ಪರಿಣಾಮಿ ಗುಣಗಳಲ್ಲಿ ಬೆಣ್ಣೆಯ ಪರ್ಯಾಯವು ವಿನಾಶಕ್ಕೆ ಪ್ರಾಪ್ತವಾಗುತ್ತದೆ ಹಾಗೂ ತುಪ್ಪದ ಪರ್ಯಾಯವು ಉತ್ಪನ್ನವಾಗುತ್ತದೆ ; ಅದೇ ಪ್ರಕಾರ ಎಲ್ಲ ಭಾವಗಳದ್ದೂ ಕೂಡ ಹಾಗೆಯೇ ಇದೆ. [ಎಂದರೆ ಸಂಪೂರ್ಣ ದ್ರವ್ಯಗಳಿಗೆ ಹೊಸ ಪರ್ಯಾಯದ ಉತ್ಪತ್ತಿಯಲ್ಲಿ ಸತ್‌ದ ವಿನಾಶವಾಗುವುದಿಲ್ಲ ಹಾಗೂ ಅಸತ್‌ದ ಉತ್ಪಾದವಾಗುವುದಿಲ್ಲ ; ಆದರೆ ಸತ್‌ದ ವಿನಾಶ ಮತ್ತು ಅಸತ್‌ದ ಉತ್ಪಾದ ಮಾಡದೆಯೇ, ಮೊದಲಿನ (ಹಳೆಯ) ಅವಸ್ಥೆಯಿಂದ ವಿನಾಶಕ್ಕೆ ಪ್ರಾಪ್ತವಾಗುವಂಥ ಮತ್ತು ಅನಂತರದ (ಹೊಸ) ಅವಸ್ಥೆಯಿಂದ ಉತ್ಪನ್ನವಾಗುವಂಥ ಪರಿಣಾಮಿ[೧] ಗುಣಗಳಲ್ಲಿ ಮೊದಲಿನ ಪರ್ಯಾಯದ ವಿನಾಶ ಮತ್ತು ಅನಂತರ ಪರ್ಯಾಯದ ಉತ್ಪತ್ತಿಯಾಗುತ್ತದೆ.]

ಗಾಥೆ - ೧೬

ಗಾಥಾರ್ಥ :- [ಜೀವಾದೀಯಾ] ಜೀವಾದಿಗಳು (ದ್ರವ್ಯಗಳು) ಅವು [ಭಾವಾ] 'ಭಾವ'ಗಳಿವೆ. [ಜೀವಗುಣಾ] ಜೀವದ ಗುಣಗಳು [ಚೇದಣಾ ಯ ಉವಓಗೋ] ಚೇತನ ಹಾಗೂ ಉಪಯೋಗವಿವೆ. [ಯ] ಮತ್ತು [ಜೀವಸ್ಸ ಪಜ್ಜಯಾ] ಜೀವದ ಪರ್ಯಾಯಗಳು [ಸುರಣರಣಾರಯತಿರಿಯಾ] ದೇವ-ಮನುಷ್ಯ-ನಾರಕ-ತಿರ್ಯಂಚ ರೂಪದಿಂದ [ಬಹುಗಾ] ಅನೇಕವಿವೆ.

ಜೀವಾದಿಗಳು ಭಾವವಿದ್ದು ಜೀವದಗುಣ ಚೇತನ ಮೇಣ್ ಉಪಯೋಗವಿದೆ ।
ಜೀವದಪರ್ಯಾಯ ದೇವ-ಮನುಜ-ನಾರಕ-ತಿರ್ಯಂಚರೂಪದಿಂದನೇಕವಿವೆ ॥೧೬॥

---

೧. ಪರಿಣಾಮಿ = ಪರಿಣಮಿಸುವಂಥ; ಪರಿಣಾಮವುಳ್ಳ (ಪರ್ಯಾಯಾರ್ಥಿಕನಯದಿಂದ ಗುಣಗಳು ಪರಿಣಾಮಿಯಿವೆ ಎಂದರೆ ಪರಿಣಮಿತವಾಗುತ್ತವೆ.)

ಅತ್ರ ಭಾವಗುಣಪರ್ಯಾಯಾಃ ಪ್ರಜ್ಞಾಪಿತಃ ।

ಭಾವಾ ಹಿ ಜೀವಾದಯಃ ಷಟ್ ಪದಾರ್ಥಾಃ । ತೇಷಾಂ ಗುಣಾಃ ಪರ್ಯಾಯಾಶ್ಚ ಪ್ರಸಿದ್ಧಾಃ । ತಥಾಪಿ ಜೀವಸ್ಯ ವಕ್ಷ್ಯಮಾಣೋದಾಹರಣಪ್ರಸಿದ್ಧ್ಯರ್ಥಮಭಿಧೀಯಂತೇ । ಗುಣಾ ಹಿ ಜೀವಸ್ಯ ಜ್ಞಾನಾನುಭೂತಿಲಕ್ಷಣಾ ಶುದ್ಧಚೇತನಾ, ಕಾರ್ಯಾನುಭೂತಿಲಕ್ಷಣಾ ಕರ್ಮಫಲಾನುಭೂತಿಲಕ್ಷಣಾ ಚಾಶುದ್ಧಚೇತನಾ, ಚೈತನ್ಯಾನುವಿಧಾಯಿಪರಿಣಾಮಲಕ್ಷಣಃ ಸವಿಕಲ್ಪನಿರ್ವಿಕಲ್ಪರೂಪಃ ಶುದ್ಧಾಶುದ್ಧತಯಾ ಸಕಲವಿಕಲತಾಂ ದಧಾನೋ ದ್ವೈಧೋಪಯೋಗಶ್ಚ । ಪರ್ಯಾಯಾಸ್ತ್ವಗುರುಲಘುಗುಣಹಾನಿವೃದ್ಧಿನಿರ್ವೃತ್ತಾಃ ಶುದ್ಧಾಃ, ಸೂತ್ರೋಪಾತ್ತಾಸ್ತು ಸುರನಾರಕತಿರ್ಯಗ್ಮನುಷ್ಯಲಕ್ಷಣಾಃ ಪರದ್ರವ್ಯಸಂಬಂಧನಿರ್ವೃತ್ತತ್ವಾದಶುದ್ಧಾಶ್ಚೇತಿ ।

ಟೀಕೆ :- ಇಲ್ಲಿ ಭಾವಗಳನ್ನು (ದ್ರವ್ಯಗಳನ್ನು), ಗುಣಗಳನ್ನು ಮತ್ತು ಪರ್ಯಾಯಗಳನ್ನು ಹೇಳಿದ್ದಾರೆ.

ಜೀವ ಮೊದಲಾದ ಆರು ಪದಾರ್ಥಗಳಿವೆ ಅವು 'ಭಾವ'ಗಳಿವೆ. ಅವುಗಳ ಗುಣ ಮತ್ತು ಪರ್ಯಾಯಗಳು ಪ್ರಸಿದ್ಧವಿವೆ ; ಆದಾಗ್ಯೂ ಮುಂದೆ [೧] (ಮುಂದಿನ ಗಾಥೆಯಲ್ಲಿ) ಯಾವ ಉದಾಹರಣೆ ಕೊಡುವುದಿದೆ ಅದರ ಪ್ರಸಿದ್ಧಿಯ ಕುರಿತು ಜೀವದ ಗುಣಗಳ ಮತ್ತು ಪರ್ಯಾಯಗಳ ಕಥನ ಮಾಡಲಾಗುತ್ತದೆ.

ಜೀವದ ಗುಣಗಳು ಜ್ಞಾನಾನುಭೂತಿಸ್ವರೂಪ [೨] ಶುದ್ಧಚೇತನ ಹಾಗೂ ಕಾರ್ಯಾನುಭೂತಿಸ್ವರೂಪ ಮತ್ತು ಕರ್ಮಫಲಾನುಭೂತಿಸ್ವರೂಪ ಅಶುದ್ಧಚೇತನವಿವೆ ಮತ್ತು ಚೈತನ್ಯಾನುವಿಧಾಯಿ [೩] - ಪರಿಣಾಮ ಸ್ವರೂಪ, ಸವಿಕಲ್ಪ - ನಿರ್ವಿಕಲ್ಪರೂಪ, ಶುದ್ಧತೆ-ಅಶುದ್ಧತೆಯ ಕಾರಣ ಸಕಲತೆ-ವಿಕಲತೆಯನ್ನು ಧಾರಣ ಮಾಡುವಂಥ ಎರಡು ಪ್ರಕಾರದ ಉಪಯೋಗವಿವೆ. (ಎಂದರೆ ಜೀವದ ಗುಣಗಳು [೪] ಶುದ್ಧ-ಅಶುದ್ಧ ಚೇತನ ಹಾಗೂ ಎರಡು ಪ್ರಕಾರದ ಉಪಯೋಗವಿವೆ.)

ಜೀವದ ಪರ್ಯಾಯಗಳು ಹೀಗಿವೆ - ಅಗುರುಲಘುಗುಣದ ಹಾನಿವೃದ್ಧಿಯಿಂದ ಉತ್ಪನ್ನವಾಗುವಂಥ ಪರ್ಯಾಯಗಳು ಶುದ್ಧ ಪರ್ಯಾಯಗಳಿವೆ ಮತ್ತು ಸೂತ್ರದಲ್ಲಿ (ಈ ಗಾಥೆಯಲ್ಲಿ) ಹೇಳಲಾದ, ದೇವ-ನಾರಕ-ತಿರ್ಯಂಚ-ಮನುಷ್ಯ ಸ್ವರೂಪದ ಪರ್ಯಾಯಗಳು ಪರದ್ರವ್ಯದ ಸಂಬಂಧದಿಂದ ಉತ್ಪನ್ನ ವಾಗುತ್ತಿರುವುದರಿಂದ ಅವು ಅಶುದ್ಧಪರ್ಯಾಯಗಳಿವೆ.

---

೧. ಮುಂದಿನ ಗಾಥೆಯಲ್ಲಿ ಜೀವದ ಮಾತನ್ನು ಉದಾಹರಣೆಯ ರೂಪದಲ್ಲಿ ಸ್ವೀಕರಿಸುವುದಿರುವುದರಿಂದ ಆ ಉದಾಹರಣೆಯನ್ನು ಪ್ರಸಿದ್ಧಪಡಿಸುವುದಕ್ಕಾಗಿ ಇಲ್ಲಿ ಜೀವದ ಗುಣಗಳ ಮತ್ತು ಪರ್ಯಾಯಗಳ ಕಥನ ಮಾಡಲಾಗಿದೆ.

೨. ಶುದ್ಧ ಚೇತನವು ಜ್ಞಾನದ ಅನುಭೂತಿಸ್ವರೂಪವಿದೆ ಮತ್ತು ಅಶುದ್ಧಚೇತನವು ಕರ್ಮದ ಹಾಗೂ ಕರ್ಮಫಲದ ಅನುಭೂತಿಸ್ವರೂಪವಿದೆ.

೩. ಚೈತನ್ಯ-ಅನುವಿಧಾಯಿ ಪರಿಣಾಮ ಎಂದರೆ ಚೈತನ್ಯದ ಅನುಸರಣೆ ಮಾಡುವಂಥ ಪರಿಣಾಮ ಅದು ಉಪಯೋಗವಿದೆ. ಸವಿಕಲ್ಪ ಉಪಯೋಗವನ್ನು ಜ್ಞಾನವೆಂದು ಮತ್ತು ನಿರ್ವಿಕಲ್ಪ ಉಪಯೋಗವನ್ನು ದರ್ಶನವೆಂದು ಹೇಳಲಾಗುತ್ತದೆ. ಜ್ಞಾನೋಪಯೋಗದ ಭೇದಗಳೊಳಗೆ ಕೇವಲ ಕೇವಲಜ್ಞಾನವೇ ಶುದ್ಧವಿರುವುದರಿಂದ ಸಕಲ (ಅಖಂಡ, ಪರಿಪೂರ್ಣ)ವಿದೆ ಮತ್ತು ಉಳಿದೆಲ್ಲವು ಅಶುದ್ಧವಿರುವುದರಿಂದ ವಿಕಲ (ಖಂಡಿತ, ಅಪೂರ್ಣ)ವಿವೆ ; ದರ್ಶನೋಪಯೋಗದ ಭೇದಗಳೊಳಗೆ ಕೇವಲ ಕೇವಲದರ್ಶನವೇ ಶುದ್ಧವಿರುವುದರಿಂದ ಸಕಲವಿದೆ ಮತ್ತು ಉಳಿದೆಲ್ಲವು ಅಶುದ್ಧವಿರುವುದರಿಂದ ವಿಕಲವಿವೆ.

೪. ಪರ್ಯಾಯಾರ್ಥಿಕನಯದಿಂದ ಗುಣಗಳೂ ಪರಿಣಾಮಿ ಇವೆ. (೧೫ನೆಯ ಗಾಥೆಯ ಟೀಕೆ ನೋಡಿರಿ)

ಮಣುಸತ್ತಣೇಣ ಣಟ್ಠೋ ದೇಹೀ ದೇವ್ವೋ ಹವೇದಿ ಇದರೋ ವಾ ।
ಉಭಯತ್ಥ ಜೀವಭಾವ್ವೋ ಣ ಣಸ್ಸದಿ ಣ ಜಾಯದೇ ಅಣ್ಣೋ ॥೧೭॥

ಮನುಷ್ಯತ್ವೇನ ನಷ್ಟೋ ದೇಹೀ ದೇವೋ ಭವತೀತರೋ ವಾ ।
ಉಭಯತ್ರ ಜೀವಭಾವೋ ನ ನಶ್ಯತಿ ನ ಜಾಯತೇಽನ್ಯಃ ॥೧೭॥

ಇದಂ ಭಾವನಾಶಾಭಾವೋತ್ಪಾದನಿಷೇಧೋದಾಹರಣಮ್ ।

ಪ್ರತಿಸಮಯಸಂಭವದಗುರುಲಘುಗುಣಹಾನಿವೃದ್ಧಿನಿರ್ವೃತ್ತಸ್ವಭಾವಪರ್ಯಾಯಸಂತತ್ಯವಿಚ್ಛೇದ-ಕೇನೈಕೇನ ಸೋಪಾಧಿನಾ ಮನುಷ್ಯತ್ವಲಕ್ಷಣೇನ ಪರ್ಯಾಯೇಣ ವಿನಶ್ಯತಿ ಜೀವಃ ತಥಾವಿಧೇನ ದೇವತ್ವಲಕ್ಷಣೇನ ನಾರಕತಿರ್ಯಕ್ತ್ವಲಕ್ಷಣೇನ ವಾನ್ಯೇನ ಪರ್ಯಾಯೇಣೋತ್ಪದ್ಯತೇ । ನ ಚ ಮನುಷ್ಯತ್ವೇನ ನಾಶೇ ಜೀವತ್ವೇನಾಪಿ ನಶ್ಯತಿ, ದೇವತ್ವಾದಿನೋತ್ಪಾದೇ ಜೀವತ್ವೇನಾಪ್ಯುತ್ಪದ್ಯತೇ; ಕಿಂತು ಸದುಚ್ಛೇದಮಸದುತ್ಪಾದಮಂತರೇಣೈವ ತಥಾ ವಿವರ್ತತ ಇತಿ ।

ಗಾಥೆ -೧೭

ಗಾಥಾರ್ಥ :- [ಮಣುಸತ್ತಣೇಣ] ಮನುಷ್ಯತ್ವದಿಂದ [ಣಟ್ಠೋ] ನಷ್ಟವಾದ [ದೇಹೀ] ದೇಹಿಯು (ಜೀವಿಯು) [ದೇವ್ವೋ ವಾ ಇದರೋ] ದೇವ ಅಥವಾ ಇತರ [ಹವೇದಿ] ಆಗುತ್ತಾನೆ ; [ಉಭಯತ್ಥ] ಅವೆರಡರಲ್ಲಿ [ಜೀವಭಾವ್ವೋ] ಜೀವಭಾವವು [ಣ ಣಸ್ಸದಿ] ನಾಶವಾಗುವುದಿಲ್ಲ ಮತ್ತು [ಅಣ್ಣೋ] ಇನ್ನೊಂದು ಜೀವಭಾವವು [ಣ ಜಾಯದೇ] ಉತ್ಪನ್ನವಾಗುವುದಿಲ್ಲ.

ಟೀಕೆ :- 'ಭಾವದ ನಾಶವಾಗುವುದಿಲ್ಲ ಮತ್ತು ಅಭಾವದ ಉತ್ಪಾದವಾಗುವುದಿಲ್ಲ'ವೆಂಬುದರ ಉದಾಹರಣೆಯು ಇದಾಗಿದೆ.

ಪ್ರತಿಯೊಂದು ಸಮಯದಲ್ಲಿ ಆಗುವಂಥ ಅಗುರುಲಘುಗುಣದ ಹಾನಿ ವೃದ್ಧಿಗಳಿಂದ ಉತ್ಪನ್ನವಾಗುವಂಥ ಸ್ವಭಾವಪರ್ಯಾಯಗಳ ಸಂತತಿಯ ವಿಚ್ಛೇದ ಮಾಡದಂಥ ಒಂದು ಸೋಪಾಧಿಕ ಮನುಷ್ಯತ್ವ ಸ್ವರೂಪವಾದ ಪರ್ಯಾಯದಿಂದ ಜೀವವು ವಿನಾಶಕ್ಕೆ ಪ್ರಾಪ್ತವಾಗುತ್ತದೆ ಮತ್ತು ಅದೇ ಪ್ರಕಾರದ (ಸ್ವಭಾವಪರ್ಯಾಯಗಳ ಪ್ರವಾಹವನ್ನು ತುಂಡರಿಸದಂಥ ಸೋಪಾಧಿಕ) ದೇವತ್ವಸ್ವರೂಪ, ನಾರಕತ್ವಸ್ವರೂಪ ಅಥವಾ ತಿರ್ಯಂಚತ್ವ ಸ್ವರೂಪವಾದ ಇತರ ಪರ್ಯಾಯದಿಂದ ಉತ್ಪನ್ನವಾಗುತ್ತದೆ. ಅಲ್ಲಿ ಮನುಷ್ಯತ್ವದಿಂದ ವಿನಷ್ಟವಾದ ಮೇಲೆ ಜೀವತ್ವದಿಂದಲೂ ನಷ್ಟವಾಗುತ್ತದೆ ಮತ್ತು ದೇವತ್ವ ಮೊದಲಾದವುಗಳಿಂದ ಉತ್ಪನ್ನವಾದ ಮೇಲೆ ಜೀವತ್ವದಿಂದಲೂ ಉತ್ಪನ್ನವಾಗುತ್ತದೆ - ಎಂಬುದಾಗಿ ಇಲ್ಲ, ಆದರೆ ಸತ್‌ದ ಉಚ್ಛೇದ ಮತ್ತು ಅಸತ್‌ದ ಉತ್ಪಾದವಿಲ್ಲದೆಯೇ ಅದಕ್ಕನುಸರಿಸಿ ವಿವರ್ತನೆ-(ಪರಿವರ್ತನ, ಪರಿಣಮನ) ಮಾಡುತ್ತದೆ.

ಜೀವ ಮನುಷ್ಯತನದಿಂದ ನಷ್ಟವಾಗಿ ದೇವವಿಲ್ಲವೆ ಇತರವಾಗುವುದು ।
ಅವೆರಡರಲಿ ಜೀವಭಾವ ನಷ್ಟ ಮೇಣಿತರ ಉತ್ಪನ್ನ ತಾನಾಗಲಿಲ್ಲ ॥೧೭॥

ಸೋ ಚೇವ ಜಾದಿ ಮರಣಂ ಜಾದಿ ಣ ಣಟ್ಠೋ ಣ ಚೇವ ಉಪ್ಪಣ್ಣೋ ।
ಉಪ್ಪಣ್ಣೋ ಯ ವಿಣಟ್ಠೋ ದೇವೋ ಮಣುಸೋ ತ್ತಿ ಪಜ್ಜಾಓ ॥೧೮॥

ಸ ಚ ಏವ ಯಾತಿ ಮರಣಂ ಯಾತಿ ನ ನಷ್ಟೋ ನ ಚೈವೋತ್ಪನ್ನಃ ।
ಉತ್ಪನ್ನಶ್ಚ ವಿನಷ್ಟೋ ದೇವೋ ಮನುಷ್ಯ ಇತಿ ಪರ್ಯಾಯಃ ॥೧೮॥

ಅತ್ರ ಕಥಂಚಿದ್ವ್ಯಯೋತ್ಪಾದವತ್ತ್ವೇऽಪಿ ದ್ರವ್ಯಸ್ಯ ಸದಾವಿನಷ್ಟಾನುತ್ಪನ್ನತ್ವಂ ಖ್ಯಾಪಿತಮ್ ।

ಯದೇವ ಪೂರ್ವೋತ್ತರಪರ್ಯಾಯವಿವೇಕಸಂಪರ್ಕಾಪಾದಿತಾಮುಭಯೀಮವಸ್ಥಾಮಾತ್ಮಸಾತ್ಕುರ್ವಾಣಮುಚ್ಛಿದ್ಯಮಾನಮುತ್ಪದ್ಯಮಾನಂ ಚ ದ್ರವ್ಯಮಾಲಕ್ಷ್ಯತೇ, ತದೇವ ತಥಾವಿಧೋಭಯಾವಸ್ಥಾವ್ಯಾಪಿನಾ ಪ್ರತಿನಿಯತೈಕವಸ್ತುತ್ವನಿಬಂಧನಭೂತೇನ ಸ್ವಭಾವೇನಾವಿನಷ್ಟಮನುತ್ಪನ್ನಂ ವಾ ವೇದ್ಯತೇ । ಪರ್ಯಾಯಾಸ್ತು ತಸ್ಯ ಪೂರ್ವಪೂರ್ವಪರಿಣಾಮೋಪಮರ್ದೋತ್ತರೋತ್ತರಪರಿಣಾಮೋತ್ಪಾದರೂಪಾಃ ಪ್ರಣಾಶಸಂಭವಧರ್ಮಾಣೋऽಭಿಧೀಯಂತೇ । ತೇ ಚ ವಸ್ತುತ್ವೇನ ದ್ರವ್ಯಾದಪೃಥಗ್ಭೂತಾ ಏವೋಕ್ತಾಃ । ತತಃ ಪರ್ಯಾಯೈಃ ಸಹೈಕವಸ್ತುತ್ವಾಜ್ಜಾಯಮಾನಂ ಮ್ರಿಯಮಾಣಮಪಿ ಜೀವದ್ರವ್ಯಂ ಸರ್ವದಾನುತ್ಪನ್ನಾವಿನಷ್ಟಂ ದೃಷ್ಟವ್ಯಮ್ । ದೇವಮನುಷ್ಯಾದಿಪರ್ಯಾಯಾಸ್ತು ಕ್ರಮವರ್ತಿತ್ವಾದುಪಸ್ಥಿತಾತಿವಾಹಿತಸ್ವಸಮಯಾ ಉತ್ಪದ್ಯಂತೇ ವಿನಶ್ಯಂತಿ ಚೇತಿ ।

ಗಾಥೆ - ೧೮

ಗಾಥಾರ್ಥ ಃ- [ಸೋ ಚೇವ] ಅದೇ [ಜಾದಿ] ಜನ್ಮಗ್ರಹಣ ಮಾಡುತ್ತದೆ ಮತ್ತು [ಮರಣಂ ಜಾದಿ] ಮರಣ ಪ್ರಾಪ್ತಮಾಡಿಕೊಳ್ಳುತ್ತದೆ, ಆದಾಗ್ಯೂ - [ಣ ಉಪ್ಪಣ್ಣೋ ಚೇವ] ಅದು ಉತ್ಪನ್ನವಾಗುವುದಿಲ್ಲ ಮತ್ತು [ಣ ಣಟ್ಠೋ] ನಷ್ಟವಾಗುವುದಿಲ್ಲ ; [ದೇವೋ ಮಣುಸೋ] ದೇವ, ಮನುಷ್ಯ [ತ್ತಿ ಪಜ್ಜಾಓ] ಇಂಥ ಪರ್ಯಾಯಗಳು [ಉಪ್ಪಣ್ಣೋ] ಉತ್ಪನ್ನವಾಗುತ್ತವೆ [ಯ] ಮತ್ತು [ವಿಣಟ್ಠೋ] ವಿನಷ್ಟವಾಗುತ್ತವೆ.

ಟೀಕೆ ಃ- ಇಲ್ಲಿ ದ್ರವ್ಯವು ಕಥಂಚಿತ್ ವ್ಯಯ ಮತ್ತು ಉತ್ಪಾದವುಳ್ಳದ್ದಾಗಿದ್ದರೂ ಕೂಡ ಯಾವಾಗಲೂ ಅದರ ಅವಿನಷ್ಟತೆ ಮತ್ತು ಅನುತ್ಪನ್ನತೆಯನ್ನು ಹೇಳಿದೆ.

ಯಾವ ದ್ರವ್ಯವು ಪೂರ್ವ[೧] ಪರ್ಯಾಯದ ವಿಯೋಗದಿಂದ ಮತ್ತು ಉತ್ತರ[೨] ಪರ್ಯಾಯದ ಸಂಯೋಗದಿಂದ ಆಗುವಂಥ ಉಭಯ ಅವಸ್ಥೆಗಳನ್ನು ಆತ್ಮಸಾತ್ (ತನ್ನ ರೂಪ) ಮಾಡುತ್ತ ವಿನಷ್ಟವಾಗುತ್ತಿರುವುದು ಮತ್ತು ಉತ್ಪನ್ನವಾಗುತ್ತಿರುವುದು ಕಂಡು ಬರುತ್ತದೆ, ಅದೇ (ದ್ರವ್ಯವು) ಅಂಥ ಉಭಯ ಅವಸ್ಥೆಗಳಲ್ಲಿ ವ್ಯಾಪ್ತವಾಗುವಂಥ ಯಾವ ಪ್ರತಿನಿಯತ-ಏಕವಸ್ತುತ್ವಕ್ಕೆ ಕಾರಣಭೂತವಾದ ಸ್ವಭಾವದ ಮುಖಾಂತರ (-ಆ

ಅದುವೆ ಹುಟ್ಟುವುದು ಸಾಯುವುದಾದರೂ ಅದು ಉತ್ಪನ್ನನಾಶವಾಗದು ।
ಅದರ ದೇವ-ಮನುಜದಂಥ ಪರ್ಯಾಯಗಳು ಉತ್ಪನ್ನ-ವಿನಷ್ಟವಾಗುವವು ॥೧೮॥

೧. ಪೂರ್ವ = ಮೊದಲಿನ ೨. ಉತ್ತರ = ಅನಂತರದ.

ಏವಂ ಸದೋ ವಿಣಾಸೋ ಅಸದೋ ಜೀವಸ್ಸ ಣತ್ಥಿ ಉಪ್ಪಾದೋ ।
ತಾವದಿಓ ಜೀವಾಣಂ ದೇವೋ ಮಣುಸೋ ತ್ತಿ ಗದಿಣಾಮೋ ॥೧೯॥

ಏವಂ ಸತೋ ವಿನಾಶೋಽಸತೋ ಜೀವಸ್ಯ ನಾಸ್ತ್ಯುತ್ಪಾದಃ ।
ತಾವಜ್ಜೀವಾನಾಂ ದೇವೋ ಮನುಷ್ಯ ಇತಿ ಗತಿನಾಮ ॥೧೯॥

ಅತ್ರ ಸದಸತೋರವಿನಾಶಾನುತ್ಪಾದೌ ಸ್ಥಿತಿಪಕ್ಷತ್ವೇನೋಪನ್ಯಸ್ತೌ ।

ಯದಿ ಹಿ ಜೀವೋ ಯ ಏವ ಮ್ರಿಯತೇ ಸ ಏವ ಜಾಯತೇ, ಯ ಏವ ಜಾಯತೇ ಸ ಏವ ಮ್ರಿಯತೇ, ತದೈವಂ ಸತೋ ವಿನಾಶೋಽಸತ ಉತ್ಪಾದಶ್ಚ ನಾಸ್ತೀತಿ ವ್ಯವತಿಷ್ಠತೇ । ಯತ್ತು ದೇವೋ ಜಾಯತೇ ಮನುಷ್ಯೋ

ಸ್ವಭಾವದ ಅಪೇಕ್ಷೆಯಿಂದ) ಅವಿನಷ್ಟ ಹಾಗೂ ಅನುತ್ಪನ್ನತೆಯ ಪ್ರತೀತಿಯಾಗುತ್ತದೆ ; ಅದರ ಪರ್ಯಾಯಗಳು ಪೂರ್ವ-ಪೂರ್ವ ಪರಿಣಾಮದ ನಾಶರೂಪ ಮತ್ತು ಉತ್ತರ-ಉತ್ತರ ಪರಿಣಾಮದ ಉತ್ಪಾದರೂಪವಾಗಿರುವುದರಿಂದ ವಿನಾಶ-ಉತ್ಪಾದ ಧರ್ಮವುಳ್ಳವೆಂದು (-ವಿನಾಶ ಮತ್ತು ಉತ್ಪಾದರೂಪಧರ್ಮವುಳ್ಳವೆಂದು) ಹೇಳಲಾಗುತ್ತದೆ; ಮತ್ತು ಅವು (ಪರ್ಯಾಯಗಳು) ವಸ್ತುರೂಪದಿಂದ ದ್ರವ್ಯದಿಂದ ಅಪೃಥಗ್ಭೂತವೆಂದೇ ಹೇಳಲಾಗಿದೆ. ಪರ್ಯಾಯಗಳೊಡನೆ ಏಕವಸ್ತುತ್ವದ ಕಾರಣವಾಗಿ ಹುಟ್ಟುತ್ತ ಮತ್ತು ಸಾಯುತ್ತಿದ್ದರೂ ಕೂಡ ಜೀವದ್ರವ್ಯವನ್ನು ಯಾವಾಗಲೂ ಅನುತ್ಪನ್ನ ಹಾಗೂ ಅವಿನಷ್ಟವೆಂದೇ ನೋಡುವುದು (-ಶ್ರದ್ಧೆ ಮಾಡುವುದು) ; ದೇವ-ಮನುಷ್ಯ ಮೊದಲಾದ ಪರ್ಯಾಯಗಳು ಉತ್ಪನ್ನವಾಗುತ್ತವೆ ಮತ್ತು ವಿನಷ್ಟವಾಗುತ್ತವೆ ಏಕೆಂದರೆ ಅವು ಕ್ರಮವರ್ತಿಯಾಗಿರುವುದರಿಂದ ಅವುಗಳ ಸ್ವಸಮಯವು ಉಪಸ್ಥಿತವಾಗುತ್ತದೆ ಮತ್ತು ಕಳೆದು ಹೋಗುತ್ತದೆ.

ಗಾಥೆ - ೧೯

ಗಾಥಾರ್ಥ :- [ಏವಂ] ಈ ಪ್ರಕಾರವಾಗಿ [ಜೀವಸ್ಸ] ಜೀವನಿಗೆ [ಸದೋ ವಿಣಾಸೋ] ಸತ್‌ದ ವಿನಾಶ ಮತ್ತು [ಅಸದೋ ಉಪ್ಪಾದೋ] ಅಸತ್‌ದ ಉತ್ಪಾದವು [ಣತ್ಥಿ] ಇಲ್ಲ ; (ದೇವನು ಹುಟ್ಟುತ್ತಾನೆ ಮತ್ತು ಮನುಷ್ಯನು ಸಾಯುತ್ತಾನೆ' - ಎಂದು ಹೇಳಲಾಗುತ್ತದೆ ಅದರ ಕಾರಣವೇನೆಂದರೆ -) [ಜೀವಾಣಂ] ಜೀವರುಗಳಿಗೆ [ದೇವೋ ಮಣುಸೋ] ದೇವ, ಮನುಷ್ಯ - [ತ್ತಿ ಗದಿಣಾಮೋ] ಎಂಬ ಗತಿನಾಮಕರ್ಮವು [ತಾವದಿಓ] ಅಷ್ಟೇ ಕಾಲದ್ದಿರುತ್ತದೆ ;

ಟೀಕೆ :- ಇಲ್ಲಿ ಧ್ರುವತ್ವದ ಪಕ್ಷದಿಂದ ಸತ್‌ದ ಅವಿನಾಶ ಮತ್ತು ಅಸತ್‌ದ ಅನುತ್ಪಾದವನ್ನು ಹೇಳಿದೆ. (ಎಂದರೆ ಧ್ರುವತ್ವದ ಅಪೇಕ್ಷೆಯಿಂದ ಸತ್‌ದ ವಿನಾಶ ಅಥವಾ ಅಸತ್‌ದ ಉತ್ಪಾದವಾಗುವುದಿಲ್ಲವೆಂದು ಈ ಗಾಥೆಯಲ್ಲಿ ಹೇಳಿದೆ.)

ಜೀವನಿಗೆ ಈ ತೆರದಿ ಸತ್‌ದ ವಿನಾಶ ಮೇಣ್ ಅಸತ್‌ದ ಉತ್ಪಾದವಿಲ್ಲ ।
ಜೀವಗಳಿಗೆ ದೇವ-ಮನುಷ್ಯದಂಥ ಗತಿನಾಮಗಳಷ್ಟು ಕಾಲದವಿರುವವು ॥೧೯॥

ಮ್ರಿಯತೇ ಇತಿ ವ್ಯಪದಿಶ್ಯತೇ ತದವಧೃತಕಾಲದೇವಮನುಷ್ಯತ್ವಪರ್ಯಾಯ ನಿರ್ವರ್ತಕಸ್ಯ ದೇವಮನುಷ್ಯ ಗತಿನಾಮ್ನಸ್ತನ್ಮಾತ್ರತ್ವಾದವಿರುದ್ಧಮ್ । ಯಥಾ ಹಿ ಮಹತೋ ವೇಣುದಂಡಸ್ಯೈಕಸ್ಯ ಕ್ರಮವೃತ್ತೀನ್ಯನೇಕಾನಿ ಪರ್ವಾಣ್ಯಾತ್ಮೀಯಾತ್ಮೀಯಪ್ರಮಾಣಾವಚ್ಛಿನ್ನತ್ವಾತ್ ಪರ್ವಾಂತರಮಗಚ್ಛಂತಿ ಸ್ವಸ್ಥಾನೇಷು ಭಾವಭಾಂಜಿ ಪರಸ್ಥಾನೇಷ್ವಭಾವಭಾಂಜಿ ಭವಂತಿ, ವೇಣುದಂಡಸ್ತು ಸರ್ವೇಷ್ವಪಿ ಪರ್ವಸ್ಥಾನೇಷು ಭಾವಭಾಗಪಿ ಪರ್ವಾಂತರ-ಸಂಬಂಧೇನ ಪರ್ವಾಂತರಸಂಬಂಧಾಭಾವಾದಭಾವಭಾಗ್ಭವತಿ; ತಥಾ ನಿರವಧಿತ್ರಿಕಾಲಾವಸ್ಥಾಯಿನೋ ಜೀವದ್ರವ್ಯಸ್ಯೈಕಸ್ಯ ಕ್ರಮವೃತ್ತಯೋಽನೇಕೇ ಮನುಷ್ಯತ್ವಾದಿಪರ್ಯಾಯಾ ಆತ್ಮೀಯಾತ್ಮೀಯಪ್ರಮಾಣಾವಚ್ಛಿನ್ನತ್ವಾತ್ ಪರ್ಯಾಯಾಂತರಮಗಚ್ಛಂತಃ ಸ್ವಸ್ಥಾನೇಷು ಭಾವಭಾಜಃ ಪರಸ್ಥಾನೇಷ್ವಭಾವಭಾಜೋ ಭವಂತಿ, ಜೀವದ್ರವ್ಯಂ ತು ಸರ್ವಪರ್ಯಾಯಸ್ಥಾನೇಷು ಭಾವಭಾಗಪಿ ಪರ್ಯಾಯಾಂತರಸಂಬಂಧೇನ ಪರ್ಯಾಯಾಂತರಸಂಬಂಧಾ-ಭಾವಾದಭಾವಭಾಗ್ಭವತಿ ।

ಒಂದು ವೇಳೆ ವಾಸ್ತವಿಕವಾಗಿ ಯಾವ ಜೀವವು ಸಾಯುತ್ತದೆ ಅದೇ ಹುಟ್ಟುತ್ತದೆ ಮತ್ತು ಯಾವ ಜೀವವು ಹುಟ್ಟುತ್ತದೆ ಅದೇ ಸಾಯುತ್ತದೆಂದ ಮೇಲೆ ಈ ಪ್ರಕಾರ ಸತ್‌ದ ವಿನಾಶ ಮತ್ತು ಅಸತ್‌ದ ಉತ್ಪಾದವಿಲ್ಲವೆಂಬುದು ನಿಶ್ಚಿತವಾಗುತ್ತದೆ. ಮತ್ತು 'ದೇವನು ಹುಟ್ಟುತ್ತಾನೆ ಹಾಗೂ ಮನುಷ್ಯನು ಸಾಯುತ್ತಾನೆ'ಂದು ಯಾವುದನ್ನು ಹೇಳಲಾಗುತ್ತದೆ ಅದು (ಕೂಡ) ಅವಿರುದ್ಧವೇ ಇದೆ, ಏಕೆಂದರೆ ಮರ್ಯಾದಿತಕಾಲದ ದೇವತ್ವ ಪರ್ಯಾಯ ಮತ್ತು ಮನುಷ್ಯತ್ವ ಪರ್ಯಾಯವನ್ನು ಉತ್ಪನ್ನ ಮಾಡುವಂಥ ದೇವಗತಿನಾಮಕರ್ಮ ಮತ್ತು ಮನುಷ್ಯಗತಿ ನಾಮಕರ್ಮಗಳು ಮಾತ್ರ ಎಷ್ಟುಕಾಲ ಅಷ್ಟೇ ಇರುತ್ತವೆ. ಯಾವ ಪ್ರಕಾರ ಒಂದು ದೊಡ್ಡ ಬಿದಿರಿನ ಕ್ರಮವರ್ತಿಯಾದ ಅನೇಕ ಪರ್ವ[೧]ಗಳು ತಮ್ಮ-ತಮ್ಮ ಅಳತೆಯಲ್ಲಿ ಮರ್ಯಾದಿತವಿರುವುದರಿಂದ ಇತರ ಪರ್ವದಲ್ಲಿ ಪ್ರವೇಶಿಸದೆ ತಮ್ಮ-ತಮ್ಮ ಸ್ಥಾನಗಳಲ್ಲಿ ಭಾವವುಳ್ಳವುಗಳಾಗಿವೆ (ವಿದ್ಯಮಾನವಿವೆ) ಮತ್ತು ಪರಸ್ಥಾನಗಳಲ್ಲಿ ಅಭಾವವುಳ್ಳವುಗಳಾಗಿವೆ (ಅವಿದ್ಯಮಾನವಿವೆ) ಹಾಗೂ ಬಿದಿರಂತೂ ಎಲ್ಲ ಪರ್ವಸ್ಥಾನಗಳಲ್ಲಿ ಭಾವವುಳ್ಳದ್ದಾಗಿದ್ದರೂ ಒಂದು ಪರ್ವದ ಸಂಬಂಧದಿಂದ ಇನ್ನೊಂದು ಪರ್ವದ ಸಂಬಂಧದ ಅಭಾವವಿರುವುದರಿಂದ ಅಭಾವವುಳ್ಳದ್ದೂ ಇದೆ ; ಅದೇ ಪ್ರಕಾರ ಅಮರ್ಯಾದ ತ್ರಿಕಾಲ ಸ್ಥಿರವಿರುವಂಥ ಒಂದು ಜೀವದ್ರವ್ಯದ ಕ್ರಮವರ್ತಿಯಾದ ಅನೇಕ ಮನುಷ್ಯ ಮೊದಲಾದ ಪರ್ಯಾಯಗಳು ತಮ್ಮ-ತಮ್ಮ ಅಳತೆಯಲ್ಲಿ ಮರ್ಯಾದಿತವಾಗಿರುವುದರಿಂದ ಇತರ ಪರ್ಯಾಯಗಳಲ್ಲಿ ಪ್ರವೇಶಿಸಿದೆ ತಮ್ಮ-ತಮ್ಮ ಸ್ಥಾನಗಳಲ್ಲಿ ಭಾವವುಳ್ಳವುಗಳಾಗಿವೆ ಮತ್ತು ಪರಸ್ಥಾನಗಳಲ್ಲಿ ಅಭಾವವುಳ್ಳವುಗಳಾಗಿವೆ ಹಾಗೂ ಜೀವದ್ರವ್ಯವಂತೂ ಎಲ್ಲ ಪರ್ಯಾಯ ಸ್ಥಾನಗಳಲ್ಲಿ ಭಾವವುಳ್ಳದ್ದಾಗಿದ್ದರೂ ಒಂದು ಪರ್ಯಾಯದ ಸಂಬಂಧದಿಂದ ಇನ್ನೊಂದು ಪರ್ಯಾಯದ ಸಂಬಂಧದ ಅಭಾವವಿರುವುದರಿಂದ ಅಭಾವವುಳ್ಳದ್ದೂ ಇದೆ.

ಭಾವಾರ್ಥ :- ಧ್ರೌವ್ಯ ಅಪೇಕ್ಷೆಯಿಂದ ಜೀವಕ್ಕೆ ಸತ್‌ದ ವಿನಾಶ ಮತ್ತು ಅಸತ್‌ದ ಉತ್ಪಾದವಿಲ್ಲ. 'ಮನುಷ್ಯನು ಸಾಯುತ್ತಾನೆ ಮತ್ತು ದೇವನು ಹುಟ್ಟುತ್ತಾನೆಂದು ಯಾವುದನ್ನು ಹೇಳಲಾಗುತ್ತದೆ ಆ ಮಾತೂ ಕೂಡ ಮೇಲೆ ಹೇಳಿದ ವಿವರಣೆಯ ಜೊತೆಯಲ್ಲಿ ವಿರೋಧಕ್ಕೆ ಪ್ರಾಪ್ತವಾಗುವುದಿಲ್ಲ. ಯಾವ ಪ್ರಕಾರ ಒಂದು ದೊಡ್ಡ ಬಿದಿರಿನ ಅನೇಕ ಗಣಿಕೆಗಳು ತಮ್ಮ - ತಮ್ಮ ಸ್ಥಾನಗಳಲ್ಲಿ ವಿದ್ಯಮಾನವಿವೆ ಮತ್ತು ಇತರ ಗಣಿಕೆಗಳ ಸ್ಥಾನಗಳಲ್ಲಿ

೧. ಪರ್ವ = ಒಂದು ಗಂಟಿನಿಂದ ಇನ್ನೊಂದು ಗಂಟಿನವರೆಗಿರುವ ಭಾಗ ; ಗಣಿಕೆ.

ಣಾಣಾವರಣಾದೀಯಾ ಭಾವಾ ಜೀವೇಣ ಸುಟ್ಠು ಅಣುಬದ್ಧಾ ।
ತೇಸಿಮಭಾವಂ ಕಿಚ್ಚಾ ಅಭೂದಪುವ್ವೋ ಹವದಿ ಸಿದ್ಧೋ ॥೨೦॥

ಜ್ಞಾನಾವರಣಾದ್ಯಾ ಭಾವಾ ಜೀವೇನ ಸುಷ್ಠು ಅನುಬದ್ಧಾಃ ।
ತೇಷಮಭಾವಂ ಕೃತ್ವಾऽಭೂತಪೂರ್ವೋ ಭವತಿ ಸಿದ್ಧಃ ॥೨೦॥

ಅತ್ರಾತ್ಯಂತಾಸದುತ್ಪಾದತ್ವಂ ಸದ್ಧಿಸ್ಯ ನಿಷಿದ್ಧಮ್ ।

ಯಥಾ ಸ್ತೋಕಕಾಲಾನ್ವಯಿಷು ನಾಮಕರ್ಮವಿಶೇಷೋದಯನಿರ್ವೃತ್ತೇಷು ಜೀವಸ್ಯ ದೇವಾದಿ-ಪರ್ಯಾಯೇಷ್ವೇಕಸ್ಮಿನ್ ಸ್ವಕಾರಣನಿವೃತ್ತೌ ನಿವೃತ್ತೇऽಭೂತಪೂರ್ವ ಏವ ಚಾನ್ಯಸ್ಮಿನ್ನುತ್ಪನ್ನೇ ನಾಸದುತ್ಪತ್ತಿಃ, ತಥಾ ದೀರ್ಘಕಾಲಾನ್ವಯಿನಿ ಜ್ಞಾನಾವರಣಾದಿಕರ್ಮಸಾಮಾನ್ಯೋದಯನಿವೃತ್ತಸಂಸಾರಿತ್ವಪರ್ಯಾಯೇ ಭವ್ಯಸ್ಯ

ಅವಿದ್ಯಮಾನವಿವೆ ಹಾಗೂ ಬಿದಿರಂತೂ ಎಲ್ಲ ಗಣಿಕೆಗಳ ಸ್ಥಾನಗಳಲ್ಲಿ ಅನ್ವಯರೂಪದಿಂದ ವಿದ್ಯಮಾನವಿದ್ದರೂ ಕೂಡ ಮೊದಲನೆಯದು ಮೊದಲಾದ ಗಣಿಕೆಗಳ ರೂಪದಲ್ಲಿ ಎರಡನೆಯದು ಮೊದಲಾದ ಗಣಿಕೆಗಳಲ್ಲಿ ಇಲ್ಲದಿರುವುದರಿಂದ ಅವಿದ್ಯಮಾನವೆಂದೂ ಹೇಳಲಾಗುತ್ತದೆ ; ಅದೇ ಪ್ರಕಾರ ತ್ರಿಕಾಲ ಅವಸ್ಥೆಯುಳ್ಳ ಒಂದು ಜೀವದ ನರಕ ಮೊದಲಾದ ಅನೇಕ ಪರ್ಯಾಯಗಳು ತಮ್ಮ - ತಮ್ಮ ಕಾಲದಲ್ಲಿ ವಿದ್ಯಮಾನವಿವೆ ಮತ್ತು ಬೇರೆ ಪರ್ಯಾಯಗಳ ಕಾಲದಲ್ಲಿ ಅವಿದ್ಯಮಾನವಿವೆ ಹಾಗೂ ಜೀವವಂತೂ ಎಲ್ಲ ಪರ್ಯಾಯಗಳಲ್ಲಿ ಅನ್ವಯರೂಪದಿಂದ ವಿದ್ಯಮಾನವಿದ್ದರೂ ಕೂಡ ಮನುಷ್ಯಾದಿಪರ್ಯಾಯರೂಪದಿಂದ ದೇವಾದಿ ಪರ್ಯಾಯದಲ್ಲಿ ಇಲ್ಲದಿರುವುದರಿಂದ ಅವಿದ್ಯಮಾನವೆಂದು ಕೂಡ ಹೇಳಲಾಗುತ್ತದೆ.

ಗಾಥೆ - ೨೦

ಗಾಥಾರ್ಥ :- [ಣಾಣಾವರಣಾದೀಯಾ ಭಾವಾ] ಜ್ಞಾನಾವರಣ ಮೊದಲಾದ ಭಾವಗಳು [ಜೀವೇಣ] ಜೀವದೊಡನೆ [ಸುಟ್ಠು] ಚನ್ನಾಗಿ [ಅಣುಬದ್ಧಾ] ಅನುಬದ್ಧವಿವೆ ; [ತೇಸಿಂ ಅಭಾವಂ ಕಿಚ್ಚಾ] ಅವುಗಳ ಅಭಾವ ಮಾಡಿ ಅದು [ಅಭೂದಪುವ್ವೋ ಸಿದ್ಧೋ] ಅಭೂತಪೂರ್ವಸಿದ್ಧ [ಹವದಿ] ಆಗುತ್ತದೆ.

ಟೀಕೆ :- ಇಲ್ಲಿಸಿದ್ಧರಿಗೆ ಅಸತ್ - ಉತ್ಪಾದದ ಅತ್ಯಂತ ನಿಷೇಧ ಮಾಡಿದೆ. (ಎಂದರೆ ಸಿದ್ಧತ್ವವಾಗುವುದರಿಂದ ಸರ್ವಥಾ ಅಸತ್‌ದ ಉತ್ಪಾದವಾಗುವುದಿಲ್ಲವೆಂದು ಹೇಳಿದೆ.)

ಯಾವ ಪ್ರಕಾರ ಕೆಲ ಸಮಯದವರೆಗೆ ಅನ್ವಯರೂಪದಿಂದ (ಜೊತೆ-ಜೊತೆ) ಇರುವಂಥ ನಾಮಕರ್ಮ ವಿಶೇಷದ ಉದಯದಿಂದ ಉತ್ಪನ್ನವಾಗುವಂಥ ಯಾವ ದೇವ ಮೊದಲಾದ ಪರ್ಯಾಯಗಳಿವೆ ಅವುಗಳೊಳಗಿಂದ ಜೀವನಿಗೆ ಯಾವುದೇ ಒಂದು ಪರ್ಯಾಯವು ತನ್ನ ಕಾರಣದ ನಿವೃತ್ತಿಯಾದ ಮೇಲೆ ನಿವೃತ್ತನಾಗುತ್ತಾನೆ ಮತ್ತು ಬೇರೆ ಯಾವುದೇ ಅಭೂತಪೂರ್ವ ಪರ್ಯಾಯವೇ ಉತ್ಪನ್ನವಾಗುತ್ತದೆ, ಅಲ್ಲಿ ಅಸತ್‌ದ ಉತ್ಪತ್ತಿಯಿಲ್ಲ ; ಅದೇ ಪ್ರಕಾರ ದೀರ್ಘಕಾಲದವರೆಗೆ ಅನ್ವಯರೂಪದಿಂದ ಇರುವಂಥ ಜ್ಞಾನಾವರಣ ಮೊದಲಾದ ಕರ್ಮ ಸಾಮಾನ್ಯದ

ಜೀವದೊಡನೆ ಜ್ಞಾನಾವರಣಾದಿ ಭಾವಗಳು ಚನ್ನಾಗಿ ಅನುಬದ್ಧವಿವೆ ।
ಅವುಗಳ ಅಭಾವಮಾಡಿ ಆ ಜೀವ ಅಭೂತಪೂರ್ವ ಸಿದ್ಧನಾಗುವುದು ॥೨೦॥

ಸ್ವಕಾರಣನಿವೃತ್ತೌ ನಿವೃತ್ತೇ ಸಮುತ್ಪನ್ನೇ ಚಾಭೂತಪೂರ್ವೇ ಸಿದ್ಧತ್ವಪರ್ಯಾಯೇ ನಾಸದುತ್ಪತ್ತಿರಿತಿ । ಕಿಂ ಚ-ಯಥಾ ದ್ರಾಘೀಯಾಸಿ ವೇಣುದಂಡೇ ವ್ಯವಹಿತಾವ್ಯವಹಿತವಿಚಿತ್ರಚಿತ್ರಕಿರ್ಮೀರತಾಖಿಚಿತಾದಸ್ತನಾರ್ಧಭಾಗೇ ಏಕಾಂತವ್ಯವಹಿತಸುವಿಶುದ್ಧೋರ್ಧ್ವಾರ್ಧಭಾಗೇಽವತಾರಿತಾ ದೃಷ್ಟಿಃ ಸಮಂತತೋ ವಿಚಿತ್ರಚಿತ್ರಕಿರ್ಮೀರತಾವ್ಯಾಪ್ತಿಂ ಪಶ್ಯಂತೀ ಸಮನುಮಿನೋತಿ ತಸ್ಯ ಸರ್ವತ್ರಾವಿಶುದ್ಧತ್ವಂ, ತಥಾ ಕ್ವಚಿದಪಿ ಜೀವದ್ರವ್ಯೇ ವ್ಯವಹಿತಾವ್ಯವಹಿತ-ಜ್ಞಾನಾವರಣಾದಿಕರ್ಮಕಿರ್ಮೀರತಾಖಚಿತಬಹುತರಾಧಸ್ತನಭಾಗೇ ಏಕಾಂತವ್ಯವಹಿತಸುವಿಶುದ್ಧ-ಬಹುತರೋರ್ಧ್ವಭಾಗೇಽವತಾರಿತಾ ಬುದ್ಧಿಃ ಸಮಂತತೋ ಜ್ಞಾನಾವರಣಾದಿಕರ್ಮಕಿರ್ಮೀರತಾವ್ಯಾಪ್ತಿಂ ವ್ಯವಸ್ಯಂತೀ ಸಮನುಮಿನೋತಿ ತಸ್ಯ ಸರ್ವತ್ರಾವಿಶುದ್ಧತ್ವಮ್ । ಯಥಾ ಚ ತತ್ರ ವೇಣುದಂಡೇ ವ್ಯಾಪ್ತಿ

ಉದಯದಿಂದ ಉತ್ಪನ್ನವಾಗುವಂಥ ಸಂಸಾರ ಅವಸ್ಥೆಯ ಪರ್ಯಾಯಗಳು ಭವ್ಯನಿಗೆ ತನ್ನ ಕಾರಣದ ನಿವೃತ್ತಿಯಾದ ಮೇಲೆ ನಿವೃತ್ತನಾಗುವನು ಮತ್ತು ಅಭೂತಪೂರ್ವದಂಥ (ಪೂರ್ವಕಾಲದಲ್ಲಿ ಆಗದಂತೆ ಸಿದ್ಧಪರ್ಯಾಯವು ಉತ್ಪನ್ನವಾಗುತ್ತದೆ, ಅಲ್ಲಿ ಅಸತ್‌ದ ಉತ್ಪತ್ತಿಯಿಲ್ಲ.

ಮತ್ತೆ (ವಿಶೇಷವಾಗಿ ತಿಳಿಸಿಕೊಡಲಾಗುತ್ತದೆ)-

ಯಾವ ಪ್ರಕಾರ ಯಾವುದರ ವಿಚಿತ್ರ ಚಿತ್ರಗಳಿಂದ ಚಿತ್ರವಿಚಿತ್ರತರವಾದ ಕೆಳಗಿನ ಅರ್ಧ ಭಾಗವು ಸ್ವಲ್ಪ ಮುಚ್ಚಿಹೋಗಿದೆ ಮತ್ತು ಸ್ವಲ್ಪ ಮುಚ್ಚಿಹೋಗಿಲ್ಲ ಅಲ್ಲದೆ ಸುವಿಶುದ್ಧ (ಅವಿಚಿತ್ರ)ವಾದ ಮೇಲಿನ ಅರ್ಧ ಭಾಗವು ಮಾತ್ರ ಮುಚ್ಚಿಯೇ ಹೋಗಿದೆ ಅಂಥ ಬಹಳಷ್ಟು ನೀಳವಾದ ಬಿದಿರಿನ ಮೇಲೆ ದೃಷ್ಟಿ ಹಾಕುವುದರಿಂದ ಆ ದೃಷ್ಟಿಯು ಎಲ್ಲೆಡೆಗೆ ವಿಚಿತ್ರ ಚಿತ್ರಗಳಿಂದಾದ ಚಿತ್ರವಿಚಿತ್ರತನದ ವ್ಯಾಪ್ತಿಯ ನಿರ್ಣಯ ಮಾಡುತ್ತ ''ಆ ಬಿದಿರು ಎಲ್ಲೆಡೆಗೆ ಅವಿಶುದ್ಧವಿದೆ (ಎಂದರೆ ಸಂಪೂರ್ಣ ಬಣ್ಣ ಬಣ್ಣದ್ದಿದೆ)'' ಎಂಬ ಅನುಮಾನ ಮಾಡುತ್ತದೆ ; ಅದೇ ಪ್ರಕಾರ ಯಾವುದರ ಜ್ಞಾನಾವರಣಾದಿ ಕರ್ಮಗಳಿಂದಾದ ಚಿತ್ರವಿಚಿತ್ರತೆಯಿಂದ ಕೂಡಿದ (-ವಿವಿಧ ವಿಭಾವ ಪರ್ಯಾಯವುಳ್ಳ) ಬಹಳಷ್ಟು ಹಿರಿದಾದ ಕೆಳಗಿನ ಭಾಗವು ಸ್ವಲ್ಪ ಮುಚ್ಚಿಹೋಗಿದೆ ಮತ್ತು ಸ್ವಲ್ಪ ಮುಚ್ಚಿಲ್ಲ ಅಲ್ಲದೆ ಸುವಿಶುದ್ಧವಾದ (ಸಿದ್ಧಪರ್ಯಾಯವುಳ್ಳ), ಬಹಳಷ್ಟು ದೊಡ್ಡದಾದ ಮೇಲಿನ ಭಾಗವು ಮಾತ್ರ ಮುಚ್ಚಿಯೇ ಹೋಗಿದೆ ಅಂಥ ಯಾವುದೇ ಒಂದು ಜೀವದ್ರವ್ಯದಲ್ಲಿ ಬುದ್ಧಿ ತೊಡಗಿರುವುದರಿಂದ ಆ ಬುದ್ಧಿಯು ಎಲ್ಲೆಡೆಗೆ ಜ್ಞಾನಾವರಣ ಮೊದಲಾದ ಕರ್ಮಗಳಿಂದಾಗಿ ಚಿತ್ರವಿಚಿತ್ರತನದ ವ್ಯಾಪ್ತಿಯ ನಿರ್ಣಯ ಮಾಡುತ್ತ ''ಆ ಜೀವವು ಎಲ್ಲೆಡೆಗೆ ಅವಿಶುದ್ಧವಿದೆ (ಎಂದರೆ ಸಂಪೂರ್ಣ ಸಂಸಾರಪರ್ಯಾಯವುಳ್ಳದ್ದಿದೆ)'' ಎಂಬ ಅನುಮಾನ ಮಾಡುತ್ತದೆ.

ಮತ್ತೆ, ಯಾವ ಪ್ರಕಾರ ಆ ಬಿದಿರಿನಲ್ಲಿ ವ್ಯಾಪ್ತಿಜ್ಞಾನದ ಆಭಾಸದ ಕಾರಣವಾಗಿ (ಕೆಳಗಿನ ಮುಕ್ತಭಾಗದಲ್ಲಿ) ವಿಚಿತ್ರಚಿತ್ರಗಳಿಂದಾದ ಚಿತ್ರವಿಚಿತ್ರತನದ ಅನ್ವಯ (ಸಂತತಿ, ಪ್ರವಾಹ)ವಿದೆ, ಅದೇ ಪ್ರಕಾರ ಆ ಜೀವದ್ರವ್ಯದಲ್ಲಿ ವ್ಯಾಪ್ತಿಜ್ಞಾನದ ಆಭಾಸದ ಕಾರಣವಾಗಿ (ಕೆಳಗಿನ ತೆರೆದ ಭಾಗದಲ್ಲಿ) ಜ್ಞಾನಾವರಣ ಮೊದಲಾದ ಕರ್ಮಗಳಿಂದಾದ ಚಿತ್ರವಿಚಿತ್ರತನದ ಅನ್ವಯವಿದೆ. ಮತ್ತು ಯಾವ ಪ್ರಕಾರ ಆ ಬಿದಿರಿನಲ್ಲಿ (ಮೇಲಿನ ಭಾಗದಲ್ಲಿ) ಸುವಿಶುದ್ಧತೆಯಿದೆ ಏಕೆಂದರೆ (ಅಲ್ಲಿ) ವಿಚಿತ್ರಚಿತ್ರಗಳಿಂದಾದ ಚಿತ್ರವಿಚಿತ್ರತನದ ಅನ್ವಯದ ಅಭಾವವಿದೆ ; ಅದೇ ಪ್ರಕಾರ ಆ ಜೀವದ್ರವ್ಯದಲ್ಲಿ (ಮೇಲಿನ ಭಾಗದಲ್ಲಿ) ಸಿದ್ಧತನವಿದೆ ಏಕೆಂದರೆ (ಅಲ್ಲಿ) ಜ್ಞಾನಾವರಣ ಮೊದಲಾದ ಕರ್ಮಗಳಿಂದಾದ ಚಿತ್ರವಿಚಿತ್ರತನದ ಅನ್ವಯದ ಅಭಾವವಿದೆ. ಆ ಅಭಾವವು ಆಪ್ತ-ಆಗಮದ ಜ್ಞಾನದಿಂದ, ಸಮ್ಯಕ್ ಅನುಮಾನ ಜ್ಞಾನದಿಂದ ಮತ್ತು ಅತೀಂದ್ರಿಯಜ್ಞಾನದಿಂದ ತಿಳಿದು ಬರುತ್ತದೆ.

ಜ್ಞಾನಾಭಾಸನಿಬಂಧನವಿಚಿತ್ರಚಿತ್ರಕಿರ್ಮೀರತಾನ್ವಯಃ, ತಥಾ ಚ ಕ್ವಚಿಜ್ಜೀವದ್ರವ್ಯೇ ಜ್ಞಾನಾವರಣಾದಿಕರ್ಮ-ಕಿರ್ಮೀರತಾನ್ವಯಃ । ಯಥೈವ ಚ ತತ್ರ ವೇಣುದಂಡೇ ವಿಚಿತ್ರಚಿತ್ರ ಕಿರ್ಮೀರತಾನ್ವಯಾಭಾವಾತ್ಸುವಿಶುದ್ಧತ್ವಂ, ತಥೈವ ಚ ಕ್ವಚಿಜ್ಜೀವದ್ರವ್ಯೇ ಜ್ಞಾನಾವರಣಾದಿಕರ್ಮಕಿರ್ಮೀರತಾನ್ವಯಾಭಾವಾದಾಪ್ತಾಗಮಸಮ್ಯಗನುಮಾನಾ-ತೀಂದ್ರಿಯಜ್ಞಾನಪರಿಚ್ಛಿನ್ನಾತ್ತಿದ್ಧತ್ವಮಿತಿ ।

ಭಾವಾರ್ಥ :- ಅಜ್ಞಾನಿಯಾದ ಜೀವನಿಗೆ ಸಂಸಾರೀ ಜೀವದ ಪ್ರಕಟ ಸಂಸಾರ ಅವಸ್ಥೆಯನ್ನು ನೋಡಿ ಜೀವವು ಯಾವಾಗಲೂ ಸಂಸಾರಿಯಾಗಿಯೇ ಉಳಿಯುತ್ತದೆ, ಸಿದ್ಧವಾಗುವ ಸಾಧ್ಯತೆಯೇ ಇಲ್ಲ ; ಒಂದು ವೇಳೆ ಸಿದ್ಧವಾದರೆ ಸರ್ವಥಾ ಅಸತ್-ಉತ್ಪಾದದ ಪ್ರಸಂಗವು ಉಪಸ್ಥಿತವಾಗುವುದೆ'ಂಬ ಭ್ರಾಂತಿಯು ಉತ್ಪನ್ನವಾಗುತ್ತದೆ. ಆದರೆ ಅಜ್ಞಾನಿಯ ಈ ವಿಚಾರವು ಯೋಗ್ಯವಾಗಿಲ್ಲ.

ಯಾವ ಪ್ರಕಾರ ಜೀವಕ್ಕೆ ದೇವಾದಿರೂಪವಾದ ಒಂದು ಪರ್ಯಾಯದ ಕಾರಣದ ನಾಶವಾದ ಮೇಲೆ ಆ ಪರ್ಯಾಯದ ನಾಶವಾಗಿ ಬೇರೆ ಪರ್ಯಾಯದ ಉತ್ಪತ್ತಿಯಾಗುತ್ತದೆ, ಜೀವದ್ರವ್ಯವಂತೂ ಹೇಗಿದೆ ಹಾಗೆ ಉಳಿಯುತ್ತದೆ ; ಅದೇ ಪ್ರಕಾರ ಜೀವನಿಗೆ ಸಂಸಾರಪರ್ಯಾಯಕ್ಕೆ ಕಾರಣಭೂತಗಳಾದ ಮೋಹರಾಗ ದ್ವೇಷಾದಿಗಳ ನಾಶವಾದ ಮೇಲೆ ಸಂಸಾರಪರ್ಯಾಯದ ನಾಶವಾಗಿ ಸಿದ್ಧಪರ್ಯಾಯವು ಉತ್ಪನ್ನವಾಗುತ್ತದೆ, ಜೀವದ್ರವ್ಯವಂತೂ ಅದೇ ಉಳಿಯುತ್ತದೆ. ಸಂಸಾರಪರ್ಯಾಯ ಮತ್ತು ಸಿದ್ಧಪರ್ಯಾಯ ಇವೆರಡೂ ಒಂದೇ ಜೀವದ್ರವ್ಯದ ಪರ್ಯಾಯಗಳಿವೆ.

ಮತ್ತೆ, ಬೇರೆ ಪ್ರಕಾರದಿಂದ ತಿಳಿಸಿಕೊಡುತ್ತಾರೆ - ಒಂದು ನೀಳವಾದ ಬಿದಿರನ್ನು ಎತ್ತಿ ನಿಲ್ಲಿಸಿದೆಯೆಂದು ಕಲ್ಪನೆ ಮಾಡಿಕೊಳ್ಳಿ ; ಅದರ ಕೆಳಗಿನ ಕೆಲಭಾಗವನ್ನು ಬಣ್ಣ ಬಣ್ಣದ್ದನ್ನಾಗಿ ಮಾಡಲಾಗಿದೆ ಮತ್ತು ಉಳಿದ ಮೇಲಿನ ಭಾಗವು ಬಣ್ಣವಿಲ್ಲದೆ (ಸ್ವಾಭಾವಿಕ ಶುದ್ಧವಾಗಿ) ಇದೆ. ಆ ಬಿದಿರಿನ ಬಣ್ಣಬಣ್ಣದ ಭಾಗ ಹಾಗೂ ಪೂರ್ತಿ ಬಣ್ಣವಿಲ್ಲದ ಭಾಗವನ್ನು ಮುಚ್ಚಿಬಿಡಲಾಗಿದೆ ಆ ಬಿದಿರಿನ ತೆರೆದ ಬಣ್ಣ ಬಣ್ಣದ ಭಾಗಗಳೊಳಗಿಂದ ಸ್ವಲ್ಪ ಭಾಗವನ್ನು ತೆರೆದಿಡಲಾಗಿದೆ ಮತ್ತು ಉಳಿದ ಎಲ್ಲ ಬಣ್ಣಬಣ್ಣದ ಭಾಗವನ್ನು ನೋಡಿ ಅವಿಚಾರಿಯಾದ ಜೀವವು 'ಎಲ್ಲೆಲ್ಲಿ ಬಿದಿರು ಇದೆ ಅಲ್ಲಲ್ಲಿ ಬಣ್ಣಬಣ್ಣದತನವಿರುತ್ತದೆ'ಂಬ ವ್ಯಾಪ್ತಿಯ (ನಿಯಮ, ಅವಿನಾಭಾವ ಸಂಬಂಧದ) ಕಲ್ಪನೆ ಮಾಡಿಕೊಳ್ಳುತ್ತದೆ ಮತ್ತು ಇಂಥ ಮಿಥ್ಯಾವ್ಯಾಪ್ತಿ ಜ್ಞಾನದಿಂದ 'ಬಿದಿರು ಕೆಳಗಿನಿಂದ ಮೇಲಿನವರೆಗೆ ಎಲ್ಲವೂ ಬಣ್ಣಬಣ್ಣದ್ದಿದೆ'ಯೆಂಬ ಅನುಮಾನವನ್ನು ಗ್ರಹಿಸಿಬಿಡುತ್ತದೆ, ಆದರೆ ಈ ಅನುಮಾನವು ಅಸತ್ಯವಿದೆ ; ಏಕೆಂದರೆ ನಿಜವಾಗಿಯಂತೂ ಆ ಬಿದಿರಿನ ಮೇಲಿನ ಭಾಗವು ಬಣ್ಣಬಣ್ಣತನದ ಅಭಾವವುಳ್ಳದ್ದಿದೆ. ಬಣ್ಣರಹಿತವಿದೆ. ಬಿದಿರಿನ ದೃಷ್ಟಾಂತದಂತೆ ಯಾವುದೇ ಒಂದು ಭವ್ಯಜೀವವಿದೆ ; ಅದರ ಕೆಳಗಿನ ಕೆಲಭಾಗವು (ಎಂದರೆ ಅನಾದಿಕಾಲದಿಂದ ವರ್ತಮಾನಕಾಲದವರೆಗಿನ ಮತ್ತು ಇಂಥ ಭವಿಷ್ಯಕಾಲದವರೆಗಿನ ಭಾಗವು) ಸಂಸಾರಿಯಿದ್ದು ಉಳಿದ ಮೇಲಿನ ಅನಂತಭಾಗವು ಸಿದ್ಧರೂಪ (ಸ್ವಾಭಾವಿಕಶುದ್ಧ)ವಿದೆ, ಆ ಜೀವದ ಸಂಸಾರದ ಭಾಗಗಳೊಳಗಿಂದ ಕೆಲವು ಭಾಗವು ಮುಕ್ತ (ಪ್ರಕಟ)ವಿದೆ ಮತ್ತು ಉಳಿದ ಎಲ್ಲಸಂಸಾರದ ಭಾಗ ಹಾಗೂ ಪೂರ್ತಿ ಸಿದ್ಧರೂಪಭಾಗವು ಮುಚ್ಚಿಹೋಗಿದೆ. ಅಪ್ರಕಟವಿದೆ. ಆ ಜೀವದ ತೆರೆದ (ಪ್ರಕಟ) ಭಾಗವು ಸಂಸಾರಿಯಿರುವುದನ್ನು ನೋಡಿ ಅಜ್ಞಾನಿಯಾದ ಜೀವನು 'ಎಲ್ಲೆಲ್ಲಿ ಜೀವವಿರುತ್ತದೆ ಅಲ್ಲೆಲ್ಲ ಸಂಸಾರಿತನವಿರುತ್ತದೆ'ಂಬ ವ್ಯಾಪ್ತಿಯ ಕಲ್ಪನೆ ಮಾಡಿಕೊಳ್ಳುತ್ತಾನೆ ಮತ್ತು ಇಂಥ ಮಿಥ್ಯಾವ್ಯಾಪ್ತಿ ಜ್ಞಾನದಿಂದ 'ಅನಾದಿ-ಅನಂತವಾದ ಎಲ್ಲ ಜೀವಗಳು ಸಂಸಾರಿಯಾಗಿವೆ'ಯೆಂಬ ಅನುಮಾನ

ಏವಂ ಭಾವಮಭಾವಂ ಭಾವಾಭಾವಂ ಅಭಾವಭಾವಂ ಚ ।
ಗುಣಪಜ್ಜಏಹಿಂ ಸಹಿದೋ ಸಂಸರಮಾಣೋ ಕುಣದಿ ಜೀವೋ ॥೨೧॥

ಏವಂ ಭಾವಮಭಾವಂ ಭಾವಾಭಾವಮಭಾವಭಾವಂ ಚ ।
ಗುಣಪರ್ಯಯೈಃ ಸಹಿತಃ ಸಂಸರನ್ ಕರೋತಿ ಜೀವಃ ॥೨೧॥

ಜೀವಸ್ಯೋತ್ಪಾದವ್ಯಯಸದುಚ್ಛೇದಾಸದುತ್ಪಾದಕರ್ತೃತ್ವೋಪಪತ್ತ್ಯುಪಸಂಹಾರೋಽಯಮ್ ।

ದ್ರವ್ಯಂ ಹಿ ಸರ್ವದಾಽವಿನಷ್ಟಾನುತ್ಪನ್ನಮಾಮ್ನಾತಮ್ । ತತೋ ಜೀವದ್ರವ್ಯಸ್ಯ ದ್ರವ್ಯರೂಪೇಣ ನಿತ್ಯತ್ವ-ಮುಪನ್ಯಸ್ತಮ್ । ತಸ್ಯೈವ ದೇವಾದಿಪರ್ಯಾಯರೂಪೇಣ ಪ್ರಾದುರ್ಭವತೋ ಭಾವಕರ್ತೃತ್ವಮುಕ್ತಂ; ತಸ್ಯೈವ ಚ ಮನುಷ್ಯಾದಿಪರ್ಯಾಯರೂಪೇಣ ವ್ಯಯತೋಽಭಾವಕರ್ತೃತ್ವಮಾಖ್ಯಾತಂ; ತಸ್ಯೈವ ಚ ಸತೋ ದೇವಾದಿಪರ್ಯಾಯಸ್ಯೋಚ್ಛೇದಮಾರಭಮಾಣಸ್ಯ ಭಾವಾಭಾವಾಕರ್ತೃತ್ವಮುದಿತಂ; ತಸ್ಯೈವ ಚಾಸತಃ ಪುನರ್ಮನುಷ್ಯಾದಿಪರ್ಯಾಯಸ್ಯೋತ್ಪಾದಮಾರಭಮಾಣಸ್ಯಾಭಾವಭಾವಕರ್ತೃತ್ವಮಭಿಹಿತಮ್ ।

ಮಾಡುತ್ತಾನೆ. ಆದರೆ ಈ ಅನುಮಾನವು ಮಿಥ್ಯೆಯಿದೆ ; ಏಕೆಂದರೆ ಆ ಜೀವದ ಮೇಲಿನ ಭಾಗವು (ಇಂಥ ಭವಿಷ್ಯಕಾಲದ ಅನಂತಭಾಗವು) ಸಂಸಾರಿತನದ ಅಭಾವವುಳ್ಳದ್ದಿದೆ. ಸಿದ್ಧರೂಪವಿದೆಯೆಂದು ಸರ್ವಜ್ಞಪ್ರಣೀತ ಆಗಮದ ಜ್ಞಾನದಿಂದ, ಸಮ್ಯಕ್ ಅನುಮಾನಜ್ಞಾನದಿಂದ ಹಾಗೂ ಅತೀಂದ್ರಿಯ ಜ್ಞಾನದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಈ ರೀತಿಯಾಗಿ ಅನೇಕ ಪ್ರಕಾರದಿಂದ ಜೀವವು ಸಂಸಾರಪರ್ಯಾಯವನ್ನು ನಾಶಮಾಡಿ ಸಿದ್ಧಪರ್ಯಾಯ ರೂಪವಾಗಿ ಪರಿಣಮಿಸುತ್ತದೆ ಅಲ್ಲಿ ಸರ್ವಥಾ ಅಸತ್‌ದ ಉತ್ಪಾದವಾಗುವುದಿಲ್ಲವೆಂಬುದು ನಿಶ್ಚಿತವಾಗುತ್ತದೆ.

ಗಾಥೆ - ೨೧

ಗಾಥಾರ್ಥ :- [ಏವಂ] ಈ ಪ್ರಕಾರ [ಗುಣಪಜ್ಜಏಹಿಂ ಸಹಿದೋ] ಗುಣಪರ್ಯಾಯಗಳ ಸಹಿತವಾಗಿ [ಜೀವೋ] ಜೀವವು [ಸಂಸಾರಮಾಣೋ] ಸಂಸರಣ ಮಾಡುತ್ತಿರುವಾಗ [ಭಾವಂ] ಭಾವ, [ಅಭಾವಂ] ಅಭಾವ, [ಭಾವಾಭಾವಂ] ಭಾವಾಭಾವ [ಚ] ಮತ್ತು [ಅಭಾವಭಾವಂ] ಅಭಾವಭಾವವನ್ನು [ಕುಣದಿ] ಮಾಡುತ್ತದೆ.

ಟೀಕೆ :- ಇದು ಜೀವಕ್ಕೆ ಉತ್ಪಾದ, ವ್ಯಯ, ಸತ್-ವಿನಾಶ ಮತ್ತು ಅಸತ್-ಉತ್ಪಾದದ ಕರ್ತೃತ್ವವಾಗುವ ಸಿದ್ಧರೂಪವಾದ ಉಪಸಂಹಾರವಿದೆ.

ದ್ರವ್ಯವು ವಾಸ್ತವಿಕವಾಗಿ ಯಾವಾಗಲೂ ಅವಿನಿಷ್ಟ ಮತ್ತು ಅನುತ್ಪನ್ನವೆಂದು ಆಗಮದಲ್ಲಿ ಹೇಳಿದೆ ; ಆದುದರಿಂದ ಜೀವದ್ರವ್ಯಕ್ಕೆ ದ್ರವ್ಯರೂಪದಿಂದ ನಿತ್ಯತೆಯನ್ನು ಹೇಳಲಾಗಿದೆ. ೧) ದೇವ ಮೊದಲಾದ

ಜೀವನೀತೆರದಿಂದ ಗುಣಪರ್ಯಾಯಗಳಸಹಿತ ಸಂಸರಣ ಮಾಡುತ್ತ ।
ಭಾವ, ಅಭಾವ, ಭಾವಾಭಾವ ಮತ್ತದರಂತೆ ಅಭಾವಭಾವವನು ಮಾಡುವನು ॥೨೧॥

ಸರ್ವಮಿದಮನವದ್ಯಂ ದ್ರವ್ಯಪರ್ಯಾಯಾಣಾಮನ್ಯತರಗುಣಮುಖ್ಯತ್ವೇನ ವ್ಯಾಖ್ಯಾನಾತ್ । ತಥಾ ಹಿ- ಯದಾ ಜೀವಃ ಪರ್ಯಾಯಗುಣತ್ವೇನ ದ್ರವ್ಯಮುಖ್ಯತ್ವೇನ ವಿವಕ್ಷ್ಯತೇ ತದಾ ನೋತ್ಪದ್ಯತೇ, ನ ವಿನಶ್ಯತಿ, ನ ಚ ಕ್ರಮವೃತ್ತ್ಯಾऽವರ್ತಮಾನತ್ವಾತ್ ಸತ್ಪರ್ಯಾಯಜಾತ-ಮುಚ್ಛಿನತ್ತಿ, ನಾಸದುತ್ಪಾದಯತಿ । ಯದಾ ತು ದ್ರವ್ಯಗುಣತ್ವೇನ ಪರ್ಯಾಯಮುಖ್ಯತ್ವೇನ ವಿವಕ್ಷ್ಯತೇ ತದಾ ಪ್ರಾದುರ್ಭವತಿ, ವಿನಶ್ಯತಿ, ಸತ್ಪರ್ಯಾಯ- ಜಾತಮತಿವಾಹಿತಸ್ವಕಾಲಮುಚ್ಛಿನತ್ತಿ, ಅಸದುಪಸ್ಥಿತಸ್ವಕಾಲಮುತ್ಪಾದಯತಿ ಚೇತಿ । ಸ ಖಿಲ್ವಯಂ ಪ್ರಸಾದೋऽನೇಕಾಂತವಾದಸ್ಯ ಯದೀದೃಶೋऽಪಿ ವಿರೋಧೋ ನ ವಿರೋಧಃ ।

- ಇತಿ ಷಡ್‌ದ್ರವ್ಯಸಾಮಾನ್ಯಪ್ರರೂಪಣಾ ।

ಪರ್ಯಾಯರೂಪದಿಂದ ಉತ್ಪನ್ನವಾಗುತ್ತಿರುವುದರಿಂದ ಅದಕ್ಕೇನೇ (ಜೀವದ್ರವ್ಯಕ್ಕೇನೇ) ಭಾವದ (ಉತ್ಪಾದದ) ಕರ್ತೃತ್ವವನ್ನು ಹೇಳಲಾಗಿದೆ ; ೨) ಮನುಷ್ಯ ಮೊದಲಾದ ಪರ್ಯಾಯರೂಪದಿಂದ ನಾಶಕ್ಕೆ ಪ್ರಾಪ್ತವಾಗುತ್ತಿರುವುದರಿಂದ ಅದಕ್ಕೇನೇ ಅಭಾವದ (ವ್ಯಯದ) ಕರ್ತೃತ್ವವನ್ನು ಹೇಳಲಾಗಿದೆ ; ೩) ಸತ್ (ವಿದ್ಯಮಾನ) ದೇವ ಮೊದಲಾದ ಪರ್ಯಾಯದ ನಾಶಮಾಡುತ್ತಿರುವುದರಿಂದ ಅದಕ್ಕೇನೇ ಭಾವಾಭಾವದ (ಸತ್ ವಿನಾಶದ) ಕರ್ತೃತ್ವವನ್ನು ಹೇಳಲಾಗಿದೆ ಮತ್ತು ೪) ಪುನಃ ಅಸತ್ (ಅವಿದ್ಯಮಾನ) ಮನುಷ್ಯ ಮೊದಲಾದ ಪರ್ಯಾಯದ ಉತ್ಪಾದ ಮಾಡುತ್ತಿರುವುದರಿಂದ ಅದಕ್ಕೇನೇ ಅಭಾವಭಾವದ (ಅಸತ್ ಉತ್ಪಾದದ) ಕರ್ತೃತ್ವವನ್ನು ಹೇಳಲಾಗಿದೆ.

ಇವೆಲ್ಲವು ನಿರವದ್ಯ (ನಿರ್ದೋಷ, ನಿರ್ಬಾಧ, ಅವಿರುದ್ಧ)ವಿವೆ, ಏಕೆಂದರೆ ದ್ರವ್ಯ ಮತ್ತು ಪರ್ಯಾಯಗಳೊಳಗಿಂದ ಒಂದರ ಗೌಣತೆಯಿಂದ ಮತ್ತು ಇನ್ನೊಂದರ ಮುಖ್ಯತೆಯಿಂದ ಕಥನ ಮಾಡಲಾಗುತ್ತದೆ. ಅದು ಈ ಪ್ರಕಾರವಾಗಿದೆ -

ಜೀವವು ಯಾವಾಗ ಪರ್ಯಾಯದ ಗೌಣತೆಯಿಂದ ಮತ್ತು ದ್ರವ್ಯದ ಮುಖ್ಯತೆಯಿಂದ ವಿವಕ್ಷಿತವಾಗುತ್ತದೆ ಆಗ ಅದು ೧) ಉತ್ಪನ್ನವಾಗುವುದಿಲ್ಲ, ೨) ವಿನಷ್ಟವಾಗುವುದಿಲ್ಲ, ೩) ಕ್ರಮವೃತ್ತಿಯಿಂದ ವರ್ತನೆ ಮಾಡುವುದಿಲ್ಲವಾದ್ದರಿಂದ ಸತ್ (ವಿದ್ಯಮಾನ) ಪರ್ಯಾಯಸಮೂಹವನ್ನು ವಿನಷ್ಟಮಾಡುವುದಿಲ್ಲ ಮತ್ತು ೪) ಅಸತ್‌ನ್ನು (-ಅವಿದ್ಯಮಾನ ಪರ್ಯಾಯಸಮೂಹವನ್ನು) ಉತ್ಪನ್ನಮಾಡುವುದಿಲ್ಲ ; ಮತ್ತು ಯಾವಾಗ ಜೀವವು ದ್ರವ್ಯದ ಗೌಣತೆಯಿಂದ ಹಾಗೂ ಪರ್ಯಾಯದ ಮುಖ್ಯತೆಯಿಂದ ವಿವಕ್ಷಿತವಾಗುತ್ತದೆ ಆಗ ಅದು ೧) ಉತ್ಪನ್ನವಾಗುತ್ತದೆ, ೨) ವಿನಷ್ಟವಾಗುತ್ತದೆ, ೩) ಯಾವುದರ ಸ್ವಕಾಲವು ಕಳೆದುಹೋಗಿದೆ ಅಂಥ ಸತ್ - (-ವಿದ್ಯಮಾನ) ಪರ್ಯಾಯಸಮೂಹವನ್ನು ವಿನಷ್ಟ ಮಾಡುತ್ತದೆ ಮತ್ತು ೪) ಯಾವುದರ ಸ್ವಕಾಲವು ಉಪಸ್ಥಿತವಾಗಿದೆ (-ಬಂದು ತಲುಪಿದೆ) ಅಂಥ ಅಸತ್‌ನ್ನು (ಅವಿದ್ಯಮಾನ ಪರ್ಯಾಯಸಮೂಹವನ್ನು) ಉತ್ಪನ್ನ ಮಾಡುತ್ತದೆ.

ಇಂಥ ವಿರೋಧವೂ ಕೂಡ (ನಿಜವಾಗಿ) ವಿರೋಧವಲ್ಲವೆಂಬ ಅನುಗ್ರಹವು ವಾಸ್ತವಿಕವಾಗಿ ಅನೇಕಾಂತವಾದದ್ದಿದೆ.

ಜೀವಾ ಪುಗ್ಗಲಕಾಯಾ ಆಯಾಸಂ ಅತ್ಥಿಕಾಇಯಾ ಸೇಸಾ ।
ಅಮಯಾ ಅತ್ಥಿತ್ತಮಯಾ ಕಾರಣಭೂದಾ ಹಿ ಲೋಗಸ್ಸ ॥೨೨॥

ಜೀವಾಃ ಪುದ್ಗಲಕಾಯಾ ಆಕಾಶಮಸ್ತಿಕಾಯೌ ಶೇಷೌ ।
ಅಮಯಾ ಅಸ್ತಿತ್ವಮಯಾಃ ಕಾರಣಭೂತಾ ಹಿ ಲೋಕಸ್ಯ ॥೨೨॥

ಅತ್ರ ಸಾಮಾನ್ಯೇನೋಕ್ತಲಕ್ಷಣಾನಾಂ ಷಣ್ಣಾಂ ದ್ರವ್ಯಾಣಾಂ ಮಧ್ಯಾತ್ ಪಂಚಾನಾಮಸ್ತಿಕಾಯತ್ವಂ ವ್ಯವಸ್ಥಾಪಿತಮ್ ।

ಅಕೃತತ್ವಾತ್ ಅಸ್ತಿತ್ವಮಯತ್ವಾತ್ ವಿಚಿತ್ರಾತ್ಮಪರಿಣತಿರೂಪಸ್ಯ ಲೋಕಸ್ಯ ಕಾರಣತ್ವಾಚ್ಚಾಭ್ಯುಪಗಮ್ಯ-ಮಾನೇಷು ಷಟ್ಸು ದ್ರವ್ಯೇಷು ಜೀವಪುದ್ಗಲಾಕಾಶಧರ್ಮಾಧರ್ಮಾಃ ಪ್ರದೇಶಪ್ರಚಯಾತ್ಮಕತ್ವಾತ್ ಪಂಚಾಸ್ತಿ-ಕಾಯಾ ಃ । ನ ಖಲು ಕಾಲಸ್ತದಭಾವಾದಸ್ತಿಕಾಯ ಇತಿ ಸಾಮರ್ಥ್ಯಾದವಸೀಯತ ಇತಿ ।

ಈ ಪ್ರಕಾರವಾಗಿ ಷಡ್‌ದ್ರವ್ಯದ ಸಾಮಾನ್ಯ ಪ್ರರೂಪಣೆಯು ಸಮಾಪ್ತವಾಯಿತು.

ಗಾಥಾ - ೨೨

ಗಾಥಾರ್ಥ ಃ- [ಜೀವಾ] ಜೀವ, [ಪುಗ್ಗಲಕಾಯಾ] ಪುದ್ಗಲಕಾಯ, [ಆಯಾಸಂ] ಆಕಾಶ ಮತ್ತು [ಸೇಸಾ ಅತ್ಥಿಕಾಇಯಾ] ಉಳಿದ ಎರಡು ಅಸ್ತಿಕಾಯಗಳು [ಅಮಯಾ] ಅಕೃತವಾಗಿವೆ, [ಅತ್ಥಿತ್ತಮಯಾ] ಅಸ್ತಿತ್ವಮಯವಾಗಿವೆ ಮತ್ತು [ಹಿ] ವಾಸ್ತವಿಕವಾಗಿ [ಲೋಗಸ್ಸ ಕಾರಣಭೂದಾ] ಲೋಕಕ್ಕೆ ಕಾರಣಭೂತವಾಗಿವೆ.

ಟೀಕೆ ಃ- ಇಲ್ಲಿ (ಈ ಗಾಥೆಯಲ್ಲಿ) ಸಾಮಾನ್ಯವಾಗಿ ಯಾವವುಗಳ ಸ್ವರೂಪವನ್ನು (ಮೊದಲು ಹೇಳಲಾಗಿದೆ ಅಂಥ ಆರು ದ್ರವ್ಯಗಳಲ್ಲಿ ಐದಕ್ಕೆ ಅಸ್ತಿಕಾಯತೆಯನ್ನು ಸ್ಥಾಪನೆ ಮಾಡಲಾಗಿದೆ.

ಅಕೃತವಾಗಿರುವುದರಿಂದ, ಅಸ್ತಿತ್ವಮಯವಾಗಿರುವುದರಿಂದ ಮತ್ತು ಅನೇಕ ಪ್ರಕಾರದ ತಮ್ಮ[೧] ಪರಿಣತ ರೂಪದಿಂದ ಲೋಕಕ್ಕೆ ಕಾರಣವಾಗಿರುವುದರಿಂದ ಯಾವುವನ್ನು ಸ್ವೀಕಾರ ಮಾಡಲಾಗಿದೆ, ಮನ್ನಿಸಲಾಗಿದೆ ಅಂಥ ಆರು ದ್ರವ್ಯಗಳಲ್ಲಿ ಜೀವ, ಪುದ್ಗಲ, ಆಕಾಶ, ಧರ್ಮ ಮತ್ತು ಅಧರ್ಮ ಇವು ಐದು ಪ್ರದೇಶ ಪ್ರಚಯಾತ್ಮಕ (ಪ್ರದೇಶಗಳ ಸಮೂಹಮಯ)ವಾಗಿರುವುದರಿಂದ ಅಸ್ತಿಕಾಯಗಳಿವೆ. ಕಾಲದ್ರವ್ಯಕ್ಕೆ ಪ್ರದೇಶ ಪ್ರಚಯಾತ್ಮಕತನದ ಅಭಾವವಿರುವುದರಿಂದ ಅದು ವಾಸ್ತವದಲ್ಲಿ ಅಸ್ತಿಕಾಯವಿಲ್ಲವೆಂದು (ಕಥನ ಮಾಡದೆಯೇ) ಸಾಮರ್ಥ್ಯದಿಂದ ನಿಶ್ಚಿತವಾಗುತ್ತದೆ.

ಜೀವದ್ರವ್ಯ , ಪುದ್ಗಲಕಾಯ, ಆಕಾಶ, ಮತ್ತುಳಿದೆರಡು ಅಸ್ತಿಕಾಯಗಳು ।
ಅವು ಅಕೃತವಿವೆ, ಅಸ್ತಿತ್ವಮಯವಿವೆ ಮೇಣ್ ಲೋಕಕೆ ಕಾರಣಭೂತವಿವೆ ॥೨೨॥

---

೧. ಲೋಕವು ಆರು ದ್ರವ್ಯಗಳ ಅನೇಕವಿಧ ಪರಿಣಾಮರೂಪ (-ಉತ್ಪಾದವ್ಯಯಧ್ರೌವ್ಯರೂಪ)ವಿದೆ ; ಅದಕ್ಕಾಗಿ ಆರು ದ್ರವ್ಯಗಳು ನಿಜವಾಗಿ ಲೋಕಕ್ಕೆ ಕಾರಣವಾಗಿವೆ.

ಸಬ್ಭಾವಸಭಾವಾಣಂ ಜೀವಾಣಂ ತಹ ಯ ಪೋಗ್ಗಲಾಣಂ ಚ ।
ಪರಿಯಟ್ಟಣಸಂಭೂದೋ ಕಾಲೋ ಣಿಯಮೇಣ ಪಣ್ಣತ್ತೋ ॥೨೩॥

ಸದ್ಭಾವಸ್ವಭಾವಾನಾಂ ಜೀವಾನಾಂ ತಥೈವ ಪುದ್ಗಲಾನಾಂ ಚ ।
ಪರಿವರ್ತನಸಂಭೂತಃ ಕಾಲೋ ನಿಯಮೇನ ಪ್ರಜ್ಞಪ್ತಃ ॥೨೩॥

ಅತ್ರಾಸ್ತಿಕಾಯತ್ವೇನಾನುಕ್ತಸ್ಯಾಪಿ ಕಾಲಸ್ಯಾರ್ಥಾಪನ್ನತ್ವಂ ದ್ಯೋತಿತಮ್ ।

ಇಹ ಹೀ ಜೀವಾನಾಂ ಪುದ್ಗಲನಾಂ ಚ ಸತ್ತಾಸ್ವಭಾವತ್ವಾದಸ್ತಿ ಪ್ರತಿಕ್ಷಣಮುತ್ಪಾದವ್ಯಯಧ್ರೌವ್ಯೈ ೈಕ-ವೃತ್ತಿರೂಪಃ ಪರಿಣಾಮಃ । ಸ ಖಲು ಸಹಕಾರಿಕಾರಣಸದ್ಭಾವೇ ದೃಷ್ಟಿಃ , ಗತಿಸ್ಥಿತ್ಯವಗಾಹಪರಿಣಾಮವತ್ । ಯಸ್ತು ಸಹಕಾರಿಕಾರಣಂ ಸ ಕಾಲಃ । ತತ್ಪರಿಣಾಮಾನ್ಯಥಾನುಪಪತ್ತಿಗಮ್ಯಮಾನತ್ವಾದನುಕ್ತೋಽಪಿ ನಿಶ್ಚಯಕಾಲೋಽಸ್ತೀತಿ ನಿಶ್ಚೀಯತೇ । ಯಸ್ತು ನಿಶ್ಚಯಕಾಲಪರ್ಯಾಯರೂಪೋವ್ಯವಹಾರಕಾಲಃ ಸ ಜೀವಪುದ್ಗಲಪರಿಣಾಮೇನಾಭಿವ್ಯಜ್ಯ-ಮಾನತ್ವಾತ್ತದಾಯತ್ತ ಏವಾಭಿಗಮ್ಯತ ಏವೇತಿ ।

ಗಾಥೆ - ೨೩

ಗಾಥಾರ್ಥ ಃ- [ಸಬ್ಭಾವಸಭಾವಾಣಂ] ಸತ್ತಾಸ್ವಭಾವವುಳ್ಳ [ಜೀವಾಣಂ ತಹ ಯ ಪೋಗ್ಗಲಾಣಂ ಚ] ಜೀವಗಳ ಮತ್ತು ಪುದ್ಗಲಗಳ [ಪರಿಯಟ್ಟಣಸಂಭೂದೋ] ಪರಿವರ್ತನದಿಂದ ಸಿದ್ಧವಾಗುವಂಥ [ಕಾಲೋ] ಕಾಲದ [ಣಿಯಮೇಣ ಪಣ್ಣತ್ತೋ] (ಸರ್ವಜ್ಞರ ಮುಖಾಂತರ) ನಿಯಮದಿಂದ (ನಿಶ್ಚಯದಿಂದ) ಉಪದೇಶವನ್ನು ಕೊಡಲಾಗಿದೆ.

ಟೀಕೆ ಃ- ಕಾಲವು ಅಸ್ತಿಕಾಯರೂಪದಿಂದ ಅನುಕ್ತ (-ಕಥನ ಮಾಡಲಾಗಿಲ್ಲ)ವಾದ ಮೇಲೂ ಅದಕ್ಕೆ ಅರ್ಥತನವು (ಪದಾರ್ಥತನವು) ಸಿದ್ಧವಾಗುತ್ತದೆಂದು ಇಲ್ಲಿ ದರ್ಶಿಸಲಾಗಿದೆ.

ಈ ಜಗತ್ತಿನಲ್ಲಿ ವಾಸ್ತವಿಕವಾಗಿ ಜೀವಗಳಿಗೆ ಮತ್ತು ಪುದ್ಗಲಗಳಿಗೆ ಸತ್ತಾಸ್ವಭಾವದ ಕಾರಣವಾಗಿ ಪ್ರತಿ ಕ್ಷಣಕ್ಕೆ ಉತ್ಪಾದವ್ಯಯಧ್ರೌವ್ಯದ ಏಕವೃತ್ತಿರೂಪವಾದ ಪರಿಣಾಮವು ವರ್ತಿಸುತ್ತದೆ. ಅದು (ಪರಿಣಾಮವು) ವಾಸ್ತವದಲ್ಲಿ ಗತಿ-ಸ್ಥಿತಿ-ಅವಗಾಹ ಪರಿಣಾಮದಂತೆ ಸಹಕಾರ ಕಾರಣದ ಸದ್ಭಾವದಲ್ಲಿ ಕಂಡು ಬರುತ್ತದೆ. (ಯಾವ ಪ್ರಕಾರ ಗತಿ, ಸ್ಥಿತಿ ಮತ್ತು ಅವಗಾಹರೂಪವಾದ ಪರಿಣಾಮಗಳು ಧರ್ಮ, ಅಧರ್ಮ ಮತ್ತು ಆಕಾಶರೂಪ ಸಹಕಾರ ಕಾರಣಗಳ ಸದ್ಭಾವದಲ್ಲಿ ಇರುತ್ತವೆ, ಅದೇ ಪ್ರಕಾರ ಉತ್ಪಾದವ್ಯಯಧ್ರೌವ್ಯದ ಏಕತೆಯ ರೂಪವಾದ ಪರಿಣಾಮಗಳು ಸಹಕಾರ ಕಾರಣದ ಸದ್ಭಾವದಲ್ಲಿ ಇರುತ್ತವೆ.) ಈ ಯಾವ ಸಹಕಾರ ಕಾರಣವಿದೆ. ಅದು ಕಾಲದ್ರವ್ಯವಿದೆ.

ಸದ್ಭಾವ ಸ್ವಭಾವವುಳ್ಳ ಜೀವಗಳ ಮೇಣ್ ಪುದ್ಗಲಗಳ ಪರಿವರ್ತನದಿಂದ ।
ಉದ್ಭವಿಸುವಂಥ ಕಾಲದ ನಿಯಮದಿಂದ ಉಪದೇಶವನು ಕೊಡಲಾಗಿದೆ ॥೨೩॥

ವವಗದಪಣವಣ್ಣರಸೋ ವವಗದದೋಗಂಧಅಟ್ಠಫಾಸೋ ಯ ।
ಅಗುರುಲಹುಗೋ ಅಮುತ್ತೋ ವಟ್ಟಣಲಕ್ಖೋ ಯ ಕಾಲೋ ತ್ತಿ ॥೨೪॥

ವ್ಯಪಗತಪಂಚವರ್ಣರಸೋ ವ್ಯಪಗತದ್ವಿಗಂಧಾಷ್ಟಸ್ಪರ್ಶಶ್ಚ।
ಅಗುರುಲಘುಕೋ ಅಮೂರ್ತೋ ವರ್ತನಲಕ್ಷಣಶ್ಚ ಕಾಲ ಇತಿ ॥೨೪॥

ಜೀವಪುದ್ಗಲದ[೧] ಪರಿಣಾಮದ ಅನ್ಯಥಾ ಅನುಪಪತ್ತಿ[೨]ಯಿಂದ ತಿಳಿದು ಬರುತ್ತಿರುವುದರಿಂದ ನಿಶ್ಚಯಕಾಲವು - (ಅಸ್ತಿಕಾಯರೂಪದಿಂದ) ಅನುಕ್ತವಾದರೂ ಕೂಡ - (ದ್ರವ್ಯರೂಪದಿಂದ) ವಿದ್ಯಮಾನವಿದೆಯೆಂದು ನಿಶ್ಚಿತವಾಗುತ್ತದೆ ಮತ್ತು ಯಾವ ನಿಶ್ಚಯಕಾಲದ ಪರ್ಯಾಯರೂಪವಾದ ವ್ಯವಹಾರಕಾಲವಿದೆ ಅದು ಜೀವ-ಪುದ್ಗಲಗಳ ಪರಿಣಾಮದಿಂದ ವ್ಯಕ್ತ(ಗಮ್ಯ)ವಾಗುತ್ತಿರುವುದರಿಂದ ಅವಶ್ಯವಾಗಿ ತದಾಶ್ರಿತವೆಂದೇ (ಜೀವ ಹಾಗೂ ಪುದ್ಗಲ ಪರಿಣಾಮದ ಆಶ್ರಿತವೆಂದೇ) ಗಣಿಸಲಾಗುತ್ತದೆ.

ಗಾಥೆ - ೨೪

ಗಾಥಾರ್ಥ :- [ಕಾಲೋ ತ್ತಿ] ಕಾಲವು (ನಿಶ್ಚಯಕಾಲವು) [ವವಗದಪಣವಣ್ಣರಸೋ] ಐದು ವರ್ಣ ಮತ್ತು ಐದು ರಸಗಳಿಲ್ಲದ, [ವವಗದದೋಗಂಧಅಟ್ಠಫಾಸೋ ಯ] ಎರಡು ಗಂಧ ಮತ್ತು ಎಂಟು ಸ್ಪರ್ಶಗಳಿಲ್ಲದ, [ಅಗುರುಲಹುಗೋ) ಅಗುರುಲಘು, [ಅಮುತ್ತೋ] ಅಮೂರ್ತ [ಯ] ಮತ್ತು [ವಟ್ಟಣಲಕ್ಖೋ] ವರ್ತನಲಕ್ಷಣವುಳ್ಳದ್ದಿದೆ.

ಭಾವಾರ್ಥ[೩] :- ಇಲ್ಲಿ ನಿಶ್ಚಯಕಾಲದ ಸ್ವರೂಪವನ್ನು ಹೇಳಿದೆ.

ಐದುರಸವೈದುವರ್ಣವೆರಡುಗಂಧ ಮೇಣೆಂಟು ಸ್ಪರ್ಶಗಳಿಲ್ಲದಾ ಕಾಲ ।
ಇದೆ, ಅಮೂರ್ತ ಅಗುರುಲಘುಮೇಣ್ ವರ್ತನಾಲಕ್ಷಣಸ್ವರೂಪದಿಂದ ॥೨೪॥

---

೧. ಕಾಲದ್ರವ್ಯವಂತೂ ಜೀವ-ಪುದ್ಗಲಗಳ ಪರಿಣಾಮವಲ್ಲದೆ ಧರ್ಮಾಸ್ತಿಕಾಯ ಮೊದಲಾದವುಗಳ ಪರಿಣಾಮಕ್ಕೂ ನಿಮಿತ್ತಭೂತವಾಗಿದ್ದರೂ ಜೀವ-ಪುದ್ಗಲಗಳ ಪರಿಣಾಮಗಳು ಸ್ಪಷ್ಟವಾಗಿ ಲಕ್ಷ್ಯದಲ್ಲಿ ಬರುತ್ತಿರುವುದರಿಂದ ಕಾಲದ್ರವ್ಯವನ್ನು ಸಿದ್ಧ ಮಾಡುವಲ್ಲಿ ಮಾತ್ರ ಅವೆರಡರ ಪರಿಣಾಮದ್ದೇ ವಿಚಾರವನ್ನು ಸ್ವೀಕರಿಸಲಾಗಿದೆ.

೨. ಅನ್ಯಥಾ ಅನುಪಪತ್ತಿ = ಬೇರೆ ಯಾವುದೇ ಪ್ರಕಾರದಿಂದ ಆಗದಿರುವುದು - (ಜೀವ-ಪುದ್ಗಲಗಳ ಉತ್ಪಾದವ್ಯಯ ಧ್ರೌವ್ಯಾತ್ಮಕ ಪರಿಣಾಮ ಎಂದರೆ ಅವುಗಳ ಸಮಯವಿಶಿಷ್ಟವೃತ್ತಿ - ಆ ಸಮಯವಿಶಿಷ್ಟವೃತ್ತಿಯು ಸಮಯವನ್ನು ಉತ್ಪನ್ನ ಮಾಡುವಂಥ ಯಾವುದೇ ಪದಾರ್ಥವಿಲ್ಲದೆ (-ನಿಶ್ಚಯಕಾಲವಿಲ್ಲದೆ) ಆಗುವುದಿಲ್ಲ. ಯಾವ ಪ್ರಕಾರ ಆಕಾಶವಿಲ್ಲದೆ ದ್ರವ್ಯವು ಅವಗಾಹನವನ್ನು ಪ್ರಾಪ್ತಮಾಡುವ ಸಾಧ್ಯತೆಯಿಲ್ಲ ಎಂದರೆ ಅವುಗಳ ವಿಸ್ತಾರ (ತಿರ್ಯಕ್‌ತನ) ಆಗುವುದಿಲ್ಲ ಅದೇ ಪ್ರಕಾರ ನಿಶ್ಚಯಕಾಲವಿಲ್ಲದೆ ದ್ರವ್ಯವು ಪರಿಣಾಮಕ್ಕೆ ಪ್ರಾಪ್ತವಾಗುವುದಿಲ್ಲ ಎಂದರೆ ಅವುಗಳ ಪ್ರವಾಹ (ಊರ್ಧ್ವ)ವಾಗುವುದಿಲ್ಲ. ಹೀಗೆ ನಿಶ್ಚಯಕಾಲದ ಅಸ್ತಿತ್ವವಿಲ್ಲದೆ (ಎಂದರೆ ನಿಮಿತ್ತಭೂತವಾದ ಕಾಲದ್ರವ್ಯದ ಸದ್ಭಾವವಿಲ್ಲದೆ) ಬೇರೆ ಯಾವುದೇ ಪ್ರಕಾರದಿಂದ ಜೀವ-ಪುದ್ಗಲದ ಪರಿಣಾಮವು ಸಿದ್ಧವಾಗುವುದಿಲ್ಲವಾದ್ದರಿಂದ 'ನಿಶ್ಚಯಕಾಲವು ವಿದ್ಯಮಾನವಿದೆ'ಯೆಂದು ತಿಳಿದು ಬರುತ್ತದೆ - ನಿಶ್ಚಿತವಾಗುತ್ತದೆ.)

೩. ಶ್ರೀ ಅಮೃತಚಂದ್ರಾಚಾರ್ಯದೇವರು ಈ ೨೪ ನೆಯ ಗಾಥೆಯ ಟೀಕೆ ಬರೆದಿಲ್ಲವಾದ್ದರಿಂದ ಅನುವಾದದಲ್ಲಿ ಗಾಥಾರ್ಥದ ನಂತರ ಕೂಡಲೇ ಭಾವಾರ್ಥವನ್ನು ಬರೆಯಲಾಗಿದೆ.

ಸಮಓ ಣಿಮಿಸೋ ಕಟ್ಠಾ ಕಲಾ ಯ ಣಾಲೀ ತದೋ ದಿವಾರತ್ತೀ ।
ಮಾಸೋದುಅಯಣಸಂವಚ್ಛರೋ ತ್ತಿ ಕಾಲೋ ಪರಾಯತ್ತೋ ॥೨೫॥

ಸಮಯೋ ನಿಮಿಷಃ ಕಾಷ್ಠಾ ಕಲಾ ಚ ನಾಲೀ ತತೋ ದಿವಾರಾತ್ರಃ ।
ಮಾಸರ್ತ್ವಯನಸಂವತ್ಸರಮಿತಿ ಕಾಲಃ ಪರಾಯತ್ತಃ ॥೨೫॥

ಅತ್ರ ವ್ಯವಹಾರಕಾಲಸ್ಯ ಕಥಂಚಿತ್ಪರಾಯತ್ತತ್ವಂ ದ್ಯೋತಿತಮ್ ।

ಲೋಕಾಕಾಶದ ಪ್ರತಿಯೊಂದು ಪ್ರದೇಶದಲ್ಲಿ ಒಂದೊಂದು ಕಾಲಾಣುವು (ಕಾಲದ್ರವ್ಯವು) ಸ್ಥಿರವಿದೆ. ಆ ಕಾಲಾಣುವು (ಕಾಲದ್ರವ್ಯವು) ಅದು ನಿಶ್ಚಯಕಾಲವಿದೆ. ಅಲೋಕಾಕಾಶದಲ್ಲಿ ಕಾಲಾಣುವು (ಕಾಲದ್ರವ್ಯವು)ಇಲ್ಲ.

ಆ ಕಾಲವು (ನಿಶ್ಚಯಕಾಲವು) ವರ್ಣ-ಗಂಧ-ರಸ-ಸ್ಪರ್ಶರಹಿತವಿದೆ, ವರ್ಣಾದಿಗಳಿಂದ ರಹಿತವಾಗಿರುವುದರಿಂದ ಅಮೂರ್ತವಿದೆ ಮತ್ತು ಅಮೂರ್ತವಿರುವುದರಿಂದ ಸೂಕ್ಷ್ಮವಿದ್ದು ಅತೀಂದ್ರಿಯ ಜ್ಞಾನಗ್ರಾಹ್ಯವಿದೆ. ಮತ್ತು ಅದು ಷಟ್‌ಗುಣಹಾನಿವೃದ್ಧಿಸಹಿತವಿದ್ದು ಅಗುರುಲಘುತ್ವಸ್ವಭಾವವುಳ್ಳದ್ದಿದೆ. ಕಾಲದ ಲಕ್ಷಣವು ವರ್ತನಾಹೇತುತ್ವವಿದೆ ; ಎಂದರೆ ಯಾವ ಪ್ರಕಾರ ಶೀತಋತುವಿನಲ್ಲಿ ತಾನು ಅಧ್ಯಯನ ಮಾಡುತ್ತಿರುವ ಪುರುಷನಿಗೆ ಬೆಂಕಿಯು ಸಹಕಾರ (-ಬಹಿರಂಗನಿಮಿತ್ತ)ವಾಗಿದೆ ಮತ್ತು ಯಾವ ಪ್ರಕಾರ ತಾನು ತಿರುಗುವ ಕ್ರಿಯೆ ಮಾಡುತ್ತಿರುವ ಕುಂಭಕಾರನ ಗಾಲಿಗೆ ಕೆಳಗಿನ ಅಚ್ಚು ಸಹಕಾರಿಯಿದೆ ಅದೇ ಪ್ರಕಾರ ನಿಶ್ಚಯದಿಂದ ತಾನಾಗಿಯೇ ಪರಿಣಾಮಕ್ಕೆ ಪ್ರಾಪ್ತವಾಗುವ ಜೀವ-ಪುದ್ಗಲಾದಿ ದ್ರವ್ಯಗಳಿಗೆ (ವ್ಯವಹಾರದಿಂದ) ಕಾಲಾಣುರೂಪವಾದ ನಿಶ್ಚಯಕಾಲವು ಬಹಿರಂಗನಿಮಿತ್ತವಾಗಿದೆ.

ಪ್ರಶ್ನೆ :- ಅಲೋಕದಲ್ಲಿ ಕಾಲದ್ರವ್ಯವಿಲ್ಲದಿದ್ದರೆ ಅಲ್ಲಿ ಆಕಾಶದ ಪರಿಣತಿಯು ಯಾವ ಪ್ರಕಾರವಾಗುತ್ತದೆ?

ಉತ್ತರ :- ಯಾವ ಪ್ರಕಾರ ತೂಗುತ್ತಿರುವ ನೀಳವಾದ ಹಗ್ಗಕ್ಕೆ , ಉದ್ದವಾದ ಬಿದಿರಿಗೆ ಅಥವಾ ಕುಂಭಕಾರನ ಗಾಲಿಗೆ ಒಂದು ಸ್ಥಾನದ ಮೇಲೆ ಸ್ಪರ್ಶ ಮಾಡಿದಮೇಲೂ ಎಲ್ಲೆಡೆಗೆ ಕಂಪನವಾಗುತ್ತದೆ, ಯಾವ ಪ್ರಕಾರ ಸುಂದರವಾದ ಸ್ಪರ್ಶನೇಂದ್ರಿಯವಿಷಯದ ಅಥವಾ ರಸನೇಂದ್ರಿಯವಿಷಯದ ಸ್ಪರ್ಶವು ಶರೀರದ ಒಂದೇ ಭಾಗದಲ್ಲಾದರೂ ಕೂಡ ಸಂಪೂರ್ಣ ಆತ್ಮನಲ್ಲಿ ಸುಖಾನುಭವವಾಗುತ್ತದೆ ಮತ್ತು ಯಾವ ಪ್ರಕಾರ ಸರ್ಪದಂಶ ಅಥವಾ ಗಾಯ ಮೊದಲಾದುವು ಶರೀರದ ಒಂದೇ ಭಾಗದಲ್ಲಾದರೂ ಕೂಡ ಸಂಪೂರ್ಣ ಆತ್ಮನಲ್ಲಿ ದುಃಖವೇದನೆಯಾಗುತ್ತದೆ, ಅದೇ ಪ್ರಕಾರ ಕಾಲದ್ರವ್ಯವು ಲೋಕಾಕಾಶದಲ್ಲೇ ಇದ್ದರೂ ಕೂಡ ಸಂಪೂರ್ಣ ಆಕಾಶದಲ್ಲಿ ಪರಿಣತವಾಗುತ್ತದೆ ಏಕೆಂದರೆ ಆಕಾಶವು ಒಂದು ಅಖಂಡವಾದ ದ್ರವ್ಯವಿದೆ.

ಕಾಲವು ಯಾವುದೇ ದ್ರವ್ಯವನ್ನು ಪರಿಣಮಿತ ಮಾಡುವುದಿಲ್ಲ ; ಸಂಪೂರ್ಣ ಸ್ವತಂತ್ರತೆಯಿಂದ ಪರಿಣಮಿತವಾಗುವಂಥ ದ್ರವ್ಯಗಳಿಗೆ ಅದು ಬಾಹ್ಯನಿಮಿತ್ತಮಾತ್ರವಿದೆಯೆಂಬ ಮಾತನ್ನಿಲ್ಲಿ ಮುಖ್ಯವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಯಾವ ಸಮಯ, ನಿಮಿಷ, ಕಾಷ್ಠ, ಕಲಾ, ಘಡಿ, ಅಹೋರಾತ್ರ , ಮಾಸವದರಂತೆ ।
ಭಾವಿಸೆ ಋತು, ಅಯನ, ವರ್ಷಾದಿಯಂಥ ಕಾಲವಿದೆಯದು ಪರಾಶ್ರಿತವಿದೆ ॥೨೫॥

ಪರಮಾಣುಪ್ರಚಲನಾಯತ್ತಃ ಸಮಯಃ । ನಯನಪುಟಘಟನಾಯತ್ತೋ ನಿಮಿಷಃ । ತತ್ಸಂಖ್ಯಾವಿಶೇಷತಃ ಕಾಷ್ಠಾ ಕಲಾ ನಾಲೀ ಚ । ಗಗನಮಣಿಗಮನಾಯತ್ತೋ ದಿವಾರಾತ್ರಃ ತತ್ಸಂಖ್ಯಾವಿಶೇಷತಃ ಮಾಸಃ, ಋತುಃ, ಅಯನಂ, ಸಂವತ್ಸರಃ ಇತಿ । ಏವಂವಿಧೋ ಹಿ ವ್ಯವಹಾರಕಾಲಃ ಕೇವಲಕಾಲಪರ್ಯಾಯಮಾತ್ರತ್ವೇನಾವ-ಧಾರಯಿತುಮಶಕ್ಯತ್ವಾತ್ ಪರಾಯತ್ತ ಇತ್ತುಪಮೀಯತ ಇತಿ ।

ಈ ಪ್ರಕಾರ ನಿಶ್ಚಯಕಾಲದ ಸ್ವರೂಪವನ್ನು ದರ್ಶಿಸಲಾಗಿದೆ.

ಗಾಥಾ-೨೫

ಗಾಥಾರ್ಥ :- [ಸಮಓ] ಸಮಯ, [ಣಿಮಿಸೋ] ನಿಮಿಷ, [ಕಟ್ಠಾ] ಕಾಷ್ಠ, [ಕಲಾ ಯ] ಕಲಾ, [ಣಾಲೀ] ಗಳಿಗೆ, [ತದೋ ದಿವಾರತ್ತೀ] ಹಗಲು-ರಾತ್ರಿ(-ದಿವಸ), [ಮಾಸೋದು ಅಯಣಸಂವಚ್ಛರೋ] ತಿಂಗಳು, ಋತು, ಅಯನ ಮತ್ತು ವರ್ಷ -[ತ್ತಿ ಕಾಲೋ] ಎಂಬ ಯಾವ ಕಾಲವಿದೆ (ಎಂದರೆ ವ್ಯವಹಾರ ಕಾಲವಿದೆ) [ಪರಾಯತ್ತೋ] ಅದು ಪರಾಶ್ರಿತವಿದೆ.

ಟೀಕೆ :- ಇಲ್ಲಿ ವ್ಯವಹಾರಕಾಲದ ಕಥಂಚಿತ್ ಪರಾಶ್ರಿತತನವನ್ನು ದರ್ಶಿಸಲಾಗಿದೆ.

ಪರಮಾಣುವಿನ ಗಮನದ ಆಶ್ರಿತವಾಗಿ ಸಮಯವಿದೆ ; ಕಣ್ಣು ಮುಚ್ಚುವುದರ ಆಶ್ರಿತವಾಗಿ ನಿಮಿಷವಿದೆ; ಅದರ (-ನಿಮಿಷದ) ಇಂಥ ಸಂಖ್ಯೆಯಿಂದ ಕಾಷ್ಠ, ಕಲಾ ಮತ್ತು ಗಳಿಗೆಯಾಗುತ್ತದೆ; ಸೂರ್ಯನ ಗಮನದ ಆಶ್ರಿತವಾಗಿ ಹಗಲು-ರಾತ್ರಿಗಳಾಗುತ್ತವೆ ; ಮತ್ತು ಅದರ (-ಹಗಲು-ರಾತ್ರಿಯ) ಇಂಥ ಸಂಖ್ಯೆಯಿಂದ ತಿಂಗಳು, ಋತು, ಅಯನ ಮತ್ತು ವರ್ಷಗಳಾಗುತ್ತವೆ. - ಹೀಗೆ ವ್ಯವಹಾರಕಾಲವು ಕೇವಲಕಾಲದ ಪರ್ಯಾಯಮಾತ್ರ ರೂಪದಿಂದ ಅವಧಾರಣ ಮಾಡುವುದು ಅಶಕ್ಯವಿರುವುದರಿಂದ (ಎಂದರೆ ಪರದ ಅಪೇಕ್ಷೆಯಿಲ್ಲದೆ - ಪರಮಾಣು, ಕಣ್ಣು, ಸೂರ್ಯ ಮೊದಲಾದ ಪರಪದಾರ್ಥಗಳ ಅಪೇಕ್ಷೆಯಿಲ್ಲದೆ - ವ್ಯವಹಾರಕಾಲದ ಅಳತೆಯನ್ನು ನಿಶ್ಚಿತಪಡಿಸುವುದು ಅಶಕ್ಯವಿರುವುದರಿಂದ (ಅದಕ್ಕೆ 'ಪರಾಶ್ರಿತ'ವೆಂಬ ಉಪಮೆಯನ್ನು ಕೊಡಲಾಗುತ್ತದೆ.

ಭಾವಾರ್ಥ :- 'ಸಮಯ'ವು ನಿಮಿತ್ತಭೂತವಾದಂಥ ಮಂದಗತಿಯಿಂದ ಪರಿಣತವಾದಪುದ್ಗಲ ಪರಮಾಣುವಿನಿಂದ ಪ್ರಕಟವಾಗುತ್ತದೆ ಅಳತೆ ಮಾಡಲಾಗುತ್ತದೆ (ಎಂದರೆ ಪರಮಾಣುವಿಗೆ ಒಂದು ಆಕಾಶ ಪ್ರದೇಶದಿಂದ ಬೇರೆ ಅನಂತರ ಒಂದು ಆಕಾಶಪ್ರದೇಶಕ್ಕೆ ಮಂದಗತಿಯಿಂದ ಹೋಗುವಲ್ಲಿ ಎಷ್ಟು ಕಾಲ ಬೇಕಾಗುತ್ತದೆ ಅದಕ್ಕೆ ಸಮಯವೆಂದು ಹೇಳಲಾಗುತ್ತದೆ). 'ನಿಮಿಷ'ವು ಕಣ್ಣು ಮುಚ್ಚುವಿಕೆಯಿಂದ ಪ್ರಕಟವಾಗುತ್ತದೆ (ಎಂದರೆ ತೆರೆದ ಕಣ್ಣು ಮುಚ್ಚುವಲ್ಲಿ, ಎಷ್ಟು ಸಮಯ ಬೇಕಾಗುತ್ತದೆ ಅದಕ್ಕೆ ನಿಮಿಷವೆಂದು ಹೇಳಲಾಗುತ್ತದೆ ಮತ್ತು ಆ ನಿಮಿಷವು ಅಸಂಖ್ಯಾತ ಸಮಯದ್ದಿರುತ್ತದೆ) ಹದಿನೈದು ನಿಮಿಷದ್ದು ಒಂದು 'ಕಾಷ್ಠ' ಮೂವತ್ತು ಕಾಷ್ಠಾದ್ದು ಒಂದು 'ಕಲಾ' ಇಪ್ಪತ್ತಕ್ಕಿಂತ ಸ್ವಲ್ಪ ಹೆಚ್ಚು ಕಲಾದ್ದು ಒಂದು 'ಗಳಿಗೆ' ಮತ್ತು ಎರಡು ಗಳಿಗೆಯದು ಒಂದು 'ಮುಹೂರ್ತ'ವಾಗುತ್ತದೆ. 'ಹಗಲು-ರಾತ್ರಿ'ಗಳು ಸೂರ್ಯನ ಗಮನದಿಂದ ಪ್ರಕಟವಾಗುತ್ತದೆ (ಮತ್ತು ಆ ಒಂದು ಅಹೋರಾತ್ರವು ಮೂವತ್ತು ಮುಹೂರ್ತದ್ದಿರುತ್ತದೆ). ಮೂವತ್ತು ಅಹೋರಾತ್ರದ್ದು ಒಂದು 'ತಿಂಗಳು', ಎರಡು ತಿಂಗಳದ್ದು ಒಂದು 'ಋತು', ಮೂರು ಋತುವಿನದು ಒಂದು 'ಅಯನ' ಮತ್ತು ಎರಡು ಅಯನದ್ದು ಒಂದು 'ವರ್ಷ'ವಾಗುತ್ತದೆ. ಇದೆಲ್ಲವೂ ವ್ಯವಹಾರಕಾಲವಿದೆ. 'ಪಲ್ಯೋಪಮ', 'ಸಾಗರೋಪಮ' ಮೊದಲಾದವೂ ವ್ಯವಹಾರಕಾಲದ ಭೇದಗಳಿವೆ.

ಣತ್ತಿ ಚಿರಂ ವಾ ಖಿಪ್ಪ ಮತ್ತಾರಹಿದಂ ತು ಸಾ ವಿ ಖಲು ಮತ್ತಾ ।
ಪೋಗ್ಗಲದವ್ವೇಣ ವಿಣಾ ತಮ್ಹಾ ಕಾಲೋ ಪಡುಚ್ಚಭವೋ ॥೨೬॥

ನಾಸ್ತಿ ಚಿರಂ ವಾ ಕ್ಷಿಪ್ರಂ ಮಾತ್ರಾರಹಿತಂ ತು ಸಾಪಿ ಖಲು ಮಾತ್ರಾ ।
ಪುದ್ಗಲದ್ರವ್ಯೇಣ ವಿನಾ ತಸ್ಮಾತ್ಕಾಲಃ ಪ್ರತೀತ್ಯಭವಃ ॥೨೬॥

ಇಹ ಹಿ ವ್ಯವಹಾರಕಾಲೇ ನಿಮಿಷಸಮಯಾದೌ ಅಸ್ತಿ ತಾವತ್ ಚಿರಂ ಇತಿ ಕ್ಷಿಪ್ರಂ ಇತಿ ಸಂಪ್ರತ್ಯಯಃ । ಸ ಖಲು ದೀರ್ಘಹ್ರಸ್ವಕಾಲನಿಬಂಧನಂ ಪ್ರಮಾಣಮಂತರೇಣ ನ ಸಂಭಾವ್ಯತೇ । ತದಪಿ ಪ್ರಮಾಣಂ ಪುದ್ಗಲದ್ರವ್ಯಪರಿಣಾಮಮಂತರೇಣ ನಾವಧಾರ್ಯತೇ । ತತಃ ಪರಪರಿಣಾಮುದ್ಯೋತಮಾನತ್ವಾದ್ ವ್ಯವಹಾರಕಾಲೋ ನಿಶ್ಚಯೇನಾನನ್ಯಾಶ್ರಿತೋಽಪಿ ಪ್ರತೀತ್ಯಭವ ಇತ್ಯಭಿಧೀಯತೇ । ತದತ್ರಾಸ್ತಿಕಾಯಸಾಮಾನ್ಯ-ಪ್ರರೂಪಣಾಯಾಮಸ್ತಿಕಾಯತ್ವಾಭಾವಾತ್ತಾತ್ಪ್ರಾದನುಪನ್ಯಸ್ಯಮಾನೋಽಪಿ ಜೀವಪುದ್ಗಲಪರಿಣಾಮಾನ್ಯಥಾನು-ಪಪತ್ತ್ಯಾ ನಿಶ್ಚಯರೂಪಸ್ತತ್ಪರಿಣಾಮಾಯತ್ತತಯಾ ವ್ಯವಹಾರರೂಪಃ ಕಾಲೋಽಸ್ತಿಕಾಯಪಂಚಕವಲ್ಲೋಕರೂಪೇಣ ಪರಿಣತ ಇತಿ ಖರತರದೃಷ್ಟ್ಯಾ ಭ್ಯುಪಗಮ್ಯತ ಇತಿ ।

ಮೇಲೆ ಹೇಳಿದ ಸಮಯ - ನಿಮಿಷ ಮೊದಲಾದುವೆಲ್ಲವು ವಾಸ್ತವಿಕವಾಗಿ ಕೇವಲ ನಿಶ್ಚಯಕಾಲದ್ದೇ (ಕಾಲದ್ರವ್ಯದ್ದೇ) ಪರ್ಯಾಯಗಳಿವೆ. ಆದರೆ ಅವು ಪರಮಾಣು ಮೊದಲಾದವುಗಳಿಂದ ಪ್ರಕಟವಾಗುತ್ತಿರುವುದರಿಂದ (ಎಂದರೆ ಪರಪದಾರ್ಥಗಳ ಮುಖಾಂತರ ಅಳೆಯಲಾಗುತ್ತಿರುವುದರಿಂದ) ಅವಕ್ಕೆ ಉಪಚಾರದಿಂದ ಪರಾಶ್ರಿತವೆಂದು ಹೇಳಲಾಗುತ್ತದೆ.

ಗಾಥೆ - ೨೬

ಗಾಥಾರ್ಥ :- [ಚಿರ ವಾ ಖಿಪ್ಪ] 'ಚಿರ' ಅಥವಾ 'ಕ್ಷಿಪ್ರ'ದಂಥ ಜ್ಞಾನವು (ಹೆಚ್ಚು ಕಾಲ ಅಥವಾ ಕಡಿಮೆ ಕಾಲದಂಥ ಜ್ಞಾನವು) [ಮತ್ತಾರಹಿದಂ ತು] ಪರಿಮಾಣವಿಲ್ಲದೆ (-ಕಾಲದ ಅಳತೆಯಿಲ್ಲದೆ) [ಣತ್ಥಿ] ಆಗುವುದಿಲ್ಲ; [ಸಾ ಮತ್ತಾ ವಿ] ಮತ್ತು ಆ ಪರಿಮಾಣವು [ಖಲು] ವಾಸ್ತವಿಕವಾಗಿ [ಪೋಗ್ಗಲದವ್ವೇಣ ವಿಣಾ] ಪುದ್ಗಲದ್ರವ್ಯವಿಲ್ಲದೆ ಆಗುವುದಿಲ್ಲ ; [ತಮ್ಹಾ] ಆದುದರಿಂದ [ಕಾಲೋ ಪಡುಚ್ಚಭವೋ] ಕಾಲದ ಆಶ್ರಯರೂಪದಿಂದ ಉತ್ಪನ್ನವಾಗುವಂಥದ್ದಿದೆ - (ಎಂದರೆ ವ್ಯವಹಾರಕಾಲವು ಪರದ ಆಶ್ರಯಮಾಡಿ ಉತ್ಪನ್ನವಾಗುತ್ತದೆಂದು ಉಪಚಾರದಿಂದ ಹೇಳಲಾಗುತ್ತದೆ.)

ಟೀಕೆ :- ಇಲ್ಲಿ ವ್ಯವಹಾರಕಾಲದ ಕಥಂಚಿತ್ ಪರಾಶ್ರಿತತನದ ವಿಷಯದಲ್ಲಿ ಸತ್ಯವಾದ ಯುಕ್ತಿಯನ್ನು ಹೇಳಲಾಗಿದೆ.

'ಚಿರ'ವಿಲ್ಲವೆ 'ಕ್ಷಿಪ್ರ'ದಂಥ ಜ್ಞಾನವು ಪರಿಮಾಣವಿಲ್ಲದೆಯಾಗದು ಮತ್ತೆ ।
ಪರಿಮಾಣಪುದ್ಗಲವಿಲ್ಲದಾಗದದರಿಂ ಕಾಲ ಆಶ್ರಯದಿಂದ ಪುಟ್ಟುವುದು ॥೨೬॥

-ಇತಿ ಸಮಯವ್ಯಾಖ್ಯಾಯಾಮಂತರ್ನೀತಷಡ್‌ದ್ರವ್ಯಪಂಚಾಸ್ತಿಕಾಯಸಾಮಾನ್ಯವ್ಯಾಖ್ಯಾನರೂಪಃ ಪೀಠಬಂಧಃ ಸಮಾಪ್ತಃ ।

ಮೊದಲಂತೂ ನಿಮಿಷ - ಸಮಯ ಮೊದಲಾದ ವ್ಯವಹಾರಕಾಲದಲ್ಲಿ 'ಚಿರ' ಮತ್ತು 'ಕ್ಷಿಪ್ರ'ವೆಂಬ ಜ್ಞಾನ (-ಹೆಚ್ಚು ಕಾಲ ಮತ್ತು ಕಡಿಮೆ ಕಾಲವೆಂಬ ಜ್ಞಾನ)ವಾಗುತ್ತದೆ - ಆ ಜ್ಞಾನವು ವಾಸ್ತವಿಕವಾಗಿ ಹೆಚ್ಚು ಮತ್ತು ಕಡಿಮೆ ಕಾಲದೊಡನೆ ಸಂಬಂಧವಿಡುವಂಥ ಪ್ರಮಾಣ (-ಕಾಲ ಪರಿಮಾಣ)ವಿಲ್ಲದೆ ಸಂಭವಿಸುವುದಿಲ್ಲ ; ಮತ್ತು ಆ ಪ್ರಮಾಣವು ಪುದ್ಗಲದ್ರವ್ಯದ ಪರಿಣಾಮವಿಲ್ಲದೆ ನಿಶ್ಚಿತವಾಗುವುದಿಲ್ಲ. ಆದುದರಿಂದ ವ್ಯವಹಾರ ಕಾಲವು ಪರದ ಪರಿಣಾಮದಿಂದ ತಿಳಿದುಬರುವ ಕಾರಣ - ಒಂದು ವೇಳೆ ಅದು ನಿಶ್ಚಯದಿಂದ ಇನ್ನೊಂದರ ಆಶ್ರಿತವಾಗಿಲ್ಲವಾದರೂ -ಆಶ್ರಿತರೂಪದಿಂದ ಉತ್ಪನ್ನವಾಗುವಂಥದ್ದೆಂದು (ಪರದ ಅವಲಂಬನೆಯಿಂದ ಉತ್ಪನ್ನವಾಗುವಂಥದ್ದೆಂದು) ಹೇಳಲಾಗುತ್ತದೆ.

ಅದಕ್ಕಾಗಿ ಕಾಲದ್ರವ್ಯಕ್ಕೆ ಅಸ್ತಿಕಾಯತನದ ಅಭಾವದ ಕಾರಣವಾಗಿ ಇಲ್ಲಿ ಅಸ್ತಿಕಾಯದ ಸಾಮಾನ್ಯ ಪ್ರರೂಪಣೆಯಲ್ಲಿ ಅದರ ಸಾಕ್ಷಾತ್[೧] ಕಥನವಿಲ್ಲದಿದ್ದರೂ ಜೀವ-ಪುದ್ಗಲಗಳ ಪರಿಣಾಮದ ಅನ್ಯಥಾ ಅನುಪಪತ್ತಿಯಿಂದ ಸಿದ್ಧವಾಗುವಂಥ ನಿಶ್ಚಯರೂಪ ಕಾಲ ಮತ್ತು ಅವುಗಳ ಪರಿಣಾಮದ ಆಶ್ರಿತವಾಗಿ ನಿಶ್ಚಿತವಾಗುವಂಥ ವ್ಯವಹಾರರೂಪ ಕಾಲವು ಪಂಚಾಸ್ತಿಕಾಯದಂತೆ ಲೋಕರೂಪದಲ್ಲಿ ಪರಿಣತವಿದೆಯೆಂದು ಅತ್ಯಂತ ತೀಕ್ಷ್ಣ ದೃಷ್ಟಿಯಿಂದ ತಿಳಿದು ಬರುವ ಸಾಧ್ಯತೆಯಿದೆ.

ಭಾವಾರ್ಥ ಃ- 'ಸಮಯ'ವು ಅಲ್ಪವಿದೆ, 'ನಿಮಿಷ'ವು ಅಧಿಕವಿದೆ ಮತ್ತು 'ಮುಹೂರ್ತ'ವು ಅದಕ್ಕಿಂತಲೂ ಅಧಿಕವಿದೆಯೆಂಬ ಯಾವ ಜ್ಞಾನವಾಗುತ್ತದೆ ಅದು 'ಸಮಯ', 'ನಿಮಿಷ' ಮೊದಲಾದವುಗಳ ಪರಿಮಾಣವನ್ನು ತಿಳಿದುಕೊಳ್ಳುವುದರಿಂದ ಆಗುತ್ತದೆ ; ಮತ್ತು ಆ ಕಾಲ ಪರಿಮಾಣವು ಪುದ್ಗಲಗಳಿಂದ ನಿಶ್ಚಿತವಾಗುತ್ತದೆ. ಅದಕ್ಕಾಗಿ ವ್ಯವಹಾರಕಾಲದ ಉತ್ಪತ್ತಿಯು ಪುದ್ಗಲಗಳಿಂದ ಆಗುತ್ತದೆಂದು (ಉಪಚಾರದಿಂದ) ಹೇಳಲಾಗುತ್ತದೆ.

ಹೀಗೆ ವ್ಯವಹಾರಕಾಲದ ಅಳತೆಯು ಪುದ್ಗಲದಿಂದಾಗುತ್ತಿರುವುದರಿಂದ ಅದಕ್ಕೆ ಉಪಚಾರದಿಂದ ಪುದ್ಗಲಾಶ್ರಿತವೆಂದು ಹೇಳಲಾಗುತ್ತಿದ್ದರೂ ನಿಶ್ಚಯದಿಂದ ಅದು ಕೇವಲ ಕಾಲದ್ರವ್ಯದ್ದೇ ಪರ್ಯಾಯರೂಪವಿದೆ, ಪುದ್ಗಲದಿಂದ ಸರ್ವಥಾ ಭಿನ್ನವಿದೆಯೆಂದು ತಿಳಿಯುವುದು. ಯಾವ ಪ್ರಕಾರ ಹತ್ತು ಸೇರು ನೀರು ಹಿಡಿಯುವ ಮಣ್ಣಿನ ಕೊಡದ ಅಳತೆಯು ನೀರಿನಿಂದ ಆಗುತ್ತಿದ್ದರೂ ಕೊಡವು ಮಣ್ಣಿನದೇ ಪರ್ಯಾಯರೂಪವಿದೆ, ನೀರಿನ ಪರ್ಯಾಯರೂಪವಿಲ್ಲ ; ಅದೇ ಪ್ರಕಾರ ಸಮಯ-ನಿಮಿಷ ಮೊದಲಾದ ವ್ಯವಹಾರಕಾಲದ ಅಳತೆಯು ಪುದ್ಗಲದಿಂದ ಆಗುತ್ತಿದ್ದರೂ ವ್ಯವಹಾರಕಾಲವು ಕಾಲದ್ರವ್ಯದ್ದೇ ಪರ್ಯಾಯರೂಪವಿದೆ, ಪುದ್ಗಲದ ಪರ್ಯಾಯರೂಪವಿಲ್ಲ.

ಕಾಲದ ಸಂಬಂಧದಲ್ಲಿ ಗಾಥಾಸೂತ್ರಗಳ ಕಥನದ ಸಾರಾಂಶವು ಹೀಗಿದೆ - ಜೀವ ಪುದ್ಗಲಗಳ ಪರಿಣಾಮದಲ್ಲಿ (ಸಮಯವಿಶಿಷ್ಟವೃತ್ತಿಯಲ್ಲಿ) ವ್ಯವಹಾರದಿಂದ ಸಮಯದ ಅಪೇಕ್ಷೆ ಬರುತ್ತದೆ ; ಅದಕ್ಕಾಗಿ ಸಮಯವನ್ನು ಉತ್ಪನ್ನಮಾಡುವಂಥ ಯಾವುದಾದರೂ ಪದಾರ್ಥವು ಅವಶ್ಯವಿರಬೇಕಾಗುವುದು. ಆ ಪದಾರ್ಥವೆಂದರೆ

೧. ಸಾಕ್ಷಾತ್ = ನೇರವಾದ (ಕಾಲದ ವಿಸ್ತೃತ ನೇರವಾದ ಕಥನವನ್ನು ಶ್ರೀ ಪ್ರವಚನಸಾರದ ದ್ವಿತೀಯ ಶ್ರುತಸ್ಕಂಧದಲ್ಲಿ ಮಾಡಲಾಗಿದೆ ; ಅದಕ್ಕಾಗಿ ಕಾಲದ ಸ್ವರೂಪವನ್ನು ವಿಸ್ತಾರದಿಂದ ತಿಳಿದುಕೊಳ್ಳುವ ಇಚ್ಛೆಯುಳ್ಳವರು ಆ ಪ್ರವಚನಸಾರದಿಂದ ತಿಳಿದುಕೊಳ್ಳಬೇಕು.)

ಅಥಾಮೀಷಾಮೇವ ವಿಶೇಷವ್ಯಾಖ್ಯಾನಮ್ । ತತ್ರ ತಾವತ್ ಜೀವದ್ರವ್ಯಾಸ್ತಿಕಾಯವ್ಯಾಖ್ಯಾನಮ್ ।

ಜೀವೋ ತ್ತಿ ಹವದಿ ಚೇದಾ ಉವಓಗವಿಸೇಸಿದೋ ಪಹೂ ಕತ್ತಾ ।
ಭೋತ್ತಾ ಯ ದೇಹಮೇತ್ತೋ ಣ ಹಿ ಮುತ್ತೋ ಕಮ್ಮಸಂಜುತ್ತೋ ॥೨೭॥

ಜೀವ ಇತಿ ಭವತಿ ಚೇತಯಿತೋಪಯೋಗವಿಶೇಷಿತಃ ಪ್ರಭುಃ ಕರ್ತಾ ।
ಭೋಕ್ತಾ ಚ ದೇಹಮಾತ್ರೋ ನ ಹಿ ಮೂರ್ತಃ ಕರ್ಮಸಂಯುಕ್ತಃ ॥೨೭॥

ಅತ್ರ ಸಂಸಾರಾವಸ್ಥಸ್ಯಾತ್ಮನಃ ಸೋಪಾಧಿ ನಿರುಪಾಧಿ ಚ ಸ್ವರೂಪಮುಕ್ತಮ್ ।

ಕಾಲದ್ರವ್ಯವಿದೆ. ಕಾಲದ್ರವ್ಯವು ಪರಿಣಮಿಸುವುದರಿಂದ ವ್ಯವಹಾರಕಾಲವಾಗುತ್ತದೆ ಮತ್ತು ಅದು ವ್ಯವಹಾರಕಾಲವು ಪುದ್ಗಲದಿಂದ ಅಳೆಯಲಾಗುತ್ತಿರುವುದರಿಂದ ಅದಕ್ಕೆ ಉಪಚಾರದಿಂದ ಪರಾಶ್ರಿತವೆಂದು ಹೇಳಲಾಗುತ್ತದೆ. ಪಂಚಾಸ್ತಿಕಾಯದಂತೆ ನಿಶ್ಚಯವ್ಯವಹಾರರೂಪಕಾಲವೂ ಲೋಕರೂಪದಿಂದ ಪರಿಣತವಿದೆಯೆಂದು ಸರ್ವಜ್ಞರು ನೋಡಿದ್ದಾರೆ ಮತ್ತು ಅತ್ಯಂತ ತೀಕ್ಷ್ಣ ದೃಷ್ಟಿಯಿಂದ ಸ್ಪಷ್ಟ ಸಮ್ಯಕ್ ಅನುಮಾನವು ಆಗುವ ಸಾಧ್ಯತೆಯಿದೆ.

ಕಾಲಸಂಬಂಧ ಕಥನದ ತಾತ್ಪರ್ಯಾರ್ಥವನ್ನು ಈ ಕೆಳಗೆ ಹೇಳಿದ ಪ್ರಕಾರ ಗ್ರಹಣ ಮಾಡಲು ಯೋಗ್ಯವಾಗಿದೆ - ಕಳೆದುಹೋದ ಅನಂತಕಾಲದಲ್ಲಿ ಜೀವನಿಗೆ ಒಂದು ಚಿದಾನಂದರೂಪ ಕಾಲವೇ (-ಸ್ವಕಾಲವೇ) ಯಾವುದರ ಸ್ವಭಾವವಿದೆ ಅಂಥ ಜೀವಾಸ್ತಿಕಾಯದ ಉಪಲಬ್ಧಿಯಾಗಲಿಲ್ಲ ; ಆ ಜೀವಾಸ್ತಿಕಾಯದ್ದೇ ಸಮ್ಯಕ್ ಶ್ರದ್ಧೆ, ಅದರದೇ ರಾಗಾದಿರೂಪದಿಂದ ಭಿನ್ನವಾದ ಭೇದಜ್ಞಾನ ಮತ್ತು ರಾಗಾದಿವಿಭಾವರೂಪಗಳಾದ ಸಮಸ್ತ ಸಂಕಲ್ಪ -ವಿಕಲ್ಪಜಾಲಗಳ ತ್ಯಾಗದಿಂದ ಅದರಲ್ಲಿಯೇ ಸ್ಥಿರಪರಿಣತಿಯಾಗುವುದು ಕರ್ತವ್ಯವಿದೆ.

ಈ ಪ್ರಕಾರವಾಗಿ ಶ್ರೀಮದ್‌ಭಗವತ್ಕುಂದಕುಂದಾಚಾರ್ಯದೇವ ಪ್ರಣೀತ ಶ್ರೀ ಪಂಚಾಸ್ತಿಕಾಯ ಸಂಗ್ರಹ ಶಾಸ್ತ್ರದ ಶ್ರೀ ಅಮೃತಚಂದ್ರಾಚಾರ್ಯದೇವವಿರಚಿತ ಸಮಯವ್ಯಾಖ್ಯೆಯೆಂಬ ಹೆಸರಿನ ಟೀಕೆಯಲ್ಲಿ ಷಡ್‌ದ್ರವ್ಯ ಪಂಚಾಸ್ತಿಕಾಯದ ಸಾಮಾನ್ಯ ವ್ಯಾಖ್ಯಾನರೂಪವಾದ ಪೀಠಿಕೆಯು ಸಮಾಪ್ತವಾಯಿತು.

ಈಗ ಅವುಗಳದೇ (ಷಡ್‌ದ್ರವ್ಯ ಮತ್ತು ಪಂಚಾಸ್ತಿಕಾಯದ್ದೇ) ವಿಶೇಷ ವ್ಯಾಖ್ಯಾನ ಮಾಡಲಾಗುತ್ತದೆ. ಅದರಲ್ಲಿ ಮೊದಲು ಜೀವದ್ರವ್ಯಾಸ್ತಿಕಾಯದ ವ್ಯಾಖ್ಯಾನವಿದೆ.

ಗಾಥೆ - ೨೭

ಗಾಥಾರ್ಥ :- [ಜೀವೋ ತ್ತಿ ಹವದಿ] (ಸಂಸಾರಸ್ಥಿತನಾದ) ಆತ್ಮನು ಜೀವನಿದ್ದಾನೆ, [ಚೇದಾ] ಚೇತಯಿತ (ಚೇತನಮಾಡುವವ)ನಿದ್ದಾನೆ, [ಉವಓಗವಿಸೇಸಿದೋ] ಉಪಯೋಗಲಕ್ಷಿತನಿದ್ದಾನೆ, [ಪಹೂ] ಪ್ರಭುವಿದ್ದಾನೆ, [ಕತ್ತಾ] ಕರ್ತೃವಿದ್ದಾನೆ, [ಭೋತ್ತಾ] ಭೋಕ್ತೃವಿದ್ದಾನೆ, [ದೇಹಮೇತ್ತೋ] ದೇಹ ಪ್ರಮಾಣನಿದ್ದಾನೆ, [ಣ ಹಿ ಮುತ್ತೋ] ಅಮೂರ್ತನಿದ್ದಾನೆ [ಯ] ಮತ್ತು [ಕಮ್ಮಸಂಜುತ್ತೋ] ಕರ್ಮ ಸಂಯುಕ್ತನಿದ್ದಾನೆ.

ಆತ್ಮ ಜೀವವಿದೆ, ಚೇತಯಿತವಿದೆ, ಉಪಯೋಗಲಕ್ಷಿತವಿದೆ, ಪ್ರಭುವಿದೆ ।
ಕರ್ತೃ-ಭೋಕ್ತೃವಿದೆ, ಶರೀರಪ್ರಮಾಣವಿದೆ, ಅಮೂರ್ತ ಮೇಣ್ಕರ್ಮಯುಕ್ತವಿದೆ ॥೨೭॥

ಆತ್ಮಾ ಹಿ ನಿಶ್ಚಯೇನ ಭಾವಪ್ರಾಣಧಾರಣಾಜ್ಜೀವಃ, ವ್ಯವಹಾರೇಣ ದ್ರವ್ಯಪ್ರಾಣಧಾರಣಾಜ್ಜೀವಃ। ನಿಶ್ಚಯೇನ ಚಿದಾತ್ಮಕತ್ವಾತ್, ವ್ಯವಹಾರೇಣ ಚಿಚ್ಛಕ್ತಿಯುಕ್ತತ್ವಾಚ್ಚೇತಯಿತಾ। ನಿಶ್ಚಯೇನಾಪೃಥಗ್ಭೂತೇನ, ವ್ಯವಹಾರೇಣ ಪೃಥಗ್ಭೂತೇನ ಚೈತನ್ಯ ಪರಿಣಾಮಲಕ್ಷಣೇನೋಪಯೋಗೇನೋಪಲಕ್ಷಿತತ್ವಾದುಪಯೋಗವಿಶೇಷಿತಃ। ನಿಶ್ಚಯೇನ ಭಾವಕರ್ಮಣಾಂ, ವ್ಯವಹಾರೇಣ ದ್ರವ್ಯಕರ್ಮಣಾಮಾಸ್ರವಣಬಂಧನಸಂವರಣನಿರ್ಜರಣಮೋಕ್ಷಣೇಷು ಸ್ವಯಮೀಶತ್ವಾತ್ ಪ್ರಭುಃ। ನಿಶ್ಚಯೇನ ಪೌದ್ಗಲಿಕಕರ್ಮನಿಮಿತ್ತಾತ್ಮಪರಿಣಾಮಾನಾಂ, ವ್ಯವಹಾರೇಣಾತ್ಮ ಪರಿಣಾಮ- ನಿಮಿತ್ತಪೌದ್ಗಲಿಕಕರ್ಮಣಾಂ ಕರ್ತೃತ್ವಾತ್ಕರ್ತಾ। ನಿಶ್ಚಯೇನ ಶುಭಾಶುಭಕರ್ಮನಿಮಿತ್ತ ಸುಖದುಃಖ- ಪರಿಣಾಮಾನಾಂ, ವ್ವವಹಾರೇಣ ಶುಭಾಶುಭಕರ್ಮಸಂಪಾದಿತೇಷ್ಟಾನಿಷ್ಟವಿಷಯಾಣಾಂ ಭೋಕ್ತೃತ್ವಾದ್ಭೋಕ್ತಾ। ನಿಶ್ಚಯೇನ ಲೋಕಮಾತ್ರೋಽಪಿ ವಿಶಿಷ್ಟಾವಗಾಹಪರಿಣಾಮಶಕ್ತಿಯುಕ್ತತ್ವಾನ್ನಾಮಕರ್ಮನಿರ್ವೃತ್ತಮಣು ಮಹಚ್ಚ ಶರೀರಮಧಿತಿಷ್ಠನ್ ವ್ಯವಹಾರೇಣ ದೇಹಮಾತ್ರಃ। ವ್ಯವಹಾರೇಣ ಕರ್ಮಭಿಃ ಸಹೈಕತ್ವಪರಿಣಾಮಾನ್ಮೂರ್ತೋಽಪಿ ನಿಶ್ಚಯೇನ ನೀರೂಪಸ್ವಭಾವತ್ವಾನ್ನ ಹಿ ಮೂರ್ತಃ ನಿಶ್ಚಯೇನ ಪುದ್ಗಲ ಪರಿಣಾಮಾನು ರೂಪಚೈತನ್ಯ- ಪರಿಣಾಮಾತ್ಮಭಿಃ, ವ್ಯವಹಾರೇಣ ಚೈತನ್ಯಪರಿಣಾಮಾನುರೂಪಪುದ್ಗಲಪರಿಣಾಮಾತ್ಮಭಿಃ ಕರ್ಮಭಿಃ ಸಂಯುಕ್ತತ್ವಾತ್ಕರ್ಮಸಂಯುಕ್ತ ಇತಿ।

ಟೀಕೆ :- ಇಲ್ಲಿ (ಈ ಗಾಥೆಯಲ್ಲಿ) ಸಂಸಾರ ಅವಸ್ಥೆಯುಳ್ಳ ಆತ್ಮನ ಸೋಪಾಧಿ[೧] ಮತ್ತು ನಿರುಪಾಧಿ ಸ್ವರೂಪವನ್ನು ಹೇಳಿದೆ.

ಆತ್ಮನು ನಿಶ್ಚಯದಿಂದ ಭಾವಪ್ರಾಣವನ್ನು ಧಾರಣಮಾಡುತ್ತಿರುವುದರಿಂದ 'ಜೀವ' ನಿದ್ದಾನೆ, ವ್ಯವಹಾರದಿಂದ (ಅಸದ್ಭೂತ ವ್ಯವಹಾರನಯದಿಂದ) ದ್ರವ್ಯಪ್ರಾಣವನ್ನು ಧಾರಣ ಮಾಡುತ್ತಿರುವುದರಿಂದ 'ಜೀವ' ನಿದ್ದಾನೆ ; ನಿಶ್ಚಯದಿಂದ[೨] ಚಿತ್ಸ್ವರೂಪನಿರುವ ಕಾರಣ 'ಚೇತಯಿತ' (ಚೇತನ ಮಾಡುವವ) ನಿದ್ದಾನೆ, ವ್ಯವಹಾರದಿಂದ (ಸದ್ಭೂತ ವ್ಯವಹಾರನಯದಿಂದ), ಚಿತ್‌ಶಕ್ತಿಯುಕ್ತನಿರುವುದರಿಂದ 'ಚೇತಯಿತ' ನಿದ್ದಾನೆ; ನಿಶ್ಚಯದಿಂದ ಅಪೃಥಗ್ಭೂತ[೩] ದಂಥ ಚೈತನ್ಯಪರಿಣಾಮಸ್ವರೂಪ ಉಪಯೋಗದಿಂದ ಲಕ್ಷಿತನಿರುವುದರಿಂದ 'ಉಪಯೋಗಲಕ್ಷಿತ' ನಿದ್ದಾನೆ, ವ್ಯವಹಾರದಿಂದ (ಸದ್ಭೂತ ವ್ಯವಹಾರನಯದಿಂದ) ಪೃಥಗ್ಭೂತದಂಥ ಚೈತನ್ಯ ಪರಿಣಾಮಸ್ವರೂಪ ಉಪಯೋಗದಿಂದ ಲಕ್ಷಿತನಿರುವುದರಿಂದ 'ಉಪಯೋಗಲಕ್ಷಿತ' ನಿದ್ದಾನೆ ; ನಿಶ್ಚಯದಿಂದ ಭಾವಕರ್ಮಗಳ ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷ ಮಾಡುವಲ್ಲಿ ತಾನು ಈಶ (ಸಮರ್ಥ) ನಿರುವುದರಿಂದ 'ಪ್ರಭು' ವಿದ್ದಾನೆ, ವ್ಯವಹಾರದಿಂದ (ಅಸದ್ಭೂತ ವ್ಯವಹಾರನಯದಿಂದ) ದ್ರವ್ಯಕರ್ಮಗಳ ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷಮಾಡುವಲ್ಲಿ ತಾನು ಈಶನಿರುವುದರಿಂದ 'ಪ್ರಭು' ವಿದ್ದಾನೆ ; ನಿಶ್ಚಯದಿಂದ ಪೌದ್ಗಲಿಕ ಕರ್ಮವು ಯಾವವುಗಳ ನಿಮಿತ್ತವಿದೆ ಅಂಥ ಆತ್ಮಪರಿಣಾಮಗಳ ಕರ್ತೃತ್ವವಿರುವುದರಿಂದ 'ಕರ್ತೃ' ವಿದ್ದಾನೆ, ವ್ಯವಹಾರದಿಂದ (ಅಸದ್ಭೂತ ವ್ಯವಹಾರನಯದಿಂದ) ಆತ್ಮ-ಪರಿಣಾಮವು ಯಾವವುಗಳ ನಿಮಿತ್ತವಿದೆ ಅಂಥ ಪೌದ್ಗಲಿಕ ಕರ್ಮಗಳ ಕರ್ತೃತ್ವವಿರುವುದರಿಂದ 'ಕರ್ತೃ' ವಿದ್ದಾನೆ ;

---

೧. ಸೋಪಾಧಿ - ಉಪಾಧಿ ಸಹಿತ ; ಯಾವುದರಲ್ಲಿ ಪರದ ಅಪೇಕ್ಷೆ ಬರುತ್ತದೆ ಅಂಥ.

೨. ನಿಶ್ಚಯದಿಂದ ಚಿತ್‌ಶಕ್ತಿಗೆ ಆತ್ಮನೊಡನೆ ಅಭೇದವಿದೆ ಮತ್ತು ವ್ಯವಹಾರದಿಂದ ಭೇದವಿದೆ; ಅದಕ್ಕಾಗಿ ಆತ್ಮನು ನಿಶ್ಚಯದಿಂದ ಚಿತ್‌ಶಕ್ತಿಸ್ವರೂಪನಿದ್ದರೆ ವ್ಯವಹಾರದಿಂದ ಚಿತ್‌ಶಕ್ತಿವಂತನಿದ್ದಾನೆ.

೩. ಅಪೃಥಗ್ಭೂತ = ಅಪೃಥಕ್ ; ಅಭಿನ್ನ, (ನಿಶ್ಚಯದಿಂದ ಉಪಯೋಗವು ಆತ್ಮನಿಂದ ಅಪೃಥಕ್ ಇದೆ ಮತ್ತು ವ್ಯವಹಾರದಿಂದ ಪೃಥಕ್ ಇದೆ.

ಕಮ್ಮಮಲವಿಪ್ಪಮುಕ್ಕೋ ಉಡ್ಢಂ ಲೋಗಸ್ಸ ಅಂತಮಧಿಗಂತಾ ।
ಸೋ ಸವ್ವಣ್ಹಾಣದರಿಸೀ ಲಹದಿ ಸುಹಮಣಿಂದಿಯಮಣಂತಂ ॥೨೮॥

ಕರ್ಮಮಲವಿಪ್ರಮುಕ್ತ ಊರ್ಧ್ವಂ ಲೋಕಸ್ಯಾಂತಮಧಿಗಮ್ಯ ।
ಸ ಸರ್ವಜ್ಞಾನದರ್ಶೀ ಲಭತೇ ಸುಖಮನಿಂದ್ರಿಯಮನಂತಮ್ ॥೨೮॥

ನಿಶ್ಚಯದಿಂದ ಶುಭಾಶುಭ ಕರ್ಮವು ಯಾವವುಗಳ ನಿಮಿತ್ತವಿದೆ ಅಂಥ ಸುಖದುಃಖಪರಿಣಾಮಗಳ ಭೋಕ್ತವಿರುವುದರಿಂದ 'ಭೋಕ್ತ'ವಿದ್ದಾನೆ, ವ್ಯವಹಾರದಿಂದ (ಅಸದ್ಭೂತವ್ಯವಹಾರನಯದಿಂದ) ಶುಭಾಶುಭ ಕರ್ಮಗಳಿಂದ ಸಂಪಾದಿತ (ಪ್ರಾಪ್ತ)ವಾದ ಇಷ್ಟಾನಿಷ್ಟವಿಷಯಗಳ ಭೋಕ್ತತ್ವವಿರುವುದರಿಂದ 'ಭೋಕ್ತ'ವಿದ್ದಾನೆ; ನಿಶ್ಚಯದಿಂದ ಲೋಕಪ್ರಮಾಣವಿದ್ದರೂ ಕೂಡ ವಿಶಿಷ್ಟ ಅವಗಾಹಪರಿಣಾಮದ ಶಕ್ತಿಯುಳ್ಳವನಿರುವುದರಿಂದ ನಾಮಕರ್ಮದಿಂದ ರಚಿಸಲ್ಪಡುವ ಹಿರಿ-ಕಿರಿಯ ಶರೀರಗಳಲ್ಲಿ ವಾಸಿಸುತ್ತ ವ್ಯವಹಾರದಿಂದ (ಅಸದ್ಭೂತವ್ಯವಹಾರನಯದಿಂದ) 'ದೇಹಪ್ರಮಾಣ'ನಿದ್ದಾನೆ; ವ್ಯವಹಾರದಿಂದ (ಸದ್ಭೂತವ್ಯವಹಾರನಯದಿಂದ) ಕರ್ಮಗಳೊಡನೆ ಏಕತ್ವಪರಿಣಾಮದ ಕಾರಣ ಮೂರ್ತವಾಗಿದ್ದರೂ ಕೂಡ, ನಿಶ್ಚಯದಿಂದ ಅರೂಪಸ್ವಭಾವವುಳ್ಳವನಿರುವುದರ ಕಾರಣ 'ಅಮೂರ್ತ'ನಿದ್ದಾನೆ ; ನಿಶ್ಚಯದಿಂದ[೧] ಪುದ್ಗಲಪರಿಣಾಮಕ್ಕೆ ಅನುರೂಪವಾದ ಚೈತನ್ಯಪರಿಣಾಮಾತ್ಮಕ ಕರ್ಮಗಳೊಡನೆ ಸಂಯುಕ್ತವಿರುವುದರಿಂದ 'ಕರ್ಮಸಂಯುಕ್ತ'ನಿದ್ದಾನೆ, ವ್ಯವಹಾರದಿಂದ (ಅಸದ್ಭೂತವ್ಯವಹಾರನಯದಿಂದ) ಚೈತನ್ಯ ಪರಿಣಾಮಕ್ಕೆ ಅನುರೂಪವಾದ ಪುದ್ಗಲಪರಿಣಾಮಾತ್ಮಕ ಕರ್ಮಗಳೊಡನೆ ಸಂಯುಕ್ತವಿರುವುದರಿಂದ 'ಕರ್ಮಸಂಯುಕ್ತ'ನಿದ್ದಾನೆ.

ಭಾವಾರ್ಥ :- ಮೊದಲು ೨೬ ಗಾಥೆಗಳಲ್ಲಿ ಷಡ್‌ದ್ರವ್ಯ ಮತ್ತು ಪಂಚಾಸ್ತಿಕಾಯದ ಸಾಮಾನ್ಯ ನಿರೂಪಣೆ ಮಾಡಿ, ಈಗ ಈ ೨೭ ನೆಯ ಗಾಥೆಯಲ್ಲಿ ಅವುಗಳ ವಿಶೇಷ ನಿರೂಪಣೆಯನ್ನು ಪ್ರಾರಂಭಿಸಲಾಗಿದೆ. ಅದರಲ್ಲಿ ಮೊದಲು ಜೀವದ (ಆತ್ಮನ ನಿರೂಪಣೆಯನ್ನು ಪ್ರಾರಂಭ ಮಾಡುತ್ತ ಈ ಗಾಥೆಯಲ್ಲಿ ಸಂಸಾರ ಸ್ಥಿತನಾದ ಆತ್ಮನಿಗೆ ಜೀವ (ಎಂದರೆ ಜೀವತ್ವವುಳ್ಳ), ಚೇತಯಿತ, ಉಪಯೋಗಲಕ್ಷಣವುಳ್ಳ, ಪ್ರಭು, ಕರ್ತೃ- ಇತ್ಯಾದಿಯಾಗಿ ಹೇಳಿದೆ. ಜೀವತ್ವ, ಚೇತಯಿತೃತ್ವ, ಉಪಯೋಗ, ಪ್ರಭುತ್ವ, ಕರ್ತೃತ್ವ-ಇತ್ಯಾದಿಗಳ ವಿವರಣೆಯು ಮುಂದಿನ ಗಾಥೆಗಳಲ್ಲಿ ಬರುತ್ತದೆ.

ಗಾಥೆ - ೨೮

ಗಾಥಾರ್ಥ :- [ಕಮ್ಮಮಲವಿಪ್ಪಮುಕ್ಕೋ] ಕರ್ಮಮಲದಿಂದ ಮುಕ್ತನಾದ ಆತ್ಮನು [ಉಡ್ಢಂ] ಮೇಲಿನ [ಲೋಗಸ್ಸ ಅಂತಂ] ಲೋಕದ ಕೊನೆಯನ್ನು [ಅಧಿಗಂತಾ] ಪ್ರಾಪ್ತಮಾಡಿಕೊಂಡು [ಸೋ

ಸರ್ವಕರ್ಮಮಲದಿಂದ ಮುಕ್ತನಾದಾತ್ಮ ಲೋಕಾಗ್ರದ ನೆಲೆಯಪಡೆದವನು ।
ಸರ್ವಜ್ಞ-ಸರ್ವದರ್ಶಿ ಅನಂತ ಅತೀಂದ್ರಿಯ ಸುಖವನನುಭವಿಸುವನು ॥೨೮॥

---

೧. ಸಂಸಾರಿಯಾದ ಆತ್ಮನು ನಿಶ್ಚಯದಿಂದ ನಿಮಿತ್ತಭೂತವಾದ ಪುದ್ಗಲಕರ್ಮಗಳಿಗೆ ಅನುರೂಪವಾದಂಥ ನೈಮಿತ್ತಿಕ ಆತ್ಮಪರಿಣಾಮಗಳೊಡನೆ (ಎಂದರೆ ಭಾವಕರ್ಮಗಳೊಡನೆ) ಸಂಯುಕ್ತವಿರುವುದರಿಂದ ಕರ್ಮಸಂಯುಕ್ತನಿದ್ದಾನೆ ಮತ್ತು ವ್ಯವಹಾರದಿಂದ ನಿಮಿತ್ತಭೂತವಾದ ಆತ್ಮ ಪರಿಣಾಮಗಳಿಗೆ ಅನುರೂಪವಾದಂಥ ನೈಮಿತ್ತಿಕ ಪುದ್ಗಲಕರ್ಮಗಳೊಡನೆ (ಎಂದರೆ ದ್ರವ್ಯಕರ್ಮಗಳೊಡನೆ) ಸಂಯುಕ್ತವಿರುವುದರಿಂದ ಕರ್ಮಸಂಯುಕ್ತನಿದ್ದಾನೆ.

ಅತ್ರ ಮುಕ್ತಾವಸ್ಥಸ್ಯಾತ್ಮನೋ ನಿರುಪಾಧಿಸ್ವರೂಪಮುಕ್ತಮ್ ।

ಆತ್ಮಾ ಹಿ ಪರದ್ರವ್ಯತ್ವಾತ್ಕರ್ಮರಜಸಾ ಸಾಕಲ್ಯೇನ ಯಸ್ಮಿನ್ನೇವ ಕ್ಷಣೇ ಮುಚ್ಯತೇ ತಸ್ಮಿನ್ನೇವೋರ್ಧ್ವಗಮನಸ್ವಭಾವತ್ವಾಲ್ಲೋಕಾಂತಮಧಿಗಮ್ಯ ಪರತೋ ಗತಿಹೇತೋರಭಾವಾದವಸ್ಥಿತಃ ಕೇವಲ-ಜ್ಞಾನದರ್ಶನಾಭ್ಯಾಂ ಸ್ವರೂಪಭೂತತ್ವಾದಮುಕ್ತೋಽನಂತಮತೀಂದ್ರಿಯಂ ಸುಖಮನುಭವತಿ । ಮುಕ್ತಸ್ಯ ಚಾಸ್ಯ ಭಾವಪ್ರಾಣಧಾರಣಲಕ್ಷಣಂ ಜೀವತ್ವಂ , ಚಿದ್ರೂಪಲಕ್ಷಣಂ ಚೇತಯಿತೃತ್ವಂ , ಚಿತ್ಪರಿಣಾಮಲಕ್ಷಣ ಉಪಯೋಗಃ, ನಿರ್ವರ್ತಿತಸಮಸ್ತಾಧಿಕಾರಶಕ್ತಿಮಾತ್ರಂ ಪ್ರಭುತ್ವಂ , ಸಮಸ್ತವಸ್ತ್ವಸಾಧಾರಣಸ್ವರೂಪನಿರ್ವರ್ತನ-ಮಾತ್ರಂ ಕರ್ತೃತ್ವಂ , ಸ್ವರೂಪಭೂತಸ್ವಾತಂತ್ರ್ಯಲಕ್ಷಣಸುಖೋಪಲಂಭರೂಪಂ, ಭೋಕ್ತೃತ್ವಂ , ಅತೀತಾನಂತರಶರೀರ-ಪರಿಮಾಣಾವಗಾಹಪರಿಣಾಮರೂಪಂ ದೇಹಮಾತ್ರತ್ವಂ , ಉಪಾಧಿಸಂಬಂಧವಿವಿಕ್ತಮಾತ್ಯಂತಿಕಮಮೂರ್ತತ್ವಮ್ ।

ಸರ್ವಜ್ಞಾನದರಿಸೀ] ಅವನು ಸರ್ವಜ್ಞ-ಸರ್ವದರ್ಶಿ [ಅಣಂತಂ] ಅನಂತ [ಅಣಿಂದಿಯಂ] ಅತೀಂದ್ರಿಯ [ಸುಹಂ] ಸುಖದ [ಲಹದಿ] ಅನುಭವ ಮಾಡುತ್ತಾನೆ.

ಟೀಕೆ :- ಇಲ್ಲಿ ಮುಕ್ತಾವಸ್ಥೆಯುಳ್ಳ ಆತ್ಮನ ನಿರುಪಾಧಿಸ್ವರೂಪವನ್ನು ಹೇಳಿದೆ.

ಆತ್ಮನು (ಕರ್ಮರಜದ) ಪರದ್ರವ್ಯತ್ವದ ಕಾರಣ ಕರ್ಮರಜದಿಂದ ಯಾವ ಕ್ಷಣದಲ್ಲಿ ಸಂಪೂರ್ಣರೂಪದಿಂದ ಬಿಡುಗಡೆ ಹೊಂದುತ್ತಾನೆ (-ಮುಕ್ತನಾಗುತ್ತಾನೆ), ಅದೇ ಕ್ಷಣದಲ್ಲಿ (ತನ್ನ ಊರ್ಧ್ವಗಮನ ಸ್ವಭಾವದ ಕಾರಣವಾಗಿ ಲೋಕದ ಕೊನೆಯನ್ನು ತಲುಪಿ ಮುಂದೆ ಗತಿಹೇತುವಿನ ಅಭಾವವಿರುವುದರಿಂದ (ಅಲ್ಲಿ) ಸ್ಥಿರನಾಗುತ್ತ ಕೇವಲಜ್ಞಾನ ಮತ್ತು ಕೇವಲದರ್ಶನಗಳು (ತನ್ನ) ಸ್ವರೂಪಭೂತವಿರುವ ಕಾರಣ ಅವುಗಳಿಂದ ಬಿಡುಗಡೆ ಹೊಂದದೆ ಅನಂತ ಅತೀಂದ್ರಿಯಸುಖದ ಅನುಭವ ಮಾಡುತ್ತಾನೆ. ಆ ಮುಕ್ತಾತ್ಮನಿಗೆ ಭಾವಪ್ರಾಣಧಾರಣವು ಯಾವುದರ ಲಕ್ಷಣ (ಸ್ವರೂಪ)ವಿದೆ ಅಂಥ 'ಜೀವತ್ವ'ವಿರುತ್ತದೆ ; ಚಿದ್ರೂಪವು ಯಾವುದರ ಲಕ್ಷಣ (ಸ್ವರೂಪ)ವಿದೆ ಅಂಥ 'ಚೇತಯಿತೃತ್ವ'ವಿರುತ್ತದೆ ; ಚಿತ್ಪರಿಣಾಮವು ಯಾವುದರ ಲಕ್ಷಣ (ಸ್ವರೂಪ)ವಿದೆ ಅಂಥ 'ಉಪಯೋಗ'ವಿರುತ್ತದೆ ; ಪ್ರಾಪ್ತಮಾಡಿಕೊಂಡ ಸಂಪೂರ್ಣ (ಆತ್ಮಿಕ) ಅಧಿಕಾರಗಳ ಶಕ್ತಿಮಾತ್ರರೂಪ[೧] 'ಪ್ರಭುತ್ವ'ವಿರುತ್ತದೆ ; ಸಮಸ್ತ ವಸ್ತುಗಳಲ್ಲಿ ಅಸಾಧಾರಣವಾದಂಥ ಸ್ವರೂಪದ ನಿಷ್ಪತ್ತಿಮಾತ್ರರೂಪ (ತನ್ನ ಸ್ವರೂಪವನ್ನು ರಚಿಸುವರೂಪ) 'ಕರ್ತೃತ್ವ'ವಿರುತ್ತದೆ ; ಸ್ವರೂಪಭೂತ ಸ್ವಾತಂತ್ರ್ಯವು ಯಾವುದರ ಲಕ್ಷಣ (ಸ್ವರೂಪ)ವಿದೆ ಅಂಥ ಸುಖದ ಉಪಲಬ್ಧಿರೂಪ 'ಭೋಕ್ತೃತ್ವ'ವಿರುತ್ತದೆ ; ಅತೀತ ಅನಂತರ (-ಕೊನೆಯ) ಶರೀರಕ್ಕನುಸರಿಸಿ ಅವಗಾಹಪರಿಣಾಮರೂಪ 'ದೇಹ ಪ್ರಮಾಣತೆ'[೨]ಯಿರುತ್ತದೆ ; ಮತ್ತು ಉಪಾಧಿಯ ಸಂಬಂಧದಿಂದ ವಿವಿಕ್ತ[೩]ದಂಥ ಆತ್ಯಂತಿಕ (ಸರ್ವಥಾ) 'ಅಮೂರ್ತತೆ'ಯಿರುತ್ತದೆ. (ಮುಕ್ತಾತ್ಮನಿಗೆ) 'ಕರ್ಮಸಂಯುಕ್ತತೆ'[೪]ಯಂತೂ ಎಂದೂ

---

೧. ಶಕ್ತಿ - ಸಾಮರ್ಥ್ಯ ; ಈಶತ್ವ (ಮುಕ್ತಾತ್ಮನು ಎಲ್ಲ ಆತ್ಮಿಕ ಅಧಿಕಾರಗಳನ್ನು ಭೋಗಿಸುವಲ್ಲಿ ಎಂದರೆ ಅವುಗಳ ಉಪಯೋಗ ಮಾಡುವಲ್ಲಿ ತಾನು ಸಮರ್ಥನಿರುವುದರಿಂದ ಅವನು ಪ್ರಭುವಿದ್ದಾನೆ).

೨.ಮುಕ್ತಾತ್ಮನ ಅವಗಾಹನವು ಚರಮಶರೀರ ಪ್ರಮಾಣವಿರುವುದರಿಂದ ಆ ಕೊನೆಯ ಶರೀರದ ಅಪೇಕ್ಷೆಯಿಂದ ಅವನಿಗೆ 'ದೇಹಪ್ರಮಾಣತೆ'ಯೆಂದು ಹೇಳಲಾಗುತ್ತದೆ.

೩. ವಿವಿಕ್ತ, ಭಿನ್ನ ; ರಹಿತ.

೪. ಹಿಂದಿನ ಗಾಥೆಯಲ್ಲಿ ಹೇಳಿದ 'ಜೀವತ್ವ' ಮೊದಲಾದ ೯ ವಿಶೇಷಗಳಲ್ಲಿ ಮೊದಲಿನ ೮ ವಿಶೇಷಗಳು ಮುಕ್ತಾತ್ಮನಿಗೂ ಯಥಾಸಂಭವವಿರುತ್ತದೆ, ಕೇವಲ ಒಂದು 'ಕರ್ಮಸಂಯುಕ್ತತೆ'ಯಿರುವುದಿಲ್ಲ.

ಕರ್ಮಸಂಯುಕ್ತತ್ವಂ ತು ದ್ರವ್ಯಭಾವಕರ್ಮವಿಪ್ರಮೋಕ್ಷಾನ್ನ ಭವತ್ಯೇವ । ದ್ರವ್ಯಕರ್ಮಾಣಿ ಹಿ ಪುದ್ಗಲಸ್ಕಂಧಾ, ಭಾವಕರ್ಮಾಣಿ ತು ಚಿದ್ವಿವರ್ತಾಃ। ವಿವರ್ತತೇ ಹಿ ಚಿಚ್ಛಕ್ತಿರನಾದಿಜ್ಞಾನಾವರಣಾದಿಕರ್ಮಸಂಪರ್ಕಕೂಣಿತಪ್ರಚಾರಾ ಪರಿಚ್ಛೇದ್ಯಸ್ಯ ವಿಶ್ವಸ್ಯೈಕದೇಶೇಷು ಕ್ರಮೇಣ ವ್ಯಾಪ್ರಿಯಮಾಣಾ । ಯದಾ ತು ಜ್ಞಾನಾವರಣಾದಿಕರ್ಮಸಂಪರ್ಕಃ ಪ್ರಣಶ್ಯತಿ ತದಾ ಪರಿಚ್ಛೇದ್ಯಸ್ಯ ವಿಶ್ವಸ್ಯ ಸರ್ವದೇಶೇಷು ಯುಗಪದ್ವ್ಯಾಪೃತಾ ಕಥಂಚಿತ್ಕೂಟಸ್ಥ್ಯಮವಾಪ್ಯ ವಿಷಯಾಂತರಮನಾಪ್ನುವಂತೀ ನ ವಿವರ್ತತೇ । ಸ ಖಲ್ವೇಷ ನಿಶ್ಚಿತಃ ಸರ್ವಜ್ಞಸರ್ವದರ್ಶಿತ್ವೋಪಲಂಭಃ। ಅಯಮೇವ ದ್ರವ್ಯಕರ್ಮನಿಬಂಧನಭೂತಾನಾಂ ಭಾವಕರ್ಮಣಾಂ ಕರ್ತೃತ್ವೋಚ್ಛೇದಃ। ಅಯಮೇವ ಚ ವಿಕಾರಪೂರ್ವಕಾನು-ಭವಾಭಾವಾದೌಪಾಧಿಕಸುಖದುಃಖಪರಿಣಾಮಾನಾಂ ಭೋಕ್ತೃತ್ವೋಚ್ಛೇದಃ। ಇದಮೇವ ಚಾನಾದಿವಿವರ್ತಖೇದ-ವಿಚ್ಛಿತ್ತಿಸುಸ್ಥಿತಾನಂತ- ಚೈತನ್ಯಸ್ಯಾತ್ಮನಃ ಸ್ವತಂತ್ರಸ್ವರೂಪಾನುಭೂತಿಲಕ್ಷಣಸುಖಸ್ಯ ಭೋಕ್ತೃತ್ವಮಿತಿ।

ಇರುವುದಿಲ್ಲ. ಏಕೆಂದರೆ ದ್ರವ್ಯಕರ್ಮಗಳಿಂದ ಮತ್ತು ಭಾವಕರ್ಮಗಳಿಂದ ವಿಮುಕ್ತಿಯಾಗಿದೆ. ದ್ರವ್ಯ ಕರ್ಮಗಳು ಅವು ಪುದ್ಗಲಸ್ಕಂಧಗಳಿವೆ ಮತ್ತು ಭಾವಕರ್ಮಗಳು ಅವು 'ಚಿದ್' ವಿವರ್ತ'[೧]ವಿವೆ.ಚಿತ್‌ಶಕ್ತಿಯು ಅನಾದಿಯಾದ ಜ್ಞಾನಾವರಣ ಮೊದಲಾದ ಕರ್ಮಗಳ ಸಂಪರ್ಕದಿಂದ (ಸಂಬಂಧದಿಂದ) ಸಂಕುಚಿತ ವ್ಯಾಪಾರವುಳ್ಳದ್ದಾಗಿರುವ ಕಾರಣ ಜ್ಞೇಯಭೂತ ವಿಶ್ವದ (-ಸಮಸ್ತ ಪದಾರ್ಥಗಳ) ಒಂದೊಂದು ಅಂಶದಲ್ಲಿ ಕ್ರಮದಿಂದ ವ್ಯಾಪಾರ ಮಾಡುತ್ತ ವಿವರ್ತನೆಗೆ ಪ್ರಾಪ್ತವಾಗುತ್ತದೆ - ಆದರೆ ಯಾವಾಗ ಜ್ಞಾನಾವರಣ ಮೊದಲಾದ ಕರ್ಮಗಳ ಸಂಪರ್ಕವು ವಿನಷ್ಟವಾಗುತ್ತದೆ ಆಗಅದು ಜ್ಞೇಯಭೂತ ವಿಶ್ವದ ಎಲ್ಲ ಅಂಶಗಳಲ್ಲಿ ಯುಗಪದ್ ವ್ಯಾಪಾರ ಮಾಡುತ್ತ ಕಥಂಚಿತ್ ಕೂಟಸ್ಥವಾಗಿ, ಇತರ ವಿಷಯಗಳಿಗೆ ಪ್ರಾಪ್ತವಾಗದೆ ವಿವರ್ತನೆ ಮಾಡುವುದಿಲ್ಲ - ಅದು ಈ (ಚಿತ್‌ಶಕ್ತಿಯ ವಿವರ್ತನದ ಅಭಾವವೆಂದರೆ), ವಾಸ್ತವದಲ್ಲಿ ನಿಶ್ಚಿತ (ನಿಯತ, ಅಚಲ) ಸರ್ವಜ್ಞತೆಯ ಮತ್ತು ಸರ್ವದರ್ಶಿತ್ವದ ಉಪಲಬ್ಧಿಯಿದೆ. ಇದೇ, ದ್ರವ್ಯಕರ್ಮಗಳಿಗೆ ನಿಮಿತ್ತಭೂತಗಳಾದ ಭಾವಕರ್ಮಗಳ ಕರ್ತೃತ್ವದ ವಿನಾಶವಿದೆ ; ಇದೇ ವಿಕಾರಪೂರ್ವಕ ಅನುಭವದ ಅಭಾವದ ಕಾರಣವಾಗಿ ಔಪಾಧಿಕ[೩] ಸುಖದುಃಖ ಪರಿಣಾಮಗಳ ಭೋಕ್ತೃತ್ವದ ವಿನಾಶವಿದೆ ; ಮತ್ತು ಇದೇ, ಅನಾದಿ ವಿವರ್ತನದ ಖೇದದ ವಿನಾಶದಿಂದ ಯಾರ ಅನಂತಚೈತನ್ಯವು ಸುಸ್ಥಿತವಾಗಿದೆ ಅಂಥ ಆತ್ಮನಿಗೆ ಸ್ವತಂತ್ರಸ್ವರೂಪಾನುಭೂತಿ ಲಕ್ಷಣ ಸುಖದ (ಸ್ವತಂತ್ರ ಸ್ವರೂಪದ ಅನುಭೂತಿಯು ಯಾರ ಲಕ್ಷಣವಿದೆ ಅಂಥ ಸುಖದ) ಭೋಕ್ತೃತ್ವವಿದೆ.

---

೧. ಚಿದ್‌ವಿವರ್ತ = ಚೈತನ್ಯದ ಪರಿವರ್ತನೆ ಎಂದರೆ ಚೈತನ್ಯದ ಒಂದು ವಿಷಯವನ್ನು ಬಿಟ್ಟುಕೊಟ್ಟು ಬೇರೆ ವಿಷಯವನ್ನು ತಿಳಿಯುವ ರೂಪದಿಂದ ಬದಲಿಸುವುದು. ಚಿತ್‌ಶಕ್ತಿಯ ಬೇರೆ-ಬೇರೆ ಜ್ಞೇಯಗಳನ್ನು ತಿಳಿಯುವ ರೂಪವಾಗಿ ಪರಿವರ್ತಿಸುವುದು.

೨. ಕೂಟಸ್ಥ = ಎಲ್ಲ ಕಾಲದಲ್ಲೂ ಏಕರೂಪವಿರುವಂಥ ; ಅಚಲ. (ಜ್ಞಾನಾವರಣ ಮೊದಲಾದ ಕರ್ಮಗಳ ಸಂಬಂಧವು ನಾಶವಾದ ಮೇಲೆ ಚಿತ್‌ಶಕ್ತಿಯಲ್ಲೂ ಸರ್ವಥಾ ಅಪರಿಣಾಮಿಯಾಗುವುದಿಲ್ಲ ; ಆದರೆ ಅದು ಬೇರೆ - ಬೇರೆ ಜ್ಞೇಯಗಳನ್ನು ತಿಳಿಯುವರೂಪವಾಗಿ ಪರಿವರ್ತಿಸುವುದಿಲ್ಲ - ಯಾವಾಗಲೂ ಮೂರೂ ಕಾಲದ ಸಂಪೂರ್ಣ ಜ್ಞೇಯಗಳನ್ನು ತಿಳಿಯುತ್ತಿರುವುದರಿಂದ ಅದಕ್ಕೆ ಕಥಂಚಿತ್ ಕೂಟಸ್ಥವೆಂದು ಹೇಳಿದೆ.

೩. ಔಪಾಧಿಕ - ದ್ರವ್ಯಕರ್ಮರೂಪವಾದ ಉಪಾಧಿಯೊಡನೆ ಸಂಬಂಧವುಳ್ಳ ; ಯಾವವುಗಳಲ್ಲಿ ದ್ರವ್ಯಕರ್ಮರೂಪ ಉಪಾಧಿಯು ನಿಮಿತ್ತವಾಗುತ್ತದೆ ಅಂಥ ; ಅಸ್ವಾಭಾವಿಕ ; ವೈಭಾವಿಕ ; ವಿಕಾರವುಳ್ಳ.

ಜಾದೋ ಸಯಂ ಸ ಚೇದಾ ಸವ್ವಣ್ಹೂ ಸವ್ವಲೋಗದರಿಸೀ ಯ ।
ಪಪ್ಪೋದಿ ಸುಹಮಣಂತಂ ಅವ್ವಾಬಾಧಂ ಸಗಮಮುತ್ತಂ ॥೨೯॥

ಜಾತಃ ಸ್ವಯಂ ಸ ಚೇತಯಿತಾ ಸರ್ವಜ್ಞಃ ಸರ್ವಲೋಕದರ್ಶೀ ಚ ।
ಪ್ರಾಪ್ನೋತಿ ಸುಖಮನಂತಮವ್ಯಾಬಾಧಂ ಸ್ವಕಮಮೂರ್ತಮ್ ॥೨೯॥

ಇದಂ ಸಿದ್ಧಸ್ಯ ನಿರುಪಾಧಿಜ್ಞಾನದರ್ಶನಸುಖಸಮರ್ಥನಮ್ ।

ಆತ್ಮಾ ಹಿ ಜ್ಞಾನದರ್ಶನಸುಖಸ್ವಭಾವಃ ಸಂಸಾರಾವಸ್ಥಾಯಾಮನಾದಿಕರ್ಮಕ್ಲೇಶಸಂಕೋಚಿತಾತ್ಮಶಕ್ತಿಃ ಪರದ್ರವ್ಯಸಂಪರ್ಕೇಣ ಕ್ರಮೇಣ ಕಿಂಚಿತ್ ಕಿಂಚಿಜ್ಜಾನಾತಿ ಪಶ್ಯತಿ, ಪರಪ್ರತ್ಯಯಂ ಮೂರ್ತಸಂಬದ್ಧಂ ಸವ್ಯಾಬಾಧಂ ಸಾಂತಂ ಸುಖಮನುಭವತಿ ಚ । ಯದಾ ತ್ವಸ್ಯ ಕರ್ಮಕ್ಲೇಶಾಃ ಸಾಮಸ್ತ್ಯೇನ ಪ್ರಣಶ್ಯಂತಿ, ತದಾऽನರ್ಗಲಾ-

ಗಾಥೆ - ೨೯

ಗಾಥಾರ್ಥ :- [ಸ ಚೇದಾ] ಆ ಚೇತಯಿತನು (ಚೇತನ ಮಾಡುವಂಥ ಆತ್ಮನು) [ಸವ್ವಣ್ಹೂ] ಸರ್ವಜ್ಞ [ಯ] ಮತ್ತು [ಸವ್ವಲೋಗದರಿಸೀ] ಸರ್ವಲೋಕದರ್ಶಿ [ಸಯಂ ಜಾದೋ] ತಾನಾಗುತ್ತ [ಸಗಂ] ತನ್ನ [ಅಮುತ್ತಂ] ಅಮೂರ್ತ [ಅವ್ವಾಬಾಧಂ] ಅವ್ಯಾಬಾಧ [ಅಣಂತಂ] ಅನಂತ [ಸುಹಂ] ಸುಖವನ್ನು [ಪಪ್ಪೋದಿ] ಪ್ರಾಪ್ತಮಾಡಿಕೊಳ್ಳುತ್ತಾನೆ.

ಟೀಕೆ :- ಇದು ಸಿದ್ಧರ ನಿರುಪಾಧಿ ಜ್ಞಾನ, ದರ್ಶನ ಮತ್ತು ಸುಖದ ಸಮರ್ಥನೆಯಿದೆ.

ವಾಸ್ತವಿಕವಾಗಿ ಜ್ಞಾನ, ದರ್ಶನ ಮತ್ತು ಸುಖವು ಯಾವನ ಸ್ವಭಾವವಿದೆ ಅಂಥ ಆತ್ಮನು ಸಂಸಾರಾವಸ್ಥೆಯಲ್ಲಿ ಅನಾದಿ ಕರ್ಮಕ್ಲೇಶಗಳಿಂದ ಆತ್ಮಶಕ್ತಿಯು ಸಂಕುಚಿತವಾಗಿ ಹೋಗಿರುವುದರಿಂದ, ಪರದ್ರವ್ಯದ ಸಂಪರ್ಕದಿಂದ (-ಇಂದ್ರಿಯ ಮೊದಲಾದವುಗಳ ಸಂಬಂಧದಿಂದ) ಕ್ರಮವಾಗಿ ಸ್ವಲ್ಪ - ಸ್ವಲ್ಪ ತಿಳಿಯುತ್ತಾನೆ ಮತ್ತು ನೋಡುತ್ತಾನೆ ಹಾಗೂ ಪರಾಶ್ರಿತವೂ, ಮೂರ್ತವೂ (ಇಂದ್ರಿಯಾದಿಗಳು) ಆದವುಗಳೊಡನೆ ಸಂಬಂಧವುಳ್ಳ, ಸವ್ಯಾಬಾಧ (ಬಾಧೆಯಿಂದ ಕೂಡಿದ) ಮತ್ತು ಸಾಂತ (ನಾಶವಂತ) ಸುಖದ ಅನುಭವ ಮಾಡುತ್ತಾನೆ ; ಆದರೆ ಯಾವಾಗ ಅವನ ಕರ್ಮಕ್ಲೇಶಗಳು ಸಂಪೂರ್ಣರೂಪದಿಂದ ವಿನಾಶಕ್ಕೆ ಪ್ರಾಪ್ತವಾಗುತ್ತವೆ ಆಗ ಆತ್ಮಶಕ್ತಿಯು ಅನರ್ಗಲ (-ನಿರಂಕುಶ) ಮತ್ತು ಅಸಂಕುಚಿತವಾಗುವುದರಿಂದ ಅವನು ಅಸಹಾಯ ರೂಪದಿಂದ (-ಯಾವುದರದೂ ಸಹಾಯತೆಯಿಲ್ಲದೆ) ತಾನಾಗಿಯೇ ಯುಗಪದ್ ಎಲ್ಲವನ್ನು (ಎಲ್ಲ ದ್ರವ್ಯ-ಕ್ಷೇತ್ರ-ಕಾಲ-ಭಾವಗಳನ್ನು) ತಿಳಿಯುತ್ತಾನೆ ಮತ್ತು ನೋಡುತ್ತಾನೆ ಹಾಗೂ ಸ್ವಾಶ್ರಿತ, ಮೂರ್ತ (ಇಂದ್ರಿಯಾದಿಗಳು)ದೊಡನೆ ಸಂಬಂಧರಹಿತವಾದ, ಅವ್ಯಾಬಾಧ ಮತ್ತು ಅನಂತ ಸುಖದ ಅನುಭವ ಮಾಡುತ್ತಾನೆ. ಆದುದರಿಂದ ಎಲ್ಲವನ್ನೂ ತಾವಾಗಿಯೇ ತಿಳಿಯುವಂಥ ಮತ್ತು ನೋಡುವಂಥ ಹಾಗೂ ತಮ್ಮ ಸುಖದ ಅನುಭವ ಮಾಡುವಂಥ ಸಿದ್ಧರಿಗೆ ಪರದಿಂದ (ಸ್ವಲ್ಪವೂ) ಪ್ರಯೋಜನವಿಲ್ಲ.

ತನ್ನಿಂದ ತಾನೆ ಸರ್ವಜ್ಞ - ಸರ್ವಲೋಕದರ್ಶಿಯಾಗುತ್ತಿರುವ ಚೇತಯಿತನು ।
ತನ್ನ ಅಮೂರ್ತ, ಅವ್ಯಾಬಾಧ, ಅನಂತಸುಖವನ್ನವನು ಪಡೆಯುವನು ॥೨೯॥

ಸಂಕುಚಿತಾತ್ಮಶಕ್ತಿರಸಹಾಯಃ ಸ್ವಯಮೇವ ಯುಗಪತ್ಸಮಗ್ರಂ ಜಾನಾತಿ ಪಶ್ಯತಿ, ಸ್ವಪ್ರತ್ಯಯಮಮೂರ್ತ-ಸಂಬದ್ಧಮವ್ಯಾಬಾಧಮನಂತಂ ಸುಖಮನುಭವತಿ ಚ । ತತಃ ಸಿದ್ಧಸ್ಯ ಸಮಸ್ತಂ ಸ್ವಯಮೇವ ಜಾನತಃ ಪಶ್ಯತಃ, ಸುಖಮನುಭವತಶ್ಚ ಸ್ವಂ , ನ ಪರೇಣ ಪ್ರಯೋಜನಮಿತಿ ।

ಭಾವಾರ್ಥ :- ಸಿದ್ಧಭಗವಂತರು (ಹಾಗೂ ಕೇವಲೀ ಭಗವಂತರು) ತಾವಾಗಿಯೇ ಸರ್ವಜ್ಞತ್ವ ಮೊದಲಾದ ರೂಪದಿಂದ ಪರಿಣಮಿಸುತ್ತಾರೆ ; ಅವರ ಆ ಪರಿಣಮನದಲ್ಲಿ ತಿಲಮಾತ್ರವೂ (ಇಂದ್ರಿಯ ಮೊದಲಾದ) ಪರದ ಅವಲಂಬನೆಯಿರುವುದಿಲ್ಲ.

'ಸರ್ವಜ್ಞರೇ ಇಲ್ಲ, ಏಕೆಂದರೆ ಪ್ರತ್ಯಕ್ಷವಾಗಿ ಕಂಡುಬರುವುದಿಲ್ಲ' ; - ಎಂದು ಸರ್ವಜ್ಞರ ನಿಷೇಧ ಮಾಡುವಂಥ ಯಾವನೋ ಒಬ್ಬನು ಹೇಳಬಹುದು. ಅದಕ್ಕಾಗಿ ಅವನಿಗೆ ಈ ಕೆಳಗಿನಂತೆ ತಿಳಿಸಿಕೊಡುತ್ತಾರೆ,-

ಎಲೈ ಸೋದರನೇ ! 'ಸರ್ವಜ್ಞರು ಇಲ್ಲ'ವೆಂದು ನೀನು ಹೇಳುತ್ತಿರುವೆ, ಆದರೆ ಸರ್ವಜ್ಞರು ಎಲ್ಲಿ ಇಲ್ಲ ? ಈ ಕ್ಷೇತ್ರದಲ್ಲಿ ಮತ್ತು ಈ ಕಾಲದಲ್ಲಿ ಇಲ್ಲವೋ ಅಥವಾ ಮೂರು ಲೋಕದಲ್ಲಿ ಮತ್ತು ಮೂರು ಕಾಲದಲ್ಲಿ ಇಲ್ಲ ? 'ಈ ಕ್ಷೇತ್ರದಲ್ಲಿ ಮತ್ತು ಈ ಕಾಲದಲ್ಲಿ ಸರ್ವಜ್ಞರಿಲ್ಲ'ವೆಂದು ಹೇಳಿದರೆ ಅದು ಸಮ್ಮತವೇ ಇದೆ. ಆದರೆ ಒಂದು ವೇಳೆ 'ಮೂರು ಲೋಕದಲ್ಲಿ ಮತ್ತು ಮೂರು ಕಾಲದಲ್ಲಿ ಸರ್ವಜ್ಞರಿಲ್ಲ'ವೆಂದು ಹೇಳಿದರೆ ಅದನ್ನು ನೀನು ಹೇಗೆ ತಿಳಿದುಕೊಂಡೆ ? ಒಂದು ವೇಳೆ ಮೂರೂ ಲೋಕವನ್ನು ಮತ್ತು ಮೂರೂ ಕಾಲವನ್ನು ಸರ್ವಜ್ಞರಿಲ್ಲದೆ ನೀನೇ ನೋಡಿದೆಯಾದರೆ - ತಿಳಿದುಕೊಂಡೆಯಾದರೆ ನೀನೇ ಸರ್ವಜ್ಞನಾಗಿಬಿಟ್ಟೆ, ಏಕೆಂದರೆ ಯಾರು ಮೂರು ಲೋಕಗಳನ್ನು ಮತ್ತು ಮೂರು ಕಾಲಗಳನ್ನು ತಿಳಿಯುತ್ತಾರೆ ಅವರೇ ಸರ್ವಜ್ಞರಿದ್ದಾರೆ. ಮತ್ತು ಒಂದು ವೇಳೆ ಸರ್ವಜ್ಞರಿಲ್ಲದ ಮೂರು ಲೋಕ ಮತ್ತು ಮೂರು ಕಾಲಗಳನ್ನು ನೀನು ನೋಡಲಿಲ್ಲ - ತಿಳಿದುಕೊಳ್ಳಲಿಲ್ಲವೆಂದರೆ 'ಮೂರು ಲೋಕ ಮತ್ತು ಮೂರು ಕಾಲಗಳಲ್ಲಿ ಸರ್ವಜ್ಞರಿಲ್ಲ'ವೆಂಬುದನ್ನು ನೀನು ಹೇಗೆ ತಿಳಿದುಕೊಂಡೆ ? ಆದುದರಿಂದ ನೀನು ಯಾವ ಸರ್ವಜ್ಞರ ನಿಷೇಧ ಮಾಡುತ್ತಿರುವೆ ಅದು ಯೋಗ್ಯವಿಲ್ಲವೆಂದು ಸಿದ್ಧವಾಗುತ್ತದೆ.

ಎಲೈ ಸೋದರನೇ ! ಆತ್ಮನು ಒಂದು ಪದಾರ್ಥವಿದ್ದು ಜ್ಞಾನವು ಅವನ ಸ್ವಭಾವವಿದೆ ; ಆದುದರಿಂದ ಆ ಜ್ಞಾನದ ಸಂಪೂರ್ಣ ವಿಕಾಸವಾದ ನಂತರ ಆ ಜ್ಞಾನದಲ್ಲಿ ಅಜ್ಞಾತವಾಗಿ ಯಾವುದೂ ಉಳಿಯುವುದಿಲ್ಲ. ಯಾವ ಪ್ರಕಾರ ಪರಿಪೂರ್ಣ ಉಷ್ಣತೆಯರೂಪವಾಗಿ ಪರಿಣಮಿಸಿದ ಅಗ್ನಿಯು ಸಮಸ್ತ ಬಾಹ್ಯಪದಾರ್ಥಗಳನ್ನು ಸುಟ್ಟು ಬಿಡುತ್ತದೆ, ಅದೇ ಪ್ರಕಾರವಾಗಿ ಪರಿಪೂರ್ಣ ಜ್ಞಾನರೂಪವಾಗಿ ಪರಿಣಮಿಸಿದ ಆತ್ಮನು ಸಮಸ್ತ ಜ್ಞೇಯ ಪದಾರ್ಥಗಳನ್ನು ತಿಳಿದುಕೊಳ್ಳುತ್ತಾನೆ. ಇಂಥ ಸರ್ವಜ್ಞಾವಸ್ಥೆಯು ಈ ಕ್ಷೇತ್ರದಲ್ಲಿ ಈ ಕಾಲದಲ್ಲಿ (ಎಂದರೆ ಈ ಕ್ಷೇತ್ರದಲ್ಲಿ ಈ ಕಾಲದಲ್ಲಿ ಹುಟ್ಟಿ ಬರುವಂಥ ಜೀವಗಳಿಗೆ) ಪ್ರಾಪ್ತವಾಗದಿದ್ದರೂ ಸರ್ವಜ್ಞತ್ವ ಶಕ್ತಿಯುಳ್ಳ ತನ್ನ ಆತ್ಮನ ಸ್ಪಷ್ಟ ಅನುಭವವು ಈ ಕ್ಷೇತ್ರದಲ್ಲಿ ಮತ್ತು ಈ ಕಾಲದಲ್ಲಿ ಆಗುವ ಸಾಧ್ಯತೆಯಿದೆ.

ಈ ಶಾಸ್ತ್ರವು ಅಧ್ಯಾತ್ಮ ಶಾಸ್ತ್ರವಾಗಿರುವುದರಿಂದ ಇಲ್ಲಿ ಸರ್ವಜ್ಞಸಿದ್ಧಿಯ ವಿಸ್ತಾರವನ್ನು ಮಾಡಲಾಗಿಲ್ಲ. ಜಿಜ್ಞಾಸೆಯುಳ್ಳವರು ಅದನ್ನು ಇತರ ಶಾಸ್ತ್ರಗಳಿಂದ ತಿಳಿದುಕೊಳ್ಳಬೇಕು.

ಪಾಣೇಹಿಂ ಚದುಹಿಂ ಜೀವದಿ ಜೀವಿಸ್ಸದಿ ಜೋ ಹು ಜೀವಿದೋ ಪುವ್ವಂ ।
ಸೋ ಜೀವೋ ಪಾಣಾ ಪುಣ ಬಲಮಿಂದಿಯಮಾಉ ಉಸ್ಸಾಸೋ ॥೩೦॥

ಪ್ರಾಣೈಶ್ಚತುರ್ಭಿರ್ಜೀವತಿ ಜೀವಿಷ್ಯತಿ ಯಃ ಖಲು ಜೀವಿತಃ ಪೂರ್ವಮ್ ।
ಸ ಜೀವಃ ಪ್ರಾಣಾಃ ಪುನರ್ಬಲಮಿಂದ್ರಿಯಮಾಯುರುಚ್ಛ್ವಾಸಃ ॥೩೦॥

ಜೀವತ್ವಗುಣಾವ್ಯಾಖ್ಯೇಯಮ್ ।

ಇಂದ್ರಿಯಬಲಾಯುರುಚ್ಛ್ವಾಸಲಕ್ಷಣಾ ಹಿ ಪ್ರಾಣಾಃ । ತೇಷಾ ಚಿತ್ಸಾಮಾನ್ಯಾನ್ವಯಿನೋ ಭಾವಪ್ರಾಣಾಃ, ಪುದ್ಗಲಸಾಮಾನ್ಯಾನ್ವಯಿನೋ ದ್ರವ್ಯಪ್ರಾಣಾಃ । ತೇಷಾಮುಭಯೇಷಾಮಪಿ ತ್ರಿಷ್ವಪಿ ಕಾಲೇಷ್ವನವಚ್ಛಿನ್ನಸಂತಾನತ್ವೇನ ಧಾರಣಾತ್ಸಂಸಾರಿಣೋ ಜೀವತ್ವಮ್ । ಮುಕ್ತಸ್ಯ ತು ಕೇವಲಾನಾಮೇವ ಭಾವಪ್ರಾಣಾನಾಂ ಧಾರಣಾತ್ತದವಸೇಯಮಿತಿ ।

ಗಾಥೆ - ೩೦

ಗಾಥಾರ್ಥ :- [ಜೋ ಹು] ಯಾವುದು [ಚದುಹಿಂ ಪಾಣೇಹಿಂ] ನಾಲ್ಕು ಪ್ರಾಣಗಳಿಂದ (ಜೀವದಿ) ಜೀವಿಸುತ್ತದೆ, [ಜೀವಿಸ್ಸದಿ] ಜೀವಿಸಬಹುದು ಮತ್ತು [ಪುವ್ವಂ ಜೀವಿದೋ] ಪೂರ್ವ ಕಾಲದಲ್ಲಿ ಜೀವಿಸುತ್ತಿತ್ತು, [ಸೋ ಜೀವೋ] ಅದು ಜೀವವಿದೆ ; [ಪುಣ ಪಾಣಾ] ಮತ್ತು ಪ್ರಾಣವು [ಇಂದಿಯಂ] ಇಂದ್ರಿಯ, [ಬಲಂ] ಬಲ, [ಆಉ] ಆಯು ಹಾಗೂ [ಉಸ್ಸಾಸೋ] ಉಚ್ಛ್ವಾಸವಿದೆ.

ಟೀಕೆ :- ಇದು ಜೀವತ್ವಗುಣದ ವ್ಯಾಖ್ಯೆಯಿದೆ.

ಪ್ರಾಣಗಳು ಇಂದ್ರಿಯ, ಬಲ, ಆಯು ಹಾಗೂ ಉಚ್ಛ್ವಾಸ-ಸ್ವರೂಪಗಳಿವೆ. ಅವುಗಳಲ್ಲಿ (-ಪ್ರಾಣಗಳಲ್ಲಿ) ಚಿತ್ಸಾಮಾನ್ಯರೂಪ[೧] ಅನ್ವಯವುಳ್ಳವುಗಳು ಅವು ಭಾವಪ್ರಾಣಗಳಿವೆ ಮತ್ತು ಪುದ್ಗಲಸಾಮಾನ್ಯರೂಪ ಅನ್ವಯವುಳ್ಳವುಗಳು ಅವು ದ್ರವ್ಯಪ್ರಾಣಗಳಿವೆ. ಅವೆರಡು ಪ್ರಾಣಗಳನ್ನು ತ್ರಿಕಾಲ ಅಚ್ಛಿನ್ನ - ಸಂತಾನರೂಪದಿಂದ (ಅಖಂಡಧಾರಾ ಪ್ರವಾಹದಿಂದ)ಧಾರಣ ಮಾಡುತ್ತಿರುವುದರಿಂದ ಸಂಸಾರಿಗೆ ಜೀವತ್ವವಿದೆ. ಮುಕ್ತರಿಗಂತೂ - ಸಿದ್ಧರಿಗಂತೂ ಕೇವಲ ಭಾವಪ್ರಾಣಗಳದ್ದೇ ಧಾರಣವಿರುವುದರಿಂದ ಜೀವತ್ವವಿದೆಯೆಂದು ತಿಳಿದುಕೊಳ್ಳಬೇಕು.

ಯಾವನು ನಾಲ್ಕು ಪ್ರಾಣಗಳಿಂದ ಜೀವಿಪನು, ಜೀವಿಸಿದ ಮುಂದೆ ಜೀವಿಸುವನು ।
ಅವನು ಜೀವನಿದ್ದು, ಇಂದ್ರಿಯ-ಬಲ-ಆಯು-ಉಚ್ಛ್ವಾಸವಿವು ನಾಲ್ಕು ಪ್ರಾಣಗಳು ॥೩೦॥

---

೧. ಯಾವ ಪ್ರಾಣಗಳಲ್ಲಿ ಚಿತ್ಸಾಮಾನ್ಯರೂಪ ಅನ್ವಯವಿರುತ್ತದೆ ಅವು ಭಾವಪ್ರಾಣಗಳಿವೆ ಎಂದರೆ ಯಾವ ಪ್ರಾಣಗಳಲ್ಲಿ ಯಾವಾಗಲೂ 'ಚಿತ್ಸಾಮಾನ್ಯತೆ, ಚಿತ್ಸಾಮಾನ್ಯತೆ'ಯೆಂಬ ಏಕರೂಪತೆ - ಸಾದೃಶ್ಯತೆಯಿರುತ್ತದೆ ಅವು ಭಾವಪ್ರಾಣಗಳಿವೆ - (ಯಾವ ಪ್ರಾಣಗಳಲ್ಲಿ ಯಾವಾಗಲೂ 'ಪುದ್ಗಲಸಾಮಾನ್ಯತೆ, ಪುದ್ಗಲಸಾಮಾನ್ಯತೆ, ಪುದ್ಗಲಸಾಮಾನ್ಯತೆ'ಯೆಂಬ ಏಕರೂಪತೆ ಸಾದೃಶ್ಯತೆಯಿರುತ್ತದೆ ಅವು ದ್ರವ್ಯಪ್ರಾಣಗಳಿವೆ.)

ಅಗುರುಲಹುಗಾ ಅಣಂತಾ ತೇಹಿಂ ಅಣಂತೇಹಿಂ ಪರಿಣದಾ ಸವ್ವೇ ।
ದೇಸೇಹಿಂ ಅಸಂಖಾದಾ ಸಿಯ ಲೋಗಂ ಸವ್ವಮಾವಣ್ಣಾ ॥೩೧॥

ಕೇಚಿತ್ತು ಅಣಾವಣ್ಣಾ ಮಿಚ್ಛಾದಂಸಣಕಸಾಯಜೋಗಜುದಾ ।
ವಿಜುದಾ ಯ ತೇಹಿಂ ಬಹುಗಾ ಸಿದ್ಧಾ ಸಂಸಾರಿಣೋ ಜೀವಾ ॥೩೨॥

ಅಗುರುಲಘುಕಾ ಅನಂತಾಸ್ತೈರನಂತೈಃ ಪರಿಣತಾಃ ಸರ್ವೇ ।
ದೇಶೈರಸಂಖ್ಯಾತಾಃ ಸ್ಯಾಲ್ಲೋಕಂ ಸರ್ವಮಾಪನ್ನಾಃ ॥೩೧॥

ಕೇಚಿತ್ತು ಅನಾಪನ್ನಾ ಮಿಥ್ಯಾದರ್ಶನಕಷಾಯಯೋಗಯುತಾಃ ।
ವಿಯುತಾಶ್ಚ ತೈರ್ಬಹವಃ ಸಿದ್ಧಾಃ ಸಂಸಾರಿಣೋ ಜೀವಾಃ ॥೩೨॥

ಗಾಥೆ - ೩೧-೩೨

ಗಾಥಾರ್ಥ ಃ- [ಅಣಂತಾ ಅಗುರುಲಹುಗಾ] ಅನಂತವಾದಂಥ ಯಾವ ಅಗುರುಲಘು (ಗುಣ, ಅಂಶ) [ತೇಹಿಂ ಅಣಂತೇಹಿಂ] ಆ ಅನಂತ ಅಗುರುಲಘು (ಗುಣ) ರೂಪದಿಂದ [ಸವ್ವೇ] ಎಲ್ಲ ಜೀವಗಳು [ಪರಿಣದಾ] ಪರಿಣತವಾಗಿವೆ ; [ದೇಸೇಹಿಂ ಅಸಂಖಾದಾ] ಅವು ಅಸಂಖ್ಯಾತ ಪ್ರದೇಶವುಳ್ಳವುಗಳಾಗಿವೆ. [ಸಿಯ ಸವ್ವಂ ಲೋಗಂ ಆವಣ್ಣಾ] ಕೆಲವು ಕಥಂಚಿತ್ ಸಂಪೂರ್ಣ ಲೋಕಕ್ಕೆ ಪ್ರಾಪ್ತವಾಗುತ್ತವೆ [ಕೇಚಿತ್ತು] ಮತ್ತು ಕೆಲವು [ಅಣಾವಣ್ಣಾ] ಪ್ರಾಪ್ತವಾಗುವುದಿಲ್ಲ. [ಬಹುಗಾ ಜೀವಾ] ಅನೇಕ (-ಅನಂತ) ಜೀವರುಗಳು [ಮಿಚ್ಛಾದಂಸಣಕಸಾಯಜೋಗಜುದಾ] ಮಿಥ್ಯಾದರ್ಶನ-ಕಷಾಯ-ಯೋಗಸಹಿತವಾಗಿ [ಸಂಸಾರಿಣೋ] ಸಂಸಾರಿಯಾಗಿವೆ [ಯ] ಮತ್ತು ಅನೇಕ (-ಅನಂತ ಜೀವರುಗಳು) [ತೇಹಿಂ ವಿಜುದಾ] ಮಿಥ್ಯಾದರ್ಶನ- ಕಷಾಯ-ಯೋಗರಹಿತವಾಗಿ [ಸಿದ್ಧಾ] ಸಿದ್ಧವಾಗಿವೆ.

ಯಾವ ಅಗುರುಲಘು ಅನಂತ ಆ-ರೂಪದಿಂದೆಲ್ಲ ಜೀವ ಪರಿಣಮಿಸುವವು ।
ಅವು ಅಸಂಖ್ಯಾತಪ್ರದೇಶಿಯಾಗಿದ್ದು ಕೆಲವು ಸರ್ವಲೋಕವ್ಯಾಪಿ ತಾನಾಗಿವೆ ॥೩೧॥

ಮತ್ತೆ ಕೆಲವು ಅವ್ಯಾಪಿಯಾಗಿದ್ದು ಹಲವು ನಿರ್ದೋಷ ಸಿದ್ಧ ಜೀವಗಳಿವೆ ।
ಮತ್ತನೇಕ ಜೀವ ಮಿಥ್ಯಾತ್ವ-ಯೋಗ-ಕಷಾಯಸಹಿತ ಸಂಸಾರಿ ತಾನಾಗಿವೆ ॥೩೨॥

ಅತ್ರ ಜೀವಾನಾಂ ಸ್ವಾಭಾವಿಕಂ ಪ್ರಮಾಣಂ ಮುಕ್ತಾಮುಕ್ತವಿಭಾಗಶ್ಚೋಕ್ತಃ ।

ಜೀವಾ ಹ್ಯವಿಭಾಗೈಕದ್ರವ್ಯತ್ವಾಲ್ಲೋಕಪ್ರಮಾಣೈಕಪ್ರದೇಶಾಃ । ಅಗುರುಲಘವೋ ಗುಣಾಸ್ತು ತೇಷಾಮಗುರುಲಘುತ್ವಾಭಿಧಾನಸ್ಯ ಸ್ವರೂಪಪ್ರತಿಷ್ಠತ್ವನಿಬಂಧನಸ್ಯ ಸ್ವಭಾವಸ್ಯಾವಿಭಾಗಪರಿಚ್ಛೇದಾಃ ಪ್ರತಿಸಮಯಸಂಭವತ್ಷಟ್‌ಸ್ಥಾನಪತಿತವೃದ್ಧಿಹಾನಯೋಽನಂತಾಃ । ಪ್ರದೇಶಾಸ್ತು ಅವಿಭಾಗಪರಮಾಣು-ಪರಿಚ್ಛಿನ್ನಸೂಕ್ಷ್ಮಾಂಶರೂಪಾ ಅಸಂಖ್ಯೇಯಾಃ। ಏವಂವಿಧೇಷು ತೇಷು ಕೇಚಿತ್ಕಥಂಚಿಲ್ಲೋಕಪೂರಣಾವಸ್ಥಾಪ್ರಕಾರೇಣ ಸರ್ವಲೋಕವ್ಯಾಪಿನಃ, ಕೇಚಿತ್ತು ತದವ್ಯಾಪಿನ ಇತಿ। ಅಥ ಯೇ ತೇಷು ಮಿಥ್ಯಾದರ್ಶನಕಷಾಯಯೋಗೈರನಾದಿ-ಸಂತತಿಪ್ರವೃತ್ತೈಯುಕ್ತಾಸ್ತೇ ಸಿದ್ಧಾಃ, ತೇ ಚ ಪ್ರತ್ಯೇಕಂ ಬಹವ ಇತಿ ।

ಟೀಕೆ :- ಇಲ್ಲಿ ಜೀವರುಗಳ ಸ್ವಾಭಾವಿಕ ಪ್ರಮಾಣ[೧] ಹಾಗೂ ಅವುಗಳ ಮುಕ್ತ ಮತ್ತು ಅಮುಕ್ತದಂಥ ವಿಭಾಗವನ್ನು ಹೇಳಿದೆ.

ವಾಸ್ತವಿಕವಾಗಿ ಎಲ್ಲ ಜೀವಗಳು ಅವಿಭಾಗ-ಏಕದ್ರವ್ಯತ್ವದ ಕಾರಣವಾಗಿ ಲೋಕಪ್ರಮಾಣ-ಏಕ-ಪ್ರದೇಶ ವುಳ್ಳವುಗಳಾಗಿವೆ. ಅವುಗಳ (ಜೀವಗಳ) ಅಗುರುಲಘುಗುಣ[೨] - ಅಗುರುಲಘುತ್ವವೆಂಬ ಹೆಸರಿನ ಯಾವ ಸ್ವರೂಪಪ್ರತಿಷ್ಠತ್ವಕ್ಕೆ ಕಾರಣಭೂತವಾದ ಸ್ವಭಾವವಿದೆ ಅದರ ಅವಿಭಾಗ ಪ್ರತಿಚ್ಛೇದ[೩] - ಪ್ರತಿಯೊಂದು ಸಮಯಕ್ಕೆ ಆಗುವಂಥ ಷಟ್‌ಸ್ಥಾನಪತಿತ[೪] ವೃದ್ಧಿಹಾನಿಯುಳ್ಳವುಗಳು ಅನಂತವಿವೆ ; ಮತ್ತು (ಅವುಗಳ ಎಂದರೆ ಜೀವಗಳ) ಪ್ರದೇಶಗಳು - ಯಾವವು ಅವಿಭಾಗ ಪರಮಾಣುವಿನಷ್ಟು ಅಳತೆಯುಳ್ಳ ಸೂಕ್ಷ್ಮ ಅಂಶರೂಪಗಳಿವೆ ಅವು - ಅಸಂಖ್ಯವಿವೆ. ಇಂಥ ಆ ಜೀವಗಳಲ್ಲಿ ಕೆಲವು ಕಥಂಚಿತ್ (ಕೇವಲ ಸಮುದ್ಘಾತದ ಕಾರಣವಾಗಿ) ಲೋಕಪೂರಣ - ಅವಸ್ಥೆಯ ಪ್ರಕಾರದಿಂದ ಸಂಪೂರ್ಣ ಲೋಕದಲ್ಲಿ ಪ್ರಾಪ್ತವಾಗುತ್ತವೆ ಮತ್ತು ಕೆಲವು ಸಂಪೂರ್ಣ ಲೋಕದಲ್ಲಿ ವ್ಯಾಪ್ತವಾಗುವುದಿಲ್ಲ. ಇನ್ನು ಆ ಜೀವರುಗಳಲ್ಲಿ ಯಾವವು ಅನಾದಿ ಪ್ರವಾಹ ರೂಪದಿಂದ ಪ್ರವರ್ತಮಾನ ಮಿಥ್ಯಾದರ್ಶನ-ಕಷಾಯ-ಯೋಗಸಹಿತವಾಗಿವೆ ಅವು ಸಂಸಾರಿಯಿವೆ, ಯಾವವು ಅವುಗಳಿಂದ ವಿಮುಕ್ತವಿವೆ (ಎಂದರೆ ಮಿಥ್ಯಾದರ್ಶನ-ಕಷಾಯ-ಯೋಗಗಳಿಂದ ರಹಿತವಾಗಿವೆ) ಅವು ಸಿದ್ಧವಿವೆ; ಮತ್ತು ಅವು ಪ್ರತಿಯೊಂದು

---

೧. ಪ್ರಮಾಣ ಅಳತೆ ; ಪರಿಮಾಣ. [ಜೀವದ ಅಗುರುಲಘುತ್ವ ಸ್ವಭಾವದ ಎಲ್ಲಕ್ಕಿಂತ ಚಿಕ್ಕ ಅಂಶ (ಅವಿಭಾಗ ಪ್ರತಿಚ್ಛೇದ) ಮಾಡಿದ ಮೇಲೆ ಸ್ವಭಾವದಿಂದಲೇ ಯಾವಾಗಲೂ ಅನಂತಅಂಶಗಳಾಗುತ್ತಿರುವುದರಿಂದ ಜೀವವು ಯಾವಾಗಲೂ ಇಂಥ (ಷಡ್‌ಗುಣವೃದ್ಧಿಹಾನಿಯುಕ್ತ) ಅನಂತ ಅಂಶಗಳಷ್ಟು ಇದೆ. ಮತ್ತು ಜೀವದ ಎಲ್ಲಕ್ಕಿಂತ ಸಣ್ಣ ಅಂಶ ಮಾಡಿದ ಮೇಲೆ ಸ್ವಭಾವದಿಂದಲೇ ಯಾವಾಗಲೂ ಅಸಂಖ್ಯ ಅಂಶಗಳಾಗುತ್ತಿರುವುದರಿಂದ ಜೀವವು ಯಾವಾಗಲೂ ಇಂಥ ಅಸಂಖ್ಯ ಅಂಶಗಳಷ್ಟು ಇದೆ.]

೨. ಗುಣ = ಅಂಶ; ಅವಿಭಾಗ ಪ್ರತಿಚ್ಛೇದ. [ಜೀವದಲ್ಲಿ ಅಗುರುಲಘುತ್ವವೆಂಬ ಹೆಸರಿನ ಸ್ವಭಾವವಿದೆ. ಆ ಸ್ವಭಾವವು ಜೀವಕ್ಕೆ ಸ್ವರೂಪದಲ್ಲಿ ಪ್ರತಿಷ್ಠಿತವಾಗುವುದಕ್ಕೆ (ಎಂದರೆ ಸ್ವರೂಪದಲ್ಲಿ ಇರುವುದಕ್ಕೆ) ಕಾರಣಭೂತವಿದೆ. ಅದರ ಅವಿಭಾಗ ಪ್ರತಿಚ್ಛೇದಗಳಿಗೆ ಇಲ್ಲಿ ಅಗುರುಲಘುಗುಣ (ಅಂಶ)ವೆಂದು ಹೇಳಿದೆ.]

೩. ಯಾವುದೇ ಗುಣದಲ್ಲಿ (ಎಂದರೆ ಗುಣದ ಪರ್ಯಾಯದಲ್ಲಿ) ಅಂಶದ ಕಲ್ಪನೆ ಮಾಡಿದ ಮೇಲೆ, ಅದರ ಯಾವ ಎಲ್ಲಕ್ಕಿಂತ ಚಿಕ್ಕ (ಜಘನ್ಯಮಾತ್ರರೂಪ, ನಿರಂಶ) ಅಂಶವಾಗುತ್ತದೆ ಅದಕ್ಕೆ ಆ ಗುಣದ (ಎಂದರೆ ಗುಣದ ಪರ್ಯಾಯದ) ಅವಿಭಾಗ ಪ್ರತಿಚ್ಛೇದವೆಂದು ಹೇಳಲಾಗುತ್ತದೆ.

೪. ಷಟ್‌ಸ್ಥಾನಪತಿತ ವೃದ್ಧಿಹಾನಿ = ಆರು ಸ್ಥಾನಗಳಲ್ಲಿ ಸಮಾವೇಶಗೊಳ್ಳುವಂಥ ವೃದ್ಧಿ ಹಾನಿ ; ಷಟ್‌ಗುಣ ವೃದ್ಧಿ ಹಾನಿ. [ಅಗುರುಲಘುತ್ವಸ್ವಭಾವದ ಅನಂತ ಅಂಶಗಳಲ್ಲಿ ಸ್ವಭಾವದಿಂದಲೇ ಪ್ರತಿಸಮಯಕ್ಕೆ ಷಟ್‌ಗುಣ ವೃದ್ಧಿಹಾನಿಯಾಗುತ್ತಿರುತ್ತದೆ.]

ಜಹ ಪಉಮರಾಯರಯಣಂ ಖಿತ್ತಂ ಖೀರೇ ಪಭಾಸಯದಿ ಖೀರಂ ।
ತಹ ದೇಹೀ ದೇಹತ್ಥೋ ಸದೇಹಮೇತ್ತಂ ಪಭಾಸಯದಿ ॥೩೩॥

ಯಥಾ ಪದ್ಮರಾಗರತ್ನಂ ಕ್ಷಿಪ್ತಂ ಕ್ಷೀರೇ ಪ್ರಭಾಸಯತಿ ಕ್ಷೀರಮ್ ।
ತಥಾ ದೇಹೀ ದೇಹಸ್ಥಃ ಸ್ವದೇಹಮಾತ್ರಂ ಪ್ರಭಾಸಯತಿ ॥೩೩॥

ಏಷ ದೇಹಮಾತ್ರತ್ವದೃಷ್ಟಾಂತೋಪನ್ಯಾಸಃ ।

ಯಥೈವ ಹಿ ಪದ್ಮರಾಗರತ್ನಂ ಕ್ಷೀರೇ ಕ್ಷಿಪ್ತಂ ಸ್ವತೋಽವ್ಯತಿರಿಕ್ತಪ್ರಭಾಸ್ಕಂಧೇನ ತದ್ವ್ಯಾಪ್ನೋತಿ ಕ್ಷೀರಂ, ತಥೈವ ಹಿ ಜೀವಃ ಅನಾದಿಕಷಾಯಮಲೀಮಸತ್ವಮೂಲೇ ಶರೀರೇಽವತಿಷ್ಠಮಾನಃ ಸ್ವಪ್ರದೇಶೈಸ್ತದಭವ್ಯಾಪ್ನೋತಿ ಶರೀರಮ್ । ಯಥೈವ ಚ ತತ್ರ ಕ್ಷೀರೇಽಗ್ನಿಸಂಯೋಗಾದುದ್ವಲಮಾನೇ ತಸ್ಯ ಪದ್ಮರಾಗರತ್ನಸ್ಯ ಪ್ರಭಾಸ್ಕಂಧ ಉದ್ವಲತೇ ಪುನರ್ನಿವಿಶಮಾನೇ ನಿವಿಶತೇ ಚ, ತಥೈವ ಚ ತತ್ರ ಶರೀರೇ ವಿಶಿಷ್ಟಾಹಾರಾದಿವಶಾದುತ್ಸರ್ಪತಿ ತಸ್ಯ ಜೀವಸ್ಯ ಪ್ರದೇಶಾಃ ಉತ್ಸರ್ಪಂತಿ ಪುನರಪಸರ್ಪತಿ ಅಪಸರ್ಪಂತಿ ಚ । ಯಥೈವ ಚ ತತ್ಪದ್ಮರಾಗರತ್ನಮನ್ಯತ್ರ ಪ್ರಭೂತಕ್ಷೀರೇ ಕ್ಷಿಪ್ತಂ ಸ್ವಪ್ರಭಾಸ್ಕಂಧವಿಸ್ತಾರೇಣ ತದ್ವ್ಯಾಪ್ನೋತಿ ಪ್ರಭೂತಕ್ಷೀರಂ, ತಥೈವ ಚ ಜೀವೋಽನ್ಯತ್ರ ಮಹತಿ ಶರೀರೇಽವತಿಷ್ಠಮಾನಃ ಸ್ವಪ್ರದೇಶವಿಸ್ತಾರೇಣ ತದ್ವ್ಯಾಪ್ನೋತಿ ಮಹಚ್ಛರೀರಮ್ । ಯಥೈವ ಚ ತತ್ಪದ್ಮರಾಗರತ್ನಮನ್ಯತ್ರ ಸ್ತೋಕಕ್ಷೀರೇ ನಿಕ್ಷಿಪ್ತಂ

ಪ್ರಕಾರದ ಜೀವಗಳು ಅನೇಕವಿವೆ (ಎಂದರೆ ಸಂಸಾರಿ ಹಾಗೂ ಸಿದ್ಧಜೀವಗಳಲ್ಲಿ ಪ್ರತಿಯೊಂದು ಪ್ರಕಾರದ ಜೀವಗಳು ಅನಂತವಿವೆ).

ಗಾಥೆ - ೩೩

ಗಾಥಾರ್ಥ :- [ಜಹ] ಯಾವ ಪ್ರಕಾರ [ಪಉಮರಾಯರಯಣಂ] ಪದ್ಮರಾಗರತ್ನವನ್ನು [ಖೀರೇ ಖಿತ್ತಂ] ಹಾಲಿನಲ್ಲಿ ಹಾಕಿದ ಮೇಲೆ [ಖೀರಂ ಪಭಾಸಯದಿ] (ಅದು) ಹಾಲನ್ನು ಪ್ರಕಾಶಿತಗೊಳಿಸುತ್ತದೆ, [ತಹ] ಅದೇ ಪ್ರಕಾರ [ದೇಹೀ] ದೇಹಿ (ಜೀವನು) [ದೇಹತ್ಥೋ] ದೇಹದಲ್ಲಿ ವಾಸಿಸುತ್ತ [ಸದೇಹಮೇತ್ತಂ ಪಭಾಸಯದಿ] ತನ್ನ ದೇಹ ಪ್ರಮಾಣದಷ್ಟು ಪ್ರಕಾಶಿತವಾಗುತ್ತಾನೆ.

ಟೀಕೆ :- ಇಲ್ಲಿ ದೇಹಪ್ರಮಾಣತನದ ದೃಷ್ಟಾಂತದ[೧] ಕಥನವಿದೆ (ಎಂದರೆ ಇಲ್ಲಿ ಜೀವದ ದೇಹಪ್ರಮಾಣತೆಯನ್ನು ತಿಳಿಸಿಕೊಡುವುದಕ್ಕಾಗಿ ದೃಷ್ಟಾಂತ ಹೇಳಿದೆ.)

ಹೇಗೆ ಪದ್ಮರಾಗಮಣಿ ಹಾಲಿನೊಳಗಿದ್ದು ಹಾಲನು ಪ್ರಕಾಶಿತಮಾಡುವುದು ।
ಹಾಗೆ ದೇಹಿ ದೇಹದೊಳಗಿದ್ದು ದೇಹಪ್ರಮಾಣವಾಗಿ ಪ್ರಕಾಶಿತವಾಗುವನು ॥೩೩॥

---

೧. ದೃಷ್ಟಾಂತ ಮತ್ತು ದಾರ್ಷ್ಟಾಂತವು ಇಂಥ ಅಂಶಗಳಲ್ಲಿಯೇ ಒಂದು ಇನ್ನೊಂದರೊಡನೆ ಕೂಡುವಂತಿರುತ್ತವೆ, ಎಲ್ಲ ಅಂಶಗಳಲ್ಲಿಲ್ಲವೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಸ್ವಪ್ರಭಾಸ್ಕಂಧೋಪಸಂಹಾರೇಣ ತದ್ವ್ಯಾಪ್ನೋತಿ ಸ್ತೋಕಕ್ಷೀರಂ, ತಥೈವ ಚ ಜೀವೋಽನ್ಯತ್ರಾಣು-ಶರೀರೇಽವತಿಷ್ಠಮಾನಃ ಸ್ವಪ್ರದೇಶೋಪಸಂಹಾರೇಣ ತದ್ವ್ಯಾಪ್ನೋತ್ಯಣುಶರೀರಮಿತಿ।

ಯಾವ ಪ್ರಕಾರ ಪದ್ಮರಾಗರತ್ನವನ್ನು ಹಾಲಿನಲ್ಲಿ ಹಾಕಿದ ಮೇಲೆ ಅದು ತನ್ನಿಂದ ಅವ್ಯತಿರಿಕ್ತವಾದ [೧] ಪ್ರಭಾಸಮೂಹದಿಂದ ಆ ಹಾಲಿನಲ್ಲಿ ವ್ಯಾಪ್ತವಾಗುತ್ತದೆ, ಅದೇ ಪ್ರಕಾರ ಜೀವವು ಅನಾದಿಕಾಲದಿಂದ ಕಷಾಯಗಳ ಮುಖಾಂತರ ಮಲಿನತೆಯಾಗಿರುವ ಕಾರಣ ಶರೀರದಲ್ಲಿ ವಾಸಿಸುತ್ತ ತನ್ನ ಪ್ರದೇಶಗಳ ಮುಖಾಂತರ ಆ ಶರೀರದಲ್ಲಿ ವ್ಯಾಪ್ತವಾಗುತ್ತದೆ. ಮತ್ತು ಯಾವ ಪ್ರಕಾರ ಬೆಂಕಿಯ ಸಂಯೋಗದಿಂದ ಆ ಹಾಲಿನಲ್ಲಿ ಉಕ್ಕು ಬಂದ ಮೇಲೆ ಆ ಪದ್ಮರಾಗರತ್ನದ ಪ್ರಭಾಸಮೂಹದಲ್ಲಿ ಉಕ್ಕು ಬರುತ್ತದೆ (ಎಂದರೆ ಅದು ವಿಸ್ತಾರಕ್ಕೆ ಪ್ರಾಪ್ತವಾಗುತ್ತದೆ) ಮತ್ತು ಹಾಲು ತಳಸೇರಿದ ಮೇಲೆ ಪ್ರಭಾಸಮೂಹವೂ ತಳಸೇರುತ್ತದೆ; ಅದೇ ಪ್ರಕಾರ ವಿಶಿಷ್ಟ ಆಹಾರ ಮೊದಲಾದವುಗಳ ವಶದಿಂದ ಆ ಶರೀರದಲ್ಲಿವೃದ್ಧಿಯಾದ ಮೇಲೆ ಆ ಜೀವದ ಪ್ರದೇಶಗಳೂ ವಿಸ್ತೃತಗೊಳ್ಳುತ್ತವೆ ಮತ್ತು ಶರೀರವು ಪುನಃ ಕ್ಷೀಣವಾದ ಮೇಲೆ ಪ್ರದೇಶಗಳೂ ಸಂಕುಚಿತವಾಗಿ ಹೋಗುತ್ತವೆ. ಮತ್ತೆ ಯಾವ ಪ್ರಕಾರ ಆ ಪದ್ಮರಾಗರತ್ನವನ್ನು ಬೇರೆ ಅಧಿಕ ಹಾಲಿನಲ್ಲಿ ಹಾಕಿದ ಮೇಲೆ ತನ್ನ ಪ್ರಭಾಸಮೂಹದ ವಿಸ್ತಾರದಿಂದ ಆ ಅಧಿಕ ಹಾಲಿನಲ್ಲಿ ವ್ಯಾಪ್ತವಾಗುತ್ತದೆ, ಅದೇ ಪ್ರಕಾರ ಜೀವವು ಬೇರೆ ದೊಡ್ಡ ಶರೀರದಲ್ಲಿ ಸ್ಥಿತಿಗೆ ಪ್ರಾಪ್ತವಾದ ಮೇಲೆ ತನ್ನ ಪ್ರದೇಶಗಳ ವಿಸ್ತಾರದ ಮುಖಾಂತರ ಆ ದೊಡ್ಡ ಶರೀರದಲ್ಲಿ ವ್ಯಾಪ್ತವಾಗುತ್ತದೆ. ಮತ್ತೆ ಯಾವ ಪ್ರಕಾರ ಆ ಪದ್ಮರಾಗರತ್ನವು ಬೇರೆ ಕಡಿಮೆ ಹಾಲಿನಲ್ಲಿ ಹಾಕಿದ ಮೇಲೆ ತನ್ನ ಪ್ರಭಾಸಮೂಹದ ಸಂಕೋಚದಿಂದ ಆ ಸ್ವಲ್ಪ ಹಾಲಿನಲ್ಲಿ ವ್ಯಾಪ್ತವಾಗುತ್ತದೆ ; ಅದೇ ಪ್ರಕಾರ ಜೀವವು ಬೇರೆ ಚಿಕ್ಕ ಶರೀರದಲ್ಲಿ ಸ್ಥಿತಿಗೆ ಪ್ರಾಪ್ತವಾದ ಮೇಲೆ ತನ್ನ ಪ್ರದೇಶಗಳ ಸಂಕೋಚದ ಮುಖಾಂತರ ಆ ಪುಟ್ಟ ಶರೀರದಲ್ಲಿ ವ್ಯಾಪ್ತವಾಗುತ್ತದೆ.

ಭಾವಾರ್ಥ ಃ- ಮೂರು ಲೋಕ ಮತ್ತು ಮೂರು ಕಾಲದ ಸಮಸ್ತ ದ್ರವ್ಯ-ಗುಣ-ಪರ್ಯಾಯಗಳನ್ನು ಒಂದು ಸಮಯದಲ್ಲಿ ಪ್ರಕಾಶಿತಗೊಳಿಸುವಲ್ಲಿ ಸಮರ್ಥವಾದಂಥ ವಿಶುದ್ಧ-ದರ್ಶನ ಜ್ಞಾನಸ್ವಭಾವವುಳ್ಳ ಚೈತನ್ಯ ಚಮತ್ಕಾರಮಾತ್ರ ಶುದ್ಧಜೀವಾಸ್ತಿಕಾಯದಿಂದ ವಿಲಕ್ಷಣವಾದ ಮಿಥ್ಯಾತ್ವರಾಗಾದಿ ವಿಕಲ್ಪಗಳಿಂದ ಉಪಾರ್ಜಿಸಲ್ಪಟ್ಟ ಯಾವ ಶರೀರನಾಮಕರ್ಮವಿದೆ ಅದರಿಂದ ಜನಿತವಾದ (ಎಂದರೆ ಆ ಶರೀರನಾಮಕರ್ಮದ ಉದಯವು ಯಾವುದರಲ್ಲಿ ನಿಮಿತ್ತವಿದೆ ಅಂಥ) ಸಂಕೋಚ ವಿಸ್ತಾರದ ಆಧೀನರೂಪದಿಂದ ಜೀವವು ಸರ್ವೋತ್ಕೃಷ್ಟ ಅವಗಾಹರೂಪದಿಂದ ಪರಿಣಮಿಸುತ್ತ ಸಹಸ್ರ ಯೋಜನಪ್ರಮಾಣದ ಮಹಾಮತ್ಸ್ಯದ ಶರೀರದಲ್ಲಿ ವ್ಯಾಪ್ತವಾಗುತ್ತದೆ, ಜಘನ್ಯ ಅವಗಾಹರೂಪದಿಂದ ಪರಿಣಮಿಸುತ್ತ ಉತ್ಸೇಧ ಘನಾಂಗುಲದ ಅಸಂಖ್ಯಾತದ ಭಾಗದಷ್ಟು ಲಬ್ಧ್ಯ

---

೧. ಅವ್ಯತಿರಿಕ್ತ - ಅಭಿನ್ನ, [ಯಾವ ಪ್ರಕಾರ ''ಕಲ್ಲು ಸಕ್ಕರೆ ಒಂದು ದ್ರವ್ಯವಿದೆ ಮತ್ತು ಸಿಹಿ ಅದರ ಗುಣವಿದೆ'' - ಹೀಗೆ ಎಲ್ಲಿಯಾದರೂ ದೃಷ್ಟಾಂತದಲ್ಲಿ ಹೇಳಿದ್ದಾರೆ ಅದನ್ನು ಸಿದ್ಧಾಂತರೂಪವಾಗಿ ತಿಳಿದುಕೊಳ್ಳಬಾರದು ; ಅದೇ ಪ್ರಕಾರ ಇಲ್ಲಿಯೂ ಜೀವದ ಸಂಕೋಚ - ವಿಸ್ತಾರರೂಪವಾದ ದಾರ್ಷ್ಟಾಂತವನ್ನು ತಿಳಿದುಕೊಳ್ಳುವುದಕ್ಕಾಗಿ ರತ್ನ ಮತ್ತು (ಹಾಲಿನಲ್ಲಿ ಹರಡಿದ) ಅದರ ಪ್ರಭೆಗೆ ಯಾವ ಅವ್ಯತಿರಿಕ್ತತೆಯನ್ನು ಹೇಳಿದೆ ಅದನ್ನು ಸಿದ್ಧಾಂತರೂಪವಾಗಿ ತಿಳಿದುಕೊಳ್ಳಬಾರದು. ಪುದ್ಗಲಾತ್ಮಕವಾದ ರತ್ನವನ್ನು ದೃಷ್ಟಾಂತಮಾಡಿ ಅಸಂಖ್ಯ ಪ್ರದೇಶಿಯಾದ ಜೀವದ್ರವ್ಯದ ಸಂಕೋಚ - ವಿಸ್ತಾರವನ್ನು ಯಾವುದೇ ಪ್ರಕಾರದಿಂದ ತಿಳಿಸಿಕೊಡುವ ಉದ್ದೇಶದಿಂದ ಇಲ್ಲಿ ರತ್ನದ ಪ್ರಭೆಯನ್ನು ರತ್ನದಿಂದ ಅಭಿನ್ನವೆಂದು ಹೇಳಿದೆ (ಎಂದರೆ ರತ್ನದ ಪ್ರಭೆಯು ಸಂಕೋಚ-ವಿಸ್ತಾರಕ್ಕೆ ಪ್ರಾಪ್ತವಾದ ಮೇಲೆ ರತ್ನದ ಅಂಶವೇ-ರತ್ನವೇ-ಸಂಕೋಚ-ವಿಸ್ತಾರಕ್ಕೆ ಪ್ರಾಪ್ತವಾಗಿದೆಯೆಂದು ತಿಳಿದುಕೊಳ್ಳುವುದಕ್ಕೆ ಹೇಳಿದೆ.)]

ಸವ್ವತ್ಥ ಅತ್ಥಿ ಜೀವೋ ಣ ಯ ಏಕ್ಕೋ ಏಕ್ಕಕಾಯ ಏಕ್ಕಟ್ಠೋ ।
ಅಜ್ಝವಸಾಣವಿಸಿಟ್ಠೋ ಚಿಟ್ಠದಿ ಮಲಿಣೋ ರಜಮಲೇಹಿಂ ॥೩೪॥

ಸರ್ವತ್ರಾಸ್ತಿ ಜೀವೋ ನ ಚೈಕ ಏಕಕಾಯೇ ಐಕ್ಯಸ್ಥಃ ।
ಅಧ್ಯವಸಾನವಿಶಿಷ್ಟಶ್ಚೇಷ್ಟತೇ ಮಲಿನೋ ರಜೋಮಲೈಃ ॥೩೪॥

ಅತ್ರ ಜೀವಸ್ಯ ದೇಹಾದ್ದೇಹಾಂತರೇऽಸ್ತಿತ್ವಂ , ದೇಹಾತ್ಪೃಥಗ್ಭೂತತ್ವಂ , ದೇಹಾಂತರಸಂಚರಣಕಾರಣಂ ಚೋಪನ್ಯಸ್ತಮ್ ।

ಆತ್ಮಾ ಹಿ ಸಂಸಾರಾವಸ್ಥಾಯಾಂ ಕ್ರಮವರ್ತಿನ್ಯನವಚ್ಛಿನ್ನಶರೀರಸಂತಾನೇ ಯಥೈಕಸ್ಮಿನ್ ಶರೀರೇ ವೃತ್ತಃ ತಥಾ ಕ್ರಮೇಣಾನ್ಯೇಷ್ವಪಿ ಶರೀರೇಷು ವರ್ತತ ಇತಿ ತಸ್ಯ ಸರ್ವತ್ರಾಸ್ತಿತ್ವಮ್ । ನ ಚೈಕಸ್ಮಿನ್ ಶರೀರೇ ನೀರೇ ಕ್ಷೀರಮಿವೈಕ್ಯೇನ ಸ್ಥಿತೋऽಪಿ ಭಿನ್ನಸ್ವಭಾವತ್ವಾತ್ತೇನ ಸಹೈಕ ಇತಿ ತಸ್ಯ ದೇಹಾತ್ಪೃಥಗ್ಭೂತತ್ವಮ್ । ಅನಾದಿಬಂಧನೋಪಾಧಿವಿವರ್ತಿತವಿವಿಧಾಧ್ಯವಸಾಯ ವಿಶಿಷ್ಟತ್ವಾತ್ತನ್ಮೂಲಕರ್ಮಜಾಲಮಲೀಮಸತ್ವಾಚ್ಚ ಚೇಷ್ಟಮಾನಸ್ಯಾತ್ಮನಸ್ತಥಾ-ವಿಧಾಧ್ಯವಸಾಯಕರ್ಮನಿರ್ವರ್ತಿತೇತರಶರೀರ ಪ್ರವೇಶೋಭವತೀತಿ ತಸ್ಯ ದೇಹಾಂತರಸಂಚರಣಕಾರಣೋಪನ್ಯಾಸ ಇತಿ ।

ಪರ್ಯಾಪ್ತವಾದ ಸೂಕ್ಷ್ಮ ನಿಗೋದದ ಶರೀರದಲ್ಲಿ ವ್ಯಾಪ್ತವಾಗುತ್ತದೆ ಮತ್ತು ಮಧ್ಯಮ ಅವಗಾಹರೂಪದಿಂದ ಪರಿಣಮಿಸುತ್ತ ಮಧ್ಯಮಶರೀರದಲ್ಲಿ ವ್ಯಾಪ್ತವಾಗುತ್ತದೆ.

ಗಾಥೆ - ೩೪

ಗಾಥಾರ್ಥ :- [ಜೀವೋ] ಜೀವವು [ಸವ್ವತ್ಥ] ಎಲ್ಲೆಡೆಗೆ (ಕ್ರಮವರ್ತಿಯಾದ ಎಲ್ಲ ಶರೀರಗಳಲ್ಲಿ [ಅತ್ಥಿ] ಇದೆ [ಯ] ಮತ್ತು [ಏಕ್ಕಕಾಯ] ಯಾವುದೇ ಒಂದು ಶರೀರದಲ್ಲಿ [ಏಕ್ಕಟ್ಠೋ] (ಕ್ಷೀರನೀರಿನಂತೆ) ಏಕರೂಪದಿಂದ ಇರುತ್ತಿದ್ದರೂ [ಣ ಏಕ್ಕೋ] ಅದರೊಡನೆ ಏಕವಾಗಿಲ್ಲ ; [ಅಜ್ಝವಸಾಣವಿಸಿಟ್ಠೋ] ಅಧ್ಯವಸಾನಗಳಿಂದ ವಿಶಿಷ್ಟವಾಗಿ ವರ್ತಿಸುತ್ತ [ರಜಮಲೇಹಿಂ ಮಲಿಣೋ] ರಜಮಲ (ಕರ್ಮಮಲ) ದಿಂದ ಮಲಿನವಾಗುವುದರಿಂದ [ಚಿಟ್ಠದಿ] ಅದು ಭ್ರಮಣ ಮಾಡುತ್ತದೆ.

ಟೀಕೆ :- ಇಲ್ಲಿ ದೇಹದಿಂದ ದೇಹಾಂತರದಲ್ಲಿ (ಒಂದು ಶರೀರದಿಂದ ಇನ್ನೊಂದು ಶರೀರದಲ್ಲಿ) ಜೀವದ ಅಸ್ತಿತ್ವ, ದೇಹದಿಂದ ಅದರ ಪೃಥಕತ್ವ ಹಾಗೂ ದೇಹಾಂತರದಲ್ಲಿ ಅದರ ಗಮನದ ಕಾರಣವನ್ನು ಹೇಳಿದೆ.

ಆತ್ಮನು ಸಂಸಾರ-ಅವಸ್ಥೆಯಲ್ಲಿ ಕ್ರಮವರ್ತಿ ಅಚ್ಛಿನ್ನ (ಅಖಂಡ) ಶರೀರ ಪ್ರವಾಹದಲ್ಲಿ ಯಾವ ಪ್ರಕಾರ ಒಂದು ಶರೀರದಲ್ಲಿ ವರ್ತಿಸುತ್ತಾನೆ ಅದೇ ಪ್ರಕಾರ ಕ್ರಮದಿಂದ ಇತರ ಶರೀರಗಳಲ್ಲಿಯೂ ವರ್ತಿಸುತ್ತಾನೆ - ಹೀಗೆ ಅವನಿಗೆ ಎಲ್ಲೆಡೆಗೆ (ಎಲ್ಲ ಶರೀರಗಳಲ್ಲಿ) ಅಸ್ತಿತ್ವವಿದೆ. ಮತ್ತು ಯಾವುದೇ ಒಂದು ಶರೀರದಲ್ಲಿ ನೀರಿನಲ್ಲಿ ಹಾಲಿನಂತೆ

ಜೀವವೆಲ್ಲೆಡೆಯಿದ್ದು ಪ್ರಾಪ್ತಶರೀರದಲ್ಲೈಕ್ಯರೂಪವಿದ್ದರೂ ಏಕವಾಗಿಲ್ಲ ।
ಜೀವ ವಿವಿಧಅಧ್ಯವಸಾಯಯುತ ರಜಮಲಮಲಿನದಿಂ ಭ್ರಮಿಸುವುದು ॥೩೪॥

ಜೇಸಿಂ ಜೀವಸಹಾವೋ ಣತ್ಥಿ ಅಭಾವೋ ಯ ಸವ್ವಹಾ ತಸ್ಸ ।
ತೇ ಹೋಂತಿ ಭಿಣ್ಣದೇಹಾ ಸಿದ್ಧಾ ವಚಿಗೋಯರಮದೀದಾ ॥೩೫॥

ಯೇಷಾಂ ಜೀವಸ್ವಭಾವೋ ನಾಸ್ತ್ಯಭಾವಶ್ಚ ಸರ್ವಥಾ ತಸ್ಯ ।
ತೇ ಭವಂತಿ ಭಿನ್ನದೇಹಾಃ ಸಿದ್ಧಾ ವಾಗ್ಗೋಚರಮತೀತಾಃ ॥೩೫॥

ಸಿದ್ಧಾನಾಂ ಜೀವತ್ವದೇಹಮಾತ್ರತ್ವವ್ಯವಸ್ಥೇಯಂ ।

ಸಿದ್ಧಾನಾಂ ಹಿ ದ್ರವ್ಯಪ್ರಾಣಧಾರಣಾತ್ಮಕೋ ಮುಖ್ಯತ್ವೇನ ಜೀವಸ್ವಭಾವೋ ನಾಸ್ತಿ । ನ ಚ ಜೀವಸ್ವಭಾವಸ್ಯ ಸರ್ವಥಾಭಾವೋಽಸ್ತಿ ಭಾವಪ್ರಾಣಧಾರಣಾತ್ಮಕಸ್ಯ ಜೀವಸ್ವಭಾವಸ್ಯ ಮುಖ್ಯತ್ವೇನ ಸದ್ಭಾವಾತ್ । ನ ಚ ತೇಷಾಂ ಶರೀರೇಣ ಸಹ ನೀರಕ್ಷೀರಯೋರಿವೈಕ್ಯೇನ ವೃತ್ತಿಃ ಯತಸ್ತೇ ತತ್ಸಂಪರ್ಕಹೇತುಭೂತಕಷಾಯಯೋಗವಿ-ಪ್ರಯೋಗಾದತೀತಾನಂತರಶರೀರಮಾತ್ರಾವಗಾಹಪರಿಣತತ್ವೇಽಪ್ಯತ್ಯಂತಭಿನ್ನದೇಹಾಃ । ವಾಚಾಂ ಗೋಚರಮತೀತಶ್ಚ ತನ್ಮಹಿಮಾ, ಯತಸ್ತೇ ಲೌಕಿಕಪ್ರಾಣಧಾರಣಮಂತರೇಣ ಶರೀರಸಂಬಂಧಮಂತರೇಣ ಚ ಪರಿಪ್ರಾಪ್ತನಿರುಪಾಧಿ ಸ್ವರೂಪಾಃ ಸತತಂ ಪ್ರತಪಂತೀತಿ ।

ಏಕರೂಪದಿಂದಿರುತ್ತಿದ್ದರೂ, ಭಿನ್ನ ಸ್ವಭಾವದ ಕಾರಣ ಅದರೊಡನೆ ಏಕ (ತದ್ರೂಪ)ವಾಗಿಲ್ಲ ; ಹೀಗೆ ಅವನಿಗೆ ದೇಹದಿಂದ ಪೃಥಕತ್ವವಿದೆ. ಅನಾದಿ ಬಂಧನರೂಪವಾದ ಉಪಾಧಿಯಿಂದ ವಿವರ್ತನ (ಪರಿವರ್ತನ) ಹೊಂದುವಂಥ ವಿವಿಧ ಅಧ್ಯವಸಾಯಗಳಿಂದ ವಿಶಿಷ್ಟವಾಗುವ ಕಾರಣ (ಅನೇಕ ಪ್ರಕಾರದ ಅಧ್ಯವಸಾಯವುಳ್ಳವನಾಗುವ ಕಾರಣ) ಹಾಗೂ ಆ ಅಧ್ಯವಸಾಯಗಳು ಯಾವುದರ ನಿಮಿತ್ತವಿವೆ ಅಂಥ ಕರ್ಮಸಮೂಹದಿಂದ ಮಲಿನವಾಗುವ ಕಾರಣ ಭ್ರಮಣ ಮಾಡುತ್ತಿರುವ ಆತ್ಮನಿಗೆ ಆಯಾ ವಿಧ ಅಧ್ಯವಸಾಯ ಹಾಗೂ ಕರ್ಮಗಳಿಂದ ನಿರ್ಮಿತವಾಗುವ (-ಆ ಪ್ರಕಾರದ ಮಿಥ್ಯಾತ್ವರಾಗಾದಿರೂಪ ಭಾವಕರ್ಮ ಹಾಗೂ ದ್ರವ್ಯಕರ್ಮಗಳಿಂದ ನಿರ್ಮಿತವಾಗುವ) ಇತರ ಶರೀರದಲ್ಲಿ ಪ್ರವೇಶವಾಗುತ್ತದೆ ; ಹೀಗೆ ಅವನಿಗೆ ದೇಹಾಂತರಗಳಲ್ಲಿ ಗಮನವಾಗುವ ಕಾರಣವನ್ನು ಹೇಳಿತು.

ಗಾಥೆ - ೩೫

ಗಾಥಾರ್ಥ :- [ಜೇಸಿಂ] ಯಾರಿಗೆ [ಜೀವಸಹಾವೋ] ಜೀವ ಸ್ವಭಾವ (ಪ್ರಾಣಧಾರಣರೂಪ ಜೀವತ್ವ) [ಣತ್ಥಿ] ಇಲ್ಲ ಮತ್ತು [ಸವ್ವಹಾ] ಸರ್ವಥಾ [ತಸ್ಸ ಅಭಾವೋ ಯ] ಅದರ ಅಭಾವವೂ ಕೂಡ ಇಲ್ಲ, [ತೇ] ಅವರು [ಭಿಣ್ಣದೇಹಾ] ದೇಹರಹಿತ [ವಚಿಗೋಯರಮದೀದಾ] ವಚನಗೋಚರಾತೀತ [ಸಿದ್ಧಾ ಹೋಂತಿ] ಸಿದ್ಧ (ಭಗವಂತ)ರಿದ್ದಾರೆ.

ಟೀಕೆ :- ಇದು ಸಿದ್ಧರ (ಸಿದ್ಧಭಗವಂತರ) ಜೀವತ್ವ -ಮತ್ತು ದೇಹಪ್ರಮಾಣತ್ವದ ವ್ಯವಸ್ಥೆಯಿದೆ.

ವಾಸ್ತವಿಕವಾಗಿ ಸಿದ್ಧರಿಗೆ ದ್ರವ್ಯಪ್ರಾಣವನ್ನು ಧಾರಣ ಮಾಡುವ ಸ್ವರೂಪದ ಜೀವಸ್ವಭಾವವು

ಯಾರಿಗೆ ಜೀವತ್ವವಿಲ್ಲ ಮೇಣ್ ಸರ್ವಥಾ ಅದರ ಅಭಾವಕೂಡ ತಾನಿಲ್ಲ ।
ಅವರು ದೇಹರಹಿತವಚನಗೋಚರಾತೀತ ಸಿದ್ಧರಾಗಿರುವರು ॥೩೫॥

ಣ ಕುದೋಚಿ ವಿ ಉಪ್ಪಣ್ಣೋ ಜಮ್ಹಾ ಕಜ್ಜಂ ಣ ತೇಣ ಸೋ ಸಿದ್ಧೋ ।
ಉಪ್ಪಾದೇದಿ ಣ ಕಿಂಚಿ ವಿ ಕಾರಣಮವಿ ತೇಣ ಣ ಸ ಹೋದಿ ॥೩೬॥

ನ ಕುತಶ್ಚಿದಪ್ಯುತ್ಪನ್ನೋ ಯಸ್ಮಾತ್ ಕಾರ್ಯಂ ನ ತೇನ ಸಃ ಸಿದ್ಧಃ ।
ಉತ್ಪಾದಯತಿ ನ ಕಿಂಚಿದಪಿ ಕಾರಣಮಪಿ ತೇನ ನ ಸ ಭವತಿ ॥೩೬॥

ಸಿದ್ಧಸ್ಯ ಕಾರ್ಯಕಾರಣಭಾವನಿರಾಸೋಽಯಮ್ ।

ಯಥಾ ಸಂಸಾರೀ ಜೀವೋ ಭಾವಕರ್ಮರೂಪಯಾತ್ಮಪರಿಣಾಮಸಂತತ್ಯಾ ದ್ರವ್ಯಕರ್ಮರೂಪಯಾ ಚ ಪುದ್ಗಲಪರಿಣಾಮಸಂತತ್ಯಾ ಕಾರಣಭೂತಯಾ ತೇನ ತೇನ ದೇವಮನುಷ್ಯತಿರ್ಯಗ್ನಾರಕರೂಪೇಣ ಕಾರ್ಯಭೂತ

ಮುಖ್ಯರೂಪದಿಂದಿಲ್ಲ ; (ಅವರಿಗೆ) ಸರ್ವಥಾ ಜೀವಸ್ವಭಾವದ ಅಭಾವವೂ ಇಲ್ಲ, ಏಕೆಂದರೆ ಭಾವಪ್ರಾಣವನ್ನು ಧಾರಣ ಮಾಡುವ ಸ್ವರೂಪವುಳ್ಳ ಜೀವಸ್ವಭಾವದ ಸದ್ಭಾವವು ಮುಖ್ಯರೂಪದಿಂದಿದೆ. ಮತ್ತು ಅವರಿಗೆ ಶರೀರದೊಡನೆ ನೀರಕ್ಷೀರದ ಹಾಗೆ ಏಕರೂಪ ವೃತ್ತಿ[೧]ಯಿಲ್ಲ ; ಏಕೆಂದರೆ ಶರೀರ ಸಂಯೋಗಕ್ಕೆ ಹೇತುಭೂತವಾದ ಕಷಾಯ ಮತ್ತು ಯೋಗದ ವಿಯೋಗವಾಗಿರುವುದರಿಂದ ಅವರು ಅತೀತ[೨] ಅನಂತರ ಶರೀರ ಪ್ರಮಾಣ ಅವಗಾಹರೂಪರಾಗಿ ಪರಿಣತರಾದರೂ ಅತ್ಯಂತ ದೇಹರಹಿತರಿದ್ದಾರೆ. ಮತ್ತು ಅವರ ಮಹಿಮೆಯು ವಚನಗೋಚರಾತೀತ[೩]ವಿದೆ ; ಏಕೆಂದರೆ ಲೌಕಿಕ ಪ್ರಾಣದ ಧಾರಣವಿಲ್ಲದೆ ಮತ್ತು ಶರೀರದ ಸಂಬಂಧವಿಲ್ಲದೆ ಸಂಪೂರ್ಣರೂಪದಿಂದ ಪ್ರಾಪ್ತಮಾಡಿಕೊಂಡ ನಿರುಪಾಧಿಸ್ವರೂಪದಿಂದ ಅವರು ಯಾವಾಗಲೂ ಪ್ರವರ್ತಿಸುತ್ತಾರೆ.

ಗಾಥೆ - ೩೬

ಗಾಥಾರ್ಥ :- [ಜಮ್ಹಾ ಸೋ ಸಿದ್ಧೋ] ಆ ಸಿದ್ಧರು [ಕುದೋಚಿ ವಿ] ಯಾವುದೇ (ಬೇರೆ) ಕಾರಣದಿಂದ [ಣ ಉಪ್ಪಣ್ಣೋ] ಉತ್ಪನ್ನವಾಗುವುದಿಲ್ಲ [ತೇಣ] ಆದುದರಿಂದ [ಕಜ್ಜಂ ಣ] (ಅವರು) ಕಾರ್ಯವಿಲ್ಲ, ಮತ್ತು [ಕಿಂಚಿ ವಿ] ಯಾವುದೇ (ಬೇರೆ ಕಾರ್ಯವನ್ನು) [ಣ ಉಪ್ಪಾದೇದಿ] ಉತ್ಪನ್ನ ಮಾಡುವುದಿಲ್ಲ [ತೇಣ] ಅದಕ್ಕಾಗಿ [ಸ] ಅವರು [ಕಾರಣಮವಿ] ಕಾರಣವೂ [ಣ ಹೋದಿ] ಇಲ್ಲ.

ಯಾವ ಕಾರಣದಿಂದ ಉತ್ಪನ್ನರಾಗದುದರಿಂದಾ ಸಿದ್ಧರು ಕಾರ್ಯವಾಗಿಲ್ಲ ।
ಯಾವುದನುತ್ಪನ್ನಮಾಡದುದರಿಂದವರು ಕಾರಣರು ಕೂಡ ತಾವಿಲ್ಲ ॥೩೬॥

---

೧. ವೃತ್ತಿ - ವರ್ತನೆ ; ಅಸ್ತಿತ್ವ.

೨. ಅತೀತ ಅನಂತರ - ಭೂತಕಾಲದ ಎಲ್ಲಕ್ಕಿಂತ ಕೊನೆಯ ; ಚರಮ. (ಸಿದ್ಧಭಗವಂತರ ಅವಗಾಹನವು ಚರಮ ಶರೀರ ಪ್ರಮಾಣವಿರುವ ಕಾರಣ ಆ ಕೊನೆಯ ಶರೀರದ ಅಪೇಕ್ಷೆಯಿಂದ ಅವರಿಗೆ 'ದೇಹಪ್ರಮಾಣತೆ'ಯೆಂದು ಹೇಳಲಾಗುತ್ತಿದ್ದರೂ ಅವರು ದೇಹದಿಂದ ಅತ್ಯಂತ ರಹಿತರಿದ್ದಾರೆ.)

೩. ವಚನಗೋಚರಾತೀತ - ಯಾವನು ವಚನಗೋಚರತೆಯ ಅತಿಕ್ರಮಣ ಮಾಡಿದ್ದಾನೆ ; ವಚನವಿಷಯಾತೀತ; ವಚನ ಅಗೋಚರ.

ಉತ್ಪದ್ಯತೇ, ನ ತಥಾ ಸಿದ್ಧರೂಪೇಣಾಪೀತಿ । ಸಿದ್ಧೋ ಹ್ಯುಭಯಕರ್ಮಕ್ಷಯೇ ಸ್ವಯಮುತ್ಪದ್ಯಮಾನೋ ನಾನ್ಯತಃ ಕುತಶ್ಚಿದುತ್ಪದ್ಯತ ಇತಿ । ಯಥೈವ ಚ ಸ ಏವ ಸಂಸಾರೀ ಭಾವಕರ್ಮರೂಪಾಮಾತ್ಮಪರಿಣಾಮಸಂತತಿಂ ದ್ರವ್ಯಕರ್ಮರೂಪಾಂ ಚ ಪುದ್ಗಲಪರಿಣಾಮಸಂತತಿಂ ಕಾರ್ಯಭೂತಾಂ ಕಾರಣಭೂತತ್ವೇನ ನಿರ್ವರ್ತಯನ್ ತಾನಿ ತಾನಿ ದೇವಮನುಷ್ಯತಿರ್ಯಗ್ನಾರಕರೂಪಾಣಿ ಕಾರ್ಯಾಣ್ಯುತ್ಪಾದಯತ್ಯಾತ್ಮನೋ ನ ತಥಾ ಸಿದ್ಧರೂಪಮಪೀತಿ । ಸಿದ್ಧೋ ಹ್ಯುಭಯಕರ್ಮಕ್ಷಯೇ ಸ್ವಯಮಾತ್ಮಾನಮುತ್ಪಾದಯನ್ನಾನ್ಯತ್ಕಿಂಚಿದುತ್ಪಾದಯತಿ ।

ಸಸ್ಸದಮಧ ಉಚ್ಛೇದಂ ಭವ್ವಮಭವ್ವಂ ಚ ಸುಣ್ಣಮಿದರಂ ಚ ।
ವಿಣ್ಣಾಣಮವಿಣ್ಣಾಣಂ ಣ ವಿ ಜುಜ್ಜದಿ ಅಸದಿ ಸಬ್ಭಾವೇ ॥೩೭॥

ಶಾಶ್ವತಮಥೋಚ್ಛೇದೋ ಭವ್ಯಮಭವ್ಯಂ ಚ ಶೂನ್ಯಮಿತರಚ್ಚ।
ವಿಜ್ಞಾನಮವಿಜ್ಞಾನಂ ನಾಪಿ ಯುಜ್ಯತೇ ಅಸತಿ ಸದ್ಭಾವೇ ॥೩೭॥

ಅತ್ರ ಜೀವಾಭಾವೋ ಮುಕ್ತಿರಿತಿ ನಿರಸ್ತಮ್ ।

ಟೀಕೆ :- ಇಲ್ಲಿ ಸಿದ್ಧರಿಗೆ ಕಾರ್ಯಕಾರಣಭಾವವಾಗುವ ನಿರಾಸವಿದೆ (ಎಂದರೆ ಸಿದ್ಧಭಗವಂತರಿಗೆ ಕಾರ್ಯತನ ಮತ್ತು ಕಾರಣತನವಾಗುವ ನಿರಾಕರಣೆಯಿದೆ - ಖಂಡನೆಯಿದೆ.)

ಯಾವ ಪ್ರಕಾರ ಸಂಸಾರಿ ಜೀವವು ಕಾರಣಭೂತವಾದಂಥ ಭಾವಕರ್ಮರೂಪ ಆತ್ಮಪರಿಣಾಮ ಸಂತತಿ[೧] ಮತ್ತುದ್ರವ್ಯಕರ್ಮರೂಪ ಪುದ್ಗಲಪರಿಣಾಮಸಂತತಿಯಿಂದ ಆಯಾಯ ದೇವ-ಮನುಷ್ಯ-ತಿರ್ಯಂಚ-ನಾರಕದ ರೂಪದಲ್ಲಿ ಕಾರ್ಯಭೂತರೂಪದಿಂದ ಉತ್ಪನ್ನವಾಗುತ್ತದೆ. ಅದೇ ಪ್ರಕಾರ ಸಿದ್ಧರೂಪದಿಂದಲೂ ಉತ್ಪನ್ನವಾಗುತ್ತದೆಂಬುದಾಗಿಲ್ಲ ; (ಮತ್ತು) ಸಿದ್ಧರು (ಸಿದ್ಧ ಭಗವಂತರು) ವಾಸ್ತವವಾಗಿ ಎರಡೂ ಕರ್ಮಗಳ ಕ್ಷಯವಾದ ಮೇಲೆ ತಾವು (ಸಿದ್ಧರೂಪದಿಂದ) ಉತ್ಪನ್ನವಾಗುತ್ತ ಬೇರೆ ಯಾವುದೇ ಕಾರಣದಿಂದ (ಭಾವಕರ್ಮದಿಂದ ಅಥವಾ ದ್ರವ್ಯಕರ್ಮದಿಂದ) ಉತ್ಪನ್ನವಾಗುವುದಿಲ್ಲ.

ಮತ್ತೆ ಯಾವ ಪ್ರಕಾರ ಅದೇ ಸಂಸಾರಿಯು (ಜೀವವು) ಕಾರಣಭೂತವಾಗಿ ಕಾರ್ಯಭೂತವಾದಂಥ ಭಾವಕರ್ಮರೂಪ ಆತ್ಮಪರಿಣಾಮಸಂತತಿ ಮತ್ತು ದ್ರವ್ಯಕರ್ಮರೂಪ ಪುದ್ಗಲಪರಿಣಾಮಸಂತತಿಯನ್ನು ರಚಿಸುತ್ತ ಕಾರ್ಯಭೂತವಾದಂಥ ಆಯಾಯ ದೇವ-ಮನುಷ್ಯ-ತಿರ್ಯಂಚ-ನಾರಕರೂಪಗಳನ್ನು ತನ್ನಲ್ಲಿ ಉತ್ಪನ್ನ ಮಾಡುತ್ತದೆ, ಅದೇ ಪ್ರಕಾರ ಸಿದ್ಧರೂಪವೂ (ತನ್ನಲ್ಲಿ) ಉತ್ಪನ್ನಮಾಡುತ್ತದೆಯೆಂಬುದಾಗಿಲ್ಲ ; (ಮತ್ತು) ಸಿದ್ಧರು ವಾಸ್ತವದಲ್ಲಿ ಎರಡೂ ಕರ್ಮಗಳು ಕ್ಷಯವಾದ ಮೇಲೆ ತಾವು ತಮ್ಮನ್ನು (ಸಿದ್ಧರೂಪದಿಂದ) ಉತ್ಪನ್ನ ಮಾಡುತ್ತ ಬೇರೆ ಏನನ್ನೂ (ಭಾವದ್ರವ್ಯಕರ್ಮಸ್ವರೂಪ ಅಥವಾ ದೇವಾದಿಸ್ವರೂಪಕಾರ್ಯವನ್ನು) ಉತ್ಪನ್ನ ಮಾಡುವುದಿಲ್ಲ.

ಯಾವ ಸದ್ಭಾವವಿಲ್ಲದಿದ್ದರೆ ಶಾಶ್ವತ, ಅಶಾಶ್ವತ, ಭವ್ಯ , ಅಭವ್ಯಮೇಣ್ ।
ಈ ವಿಜ್ಞಾನ, ಅವಿಜ್ಞಾನ, ಶೂನ್ಯ , ಅಶೂನ್ಯವೆಂಬಿವು ಹೇಗೆ ಸಂಭವಿಸುವವು ॥೩೭॥

---

೧. ಆತ್ಮಪರಿಣಾಮಸಂತತಿ = ಆತ್ಮನ ಪರಿಣಾಮಗಳ ಪರಂಪರೆ.

द्रव्यं द्रव्यतयाऽ शाश्वतमिति, नित्ये द्रव्ये पर्यायाणां प्रतिसमयमुच्छेद इति, द्रव्यस्य सर्वदा अभूतपर्यायैः भाव्यमिति, द्रव्यस्य सर्वदा भूतपर्यायैरभाव्यमिति, द्रव्यमन्यद्रव्यै र्न सदा शून्यमिति, द्रव्यं स्वद्रव्येण सदाऽशून्यमिति, क्वचिज्जीवद्रव्येऽनंतं ज्ञानं क्वचित्सान्तं ज्ञानमिति, क्वचिज्जीवद्रव्येऽनंतं क्वचित्सान्तमज्ञानमिति - एतदन्यथानुपपद्यमानं मुक्तौ जीवस्य सद्भावमावेदयतीति।

ಗಾಥೆ - ೩೭

ಗಾಥಾರ್ಥ :- [सब्भावे असदि] ಒಂದು ವೇಳೆ (ಮೋಕ್ಷದಲ್ಲಿ ಜೀವದ) ಸದ್ಭಾವವಿಲ್ಲದಿದ್ದರೆ [ससदमध] ಶಾಶ್ವತ, [उच्छेदं] ನಾಶವಂತ, [भव्यं] ಭವ್ಯ (-ಆಗಲು ಯೋಗ್ಯ), [अभव्यं च] ಅಭವ್ಯ (-ಆಗಲು ಯೋಗ್ಯವಿಲ್ಲದ) [सुण्णं] ಶೂನ್ಯ, [इदरं च] ಅಶೂನ್ಯ, [विण्णाण्णं] ವಿಜ್ಞಾನ ಮತ್ತು [अविण्णाण्णं] ಅವಿಜ್ಞಾನವು [ण वि जुज्जदि] (ಜೀವ ದ್ರವ್ಯದಲ್ಲಿ) ಸಂಭವಿಸುವ ಸಾಧ್ಯತೆಯಿಲ್ಲ. (ಅದಕ್ಕಾಗಿ ಮೋಕ್ಷದಲ್ಲಿ ಜೀವದ ಸದ್ಭಾವವೇ ಇದೆ.)

ಟೀಕೆ :- ಇಲ್ಲಿ 'ಜೀವದ ಅಭಾವವು ಅದು ಮುಕ್ತಿಯಿದೆ' ಎಂಬ ಮಾತಿನ ಖಂಡನೆ ಮಾಡಿದೆ.

೧) ದ್ರವ್ಯವು ದ್ರವ್ಯರೂಪದಿಂದ ಶಾಶ್ವತವಿದೆ, ೨) ನಿತ್ಯದ್ರವ್ಯದಲ್ಲಿ ಪ್ರತಿಯೊಂದು ಸಮಯಕ್ಕೆ ಪರ್ಯಾಯದ ನಾಶವಾಗುತ್ತದೆ, ೩) ದ್ರವ್ಯವು ಯಾವಾಗಲೂ ಅಭೂತ ಪರ್ಯಾಯಗಳ ರೂಪದಿಂದ ಭಾವ್ಯ (-ಆಗಲು ಯೋಗ್ಯ, ಪರಿಣಮನವಾಗಲು ಯೋಗ್ಯ)ವಿದೆ, ೪) ದ್ರವ್ಯವು ಯಾವಾಗಲೂ ಭೂತ ಪರ್ಯಾಯಗಳ ರೂಪದಿಂದ ಅಭಾವ್ಯ (ಆಗಲು ಯೋಗ್ಯವಿಲ್ಲದ್ದು) ಇದೆ, ೫) ದ್ರವ್ಯವು ಇತರ ದ್ರವ್ಯಗಳಿಂದ ಯಾವಾಗಲೂ ಶೂನ್ಯವಿದೆ, ೬) ದ್ರವ್ಯವು ಸ್ವದ್ರವ್ಯದಿಂದ ಯಾವಾಗಲೂ ಅಶೂನ್ಯವಿದೆ, ೭) ಯಾವುದೇ [೧] ಜೀವ ದ್ರವ್ಯದಲ್ಲಿ ಅನಂತಜ್ಞಾನವಿದೆ ಮತ್ತು ಯಾವುದರಲ್ಲಿ ಸಾಂತಜ್ಞಾನವಿದೆ, ೮) ಯಾವುದೇ [೨] ಜೀವದ್ರವ್ಯದಲ್ಲಿ ಅನಂತ ಅಜ್ಞಾನವಿದೆ ಮತ್ತು ಯಾವುದರಲ್ಲಿ ಸಾಂತ ಅಜ್ಞಾನವಿದೆ - ಇದೆಲ್ಲವು ಅನ್ಯಥಾ[೩] ಸಂಭವಿಸದೆ ಮೋಕ್ಷದಲ್ಲಿ ಜೀವದ ಸದ್ಭಾವವನ್ನು ಪ್ರಕಟಪಡಿಸುತ್ತದೆ.

---

೧. ಯಾವನಿಗೆ ಸಮ್ಯಕ್ತ್ವದಿಂದ ಚ್ಯುತವಾಗುವುದಿಲ್ಲ ಅಂಥ ಸಮ್ಯಕ್ತ್ವಿಯಾದ ಜೀವನಿಗೆ ಅನಂತ ಜ್ಞಾನವಿದೆ ಮತ್ತು ಯಾವನಿಗೆ ಸಮ್ಯಕ್ತ್ವದಿಂದ ಚ್ಯುತವಾಗುವುದಿದೆ ಅಂಥ ಸಮ್ಯಕ್ತ್ವಿಯಾದ ಜೀವನಿಗೆ ಸಾಂತಜ್ಞಾನವಿದೆ.

೨. ಅಭವ್ಯ ಜೀವನಿಗೆ ಅನಂತ ಅಜ್ಞಾನವಿದೆ, ಮತ್ತು ಯಾವುದೇ ಒಂದು ಕಾಲದಲ್ಲೂ ಜ್ಞಾನವಾಗುವುದಿದೆ ಅಂಥ ಅಜ್ಞಾನಿ ಭವ್ಯ ಜೀವನಿಗೆ ಸಾಂತ ಅಜ್ಞಾನವಿದೆ.

೩. ಅನ್ಯಥಾ ಬೇರೆ ಪ್ರಕಾರದಿಂದ ; ಬೇರೆ ರೀತಿಯಿಂದ. ಮೋಕ್ಷದಲ್ಲಿ ಜೀವದ ಅಸ್ತಿತ್ವವೇ ಇಲ್ಲದಿರುತ್ತಿದ್ದರೆ ಮೇಲೆ ಹೇಳಿದ ಎಂಟು ಭಾವಗಳು ಸಂಭವಿಸುವ ಸಾಧ್ಯತೆಯೇ ಇಲ್ಲ. ಒಂದು ವೇಳೆ ಮೋಕ್ಷದಲ್ಲಿ ಜೀವದ ಅಭಾವವೇ ಆಗಿ ಹೋಗುತ್ತಿದ್ದರೆ ೧) ಪ್ರತಿಯೊಂದು ದ್ರವ್ಯವು ದ್ರವ್ಯರೂಪದಿಂದ ಶಾಶ್ವತವಿದೆಯೆಂಬ ಮಾತು ಹೇಗೆ ಸಂಭವಿಸುತ್ತದೆ ? ೨) ಪ್ರತಿಯೊಂದು ದ್ರವ್ಯವು ನಿತ್ಯವಿದ್ದು ಅದರಲ್ಲಿ ಪರ್ಯಾಯಗಳು ನಾಶವಾಗುತ್ತಿರುತ್ತವೆಯೆಂಬ ಮಾತು ಹೇಗೆ ಸಂಭವಿಸುತ್ತದೆ ? ೩-೬) ಪ್ರತಿಯೊಂದು ದ್ರವ್ಯವು ಸರ್ವದಾ ಅನಾಗತ ಪರ್ಯಾಯದಿಂದ ಭಾವ್ಯ, ಸರ್ವದಾ ಅತೀತ ಪರ್ಯಾಯದಿಂದ ಅಭಾವ್ಯ, ಸರ್ವದಾ ಪರದಿಂದ ಶೂನ್ಯ ಮತ್ತು ಸರ್ವದಾ ತನ್ನಿಂದ ಅಶೂನ್ಯ - ಈ ಮಾತುಗಳು ಹೇಗೆ ಸಂಭವಿಸುತ್ತವೆ ? ೭) ಯಾವುದೇ ಜೀವದ್ರವ್ಯದಲ್ಲಿ ಅನಂತಜ್ಞಾನವಿದೆಯೆಂಬ ಮಾತು ಹೇಗೆ ಸಂಭವಿಸುತ್ತದೆ? ಮತ್ತು ೮) ಯಾವುದೇ ಜೀವದ್ರವ್ಯದಲ್ಲಿ ಸಾಂತ ಅಜ್ಞಾನವಿದೆ (ಎಂದರೆ ಜೀವದ್ರವ್ಯವು ನಿತ್ಯವಿದ್ದು ಅದರಲ್ಲಿ ಅಜ್ಞಾನ ಪರಿಣಾಮದ ಕೊನೆ ಬರುತ್ತದೆ) - ಈ ಮಾತು ಹೇಗೆ ಸಂಭವಿಸುತ್ತದೆ ? ಅದಕ್ಕಾಗಿ ಈ ಎಂಟು ಭಾವಗಳಿಂದ ಮೋಕ್ಷದಲ್ಲಿ ಜೀವದ ಅಸ್ತಿತ್ವವು ಸಿದ್ಧವಾಗುತ್ತದೆ.

ಕಮ್ಮಾಣಂ ಫಲಮೇಕ್ಕೋ ಏಕ್ಕೋ ಕಜ್ಜಂ ತು ಣಾಣಮಧ ಏಕ್ಕೋ ।
ಚೇದಯದಿ ಜೀವರಾಸೀ ಚೇದಗಭಾವೇಣ ತಿವಿಹೇಣ ॥೫೮॥

ಕರ್ಮಣಾಂ ಫಲಮೇಕಃ ಏಕಃ ಕಾರ್ಯಂ ತು ಜ್ಞಾನಮಥೈಕಃ ।
ಚೇತಯತಿ ಜೀವರಾಶಿಶ್ಚೇತಕಭಾವೇನ ತ್ರಿವಿಧೇನ ॥೫೮॥

ಚೇತಯಿತೃತ್ವಗುಣವ್ಯಾಖ್ಯೇಯಮ್ ।

ಏಕೇ ಹಿ ಚೇತಯಿತಾರಃ ಪ್ರಕೃಷ್ಟತರಮೋಹಮಲೀಮಸೇನ ಪ್ರಕೃಷ್ಟತರಜ್ಞಾನಾವರಣಮುದ್ರಿತಾನುಭಾವೇನ ಚೇತಕಸ್ವಭಾವೇನ ಪ್ರಕೃಷ್ಟತರವೀರ್ಯಾಂತರಾಯಾವಸಾದಿತಕಾರ್ಯಕಾರಣಸಾಮರ್ಥ್ಯಾಃ ಸುಖದುಃಖರೂಪಂ ಕರ್ಮಫಲಮೇವ ಪ್ರಧಾನ್ಯೇನ ಚೇತಯಂತೇ । ಅನ್ಯೇ ತು ಪ್ರಕೃಷ್ಟತರಮೋಹಮಲೀಮಸೇನಾಪಿ ಪ್ರಕೃಷ್ಟಜ್ಞಾನಾವರಣಮುದ್ರಿತಾನುಭಾವೇನ ಚೇತಕಸ್ವಭಾವೇನ ಮನಾಗ್ವೀರ್ಯಾಂತರಾಯಕ್ಷಯೋಪಶಮಾಸಾದಿತ-

ಗಾಥೆ - ೫೮

ಗಾಥಾರ್ಥ ಃ- [ತಿವಿಹೇಣ ಚೇದಗಭಾವೇಣ] ಮೂರು ವಿಧವಾದ ಚೇತಕ ಭಾವಗಳಿಂದ [ಏಕ್ಕೋ ಜೀವರಾಸೀ] ಒಂದು ಜೀವರಾಶಿ [ಕಮ್ಮಾಣಂ ಫಲಂ] ಕರ್ಮಗಳ ಫಲವನ್ನು [ಏಕ್ಕೋ ತು] ಬೇರೆ ಒಂದು ಜೀವರಾಶಿ [ಕಜ್ಜಂ] ಕಾರ್ಯವನ್ನು [ಅಧ] ಮತ್ತು [ಏಕ್ಕೋ] ಒಂದು ಜೀವರಾಶಿ [ಣಾಣಂ] ಜ್ಞಾನವನ್ನು [ಚೇದಯದಿ] ಚೇತನ (ವೇದನ) ಮಾಡುತ್ತದೆ.

ಟೀಕೆ ಃ- ಇದು ಚೇತಯಿತೃತ್ವ[೧] ಗುಣದ ವ್ಯಾಖ್ಯೆಯಿದೆ.

ಯಾವನೋ ಚೇತಯಿತನು ಎಂದರೆ ಆತ್ಮನಂತೂ, ಯಾವ ಅತ್ಯಂತ ಪ್ರಕೃಷ್ಟ ಮೋಹದಿಂದ ಮಲಿನನಿದ್ದಾನೆ ಮತ್ತು ಅವನ ಪ್ರಭಾವವು (ಶಕ್ತಿಯು) ಅತ್ಯಂತ ಪ್ರಕೃಷ್ಟ ಜ್ಞಾನಾವರಣದಿಂದ ಮುಚ್ಚಿಹೋಗಿರುವಂಥ ಚೇತಕಸ್ವಭಾವದಿಂದ ಸುಖದುಃಖರೂಪವಾದ ಕರ್ಮಫಲವನ್ನೇ ಮುಖ್ಯವಾಗಿ ವೇದನ ಮಾಡುತ್ತಾನೆ, ಏಕೆಂದರೆ ಅವುಗಳ ತೀರ ಪ್ರಕೃಷ್ಟ ವೀರ್ಯಾಂತರಾಯದಿಂದ ಕಾರ್ಯ ಮಾಡುವ (ಕರ್ಮಚೇತನರೂಪವಾಗಿ ಪರಿಣಮನ ಮಾಡುವ) ಸಾಮರ್ಥ್ಯವು ನಷ್ಟವಾಗಿ ಹೋಗಿದೆ.

ಬೇರೆ ಚೇತಯಿತನು ಎಂದರೆ ಆತ್ಮನು ಯಾವ ಅತ್ಯಂತ ಪ್ರಕೃಷ್ಟ ಮೋಹದಿಂದ ಮಲಿನನಿದ್ದಾನೆ ಮತ್ತು ಅವನ ಸ್ವಭಾವವು ಪ್ರಕೃಷ್ಟ[೨] ಜ್ಞಾನಾವರಣದಿಂದ ಮುಚ್ಚಿ ಹೋಗಿದೆ ಅಂಥ ಚೇತಕಸ್ವಭಾವದಿಂದ ಬೇಕಾದರೆ ಸುಖ

ತ್ರಿವಿಧ ಚೇತಕಭಾವದಿಂದೊಂದು ಜೀವರಾಸಿಕರ್ಮಗಳಫಲವ ಮೇಣೊಂದು ।
ಜೀವರಾಸಿ ಕಾರ್ಯವನು ಮತ್ತೊಂದು ಜೀವರಾಸಿ ಜ್ಞಾನವನು ಚೇತಿಸುವುದು ॥೫೮॥

೧. ಚೇತಯಿತೃತ್ವ = ಚೇತಯಿತನ ; ಚೇತನ ಮಾಡುವತನ ; ಚೇತಕತನ.

೨. ಕರ್ಮಚೇತನವುಳ್ಳ ಜೀವನಿಗೆ ಜ್ಞಾನಾವರಣವು 'ಪ್ರಕೃಷ್ಟ'ವಿರುತ್ತದೆ ಮತ್ತು ಕರ್ಮಫಲಚೇತನವುಳ್ಳ ಜೀವನಿಗೆ ಅತ್ಯಂತ 'ಪ್ರಕೃಷ್ಟ'ವಿರುತ್ತದೆ.

ಕಾರ್ಯಕಾರಣಸಾಮರ್ಥ್ಯಾಃ ಸುಖದುಃಖರೂಪಕರ್ಮಫಲಾನುಭವನಸಂವಲಿತಮಪಿ ಕಾರ್ಯಮೇವ ಪ್ರಧಾನ್ಯೇನ ಚೇತಯಂತೇ । ಅನ್ಯತರೇ ತು ಪ್ರಕ್ಷಾಲಿತಸಕಲಮೋಹಕಲಂಕೇನ ಸಮುಚ್ಛಿನ್ನಕೃತ್ಸ್ನಜ್ಞಾನಾವರಣತಯಾತ್ಯಂತ-ಮುನ್ಮುದ್ರಿತಸಮಸ್ತಾನುಭಾವೇನ ಚೇತಕಸ್ವಭಾವೇನಸಮಸ್ತವೀರ್ಯಾಂತರಾಯಕ್ಷಯಾಸಾದಿತಾನಂತವೀರ್ಯಾ ಅಪಿ ನಿರ್ದೀರ್ಣಕರ್ಮಫಲತ್ವಾದತ್ಯಂತಕೃತಕೃತ್ಯತ್ವಾಚ್ಚ ಸ್ವತೋಽವ್ಯತಿರಿಕ್ತಸ್ವಾಭಾವಿಕ ಸುಖಂ ಜ್ಞಾನಮೇವ ಚೇತಯಂತ ಇತಿ।

ಸವ್ವೇ ಖಲು ಕಮ್ಮಫಲಂ ಥಾವರಕಾಯಾ ತಸಾ ಹಿ ಕಜ್ಜಜುದಂ ।
ಪಾಣಿತ್ತಮದಿಕ್ಕಂತಾ ಣಾಣಂ ವಿಂದಂತಿ ತೇ ಜೀವಾ ॥೩೯॥

ದುಃಖರೂಪ ಕರ್ಮಫಲದ ಅನುಭವದಿಂದ ಮಿಶ್ರಿತರೂಪದಿಂದಲೂ - 'ಕಾರ್ಯ'ವನ್ನೇ ಮುಖ್ಯವಾಗಿ ವೇದನ ಮಾಡುತ್ತಾನೆ, ಏಕೆಂದರೆ ಅವನು ಅಲ್ಪ ವೀರ್ಯಾಂತರಾಯದ ಕ್ಷಯೋಪಶಮದಿಂದ ಕಾರ್ಯ[೧] ಮಾಡುವ ಸಾಮರ್ಥ್ಯವನ್ನು ಪ್ರಾಪ್ತಮಾಡಿಕೊಂಡಿದ್ದಾನೆ.

ಮತ್ತು ಬೇರೆ ಚೇತಯಿತನು ಎಂದರೆ ಆತ್ಮನು, ಯಾವುದರೊಳಗಿಂದ ಎಲ್ಲ ಮೋಹಕಲಂಕವು ತೊಳೆಯಲ್ಪಟ್ಟಿದೆ ಹಾಗೂ ಎಲ್ಲ ಜ್ಞಾನಾವರಣದ ವಿನಾಶದ ಕಾರಣವಾಗಿ ಯಾವುದರ ಸಮಸ್ತ ಪ್ರಭಾವವು ಅತ್ಯಂತ ವಿಕಸಿತವಾಗಿದೆ ಅಂಥ ಚೇತಕಸ್ವಭಾವದಿಂದ 'ಜ್ಞಾನ'ವನ್ನೇ - ಯಾವ ಜ್ಞಾನವು ತನ್ನಿಂದ ಅವ್ಯತಿರಿಕ್ತವಾದ[೨] ಸ್ವಾಭಾವಿಕವಾದ ಸುಖವುಳ್ಳದ್ದಿದೆ ಅದನ್ನೇ - ವೇದನ ಮಾಡುತ್ತಾನೆ, ಏಕೆಂದರೆ ಅವನು ಸಮಸ್ತ ವೀರ್ಯಾಂತರಾಯದ ಕ್ಷಯದಿಂದ ಅನಂತವೀರ್ಯವನ್ನು ಪ್ರಾಪ್ತಮಾಡಿಕೊಂಡಿರುವುದರಿಂದ ಅವನಿಗೆ (ವಿಕಾರವುಳ್ಳ ಸುಖದುಃಖರೂಪದ) ಕರ್ಮಫಲವು ನಿರ್ಜರಿತವಾಗಿದೆ ಮತ್ತು ಅತ್ಯಂತ ಕೃತಕೃತ್ಯತೆ [೩] ಉಂಟಾಗಿದೆ (ಎಂದರೆ ಏನನ್ನೂ ಮಾಡುವುದು ತಿಲಮಾತ್ರವೂ ಉಳಿದಿಲ್ಲ).

ಸ್ಥಾವರ ಕರ್ಮಫಲವ ತ್ರಸಕಾರ್ಯಯುತಕರ್ಮಫಲವನನುಭವಿಸಿದರೆ ।
ಯಾವ ಪ್ರಾಣಿತ್ವವನತಿಕ್ರಮಿಸಿದ ಜೀವಗಳು ಜ್ಞಾನವನನುಭವಿಪವು ॥೩೯॥

---

೧. ಕಾರ್ಯ = ಜೀವದಿಂದ ಮಾಡಲಾಗುತ್ತದೆ ಅದು ; ಇಚ್ಛಾಪೂರ್ವಕ ಇಷ್ಟಾನಿಷ್ಟ ವಿಕಲ್ಪರೂಪ ಕರ್ಮ, (ಯಾವ ಜೀವಗಳಿಗೆ ಸ್ವಲ್ಪ ವೀರ್ಯದ ವಿಕಾಸವಾಗಿರುತ್ತದೆ ಅವಕ್ಕೆ ಕರ್ಮಚೇತನರೂಪದಿಂದ ಪರಿಣಮಿಸುವ ಸಾಮರ್ಥ್ಯವು ಪ್ರಕಟವಾಗಿರುವುದರಿಂದ ಅವು ಮುಖ್ಯವಾಗಿ ಕರ್ಮಚೇತನರೂಪದಿಂದ ಪರಿಣಮಿಸುತ್ತವೆ. ಆ ಕರ್ಮ ಚೇತನವು ಕರ್ಮಫಲಚೇತನದಿಂದ ಮಿಶ್ರಿತವಿರುತ್ತದೆ.)

೨. ಅವ್ಯತಿರಿಕ್ತ = ಅಭಿನ್ನ, (ಸ್ವಾಭಾವಿಕ ಸುಖವು ಜ್ಞಾನದಿಂದ ಅಭಿನ್ನವಿರುವುದರಿಂದ ಜ್ಞಾನಚೇತನವು ಸ್ವಾಭಾವಿಕ ಸುಖದ ಸಂಚೇತನ - ಅನುಭವನ - ಸಹಿತವೇ ಇರುತ್ತದೆ.)

೩. ಕೃತಕೃತ್ಯ = ಕೃತಕಾರ್ಯ. [ಪರಿಪೂರ್ಣಜ್ಞಾನವುಳ್ಳ ಆತ್ಮನು ಅತ್ಯಂತ ಕೃತಕಾರ್ಯನಿರುವುದರಿಂದ ಅವನಿಗೆ ಅನಂತವೀರ್ಯವು ಪ್ರಕಟವಾಗಿದ್ದರೂ ಅವನ ವೀರ್ಯವು ಕಾರ್ಯಚೇತನವನ್ನು (ಕರ್ಮಚೇತನವನ್ನು) ನಿರ್ಮಿಸುವುದಿಲ್ಲ, (ಮತ್ತು ವಿಕಾರವುಳ್ಳ ಸುಖದುಃಖವು ನಷ್ಟವಾಗಿ ಹೋಗಿರುವುದರಿಂದ ಅವನ ವೀರ್ಯವು ಕರ್ಮಫಲಚೇತನವನ್ನೂ ನಿರ್ಮಿಸುವುದಿಲ್ಲ). ಜ್ಞಾನಚೇತನವನ್ನೇ ನಿರ್ಮಿಸುತ್ತದೆ.]

ಸರ್ವೇ ಖಲು ಕರ್ಮಫಲಂ ಸ್ಥಾವರಕಾಯಾಸ್ತ್ರಸಾ ಹಿ ಕಾರ್ಯಯುತಮ್ ।
ಪ್ರಾಣಿತ್ವಮತಿಕ್ರಾಂತಾಃ ಜ್ಞಾನಂ ವಿಂದಂತಿ ತೇ ಜೀವಾಃ ॥೩೯॥

ಅತ್ರ ಕಃ ಕಿಂ ಚೇತಯತ ಇತ್ಯುಕ್ತಮ್ ।

ಚೇತಯಂತೇ ಅನುಭವಂತಿ ಉಪಲಭಂತೇ ವಿಂದಂತೀತ್ಯೇಕಾರ್ತಾಶ್ಚೇತನಾನುಭೃತ್ಯುಪಲಬ್ಧಿವೇದನಾ-ನಾಮೇಕಾರ್ಥತ್ವಾತ್ । ತತ್ರ ಸ್ಥಾವರಾಃ ಕರ್ಮಫಲಂ ಚೇತಯಂತೇ, ತ್ರಸಾಃ ಕಾರ್ಯಂ ಚೇತಯಂತೇ, ಕೇವಲಜ್ಞಾನಿನೋ ಜ್ಞಾನಂ ಚೇತಯಂತ ಇತಿ ।

ಗಾಥೆ - ೩೯

ಗಾಥಾರ್ಥ ಃ- [ಸವ್ವೇ ಥಾವರಕಾಯಾ] ಎಲ್ಲ ಸ್ಥಾವರ ಜೀವಸಮೂಹವು [ಖಲು] ವಾಸ್ತವಿಕವಾಗಿ [ಕಮ್ಮಫಲಂ] ಕರ್ಮಫಲವನ್ನು ವೇದನ ಮಾಡುತ್ತವೆ, [ತಸಾ] ತ್ರಸ ಜೀವಗಳು [ಹಿ] ವಾಸ್ತವಿಕವಾಗಿ [ಕಜ್ಜಜುದಂ] ಕಾರ್ಯಸಹಿತ ಕರ್ಮಫಲವನ್ನು ವೇದನ ಮಾಡುತ್ತವೆ ಮತ್ತು [ಪಾಣಿತ್ತಮದಿಕ್ಕಂತಾ] ಯಾವವು ಪ್ರಾಣಿತ್ವದ (ಪ್ರಾಣಗಳ) ಅತಿಕ್ರಮಣ ಮಾಡಿಬಿಟ್ಟಿವೆ [ತೇ ಜೀವಾ] ಆ ಜೀವಗಳು [ಣಾಣಂ] ಜ್ಞಾನವನ್ನು [ವಿಂದಂತಿ] ವೇದನ ಮಾಡುತ್ತವೆ.

ಟೀಕೆ ಃ- ಇಲ್ಲಿ ಯಾವನು ಏನನ್ನು ವೇದನ ಮಾಡುತ್ತಾನೆ (ಎಂದರೆ ಯಾವ ಜೀವನಿಗೆ ಯಾವ ವೇದನವಿರುತ್ತದೆ) ಅದನ್ನು ಹೇಳಿದೆ.

ಚೇತಿಸುತ್ತಾನೆ, ಅನುಭವಿಸುತ್ತಾನೆ, ಉಪಲಬ್ಧ ಮಾಡುತ್ತಾನೆ ಮತ್ತು ವೇದನ ಮಾಡುತ್ತಾನೆ - ಇವು ಏಕಾರ್ಥವಾಚಿಯಿವೆ (ಎಂದರೆ ಇವೆಲ್ಲ ಶಬ್ದಗಳು ಒಂದೇ ಅರ್ಥವುಳ್ಳವುಗಳಿವೆ), ಏಕೆಂದರೆ ಚೇತನ, ಅನುಭೂತಿ, ಉಪಲಬ್ಧಿ ಮತ್ತು ವೇದನದ ಒಂದರ್ಥವಿದೆ. ಅಲ್ಲಿ ಸ್ಥಾವರಗಳು ಕರ್ಮಫಲವನ್ನು ಚೇತಿಸುತ್ತವೆ, ತ್ರಸಗಳು ಕಾರ್ಯವನ್ನು ಚೇತಿಸುತ್ತವೆ, ಕೇವಲಜ್ಞಾನಿಗಳು ಜ್ಞಾನವನ್ನು ಚೇತಿಸುತ್ತಾರೆ.

ಭಾವಾರ್ಥ ಃ- ಐದು ಪ್ರಕಾರದ ಸ್ಥಾವರ ಜೀವಗಳು ಅವ್ಯಕ್ತ ಸುಖದುಃಖಾನುರೂಪವಾದ ಶುಭಾ ಶುಭ ಕರ್ಮಫಲವನ್ನು ಚೇತಿಸುತ್ತವೆ. ದ್ವೀಂದ್ರಿಯ ಮೊದಲಾದ ತ್ರಸಜೀವಗಳು ಅದೇ ಕರ್ಮಫಲವನ್ನು ಇಚ್ಛೆಯೊಡನೆ ಇಷ್ಟಾನಿಷ್ಟವಿಕಲ್ಪರೂಪ ಕಾರ್ಯಸಹಿತವಾಗಿ ಚೇತಿಸುತ್ತವೆ. ಪರಿಪೂರ್ಣ [೧] ಜ್ಞಾನವಂತರಾದ ಭಗವಂತರು (ಅನಂತಸೌಖ್ಯದೊಡನೆ) ಜ್ಞಾನವನ್ನೇ ಚೇತಿಸುತ್ತಾರೆ.

---

೧. ಇಲ್ಲಿ ಪರಿಪೂರ್ಣ ಜ್ಞಾನಚೇತನದ ವಿವಕ್ಷೆಯಿರುವುದರಿಂದ ಕೇವಲಿಭಗವಂತರಿಗೂ ಮತ್ತು ಸಿದ್ಧಭಗವಂತರಿಗೂ ಜ್ಞಾನಚೇತನವನ್ನು ಹೇಳಲಾಗಿದೆ. ಆಂಶಿಕ ಜ್ಞಾನಚೇತನದ ವಿವಕ್ಷೆಯಿಂದಂತೂ ಮುನಿ, ಶ್ರಾವಕ ಹಾಗೂ ಅವಿರತ ಸಮ್ಯಗ್ದೃಷ್ಟಿಗಳಿಗೂ ಜ್ಞಾನಚೇತನವನ್ನು ಹೇಳಲಾಗುತ್ತದೆ ; ಇಲ್ಲಿ ಅದರ ನಿಷೇಧವನ್ನು ತಿಳಿದುಕೊಳ್ಳಬಾರದು, ಕೇವಲ ವಿವಕ್ಷಾಭೇದವಿದೆಯೆಂದು ತಿಳಿದುಕೊಳ್ಳಬೇಕು.

ಅಥೋಪಯೋಗಗುಣವ್ಯಾಖ್ಯಾನಮ್ ।

ಉವಓಗೋ ಖಲು ದುವಿಹೋ ಣಾಣೇಣ ಯ ದಂಸಣೇಣ ಸಂಜುತ್ತೋ ।
ಜೀವಸ್ಸ ಸವ್ವಕಾಲಂ ಅಣಣ್ಣಭೂದಂ ವಿಯಾಣೇಹಿ ॥೪೦॥

ಉಪಯೋಗಃ ಖಲು ದ್ವಿವಿಧೋ ಜ್ಞಾನೇನ ಚ ದರ್ಶನೇನ ಸಂಯುಕ್ತಃ ।
ಜೀವಸ್ಯ ಸರ್ವಕಾಲಮನನ್ಯಭೂತಂ ವಿಜಾನೀಹಿ ॥೪೦॥

ಆತ್ಮನಶ್ಚೈತನ್ಯಾನುವಿಧಾಯೀ ಪರಿಣಾಮ ಉಪಯೋಗಃ । ಸ್ಯೋಽಪಿ ದ್ವಿವಿಧಃ । ಜ್ಞಾನೋಪಯೋಗೋ ದರ್ಶನೋಪಯೋಗಶ್ಚ । ತತ್ರವಿಶೇಷಗ್ರಾಹಿ ಜ್ಞಾನಂ, ಸಾಮಾನ್ಯಗ್ರಾಹಿ ದರ್ಶನಮ್ । ಉಪಯೋಗಶ್ಚ ಸರ್ವದಾ ಜೀವಾದಪೃಥಗ್ಭೂತ ಏವ, ಏಕಾಸ್ತಿತ್ವನಿರ್ವೃತ್ತತ್ವಾದಿತಿ ।

ಈಗ ಉಪಯೋಗಗುಣದ ವ್ಯಾಖ್ಯಾನವಿದೆ.

ಗಾಥೆ - ೪೦

ಗಾಥಾರ್ಥ :- [ಖಲು] ವಾಸ್ತವಿಕವಾಗಿ [ಜೀವಸ್ಸ] ಜೀವನಿಗೆ [ಣಾಣೇಣ ಯ ದಂಸಣೇಣ ಸಂಜುತ್ತೋ] ಜ್ಞಾನ ಮತ್ತು ದರ್ಶನದಿಂದ ಸಂಯುಕ್ತವಾದಂಥ [ದುವಿಹೋ] ಎರಡು ಪ್ರಕಾರದ [ಉವಓಗೋ] ಉಪಯೋಗಗಳು [ಸವ್ವಕಾಲಂ] ಎಲ್ಲ ಕಾಲದಲ್ಲೂ [ಅಣಣ್ಣಭೂದಂ] ಅನನ್ಯರೂಪದಿಂದಿವೆಯೆಂದು [ವಿಯಾಣೇಹಿ] ತಿಳಿದುಕೊಳ್ಳು.

ಟೀಕೆ :- ಆತ್ಮನ ಚೈತನ್ಯ - ಅನುವಿಧಾಯಿಯಾದ (ಎಂದರೆ ಚೈತನ್ಯದ ಅನುಸರಣೆ ಮಾಡುವಂಥ) ಪರಿಣಾಮವು ಅದು ಉಪಯೋಗವಿದೆ. ಅದುವೂ ಜ್ಞಾನೋಪಯೋಗ ಮತ್ತು ದರ್ಶನೋಪಯೋಗವೆಂದು ಎರಡು ಪ್ರಕಾರದ್ದಿದೆ. ಅಲ್ಲಿ ವಿಶೇಷವನ್ನು ಗ್ರಹಣ ಮಾಡುವಂತಹುದು ಜ್ಞಾನವಿದೆ ಮತ್ತು ಸಾಮಾನ್ಯವನ್ನು ಗ್ರಹಣ ಮಾಡುವಂತಹುದು ದರ್ಶನವಿದೆ (ಎಂದರೆ ಯಾವುದರಲ್ಲಿ ವಿಶೇಷವು ಪ್ರತಿಭಾಸಿತವಾಗುತ್ತದೆ ಅದು ಜ್ಞಾನವಿದೆ ಮತ್ತು ಯಾವುದರಲ್ಲಿ ಸಾಮಾನ್ಯವು ಪ್ರತಿಭಾಸಿತವಾಗುತ್ತದೆ ಅದು ದರ್ಶನವಿದೆ) ಮತ್ತು ಉಪಯೋಗವು ಯಾವಾಗಲೂ ಜೀವದಿಂದ ಅಪೃಥಗ್ಭೂತ[೧] ವೇ ಇದೆ, ಏಕೆಂದರೆ ಒಂದೇ ಅಸ್ತಿತ್ವದಿಂದ ರಚಿತವಾಗಿದೆ.

ಜ್ಞಾನದರ್ಶನಸಹಿತವಾದುಪಯೋಗವೆರಡುಪ್ರಕಾರವಾಗಿರುವುದು ।
ಅನನ್ಯರೂಪದಿಂದದು ಸರ್ವಕಾಲದಲಿ ಜೀವನಿಗಿರುವುದೆಂದರಿವುದು ॥೪೦॥

---

೧. ಅಪೃಥಗ್ಭೂತ = ಅಭಿನ್ನ, (ಉಪಯೋಗಗಳು ಯಾವಾಗಲೂ ಜೀವದಿಂದ ಅಭಿನ್ನವಾಗಿಯೇ ಇರುತ್ತವೆ, ಏಕೆಂದರೆ ಅವು ಒಂದು ಅಸ್ತಿತ್ವದಿಂದ ನಿಷ್ಪನ್ನವಾಗಿವೆ.)

ಆಭಿಣಿಸುದೋಧಿಮಣಕೇವಲಾಣಿ ಣಾಣಾಣಿ ಪಂಚಭೇಯಾಣಿ ।
ಕುಮದಿಸುದವಿಭಂಗಾಣಿ ಯ ತಿಣ್ಣಿ ವಿ ಣಾಣೇಹಿಂ ಸಂಜುತ್ತೋ ॥೪೧॥

ಆಭಿನಿಬೋಧಿಕಶ್ರುತಾವಧಿಮನಃಪರ್ಯಯಕೇವಲಾನಿ ಜ್ಞಾನಾನಿ ಪಂಚಭೇದಾನಿ ।
ಕುಮತಿಶ್ರುತವಿಭಂಗಾನಿ ಚ ತ್ರೀಣ್ಯಪಿ ಜ್ಞಾನೈಃ ಸಂಯುಕ್ತಾನಿ ॥೪೧॥

ಜ್ಞಾನೋಪಯೋಗ ವಿಶೇಷಾಣಾಂ ನಾಮಸ್ವರೂಪಾಭಿಧಾನಮೇತತ್ ।

ತತ್ರಾಭಿನಿಬೋಧಿಕಜ್ಞಾನಂ ಶ್ರುತಜ್ಞಾನಮವಧಿಜ್ಞಾನಂ ಮನಃಪರ್ಯಯಜ್ಞಾನಂ ಕೇವಲಜ್ಞಾನಂ ಕುಮತಿಜ್ಞಾನಂ ಕುಶ್ರುತಜ್ಞಾನಂ ವಿಭಂಗಜ್ಞಾನಮಿತಿ ನಾಮಾಭಿಧಾನಮ್ । ಆತ್ಮಾಹ್ಯನಂತಸರ್ವಾತ್ಮಪ್ರದೇಶವ್ಯಾಪಿ-ವಿಶುದ್ಧಜ್ಞಾನಸಾಮಾನ್ಯಾತ್ಮಾ । ಸ ಖಲ್ವನಾದಿಜ್ಞಾನಾವರಣಕರ್ಮಾವಚ್ಛನ್ನಪ್ರದೇಶಃ ಸನ್, ಯತ್ತದಾವರಣಕ್ಷಯೋಪ-ಶಮಾದಿಂದ್ರಿಯಾನಿಂದ್ರಿಯಾವಲಂಬಾಚ್ಚ ಮೂರ್ತಾಮೂರ್ತದ್ರವ್ಯಂ ವಿಕಲಂ ವಿಶೇಷೇಣಾವಬುಧ್ಯತೇ ತದಾಭಿನಿಬೋಧಿಕಜ್ಞಾನಮ್, ಯತ್ತದಾವರಣಕ್ಷಯೋಪಶಮಾದನಿಂದ್ರಿಯಾವಲಂಬಾಚ್ಚ ಮೂರ್ತಾಮೂರ್ತ-ದ್ರವ್ಯಂ ವಿಕಲಂ ವಿಶೇಷೇಣಾವಬುಧ್ಯತೇ ತತ್ ಶ್ರುತಜ್ಞಾನಮ್ । ಯತ್ತದಾವರಣಕ್ಷಯೋಪಶಮಾದೇವ ಮೂರ್ತದ್ರವ್ಯಂ ವಿಕಲಂ ವಿಶೇಷೇಣಾವಬುಧ್ಯತೇ ತದವಧಿಜ್ಞಾನಮ್, ಯತ್ತದಾವರಣಕ್ಷಯೋಪಶಮಾದೇವ

ಗಾಥೆ - ೪೧

ಗಾಥಾರ್ಥ :- [ಆಭಿಣಿಸುದೋಧಿಮಣಕೇವಲಾಣಿ] ಆಭಿನಿಬೋಧಿಕ (-ಮತಿ), ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲವೆಂದು [ಣಾಣಾಣಿ ಪಂಚಭೇಯಾಣಿ] - ಹೀಗೆ ಜ್ಞಾನದಲ್ಲಿ ಐದು ಭೇದಗಳಿವೆ; [ಯ ಕುಮದಿಸುದವಿಭಂಗಾಣಿ] ಮತ್ತು ಕುಮತಿ, ಕುಶ್ರುತ ಹಾಗೂ ವಿಭಂಗವೆಂದು [ತಿಣ್ಣಿ ವಿ] ಇವು ಮೂರೂ (ಅಜ್ಞಾನಗಳು) [ಣಾಣೇಹಿಂ] (ಐದು) ಜ್ಞಾನಗಳೊಡನೆ ಸಂಯುಕ್ತವಾಗಿವೆ. (-ಹೀಗೆ ಜ್ಞಾನೋಪಯೋಗದ ಎಂಟು ಭೇದಗಳಿವೆ).

ಟೀಕೆ :- ಇಲ್ಲಿ ಜ್ಞಾನೋಪಯೋಗದ ಭೇದಗಳ ಹೆಸರು ಮತ್ತು ಸ್ವರೂಪದ ಕಥನವಿದೆ.

೧) ಆಭಿನಿಬೋಧಿಕಜ್ಞಾನ, ೨) ಶ್ರುತಜ್ಞಾನ, ೩) ಅವಧಿಜ್ಞಾನ, ೪) ಮನಃಪರ್ಯಯಜ್ಞಾನ, ೫) ಕೇವಲಜ್ಞಾನ, ೬) ಕುಮತಿಜ್ಞಾನ, ೭) ಕುಶ್ರುತಜ್ಞಾನ ಮತ್ತು ೮) ವಿಭಂಗಜ್ಞಾನ - ಹೀಗೆ (ಜ್ಞಾನೋಪಯೋಗದ ಭೇದಗಳ) ಹೆಸರಿನ ಕಥನವಿದೆ.

(ಈಗ ಅವುಗಳ ಸ್ವರೂಪದ ಕಥನ ಮಾಡಲಾಗುತ್ತದೆ-) ಆತ್ಮನು ವಾಸ್ತವಿಕವಾಗಿ ಅನಂತ, ಎಲ್ಲ ಆತ್ಮ ಪ್ರದೇಶಗಳಲ್ಲಿ ವ್ಯಾಪಕ, ವಿಶುದ್ಧ ಜ್ಞಾನಸಾಮಾನ್ಯಸ್ವರೂಪನಿದ್ದಾನೆ. ಅವನು (ಆತ್ಮನು) ವಾಸ್ತವಿಕವಾಗಿ ಅನಾದಿ ಜ್ಞಾನಾವರಣಕರ್ಮದಿಂದ ಆಚ್ಛಾದಿತ ಪ್ರದೇಶವುಳ್ಳವನಾಗಿ ವರ್ತಿಸುತ್ತ, ೧) ಆ ಪ್ರಕಾರದ (ಎಂದರೆ ಮತಿಜ್ಞಾನದ)ಆವರಣದ ಕ್ಷಯೋಪಶಮದಿಂದ ಮತ್ತು ಇಂದ್ರಿಯ - ಮನಸ್ಸುಗಳ ಅವಲಂಬನೆಯಿಂದ ಮೂರ್ತ,

---

ಮತಿ, ಶ್ರುತ, ಅವಧಿ, ಮನಃಪರ್ಯಯ, ಕೇವಲವೆಂಬೈದು ಜ್ಞಾನದಭೇದವಿವೆ ।
ಮತ್ತೆ ಕುಮತಿ, ಕುಶ್ರುತ, ವಿಭಂಗವೆಂಬೀ ಮೂರು ಜ್ಞಾನದೊಡನೆ ಸೇರಿಸಿದೆ ॥೪೧॥

ಪರಮನೋಗತಂ ಮೂರ್ತದ್ರವ್ಯಂ ವಿಕಲಂ ವಿಶೇಷೇಣಾವಬುಧ್ಯತೇ ತನ್ಮನಃಪರ್ಯಯಜ್ಞಾನಮ್, ಯತ್ಸಕಲಾವರಣಾತ್ಯಂತಕ್ಷಯೇ ಕೇವಲ ಏವ ಮೂರ್ತಾಮೂರ್ತದ್ರವ್ಯಂ ಸಕಲಂ ವಿಶೇಷೇಣಾವಬುಧ್ಯತೇ ತತ್ಸ್ವಾಭಾವಿಕಂ ಕೇವಲ ಜ್ಞಾನಮ್ । ಮಿಥ್ಯಾದರ್ಶನೋದಯಸಹಚರಿತಮಾಭಿನಿಬೋಧಿಕಜ್ಞಾನಮೇವ

ಅಮೂರ್ತ ದ್ರವ್ಯಗಳ ವಿಕಲರೂಪದಿಂದ ೧ ವಿಶೇಷತಃ, ಅವಬೋಧನ ಮಾಡುತ್ತಾನೆ ಅದು ಆಭಿನಿಬೋಧಿಕಜ್ಞಾನವಿದೆ; ೨) ಆ ಪ್ರಕಾರದ (ಎಂದರೆ ಶ್ರುತಜ್ಞಾನದ) ಆವರಣದ ಕ್ಷಯೋಪಶಮದಿಂದ ಮತ್ತು ಮನಸ್ಸಿನ ಅವಲಂಬನೆಯಿಂದ ಮೂರ್ತ - ಅಮೂರ್ತ ದ್ರವ್ಯಗಳ ವಿಕಲರೂಪದಿಂದ ವಿಶೇಷತಃ ಅವಬೋಧನ ಮಾಡುತ್ತಾನೆ ಅದು ಶ್ರುತಜ್ಞಾನವಿದೆ; ೩) ಆ ಪ್ರಕಾರದ ಆವರಣದ ಕ್ಷಯೋಪಶಮದಿಂದಲೇ ಮೂರ್ತ ದ್ರವ್ಯದ ವಿಕಲರೂಪದಿಂದ ವಿಶೇಷತಃ ಅವಬೋಧನ ಮಾಡುತ್ತಾನೆ ಅದು ಅವಧಿಜ್ಞಾನವಿದೆ. ೪) ಆ ಪ್ರಕಾರದ ಆವರಣದ ಕ್ಷಯೋಪಶಮದಿಂದಲೇ ಪರಮನೋಗತ (-ಇತರರ ಮನಸ್ಸಿನೊಡನೆ ಸಂಬಂಧವುಳ್ಳ) ಮೂರ್ತ ದ್ರವ್ಯದ ವಿಕಲರೂಪದಿಂದ ವಿಶೇಷತಃ ಅವಬೋಧನ ಮಾಡುತ್ತಾನೆ ಅದು ಮನಃಪರ್ಯಯ ಜ್ಞಾನವಿದೆ ; ಸಮಸ್ತ ಆವರಣದ ಪೂರ್ಣಕ್ಷಯದಿಂದ ಕೇವಲವೇ (ಏಕಾಕಿ ಆತ್ಮನೇ) ಮೂರ್ತ-ಅಮೂರ್ತ ದ್ರವ್ಯಗಳ ಸಕಲರೂಪದಿಂದ ವಿಶೇಷತಃ ಅವಬೋಧನ ಮಾಡುತ್ತಾನೆ ಅದು ಸ್ವಾಭಾವಿಕ ಕೇವಲಜ್ಞಾನವಿದೆ. ೬) ಮಿಥ್ಯಾದರ್ಶನದ ಉದಯದೊಡನಿರುವ ಆಭಿನಿಬೋಧಿಕ ಜ್ಞಾನವೇ ಕುಮತಿಜ್ಞಾನವಿದೆ; ೭) ಮಿಥ್ಯಾದರ್ಶನದ ಉದಯದೊಡನಿರುವ ಶ್ರುತಜ್ಞಾನವೇ ಕುಶ್ರುತಜ್ಞಾನವಿದೆ; ೮) ಮಿಥ್ಯಾದರ್ಶನದ ಉದಯದೊಡನಿರುವ ಅವಧಿಜ್ಞಾನವೇ ವಿಭಂಗಜ್ಞಾನವಿದೆ. - ಹೀಗೆ (ಜ್ಞಾನೋಪಯೋಗ ಭೇದಗಳ) ಸ್ವರೂಪದ ಕಥನವಿದೆ.

ಹೀಗೆ ಮತಿಜ್ಞಾನ ಮೊದಲಾದ ಎಂಟು ಜ್ಞಾನೋಪಯೋಗಗಳ ವ್ಯಾಖ್ಯಾನ ಮಾಡಲಾಯಿತು.

ಭಾವಾರ್ಥ :- ನಿಶ್ಚಯನಯದಿಂದ ಅಖಂಡ-ಏಕ-ವಿಶುದ್ಧಜ್ಞಾನಮಯನಾದಂಥ ಆತ್ಮನು ವ್ಯವಹಾರನಯದಿಂದ ಸಂಸಾರಾವಸ್ಥೆಯಲ್ಲಿ ಕರ್ಮಾವೃತನಾಗಿ ವರ್ತಿಸುತ್ತ, ಮತಿಜ್ಞಾನಾವರಣದ ಕ್ಷಯೋಪಶಮವಾದ ಮೇಲೆ ಐದು ಇಂದ್ರಿಯಗಳು ಮತ್ತು ಮನಸ್ಸಿನಿಂದ ಯಾವ ಮೂರ್ತ-ಅಮೂರ್ತ ವಸ್ತುಗಳನ್ನು ವಿಕಲ್ಪರೂಪದಿಂದ ತಿಳಿಯುತ್ತಾನೆ ಅದು ಮತಿಜ್ಞಾನವಿದೆ. ಅದರಲ್ಲಿ ಉಪಲಬ್ಧರೂಪ, ಭಾವನಾರೂಪ ಮತ್ತು ಉಪಯೋಗರೂಪವೆಂದು ಮೂರು ಪ್ರಕಾರಗಳಿವೆ. ಮತಿಜ್ಞಾನಾವರಣದ ಕ್ಷಯೋಪಶಮದಿಂದ ಹುಟ್ಟಿದ ಅರ್ಥಗ್ರಹಣಶಕ್ತಿಯು (ಪದಾರ್ಥಗಳನ್ನು ತಿಳಿಯುವ ಶಕ್ತಿಯು) ಅದು ಉಪಲಬ್ಧಿಯಿದೆ, ತಿಳಿದುಕೊಂಡ ಪದಾರ್ಥದ ಪುನಃ ಪುನಃ ಚಿಂತನೆಯು ಅದು ಭಾವನೆಯಿದೆ ಮತ್ತು 'ಇದು ಕಪ್ಪಿದೆ', 'ಇದು ಹಳದಿ ಇದೆ' ಇತ್ಯಾದಿ ರೂಪದಿಂದ ಅರ್ಥಗ್ರಹಣ ವ್ಯಾಪಾರವು (ಪದಾರ್ಥವನ್ನು ತಿಳಿಯುವ ವ್ಯಾಪಾರವು) ಅದು ಉಪಯೋಗವಿದೆ. ಅದೇ ಪ್ರಕಾರ ಅದು (ಮತಿಜ್ಞಾನವು) ಅವಗ್ರಹ, ಈಹಾ, ಅವಾಯ ಮತ್ತು ಧಾರಣರೂಪ ಭೇದಗಳಿಂದ ಅಥವಾ ಕೋಷ್ಠಬುದ್ಧಿ, ಬೀಜಬುದ್ಧಿ, ಪದಾನುಸಾರಿಬುದ್ಧಿ ಹಾಗೂ ಸಂಭಿನ್ನಶ್ರೋತೃತಾಬುದ್ಧಿಯೆಂಬ ಭೇದಗಳಿಂದ ನಾಲ್ಕು ಪ್ರಕಾರದ್ದಿದೆ. (ಇಲ್ಲಿ ನಿರ್ವಿಕಾರ ಶುದ್ಧ ಅನುಭೂತಿಯ ಕುರಿತು ಅಭಿಮುಖವಾದ ಯಾವ ಮತಿಜ್ಞಾನವಿದೆ ಅದೇ ಉಪಾದೇಯಭೂತ ಅನಂತಸುಖದ ಸಾಧಕವಿರುವುದರಿಂದ

---

೧. ವಿಕಲರೂಪದಿಂದ = ಅಪೂರ್ಣರೂಪದಿಂದ ; ಅಂಶತಃ. ೨. ವಿಶೇಷತಃ ಅವಬೋಧನ ಮಾಡುವುದು = ತಿಳಿಯುವುದು (ವಿಶೇಷ ಅವಬೋಧ ಎಂದರೆ ವಿಶೇಷ ಪ್ರತಿಭಾಸ ಅದು ಜ್ಞಾನವಿದೆ.)

ಕುಮತಿಜ್ಞಾನಮ್, ಮಿಥ್ಯಾದರ್ಶನೋದಯಸಹಚರಿತಂ ಶ್ರುತಜ್ಞಾನಮೇವ ಕುಶ್ರುತಜ್ಞಾನಮ್, ಮಿಥ್ಯಾದರ್ಶನೋದಯಸಹಚರಿತಮವಧಿಜ್ಞಾನಮೇವ ವಿಭಂಗಜ್ಞಾನಮ್ ಇತಿ ಸ್ವರೂಪಾಭಿಧಾನಮ್ । ಇತ್ಥಂ ಮತಿಜ್ಞಾನಾದಿಜ್ಞಾನೋಪಯೋಗಾಷ್ಟಕಂ ವ್ಯಾಖ್ಯಾತಮ್ ।

ನಿಶ್ಚಯದಿಂದ ಉಪಾದೇಯವಿದೆ, ಅದಕ್ಕೆ ಸಾಧನಭೂತವಾದ ಬಹಿರಂಗ ಮತಿಜ್ಞಾನವಂತೂ ವ್ಯವಹಾರದಿಂದ ಉಪಾದೇಯವಿದೆಯೆಂಬ ತಾತ್ಪರ್ಯವನ್ನು ಗ್ರಹಣ ಮಾಡಬೇಕು.

ಅದೇ ಮೊದಲು ಹೇಳಿದ ಆತ್ಮನು ಶ್ರುತಜ್ಞಾನಾವರಣದ ಕ್ಷಯೋಪಶಮವಾದ ಮೇಲೆ ಮೂರ್ತ ಅಮೂರ್ತ ವಸ್ತುಗಳನ್ನು ಯಾವ ಪರೋಕ್ಷ ರೂಪದಿಂದ ತಿಳಿಯುತ್ತಾನೆ ಅದಕ್ಕೆ ಜ್ಞಾನಿಗಳು ಶ್ರುತ ಜ್ಞಾನವೆಂದು ಹೇಳುತ್ತಾರೆ. ಅದು ಲಬ್ಧರೂಪ ಮತ್ತು ಭಾವನಾರೂಪವಿದೆ ಹಾಗೂ ಉಪಯೋಗರೂಪ ಮತ್ತು ನಯರೂಪವಿದೆ. ಇಲ್ಲಿ 'ಉಪಯೋಗ' ಶಬ್ದದಿಂದ ವಸ್ತುವನ್ನುಗ್ರಹಣ ಮಾಡುವಂಥದು ಪ್ರಮಾಣವೆಂದು ತಿಳಿದುಕೊಳ್ಳಬೇಕು ಎಂದರೆ ಸಂಪೂರ್ಣ ವಸ್ತುವನ್ನು ತಿಳಿದುಕೊಳ್ಳುವಂಥದು ಜ್ಞಾನವೆಂದು ತಿಳಿದುಕೊಳ್ಳಬೇಕು ಮತ್ತು 'ನಯ' ಶಬ್ದದಿಂದ ವಸ್ತುವಿನ (ಗುಣಪರ್ಯಾಯ ರೂಪ) ಒಂದು ಅಂಶವನ್ನು ಗ್ರಹಣ ಮಾಡುವಂಥ ಜ್ಞಾತಾನ ಅಭಿಪ್ರಾಯವೆಂದು ತಿಳಿಯಬೇಕು. (ಇಲ್ಲಿ ವಿಶುದ್ಧಜ್ಞಾನದರ್ಶನವು ಯಾವುದರ ಸ್ವಭಾವವಿದೆ ಅಂಥ ಶುದ್ಧ ಆತ್ಮತತ್ತ್ವದ ಸಮ್ಯಕ್‌ಶ್ರದ್ಧೆ-ಜ್ಞಾನ-ಅನುಚರಣರೂಪ ಅಭೇದರತ್ನತ್ರಯಾತ್ಮಕವಾದ ಯಾವ ಭಾವಶ್ರುತವಿದೆ ಅದೇ ಉಪಾದೇಯಭೂತ ಪರಮಾತ್ಮತತ್ತ್ವದ ಸಾಧಕವಿರುವುದರಿಂದ ನಿಶ್ಚಯದಿಂದ ಉಪಾದೇಯವಿದೆ, ಆದರೆ ಅದರ ಸಾಧನಭೂತವಾದ ಬಹಿರಂಗ ಶ್ರುತಜ್ಞಾನವಂತೂ ವ್ಯವಹಾರದಿಂದ ಉಪಾದೇಯವಿದೆಯೆಂಬ ತಾತ್ಪರ್ಯವನ್ನು ಗ್ರಹಣ ಮಾಡಬೇಕು.)

ಆತ್ಮನು ಅವಧಿಜ್ಞಾನಾವರಣದ ಕ್ಷಯೋಪಶಮವಾದ ಮೇಲೆ ಮೂರ್ತ ವಸ್ತುವನ್ನು ಯಾವ ಪ್ರತ್ಯಕ್ಷ ರೂಪದಿಂದ ತಿಳಿಯುತ್ತಾನೆ ಅದು ಅವಧಿಜ್ಞಾನವಿದೆ. ಆ ಅವಧಿಜ್ಞಾನವು ಲಬ್ಧರೂಪ ಹಾಗೂ ಉಪಯೋಗ ರೂಪವೆಂದು ಎರಡು ಪ್ರಕಾರದ್ದಿದೆ ಅಥವಾ ಅವಧಿಜ್ಞಾನವು ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿಯೆಂಬ ಭೇದಗಳಿಂದ ಮೂರು ಪ್ರಕಾರದ್ದಿದೆ. ಅದರಲ್ಲಿ ಪರಮಾವಧಿ ಮತ್ತು ಸರ್ವಾವಧಿಗಳು ಚೈತನ್ಯದ ಉಲ್ಲಸಿಕೆಯಿಂದ ಪೂರ್ಣ ಆನಂದರೂಪ ಪರಮಸುಖಾಮೃತದ ರಸಾಸ್ವಾದರೂಪ ಸಮರಸಭಾವದಿಂದ ಪರಿಣತರಾದ ಚರಮ ದೇಹಧಾರಿ ತಪೋಧನರಿಗೆ ಆಗುತ್ತದೆ. ಮೂರೂ ಪ್ರಕಾರದ ಅವಧಿಜ್ಞಾನಗಳು ನಿಶ್ಚಯದಿಂದ ವಿಶಿಷ್ಟ ಸಮ್ಯಕ್ತ್ವ ಮೊದಲಾದ ಗುಣಗಳಿಂದಾಗುತ್ತವೆ. ದೇವ ಮತ್ತು ನಾರಕಿಗಳಿಗೆ ಇರುವಂಥ ಯಾವ ಭವಪ್ರತ್ಯಯ ಅವಧಿಜ್ಞಾನವಿದೆ ಅದು ನಿಯಮದಿಂದ ದೇಶಾವಧಿಯೇ ಇರುತ್ತದೆ.

ಆತ್ಮನು ಮನಃಪರ್ಯಯಜ್ಞಾನಾವರಣದ ಕ್ಷಯೋಪಶಮವಾದ ಮೇಲೆ, ಪರಮನೋಗತವಾದ ಮೂರ್ತವಸ್ತುವನ್ನು ಯಾವ ಪ್ರತ್ಯಕ್ಷರೂಪದಿಂದ ತಿಳಿಯುತ್ತಾನೆ ಅದು ಮನಃಪರ್ಯಯಜ್ಞಾನವಿದೆ. ಮನಃಪರ್ಯಯಜ್ಞಾನದಲ್ಲಿ ಋಜುಮತಿ ಮತ್ತು ವಿಪುಲಮತಿಯೆಂಬ ಎರಡು ಪ್ರಕಾರಗಳಿವೆ. ವಿಪುಲಮತಿ ಮನಃಪರ್ಯಯಜ್ಞಾನವು ಪರದ ಮನವಚನಕಾಯ ಸಂಬಂಧದ ಪದಾರ್ಥಗಳನ್ನು ವಕ್ರ ಹಾಗೂ ಅವಕ್ರ ಹೀಗೆ ಎರಡನ್ನೂ ತಿಳಿಯುತ್ತದೆ ಮತ್ತು ಋಜುಮತಿಮನಃಪರ್ಯಯಜ್ಞಾನವಂತೂ ಋಜುವನ್ನೇ (ಅವಕ್ರವನ್ನೇ) ತಿಳಿಯುತ್ತದೆ. ನಿರ್ವಿಕಾರ ಆತ್ಮನ ಉಪಲಬ್ಧಿ ಮತ್ತು ಭಾವನೆಯೊಡನೆ ಚರಮದೇಹಧಾರಿಯಾದ ಮುನಿಗಳಿಗೆ

ದಂಸಣಮವಿ ಚಕ್ಖುಜುದಂ ಅಚಕ್ಖುಜುದಮವಿ ಯ ಓಹಿಣಾ ಸಹಿಯಂ ।
ಅಣಿಧಣಮಣಂತವಿಸಯಂ ಕೇವಲಿಯಂ ಚಾವಿ ಪಣ್ಣತ್ತಂ ॥೪೨॥

ದರ್ಶನಮಪಿ ಚಕ್ಷುರ್ಯುತಮಚಕ್ಷುರ್ಯುತಮಪಿ ಚಾವಧಿನಾ ಸಹಿತಮ್ ।
ಅನಿಧನಮನಂತವಿಷಯಂ ಕೈವಲ್ಯಂ ಚಾಪಿ ಪ್ರಜ್ಞಪ್ತಮ್ ॥೪೨॥

ವಿಪುಲಮತಿ ಮನಃಪರ್ಯಯಜ್ಞಾನವಾಗುತ್ತದೆ. ಇವೆರಡೂ ಮನಃಪರ್ಯಯ ಜ್ಞಾನಗಳು ವೀತರಾಗ ಆತ್ಮತತ್ತ್ವದ ಸಮ್ಯಕ್ ಶ್ರದ್ಧೆ-ಜ್ಞಾನ-ಅನುಷ್ಠಾನದ ಭಾವನೆಯೊಡನೆ ಹದಿನೈದು ಪ್ರಮಾದಗಳಿಲ್ಲದ ಅಪ್ರಮತ್ತ ಮುನಿಯ ಉಪಯೋಗದಲ್ಲಿ - ವಿಶುದ್ಧ ಪರಿಣಾಮದಲ್ಲಿ - ಉತ್ಪನ್ನವಾಗುತ್ತವೆ. ಇಲ್ಲಿ ಮನಃಪರ್ಯಯಜ್ಞಾನದ ಉತ್ಪಾದಕಾಲದಲ್ಲಿಯೇ ಅಪ್ರಮತ್ತತನದ ನಿಯಮವಿದೆ, ಪುನಃ ಪ್ರಮತ್ತತನದಲ್ಲೂ ಅದು ಸಂಭವಿತವಿರುತ್ತದೆ.

ಯಾವ ಜ್ಞಾನವು ಘಟಪಟ ಮೊದಲಾದ ಜ್ಞೇಯಪದಾರ್ಥಗಳ ಅವಲಂಬನೆ ಪಡೆದು ಉತ್ಪನ್ನವಾಗುವುದಿಲ್ಲ ಅದು ಕೇವಲಜ್ಞಾನವಿದೆ ಅದು ಶ್ರುತಜ್ಞಾನಸ್ವರೂಪವೂ ಇಲ್ಲ. ಒಂದು ವೇಳೆ ದಿವ್ಯಧ್ವನಿಯ ಕಾಲದಲ್ಲಿ ಅದರ ಆಧಾರದಿಂದ ಗಣಧರದೇವ ಮೊದಲಾದವರಿಗೆ ಶ್ರುತಜ್ಞಾನವು ಪರಿಣಮಿಸುತ್ತಿದ್ದರೂ ಆ ಶ್ರುತ ಜ್ಞಾನವು ಗಣಧರದೇವ ಮೊದಲಾದವರಿಗೇ ಇರುತ್ತದೆ, ಕೇವಲೀ ಭಗವಂತರಿಗಂತೂ ಕೇವಲಜ್ಞಾನವೇ ಇರುತ್ತದೆ. ಮತ್ತೆ ಕೇವಲೀಭಗವಂತರಿಗೆ ಶ್ರುತಜ್ಞಾನವಿಲ್ಲ ಇಷ್ಟೇ ಅಲ್ಲ, ಆದರೆ ಅವರಿಗೆ ಜ್ಞಾನ-ಅಜ್ಞಾನವೂ ಇಲ್ಲ ಎಂದರೆ ಅವರಿಗೆ ಯಾವ ವಿಷಯದ ಜ್ಞಾನ ಹಾಗೂ ಯಾವ ವಿಷಯದ ಅಜ್ಞಾನವಿದೆ ಹೀಗೂ ಇಲ್ಲ - ಎಲ್ಲ ವಿಷಯಗಳ ಜ್ಞಾನವೂ ಇರುತ್ತದೆ ; ಅಥವಾ ಅವರಿಗೆ ಮತಿಜ್ಞಾನ ಮೊದಲಾದ ಅನೇಕ ಭೇದವುಳ್ಳ ಜ್ಞಾನವಿಲ್ಲ - ಒಂದು ಕೇವಲಜ್ಞಾನವೇ ಇರುತ್ತದೆ.

ಇಲ್ಲಿ ಯಾವ ಐದು ಜ್ಞಾನಗಳ ವರ್ಣನೆ ಮಾಡಲಾಗಿದೆ ಅದು ವ್ಯವಹಾರದಿಂದ ಮಾಡಲಾಗಿದೆ. ನಿಶ್ಚಯದಿಂದಂತೂ ಆತ್ಮನು ಮೋಡವಿಲ್ಲದ ಸೂರ್ಯನಂತೆ ಅಖಂಡ-ಏಕ-ಜ್ಞಾನ ಪ್ರತಿಭಾಸಮಯನೇ ಇದ್ದಾನೆ.

ಈಗ ಅಜ್ಞಾನತ್ರಯಗಳ ಸಂಬಂಧದಲ್ಲಿ ಹೇಳುತ್ತಾರೆ,-

ಮಿಥ್ಯಾತ್ವದಿಂದ ಎಂದರೆ ಭಾವ-ಆವರಣದಿಂದ ಅಜ್ಞಾನ (ಕುಮತಿಜ್ಞಾನ, ಕುಶ್ರುತಜ್ಞಾನ ಹಾಗೂ ವಿಭಂಗಜ್ಞಾನ) ಮತ್ತು ಅವಿರತಭಾವಗಳಾಗುತ್ತವೆ ಹಾಗೂ ಜ್ಞೇಯದ ಅವಲಂಬನೆ ತೆಗೆದುಕೊಳ್ಳುವುದರಿಂದ (ಜ್ಞೇಯ ಸಂಬಂಧದ ವಿಚಾರ ಅಥವಾ ಜ್ಞಾನ ಮಾಡುವುದರಿಂದ) ಆಯಾ ಕಾಲದಲ್ಲಿ ದುಃನಯ ಮತ್ತು ದುಃಪ್ರಮಾಣಗಳಾಗುತ್ತವೆ. (ಮಿಥ್ಯಾ ದರ್ಶನದ ಸದ್ಭಾವದಲ್ಲಿ ವರ್ತಿಸುತ್ತಿರುವ ಮತಿಜ್ಞಾನವು ಅದು ಕುಮತಿ ಜ್ಞಾನವಿದೆ, ಶ್ರುತಜ್ಞಾನವು ಅದು ಕುಶ್ರುತಜ್ಞಾನವಿದೆ, ಅವಧಿಜ್ಞಾನವು ಅದು ವಿಭಂಗಜ್ಞಾನವಿದೆ; ಅವುಗಳ ಸದ್ಭಾವದಲ್ಲಿ ವರ್ತಿಸುತ್ತಿರುವ ನಯಗಳು ಅವು ದುಃನಯಗಳಿವೆ ಮತ್ತು ಪ್ರಮಾಣವು ಅದು ದುಃಪ್ರಮಾಣವಿದೆ) ಅದಕ್ಕಾಗಿ ನಿರ್ವಿಕಾರ ಶುದ್ಧ ಆತ್ಮನ ಅನುಭೂತಸ್ವರೂಪವಾದ ನಿಶ್ಚಯಸಮ್ಯಕ್ತ್ವವು ಉಪಾದೇಯವಿದೆಯೆಂಬ ತಾತ್ಪರ್ಯವನ್ನು ತಿಳಿದುಕೊಳ್ಳಬೇಕು. ಹೀಗೆ ಜ್ಞಾನೋಪಯೋಗದ ವರ್ಣನೆ ಮಾಡಲಾಯಿತು.

ಯಾವ ದರ್ಶನವು ಚಕ್ಷುದರ್ಶನ, ಅಚಕ್ಷುದರ್ಶನ, ಅವಧಿದರ್ಶನಮೇಣ್ ।
ಅವಿನಾಶಿ ಅನಂತವಿಷಯಗತ ಕೇವಲರೂಪವೆಂದು ಭೇದ ನಾಲ್ಕಾಗಿವೆ ॥೪೨॥

ದರ್ಶನೋಪಯೋಗವಿಶೇಷಾಣಾಂ ನಾಮಸ್ವರೂಪಾಭಿದಾನಮೇತತ್ ।

ಚಕ್ಷುದರ್ಶನಮಚಕ್ಷುದರ್ಶನಮವಧಿದರ್ಶನಂ ಕೇವಲದರ್ಶನಮಿತಿ ನಾಮಾಭಿಧಾನಮ್ । ಆತ್ಮಾ ಹ್ಯನಂತಸರ್ವಾತ್ಮಪ್ರದೇಶವ್ಯಾಪಿವಿಶುದ್ಧದರ್ಶನಸಾಮಾನ್ಯಾತ್ಮಾ। ಸ ಖಲ್ವನಾದಿದರ್ಶನಾವರಣಕರ್ಮಾವಚ್ಛನ್ನಪ್ರದೇಶಃ ಸನ್, ಯತ್ತದಾವರಣಕ್ಷಯೋಪಶಮಾಚ್ಚಕ್ಷುರಿಂದ್ರಿಯಾವಲಂಬಾಚ್ಚ ಮೂರ್ತದ್ರವ್ಯಂ ವಿಕಲಂ ಸಾಮಾನ್ಯೇನಾವ-ಬುಧ್ಯತೇ ತಚ್ಚಕ್ಷುದರ್ಶನಮ್, ಯತ್ತದಾವರಣಕ್ಷಯೋಪಶಮಾಚ್ಚಕ್ಷುರ್ವರ್ಜಿತೇತರಚತುರಿಂದ್ರಿಯಾನಿಂದ್ರಿ-ಯಾವಲಂಬಾಚ್ಚ ಮೂರ್ತಾಮೂರ್ತದ್ರವ್ಯಂ ವಿಕಲಂ ಸಾಮಾನ್ಯೇನಾವಬುಧ್ಯತೇ ತದಚಕ್ಷುರ್ದರ್ಶನಮ್, ಯತ್ತದಾವರಣಕ್ಷಯೋಪಶಮಾದೇವ ಮೂರ್ತದ್ರವ್ಯಂ ವಿಕಲಂ ಸಾಮಾನ್ಯೇನಾವಬುಧ್ಯತೇ ತದವಧಿದರ್ಶನಮ್, ಯತ್ಸಕಲಾವರಣಾತ್ಯಂತಕ್ಷಯೇ ಕೇವಲ ಏವ ಮೂರ್ತಾಮೂರ್ತದ್ರವ್ಯಂ ಸಕಲಂ ಸಾಮಾನ್ಯೇನಾವಬುಧ್ಯತೇ ತತ್ಸ್ವಭಾವಿಕಂ ಕೇವಲದರ್ಶನಮಿತಿ ಸ್ವರೂಪಾಭಿಧಾನಮ್ ।

ಗಾಥೆ - ೪೨

ಗಾಥಾರ್ಥ ಃ- [ದಂಸಣಮವಿ] ದರ್ಶನವೂ [ಚಕ್ಖುಜುದಂ] ಚಕ್ಷುದರ್ಶನ, [ಅಚಕ್ಖುಜುದಮವಿ ಯ] ಅಚಕ್ಷುದರ್ಶನ, [ಓಹಿಣಾ ಸಹಿಯಂ] ಅವಧಿದರ್ಶನ [ಚಾವಿ] ಮತ್ತು [ಅಣಂತವಿಸಯಂ] ಯಾವುದರ ವಿಷಯವು ಅನಂತವಿದೆ ಅಂಥ [ಅಣಿಧಣಂ] ಅವಿನಾಶಿಯಾದ [ಕೇವಲಿಯಂ] ಕೇವಲದರ್ಶನ [ಪಣ್ಣತ್ತಂ] - ಎಂದು ನಾಲ್ಕು ಭೇದವುಳ್ಳದ್ದೆಂದು ಹೇಳಿದೆ.

ಟೀಕೆ ಃ- ಇಲ್ಲಿ ದರ್ಶನೋಪಯೋಗದ ಭೇದಗಳ ಹೆಸರುಗಳು ಮತ್ತು ಸ್ವರೂಪದ ಕಥನವಿದೆ.

೧) ಚಕ್ಷುದರ್ಶನ, ೨) ಅಚಕ್ಷುದರ್ಶನ, ೩) ಅವಧಿದರ್ಶನ ಮತ್ತು ೪) ಕೇವಲದರ್ಶನವೆಂದು (ದರ್ಶನೋಪಯೋಗದ ಭೇದಗಳ) ಹೆಸರುಗಳ ಕಥನವಿದೆ.

(ಈಗ ಅವುಗಳ ಸ್ವರೂಪದ ಕಥನ ಮಾಡಲಾಗುತ್ತದೆ) ಆತ್ಮನು ವಾಸ್ತವಿಕವಾಗಿ ಅನಂತ, ಎಲ್ಲ ಆತ್ಮ ಪ್ರದೇಶಗಳಲ್ಲಿ ವ್ಯಾಪಕ, ವಿಶುದ್ಧದರ್ಶನಸಾಮಾನ್ಯಸ್ವರೂಪನಿದ್ದಾನೆ. ಅವನು (ಆತ್ಮನು) ವಾಸ್ತವಿಕವಾಗಿ ಅನಾದಿಯಿಂದ ದರ್ಶನಾವರಣಕರ್ಮದಿಂದ ಆಚ್ಛಾದಿತ ಪ್ರದೇಶವುಳ್ಳವನಾಗಿ ವರ್ತಿಸುತ್ತ, ೧) ಆ ಪ್ರಕಾರದ (ಎಂದರೆ ಚಕ್ಷುದರ್ಶನದ) ಆವರಣದ ಕ್ಷಯೋಪಶಮದಿಂದ ಮತ್ತು ಚಕ್ಷುರಿಂದ್ರಿಯದ ಅವಲಂಬನೆಯಿಂದ ಮೂರ್ತದ್ರವ್ಯವನ್ನು ವಿಕಲರೂಪದಿಂದ ಸಾಮಾನ್ಯತಃಅವಬೋಧನ[೧] ಮಾಡುತ್ತಾನೆ ಅದು ಚಕ್ಷುದರ್ಶನವಿದೆ, ೨) ಆ ಪ್ರಕಾರದ ಆವರಣದ ಕ್ಷಯೋಪಶಮದಿಂದ ಹಾಗೂ ಚಕ್ಷುವನ್ನು ಹೊರತುಪಡಿಸಿ ಉಳಿದ ನಾಲ್ಕು ಇಂದ್ರಿಯಗಳು ಹಾಗೂ ಮನಸ್ಸಿನ ಅವಲಂಬನೆಯಿಂದ ಮೂರ್ತ-ಅಮೂರ್ತ ದ್ರವ್ಯಗಳನ್ನು ವಿಕಲರೂಪದಿಂದ ಸಾಮಾನ್ಯತಃ ಅವಬೋಧನ ಮಾಡುತ್ತಾನೆ ಅದು ಅಚಕ್ಷುದರ್ಶನವಿದೆ, ೩) ಆ ಪ್ರಕಾರದ ಆವರಣದ ಕ್ಷಯೋಪಶಮದಿಂದಲೇ ಮೂರ್ತದ್ರವ್ಯವನ್ನು ವಿಕಲರೂಪದಿಂದ ಸಾಮಾನ್ಯತಃ ಅವಬೋಧನ ಮಾಡುತ್ತಾನೆ ಅದು ಅವಧಿದರ್ಶನವಿದೆ, ೪) ಎಲ್ಲ ಆವರಣದ ಪೂರ್ಣಕ್ಷಯದಿಂದ ಕೇವಲವೇ (ಏಕಾಕಿ ಆತ್ಮನೇ), ಮೂರ್ತ ಅಮೂರ್ತ ದ್ರವ್ಯಗಳನ್ನು ಸಕಲರೂಪದಿಂದ

೧. ಸಾಮಾನ್ಯತಃ ಅವಬೋಧನ = ನೋಡುವುದು. (ಸಾಮಾನ್ಯ ಅವಬೋಧ ಎಂದರೆ ಸಾಮಾನ್ಯ ಪ್ರತಿಭಾಸ ಅದು ದರ್ಶನವಿದೆ).

ಣ ವಿಯಪ್ಪದಿ ಣಾಣಾದೋ ಣಾಣೇ ಣಾಣಾಣಿ ಹೋಂತಿ ಣೇಗಾಣಿ ।
ತಮ್ಹಾ ದು ವಿಸ್ಸರೂವಂ ಭಣಿಯಂ ದವಿಯಂ ತ್ತಿ ಣಾಣೇಹಿಂ ॥೪೩॥

ನ ವಿಕಲ್ಪ್ಯತೇ ಜ್ಞಾನಾತ್ ಜ್ಞಾನೀ ಜ್ಞಾನಾನಿ ಭವಂತ್ಯನೇಕಾನಿ ।
ತಸ್ಮಾತ್ತು ವಿಶ್ವರೂಪಂ ಭಣಿತಂ ದ್ರವ್ಯಮಿತಿ ಜ್ಞಾನಿಭಿಃ ॥೪೩॥

ಏಕಸ್ಯಾತ್ಮನೋಽನೇಕಜ್ಞಾನಾತ್ಮಕತ್ವಸಮರ್ಥನಮೇತತ್ ।

ನ ತಾವಜ್ಜ್ಞಾನೀ ಜ್ಞಾನಾತ್ಪೃಥಗ್ಭವತಿ, ದ್ವಯೋರಪ್ಯೇಕಾಸ್ತಿತ್ವನಿರ್ವೃತ್ತತ್ವೇನೈಕದ್ರವ್ಯತ್ವಾತ್, ದ್ವಯೋರಪ್ಯ-ಭಿನ್ನಪ್ರದೇಶತ್ವೇನೈಕಕ್ಷೇತ್ರತ್ವಾತ್, ದ್ವಯೋರಪ್ಯೇಕಸಮಯನಿರ್ವೃತ್ತತ್ವೇನೈಕಕಾಲತ್ವಾತ್, ದ್ವಯೋರಪ್ಯೇಕ-ಸ್ವಭಾವತ್ವೇನೈಕಭಾವತ್ವಾತ್ । ನ ಚೈವಮುಚ್ಯಮಾನೇಪ್ಯೇಕಸ್ಮಿನ್ನಾತ್ಮನ್ಯಾಭಿನಿಬೋಧಿಕಾದೀನ್ಯನೇಕಾನಿ ಜ್ಞಾನಾನಿ ವಿರುಧ್ಯಂತೇ, ದ್ರವ್ಯಸ್ಯ ವಿಶ್ವರೂಪತ್ವಾತ್ । ದ್ರವ್ಯಂ ಹಿ ಸಹಕ್ರಮ ಪ್ರವೃತ್ತಾನಂತಗುಣಪರ್ಯಾಯಾಧಾರತಯಾನಂತ-ರೂಪತ್ವಾದೇಕಮಪಿ ವಿಶ್ವರೂಪಮಭಿದೀಯತ ಇತಿ ।

ಸಾಮಾನ್ಯತಃ ಅವಬೋಧನ ಮಾಡುತ್ತಾನೆ ಅದು ಸ್ವಾಭಾವಿಕ ಕೇವಲದರ್ಶನವಿದೆ - ಹೀಗೆ (ದರ್ಶನೋಪಯೋಗ ಭೇದಗಳ) ಸ್ವರೂಪದ ಕಥನವಿದೆ.

ಗಾಥೆ - ೪೩

ಗಾಥಾರ್ಥ ಃ- [ಣಾಣಾದೋ] ಜ್ಞಾನದಿಂದ [ಣಾಣೀ ಣ ವಿಯಪ್ಪದಿ] ಜ್ಞಾನಿಯ (ಆತ್ಮನ) ಭೇದ ಮಾಡಲಾಗುವುದಿಲ್ಲ ; [ಣಾಣಾಣಿ ಣೇಗಾಣಿ ಹೋಂತಿ] ಆದಾಗ್ಯೂ ಜ್ಞಾನಗಳು ಅನೇಕವಿವೆ. [ತಮ್ಹಾ ದು] ಅದಕ್ಕಾಗಿಯೇ [ಣಾಣೇಹಿಂ] ಜ್ಞಾನಿಗಳು [ದವಿಯಂ] ದ್ರವ್ಯವನ್ನು [ವಿಸ್ಸರೂವಂ ತ್ತಿ ಭಣಿಯಂ] ವಿಶ್ವರೂಪ (ಅನೇಕರೂಪ)ವೆಂದೂ ಹೇಳಿದ್ದಾರೆ.

ಟೀಕೆ ಃ- ಇದು ಒಬ್ಬ ಆತ್ಮನು ಅನೇಕ ಜ್ಞಾನಾತ್ಮಕನಾಗುವುದರ ಸಮರ್ಥನವಿದೆ.

ಮೊದಲಂತೂ ಜ್ಞಾನಿಯು (ಆತ್ಮನು) ಜ್ಞಾನದಿಂದ ಬೇರೆಯಿಲ್ಲ; ಏಕೆಂದರೆ ಎರಡೂ ಒಂದೇ ಅಸ್ತಿತ್ವದಿಂದ ನಿರ್ಮಾಣವಾಗಿರುವುದರಿಂದ ಎರಡಕ್ಕೂ ಏಕದ್ರವ್ಯತ್ವವಿದೆ, ಎರಡರ ಪ್ರದೇಶಗಳು ಅಭಿನ್ನವಾಗಿರುವುದರಿಂದ ಎರಡಕ್ಕೂ ಏಕಕ್ಷೇತ್ರತ್ವವಿದೆ, ಎರಡೂ ಒಂದೇ ಸಮಯದಲ್ಲಿ ನಿರ್ಮಾಣಗೊಳ್ಳುವುದರಿಂದ ಎರಡಕ್ಕೂ ಏಕಕಾಲತ್ವವಿದೆ, ಎರಡರ ಸ್ವಭಾವಗಳು ಒಂದೇ ಆಗಿರುವುದರಿಂದ ಎರಡಕ್ಕೂ ಏಕಭಾವತ್ವವಿದೆ. ಆದರೆ ಹೀಗೆ ಹೇಳಿದ ಮೇಲೂ ಕೂಡ ಒಬ್ಬ ಆತ್ಮನಲ್ಲಿ ಆಭಿನಿಬೋಧಿಕ (ಮತಿ) ಮೊದಲಾದ ಅನೇಕ ಜ್ಞಾನಗಳು ವಿರೋಧ ಹೊಂದುವುದಿಲ್ಲ. ಏಕೆಂದರೆ ದ್ರವ್ಯವು ವಿಶ್ವರೂಪವಿದೆ. ವಾಸ್ತವಿಕವಾಗಿ ದ್ರವ್ಯಕ್ಕೆ ಸಹವರ್ತಿ ಮತ್ತು ಕ್ರಮವರ್ತಿಯಂಥ ಅನಂತಗುಣಗಳ

ಜ್ಞಾನದಿಂದ ಜ್ಞಾನಿಯಭೇದವನು ಮಾಡಲಿಕ್ಕಾಗದಿದ್ದರು ಜ್ಞಾನಗಳು ।
ಅನೇಕವಿರುವುದರಿಂದ ಜ್ಞಾನಿಗಳು ದ್ರವ್ಯವನು ವಿಶ್ವರೂಪವೆಂದಿಹರು ॥೪೩॥

ಜದಿ ಹವದಿ ದವ್ವಮಣ್ಣಂ ಗುಣದೋ ಯ ಗುಣಾ ಯ ದವ್ವದೋ ಅಣ್ಣೇ ।
ದವ್ವಾಣಂತಿಯಮಥವಾ ದವ್ವಾಭಾವಂ ಪಕುವ್ವಂತಿ ॥೪೪॥

ಯದಿ ಭವತಿ ದ್ರವ್ಯಮನ್ಯದ್ಗುಣತಶ್ಚ ದ್ರವ್ಯತೋऽನ್ಯೇ ।
ದ್ರವ್ಯಾನಂತ್ಯಮಥವಾ ದ್ರವ್ಯಾಭಾವಂ ಪ್ರಕುರ್ವಂತಿ ॥೪೪॥

ದ್ರವ್ಯಸ್ಯ ಗುಣೇಭ್ಯೋ ಭೇದೇ, ಗುಣಾನಾಂ ಚ ದ್ರವ್ಯಾದ್ಭೇದೇ ದೋಷೋಪನ್ಯಾಸೋऽಯಮ್ ।

ಗುಣಾ ಹಿ ಕ್ವಚಿದಾಶ್ರಿತಾಃ । ಯತ್ಸಾಶ್ರಿತಾಸ್ತದ್ದ್ರವ್ಯಂ । ತಚ್ಚೇದನ್ಯದ್ಗುಣೇಭ್ಯಃ । ಪುನರಪಿ ಗುಣಾಃ ಕ್ವಚಿದಾಶ್ರಿತಾಃ । ಯತ್ರಾಶ್ರಿತಾಸ್ತದ್ದ್ರವ್ಯಮ್ । ತದಪಿ ಅನ್ಯಚ್ಚೇದ್ಗುಣೇಭ್ಯಃ ಪುನರಪಿ ಗುಣಾಃ ಕ್ವಚಿದಾಶ್ರಿತಾಃ । ಯತ್ರಾಶ್ರಿತಾಃ ತದ್ದ್ರವ್ಯಮ್ । ತದಪ್ಯನ್ಯದೇವ ಗುಣೇಭ್ಯಃ । ಏವಂ ದ್ರವ್ಯಸ್ಯ ಗುಣೇಭ್ಯೋ ಭೇದೇ ಭವತಿ ದ್ರವ್ಯಾನಂತ್ಯಮ್ । ದ್ರವ್ಯಂ ಹಿ ಗುಣಾನಾಂ ಸಮುದಾಯಃ । ಗುಣಾಶ್ಚೇದನ್ಯೇ ಸಮುದಾಯಾತ್, ಕೋ ನಾಮ ಸಮುದಾಯಃ । ಏವ ಗುಣಾನಾಂ ದ್ರವ್ಯಾದ್ಭೇದೇ ಭವತಿ ದ್ರವ್ಯಾಭಾವ ಇತಿ ।

ಹಾಗೂ ಪರ್ಯಾಯಗಳ ಆಧಾರವಿರುವ ಕಾರಣ ಅನಂತರೂಪವುಳ್ಳದ್ದಿರುವುದರಿಂದ ಒಂದೇ ಇದ್ದರೂ ವಿಶ್ವರೂಪ[೧]ವೆಂದು ಹೇಳಲಾಗುತ್ತದೆ.

ಗಾಥೆ - ೪೪

ಗಾಥಾರ್ಥ :- [ಜದಿ) ಒಂದುವೇಳೆ [ದವ್ವಂ] ದ್ರವ್ಯವು [ಗುಣದೋ] ಗುಣಗಳಿಂದ [ಅಣ್ಣಂ ಯ ಹವದಿ] ಬೇರೆ (ಭಿನ್ನ) ಇದ್ದರೆ [ಯ ಗುಣಾ] ಮತ್ತು ಗುಣಗಳು [ದವ್ವದೋ ಅಣ್ಣೇ] ದ್ರವ್ಯದಿಂದ ಬೇರೆಯಿದ್ದರೆ [ದವ್ವಾಣಂತಿಯಂ] ದ್ರವ್ಯದ ಅನಂತತೆಯಾಗುವುದು [ಅಥವಾ] ಇಲ್ಲವೆ [ದವ್ವಾಭಾವಂ] ದ್ರವ್ಯದ ಅಭಾವವು [ಪಕುವ್ವಂತಿ] ಆಗುವುದು

ಟೀಕೆ :- ಗುಣಗಳಿಂದ ದ್ರವ್ಯದ ಭಿನ್ನತೆಯಾದರೆ ಮತ್ತು ದ್ರವ್ಯದಿಂದ ಗುಣಗಳ ಭಿನ್ನತೆಯಾದರೆ ದೋಷವು ಬರುತ್ತದೆಂಬುದರ ಕಥನವಿದೆ.

ವಾಸ್ತವಿಕವಾಗಿ ಗುಣಗಳು ಯಾವುದಾದರೊಂದರ ಆಶ್ರಯದಿಂದ ಇರುತ್ತವೆ ; (ಅವು) ಯಾವುದರ ಆಶ್ರಯದಿಂದಿರುತ್ತವೆ ಅದು ದ್ರವ್ಯವಿರುತ್ತದೆ ಅದು (ದ್ರವ್ಯವು) ಒಂದು ವೇಳೆ ಗುಣಗಳಿಂದ ಬೇರೆ (ಭಿನ್ನ) ಆದರೆ

ದ್ರವ್ಯವು ಗುಣಗಳಿಂದ ಭಿನ್ನಮೇಕ್ ಗುಣಗಳು ದ್ರವ್ಯದಿಂದನ್ಯವಾದರೆ ।
ದ್ರವ್ಯದ ಅನಂತತೆಯಿಲ್ಲದಿದ್ದರೆ ದ್ರವ್ಯದ ಅಭಾವತಾನಾಗಬಹುದು ॥೪೪॥

---

೧. ವಿಶ್ವರೂಪ ಅನೇಕರೂಪ, [ಒಂದು ದ್ರವ್ಯಕ್ಕೆ ಸಹವರ್ತಿ ಅನಂತಗುಣಗಳ ಮತ್ತು ಕ್ರಮವರ್ತಿ ಅನಂತ ಪರ್ಯಾಯಗಳ ಆಧಾರವಿರುವ ಕಾರಣ ಅನಂತರೂಪವುಳ್ಳದ್ದೂ ಇರುವುದರಿಂದ ಅದಕ್ಕೆ ವಿಶ್ವರೂಪ (ಅನೇಕರೂಪ) ವೆಂದೂ ಹೇಳಲಾಗುತ್ತದೆ. ಅದಕ್ಕಾಗಿ ಒಬ್ಬ ಆತ್ಮನು ಅನೇಕ ಜ್ಞಾನಾತ್ಮಕನಾಗುವಲ್ಲಿ ವಿರೋಧವಿಲ್ಲ.]

ಅವಿಭತ್ತಮಣಣ್ಣತ್ತಂ ದವ್ವಗುಣಾಣಂ ವಿಭತ್ತಮಣ್ಣತ್ತಂ ।
ಣೇಚ್ಛಂತಿ ಣಿಚ್ಛಯಣ್ಣೂ ತವ್ವಿವರೀದಂ ಹಿ ವಾ ತೇಸಿಂ ॥೪೫॥

ಅವಿಭಕ್ತಮನನ್ಯತ್ವಂ ದ್ರವ್ಯಗುಣಾನಾಂ ವಿಭಕ್ತಮನ್ಯತ್ವಮ್ ।
ನೇಚ್ಛಂತಿ ನಿಶ್ಚಯಜ್ಞಾಸ್ತದ್ವಿಪರೀತಂ ಹಿ ವಾ ತೇಷಾಮ್ ॥೪೫॥

ದ್ರವ್ಯಗುಣಾನಾಂ ಸ್ವೋಚಿತಾನನ್ಯತ್ವೋಕ್ತಿರಿಯಮ್ ।

ಅವಿಭಕ್ತಪ್ರದೇಶತ್ವಲಕ್ಷಣಂ ದ್ರವ್ಯಗುಣಾನಾಮನನ್ಯತ್ವಮಭ್ಯುಪಗಮ್ಯತೇ । ವಿಭಕ್ತಪ್ರದೇಶತ್ವಲಕ್ಷಣಂ ತ್ವನ್ಯತ್ವಮನನ್ಯತ್ವಂ ಚ ನಾಭ್ಯುಪಗಮ್ಯತೇ । ತಥಾ ಹಿ- ಯಥೈಕಸ್ಯ ಪರಮಾಣೋರೇಕೇನಾತ್ಮಪ್ರದೇಶೇನ ಸಹಾವಿಭಕ್ತತ್ವಾದನನ್ಯತ್ವಂ, ತಥೈಕಸ್ಯ ಪರಮಾಣೋಸ್ತದ್ವರ್ತಿನಾಂ ಸ್ಪರ್ಶರಸಗಂಧವರ್ಣಾದಿಗುಣಾನಾಂ

ಪುನಃ ಆ ಗುಣಗಳು ಯಾವುದರ ಆಶ್ರಯದಿಂದ ಇರಬಲ್ಲವು ; (ಅವು) ಯಾವುದರ ಆಶ್ರಿತವಾಗಿವೆ ಅದು ದ್ರವ್ಯವಿರುತ್ತದೆ, ಅದು ಒಂದು ವೇಳೆ ಗುಣಗಳಿಂದ ಬೇರೆಯಾದರೆ ಪುನಃ ಆ ಗುಣಗಳು ಯಾವುದರ ಆಶ್ರಯದಿಂದ ಇರಬಲ್ಲವು; (ಅವು) ಯಾವುದರ ಆಶ್ರಿತವಾಗಿವೆ ಅದು ದ್ರವ್ಯವಿರುತ್ತದೆ, ಅದೂ ಗುಣಗಳಿಂದ ಬೇರೆಯೇ ಆದರೆ...ಹೀಗೆ ಒಂದು ವೇಳೆ ಗುಣಗಳಿಂದ ದ್ರವ್ಯದ ಭಿನ್ನತೆಯಾದರೆ ದ್ರವ್ಯದ ಅನಂತತೆಯಾಗುವುದು.

ವಾಸ್ತವಿಕವಾಗಿ ದ್ರವ್ಯವು ಎಂದರೆ ಗುಣಗಳ ಸಮುದಾಯವು, ಒಂದು ವೇಳೆ ಗುಣಗಳ ಸಮುದಾಯದಿಂದ ಬೇರೆಯಾದರೆ ಸಮುದಾಯ ಯಾವುದು ? (ಎಂದರೆ ಒಂದು ವೇಳೆ ಗುಣಗಳನ್ನು ಸಮುದಾಯದಿಂದ ಬೇರೆಯೆಂದು ನಂಬಿದರೆ ಸಮುದಾಯವು ಎಲ್ಲಿಂದ ಸಂಭವಿಸುತ್ತದೆ ? ಎಂದರೆ ದ್ರವ್ಯವೇ ಎಲ್ಲಿಂದ ಸಂಭವಿಸುತ್ತದೆ?) ಈ ಪ್ರಕಾರ ಒಂದು ವೇಳೆ ಗುಣಗಳು ದ್ರವ್ಯದಿಂದ ಬೇರೆಯಾದರೆ ದ್ರವ್ಯದ ಅಭಾವವಾಗುವುದು.

ಗಾಥೆ - ೪೫

ಗಾಥಾರ್ಥ :- [ದವ್ವಗುಣಾಣಂ] ದ್ರವ್ಯ ಮತ್ತು ಗುಣಗಳಲ್ಲಿ [ಅವಿಭತ್ತಮಣಣ್ಣತ್ತಂ] ಅವಿಭಕ್ತತ್ವ ರೂಪದ ಅನನ್ಯತೆಯಿದೆ ; [ಣಿಚ್ಛಯಣ್ಣೂ ಹಿ] ನಿಶ್ಚಯವನ್ನು ತಿಳಿದವರು [ತೇಸಿಂ] ಅವನ್ನು [ವಿಭತ್ತಮಣ್ಣತ್ತಂ] ವಿಭಕ್ತತ್ವರೂಪ- ಅನ್ಯತೆ [ವಾ] ಅಥವಾ [ತವ್ವಿವರೀದಂ] (ವಿಭಕ್ತತ್ವರೂಪ) ಅನನ್ಯತೆಯನ್ನಾಗಿ [ಣೇಚ್ಛಂತಿ] ಮನ್ನಿಸುವುದಿಲ್ಲ.

ಟೀಕೆ :- ಇದು ದ್ರವ್ಯ ಮತ್ತು ಗುಣಗಳ ಸ್ವೋಚಿತವಾದ ಅನನ್ಯತೆಯ ಕಥನವಿದೆ. (ಎಂದರೆ ದ್ರವ್ಯ ಮತ್ತು ಗುಣಗಳಲ್ಲಿ ಅನನ್ಯತೆಯು ಹೇಗೆ ಸಂಭವಿಸುತ್ತದೆ ಅದನ್ನು ಇಲ್ಲಿ ಹೇಳಿದೆ.)

ದ್ರವ್ಯಮೇಣ್ ಗುಣಗಳಲಿ ಅವಿಭಕ್ತರೂಪದ ಅನನ್ಯತೆಯಿರುವುದು ।
ದ್ರವ್ಯ-ಗುಣಗಳವಿಭಕ್ತನನ್ಯತೆಯಿಲ್ಲವೆ ಅನ್ಯತೆಯ ಬುಧರು ಮನ್ನಿಸರು ॥೪೫॥

ಚಾವಿಭಕ್ತಪ್ರದೇಶತ್ವಾದನನ್ಯತ್ವಮ್ । ಯಥಾ ತ್ವತ್ಯಂತವಿಪ್ರಕೃಷ್ಟಯೋಃ ಸಹ್ಯವಿಂಧ್ಯಯೋರತ್ಯಂತಸನ್ನಿಕೃಷ್ಟಯೋಶ್ಚ ಮಿಶ್ರಿತಯೋಸ್ತೋಯಪಯಸೋರ್ವಿಭಕ್ತಪ್ರದೇಶತ್ವಲಕ್ಷಣಮನ್ಯತ್ವಮನನ್ಯತ್ವಂ ಚ, ನ ತಥಾ ದ್ರವ್ಯಗುಣಾನಾಂ ವಿಭಕ್ತಪ್ರದೇಶತ್ವಾಭಾವಾದನ್ಯತ್ವಮನನ್ಯತ್ವಂ ಚೇತಿ ।

ವವದೇಸಾ ಸಂಠಾಣಾ ಸಂಖಾ ವಿಸಯಾ ಯ ಹೋಂತಿ ತೇ ಬಹುಗಾ ।
ತೇ ತೇಸಿಮಣಣ್ಣತ್ತೇ ಅಣ್ಣತ್ತೇ ಚಾವಿ ವಿಜ್ಜಂತೇ ॥೪೬॥

ವ್ಯಪದೇಶಾಃ ಸಂಸ್ಥಾನಾನಿ ಸಂಖ್ಯಾ ವಿಷಯಾಶ್ಚ ಭವಂತಿ ತೇ ಬಹುಕಾಃ ।
ತೇ ತೇಷಾಮನನ್ಯತ್ವೇ ಅನ್ಯತ್ವೇ ಚಾಪಿ ವಿದ್ಯಂತೇ ॥೪೬॥

ದ್ರವ್ಯ ಮತ್ತು ಗುಣಗಳಲ್ಲಿ ಅವಿಭಕ್ತ[೧] ಪ್ರದೇಶತ್ವಸ್ವರೂಪದ ಅನನ್ಯತೆಯನ್ನು ಸ್ವೀಕಾರ ಮಾಡಲಾಗುತ್ತದೆ; ಆದರೆ ವಿಭಕ್ತ ಪ್ರದೇಶತ್ವ ಸ್ವರೂಪದ ಅನ್ಯತೆ ಹಾಗೂ (ವಿಭಕ್ತಪ್ರದೇಶತ್ವಸ್ವರೂಪ) ಅನನ್ಯತೆಯನ್ನು ಸ್ವೀಕಾರ ಮಾಡಲಾಗುವುದಿಲ್ಲ. ಅದನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತಾರೆ - ಯಾವ ಪ್ರಕಾರ ಒಂದು ಪರಮಾಣುವಿಗೆ ಒಂದು ತನ್ನ ಪ್ರದೇಶದೊಡನೆ ಅವಿಭಕ್ತತೆಯಿರುವುದರಿಂದ ಅನನ್ಯತೆಯಿದೆ, ಅದೇ ಪ್ರಕಾರ ಒಂದು ಪರಮಾಣುವಿಗೆ ಹಾಗೂ ಅದರಲ್ಲಿರುವಂಥ ಸ್ಪರ್ಶ-ರಸ-ಗಂಧ-ವರ್ಣ ಮೊದಲಾದ ಗುಣಗಳಲ್ಲಿ ಅವಿಭಕ್ತ ಪ್ರದೇಶವಿರುವುದರಿಂದ (ಅವಿಭಕ್ತ ಪ್ರದೇಶತ್ವಸ್ವರೂಪ) ಅನನ್ಯತೆಯಿದೆ ; ಆದರೆ ಯಾವ ಪ್ರಕಾರ ಅತ್ಯಂತ ದೂರದಂಥ ಸಹ್ಯ [೨] ಮತ್ತು ವಿಂಧ್ಯಗಳಿಗೆ ವಿಭಕ್ತಪ್ರದೇಶತ್ವ ಸ್ವರೂಪದ ಅನ್ಯತೆಯಿದೆ, ಅದರಂತೆ ಅತ್ಯಂತ ನಿಕಟದಂಥ ಮಿಶ್ರಿತವಾದ ಕ್ಷೀರನೀರ [೩] ಗಳಿಗೆ ವಿಭಕ್ತ ಪ್ರದೇಶತ್ವಸ್ವರೂಪದ ಅನನ್ಯತೆಯಿದೆ, ಅದೇ ಪ್ರಕಾರ ದ್ರವ್ಯ ಮತ್ತು ಗುಣಗಳಿಗೆ ವಿಭಕ್ತಪ್ರದೇಶ ವಿಲ್ಲದಿರುವುದರಿಂದ (ವಿಭಕ್ತಪ್ರದೇಶತ್ವ ಸ್ವರೂಪ) ಅನ್ಯತೆ ಹಾಗೂ (ವಿಭಕ್ತ ಪ್ರದೇಶತ್ವಸ್ವರೂಪ) ಅನನ್ಯತೆಯಿಲ್ಲ.

ಗಾಥೆ - ೪೬

ಗಾಥಾರ್ಥ :- [ವವದೇಸಾ] ವ್ಯಪದೇಶ, [ಸಂಠಾಣಾ] ಸಂಸ್ಥಾನ [ಸಂಖಾ] ಸಂಖ್ಯೆಗಳು [ಯ] ಮತ್ತು [ವಿಸಯಾ] ವಿಷಯ [ತೇ ಬಹುಗಾ ಹೋಂತಿ] ಇವು ಅನೇಕವಿರುತ್ತವೆ. [ತೇ] ಅವು (ವ್ಯಪದೇಶ ಮೊದಲಾದವು), [ತೇಸಿಂ] ದ್ರವ್ಯ-ಗುಣಗಳ [ಅಣ್ಣತ್ತೇ] ಅನ್ಯತ್ವದಲ್ಲಿ [ಅಣಣ್ಣತ್ತೇ ಚ ಅವಿ] ಮತ್ತು ಅನನ್ಯತ್ವದಲ್ಲಿ ಕೂಡ [ವಿಜ್ಜಂತೇ] ಇರಬಹುದಾಗಿದೆ.

ವ್ಯಪದೇಶ, ಸಂಸ್ಥಾನ, ಸಂಖ್ಯೆಯಿಲ್ಲದೆ ವಿಷಯಗಳಿವು ಅನೇಕವಿರುವವು ।
ವ್ಯಪದೇಶಾದಿ ದ್ರವ್ಯ-ಗುಣಗಳ ಅನ್ಯತೆ ಅನನ್ಯತೆಯಲೂ ಸಂಭವಿಪವು ॥೪೬॥

---

೧. ಅವಿಭಕ್ತ = ಅಭಿನ್ನ, (ದ್ರವ್ಯ ಮತ್ತು ಗುಣಗಳ ಪ್ರದೇಶಗಳು ಅಭಿನ್ನವಿರುವುದರಿಂದ ದ್ರವ್ಯ ಮತ್ತು ಗುಣಗಳಿಗೆ ಅಭಿನ್ನ ಪ್ರದೇಶತ್ವ ಸ್ವರೂಪದ ಅನನ್ಯತೆಯಿದೆ.)

೨. ಅತ್ಯಂತ ದೂರದಲ್ಲಿದ್ದ ಸಹ್ಯಾದ್ರಿ ಮತ್ತು ವಿಂಧ್ಯಾದ್ರಿ ಪರ್ವತಗಳಿಗೆ ಭಿನ್ನಪ್ರದೇಶತ್ವ ಸ್ವರೂಪದ ಅನ್ಯತೆಯಿದೆ.

೩. ಅತ್ಯಂತ ಸಮೀಪದಲ್ಲಿದ್ದ ಮಿಶ್ರಿತವಾದ ಹಾಲು-ನೀರುಗಳಿಗೆ ಭಿನ್ನ ಪ್ರದೇಶತ್ವ ಸ್ವರೂಪದ ಅನನ್ಯತೆಯಿದೆ. ದ್ರವ್ಯ ಮತ್ತು ಗುಣಗಳಿಗೆ ಇಂಥ ಅನನ್ಯತೆಯಿಲ್ಲ, ಆದರೆ ಅಭಿನ್ನ ಪ್ರದೇಶತ್ವ ಸ್ವರೂಪದ ಅನನ್ಯತೆಯಿದೆ.

ವ್ಯಪದೇಶಾದೀನಾಮೇಕಾಂತೇನ ದ್ರವ್ಯಗುಣಾನ್ಯತ್ವನಿಬಂಧನತ್ವಮತ್ರ ಪ್ರತ್ಯಾಖ್ಯಾತಮ್ ।

ಯಥಾ ದೇವದತ್ತಸ್ಯ ಗೌರಿತ್ಯನ್ಯತ್ವೇ ಷಷ್ಠೀವ್ಯಪದೇಶಃ, ತಥಾ ವೃಕ್ಷಸ್ಯ ಶಾಖಾ ದ್ರವ್ಯಸ್ಯ ಗುಣಾ ಇತ್ಯನನ್ಯತ್ವೇಽಪಿ । ಯಥಾ ದೇವದತ್ತಃ ಫಲಮಂಕುಶೇನ ಧನದತ್ತಾಯ ವೃಕ್ಷಾದ್ಘಾಟಿಕಾಯಾಮವಚಿನೋತೀತ್ಯನ್ಯತ್ವೇ ಕಾರಕವ್ಯಪದೇಶಃ, ತಥಾ ಮೃತ್ತಿಕಾ ಘಟಭಾವಂ ಸ್ವಯಂ ಸ್ವೇನ ಸ್ವಸ್ಮೈ ಸ್ವಸ್ಮಾತ್ ಸ್ವಸ್ಮಿನ್ ಕರೋತೀತ್ಯಾತ್ಮಾತ್ಮಾನಮಾತ್ಮನಾತ್ಮನೇ ಆತ್ಮನ ಆತ್ಮನಿ ಜಾನಾತೀತ್ಯನನ್ಯತ್ವೇಽಪಿ । ಯಥಾ ಪ್ರಾಂಶೋರ್ದೇವದತ್ತಸ್ಯ ಪ್ರಾಂಶುರ್ಗೌರಿತ್ಯನ್ಯತ್ವೇ ಸಂಸ್ಥಾನಂ, ತಥಾ ಪ್ರಾಂಶೋರ್ವೃಕ್ಷಸ್ಯ ಪ್ರಾಂಶುಃ ಶಾಖಾಭರೋ ಮೂರ್ತದ್ರವ್ಯಸ್ಯ ಮೂರ್ತಾ ಗುಣಾ ಇತ್ಯನನ್ಯತ್ವೇಪಿ । ಯಥೈಕಸ್ಯ ದೇವದತ್ತಸ್ಯ ದಶಗಾವ ಇತ್ಯನ್ಯತ್ವೇ ಸಂಖ್ಯಾ , ತಥೈಕಸ್ಯ ವೃಕ್ಷಸ್ಯ ದಶ ಶಾಖಾಃಏಕಸ್ಯ ದ್ರವ್ಯಸ್ಯಾನಂತಾ ಗುಣಾ ಇತ್ಯನನ್ಯತ್ವೇಽಪಿ । ಯಥಾ ಗೋಷ್ಠೇ ಗಾವ ಇತ್ಯನ್ಯತ್ವೇ ವಿಷಯಃ, ತಥಾ ವೃಕ್ಷೇ ಶಾಖಾಃ ದ್ರವ್ಯೇ ಗುಣಾ ಇತ್ಯನನ್ಯತ್ವೇಽಪಿ । ತತೋ ನ ವ್ಯಪದೇಶಾದಯೋ ದ್ರವ್ಯಗುಣಾನಾಂ ವಸ್ತುತ್ವೇನ ಭೇದಂ ಸಾಧಯಂತೀತಿ ।

ಟೀಕೆ :- ಇಲ್ಲಿ ವ್ಯಪದೇಶ [೧] ಮೊದಲಾದವು ಏಕಾಂತದಿಂದ ದ್ರವ್ಯ-ಗುಣಗಳ ಅನನ್ಯತ್ವಕ್ಕೆ ಕಾರಣ-ವಾಗುವುದರ ಖಂಡನೆ ಮಾಡಿದೆ.

ಯಾವ ಪ್ರಕಾರ ''ದೇವದತ್ತನ ಹಸು'' ಹೀಗೆ ಅನ್ಯತ್ವದಲ್ಲಿ ಷಷ್ಠೀವ್ಯಪದೇಶ (ಷಷ್ಠೀ ವಿಭಕ್ತಿಯ ಕಥನ) ವಾಗುತ್ತದೆ. ಅದೇ ಪ್ರಕಾರ ''ಮರದ ಕೊಂಬೆ'', ''ದ್ರವ್ಯದ ಗುಣ'' ಇಂಥ ಅನನ್ಯತ್ವದಲ್ಲೂ (ಷಷ್ಠೀವ್ಯಪದೇಶ) ಆಗುತ್ತದೆ. ಯಾವ ಪ್ರಕಾರ 'ಉಪವನದಲ್ಲಿ ದೇವದತ್ತನು ಧನದತ್ತನಿಗಾಗಿ ಮರದಿಂದ ಹಣ್ಣನ್ನು ಅಂಕುಶದ ಮುಖಾಂತರ ಕೊಯ್ಯುತ್ತಾನೆ' ಇಂಥ ಅನ್ಯತ್ವದಲ್ಲಿ ಕಾರಕವ್ಯಪದೇಶವಾಗುತ್ತದೆ, ಅದೇ ಪ್ರಕಾರ 'ಮಣ್ಣು ತಾನಾಗಿ ಘಟಭಾವವನ್ನು (ಕೊಡರೂಪ ಪರಿಣಾಮವನ್ನು) ತನ್ನಿಂದ ತನಗಾಗಿ ತನ್ನೊಳಗಿಂದ ತನ್ನಲ್ಲಿ ಮಾಡುತ್ತದೆ', 'ಆತ್ಮನು ಆತ್ಮನನ್ನು ಆತ್ಮನಿಂದ ಆತ್ಮನಿಗಾಗಿ, ಆತ್ಮನೊಳಗಿಂದ ಆತ್ಮನಲ್ಲಿ ತಿಳಿಯುತ್ತಾನೆ' ಇಂಥ ಅನನ್ಯತ್ವದಲ್ಲೂ (ಕಾರಣವ್ಯಪದೇಶ) ಆಗುತ್ತದೆ. ಯಾವ ಪ್ರಕಾರ 'ಎತ್ತರವಾದ ದೇವದತ್ತನ ಎತ್ತರವಾದ ಹಸು' ಇಂಥ ಅನ್ಯತ್ವದಲ್ಲಿ ಸಂಸ್ಥಾನವಿರುತ್ತದೆ. ಅದೇ ಪ್ರಕಾರ 'ವಿಶಾಲ ವೃಕ್ಷದ ವಿಶಾಲ ಶಾಖಾ ಸಮುದಾಯ', 'ಮೂರ್ತದ್ರವ್ಯದ ಮೂರ್ತಗುಣ' - ಇಂಥ ಅನ್ಯತ್ವದಲ್ಲಿ ಸಂಖ್ಯೆಯಿರುತ್ತದೆ, ಅದೇ ಪ್ರಕಾರ 'ಒಂದು ಮರದ ಹತ್ತು ರೆಂಬೆಗಳು', 'ಒಂದು ದ್ರವ್ಯದ ಅನಂತ ಗುಣಗಳು' ಇಂಥ ಅನನ್ಯತ್ವದಲ್ಲೂ (ಸಂಖ್ಯೆ) ಇರುತ್ತದೆ. ಯಾವ ಪ್ರಕಾರ 'ಕೊಟ್ಟಿಗೆಯಲ್ಲಿ ಹಸುಗಳು' ಇಂಥ ಅನ್ಯತ್ವದಲ್ಲಿ ವಿಷಯ (ಆಧಾರ)ವಿರುತ್ತದೆ, ಅದೇ ಪ್ರಕಾರ 'ವೃಕ್ಷದಲ್ಲಿ ಶಾಖೆಗಳು', 'ದ್ರವ್ಯದಲ್ಲಿ ಗುಣಗಳು' ಇಂಥ ಅನನ್ಯತ್ವದಲ್ಲೂ (ವಿಷಯ) ಇರುತ್ತದೆ. ಅದಕ್ಕಾಗಿ ವ್ಯಪದೇಶ ಮೊದಲಾದವುಗಳಲ್ಲಿದ್ರವ್ಯ-ಗುಣಗಳಲ್ಲಿ ವಸ್ತುರೂಪದಿಂದ ಭೇದವನ್ನು ಸಿದ್ಧಮಾಡುವುದಿಲ್ಲ (ಎಂದು ತಿಳಿಯಬೇಕು.)

---

೧. ವ್ಯಪದೇಶ = ಕಥನ ; ಅಭಿಧಾನ. (ಎಲ್ಲಿ ಭೇದವಿರುತ್ತದೆ ಅಲ್ಲಿ ವ್ಯಪದೇಶ ಮೊದಲಾದವು ಸಂಭವಿಸುತ್ತವೆ ಹೀಗೇನೂ ಇಲ್ಲ; ಎಲ್ಲಿ ಅಭೇದವಿರುತ್ತದೆ ಅಲ್ಲಿಯೂ ಅವು ಸಂಭವಿಸುತ್ತವೆ. ಅದಕ್ಕಾಗಿ ದ್ರವ್ಯ - ಗುಣಗಳಲ್ಲಿ ಯಾವ ವ್ಯಪದೇಶ ಮೊದಲಾದುವಾಗುತ್ತವೆ ಅವು ಎಲ್ಲೂ ಏಕಾಂತದಿಂದ ದ್ರವ್ಯ-ಗುಣಗಳ ಭೇದವನ್ನು ಸಿದ್ಧಮಾಡುವುದಿಲ್ಲವೆಂದು ಈ ಗಾಥೆಯಲ್ಲಿ ತಿಳಿಸಲಾಗಿದೆ.)

ಣಾಣಂ ಧಣಂ ಚ ಕುವ್ವದಿ ಧಣೆಣಂ ಜಹ ಣಾಣೆಣಂ ಚ ದುವಿಧೇಹಿಂ ।
ಭಣ್ಣಂತಿ ತಹ ಪುಧತ್ತಂ ಏಯತ್ತಂ ಚಾವಿ ತಚ್ಚಣ್ಹೂ ॥೪೭॥

ಜ್ಞಾನಂ ಧನಂ ಚ ಕರೋತಿ ಧನಿನಂ ಯಥಾ ಜ್ಞಾನಿನಂ ಚ ದ್ವಿವಿಧಾಭ್ಯಾಮ್ ।
ಭಣಂತಿ ತಥಾ ಪೃಥಕ್ತ್ವಮೇಕತ್ವಂ ಚಾಪಿ ತತ್ತ್ವಜ್ಞಾಃ ॥೪೭॥

ವಸ್ತುತ್ವಭೇದಾಭೇದೋದಾಹರಣಮೇತತ್ ।

ಯಥಾ ಧನಂ ಭಿನ್ನಾಸ್ತಿತ್ವನಿರ್ವೃತ್ತಂ ಭಿನ್ನಾಸ್ತಿತ್ವನಿರ್ವೃತ್ತಸ್ಯ , ಭಿನ್ನಸಂಸ್ಥಾನಂ ಭಿನ್ನಸಂಸ್ಥಾನಸ್ಯ , ಭಿನ್ನಸಂಖ್ಯಂ ಭಿನ್ನಸಂಖ್ಯಸ್ಯ , ಭಿನ್ನವಿಷಯಲಬ್ಧವೃತ್ತಿಕಂ ಭಿನ್ನವಿಷಯಲಬ್ಧವೃತ್ತಿಕಸ್ಯ ಪುರುಷಸ್ಯ ಧನೀತಿ ವ್ಯಪದೇಶಂ ಪೃಥಕ್ತ್ವಪ್ರಕಾರೇಣ ಕುರುತೇ, ಯಥಾ ಚ ಜ್ಞಾನಮಭಿನ್ನಾಸ್ತಿತ್ವನಿರ್ವೃತ್ತಮಭಿನ್ನಾಸ್ತಿತ್ವನಿವೃತ್ತಸ್ಯಾಭಿನ್ನಸಂಸ್ಥಾನಮಭಿನ್ನ-ಸಂಸ್ಥಾನಸ್ಯಾಭಿನ್ನಸಂಖ್ಯಮಭಿನ್ನಸಂಖ್ಯಸ್ಯಾಭಿನ್ನವಿಷಯಲಬ್ಧವೃತ್ತಿಕಮಭಿನ್ನವಿಷಯಲಬ್ಧವೃತ್ತಿಕಸ್ಯ ಪುರುಷಸ್ಯ ಜ್ಞಾನೀತಿ ವ್ಯಪದೇಶಮೇಕತ್ವಪ್ರಕಾರೇಣ ಕುರುತೇ ; ತಥಾನ್ಯತ್ರಾಪಿ । ಯತ್ರ ದ್ರವ್ಯಸ್ಯ ಭೇದೇನ ವ್ಯಪದೇಶಾದಿಃ ತತ್ರ ಪೃಥಕ್ತ್ವಂ , ಯತ್ರಾಭೇದೇನ ತತ್ರೈಕತ್ವಮಿತಿ ।

ಗಾಥೆ - ೪೭

ಗಾಥಾರ್ಥ ಃ- [ಜಹ] ಯಾವ ಪ್ರಕಾರ [ಧಣಂ] ಧನ [ಚ] ಮತ್ತು [ಣಾಣಂ)] ಜ್ಞಾನವು [ಧಣೆಣಂ] (ಪುರುಷನನ್ನು) 'ಧನಿ' [ಚ] ಮತ್ತು [ಣಾಣೆಣಂ] 'ಜ್ಞಾನಿ'ಯನ್ನಾಗಿ [ಕುವ್ವದಿ] ಮಾಡುತ್ತದೆಂದು [ದುವಿಧೇಹಿಂ ಭಣ್ಣಂತಿ] ಎರಡು ಪ್ರಕಾರದಿಂದ ಹೇಳಲಾಗುತದೆ, [ತಹ] ಅದೇ ಪ್ರಕಾರ [ತಣ್ಣಣ್ಹೂ] ತತ್ತ್ವಜ್ಞರು [ಪುಧತ್ತಂ] ಪೃಥಕ್ತ್ವ [ಚಾವಿ] ಮತ್ತು [ಏಯತ್ತಂ] ಏಕತ್ವವನ್ನು ಹೇಳುತ್ತಾರೆ.

ಟೀಕೆ ಃ- ಇದು ವಸ್ತುರೂಪದಿಂದ ಭೇದ ಮತ್ತು (ವಸ್ತುರೂಪದಿಂದ) ಅಭೇದದ ಉದಾಹರಣೆಯಿದೆ.

ಯಾವ ಪ್ರಕಾರ ೧) ಭಿನ್ನ ಅಸ್ತಿತ್ವದಿಂದ ರಚಿಸಿದ, ೨) ಭಿನ್ನ ಸಂಸ್ಥಾನವುಳ್ಳ, ೩) ಭಿನ್ನಸಂಖ್ಯೆಯುಳ್ಳ ಮತ್ತು ೪) ಭಿನ್ನ ವಿಷಯದಲ್ಲಿ ಸ್ಥಿರವಾದಂಥ ಧನ ೧) ಭಿನ್ನ ಅಸ್ತಿತ್ವದಿಂದ ರಚಿಸಿದ, ೨) ಭಿನ್ನ ಸಂಸ್ಥಾನವುಳ್ಳ, ೩) ಭಿನ್ನ ಸಂಖ್ಯೆಯುಳ್ಳ ಮತ್ತು ೪) ಭಿನ್ನ ವಿಷಯದಲ್ಲಿ ಸ್ಥಿರನಾದಂಥ ಪುರುಷನಿಗೆ 'ಧನಿ'ಯೆಂಬ ವ್ಯಪದೇಶವನ್ನು ಪೃಥಕ್ತ್ವ ಪ್ರಕಾರದಿಂದ ಮಾಡುತ್ತದೆ, ಮತ್ತು ಯಾವ ಪ್ರಕಾರ ೧) ಅಭಿನ್ನ ಅಸ್ತಿತ್ವದಿಂದ ರಚಿಸಿದ, ೨) ಅಭಿನ್ನ ಸಂಸ್ಥಾನವುಳ್ಳ, ೩) ಅಭಿನ್ನ ಸಂಖ್ಯೆಯುಳ್ಳ ಮತ್ತು ೪) ಅಭಿನ್ನ ವಿಷಯದಲ್ಲಿ ಸ್ಥಿರವಾದಂಥ ಜ್ಞಾನ ೧) ಅಭಿನ್ನ ಅಸ್ತಿತ್ವದಿಂದ ರಚಿಸಿದ, ೨) ಅಭಿನ್ನ ಸಂಸ್ಥಾನವುಳ್ಳ, ೩) ಅಭಿನ್ನ ಸಂಖ್ಯೆಯುಳ್ಳ ಮತ್ತು ೪) ಅಭಿನ್ನ ವಿಷಯದಲ್ಲಿ ಸ್ಥಿರನಾದಂಥ ಪುರುಷನಿಗೆ 'ಜ್ಞಾನಿ'ಯೆಂಬ ವ್ಯಪದೇಶವನ್ನು ಏಕತ್ವ ಪ್ರಕಾರದಿಂದ ಮಾಡುತ್ತದೆ, ಇದೇ ಪ್ರಕಾರ ಇತರೆಡೆಯಲ್ಲೂ ತಿಳಿಯಬೇಕು.

ಹೇಗೆ ಧನದಿಂದ 'ಧನಿಕ' ಜ್ಞಾನದಿಂದ 'ಜ್ಞಾನಿ'ಯೆಂಬೆರಡು ವ್ಯಪದೇಶವಿವೆ ।
ಹಾಗೆ ತತ್ತ್ವಜ್ಞರು ಪೃಥಕತ್ವಮತ್ತದರಂತೆ ಏಕತ್ವವನು ಹೇಳುವರು ॥೪೭॥

ಣಾಣೇ ಣಾಣಂ ಚ ಸದಾ ಅತ್ಥಂತರಿದಾ ದು ಅಣ್ಣಮಣ್ಣಸ್ಸ ।
ದೋಣ್ಹಂ ಅಚೇದಣತ್ತಂ ಪಸಜದಿ ಸಮ್ಮಂ ಜಿಣಾವಮದಂ ॥೪೮॥

ಜ್ಞಾನೀ ಜ್ಞಾನಂ ಚ ಸದಾರ್ಥಾಂತರಿತೇ ತ್ವನ್ಯೋೇಽನ್ಯಸ್ಯ ।
ದ್ವಯೋರಚೇತನತ್ವಂ ಪ್ರಸಜತಿ ಸಮ್ಯಗ್ ಜಿನಾವಮತಮ್ ॥೪೮॥

ದ್ರವ್ಯಗುಣಾನಾಮರ್ಥಾಂತರಭೂತತ್ವೇ ದೋಷೋೇಽಯಮ್ ।

ಜ್ಞಾನೀ ಜ್ಞಾನಾದ್ಯರ್ಥಾಂತರಭೂತಸ್ತದಾ ಸ್ವಕರಣಾಂಶಮಂತರೇಣ ಪರಶುರಹಿತದೇವದತ್ತವತ್ಕರಣ-ವ್ಯಾಪಾರಾಸಮರ್ಥತ್ವಾದಚೇತಯಮಾನೋೇಽಚೇತನ ಏವ ಸ್ಯಾತ್ । ಜ್ಞಾನಂ ಚ ಯದಿ ಜ್ಞಾನಿನೋೇಽರ್ಥಾಂತರ-ಭೂತಂ ತದಾ ತತ್ಕರ್ತ್ರಂಶಮಂತರೇಣ ದೇವದತ್ತರಹಿತಪರಶುವತ್ತತ್ಕರ್ತೃತ್ವವ್ಯಾಪಾರಾಸಮರ್ಥತ್ವಾದ-ಚೇತಯಮಾನಮಚೇತನಮೇವ ಸ್ಯಾತ್ । ನ ಚ ಜ್ಞಾನಜ್ಞಾನಿನೋರ್ಯುತಸಿದ್ಧಯೋಸ್ಸಂಯೋಗೇನ ಚೇತನತ್ವಂ, ದ್ರವ್ಯಸ್ಯ ನಿರ್ವಿಶೇಷಸ್ಯ ಗುಣಾನಾಂ ನಿರಾಶ್ರಯಾಣಾಂಶೂನ್ಯತ್ವಾದಿತಿ ।

ಎಲ್ಲಿದ್ರವ್ಯದ ಭೇದದಿಂದ ವ್ಯಪದೇಶಾದಿಗಳಿವೆ ಅಲ್ಲಿ ಪೃಥಕ್ತ್ವವಿದೆ, ಎಲ್ಲಿ (ದ್ರವ್ಯದ) ಅಭೇದದಿಂದ (ವ್ಯಪದೇಶಾದಿಗಳು) ಇವೆ ಅಲ್ಲಿ ಏಕತ್ವವಿದೆ.

ಗಾಥೆ - ೪೮

ಗಾಥಾರ್ಥ ಃ- [ಣಾಣೇ] ಒಂದು ವೇಳೆ ಜ್ಞಾನಿಯು (ಆತ್ಮನು) [ಚ] ಮತ್ತು [ಣಾಣಂ] ಜ್ಞಾನವು [ಸದಾ] ಯಾವಾಗಲೂ [ಅಣ್ಣಮಣ್ಣಸ್ಸ] ಪರಸ್ಪರ [ಅತ್ಥಂತರಿದಾ ದು] ಅರ್ಥಾಂತರಭೂತ (ಭಿನ್ನ ಪದಾರ್ಥಭೂತ) ಗಳಾದರೆ [ದೋಣ್ಹಂ] ಎರಡಕ್ಕೂ [ಅಚೇದಣತ್ತಂ ಪಸಜದಿ] ಅಚೇತನತೆಯ ಪ್ರಸಂಗವು ಬರಬಹುದು [ಸಮ್ಮಂ ಜಿಣಾವಮದಂ] ಅದು ಜಿನೇಂದ್ರ ಭಗವಂತರಿಗೆ ಸಮ್ಯಕ್ ಪ್ರಕಾರದಿಂದ ಅಸಂಮತವಿದೆ.

ಟೀಕೆ ಃ- ದ್ರವ್ಯ ಮತ್ತು ಗುಣಗಳಿಗೆ ಅರ್ಥಾಂತರತೆಯಿದ್ದರೆ ಈ (ಕೆಳಗಿನಂತೆ) ದೋಷವು ಬರುವುದು.

ಒಂದು ವೇಳೆ ಜ್ಞಾನಿಯು (ಆತ್ಮನು) ಜ್ಞಾನದಿಂದ ಅರ್ಥಾಂತರಭೂತನಿದ್ದರೆ (ಆತ್ಮನು) ತನ್ನ ಕರಣ ಅಂಶವಿಲ್ಲದೆ, ಕೊಡಲಿಯಿಲ್ಲದ ದೇವದತ್ತನಂತೆ ಕರಣದ [೧] ವ್ಯಾಪಾರ ಮಾಡುವಲ್ಲಿ ಅಸಮರ್ಥನಾಗುವುದರಿಂದ ಚೇತನ (ಅನುಭವ) ಮಾಡದೆ ಅಚೇತನವೇ ಆಗುವನು ಮತ್ತು ಒಂದು ವೇಳೆ ಜ್ಞಾನವು ಜ್ಞಾನಿಯಿಂದ (ಆತ್ಮನಿಂದ) ಅರ್ಥಾಂತರಭೂತವಿದ್ದರೆ ಜ್ಞಾನವು ತನ್ನ ಕರ್ತೃ-ಅಂಶವಿಲ್ಲದೆ, ದೇವದತ್ತನಿಲ್ಲದ ಕೊಡಲಿಯಂತೆ

ನಿರಂತರ ಜ್ಞಾನಿ ಮೇಣ್ ಜ್ಞಾನದಲಿ ಅನ್ಯೋನ್ಯ ಅರ್ಥಾಂತರಭೂತವಾದರೆ ।
ಎರಡರಲಿ ಅಚೇತನತೆ ಬರುವುದಿದು ಜಿನರಿಗೆ ಸಮ್ಯಕ್ಸಮ್ಮತವಿಲ್ಲ ॥೪೮॥

---

೧. ಕರಣದ ವ್ಯಾಪಾರ ಸಾಧನದ ಕಾರ್ಯ. (ಆತ್ಮನು ಕರ್ತೃವಿದ್ದರೆ ಜ್ಞಾನವು ಕರಣವಿದೆ. ಒಂದು ವೇಳೆ ಆತ್ಮನು ಜ್ಞಾನದಿಂದ ಭಿನ್ನವೇ ಇದ್ದರೆ ಆತ್ಮನು ಸಾಧನದ ವ್ಯಾಪಾರ ಎಂದರೆ ಜ್ಞಾನದ ಕಾರ್ಯ ಮಾಡುವಲ್ಲಿ ಅಸಮರ್ಥನಾಗುವುದರಿಂದ ತಿಳಿದುಕೊಳ್ಳಲಾರನು ಅದಕ್ಕಾಗಿ ಆತ್ಮನಿಗೆ ಅಚೇತನತ್ವವು ಬಂದು ಬಿಡಬಹುದು.

ಣ ಹಿ ಸೋ ಸಮವಾಯಾದೋ ಅತ್ಥಂತರಿದೋ ದು ಣಾಣದೋ ಣಾಣೀ ।
ಅಣ್ಣಾಣೀತ್ತಿ ಯ ವಯಣಂ ಏಗತ್ತಪಸಾಧಗಂ ಹೋದಿ ॥೪೯॥

ನ ಹಿ ಸಃ ಸಮವಾಯಾದಾರ್ಥಂತರಿತಸ್ತು ಜ್ಞಾನತೋ ಜ್ಞಾನೀ ।
ಅಜ್ಞಾನೀತಿ ಚ ವಚನಮೇಕತ್ವಪ್ರಸಾಧಕಂ ಭವತಿ ॥೪೯॥

ಜ್ಞಾನಜ್ಞಾನಿನೋಃ ಸಮವಾಯಸಂಬಂಧನಿರಾಸೋಽಯಮ್ ।

ನ ಖಲು ಜ್ಞಾನಾದರ್ಥಾಂತರಭೂತಃ ಪುರುಷೋ ಜ್ಞಾನಸಮವಾಯಾತ್ ಜ್ಞಾನೀ ಭವತೀತ್ಯುಪಪನ್ನಮ್ । ಸ ಖಲು ಜ್ಞಾನಸಮವಾಯಾತ್ಪೂರ್ವಂ ಕಿ ಜ್ಞಾನೀ ಕಿಮಜ್ಞಾನೀ ? ಯದಿ ಜ್ಞಾನೀ ತದಾ ಜ್ಞಾನಸಮವಾಯೋ ನಿಷ್ಫಲಃ । ಅಥಾಜ್ಞಾನೀ ತದಾ ಕಿಮಜ್ಞಾನಸಮವಾಯಾತ್, ಕಿಮಜ್ಞಾನೇನ ಸಹೈಕತ್ವಾತ್ ? ನ

ತನ್ನ ಕರ್ತನ[೧] ವ್ಯಾಪಾರ ಮಾಡುವಲ್ಲಿ ಅಸಮರ್ಥವಾಗುವುದರಿಂದ ಚೇತನ ಮಾಡದೆ (ತಿಳಿದುಕೊಳ್ಳದೆ) ಅಚೇತನವೇ ಆಗುವನು. ಆದರೆ ಯುತಸಿದ್ಧ[೨]ವಾದಂಥ ಜ್ಞಾನ ಮತ್ತು ಜ್ಞಾನಿಗೆ (ಜ್ಞಾನ ಮತ್ತು ಆತ್ಮನಿಗೆ) ಸಂಯೋಗದಿಂದ ಚೇತನತ್ವವಿದೆಯೆಂಬುದಾಗಿಯೂ ಇಲ್ಲ, ಏಕೆಂದರೆ ನಿರ್ವಿಶೇಷದ್ರವ್ಯ ಮತ್ತು ನಿರಾಶ್ರಿತವಾದ ಗುಣಗಳು ಶೂನ್ಯವಾಗುತ್ತವೆ.

ಗಾಥೆ - ೪೯

ಗಾಥಾರ್ಥ :- [ಣಾಣದೋ ಅತ್ಥಂತರಿದೋ ದು ಸೋ] ಜ್ಞಾನದಿಂದ ಅರ್ಥಾಂತರಭೂತನಾದಂಥ ಅವನು (ಆತ್ಮನು) [ಸಮವಾಯಾದೋ] ಸಮವಾಯದಿಂದ [ಣಾಣೀ] ಜ್ಞಾನಿಯಾಗುತ್ತಾನೆ [ಣ ಹಿ] ಎಂದು ವಾಸ್ತವಿಕವಾಗಿ ಇಲ್ಲ. [ಅಣ್ಣಾಣೀ] 'ಅಜ್ಞಾನೀ' [ತ್ತಿ ಯ ವಯಣಂ] ಎಂಬ ವಚನವು [ಏಗತ್ತಪಸಾಧಗಂ ಹೋದಿ] (ಗುಣ-ಗುಣಿಯ) ಏಕತ್ವವನ್ನು ಸಿದ್ಧ ಮಾಡುತ್ತದೆ.

ಟೀಕೆ :- ಇದು ಜ್ಞಾನ ಮತ್ತು ಜ್ಞಾನಿಗೆ ಸಮವಾಯಸಂಬಂಧವಿರುವುದರ ನಿರಾಕರಣೆ (ಖಂಡನೆ)ಯಿದೆ.

ಜ್ಞಾನದಿಂದರ್ಥಾಂತರಭೂತನಾದಾತ್ಮ ಸಮವಾಯದಿಂ ಜ್ಞಾನಿಯಾಗುವನು ।
ಎನ್ನುವೀ 'ಅಜ್ಞಾನಿ'ಯ ವಚನವದು ಏಕತ್ವವನು ಸಿದ್ಧ ಮಾಡುವುದು ॥೪೯॥

---

೧. ಕರ್ತನ ವ್ಯಾಪಾರ = ಕರ್ತನ ಕಾರ್ಯ. (ಜ್ಞಾನವು ಕರಣವಿದ್ದರೆ ಆತ್ಮನು ಕರ್ತೃವಿದ್ದಾನೆ, ಒಂದು ವೇಳೆ ಜ್ಞಾನವು ಆತ್ಮನಿಂದ ಭಿನ್ನವಿದ್ದರೆ ಜ್ಞಾನವು ಕರ್ತನ ವ್ಯಾಪಾರ ಎಂದರೆ ಆತ್ಮನ ಕಾರ್ಯ ಮಾಡುವಲ್ಲಿ ಅಸಮರ್ಥವಾಗುವುದರಿಂದ ತಿಳಿದುಕೊಳ್ಳಲಾರದು. ಅದಕ್ಕಾಗಿ ಜ್ಞಾನಕ್ಕೆ ಅಚೇತನತ್ವವು ಬಂದು ಬಿಡಬಹುದು.)

೨. ಯುತಸಿದ್ಧ = ಸೇರಿ ಸಿದ್ಧವಾದ ; ಸಮವಾಯದಿಂದ ಸಂಯೋಗದಿಂದ ಸಿದ್ಧವಾದ, ಯಾವ ಪ್ರಕಾರ ಕೋಲು ಮತ್ತು ಮನುಷ್ಯನು ಬೇರೆಯಿದ್ದರೂ ಕೋಲಿನ ಸಂಯೋಗದಿಂದ ಮನುಷ್ಯನು 'ಕೋಲುಳ್ಳವ'ನಾಗುತ್ತಾನೆ ಅದೇ ಪ್ರಕಾರ ಜ್ಞಾನ ಮತ್ತು ಆತ್ಮನು ಬೇರೆಯಿದ್ದರೂ ಜ್ಞಾನದೊಡನೆ ಯುಕ್ತನಾಗಿ ಆತ್ಮನು 'ಜ್ಞಾನವುಳ್ಳವ' - (ಜ್ಞಾನಿ)' ಆಗುತ್ತಾನೆಂದೂ ಇಲ್ಲ. ಕೋಲು ಮತ್ತು ಮನುಷ್ಯನಂತೆ ಜ್ಞಾನ ಮತ್ತು ಆತ್ಮನೆಂದಾದರೂ ಬೇರೆಯಾಗುವುದು ಹೇಗೆ ? ವಿಶೇಷವಿಲ್ಲದ ದ್ರವ್ಯವಿರುವುದೇ ಇಲ್ಲ, ಅದಕ್ಕಾಗಿ ಜ್ಞಾನವಿಲ್ಲದೆ ಆತ್ಮನು ಹೇಗಿರುತ್ತಾನೆ? ಮತ್ತು ಆಶ್ರಯವಿಲ್ಲದೆ ಗುಣಗಳು ಇರುವುದೇ ಇಲ್ಲ, ಅದಕ್ಕಾಗಿ ಆತ್ಮನಿಲ್ಲದೆ ಜ್ಞಾನವು ಹೇಗಿರುತ್ತದೆ ? ಆದುದರಿಂದ 'ಕೋಲು' ಮತ್ತು 'ಕೋಲುಳ್ಳವ'ನಂತೆ 'ಜ್ಞಾನ' ಮತ್ತು 'ಜ್ಞಾನಿಯ' ಯುತಸಿದ್ಧತೆಯು ಸಂಭವಿಸಲಾರದು.)

ತಾವದಜ್ಞಾನಸಮವಾಯಾತ್ ; ಅಜ್ಞಾನಿನೋ ಹ್ಯಜ್ಞಾನಸಮವಾಯೋ ನಿಷ್ಫಲಃ, ಜ್ಞಾನಿತ್ವಂ, ತು ಜ್ಞಾನಸಮವಾಯಾಭಾವಾನ್ನಾಸ್ತ್ಯೇವ। ತತೋಽಜ್ಞಾನೀತಿ ವಚನಮಜ್ಞಾನೇನ ಸಹೈಕತ್ವಮವಶ್ಯಂ ಸಾಧಯತ್ಯೇವ। ಸಿದ್ಧೇ ಚೈವಮಜ್ಞಾನೇನ ಸಹೈಕತ್ವೇ ಜ್ಞಾನೇನಾಪಿ ಸಹೈಕತ್ವಮವಶ್ಯಂ ಸಿಧ್ಯತೀತಿ ।

ಸಮವತ್ತೀ ಸಮವಾಓ ಅಪುಧಬ್ಭೂದೋ ಯ ಅಜುದಸಿದ್ಧೋ ಯ ।
ತಮ್ಹಾ ದವ್ವಗುಣಾಣಂ ಅಜುದಾ ಸಿದ್ಧಿ ತ್ತಿ ಣಿದ್ದಿಟ್ಠಾ ॥೫೦॥

ಸಮವರ್ತಿತ್ವಂ ಸಮವಾಯಃ ಅಪೃಥಗ್ಭೂತತ್ವಮಯುತಸಿದ್ಧತ್ವಂ ಚ ।
ತಸ್ಮಾದ್ದ್ರವ್ಯಗುಣಾನಾಂ ಅಯುತಾ ಸಿದ್ಧಿರಿತಿ ನಿರ್ದಿಷ್ಟಾ ॥೫೦॥

ಜ್ಞಾನದಿಂದ ಅರ್ಥಾಂತರಭೂತನಾದ ಆತ್ಮನು ಜ್ಞಾನದ ಸಮವಾಯದಿಂದ ಜ್ಞಾನಿಯಾಗುತ್ತಾನೆಂದು ಮನ್ನಿಸುವುದು ವಾಸ್ತವಿಕವಾಗಿ ಯೋಗ್ಯವಿಲ್ಲ. (ಆತ್ಮನನ್ನು ಜ್ಞಾನದ ಸಮವಾಯದಿಂದ ಜ್ಞಾನಿಯಾಗುವುದನ್ನು ಮನ್ನಿಸಿದರೆ ನಾವು ಹೀಗೆ ಕೇಳುತ್ತೇವೆ-) ಅವನು (ಆತ್ಮನು) ಜ್ಞಾನದ ಸಮವಾಯವಾಗುವ ಮೊದಲು ವಾಸ್ತವಿಕವಾಗಿ ಜ್ಞಾನಿಯಿದ್ದನೋ ಅಥವಾ ಅಜ್ಞಾನಿಯಿದ್ದನು ? ಒಂದು ವೇಳೆ ಜ್ಞಾನಿಯಿದ್ದರೆ (ಜ್ಞಾನಿಯೆಂದು ಹೇಳಲಾದರೆ) ಜ್ಞಾನದ ಸಮವಾಯವು ನಿಷ್ಫಲವಿದೆ. ಈಗ ಒಂದು ವೇಳೆ ಅಜ್ಞಾನಿಯಿದ್ದರೆ (ಅಜ್ಞಾನಿಯೆಂದು ಹೇಳಲಾದರೆ) (ಹೀಗೆ ಕೇಳುತ್ತೇವೆ) ಅಜ್ಞಾನದ ಸಮವಾಯದಿಂದ ಅಜ್ಞಾನಿಯಿದ್ದಾನೆಯೋ ಅಥವಾ ಅಜ್ಞಾನದೊಡನೆ ಏಕತ್ವದಿಂದ ಅಜ್ಞಾನಿಯಿದ್ದಾನೆ ? ಮೊದಲು ಅಜ್ಞಾನದ ಸಮವಾಯದಿಂದ ಅಜ್ಞಾನಿಯಾಗುವ ಸಾಧ್ಯತೆಯಿಲ್ಲ; ಏಕೆಂದರೆ ಅಜ್ಞಾನಿಗೆ ಅಜ್ಞಾನದ ಸಮವಾಯವು ನಿಷ್ಫಲವಿದೆ ಮತ್ತು ಜ್ಞಾನೀತನವಂತೂ ಜ್ಞಾನದ ಸಮವಾಯದ ಅಭಾವವಿರುವುದರಿಂದ ಇಲ್ಲವೇ ಇಲ್ಲ. ಅದಕ್ಕಾಗಿ 'ಅಜ್ಞಾನಿ'ಯೆಂಬ ವಚನವು ಅಜ್ಞಾನದೊಡನೆ ಏಕತ್ವವನ್ನು ಅವಶ್ಯವಾಗಿ ಸಿದ್ಧಮಾಡಿಯೇ ಮಾಡುತ್ತದೆ. ಮತ್ತು ಹೀಗೆ ಅಜ್ಞಾನದೊಡನೆ ಏಕತ್ವವು ಸಿದ್ಧವಾಗುವುದರಿಂದ ಜ್ಞಾನದೊಡನೆಯೂ ಏಕತ್ವವು ಅವಶ್ಯವಾಗಿ ಸಿದ್ಧವಾಗುತ್ತದೆ.

ಭಾವಾರ್ಥ :- ಆತ್ಮನಿಗೆ ಮತ್ತು ಜ್ಞಾನಕ್ಕೆ ಏಕತ್ವವಿದೆಯೆಂದು ಇಲ್ಲಿ ಯುಕ್ತಿಯಿಂದ ತಿಳಿಸಿದ್ದಾರೆ.

ಪ್ರಶ್ನೆ :- ಛದ್ಮಸ್ಥಾವಸ್ಥೆಯಲ್ಲಿ ಜೀವನಿಗೆ ಕೇವಲ ಅಲ್ಪಜ್ಞಾನವೇ ಇರುತ್ತದೆ ಮತ್ತು ಕೇವಲೀ ಅವಸ್ಥೆಯಲ್ಲಿಯಂತೂ ಪರಿಪೂರ್ಣಜ್ಞಾನ-ಕೇವಲಜ್ಞಾನವಿರುತ್ತದೆ ; ಅದಕ್ಕಾಗಿ ಅಲ್ಲಿಯಂತೂ ಕೇವಲೀಭಗವಂತರಿಗೆ ಜ್ಞಾನದ ಸಮವಾಯವು (ಕೇವಲಜ್ಞಾನದ ಸಂಯೋಗವು) ಆಯಿತಲ್ಲವೇ ?

ಉತ್ತರ :- ಇಲ್ಲ, ಹೀಗಿಲ್ಲ. ಜೀವನಿಗೆ ಮತ್ತು ಜ್ಞಾನಗುಣಕ್ಕೆ ಯಾವಾಗಲೂ ಏಕತ್ವವಿದೆ, ಅಭಿನ್ನತೆಯಿದೆ. ಛದ್ಮಸ್ಥಾವಸ್ಥೆಯಲ್ಲೂ ಆ ಅಭಿನ್ನವಾದ ಜ್ಞಾನಗುಣದಲ್ಲಿ ಕೇವಲಜ್ಞಾನವು ಶಕ್ತಿರೂಪದಿಂದಿರುತ್ತದೆ, ಕೇವಲೀ ಅವಸ್ಥೆಯಲ್ಲಿ, ಆ ಅಭಿನ್ನವಾದ ಜ್ಞಾನಗುಣದಲ್ಲಿ ಶಕ್ತಿರೂಪದಿಂದ ಸ್ಥಿರವಾದ ಕೇವಲಜ್ಞಾನವು ವ್ಯಕ್ತವಾಗುತ್ತದೆ;

ಸಮವರ್ತಿತ್ವ ಸಮವಾಯವಿದ್ದದೇ ಅಪೃಥಕತ್ವ, ಅಯುತಸಿದ್ಧತ್ವವಿದೆ ।
ಕ್ರಮವರಿದು ಪೇಳಿಹರುದ್ರವ್ಯಮೇಣ್ ಗುಣಗಳ ಅಯುತ ಸಿದ್ಧಿಯನು ॥೫೦॥

ಸಮವಾಯಸ್ಯ ಪದಾರ್ಥಾಂತರತ್ವನಿರಾಸೋಽಯಮ್ ।

ದ್ರವ್ಯಗುಣಾನಾಮೇಕಾಸ್ತಿತ್ವನಿರ್ವೃತ್ತತ್ವಾದನಾದಿರನಿಧನಾ ಸಹವೃತ್ತಿರ್ಹಿ ಸಮವರ್ತಿತ್ವಮ್ ; ಸ ಏವ ಸಮವಾಯೋ ಜೈನಾನಾಮ್ ; ತದೇವ ಸಂಜ್ಞಾದಿಭ್ಯೋ ಭೇದೇಽಪಿ ವಸ್ತುತ್ವೇನಾಭೇದಾದಪೃಥಗ್ಭೂತತ್ವಮ್ ; ತದೇವ ಯುತಸಿದ್ಧಿನಿಬಂಧನಸ್ಯಾಸ್ತಿತ್ವಾಂತರಸ್ಯಾಭಾವಾದಯುತಸಿದ್ಧತ್ವಮ್ । ತತೋ ದ್ರವ್ಯಗುಣಾನಾಂ ಸಮವರ್ತಿತ್ವಲಕ್ಷಣ-ಸಮವಾಯಭಾಜಾಮಯುತಸಿದ್ಧಿರೇವ, ನ ಪೃಥಗ್ಭೂತತ್ವಮಿತಿ ।

ವಣ್ಣರಸಗಂಧಫಾಸಾ ಪರಮಾಣುಪರೂವಿದಾ ವಿಸೇಸೇಹಿಂ ।
ದವ್ವಾದೋ ಯ ಅಣಣ್ಣಾ ಅಣ್ಣತ್ತಪಗಾಸಗಾ ಹೋಂತಿ ॥೫೧॥

ಕೇವಲಜ್ಞಾನವು ಎಲ್ಲಿಂದಲೋ ಹೊರಗಿನಿಂದ ಬಂದು ಕೇವಲೀಭಗವಂತರ ಆತ್ಮನೊಡನೆ ಸಮವಾಯಕ್ಕೆ ಪ್ರಾಪ್ತವಾಗುತ್ತದೆಂಬುದಾಗಿಲ್ಲ. ಛದ್ಮಸ್ಥಾವಸ್ಥೆಯಲ್ಲಿ ಮತ್ತು ಕೇವಲೀ ಅವಸ್ಥೆಯಲ್ಲಿ ಯಾವ ಜ್ಞಾನದ ಅಂತರವು ಕಂಡು ಬರುತ್ತದೆ ಅದು ಕೇವಲ ಶಕ್ತಿ-ವ್ಯಕ್ತರೂಪದ ಅಂತರವೆಂದು ತಿಳಿದುಕೊಳ್ಳಬೇಕು.

ಗಾಥೆ - ೫೦

ಗಾಥಾರ್ಥ ಃ- [ಸಮವತ್ತೀ ಸಮವಾಓ] ಸಮವರ್ತಿತ್ವವು ಅದು ಸಮವಾಯವಿದೆ ; [ಅಪುಧಬ್ಭೂದೋ] ಅದೇ ಅಪೃಥಕತ್ವ [ಯ] ಮತ್ತು [ಅಜುದಸಿದ್ಧೋ ಯ] ಅಯುತಸಿದ್ಧತ್ವವಿದೆ. [ತಮ್ಹಾ] ಆದುದರಿಂದ [ದವ್ವಗುಣಾಣಂ] ದ್ರವ್ಯ ಮತ್ತು ಗುಣಗಳ [ಅಜುದಾ ಸಿದ್ಧಿ ತ್ತಿ] ಅಯುತ ಸಿದ್ಧಿಯೆಂದು [ಣಿದ್ದಿಟ್ಠಾ] (ಜಿನಭಗವಂತರು) ಹೇಳಿದ್ದಾರೆ.

ಟೀಕೆ ಃ- ಇದು ಸಮವಾಯದಲ್ಲಿ ಪದಾರ್ಥಾಂತರತೆಯಾಗುವುದರ ನಿರಾಕರಣೆ(ಖಂಡನೆ)ಯಿದೆ.

ದ್ರವ್ಯ ಮತ್ತು ಗುಣಗಳು ಒಂದು ಅಸ್ತಿತ್ವದಿಂದ ನಿರ್ಮಿತವಾಗಿರುವುದರಿಂದ ಅವುಗಳ ಆ ಅನಾದಿ ಅನಂತ ಸಹವೃತ್ತಿಯು (ಏಕತ್ವವಿರುವುದು) ಅದು ವಾಸ್ತವಿಕವಾಗಿ ಸಮವರ್ತಿತ್ವವಿದೆ ; ಜೈನರ ಮತದಲ್ಲಿ ಅದೇ ಸಮವಾಯವಿದೆ ; ಸಂಜ್ಞಾದಿ ಭೇದಗಳಿದ್ದರೂ (ದ್ರವ್ಯ ಮತ್ತು ಗುಣಗಳಿಗೆ ಸಂಜ್ಞಾಲಕ್ಷಣ-ಪ್ರಯೋಜನ ಮೊದಲಾದವುಗಳ ಅಪೇಕ್ಷೆಯಿಂದ ಭೇದಗಳಿದ್ದರೂ) ವಸ್ತುರೂಪದಿಂದ ಅಭೇದವಿರುವುದರಿಂದ ಅದೇ ಅಪೃಥಕತ್ವವಿದೆ ; ಯುತಸಿದ್ಧಿಗೆ ಕಾರಣಭೂತವಾದ ಅಸ್ತಿತ್ವಾಂತರದ [೧] ಅಭಾವವಿರುವುದರಿಂದ ಅದೇ ಅಯುತಸಿದ್ಧಿತ್ವವಿದೆ.

ಪರಮಾಣುವಿನಲ್ಲಿ ಪ್ರರೂಪಿಸಲ್ಪಡುವ ವರ್ಣ, ರಸ, ಗಂಧ, ಸ್ಪರ್ಶಗಳು ।
ಪರಮಾಣುದಿಂದ ಭಿನ್ನವಿದ್ದು ವಿಶೇಷಗಳಿಂದ ಭೇದವ ಪ್ರಕಟಿಸುವವು ॥೫೧॥

---

೧. ಅಸ್ತಿತ್ವಾಂತರ = ಭಿನ್ನ ಅಸ್ತಿತ್ವ. (ಯುತಸಿದ್ಧಿಯ ಕಾರಣವಾಗಿ ಭಿನ್ನ-ಭಿನ್ನ ಅಸ್ತಿತ್ವಗಳಿವೆ ಕೋಲು ಮತ್ತು ಕೋಲುಳ್ಳವನಂತೆ ಗುಣ ಮತ್ತು ದ್ರವ್ಯದ ಅಸ್ತಿತ್ವವೆಂದೂ ಭಿನ್ನವಿಲ್ಲದಿರುವುದರಿಂದ ಅದಕ್ಕೆ ಯುತಸಿದ್ಧತ್ವವಿರುವ ಸಾಧ್ಯತೆಯಿಲ್ಲ.)

ದಂಸಣಣಾಣಾಣಿ ತಹಾ ಜೀವಣಿಬದ್ಧಾಣಿ ಣಣ್ಣಭೂದಾಣಿ ।
ವವದೇಸದೋ ಪುಧತ್ತಂ ಕುವ್ವಂತಿ ಹಿ ಣೋ ಸಭಾವಾದೋ ॥೫೨॥

ವರ್ಣರಸಗಂಧಸ್ಪರ್ಶಾಃ ಪರಮಾಣುಪ್ರರೂಪಿತಾ ವಿಶೇಷೈಃ ।
ದ್ರವ್ಯಾಚ್ಚ ಅನನ್ಯಾಃ ಅನ್ವತ್ವಪ್ರಕಾಶಕಾ ಭವಂತಿ ॥೫೧॥

ದರ್ಶನಜ್ಞಾನೇ ತಥಾ ಜೀವನಿಬದ್ಧೇ ಅನನ್ಯಭೂತೇ ।
ವ್ಯಪದೇಶತಃ ಪೃಥಕ್ತ್ವಂ ಕುರುತಃ ಹಿ ನೋ ಸ್ವಭಾವಾತ್ ॥೫೨॥

ದೃಷ್ಟಾಂತದಾರ್ಷ್ಟಾಂತಿಕಾರ್ಥಪುರಸ್ಸರೋ ದ್ರವ್ಯಗುಣಾನಾಮನರ್ಥಾಂತರತ್ವವ್ಯಾಖ್ಯೋಪ-ಸಂಹಾರೋಽಯಮ್ ।

ಅದಕ್ಕಾಗಿ ಸಮವರ್ತಿತ್ವಸ್ವರೂಪ[೧] ಸಮವಾಯವುಳ್ಳ ದ್ರವ್ಯ ಮತ್ತು ಗುಣಗಳಿಗೆ ಅಯುತಸಿದ್ಧಿಯೇ ಇದೆ, ಪೃಥಕತ್ವವಿಲ್ಲ.

ಗಾಥೆ - ೫೧-೫೨

ಗಾಥಾರ್ಥ :- [ಪರಮಾಣುಪರೂವಿದಾ] ಪರಮಾಣುವಿನಲ್ಲಿ ಪ್ರರೂಪಣೆ ಮಾಡಲಾಗುವಂಥ [ವಣ್ಣರಸಗಂಧಫಾಸಾ] ವರ್ಣ-ರಸ-ಗಂಧ-ಸ್ಪರ್ಶಗಳು [ದವ್ವಾದ್ದೋ ಅಣಣ್ಣಾ ಯ] ದ್ರವ್ಯದಿಂದ ಅನನ್ಯವಾಗಿ ವರ್ತಿಸುತ್ತ [ವಿಸೇಸೇ ಹಿಂ] (ವ್ಯಪದೇಶಕ್ಕೆ ಕಾರಣಭೂತ) ವಿಶೇಷಗಳ ಮುಖಾಂತರ [ಅಣ್ಣತ್ತಪಗಾಸಗಾ ಹೋಂತಿ] ಅನ್ಯತ್ವಕ್ಕೆ ಪ್ರಕಾಶಿತಮಾಡುವಂಥವುಗಳಾಗಿವೆ (ಸ್ವಭಾವದಿಂದ ಅನ್ಯರೂಪಗಳಿಲ್ಲ;) [ತಹಾ] ಅದರಂತೆ [ಜೀವಣಿಬದ್ಧಾಣಿ] ಜೀವದಲ್ಲಿ ಸಂಬದ್ಧವಿರುವಂಥ [ದಂಸಣಣಾಣಾಣಿ] ದರ್ಶನ-ಜ್ಞಾನಗಳು [ಣಣ್ಣ-ಭೂದಾಣಿ] (ಜೀವದ್ರವ್ಯದಿಂದ) ಅನನ್ಯವಾಗಿ ವರ್ತಿಸುತ್ತ [ವವದೇಸದೋ] ವ್ಯಪದೇಶದ ಮುಖಾಂತರ [ಪುಧತ್ತಂ ಕುವ್ವಂತಿ ಹಿ] ಪೃಥಕ್ತ್ವವನ್ನು ಮಾಡುತ್ತವೆ, [ಣೋ ಸಭಾವಾದೋ] ಸ್ವಭಾವದಿಂದಿಲ್ಲ.

ಟೀಕೆ :- ದೃಷ್ಟಾಂತರೂಪ ಮತ್ತು ದಾರ್ಷ್ಟಾಂತರೂಪ[೨] ಪದಾರ್ಥಪೂರ್ವಕ ದ್ರವ್ಯ ಹಾಗೂ ಗುಣಗಳ ಅಭಿನ್ನ ಪದಾರ್ಥತೆಯ ವ್ಯಾಖ್ಯಾನದ ಉಪಸಂಹಾರವಿದೆ.

ಈ ಪರಿ ಜೀವನಿಬದ್ಧ ದರ್ಶನ ಜ್ಞಾನಗಳು ಜೀವದಿಂದನನ್ಯ ವರ್ತಿಸುತ್ತ ।
ವ್ಯಪದೇಶದಿಂದ ಪೃಥಕತ್ವವನು ಮಾಡುವವು ಸ್ವಭಾವದಿಂದ ತಾನಿಲ್ಲ ॥೫೨॥

---

೧. ಸಮವಾಯದ ಸ್ವರೂಪ ಸಮವರ್ತಿತ್ವ ಎಂದರೆ ಅನಾದಿ - ಅನಂತ ಸಹವೃತ್ತಿಯಿದೆ. ದ್ರವ್ಯ ಮತ್ತು ಗುಣಗಳಿಗೆ ಇಂಥ ಸಮವಾಯ (ಅನಾದಿ-ಅನಂತ ತಾದಾತ್ಮ್ಯಮಯ ಸಹವೃತ್ತಿ) ಇರುವುದರಿಂದ ಅದಕ್ಕೆ ಅಯುತಸಿದ್ಧಿಯಿದೆ. ಎಂದೂ ಪೃಥಕತ್ವವಿಲ್ಲ.

೨. ದಾರ್ಷ್ಟಾಂತ - ದೃಷ್ಟಾಂತದಿಂದ ತಿಳಿದುಕೊಳ್ಳುವ ಮಾತು ; ಉಪಮೇಯ. (ಇಲ್ಲಿ ಪರಮಾಣು ಮತ್ತು ವರ್ಣಾದಿಗಳು ದೃಷ್ಟಾಂತರೂಪ ಪದಾರ್ಥಗಳಿವೆ ಮತ್ತು ಜೀವ ಹಾಗೂ ಜ್ಞಾನಾದಿಗಳು ದಾರ್ಷ್ಟಾಂತರೂಪ ಪದಾರ್ಥಗಳಿವೆ.

ವರ್ಣರಸಗಂಧಸ್ಪರ್ಶಾ ಹಿ ಪರಮಾಣೋಃ ಪ್ರರೂಪ್ಯಂತೇ ; ತೇ ಚ ಪರಮಾಣೋರವಿಭಕ್ತಪ್ರದೇಶತ್ವೇನಾನ-ನ್ಯೇऽಪಿ ಸಂಜ್ಞಾದಿವ್ಯಪದೇಶನಿಬಂಧನೈರ್ವಿಶೇಷೈರನ್ಯತ್ವಂ ಪ್ರಕಾಶಯಂತಿ। ಏವಂ ಜ್ಞಾನದರ್ಶನೇ ಅಪ್ಯಾತ್ಮನಿ ಸಂಬದ್ಧೇ ಆತ್ಮದ್ರವ್ಯಾದವಿಭಕ್ತಪ್ರದೇಶತ್ವೇನಾನನ್ಯೇऽಪಿ ಸಂಜ್ಞಾದಿವ್ಯಪದೇಶನಿಬಂಧನೈರ್ವಿಶೇಷೈಃ ಪೃಥಕತ್ವಮಾಸಾದಯತ ; ಸ್ವಭಾವತಸ್ತು ನಿತ್ಯಮಪೃಥಕ್ತ್ವಮೇವ ಬಿಭ್ರತಃ

– ಇತಿ ಉಪಯೋಗಗುಣವ್ಯಾಖ್ಯಾನಂ ಸಮಾಪ್ತಮ್ ।

ಅಥ ಕರ್ತೃತ್ವಗುಣವ್ಯಾಖ್ಯಾನಮ್ । ತತ್ರಾದಿಗಾಥಾತ್ರಯೇಣ ತದುಪೋದ್ಘಾತ ।

ಜೀವಾ ಅಣಾಇಣಿಹಣಾ ಸಂತಾ ಣಂತಾ ಯ ಜೀವಭಾವಾದೋ ।
ಸಬ್ಭಾವದೋ ಅಣಂತಾ ಪಂಚಗ್ಗಗುಣಪ್ಪಧಾಣಾ ಯ ॥೫೩॥

ಜೀವಾ ಅನಾದಿನಿಧನಾಃ ಸಾಂತಾ ಅನಂತಾಶ್ಚ ಜೀವಭಾವಾತ್ ।
ಸದ್ಭಾವತೋऽನಂತಾಃ ಪಂಚಾಗ್ರಗುಣಪ್ರಧಾನಾಃ ಚ ॥೫೩॥

ವಾಸ್ತವಿಕವಾಗಿ ವರ್ಣ-ರಸ-ಗಂಧ-ಸ್ಪರ್ಶಗಳನ್ನು ಪರಮಾಣುವಿನಲ್ಲಿ ಪ್ರರೂಪಣೆ ಮಾಡಲಾಗುತ್ತದೆ ; ಅವು ಪರಮಾಣುವಿನಿಂದ ಅಭಿನ್ನಪ್ರದೇಶವುಳ್ಳವುಗಳಾಗಿರುವ ಕಾರಣ ಅಭಿನ್ನವಾಗಿದ್ದರೂ ಸಂಜ್ಞಾದಿವ್ಯಪದೇಶಕ್ಕೆ ಕಾರಣಭೂತವಾದ ವಿಶೇಷಗಳಿಂದ ಅನ್ಯತ್ವವನ್ನು ಪ್ರಕಾಶಿತಪಡಿಸುತ್ತವೆ. ಹೀಗೆ ಆತ್ಮನಲ್ಲಿ ಸಂಬದ್ಧವಾದ ಜ್ಞಾನ-ದರ್ಶನಗಳೂ ಆತ್ಮದ್ರವ್ಯದಿಂದ ಅಭಿನ್ನಪ್ರದೇಶವುಳ್ಳವುಗಳಾಗಿರುವ ಕಾರಣ ಅನನ್ಯವಾಗಿದ್ದರೂ ಸಂಜ್ಞಾದಿ ವ್ಯಪದೇಶಕ್ಕೆ ಕಾರಣಭೂತವಾದ ವಿಶೇಷಗಳಿಂದ ಪೃಥಕ್ತ್ವಕ್ಕೆ ಪ್ರಾಪ್ತವಾಗುತ್ತವೆ, ಆದರೆ ಸ್ವಭಾವದಿಂದ ಯಾವಾಗಲೂ ಅಪೃಥಕ್ತ್ವವನ್ನೇ ಧಾರಣ ಮಾಡುತ್ತವೆ.

ಈ ಪ್ರಕಾರ ಉಪಯೋಗಗುಣದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಕರ್ತೃತ್ವಗುಣದ ವ್ಯಾಖ್ಯಾನವಿದೆ. ಅದರಲ್ಲಿ ಪ್ರಾರಂಭದ ಮೂರು ಗಾಥೆಗಳಿಂದ ಅದರ ಉಪೋದ್ಘಾತ ಮಾಡಲಾಗುತ್ತದೆ.

ಗಾಥೆ - ೫೩

ಗಾಥಾರ್ಥ :- [ಜೀವಾ] ಜೀವಗಳು [ಅಣಾಇಣಿಹಣಾ] (ಪಾರಿಣಾಮಿಕಭಾವದಿಂದ) ಅನಾದಿ ಅನಂತವಿವೆ, [ಸಂತಾ] (ಮೂರು ಭಾವಗಳಿಂದ) ಸಾಂತ (ಎಂದರೆ ಸಾದಿ-ಸಾಂತವಿವೆ), [ಯ] ಮತ್ತು [ಜೀವಭಾವಾದೋ ಣಂತಾ] ಜೀವಭಾವದಿಂದ ಅನಂತವಿವೆ (ಎಂದರೆ ಜೀವದ ಸದ್ಭಾವರೂಪ ಕ್ಷಾಯಿಕ ಭಾವದಿಂದ ಸಾದಿ-ಅನಂತವಿವೆ) [ಸಬ್ಭಾವದೋ ಅಣಂತಾ] ಏಕೆಂದರೆ ಸದ್ಭಾವದಿಂದ ಜೀವಗಳು ಅನಂತವೇ ಇರುತ್ತವೆ. [ಪಂಚಗ್ಗಗುಣಪ್ಪಧಾಣಾ ಯ] ಅವು ಐದು ಮುಖ್ಯ ಗುಣಗಳಿಂದ ಪ್ರಾಧಾನ್ಯತೆಯುಳ್ಳವುಗಳಾಗಿವೆ.

ಜೀವಗಳು ಅನಾದಿ-ಅನಂತ, ಸಾಂತವಲ್ಲದೆ ಜೀವಭಾವದಿಂದನಂತವಿವೆ ।
ಜೀವ ಸದ್ಭಾವದಿಂದನಂತವಾಗಿದ್ದು ಪಂಚಾಗ್ರಗುಣಗಳಿಂದ ಪ್ರಧಾನವಿವೆ ॥೫೩॥

जीवा हि निश्चयेन परभावानामकरणात्स्वभावानां कर्तारो भविष्यंति । तांश्च कुर्वाणाः किमनादिनिधनाः, किं सादिसनिधनाः, किं साद्यनिधनाः, किं तदाकारेण परिणताः, किमपरिणताः भविष्यंतीत्याशंक्येदमुक्तम् । जीवा हि सहजचैतन्यलक्षणपारिणामिकभावेनानादि-निधनाः । त एवौदयिकक्षायोपशमिकौपशमिकभावैः सादिसनिधनाः । त एव क्षायिकभावेनसाद्य-निधनाः । न च सादित्वात्सनिधनत्वं क्षायिकभावस्याशंक्यम् । स खलूपाधिनिवृतौ प्रवर्तमानः सिद्धभाव इव सद्भाव एव जीवस्य ; सद्भावेन चानंता एव जीवाः प्रतिज्ञायंते । न च तेषामनादिनिधन-सहजचैतन्यलक्षणैकभावानां सादिसनिधनानि साद्यनिधनानि भावांतराणि नोपपद्यंत इति वक्तव्यम् ; ते खल्वनादिकर्ममलीमसाः पंकसंपृक्ततोयवत्तदाकारेण परिणतत्वात्क्षपित-प्रधानगुणप्रधानत्वेनैवानुभूयंत इति ।

ಟೀಕೆ :- ನಿಶ್ಚಯದಿಂದ ಪರ-ಭಾವಗಳ ಕರ್ತೃತ್ವವಿಲ್ಲದಿರುವುದರಿಂದ ಜೀವಗಳು ತಮ್ಮ ಭಾವಗಳ ಕರ್ತೃವಿರುತ್ತವೆ ; ಮತ್ತು ಅವನ್ನು (ತಮ್ಮ ಭಾವಗಳನ್ನು) ಮಾಡುತ್ತ, ಅವೇನು ಅನಾದಿ-ಅನಂತವಿವೆ ? ಏನು ಸಾದಿಸಾಂತವಿವೆ ? ಏನು ಸಾದಿ-ಅನಂತವಿವೆ ? ಏನು ತದಾಕಾರರೂಪ (ಆ-ರೂಪ)ವಾಗಿ ಪರಿಣತವಿವೆ ? ಏನು (ತದಾಕಾರರೂಪವಾಗಿ) ಅಪರಿಣತವಿವೆ ? - ಎಂಬ ಆಶಂಕೆ ಮಾಡಿ ಇದನ್ನು ಹೇಳಲಾಗಿದೆ (ಎಂದರೆ ಆ ಆಶಂಕೆಗಳ ಸಮಾನರೂಪದಿಂದ ಈ ಗಾಥೆಯನ್ನು ಹೇಳಲಾಗಿದೆ).

ವಾಸ್ತವಿಕವಾಗಿ ಜೀವಗಳು ಸಹಜಚೈತನ್ಯ[೧] ಲಕ್ಷಣ ಪಾರಿಣಾಮಿಕ ಭಾವದಿಂದ ಅನಾದಿ-ಅನಂತವಿವೆ. ಅದೇ ಔದಯಿಕ, ಕ್ಷಾಯೋಪಶಮಿಕ ಮತ್ತು ಔಪಶಮಿಕ ಭಾವಗಳಿಂದ ಸಾದಿ-ಸಾಂತವಿವೆ. ಅದೇ ಕ್ಷಾಯಿಕ ಭಾವದಿಂದ ಸಾದಿ-ಅನಂತವಿವೆ.

'ಕ್ಷಾಯಿಕಭಾವವು ಸಾದಿಯಿರುವುದರಿಂದ ಅದು ಸಾಂತವಿರುವುದೆ'ಂಬ ಆಶಂಕೆ ಮಾಡುವುದು ಯೋಗ್ಯವಾಗಿಲ್ಲ. (ಕಾರಣವು ಹೀಗಿದೆ-) ಅದು ವಾಸ್ತವಿಕವಾಗಿ ಉಪಾಧಿಯ ನಿವೃತ್ತಿಯಾದ ಮೇಲೆ ಪ್ರವರ್ತಿಸುತ್ತ, ಸಿದ್ಧಭಾವದಂತೆ ಜೀವದ ಸದ್ಭಾವವೇ ಇದೆ (ಎಂದರೆ ಕರ್ಮೋಪಾಧಿಯ ಕ್ಷಯರೂಪದಿಂದ ಪ್ರವರ್ತಿಸುತ್ತಿರುವುದರಿಂದ ಕ್ಷಾಯಿಕಭಾವವು ಜೀವದ ಸದ್ಭಾವವೇ ಇದೆ) ; ಮತ್ತು ಸದ್ಭಾವದಿಂದಂತೂ ಜೀವಗಳು ಅನಂತವೆಂದೇ ಸ್ವೀಕಾರ ಮಾಡಲಾಗುತ್ತದೆ (ಅದಕ್ಕಾಗಿ ಕ್ಷಾಯಿಕಭಾವದಿಂದ ಜೀವಗಳು ಅನಂತವೇ ಎಂದರೆ ವಿನಾಶರಹಿತವೇ ಇವೆ).

ಪುನಃ 'ಅನಾದಿ-ಅನಂತ ಸಹಜಚೈತನ್ಯಲಕ್ಷಣ ಒಂದು ಭಾವವುಳ್ಳ ಅವಕ್ಕೆ ಸಾದಿ-ಸಾಂತ ಮತ್ತು ಸಾದಿ-ಅನಂತ ಭಾವಾಂತರಗಳು ಸಂಭವಿಸುವುದಿಲ್ಲ (ಎಂದರೆ ಜೀವಗಳಿಗೆ ಒಂದು ಪಾರಿಣಾಮಿಕಭಾವವನ್ನು ಹೊರತುಪಡಿಸಿ ಇತರ ಭಾವಗಳು ಸಂಭವಿಸುವುದಿಲ್ಲ)'ವೆಂದು ಹೇಳುವುದು ಯೋಗ್ಯವಾಗಿಲ್ಲ ; (ಏಕೆಂದರೆ)

---

೧. ಜೀವದ ಪಾರಿಣಾಮಿಕಭಾವದ ಲಕ್ಷಣವು ಎಂದರೆ ಸ್ವರೂಪವು ಸಹಜ-ಚೈತನ್ಯವಿದೆ.ಈ ಪಾರಿಣಾಮಿಕ ಭಾವವು ಅನಾದಿ-ಅನಂತವಿರುವುದರಿಂದ ಈ ಭಾವದ ಅಪೇಕ್ಷೆಯಿಂದ ಜೀವವು ಅನಾದಿ - ಅನಂತವಿದೆ.

ಏವಂ ಸದೋ ವಿಣಾಸೋ ಅಸದೋ ಜೀವಸ್ಸ ಹವದಿ ಉಪ್ಪಾದೋ ।
ಇದಿ ಜಿಣವರೇಹಿಂ ಭಣಿದಂ ಅಣ್ಣೋಣ್ಣವಿರುದ್ಧಮವಿರುದ್ಧಂ ॥೫೪॥

ಏವಂ ಸತೋ ವಿನಾಶೋಽಸತೋ ಜೀವಸ್ಯ ಭವತ್ಯುತ್ಪಾದಃ ।
ಇತಿ ಜಿನವರೈರ್ಭಣಿತಮನ್ಯೋಽನ್ಯವಿರುದ್ಧಮವಿರುದ್ಧಮ್ ॥೫೪॥

ಜೀವಸ್ಯ ಭಾವವಶಾತ್ಸಾದಿಸನಿಧನತ್ವೇಽ[೧] ನಾದ್ಯನಿಧನತ್ವೇ ಚ ವಿರೋಧಪರಿಹಾರೋಽಯಮ್ ।

ಏವಂ ಹಿ ಪಂಚಭಿರ್ಭಾವೈಃ ಸ್ವಯಂ ಪರಿಣಮಮಾನಸ್ಯಾಸ್ಯ ಜೀವಸ್ಯ ಕದಾಚಿದೌದಯಿಕೇನೈಕೇನ ಮನುಷ್ಯತ್ವಾದಿಲಕ್ಷಣೇನ ಭಾವೇನ ಸತೋ ವಿನಾಶಸ್ತಥಾಪರೇಣೌದಯಿಕೇನೈವ ದೇವತ್ವಾದಿಲಕ್ಷಣೇನ ಭಾವೇನ ಅಸತ ಉತ್ಪಾದೋ ಭವತ್ಯೇವ । ಏತಚ್ಚ 'ನ ಸತೋ ವಿನಾಶೋ ನಾಸತ ಉತ್ಪಾದ' ಇತಿ ಪೂರ್ವೋಕ್ತಸೂತ್ರೇಣ ಸಹ ವಿರುದ್ಧಮಪಿ ನ ವಿರುದ್ಧಮ್ ; ಯತೋ ಜೀವಸ್ಯ ದ್ರವ್ಯಾರ್ಥಿಕನಯಾದೇಶೇನ ನ ಸತ್ಪ್ರಣಾಶೋ ನಾಸದುತ್ಪಾದಃ, ತಸ್ಯೈವ ಪರ್ಯಾಯಾರ್ಥಿಕನಯಾದೇಶೇನ ಸತ್ಪ್ರಣಾಶೋಽಸದುತ್ಪಾದಶ್ಚ । ನ ಚೈತದನುಪಪನ್ನಮ್, ನಿತ್ಯೇ ಜಲೇ ಕಲ್ಲೋಲಾನಾಮನಿತ್ಯತ್ವದರ್ಶನಾದಿತಿ ।

ಅವು ವಾಸ್ತವಿಕವಾಗಿ ಅನಾದಿ ಕರ್ಮದಿಂದ ಮಲಿನವಾಗಿ ವರ್ತಿಸುತ್ತ ಕೊಳೆಯಿಂದ ಸಂಯುಕ್ತ[೨]ವಾದ ನೀರಿನಂತೆ ತದಾಕಾರರೂಪವಾಗಿ ಪರಿಣತವಾಗುವ ಕಾರಣ, ಐದು ಪ್ರಧಾನ ಗುಣಗಳಿಂದ[೩] ಪ್ರಾಧ್ಯಾನ್ಯತೆಯುಳ್ಳವುಗಳಾಗಿಯೇ ಅನುಭವದಲ್ಲಿ ಬರುತ್ತವೆ.

ಗಾಥೆ - ೫೪

ಗಾಥಾರ್ಥ :- [ಏವಂ] ಈ ಪ್ರಕಾರ [ಜೀವಸ್ಸ] ಜೀವನಿಗೆ [ಸದೋ ವಿಣಾಸೋ] ಸತ್‌ದ ವಿನಾಶ ಮತ್ತು [ಅಸದೋ ಉಪ್ಪಾದೋ] ಅಸತ್‌ದ ಉತ್ಪಾದವು [ಹವದಿ] ಆಗುತ್ತದೆ - [ಇದಿ] ಎಂದು [ಜಿಣವರೇಹಿಂ ಭಣಿದಂ] ಜಿನವರರು ಹೇಳಿದ್ದಾರೆ, [ಅಣ್ಣೋಣ್ಣವಿರುದ್ಧಂ] ಅದು ಅನ್ಯೋನ್ಯ ವಿರುದ್ಧವಿದ್ದಾಗ್ಯೂ (೧೯ ನೆಯ ಗಾಥೆಯ ಕಥನದೊಡನೆ ವಿರೋಧವುಳ್ಳದ್ದಿದ್ದರೂ) [ಅವಿರುದ್ಧಂ] ಅವಿರುದ್ಧವಿದೆ.

ಈ ರೀತಿ ಜೀವಕ್ಕೆ ಸತ್‌ದ ವಿನಾಶ ಮೇಣಸತ್‌ದ ಉತ್ಪಾದವಾಗುವುದೆಂದು ।
ವರ ಜಿನರು ಪೇಳಿಹರದು ಅನ್ಯೋನ್ಯವಿರುದ್ಧವಿದ್ದರೂ ಅವಿರುದ್ಧವಿದೆ ॥೫೪॥

---

೧. ಇಲ್ಲಿ 'ಸಾದಿ'ಗೆ ಬದಲಾಗಿ 'ಅನಾದಿ' ಇರಬೇಕೆಂದೆನಿಸುತ್ತದೆ ; ಅದಕ್ಕಾಗಿ ಕನ್ನಡದಲ್ಲಿ 'ಅನಾದಿ'ಯೆಂದು ಅರ್ಥಮಾಡಿದೆ.

೨. ಕೊಳೆಯಿಂದ ಸಂಯುಕ್ತ = ಕೊಳೆಯ ಸಂಪರ್ಕ ಪಡೆದ ; ಕೊಳೆಯ ಸಂಸರ್ಗವುಳ್ಳ, (ಜೀವವು ದ್ರವ್ಯಸ್ವಭಾವದಿಂದ ಶುದ್ಧವಿದ್ದರೂ ವ್ಯವಹಾರದಿಂದ ಅನಾದಿ ಕರ್ಮಬಂಧನದ ವಶವರ್ತಿಯಾಗಿ ಕೊಳೆಯುಳ್ಳ ನೀರಿನಂತೆ ಔದಯಿಕ ಮೊದಲಾದ ಭಾವಗಳ ರೂಪವಾಗಿ ಪರಿಣಮಿಸುತ್ತಿದೆ.)

೩. ಔದಯಿಕ, ಔಪಶಮಿಕ, ಕ್ಷಾಯೋಪಶಮಿಕ, ಕ್ಷಾಯಿಕ ಮತ್ತು ಪಾರಿಣಾಮಿಕವೆಂಬ ಐದು ಭಾವಗಳನ್ನು ಜೀವದ ಐದು ಪ್ರಧಾನ ಗುಣಗಳೆಂದು ಹೇಳಲಾಗಿದೆ.

ಣೇರಇಯತಿರಿಯಮಣುಯಾ ದೇವಾ ಇದಿ ನಾಮಸಂಜುದಾ ಪಯಡೀ ।
ಕುವ್ವಂತಿ ಸದೋ ಣಾಸಂ ಅಸದೋ ಭಾವಸ್ಸ ಉಪ್ಪಾದಂ ॥೫೫॥

ನಾರಕತಿರ್ಯಙ್ಮನುಷ್ಯಾ ದೇವಾ ಇತಿ ನಾಮಸಂಯುತಾಃ ಪ್ರಕೃತಯಃ ।
ಕುರ್ವಂತಿ ಸತೋ ನಾಶಮಸತೋ ಭಾವಸ್ಯೋತ್ಪಾದಮ್ ॥೫೫॥

ಹೀಗೆ ನಿಜವಾಗಿ ಐದು ಭಾವಗಳ ರೂಪದಿಂದ ತಾನು ಪರಿಣಮನಮಾಡುವಂಥ ಈ ಜೀವನಿಗೆ ಕಥಂಚಿತ್ ಔದಯಿಕದಂಥ ಒಂದು ಮನುಷ್ಯತ್ವಾದಿಸ್ವರೂಪಭಾವದ ಅಪೇಕ್ಷೆಯಿಂದ ಸತ್‌ದ ವಿನಾಶ ಮತ್ತು ಔದಯಿಕದಂಥದೇ ಬೇರೆ ದೇವತ್ವಾದಿಸ್ವರೂಪ ಭಾವದ ಅಪೇಕ್ಷೆಯಿಂದ ಅಸತ್‌ದ ಉತ್ಪಾದವೇ ಇರುತ್ತದೆ. ಮತ್ತು ಇದು (ಕಥನವು) 'ಸತ್‌ದ ವಿನಾಶವಿಲ್ಲ ಹಾಗೂ ಅಸತ್‌ದ ಉತ್ಪಾದವಿಲ್ಲ'ದಂಥ ಮೊದಲು ಹೇಳಿದ ಸೂತ್ರ (೧೯ ನೆಯ ಗಾಥೆ)ದೊಡನೆ ವಿರೋಧವುಳ್ಳದ್ದಾಗಿದ್ದರೂ (ವಾಸ್ತವಿಕವಾಗಿ) ವಿರೋಧವುಳ್ಳದ್ದಿಲ್ಲ ; ಏಕೆಂದರೆ ಜೀವನಿಗೆ ದ್ರವ್ಯಾರ್ಥಿಕನಯದ ಕಥನದಿಂದ ಸತ್‌ದ ನಾಶವಿಲ್ಲ ಮತ್ತು ಅಸತ್‌ದ ಉತ್ಪಾದವಿಲ್ಲ ಅದರಂತೆ ಅವನಿಗೆ ಪರ್ಯಾಯಾರ್ಥಿಕನಯದ ಕಥನದಿಂದ ಸತ್‌ದ ನಾಶವಿದೆ ಮತ್ತು ಅಸತ್‌ದ ಉತ್ಪಾದವಿದೆ. ಮತ್ತು ಇದು ಅನುಪಪನ್ನ[೧]ವಿಲ್ಲ, ಏಕೆಂದರೆ ನಿತ್ಯವಾದಂಥ ನೀರಿನಲ್ಲಿ ತರಂಗಗಳ ಅನಿತ್ಯತೆಯು ಕಂಡು ಬರುತ್ತದೆ.

ಭಾವಾರ್ಥ :- ೫೫ ನೆಯ ಗಾಥೆಯಲ್ಲಿ ಜೀವನಿಗೆ ಸಾದಿ-ಸಾಂತತನ ಹಾಗೂ ಅನಾದಿ - ಅನಂತತನವನ್ನು ಹೇಳಲಾಗಿದೆ. ಅಲ್ಲಿ ಸಾದಿ-ಸಾಂತತನ ಮತ್ತು ಅನಾದಿ -ಅನಂತತನ ಇವು ಪರಸ್ಪರ ವಿರುದ್ಧವಿವೆ; ಇಂಥ ಪರಸ್ಪರ ವಿರುದ್ಧಭಾವಗಳು ಜೀವನಿಗೆ ಏಕಕಾಲಕ್ಕೆ ಹೇಗೆ ಸಂಭವಿಸುತ್ತವೆ ? - ಎಂಬ ಪ್ರಶ್ನೆಯು ಉತ್ಪನ್ನವಾಗುತ್ತದೆ, ಅದರ ಸಮಾಧಾನವು ಹೀಗಿದೆ - ಜೀವವು ದ್ರವ್ಯಪರ್ಯಾಯಾತ್ಮಕವಾದ ವಸ್ತುವಿದೆ. ಅದಕ್ಕೆ ಸಾದಿ - ಸಾಂತತನ ಮತ್ತು ಅನಾದಿ - ಅನಂತತನ ಇವೆರಡನ್ನು ಒಂದೇ ಅಪೇಕ್ಷೆಯಿಂದ ಹೇಳಲಾಗಿಲ್ಲ, ಬೇರೆ-ಬೇರೆ ಅಪೇಕ್ಷೆಯಿಂದ ಹೇಳಲಾಗಿದೆ ; ಸಾದಿ-ಸಾಂತತನವನ್ನು ಹೇಳಲಾಗಿದೆ ಅದು ಪರ್ಯಾಯದ ಅಪೇಕ್ಷೆಯಿಂದಿದೆ ಮತ್ತು ಅನಾದಿ -ಅನಂತತನವು ಅದು ದ್ರವ್ಯದ ಅಪೇಕ್ಷೆಯಿಂದಿದೆ. ಆದುದರಿಂದ ಈ ಪ್ರಕಾರವಾಗಿ ಜೀವನಿಗೆ ಸಾದಿ-ಸಾಂತತನ ಹಾಗೂ ಅನಾದಿ-ಅನಂತತನಗಳು ಏಕಕಾಲಕ್ಕೆ ಸರಿಯಾಗಿ ಸಂಭವಿಸುತ್ತವೆ.

(ಇಲ್ಲಿ ಜೀವನಿಗೆ ಅನಾದಿ-ಅನಂತ ಹಾಗೂ ಸಾದಿ-ಸಾಂತವೆಂದು ಹೇಳಲಾಗಿದ್ದರೂ ಪರ್ಯಾಯಾರ್ಥಿಕ ನಯದ ವಿಷಯಭೂತವಾದ ಸಾದಿ-ಸಾಂತವು ಜೀವನಿಗೆ ಆಶ್ರಯ ಮಾಡಲು ಯೋಗ್ಯವಾಗಿಲ್ಲ, ಆದರೆ ದ್ರವ್ಯಾರ್ಥಿಕನಯದ ವಿಷಯಭೂತವಾದಂಥ ಯಾವ ಅನಾದಿ-ಅನಂತವೂ, ಟಂಕೋತ್ಕೀರ್ಣಜ್ಞಾಯಕ ಸ್ವಭಾವಿಯೂ, ನಿರ್ವಿಕಾರವೂ, ನಿತ್ಯಾನಂದ ಸ್ವರೂಪವೂ ಆದ ಜೀವದ್ರವ್ಯದ್ದೇ ಆಶ್ರಯ ಮಾಡಲು ಯೋಗ್ಯವಾಗಿದೆಯೆಂಬ ತಾತ್ಪರ್ಯವನ್ನು ಗ್ರಹಣ ಮಾಡಬೇಕು.)

ನಾರಕ-ತಿರ್ಯಂಚ-ಮನುಷ್ಯ-ದೇವವೆಂಬ ಹೆಸರಿನ ಪ್ರಕೃತಿಗಳಿವೆಯವು ।
ನೇರ ಸತ್‌ಭಾವದ ನಾಶ ಮೇಣಸತ್‌ಭಾವದ ಉತ್ಪಾದವನು ಮಾಡುವವು ॥೫೫॥

---

೧. ಅನುಪಪನ್ನ = ಅಯುಕ್ತ ; ಅಸಂಗತ ; ಅಘಟಿತ ; ಆಗಲಾರದಂಥದು.

ಜೀವಸ್ಯ ಸದಸದ್ಭಾವೋಚ್ಛಿತ್ತ್ಯುತ್ಪತ್ತಿನಿಮಿತ್ತೋಪಾಧಿಪ್ರತಿಪಾದನಮೇತತ್ ।

ಯಥಾ ಹಿ ಜಲರಾಶೇರ್ಜಲರಾಶಿತ್ವೇನಾಸದುತ್ಪಾದಂ ಸದುಚ್ಛೇದಂ ಚಾನನುಭವತಶ್ಚತುರ್ಭ್ಯಃ ಕಕುಬ್ಭಾಗೇಭ್ಯಃ ಕ್ರಮೇಣ ವಹಮಾನಾಃ ಪವಮಾನಾಃ ಕಲ್ಲೋಲಾನಾಮಸದುತ್ಪಾದಂ ಸದುಚ್ಛೇದಂ ಚ ಕುರ್ವಂತಿ, ತಥಾ ಜೀವಸ್ಯಾಪಿ ಜೀವತ್ವೇನ ಸದುಚ್ಛೇದಮಸದುತ್ಪತ್ತಿಂ ಚಾನನುಭವತಃ ಕ್ರಮೇಣೋದೀಯಮಾನಾಃ ನಾರಕತಿರ್ಯಙ್ಮನುಷ್ಯದೇವನಾಮಪ್ರಕೃತಯಃ ಸದುಚ್ಛೇದಮಸದುತ್ಪಾದಂ ಚ ಕುರ್ವಂತೀತಿ ।

ಉದಯೇಣ ಉವಸಮೇಣ ಯ ಖಏಣ ದುಹಿಂ ಮಿಸ್ಸಿದೇಹಿಂ ಪರಿಣಾಮೇ ।
ಜುತ್ತಾ ತೇ ಜೀವಗುಣಾ ಬಹುಸು ಯ ಅತ್ಥೇಸು ವಿತ್ಥಿಣ್ಣಾ ॥೫೬॥

ಗಾಥೆ - ೫೫

ಗಾಥಾರ್ಥ :- [ಣೇರಇಯತಿರಿಯಮಣುಯಾ ದೇವಾ] ನಾರಕ, ತಿರ್ಯಂಚ, ಮನುಷ್ಯ ಮತ್ತು ದೇವ [ಇದಿ ಣಾಮಸಂಜುದಾ] - ಎಂಬ ಹೆಸರುಗಳುಳ್ಳ [ಪಯಡೀ] (ನಾಮಕರ್ಮದ) ಪ್ರಕೃತಿಗಳು [ಸದ್ದೋ ಣಾಸಂ] ಸತ್‌ಭಾವದ ನಾಶ ಮತ್ತು [ಅಸದ್ದೋ ಭಾವಸ್ಸ ಉಪ್ಪಾದಂ] ಅಸತ್‌ಭಾವದ ಉತ್ಪಾದವನ್ನು [ಕುವ್ವಂತಿ] ಮಾಡುತ್ತವೆ.

ಟೀಕೆ :- ಇದು ಜೀವನಿಗೆ ಸತ್‌ಭಾವದ ಉಚ್ಛೇದ ಮತ್ತು ಅಸತ್‌ಭಾವದ ಉತ್ಪಾದದಲ್ಲಿ ನಿಮಿತ್ತಭೂತವಾದ ಉಪಾಧಿಯ ಪ್ರತಿಪಾದನೆಯಿದೆ.

ಯಾವ ಪ್ರಕಾರ ಸಮುದ್ರರೂಪದಿಂದ ಅಸತ್‌ದ ಉತ್ಪಾದ ಮತ್ತು ಸತ್‌ದ ಉಚ್ಛೇದದ ಅನುಭವ ಮಾಡದಂಥ ಸಮುದ್ರಕ್ಕೆ ನಾಲ್ಕೂ ದಿಕ್ಕುಗಳಿಂದ ಕ್ರಮವಾಗಿ ಬೀಸುತ್ತಿರುವ ಚಂಡ ಮಾರುತಗಳು ತರಂಗಗಳಿಗೆ ಸಂಬಂಧಿಸಿದ ಅಸತ್‌ದ ಉತ್ಪಾದ ಮತ್ತು ಸತ್‌ದ ಉಚ್ಛೇದ ಮಾಡುತ್ತವೆ. (ಎಂದರೆ ಅವಿದ್ಯಮಾನ ತರಂಗದ ಉತ್ಪಾದನೆಯಲ್ಲಿ ಅದರಂತೆ ವಿದ್ಯಮಾನ ತರಂಗದ ನಾಶದಲ್ಲಿ ನಿಮಿತ್ತಗಳಾಗುತ್ತವೆ.)ಅದೇ ಪ್ರಕಾರ ಜೀವ ರೂಪದಿಂದ ಸತ್‌ದ ಉಚ್ಛೇದ ಹಾಗೂ ಅಸತ್‌ದ ಉತ್ಪಾದದ ಅನುಭವ ಮಾಡದಂಥ ಜೀವನಿಗೆ ಕ್ರಮದಿಂದ ಉದಯಕ್ಕೆ ಪ್ರಾಪ್ತವಾಗುವಂಥ ನಾರಕ-ತಿರ್ಯಂಚ-ಮನುಷ್ಯ-ದೇವಗಳೆಂಬ ಹೆಸರಿನ (ನಾಮಕರ್ಮದ) ಪ್ರಕೃತಿಗಳು (ಭಾವಗಳಿಗೆ ಸಂಬಂಧಿಸಿದ, ಪರ್ಯಾಯಗಳಿಗೆ ಸಂಬಂಧಿಸಿದ)ಸತ್‌ದ ಉಚ್ಛೇದ ಅದರಂತೆ ಅಸತ್‌ದ ಉತ್ಪಾದ ಮಾಡುತ್ತವೆ. (ಎಂದರೆ ವಿದ್ಯಮಾನ ಪರ್ಯಾಯದ ನಾಶದಲ್ಲಿ ಮತ್ತು ಅವಿದ್ಯಮಾನ ಪರ್ಯಾಯದ ಉತ್ಪಾದನೆಯಲ್ಲಿ ನಿಮಿತ್ತಗಳಾಗುತ್ತವೆ.)

ಗಾಥೆ - ೫೬

ಗಾಥಾರ್ಥ :- [ಉದಯೇಣ] ಉದಯದಿಂದ ಯುಕ್ತ, [ಉವಸಮೇಣ] ಉಪಶಮದಿಂದ ಯುಕ್ತ, [ಖಏಣ] ಕ್ಷಯದಿಂದಯುಕ್ತ, [ದುಹಿಂ ಮಿಸ್ಸಿದೇಹಿಂ] ಕ್ಷಯೋಪಶಮದಿಂದಯುಕ್ತ [ಯ] ಮತ್ತು [ಪರಿಣಾಮೇ

ಉದಯ, ಉಪಶಮ, ಕ್ಷಯ, ಕ್ಷಯೋಪಶಮಮೇಣ್ ಪರಿಣಾಮದಿಂಯುಕ್ತವಾದ ।
ಐದು ಜೀವಗುಣಗಳೆಂದರಿವುದು, ಮತ್ತವು ಬಹುಭೇದದಿಂ ವಿಸ್ತೃತಮಪ್ಪವು ॥೫೬॥

ಉದಯೇನೋಪಶಮೇನ ಚ ಕ್ಷಯೇಣ ದ್ವಾಭ್ಯಾಂ ಮಿಶ್ರಿತಾಭ್ಯಾಂ ಪರಿಣಾಮೇನ ।
ಯುಕ್ತಾಸ್ತೇ ಜೀವಗುಣಾ ಬಹುಷು ಚಾರ್ಥೇಷು ವಿಸ್ತೀರ್ಣಾಃ ॥೫೬॥

ಜೀವಸ್ಯ ಭಾವೋದಯವರ್ಣನಮೇತತ್ ।

ಕರ್ಮಣಾಂ ಫಲದಾನಸಮರ್ಥತಯೋದ್ಭೂತಿರುದಯಃ, ಅನುದ್ಭೂತಿರುಪಶಮಃ, ಉದ್ಭೂತ್ಯನುದ್ಭೂತಿ ಕ್ಷಯೋಪಶಮಃ, ಅತ್ಯಂತವಿಶ್ಲೇಷಃ ಕ್ಷಯಃ, ದ್ರವ್ಯಾತ್ಮಲಾಭಹೇತುಕಃ ಪರಿಣಾಮಃ । ತತ್ರೋದಯೇನ ಯುಕ್ತ ಔದಯಿಕಃ, ಉಪಶಮೇನ ಯುಕ್ತ ಔಪಶಮಿಕಃ, ಕ್ಷಯೋಪಶಮೇನ ಯುಕ್ತಃ ಕ್ಷಾಯೋಪಶಮಿಕಃ, ಕ್ಷಯೇಣ ಯುಕ್ತಃ ಕ್ಷಾಯಿಕಃ, ಪರಿಣಾಮೇನ ಯುಕ್ತಃ ಪಾರಿಣಾಮಿಕಃ । ತ ಏತೇ ಪಂಚ ಜೀವಗುಣಾಃ । ತತ್ರೋಪಾಧಿ ಚತುರ್ವಿಧತ್ವನಿಬಂಧನಾಶ್ಚತ್ವಾರಃ, ಸ್ವಭಾವನಿಬಂಧನ ಏಕಃ । ಏತೇ ಚೋಪಾಧಿಭೇದಾತ್ಸ್ವರೂಪಭೇದಾಚ್ಚ ಭಿದ್ಯಮಾನಾ ಬಹುಷ್ವರ್ಥೇಷು ವಿಸ್ತಾರ್ಯಂತ ಇತಿ ।

ಜುತ್ತಾ] ಪರಿಣಾಮದಿಂದ ಯುಕ್ತ - [ತೇ] ಹೀಗೆ [ಜೀವಗುಣಾ] (ಐದು) ಜೀವಗುಣ (ಜೀವದ ಭಾವ)ಗಳಿವೆ ; [ಯ] ಮತ್ತು [ಬಹುಸು ಅತ್ಥೇಸು ವಿತ್ಥಿಣ್ಣಾ] ಅವನ್ನು ಅನೇಕ ಪ್ರಕಾರಗಳಲ್ಲಿ ವಿಸ್ತಾರ ಮಾಡಲಾಗುತ್ತದೆ.

ಟೀಕೆ :- ಇದು ಜೀವನಿಗೆ ಭಾವಗಳ ಉದಯದ (ಐದು ಭಾವಗಳ ಪ್ರಕಟನೆಯ) ವರ್ಣನೆಯಿದೆ.

ಕರ್ಮಗಳ ಫಲದಾನಸಾಮರ್ಥ್ಯ[೧] ರೂಪದಿಂದ ಉದ್ಭವಿಸುವುದು ಅದು 'ಉದಯ'ವಿದೆ, ಅನುದ್ಭವವು ಅದು 'ಉಪಶಮ'ವಿದೆ, ಉದ್ಭವ ಹಾಗೂ ಅನುದ್ಭವ ಅದು 'ಕ್ಷಯೋಪಶಮ'ವಿದೆ, ಅತ್ಯಂತ ವಿಶ್ಲೇಷ[೨]ವು ಅದು ಕ್ಷಯವಿದೆ, ದ್ರವ್ಯದ ಆತ್ಮಲಾಭ[೩]ವು (ಅಸ್ತಿತ್ವವು) ಯಾವುದರ ಹೇತುವಿದೆ ಅದು 'ಪರಿಣಾಮ'ವಿದೆ. ಅಲ್ಲಿ ಉದಯದಿಂದ ಯುಕ್ತವಾದುದು ಅದು 'ಔದಯಿಕ'ವಿದೆ, ಉಪಶಮದಿಂದ ಯುಕ್ತವಾದುದು ಅದು 'ಔಪಶಮಿಕ'ವಿದೆ, ಕ್ಷಯೋಪಶಮದಿಂದ ಯುಕ್ತವಾದುದು ಅದು 'ಕ್ಷಾಯೋಪಶಮಿಕ'ವಿದೆ, ಕ್ಷಯದಿಂದ ಯುಕ್ತ[೪]ವಾದುದು ಅದು 'ಕ್ಷಾಯಿಕ'ವಿದೆ, ಪರಿಣಾಮ[೫]ದಿಂದ ಯುಕ್ತವಾದುದು ಅದು 'ಪಾರಿಣಾಮಿಕ'ವಿದೆ. - ಹೀಗೆ ಇವು ಐದು ಜೀವಗುಣಗಳಿವೆ. ಅವುಗಳಲ್ಲಿ (ಈ ಐದು ಗುಣಗಳಲ್ಲಿ) ಉಪಾಧಿಯ[೬] ಚತುರ್ವಿಧತೆಯು

---

೧. ಫಲದಾನಸಮರ್ಥ = ಫಲ ಕೊಡುವಲ್ಲಿ ಸಮರ್ಥ.

೨. ಅತ್ಯಂತ ವಿಶ್ಲೇಷ = ಅತ್ಯಂತ ವಿಯೋಗ; ಆತ್ಯಂತಿಕ ನಿವೃತ್ತಿ.

೩. ಆತ್ಮಲಾಭ = ಸ್ವರೂಪಪ್ರಾಪ್ತಿ ; ಸ್ವರೂಪವನ್ನು ಧಾರಣೆ ಮಾಡಿಡುವುದು ; ತನ್ನನ್ನು ಧಾರಣೆ ಮಾಡಿಡುವುದು ; ಅಸ್ತಿತ್ವ. (ದ್ರವ್ಯವು ತನ್ನನ್ನು ಧಾರಣೆ ಮಾಡಿಡುತ್ತದೆ ಎಂದರೆ ತಾನು ಬದುಕಿರುವುದರಿಂದ ಅದಕ್ಕೆ 'ಪರಿಣಾಮ'ವಿದೆ.)

೪. ಕ್ಷಯದಿಂದ ಯುಕ್ತ = ಕ್ಷಯಸಹಿತ ; ಕ್ಷಯದೊಡನೆ ಸಂಬಂಧವುಳ್ಳ. (ವ್ಯವಹಾರದಿಂದ ಕರ್ಮಗಳ ಕ್ಷಯದ ಅಪೇಕ್ಷೆಯು ಜೀವದ ಯಾವ ಭಾವದಲ್ಲಿ ಬರುವುದು ಅದು 'ಕ್ಷಾಯಿಕ' ಭಾವವಿದೆ.)

೫. ಪರಿಣಾಮದಿಂದ ಯುಕ್ತ = ಪರಿಣಾಮಮಯ ; ಪರಿಣಾಮಾತ್ಮಕ ; ಪರಿಣಾಮಸ್ವರೂಪ.

೬. ಕರ್ಮೋಪಾಧಿಯ ನಾಲ್ಕು ಪ್ರಕಾರದ ದಶೆಗಳು (ಉದಯ, ಉಪಶಮ, ಕ್ಷಯೋಪಶಮ ಮತ್ತು ಕ್ಷಯ) ಯಾವವುಗಳ ನಿಮಿತ್ತವಿವೆ ಅಂಥ ನಾಲ್ಕು ಭಾವಗಳಿವೆ ; ಅವುಗಳಲ್ಲಿ ಕರ್ಮೋಪಾಧಿರೂಪ ನಿಮಿತ್ತಗಳು ಒಂದಿಷ್ಟೂ ಇಲ್ಲ, ಕೇವಲ ದ್ರವ್ಯ ಸ್ವಭಾವವೇ ಕಾರಣವಿರುವಂಥದು ಒಂದು ಪಾರಿಣಾಮಿಕ ಭಾವವಿದೆ.

ಕಮ್ಮಂ ವೇದಯಮಾಣೋ ಜೀವೋ ಭಾವಂ ಕರೇದಿ ಜಾರಿಸಯಂ ।
ಸೋ ತಸ್ಸ ತೇಣ ಕತ್ತಾ ಹವದಿ ತ್ತಿ ಯ ಸಾಸಣೇ ಪಢಿದಂ ॥೫೭॥

ಕರ್ಮ ವೇದಯಮಾನೋ ಜೀವೋ ಭಾವಂ ಕರೋತಿ ಯಾದೃಶಕಮ್ ।
ಸ ತಸ್ಯ ತೇನ ಕರ್ತಾ ಭವತೀತಿ ಚ ಶಾಸನೇ ಪಠಿತಮ್ ॥೫೭॥

ಜೀವಸ್ಯೌದಯಿಕಾದಿಭಾವಾನಾಂ ಕರ್ತೃತ್ವಪ್ರಕಾರೋಕ್ತಿರಿಯಮ್ ।

ಜೀವೇನ ಹಿ ದ್ರವ್ಯಕರ್ಮ ವ್ಯವಹಾರನಯೇನಾನುಭೂಯತೇ ; ತಚ್ಚಾನುಭೂಯಮಾನಂ ಜೀವಭಾವಾನಂ ನಿಮಿತ್ತಮಾತ್ರಮುಪವರ್ಣ್ಯತೇ । ತಸ್ಮಿನ್ನಿಮಿತ್ತಮಾತ್ರಭೂತೇ ಜೀವೇನ ಕರ್ತೃಭೂತೇನಾತ್ಮನಃ ಕರ್ಮಭೂತೋ ಭಾವಃ ಕ್ರಿಯತೇ । ಅಮುನಾ ಯೋ ಯೇನ ಪ್ರಕಾರೇಣ ಜೀವೇನ ಭಾವಃ ಕ್ರಿಯತೇ, ಸ ಜೀವಸ್ತಸ್ಯ ಭಾವಸ್ಯ ತೇನ ಪ್ರಕಾರೇಣ ಕರ್ತಾ ಭವತೀತಿ ।

ಯಾವವುಗಳ ಕಾರಣ (ನಿಮಿತ್ತ)ವಿದೆ ಅಂಥವು ನಾಲ್ಕು ಇವೆ, ಸ್ವಭಾವವು ಯಾವುದರ ಕಾರಣವಿದೆ ಅಂಥದು ಒಂದು ಇದೆ. ಉಪಾಧಿಯ ಭೇದದಿಂದ ಮತ್ತು ಸ್ವರೂಪದ ಭೇದದಿಂದ ಭೇದ ಮಾಡಿದ ಮೇಲೆ ಅವನ್ನು ಅನೇಕ ಪ್ರಕಾರಗಳಲ್ಲಿ ವಿಸ್ತಾರಮಾಡಲಾಗುತ್ತದೆ.

ಗಾಥೆ - ೫೭

ಗಾಥಾರ್ಥ :- [ಕಮ್ಮಂವೇದಯಮಾಣೋ] ಕರ್ಮವನ್ನು ಅನುಭವಿಸುತ್ತಿರುವ [ಜೀವೋ] ಜೀವವು [ಜಾರಿಸಯಂ ಭಾವಂ] ಯಾವ ಪ್ರಕಾರದ ಭಾವವನ್ನು [ಕರೇದಿ] ಮಾಡುತ್ತದೆ [ಸೋ] ಅದು [ತೇಣ] ಆ ಪ್ರಕಾರದಿಂದ [ತಸ್ಸ] ಆ ಭಾವದ [ಕತ್ತಾ ಹವದಿ] ಕರ್ತೃವಾಗುತ್ತದೆ - [ತ್ತಿ ಯ] ಎಂದು [ಸಾಸಣೇ ಪಢಿದಂ] ಶಾಸನದಲ್ಲಿ ಹೇಳಿದೆ.

ಟೀಕೆ :- ಇದು ಜೀವದ ಔದಯಿಕ ಮೊದಲಾದ ಭಾವಗಳ ಕರ್ತೃತ್ವಪ್ರಕಾರದ ಕಥನವಿದೆ.

ವ್ಯವಹಾರನಯದಿಂದ ಜೀವದ ಮುಖಾಂತರ ದ್ರವ್ಯಕರ್ಮವು ಅನುಭವದಲ್ಲಿ ಬರುತ್ತದೆ ; ಮತ್ತು ಅದು ಅನುಭವದಲ್ಲಿ ಬರುತ್ತಿರುವಾಗ ಜೀವ-ಭಾವಗಳಿಗೆ ನಿಮಿತ್ತಮಾತ್ರವೆಂದು ಹೇಳುವುದರಲ್ಲಿ ಬರುತ್ತದೆ ಅದು (ದ್ರವ್ಯಕರ್ಮವು) ನಿಮಿತ್ತಮಾತ್ರವಿರುವುದರಿಂದ ಜೀವದ ಮುಖಾಂತರ ಕರ್ತೃರೂಪದಿಂದ ತನ್ನ ಕರ್ಮರೂಪ (ಕಾರ್ಯರೂಪ) ಭಾವವನ್ನು ಮಾಡಲಾಗುತ್ತದೆ. ಆದುದರಿಂದ ಯಾವ ಭಾವವನ್ನು ಯಾವ ಪ್ರಕಾರದಿಂದ ಜೀವದ ಮುಖಾಂತರ ಮಾಡಲಾಗುತ್ತದೆ, ಆ ಜೀವವು ಆ ಪ್ರಕಾರದಿಂದ ಆ ಭಾವದ ಕರ್ತೃವಾಗುತ್ತದೆ.

ಜೀವಕರ್ಮವನನುಭವಿಸುವಾಗೆಂಥಭಾವವ ಮಾಡುವನು ಆ ಭಾವದ ।
ಆ ವಿಧದಿಂದವನು ಕರ್ತೃವಾಗುವನೆಂದು ಜಿನಶಾಸನದಿ ಪೇಳಿರುವುದು ॥೫೭॥

ಕಮ್ಮೇಣ ವಿಣಾ ಉದಯಂ ಜೀವಸ್ಸ ಣ ವಿಜ್ಜದೇ ಉವಸಮಂ ವಾ ।
ಖಇಯಂ ಖಓವಸಮಿಯಂ ತಮ್ಹಾ ಭಾವಂ ತು ಕಮ್ಮಕದಂ ॥೫೮॥

ಕರ್ಮಣಾ ವಿನೋದಯೋ ಜೀವಸ್ಯ ನ ವಿದ್ಯತ ಉಪಶಮೋ ವಾ ।
ಕ್ಷಾಯಿಕಃ ಕ್ಷಾಯೋಪಶಮಿಕಸ್ತಸ್ಮಾದ್ಭಾವಸ್ತು ಕರ್ಮಕೃತಃ ॥೫೮॥

ದ್ರವ್ಯಕರ್ಮಣಾಂ ನಿಮಿತ್ತಮಾತ್ರತ್ವೇನೌದಯಿಕಾದಿಭಾವಕರ್ತೃತ್ವಮತ್ರೋಕ್ತಮ್ ।

ನ ಖಲು ಕರ್ಮಣಾ ವಿನಾ ಜೀವಸ್ಯೋದಯೋಪಶಮೌ ಕ್ಷಯಕ್ಷಾಯೋಪಶಮಾವಪಿ ವಿದ್ಯೇತೇ; ತತಃ ಕ್ಷಾಯಿಕಕ್ಷಾಯೋಪಶಮಿಕಶೌದ್ಧಯಿಕೌಪಶಮಿಕಶ್ಚ ಭಾವಃ ಕರ್ಮಕೃತೋಽನುಮಂತವ್ಯಃ । ಪಾರಿಣಾಮಿಕಸ್ತ್ವನಾದಿನಿಧನೋ ನಿರುಪಾಧಿಃ ಸ್ವಭಾವಿಕ ಏವ । ಕ್ಷಾಯಿಕಸ್ತು ಸ್ವಭಾವವ್ಯಕ್ತಿರೂಪತ್ವಾದನಂತೋಽಪಿ ಕರ್ಮಣಃ ಕ್ಷಯೇಣೋತ್ಪದ್ಯಮಾನತ್ವಾತ್ಸಾದಿರಿತಿ ಕರ್ಮಕೃತ ಏವೋಕ್ತಃ । ಔಪಶಮಿಕಸ್ತು ಕರ್ಮಣಾಮುಪಶಮೇ ಸಮುತ್ಪದ್ಯಮಾನತ್ವಾದನುಪಶಮೇ ಸಮುಚ್ಛಿದ್ಯಮಾನತ್ವಾತ್ ಕರ್ಮಕೃತ ಏವೇತಿ ।

ಅಥವಾ ಉದಯೋಪಶಮಕ್ಷಯಕ್ಷಯೋಪಶಮಲಕ್ಷಣಾಶ್ಚತಸ್ರೋ ದ್ರವ್ಯಕರ್ಮಣಾಮೇವಾವಸ್ಥಾಃ, ನ ಪುನಃ ಪರಿಣಾಮಲಕ್ಷಣೈಕಾವಸ್ಥಸ್ಯ ಜೀವಸ್ಯ; ತತ ಉದಯಾದಿಸಂಜಾತಾನಾಮಾತ್ಮನೋ ಭಾವಾನಾಂ ನಿಮಿತ್ತಮಾತ್ರ ಭೂತತಥಾವಿಧಾವಸ್ಥತ್ವೇನ ಸ್ವಯಂ ಪರಿಣಮನಾದ್ದ್ರವ್ಯಕರ್ಮಾಪಿ ವ್ಯವಹಾರನಯೇನಾತ್ಮನೋ ಭಾವನಾಂ ಕರ್ತೃತ್ವಮಾಪದ್ಯತ ಇತಿ ।

ಗಾಥೆ - ೫೮

ಗಾಥಾರ್ಥ :- [ಕಮ್ಮೇಣ ವಿಣಾ] ಕರ್ಮವಿಲ್ಲದೆ [ಜೀವಸ್ಸ] ಜೀವಕ್ಕೆ [ಉದಯಂ] ಉದಯ, [ಉವಸಮಂ] ಉಪಶಮ, [ಖಇಯಂ] ಕ್ಷಾಯಿಕ [ವಾ] ಅಥವಾ [ಖಓವಸಮಿಯಂ] ಕ್ಷಾಯೋಪಶಮಿಕವು [ಣ ವಿಜ್ಜದೇ] ಇರುವುದಿಲ್ಲ, [ತಮ್ಹಾ ತು] ಆದುದರಿಂದ [ಭಾವಂ] ಭಾವ (ಚತುರ್ವಿಧ ಜೀವಭಾವ)ಗಳು [ಕಮ್ಮಕದಂ] ಕರ್ಮಕೃತವಾಗಿವೆ.

ಟೀಕೆ :- ಇಲ್ಲಿ (ಔದಯಿಕ ಮೊದಲಾದ ಭಾವಗಳಿಗೆ) ನಿಮಿತ್ತಮಾತ್ರರೂಪದಿಂದ ದ್ರವ್ಯಕರ್ಮಗಳಿಗೆ ಔದಯಿಕ ಮೊದಲಾದ ಭಾವಗಳ ಕರ್ತೃತ್ವವನ್ನು ಹೇಳಿದೆ.

(ಒಂದು ಪ್ರಕಾರದಿಂದ ವ್ಯಾಖ್ಯೆ ಮಾಡಿದ ಮೇಲೆ-) ಕರ್ಮವಿಲ್ಲದೆ ಜೀವಕ್ಕೆ ಉದಯ-ಉಪಶಮ ಹಾಗೂ ಕ್ಷಯ-ಕ್ಷಯೋಪಶಮಗಳಿರುವುದಿಲ್ಲ (ಎಂದರೆ ದ್ರವ್ಯಕರ್ಮವಿಲ್ಲದೆ ಜೀವಕ್ಕೆ ಔದಯಿಕಾದಿ ನಾಲ್ಕು ಭಾವಗಳಿರುವುದಿಲ್ಲ) ಆದುದರಿಂದ ಕ್ಷಾಯಿಕ, ಕ್ಷಾಯೋಪಶಮಿಕ, ಔದಯಿಕ ಅಥವಾ ಔಪಶಮಿಕ ಭಾವಗಳನ್ನು

ಜೀವಕ್ಕೆಪುದ್ಗಲಕರ್ಮವಿಲ್ಲದೆ ಉದಯ, ಉಪಶಮ, ಕ್ಷಾಯಿಕವಿಲ್ಲವೆ ।
ಯಾವ ಕ್ಷಾಯೋಪಶಮಿಕವಿಲ್ಲದರಿಂದ ಭಾವಗಳು ಕರ್ಮಕೃತವಾಗಿವೆ ॥೫೮॥

ಭಾವೋ ಜದಿ ಕಮ್ಮಕದೋ ಅತ್ತಾ ಕಮ್ಮಸ್ಸ ಹೋದಿ ಕಿಧ ಕತ್ತಾ ।
ಣ ಕುಣದಿ ಅತ್ತಾ ಕಿಂಚಿ ವಿ ಮುತ್ತಾ ಅಣ್ಣಂ ಸಗಂ ಭಾವಂ ॥೫೯॥

ಭಾವೋ ಯದಿ ಕರ್ಮಕೃತ ಆತ್ಮಾ ಕರ್ಮಣೋ ಭವತಿ ಕಥಂ ಕರ್ತಾ ।
ನ ಕರೋತ್ಯಾತ್ಮಾ ಕಿಂಚಿದಪಿ ಮುಕ್ತ್ವಾನ್ಯತ್ ಸ್ವಕಂ ಭಾವಮ್ ॥೫೯॥

ಕರ್ಮಕೃತವೆಂದು ಮನ್ನಿಸುವುದು. ಪಾರಿಣಾಮಿಕ ಭಾವವಂತೂ ಅನಾದಿ-ಅನಂತ, ನಿರುಪಾಧಿ[೧] ಸ್ವಾಭಾವಿಕವೇ ಇದೆ. (ಔದಯಿಕ ಮತ್ತು ಕ್ಷಾಯೋಪಶಮಿಕ ಭಾವಗಳು ಕರ್ಮವಿಲ್ಲದೆ ಇಲ್ಲದಿರುವುದರಿಂದ ಕರ್ಮಕೃತವೆಂದು ಹೇಳಲಾಗುತ್ತದೆ - ಈ ಮಾತಂತೂ ಸ್ಪಷ್ಟವಾಗಿ ತಿಳಿವಳಿಕೆಯಲ್ಲಿ ಬರುತ್ತದೆ ; ಕ್ಷಾಯಿಕ ಮತ್ತು ಔಪಶಮಿಕ ಭಾವಗಳ ಸಂಬಂಧದಲ್ಲಿ ಈ ಕೆಳಗೆ ಹೇಳಿದಂತೆ ಸ್ಪಷ್ಟಪಡಿಸಲಾಗುತ್ತದೆ-) ಕ್ಷಾಯಿಕಭಾವವು ಸ್ವಭಾವದ ವ್ಯಕ್ತರೂಪ (ಪ್ರಕಟತೆರೂಪ)ವಿರುವುದರಿಂದ ಅನಂತ (ಅಂತರಹಿತ)ವಿದ್ದರೂ ಕರ್ಮಕ್ಷಯದಿಂದ ಉತ್ಪನ್ನವಾಗುವ ಕಾರಣ ಸಾದಿಯಿರುವುದರಿಂದ ಕರ್ಮಕೃತವೆಂದೇ ಹೇಳಲಾಗಿದೆ. ಔಪಶಮಿಕ ಭಾವವು ಕರ್ಮದ ಉಪಶಮದಿಂದ ಉತ್ಪನ್ನವಾಗುವ ಕಾರಣ ಹಾಗೂಅನುಪಶಮದಿಂದ ನಷ್ಟವಾಗುವ ಕಾರಣ ಕರ್ಮಕೃತವೇ ಇದೆ. (ಹೀಗೆ ಔದಯಿಕಾದಿ ನಾಲ್ಕು ಭಾವಗಳನ್ನು ಕರ್ಮಕೃತವೆಂದು ನಂಬುವುದು.)

(ಅಥವಾ ಇನ್ನೊಂದು ಪ್ರಕಾರದಿಂದ ವ್ಯಾಖ್ಯೆ ಮಾಡಿದ ಮೇಲೆ-) ಉದಯ, ಉಪಶಮ, ಕ್ಷಯ ಮತ್ತು ಕ್ಷಯೋಪಶಮಸ್ವರೂಪದ ನಾಲ್ಕು (ಅವಸ್ಥೆಗಳು) ದ್ರವ್ಯಕರ್ಮದ ಅವಸ್ಥೆಗಳೇ ಇವೆ, ಪರಿಣಾಮಸ್ವರೂಪ ಒಂದು ಅವಸ್ಥೆಯುಳ್ಳ, ಜೀವದವುಗಳಲ್ಲ(ಎಂದರೆ ಉದಯ ಮೊದಲಾದ ಅವಸ್ಥೆಗಳು ದ್ರವ್ಯಕರ್ಮದ್ದೇ ಇವೆ, 'ಪರಿಣಾಮ'ವು ಯಾವುದರ ಸ್ವರೂಪವಿದೆ ಅಂಥ ಒಂದು ಅವಸ್ಥೆರೂಪದಿಂದ ಅವಸ್ಥಿತವಾದ ಜೀವದ ಪಾರಿಣಾಮಿಕಭಾವರೂಪ ಸ್ಥಿತ ಜೀವದ-ಅವು ನಾಲ್ಕು ಅವಸ್ಥೆಗಳಿವೆ) ; ಆದುದರಿಂದ ಉದಯಾದಿಕದ ಮುಖಾಂತರ ಉತ್ಪನ್ನವಾಗುವಂಥ ಆತ್ಮನ ಭಾವಗಳನ್ನೇ ನಿಮಿತ್ತಮಾತ್ರಭೂತವಾದಂಥ ಆ ಪ್ರಕಾರದ ಅವಸ್ಥೆಗಳರೂಪ (ದ್ರವ್ಯಕರ್ಮ)ವು ತಾನು ಪರಿಣಮಿತವಾಗುವ ಕಾರಣ ದ್ರವ್ಯಕರ್ಮವೂ ವ್ಯವಹಾರನಯದಿಂದ ಆತ್ಮನ ಭಾವಗಳ ಕರ್ತೃತ್ವಕ್ಕೆ ಪ್ರಾಪ್ತವಾಗುತ್ತದೆ.

ಗಾಥೆ - ೫೯

ಗಾಥಾರ್ಥ :- [ಜದಿ ಭಾವೋ ಕಮ್ಮಕದೋ] ಒಂದು ವೇಳೆ ಭಾವ(ಜೀವಭಾವ)ವು ಕರ್ಮಕೃತವಾದರೆ [ಅತ್ತಾ ಕಮ್ಮಸ್ಸ ಕತ್ತಾಹೋದಿ) ಆತ್ಮನು ಕರ್ಮದ (-ದ್ರವ್ಯಕರ್ಮದ) ಕರ್ತೃವಾಗಬೇಕಾಗುವುದು. [ಕಿಧ] ಅದಂತೂ ಹೇಗಾಗುತ್ತದೆ ? [ಅತ್ತಾ] ಏಕೆಂದರೆ ಆತ್ಮನಂತೂ [ಸಗಂ ಭಾವಂ ಮುತ್ತಾ] ತನ್ನ ಭಾವವನ್ನು ಬಿಟ್ಟುಕೊಟ್ಟು [ಅಣ್ಣಂ ಕಿಂಚಿ ವಿ] ಬೇರೆ ಏನನ್ನೂ [ಣ ಕುಣದಿ] ಮಾಡುವುದಿಲ್ಲ.

ಭಾವ ಕರ್ಮಕೃತವಾದರೆ ಆತ್ಮ ಕರ್ಮದ ಕರ್ತೃವಾಗಬೇಕದು ಹೇಗೆ ಸಾಧ್ಯ ? ।
ಜೀವನಂತೂ ತನ್ನ ಭಾವಗಳ ಬಿಟ್ಟು ಬೇರಾವುದನೆಂದೂ ತಾ ಮಾಡಲಾರನು ॥೫೯॥

೧. ನಿರುಪಾಧಿ = ಉಪಾಧಿಯಿಲ್ಲದ ; ಔಪಾಧಿಕವಾಗದಂಥ, (ಜೀವದಪಾರಿಣಾಮಿಕಭಾವವು ಎಲ್ಲ ಕರ್ಮೋಪಾಧಿಯಿಂದ ನಿರಪೇಕ್ಷವಿರುವಕಾರಣ ನಿರುಪಾಧಿಯಿದೆ.)

ಜೀವಭಾವಸ್ಯ ಕರ್ಮಕರ್ತೃತ್ವೇ ಪೂರ್ವಪಕ್ಷೋಽಯಮ್ ।

ಯದಿ ಖಲ್ವೌದಯಿಕಾದಿರೂಪೋ ಜೀವಸ್ಯ ಭಾವಃ ಕರ್ಮಣಾ ಕ್ರಿಯತೇ, ತದಾ ಜೀವಸ್ತಸ್ಯ ಕರ್ತಾ ನ ಭವತಿ । ನ ಚ ಜೀವಸ್ಯಾಕರ್ತೃತ್ವಮಿಷ್ಯತೇ । ತತಃ ಪಾರಿಶೇಷ್ಯೇಣ ದ್ರವ್ಯಕರ್ಮಣಃ ಕರ್ತಾಪದ್ಯತೇ । ತತ್ತು ಕಥಮ್ ? ಯತೋ ನಿಶ್ಚಯನಯೇನಾತ್ಮಾ ಸ್ವಂ ಭಾವಮುಚ್ಛಿತ್ತ್ವಾನಾನ್ಯತ್ಕಿಮಪಿ ಕರೋತೀತಿ ।

ಭಾವೋ ಕಮ್ಮಣಿಮಿತ್ತೋ ಕಮ್ಮಂ ಪುಣ ಭಾವಕಾರಣಂ ಹವದಿ ।
ಣ ದು ತೇಸಿಂ ಖಲು ಕತ್ತಾಣ ವಿಣಾ ಭೂದಾ ದು ಕತ್ತಾರಂ ॥೬೦॥

ಭಾವಃ ಕರ್ಮನಿಮಿತ್ತಃ ಕರ್ಮ ಪುನರ್ಭಾವಕಾರಣಂ ಭವತಿ ।
ನ ತು ತೇಷಾಂ ಖಲು ಕರ್ತಾ ನ ವಿನಾ ಭೂತಾಸ್ತು ಕರ್ತಾರಮ್ ॥೬೦॥

ಟೀಕೆ :- ಕರ್ಮಕ್ಕೆ ಜೀವಭಾವದ ಕರ್ತೃತ್ವವಾಗುವ ಸಂಬಂಧದಲ್ಲಿ ಇದು ಪೂರ್ವಪಕ್ಷ[೧] ಇದೆ.

ಒಂದು ವೇಳೆ ಔದಯಿಕಾದಿರೂಪವಾದ ಜೀವದ ಭಾವಗಳು ಕರ್ಮದಿಂದ ಮಾಡಲ್ಪಡುತ್ತಿದ್ದರೆ ಜೀವವು ಅದರ (ಔದಯಿಕಾದಿರೂಪ ಜೀವಭಾವದ) ಕರ್ತೃವಿಲ್ಲವೆಂದು ಸಿದ್ಧವಾಗುತ್ತದೆ. ಮತ್ತು ಜೀವದ ಅಕರ್ತೃತ್ವವಂತೂ ಇಷ್ಟ(ಮಾನ್ಯ)ವಿಲ್ಲ. ಆದುದರಿಂದ ಜೀವವು ದ್ರವ್ಯಕರ್ಮದ ಕರ್ತೃವಾಗಬೇಕೆಂಬುದು ಬಾಕಿ ಉಳಿಯುವುದು. ಆದರೆ ಅದಂತೂ ಹೇಗಾಗುವ ಸಾಧ್ಯತೆಯಿದೆ ? ಏಕೆಂದರೆ ನಿಶ್ಚಯನಯದಿಂದ ಆತ್ಮನು ತನ್ನ ಭಾವವನ್ನು ಬಿಟ್ಟುಕೊಟ್ಟು ಬೇರೆ ಏನನ್ನೂ ಮಾಡುವುದಿಲ್ಲ.

(ಹೀಗೆ ಪೂರ್ವಪಕ್ಷವನ್ನು ಉಪಸ್ಥಿತ ಮಾಡಲಾಗಿದೆ.)

ಗಾಥೆ - ೬೦

ಗಾಥಾರ್ಥ :- [ಭಾವೋ ಕಮ್ಮಣಿಮಿತ್ತೋ] ಜೀವಭಾವಕ್ಕೆ ಕರ್ಮವು ನಿಮಿತ್ತವಿದೆ [ಪುಣ] ಮತ್ತು [ಕಮ್ಮಂ ಭಾವಕಾರಣಂ ಹವದಿ] ಕರ್ಮಕ್ಕೆ ಜೀವಭಾವವು ನಿಮಿತ್ತವಿದೆ, [ಣ ದು ತೇಸಿಂ ಖಲು ಕತ್ತಾ] ಆದರೆ ನಿಜವಾಗಿ ಒಂದು - ಇನ್ನೊಂದರ ಕರ್ತೃವಾಗಿಲ್ಲ ; [ಣ ದು ಕತ್ತಾರಂ ವಿಣಾ ಭೂದಾ] ಕರ್ತೃವಿಲ್ಲದೆ ಆಗುತ್ತವೆ - ಎಂಬುದಾಗಿಯೂ ಇಲ್ಲ.

ಜೀವಭಾವಕ್ಕೆ ಕರ್ಮನಿಮಿತ್ತವಿದ್ದು ಕರ್ಮಕ್ಕೆ ಜೀವಭಾವನಿಮಿತ್ತವಿದ್ದರೂ ।
ಅವೆರಡು ಪರಸ್ಪರ ಕರ್ತೃವಿಲ್ಲ ಕರ್ತೃವಿಲ್ಲದೆ ಆಗುವಂತೆಯೂ ತಾನಿಲ್ಲ ॥೬೦॥

---

೧. ಪೂರ್ವಪಕ್ಷ = ಚರ್ಚೆ ಅಥವಾ ನಿರ್ಣಯದ ಕುರಿತು ಯಾವುದೇ ಶಾಸ್ತ್ರೀಯ ಸಂಬಂಧದಲ್ಲಿ ಉಪಸ್ಥಿತ ಮಾಡಲ್ಪಟ್ಟ ಪಕ್ಷ ಅಥವಾ ಪ್ರಶ್ನೆ.

ಪೂರ್ವಸೂತ್ರೋದಿತಪೂರ್ವಪಕ್ಷಸಿದ್ಧಾಂತೋಽಯಮ್ ।

ವ್ಯವಹಾರೇಣ ನಿಮಿತ್ತಮಾತ್ರತ್ವಾಜ್ಜೀವಭಾವಸ್ಯ ಕರ್ಮ ಕರ್ತೃ , ಕರ್ಮಣೋಽಪಿ ಜೀವಭಾವಃ ಕರ್ತಾ ; ನಿಶ್ಚಯೇನ ತು ನ ಜೀವಭಾವಾನಾಂ ಕರ್ಮ ಕರ್ತೃ , ನ ಕರ್ಮಣೋ ಜೀವಭಾವಃ । ನ ಚ ತೇ ಕರ್ತಾರಮಂತರೇಣ ಸಂಭೂಯೇತೇ ; ಯತೋ ನಿಶ್ಚಯೇನ ಜೀವಪರಿಣಾಮಾನಾಂ ಜೀವಃ ಕರ್ತಾ ಕರ್ಮಪರಿಣಾಮಾನಾಂ ಕರ್ಮಕರ್ತೃ ಇತಿ ।

ಕುವ್ವಂ ಸಗಂ ಸಹಾವಂ ಅತ್ತಾ ಕತ್ತಾ ಸಗಸ್ಸ ಭಾವಸ್ಸ ।
ಣ ಹಿ ಪೋಗ್ಗಲಕಮ್ಮಾಣಂ ಇದಿ ಜಿಣವಯಣಂ ಮುಣೇದವ್ವಂ ॥೬೧॥

ಕುರ್ವನ್ ಸ್ವಕಂ ಸ್ವಭಾವಂ ಆತ್ಮಾ ಕರ್ತಾ ಸ್ವಕಸ್ಯ ಭಾವಸ್ಯ ।
ನ ಹಿ ಪುದ್ಗಲಕರ್ಮಣಾಮಿತಿ ಜಿನವಚನಂ ಜ್ಞಾತವ್ಯಮ್ ॥೬೧॥

ಟೀಕೆ :- ಇದು ಮೊದಲಿನ ಸೂತ್ರದಲ್ಲಿ (೫೯ ನೆಯ ಗಾಥೆಯಲ್ಲಿ) ಹೇಳಿದ ಪೂರ್ವಪಕ್ಷದ ಸಮಾಧಾನರೂಪವಾದ ಸಿದ್ಧಾಂತವಿದೆ.

ನಿಮಿತ್ತಮಾತ್ರವಿರುವುದರ ಕಾರಣವಾಗಿ ವ್ಯವಹಾರದಿಂದ ಜೀವಭಾವಕ್ಕೆ ಕರ್ಮವು ಕರ್ತೃವಿದೆ (ಔದಯಿಕ ಮೊದಲಾದ ಜೀವಭಾವಕ್ಕೆ ದ್ರವ್ಯಕರ್ಮವು ಕರ್ತೃವಿದೆ), ಕರ್ಮಕ್ಕೂ ಜೀವಭಾವವು ಕರ್ತೃವಿದೆ, ನಿಶ್ಚಯದಿಂದಂತೂ ಜೀವಭಾವಗಳ ಕರ್ತೃವು ಕರ್ಮವಿಲ್ಲ ಮತ್ತು ಕರ್ಮದ ಕರ್ತೃವು ಜೀವಭಾವಗಳಿಲ್ಲ. ಅವು (ಜೀವಭಾವ ಮತ್ತು ದ್ರವ್ಯ ಕರ್ಮಗಳು) ಕರ್ತೃವಿಲ್ಲದೆ ಆಗುತ್ತವೆ - ಎಂಬುದಾಗಿಯೂ ಇಲ್ಲ ; ಏಕೆಂದರೆ ನಿಶ್ಚಯದಿಂದ ಜೀವಪರಿಣಾಮಗಳ ಕರ್ತೃವು ಜೀವವಿದೆ ಮತ್ತು ಕರ್ಮಪರಿಣಾಮಗಳ ಕರ್ತೃವು ಕರ್ಮ(ಪುದ್ಗಲ)ವಿದೆ.

ಗಾಥೆ - ೬೧

ಗಾಥಾರ್ಥ :- [ಸಗಂ ಸಹಾವಂ] ತನ್ನ ಸ್ವಭಾವವನ್ನು [1][ಕುವ್ವಂ] ಮಾಡುತ್ತಿರುವ [ಅತ್ತಾ] ಆತ್ಮನು [ಹಿ] ವಾಸ್ತವಿಕವಾಗಿ [ಸಗಸ್ಸ ಭಾವಸ್ಸ] ತನ್ನ ಭಾವದ [ಕತ್ತಾ] ಕರ್ತೃವಿದ್ದಾನೆ, - [ಣ ಪೋಗ್ಗಲಕಮ್ಮಾಣಂ] ಪುದ್ಗಲಕರ್ಮಗಳದ್ದಲ್ಲ ; [ಇದಿ] - ಎಂಬ [ಜಿಣವಯಣಂ] ಜಿನವಚನವನ್ನು [ಮುಣೇದವ್ವಂ] ತಿಳಿದು ಕೊಳ್ಳುವುದು.

ತನ್ನ ಭಾವವಮಾಡುತಿರುವಾತ್ಮನಿಜದಿ ತನ್ನ ಭಾವದ ಕರ್ತೃವಿರುವನು ।
ಭಿನ್ನ ಪುದ್ಗಲ ಕರ್ಮಗಳ ಕರ್ತೃವಿಲ್ಲೆಂಬ ಜಿನವಚನ ತಿಳಿಯುವುದು ॥೬೧॥

---

೧. ಶುದ್ಧನಿಶ್ಚಯದಿಂದ ಕೇವಲಜ್ಞಾನ ಮೊದಲಾದ ಶುದ್ಧಭಾವಗಳು 'ಸ್ವಭಾವ'ವೆಂದು ಕರೆಯಿಸಿಕೊಳ್ಳುತ್ತಿದ್ದರೂ ಅಶುದ್ಧನಿಶ್ಚಯದಿಂದ ರಾಗಾದಿಗಳೂ 'ಸ್ವಭಾವ'ವೆಂದು ಕರೆಯಿಸಿಕೊಳ್ಳುತ್ತವೆ.

ನಿಶ್ಚಯೇನ ಜೀವಸ್ಯ ಸ್ವಭಾವಾನಾಂ ಕರ್ತೃತ್ವಂ ಪುದ್ಗಲಕರ್ಮಣಾಮಕರ್ತೃತ್ವಂ ಚಾಗಮೇನೋಪದರ್ಶಿತಮತ್ರ ಇತಿ ।

ಕಮ್ಮಂ ಪಿ ಸಗಂ ಕುವ್ವದಿ ಸೇಣ ಸಹಾವೇಣ ಸಮ್ಮಮಪ್ಪಾಣಂ ।
ಜೀವೋ ವಿ ಯ ತಾರಿಸಓ ಕಮ್ಮಸಹಾವೇಣ ಭಾವೇಣ ॥೬೨॥

ಕರ್ಮಾಪಿ ಸ್ವಕಂ ಕರೋತಿ ಸ್ವೇನ ಸ್ವಭಾವೇನ ಸಮ್ಯಗಾತ್ಮಾನಮ್ ।
ಜೀವೋಽಪಿ ಚ ತಾದೃಶಕಃ ಕರ್ಮಸ್ವಭಾವೇನ ಭಾವೇನ ॥೬೨॥

ಅತ್ರ ನಿಶ್ಚಯನಯೇನಾಭಿನ್ನಕಾರಕತ್ವಾತ್ಕರ್ಮಣೋ ಜೀವಸ್ಯ ಚ ಸ್ವಯಂ ಸ್ವರೂಪಕರ್ತೃತ್ವಮುಕ್ತಮ್ ।

ಟೀಕೆ :- ನಿಶ್ಚಯದಿಂದ ಜೀವನಿಗೆ ತನ್ನ ಭಾವಗಳ ಕರ್ತೃತ್ವವಿದೆ ಮತ್ತು ಪುದ್ಗಲಕರ್ಮಗಳ ಅಕರ್ತೃತ್ವವಿದೆಯೆಂದು ಇಲ್ಲಿ ಆಗಮದ ಮುಖಾಂತರ ದರ್ಶಿಸಲಾಗಿದೆ.

ಗಾಥೆ - ೬೨

ಗಾಥಾರ್ಥ :- [ಕಮ್ಮಂ ಪಿ] ಕರ್ಮಗಳೂ [ಸೇಣ ಸಹಾವೇಣ] ತಮ್ಮ ಸ್ವಭಾವದಿಂದ [ಸಗಂ ಕುವ್ವದಿ] ತಮ್ಮನ್ನು ಮಾಡುತ್ತವೆ [ಯ] ಮತ್ತು [ತಾರಿಸಓ ಜೀವೋ ವಿ] ಹಾಗೆ ಜೀವವೂ [ಕಮ್ಮಸಹಾವೇಣ) ಕರ್ಮಸ್ವಭಾವದ ಭಾವದಿಂದ (ಔದಯಿಕ ಮೊದಲಾದ ಭಾವದಿಂದ) [ಸಮ್ಮಮಪ್ಪಾಣಂ] ಸರಿಯಾಗಿ ತನ್ನನ್ನು ಮಾಡುತ್ತದೆ.

ಟೀಕೆ :- ನಿಶ್ಚಯನಯದಿಂದ ಅಭಿನ್ನಕಾರಕವಿರುವುದರಿಂದ ಕರ್ಮ ಮತ್ತು ಜೀವಗಳು ತಾವು ತಮ್ಮ ರೂಪದ (ತಮ್ಮ-ತಮ್ಮ ರೂಪದ) ಕರ್ತೃವಿವೆಯೆಂದು ಇಲ್ಲಿ ಹೇಳಿದೆ.

ಕರ್ಮವು ವಾಸ್ತವಿಕವಾಗಿ ೧) ಕರ್ಮರೂಪದಿಂದ ಪ್ರವರ್ತಿಸಿ ಪುದ್ಗಲಸ್ಕಂಧರೂಪದಿಂದ ಕರ್ತೃತ್ವವನ್ನು ಧಾರಣ ಮಾಡುತ್ತ, ೨) ಕರ್ಮತನವನ್ನು ಪಡೆದುಕೊಳ್ಳುವ ಶಕ್ತಿರೂಪ ಕರಣತ್ವವನ್ನು ಅಂಗೀಕರಿಸುತ್ತ, ೩) ಹೊಂದತಕ್ಕಂಥ ಕರ್ಮತ್ವ ಪರಿಣಾಮರೂಪದಿಂದ ಕರ್ಮತನದ ಅನುಭವ ಮಾಡುತ್ತ, ೪) ಮೊದಲಿನ ಭಾವದ ನಾಶವಾಗಿ ಹೋದಮೇಲೂ ಧ್ರುವತ್ವವನ್ನು ಅವಲಂಬನ ಮಾಡುವುದರಿಂದ ಅದು ಅಪಾದಾನತನಕ್ಕೆ ಪ್ರಾಪ್ತವಾಗುತ್ತ, ೫) ಉತ್ಪನ್ನವಾಗುವಂಥ ಪರಿಣಾಮಕರ್ಮರೂಪದಿಂದ ಸಮಾಶ್ರಿತವಿರುವುದರಿಂದ (ಎಂದರೆ ಉತ್ಪನ್ನವಾಗುವಂಥ ಪರಿಣಾಮರೂಪಕಾರ್ಯವು ತನ್ನನ್ನು ಅರ್ಪಿಸುವುದರಿಂದ) ಸಂಪ್ರದಾನತನಕ್ಕೆ ಪ್ರಾಪ್ತವಾಗುತ್ತ ಮತ್ತು ೬) ಧಾರಣ ಮಾಡಿದ ಪರಿಣಾಮದ ಆಧಾರವಾಗಿರುವುದರಿಂದ ಅದು ಅಧಿಕರಣತನವನ್ನು ಗ್ರಹಣ ಮಾಡುತ್ತ - ಷಟ್‌ಕಾರಕರೂಪದಿಂದ ತಾನಾಗಿಯೇ ವರ್ತಿಸುತ್ತ ಇತರ ಕಾರಕದ ಅಪೇಕ್ಷೆ ಪಡುವುದಿಲ್ಲ.

ಕರ್ಮವು ತನ್ನ ಸ್ವಭಾವದಿಂದ ತನ್ನನೆ ಮಾಡುವುದು ಮತ್ತದರಂತೆ ।
ಕರ್ಮಸ್ವಭಾವಭಾವದಿಂದ ಜೀವವು ಸರಿಯಾಗಿ ತನ್ನನೇ ಮಾಡುವುದು ॥೬೨॥

ಕರ್ಮ ಖಲು ಕರ್ಮತ್ವಪ್ರವರ್ತಮಾನಪುದ್ಗಲಸ್ಕಂಧರೂಪೇಣ ಕರ್ತೃತಾಮನುಬಿಭ್ರಾಣಂ, ಕರ್ಮತ್ವಗಮನ-ಶಕ್ತಿರೂಪೇಣ ಕರಣತಾಮಾತ್ಮಸಾತ್ಕುರ್ವತ್, ಪ್ರಾಪ್ಯಕರ್ಮತ್ವಪರಿಣಾಮರೂಪೇಣ ಕರ್ಮತಾಂ ಕಲಯತ್, ಪೂರ್ವಭಾವವ್ಯಪಾಯೇಽಪಿ ಧ್ರುವತ್ವಾಲಂಬನಾದುಪಾತ್ತಾಪಾದಾನತ್ವಮ್, ಉಪಜಾಯಮಾನಪರಿಣಾಮರೂಪ-ಕರ್ಮಣಾಶ್ರೀಯಮಾಣತ್ವಾದುಪೋಢಸಂಪ್ರದಾನತ್ವಮ್, ಆಧೀಯಮಾನಪರಿಣಾಮಾಧಾರತ್ವಾದ್ಗೃಹೀತಾಧಿ-ಕರಣತ್ವಂ, ಸ್ವಯಮೇವ ಷಟ್‌ಕಾರಕೀರೂಪೇಣ ವ್ಯವತಿಷ್ಠಮಾನಂ ನ ಕಾರಕಾಂತರಮಪೇಕ್ಷತೇ। ಏವಂ ಜೀವೋಽಪಿ ಭಾವಪರ್ಯಾಯೇಣ ಪ್ರವರ್ತಮಾನಾತ್ಮದ್ರವ್ಯರೂಪೇಣ ಕರ್ತೃತಾಮನುಬಿಭ್ರಾಣೋ, ಭಾವಪರ್ಯಾಯಗಮನ-ಶಕ್ತಿರೂಪೇಣ ಕರಣತಾಮಾತ್ಮಸಾತ್ಕುರ್ವನ್, ಪ್ರಾಪ್ಯಭಾವಪರ್ಯಾಯರೂಪೇಣ ಕರ್ಮತಾಂ ಕಲಯನ್, ಪೂರ್ವಭಾವಪರ್ಯಾಯವ್ಯಪಾಯೇಽಪಿ ಧ್ರುವತ್ವಾಲಂಬನಾದುಪಾತ್ತಾಪಾದಾನತ್ವಃ, ಉಪಜಾಯಮಾನಭಾವ-ಪರ್ಯಾಯರೂಪಕರ್ಮಣಾಶ್ರೀಯಮಾಣತ್ವಾದುಪೋಢಸಂಪ್ರದಾನತ್ವಃ, ಆಧೀಯಮಾನಭಾವಪರ್ಯಾಯಾ-ಧಾರತ್ವಾದ್ಗೃಹೀತಾಧಿಕರಣತ್ವಃ, ಸ್ವಯಮೇವ ಷಟ್‌ಕಾರಕೀರೂಪೇಣ ವ್ಯವತಿಷ್ಠಮಾನೋ ನ ಕಾರಕಾಂತರಮ-ಪೇಕ್ಷತೇ। ಅತಃ ಕರ್ಮಣಃ ಕರ್ತುರ್ನಾಸ್ತಿ ಜೀವಃ ಕರ್ತಾ, ಜೀವಸ್ಯ ಕರ್ತುರ್ನಾಸ್ತಿ ಕರ್ಮ ಕರ್ತೃ ನಿಶ್ಚಯೇನೇತಿ।

ಈ ಪ್ರಕಾರ ಜೀವವೂ ೧) ಭಾವಪರ್ಯಾಯರೂಪದಿಂದ ಪ್ರವರ್ತಿಸಿ ಆತ್ಮದ್ರವ್ಯರೂಪದಿಂದ ಕರ್ತೃತ್ವವನ್ನು ಧಾರಣ ಮಾಡುತ್ತ, ೨) ಭಾವಪರ್ಯಾಯವನ್ನು ಪಡೆದುಕೊಳ್ಳುವ ಶಕ್ತಿರೂಪದಿಂದ ಕರಣತ್ವವನ್ನು ಅಂಗೀಕರಿಸುತ್ತ, ೩) ಹೊಂದತಕ್ಕಂಥ ಭಾವಪರ್ಯಾಯರೂಪದಿಂದ ಕರ್ಮತನದ ಅನುಭವ ಮಾಡುತ್ತ, ೪) ಮೊದಲಿನ ಭಾವಪರ್ಯಾಯದ ನಾಶವಾದ ಮೇಲೂ ಧ್ರುವತ್ವದ ಅವಲಂಬನ ಮಾಡುವುದರಿಂದ ಅದು ಅಪಾದಾನಕ್ಕೆ ಪ್ರಾಪ್ತವಾಗುತ್ತ, ೫) ಉತ್ಪನ್ನವಾಗುವಂಥ ಭಾವಪರ್ಯಾಯರೂಪ ಕರ್ಮದ ಮುಖಾಂತರ ಸಮಾಶ್ರಿತವಿರುವುದರಿಂದ (ಎಂದರೆ ಉತ್ಪನ್ನವಾಗುವಂಥ ಭಾವಪರ್ಯಾಯರೂಪ ಕಾರ್ಯವು ತನ್ನನ್ನು ಅರ್ಪಿಸಿರುವುದರಿಂದ) ಸಂಪ್ರದಾನತನಕ್ಕೆ ಪ್ರಾಪ್ತವಾಗುತ್ತ ಮತ್ತು ೬) ಧಾರಣ ಮಾಡಿದ ಭಾವಕರ್ಮದ ಆಧಾರವಿರುವುದರಿಂದ ಅದು ಅಧಿಕರಣತನವನ್ನು ಗ್ರಹಣ ಮಾಡುತ್ತ - ಷಟ್‌ಕಾರಕರೂಪದಿಂದ ತಾನಾಗಿಯೇ ವರ್ತಿಸುತ್ತ ಇತರ ಕಾರಕದ ಅಪೇಕ್ಷೆ ಪಡುವುದಿಲ್ಲ.

ಅದಕ್ಕಾಗಿ ನಿಶ್ಚಯದಿಂದ ಕರ್ಮರೂಪವಾದ ಕರ್ತೃವಿಗೆ ಜೀವವು ಕರ್ತೃವಾಗಿಲ್ಲ ಮತ್ತು ಜೀವರೂಪವಾದ ಕರ್ತೃವಿಗೆ ಕರ್ಮವು ಕರ್ತೃವಾಗಿಲ್ಲ. (ಎಲ್ಲಿ ಕರ್ಮವು ಕರ್ತೃವಿದೆ ಅಲ್ಲಿ ಜೀವವು ಕರ್ತೃವಿಲ್ಲ ಮತ್ತು ಎಲ್ಲಿ ಜೀವವು ಕರ್ತೃವಿದೆ ಅಲ್ಲಿ ಕರ್ಮವು ಕರ್ತೃವಿಲ್ಲ.)

ಭಾವಾರ್ಥಃ- ೧) ಪುದ್ಗಲವು ಸ್ವತಂತ್ರರೂಪದಿಂದ ದ್ರವ್ಯಕರ್ಮವನ್ನು ಮಾಡುತ್ತಿರುವುದರಿಂದ ಪುದ್ಗಲವು ತಾನೇ ಕರ್ತೃವಿದೆ; ೨) ಪುದ್ಗಲವು ತಾನೇ ದ್ರವ್ಯಕರ್ಮರೂಪವಾಗಿ ಪರಿಣಮಿಸುವ ಶಕ್ತಿಯುಳ್ಳದ್ದಾಗಿರುವುದರಿಂದ ಅದು ತಾನೇ ಕರಣವಿದೆ ; ೩) ದ್ರವ್ಯಕರ್ಮವು ದ್ರವ್ಯಕರ್ಮಕ್ಕೆ ಪ್ರಾಪ್ತವಾಗುತ್ತಿರುವುದರಿಂದ- ತಲುಪುತ್ತಿರುವುದರಿಂದ ಅದು ಕರ್ಮವಿದೆ. ಅಥವಾ ಪುದ್ಗಲವು ತಾನು ದ್ರವ್ಯಕರ್ಮದಿಂದ ಅಭಿನ್ನವಿರುವುದರಿಂದ ಅದು ತಾನೇ ಕರ್ಮ(ಕಾರ್ಯ)ವಿದೆ; ೪) ತನ್ನೊಳಗಿಂದಮೊದಲಿನ ಪರಿಣಾಮದ ವ್ಯಯ ಮಾಡಿ ದ್ರವ್ಯ ಕರ್ಮರೂಪಪರಿಣಾಮ ಮಾಡುತ್ತಿರುವುದರಿಂದ ಹಾಗೂಪುದ್ಗಲದ್ರವ್ಯರೂಪವು ಧ್ರುವವಿರುವುದರಿಂದ ಪುದ್ಗಲವು ತಾನೇ ಅಪಾದಾನವಿದೆ ; ೫) ತನಗೆ ದ್ರವ್ಯಕರ್ಮರೂಪ ಪರಿಣಾಮ ಕೊಡುತ್ತಿರುವುದರಿಂದ ಪುದ್ಗಲವು ತಾನೇ ಸಂಪ್ರದಾನವಿದೆ ; ೬) ತನ್ನಲ್ಲಿ ಎಂದರೆ ತನ್ನ ಆಧಾರದಿಂದ ದ್ರವ್ಯಕರ್ಮವನ್ನು ಮಾಡುತ್ತಿರುವುದರಿಂದ ಪುದ್ಗಲವು ತಾನೇ ಅಧಿಕರಣವಿದೆ.

ಕಮ್ಮಂ ಕಮ್ಮಂ ಕುವ್ವದಿ ಜದಿ ಸೋ ಅಪ್ಪಾ ಕರೇದಿ ಅಪ್ಪಾಣಂ ।
ಕಿಧ ತಸ್ಸ ಫಲಂ ಭುಂಜದಿ ಅಪ್ಪಾ ಕಮ್ಮಂ ಚ ದೇದಿ ಫಲಂ ॥೬೩॥

ಕರ್ಮ ಕರ್ಮ ಕರೋತಿ ಯದಿ ಸ ಆತ್ಮಾ ಕರೋತ್ಯಾತ್ಮಾನಮ್ ।
ಕಥಂ ತಸ್ಯ ಫಲಂ ಭುಂಕ್ತೇ ಆತ್ಮಾ ಕರ್ಮ ಚ ದದಾತಿ ಫಲಮ್ ॥೬೩॥

ಕರ್ಮ ಜೀವಯೋರನ್ಯೋನ್ಯಾಕರ್ತೃತ್ವೇऽನ್ಯದತ್ತಫಲಾನ್ಯೋಪಭೋಗಲಕ್ಷಣದೂಷಣಪುರಸ್ಸರಃ ಪೂರ್ವಪಕ್ಷೋऽಯಮ್ ।

ಅದರಂತೆ ೧) ಜೀವವು ಸ್ವತಂತ್ರರೂಪದಿಂದ ಜೀವಭಾವವನ್ನು ಮಾಡುತ್ತಿರುವುದರಿಂದ ಅದು ತಾನೇ ಕರ್ತೃವಿದೆ; ೨) ಜೀವವು ತಾನು ಜೀವಭಾವರೂಪದಿಂದ ಪರಿಣಮಿಸುವ ಶಕ್ತಿಯುಳ್ಳದ್ದಾಗಿರುವುದರಿಂದ ಅದು ತಾನೇ ಕರಣವಿದೆ ; ೩) ಜೀವಭಾವವು ಜೀವಭಾವಕ್ಕೆ ಪ್ರಾಪ್ತವಾಗುತ್ತಿರುವುದರಿಂದ - ತಲುಪುತ್ತಿರುವುದರಿಂದ ಅದು ಕರ್ಮವಿದೆ, ಅಥವಾ ಜೀವವು ತಾನು ಜೀವಭಾವದಿಂದ ಅಭಿನ್ನವಿರುವುದರಿಂದ ಅದು ತಾನೇ ಕರ್ಮವಿದೆ ; ೪) ತನ್ನೊಳಗಿಂದ ಮೊದಲಿನ ಭಾವದ ವ್ಯಯಮಾಡಿ (ಹೊಸ) ಜೀವಭಾವ ಮಾಡುತ್ತಿರುವುದರಿಂದ ಮತ್ತು ಜೀವದ್ರವ್ಯರೂಪದಿಂದ ಧ್ರುವವಿರುವುದರಿಂದ ಜೀವವು ತಾನೇ ಅಪಾದಾನವಿದೆ ; ೫) ತನಗೆ ಜೀವ ಭಾವವನ್ನು ಕೊಡುತ್ತಿರುವುದರಿಂದ ಜೀವವು ತಾನೇ ಸಂಪ್ರದಾನವಿದೆ ; ೬) ತನ್ನಲ್ಲಿ ಎಂದರೆ ತನ್ನ ಆಧಾರದಿಂದ ಜೀವಭಾವವನ್ನು ಮಾಡುತ್ತಿರುವುದರಿಂದ ಜೀವವು ತಾನೇ ಅಧಿಕರಣವಿದೆ.

ಹೀಗೆ ಪುದ್ಗಲದ ಕರ್ಮೋದಯಾದಿರೂಪದಿಂದ ಅಥವಾ ಕರ್ಮಬಂಧನಾದಿರೂಪದಿಂದ ಪರಿಣಮನವಾಗುವ ಕ್ರಿಯೆಯಲ್ಲಿ ನಿಜವಾಗಿ ಪುದ್ಗಲವೇ ತಾನಾಗಿ ಆರು ಕಾರಕಗಳ ರೂಪದಿಂದ ವರ್ತಿಸುತ್ತಿರುವುದರಿಂದ ಅದಕ್ಕೆ ಇತರಕಾರಕಗಳ ಅಪೇಕ್ಷೆಯಿಲ್ಲ ಅದರಂತೆ ಜೀವದ ಔದಯಿಕಾದಿ ಭಾವರೂಪದಿಂದ ಪರಿಣಮನವಾಗುವ ಕ್ರಿಯೆಯಲ್ಲಿ ನಿಜವಾಗಿ ಜೀವವು ತಾನೇ ಆರುಕಾರಕಗಳರೂಪದಿಂದ ವರ್ತಿಸುತ್ತಿರುವುದರಿಂದ ಅದಕ್ಕೆ ಇತರಕಾರಕಗಳ ಅಪೇಕ್ಷೆಯಿಲ್ಲ. ಮೇಲೆ ಹೇಳಿದ ಪುದ್ಗಲದ ಮತ್ತು ಜೀವದ ಕ್ರಿಯೆಗಳು ಒಂದೇ ಕಾಲಕ್ಕೆ ವರ್ತಿಸುತ್ತಿದ್ದರೂ ಪೌದ್ಗಲಿಕ ಕ್ರಿಯೆಯಲ್ಲಿ ವರ್ತಿಸುತ್ತಿರುವ ಪುದ್ಗಲದ ಆರು ಕಾರಕಗಳು ಜೀವಕಾರಕಗಳಿಂದ ತೀರ ಭಿನ್ನ ಮತ್ತು ನಿರಪೇಕ್ಷವಿವೆ ಅದರಂತೆ ಜೀವಸ್ವಭಾವರೂಪಕ್ರಿಯೆಯಲ್ಲಿ ವರ್ತಿಸುತ್ತಿರುವ ಜೀವದ ಆರು ಕಾರಕಗಳು ಪುದ್ಗಲ ಕಾರಕಗಳಿಂದ ತೀರ ಭಿನ್ನ ಮತ್ತು ನಿರಪೇಕ್ಷವಿವೆ. ನಿಜವಾಗಿ ಯಾವುದೇ ದ್ರವ್ಯದ ಕಾರಕಗಳಿಗೆ ಬೇರೆ ಯಾವುದೇ ದ್ರವ್ಯದ ಕಾರಕಗಳ ಅಪೇಕ್ಷೆಯಿರುವುದಿಲ್ಲ.

ಗಾಥೆ - ೬೩

ಗಾಥಾರ್ಥ :- [ಜದಿ] ಒಂದು ವೇಳೆ [ಕಮ್ಮಂ] ಕರ್ಮವು [ಕಮ್ಮಂ ಕುವ್ವದಿ] ಕರ್ಮವನ್ನು ಮಾಡಿದರೆ ಮತ್ತು [ಸೋ ಅಪ್ಪಾ] ಆ ಆತ್ಮನು [ಅಪ್ಪಾಣಂ ಕರೇದಿ] ಆತ್ಮನನ್ನು ಮಾಡಿದರೆ [ಕಮ್ಮಂ] ಕರ್ಮವು

ಕರ್ಮ ಕರ್ಮವನೆ ಮಾಡಿದರೆ ಮತ್ತದರಂತೆ ಆತ್ಮ ಆತ್ಮನನೆ ಮಾಡಿದರೆ ।
ಕರ್ಮ ಆತ್ಮನಿಗೆ ಫಲ ಹೇಗೆ ಕೊಡುವುದು ? ಅದನಾತ್ಮ ಹೇಗೆ ಭೋಗಿಸುವನು ? ॥೬೩॥

ಅಥ ಸಿದ್ಧಾಂತ ಸೂತ್ರಾಣಿ -

ಓಗಾಢಗಾಢಣಿಚಿದೋ ಪೋಗ್ಗಲಕಾಏಹಿಂ ಸವ್ವದೋ ಲೋಗೋ ।
ಸುಹಮೇಹಿಂ ಬಾದರೇಹಿಂ ಯ ಣಂತಾಣಂತೇಹಿಂ ವಿವಿಧೇಹಿಂ ॥೬೪॥[೧]

ಅವಗಾಢನಿಚಿತಃ ಪುದ್ಗಲಕಾಯೈಃ ಸರ್ವತೋ ಲೋಕಃ ।
ಸೂಕ್ಷ್ಮೈರ್ಬಾದರೈಶ್ಚಾನಂತಾನಂತೈರ್ವಿವಿಧೈಃ ॥೬೪॥

[ಫಲಂ ಕಿಧ ದೇದಿ] ಆತ್ಮನಿಗೆ ಫಲವನ್ನೇಕೆ ಕೊಡುವುದು ? [ಚ] ಮತ್ತು [ಅಪ್ಪಾ] ಆತ್ಮನು [ತಸ್ಸ ಫಲಂ ಭುಂಜದಿ] ಅದರ ಫಲವನ್ನೇಕೆ ಭೋಗಿಸುವನು ?

ಟೀಕೆ :- ಒಂದು ವೇಳೆ ಕರ್ಮ ಮತ್ತು ಜೀವಕ್ಕೆ ಅನ್ಯೋನ್ಯ ಅಕರ್ತೃತ್ವತೆಯಿದ್ದರೆ 'ಒಬ್ಬನು ಕೊಡಲಾದ ಫಲವನ್ನು ಇನ್ನೊಬ್ಬನು ಭೋಗಿಸುವುದು' - ಎನ್ನುವಂಥ ಪ್ರಸಂಗವು ಬರಬಹುದು - ಎಂಬ ದೋಷವನ್ನು ಎತ್ತಿ ತೋರಿಸಿ, ಇಲ್ಲಿ ಪೂರ್ವಪಕ್ಷವನ್ನು ಉಪಸ್ಥಿತಮಾಡಲಾಗಿದೆ.

ಭಾವಾರ್ಥ :- (ಪೌದ್ಗಲಿಕ) ಕರ್ಮಗಳು ಜೀವಕ್ಕೆ ಫಲ ಕೊಡುತ್ತವೆ ಮತ್ತು ಜೀವವು (ಪೌದ್ಗಲಿಕ) ಕರ್ಮಗಳ ಫಲವನ್ನು ಭೋಗಿಸುತ್ತದೆಯೆಂದು ಶಾಸ್ತ್ರಗಳಲ್ಲಿ ಹೇಳಿದೆ, ಈಗ ಒಂದು ವೇಳೆ ಜೀವವು ಕರ್ಮವನ್ನು ಮಾಡುವುದೇ ಇಲ್ಲವೆಂದರೆ ಜೀವದಿಂದ ಮಾಡಲಾಗದ ಕರ್ಮವು ಜೀವಕ್ಕೆ ಹೇಗೆ ಫಲ ಕೊಡುವುದು ? ಮತ್ತು ಜೀವವು ತನ್ನಿಂದ ಮಾಡಲಾಗದ ಕರ್ಮದ ಫಲವನ್ನು ಹೇಗೆ ಭೋಗಿಸುವುದು ? ಜೀವದಿಂದ ಮಾಡಲಾಗದ ಕರ್ಮವು ಜೀವಕ್ಕೆ ಫಲ ಕೊಡುವುದು ಮತ್ತು ಜೀವವು ಆ ಫಲವನ್ನು ಭೋಗಿಸುವುದು ಇದು ಯಾವುದೇ ಪ್ರಕಾರದಿಂದ ನ್ಯಾಯಯುಕ್ತವಾಗಿಲ್ಲ. ಹೀಗೆ 'ಕರ್ಮವು ಕರ್ಮವನ್ನೇ ಮಾಡುತ್ತದೆ ಮತ್ತು ಆತ್ಮನು ಆತ್ಮವನ್ನೇ ಮಾಡುತ್ತದೆ'ಯೆಂಬ ಮಾತಿನಲ್ಲಿ ಪೂರ್ವೋಕ್ತ ದೋಷವು ಬರುವುದರಿಂದ ಈ ಮಾತು ಸಂಭವಿಸುವುದಿಲ್ಲ - ಈ ಪ್ರಕಾರವಾಗಿ ಇಲ್ಲಿ ಪೂರ್ವಪಕ್ಷವನ್ನು ಉಪಸ್ಥಿತ ಮಾಡಲಾಗಿದೆ.

ಈಗ ಸಿದ್ಧಾಂತದ ಸೂತ್ರಗಳಿವೆ. (ಎಂದರೆ ಈಗ ೬೩ನೆಯ ಗಾಥೆಯಲ್ಲಿ ಹೇಳಲ್ಪಟ್ಟ ಪೂರ್ವಪಕ್ಷದ ನಿರಾಕರಣೆಯೊಡನೆ ಸಿದ್ಧಾಂತದ ಪ್ರತಿಪಾದನೆ ಮಾಡುವಂಥ ಗಾಥೆಗಳನ್ನು ಹೇಳಲಾಗುತ್ತದೆ.)

ಗಾಥೆ - ೬೪

ಗಾಥಾರ್ಥ :- [ಲೋಗೋ] ಜಗತ್ತು [ಸವ್ವದೋ] ಎಲ್ಲೆಡೆಗೆ [ವಿವಿಧೇಹಿಂ] ವಿವಿಧ ಪ್ರಕಾರದ [ಣಂತಾಣಂತೇಹಿಂ] ಅನಂತಾನಂತ [ಸುಹಮೇಹಿಂ ಬಾದರೇಹಿಂ ಯ] ಸೂಕ್ಷ್ಮ ಹಾಗೂ ಬಾದರ [ಪೋಗ್ಗಲಕಾಏಹಿಂ] ಪುದ್ಗಲಕಾಯಗಳಿಂದ (ಪುದ್ಗಲಸ್ಕಂಧಗಳಿಂದ) [ಓಗಾಢಗಾಢಣಿಚಿದೋ] (ವಿಶಿಷ್ಟ ರೀತಿಯಿಂದ) ಅವಗಾಹಿತವಾಗಿ ಪರಿಪೂರ್ಣ ತುಂಬಿದೆ.

ಅವಗಾಢಗಾಢತರದಿಂದ ಲೋಕವೆಲ್ಲೆಡೆ ತುಂಬಿದೆ ಪುದ್ಗಲಕಾಯದಿಂದ ।
ವಿವಿಧಪ್ರಕಾರದ ಅನಂತಾನಂತ ಸೂಕ್ಷ್ಮ ಮತ್ತದರಂತೆ ಬಾದರಗಳಿಂದ ॥೬೪॥

---

೧. ಪ್ರವಚನಸಾರದಲ್ಲಿನ ೧೬೮ ನೆಯ ಗಾಥೆಯು ಈ ಗಾಥೆಯೊಡನೆ ಹೊಂದುತ್ತದೆ.

ಕರ್ಮಯೋಗ್ಯಪುದ್ಗಲಾ ಅಂಜನಚೂರ್ಣಪೂರ್ಣಸಮುದ್ಗಕನ್ಯಾಯೇನ ಸರ್ವಲೋಕವ್ಯಾಪಿತ್ವಾದ್ಯತ್ರಾತ್ಮಾ ತತ್ರಾನಾನೀತಾ ಏವಾವತಿಷ್ಠಂತ ಇತ್ಯತ್ರೌಕ್ತಮ್ ।

ಅತ್ತಾ ಕುಣದಿ ಸಭಾವಂ ತತ್ಥ ಗದಾ ಪೋಗ್ಗಲಾ ಸಭಾವೇಹಿಂ ।
ಗಚ್ಛಂತಿ ಕಮ್ಮಭಾವಂ ಅಣ್ಣಣ್ಣೋಗಾಹಮವಗಾಢಾ ॥೬೫॥

ಆತ್ಮಾ ಕರೋತಿ ಸ್ವಭಾವಂ ತತ್ರ ಗತಾಃ ಪುದ್ಗಲಾಃ ಸ್ವಭಾವೈಃ ।
ಗಚ್ಛಂತಿ ಕರ್ಮಭಾವಮನ್ಯೋನ್ಯಾವಗಾಹಾವಗಾಢಾಃ ॥೬೫॥

ಅನ್ಯಾಕೃತಕರ್ಮಸಂಭೂತಿಪ್ರಕಾರೋಕ್ತಿರಿಯಮ್ ।

ಆತ್ಮಾ ಹಿ ಸಂಸಾರಾವಸ್ಥಾಯಾಂ ಪಾರಿಣಾಮಿಕಚೈತನ್ಯಸ್ವಭಾವಮಪರಿತ್ಯಜನ್ನೇವಾನಾದಿಬಂಧನಬದ್ಧತ್ವಾದನಾದಿಮೋಹರಾಗದ್ವೇಷಸ್ನಿಗ್ಧೈರವಿಶುದ್ಧೈರೇವ ಭಾವೈರ್ವಿವರ್ತತೇ । ಸ ಖಲು ಯತ್ರ ಯದಾ ಮೋಹರೂಪಂ ದ್ವೇಷರೂಪಂ ರಾಗರೂಪಂ ವಾ ಸ್ವಸ್ಯ ಭಾವಮಾರಭತೇ, ತತ್ರ ತದಾ ತಮೇವ ನಿಮಿತ್ತೀಕೃತ್ಯ ಜೀವಪ್ರದೇಶೇಷು ಪರಸ್ಪರಾವಗಾಹೇನಾನುಪ್ರವಿಷ್ಟಾಃ ಸ್ವಭಾವೈರೇವ ಪುದ್ಗಲಾಃ ಕರ್ಮಭಾವ-ಮಾಪದ್ಯಂತ ಇತಿ ।

ಟೀಕೆ :- ಕರ್ಮಯೋಗ್ಯವಾದ ಪುದ್ಗಲಗಳು (ಕಾರ್ಮಾಣವರ್ಗಣರೂಪ ಪುದ್ಗಲಸ್ಕಂಧಗಳು) ಅಂಜನ ಚೂರ್ಣದಿಂದ (ಅಂಜನದ ಸೂಕ್ಷ್ಮ ಚೂರ್ಣದಿಂದ) ತುಂಬಿಹೋದ ಡಬ್ಬದ ಹಾಗೆ ಸಂಪೂರ್ಣ ಲೋಕದಲ್ಲಿ ವ್ಯಾಪ್ತವಾಗಿವೆ ; ಆದುದರಿಂದ ಎಲ್ಲಿ ಆತ್ಮವಿದೆ ಅಲ್ಲಿ ತಾರದೆಯೇ (ಎಲ್ಲಿಂದಾದರೂ ತಂದುಕೊಳ್ಳದೆಯೇ) ಅವು ಉಪಸ್ಥಿತವಿವೆಯೆಂದು ಇಲ್ಲಿ ಹೇಳಿದೆ.

ಗಾಥೆ - ೬೫

ಗಾಥಾರ್ಥ :- [ಅತ್ತಾ] ಆತ್ಮನು [ಸಭಾವಂ] (ಮೋಹರಾಗದ್ವೇಷರೂಪವಾದ) ತನ್ನ ಭಾವಗಳನ್ನು [ಕುಣದಿ] ಮಾಡುತ್ತಾನೆ ; [ತತ್ಥ ಗದಾ ಪೋಗ್ಗಲಾ] (ಆಗ) ಅಲ್ಲಿ ಇರುವಂಥ ಪುದ್ಗಲಗಳು [ಸಭಾವೇಹಿಂ] ತಮ್ಮ ಭಾವಗಳಿಂದ [ಅಣ್ಣಣ್ಣೋಗಾಹಮವಗಾಢಾ] ಜೀವದಲ್ಲಿ (ವಿಶಿಷ್ಟ ಪ್ರಕಾರದಿಂದ) ಅನ್ಯೋನ್ಯ ಅವಗಾಹರೂಪದಿಂದ ಪ್ರವಿಷ್ಟವಾಗಿ]ಕಮ್ಮಭಾವಂ ಗಚ್ಛಂತಿ] ಕರ್ಮಭಾವಕ್ಕೆ ಪ್ರಾಪ್ತವಾಗುತ್ತವೆ.

ಟೀಕೆ :- ಅನ್ಯದ ಮುಖಾಂತರ ಮಾಡಲಾಗದೆಯೇ ಕರ್ಮದ ಉತ್ಪತ್ತಿಯು ಹೇಗಾಗುತ್ತದೆಂಬುದರ ಕಥನವು ಈ ಗಾಥೆಯಲ್ಲಿದೆ.

ವಾಸ್ತವಿಕವಾಗಿ ಆತ್ಮನು ಸಂಸಾರಾವಸ್ಥೆಯಲ್ಲಿ ಪಾರಿಣಾಮಿಕ ಚೈತನ್ಯಸ್ವಭಾವವನ್ನು ಬಿಟ್ಟುಕೊಡದೆಯೇ ಅನಾದಿ ಬಂಧನದಿಂದ ಬದ್ಧನಾಗಿರುವುದರಿಂದ ಅನಾದಿಯಾದ ಮೋಹರಾಗದ್ವೇಷಗಳ ಮುಖಾಂತರ

ಆತ್ಮ ತನ್ನ ಭಾವ ಮಾಡುವಾಗಲ್ಲಿರುವ ಪುದ್ಗಲಗಳು ತಮ್ಮ ಭಾವಗಳಿಂದ ।
ಆತ್ಮನಲಿ ಅನ್ಯೋನ್ಯ-ಅವಗಾಹದಿಂದೊಳಪೊಕ್ಕು ಕರ್ಮಭಾವವ ಪಡೆವವು ॥೬೫॥

ಜಹ ಪೋಗ್ಗಲದವ್ವಾಣಂ ಬಹುಪ್ಪಯಾರೇಹಿಂ ಖಂಧಣಿವ್ವತ್ತೀ ।
ಅಕದಾ ಪರೇಹಿಂ ದಿಟ್ಠಾ ತಹ ಕಮ್ಮಾಣಂ ವಿಯಾಣಾಹಿ ॥೬೬॥

ಯಥಾ ಪುದ್ಗಲದ್ರವ್ಯಾಣಾಂ ಬಹುಪ್ರಕಾರೈಃ ಸ್ಕಂಧನಿರ್ವೃತ್ತಿಃ ।
ಅಕೃತಾ ಪರೈರ್ದೃಷ್ಟಾ ತಥಾ ಕರ್ಮಣಾಂ ವಿಜಾನೀಹಿ ॥೬೬॥

ಅನನ್ಯಕೃತತ್ವಂ ಕರ್ಮಣಾಂ ವೈಚಿತ್ರ್ಯಸ್ಯಾತ್ರೋಕ್ತಮ್ ।

ಯಥಾ ಹಿ ಸ್ವಯೋಗ್ಯಚಂದ್ರಾರ್ಕಪ್ರಭೋಪಲಂಭೇ ಸಂಧ್ಯಾಭ್ರೇಂದ್ರಚಾಪಪರಿವೇಷಪ್ರಭೃತಿಭಿರ್ಬಹುಭಿಃ ಪ್ರಕಾರೈಃ ಪುದ್ಗಲಸ್ಕಂಧವಿಕಲ್ಪಾಃ ಕರ್ತೃಂತರನಿರಪೇಕ್ಷಾ ಏವೋತ್ಪದ್ಯಂತೇ, ತಥಾ ಸ್ವಯೋಗ್ಯಜೀವಪರಿಣಾಮೋಪಲಂಭೇ ಜ್ಞಾನಾವರಣಪ್ರಭೃತಿಭಿರ್ಬಹುಭಿಃ ಪ್ರಕಾರೈಃ ಕರ್ಮಾಣ್ಯಪಿ ಕರ್ತೃಂತರನಿರಪೇಕ್ಷಾಣ್ಯೇವೋತ್ಪದ್ಯಂತೇ ಇತಿ ।

ಸಿಗ್ಧ[೧]ದಂಥ ಅವಿಶುದ್ಧಭಾವಗಳ ರೂಪದಿಂದಲೇ ವಿವರ್ತನೆಗೆ ಪ್ರಾಪ್ತನಾಗುತ್ತಾನೆ - ಪರಿಣಮಿತನಾಗುತ್ತಾನೆ. ಅವನು (ಸಂಸಾರಸ್ಥ ಆತ್ಮನು) ವಾಸ್ತವಿಕವಾಗಿ ಎಲ್ಲಿ ಮತ್ತು ಯಾವಾಗ ಮೋಹರೂಪ, ರಾಗರೂಪ ಅಥವಾ ದ್ವೇಷರೂಪದಂಥ ತನ್ನ ಭಾವವನ್ನು ಮಾಡುತ್ತಾನೆ, ಅಲ್ಲಿ ಮತ್ತು ಆ ಸಮಯದಲ್ಲಿ ಅದೇ ಭಾವವನ್ನು ನಿಮಿತ್ತ ಮಾಡಿಕೊಂಡು ಪುದ್ಗಲಗಳು ತಮ್ಮ ಭಾವಗಳಿಂದಲೇ ಜೀವದ ಪ್ರದೇಶಗಳಲ್ಲಿ (ವಿಶಿಷ್ಟತೆಯೊಡನೆ) ಪರಸ್ಪರ ಅವಗಾಹರೂಪದಿಂದ ಪ್ರವಿಷ್ಟವಾಗಿ ಕರ್ಮಭಾವಕ್ಕೆ ಪ್ರಾಪ್ತವಾಗುತ್ತವೆ.

ಭಾವಾರ್ಥ ಃ- ಆತ್ಮನು ಯಾವ ಕ್ಷೇತ್ರದಲ್ಲಿ ಮತ್ತು ಯಾವ ಕಾಲದಲ್ಲಿ ಅಶುದ್ಧಭಾವರೂಪವಾಗಿ ಪರಿಣಮಿಸುತ್ತಾನೆ, ಆಗ ಅದೇ ಕ್ಷೇತ್ರದಲ್ಲಿರುವ ಕಾರ್ಮಾಣವರ್ಗಣಾರೂಪದ ಪುದ್ಗಲಸ್ಕಂಧಗಳು ಅದೇ ಕಾಲದಲ್ಲಿ ತಾವೇ ತಮ್ಮ ಭಾವಗಳಿಂದಲೇ ಜೀವದ ಪ್ರದೇಶಗಳಲ್ಲಿ ವಿಶೇಷ ಪ್ರಕಾರದಿಂದ ಪರಸ್ಪರ - ಅವಗಾಹರೂಪದಿಂದ ಪ್ರವಿಷ್ಟವಾಗಿ ಕರ್ಮತನಕ್ಕೆ ಪ್ರಾಪ್ತವಾಗುತ್ತವೆ.

ಹೀಗೆ ಪುದ್ಗಲಗಳು ಜೀವದಿಂದ ಮಾಡದೆಯೇ ತಾವೇ ಕರ್ಮರೂಪದಿಂದ ಪರಿಣಮಿಸುತ್ತವೆ.

ಗಾಥೆ - ೬೬

ಗಾಥಾರ್ಥ ಃ- [ಜಹ] ಯಾವ ಪ್ರಕಾರ [ಪೋಗ್ಗಲದವ್ವಾಣಂ] ಪುದ್ಗಲದ್ರವ್ಯಗಳ [ಬಹುಪ್ಪ-ಯಾರೇಹಿಂ] ಅನೇಕ ಪ್ರಕಾರದ [ಖಂಧಣಿವ್ವತ್ತೀ] ಸ್ಕಂಧರಚನೆಯು [ಪರೇಹಿಂ ಅಕದಾ] ಪರದಿಂದ

ಹೇಗೆ ಪುದ್ಗಲದ್ರವ್ಯಗಳ ಬಹುವಿಧಸ್ಕಂಧರಚನೆ ಪರಕೃತವಿಲ್ಲದೆ ।
ವಿಗೋಚರವಿದೆ ಹಾಗೆ ಕರ್ಮಗಳ ಬಹು ಪ್ರಕಾರತೆಯೆಂದು ತಿಳಿಯುವುದು ॥೬೬॥

---

೧. ಸ್ನಿಗ್ಧ - ಜಿಗುಟು ; ಜಿಗುಟುಳ್ಳದ್ದು. (ಮೋಹರಾಗದ್ವೇಷಗಳು ಕರ್ಮಬಂಧದಲ್ಲಿ ನಿಮಿತ್ತಭೂತವಾಗುವ ಕಾರಣ ಅವಕ್ಕೆ ಸ್ನಿಗ್ಧತೆಯ ಉಪಮೆಯನ್ನು ಕೊಡಲಾಗುತ್ತದೆ. ಆದುದರಿಂದ ಇಲ್ಲಿ ಅವಿಶುದ್ಧಭಾವಗಳಿಗೆ 'ಮೋಹರಾಗದ್ವೇಷಗಳ ಮುಖಾಂತರ ಸ್ನಿಗ್ಧ'ವೆಂದು ಹೇಳಿದೆ.)

ಜೀವಾ ಪೋಗ್ಗಲಕಾಯಾ ಅಣಣ್ಣೋಗಾಢಗಹಣಪಡಿಬದ್ಧಾ ।
ಕಾಲೇ ವಿಜುಜ್ಜಮಾಣಾ ಸುಹದುಕ್ಖಂ ದೇಂತಿ ಭುಂಜಂತಿ ॥೬೭॥

ಜೀವಾಃ ಪುದ್ಗಲಕಾಯಾಃ ಅನ್ಯೋನ್ಯಾವಗಾಢಗ್ರಹಣಪ್ರತಿಬದ್ಧಾಃ ।
ಕಾಲೇ ವಿಯುಜ್ಯಮಾನಾಃ ಸುಖದುಃಖಂ ದದತಿ ಭುಂಜಂತಿ ॥೬೭॥

ನಿಶ್ಚಯೇನ ಜೀವಕರ್ಮಣೋಶ್ಚೈಕಕರ್ತೃತ್ವೇऽಪಿ ವ್ಯವಹಾರೇಣ ಕರ್ಮದತ್ತಫಲೋಪಲಂಭೋ ಜೀವಸ್ಯ ನ ವಿರುಧ್ಯತ ಇತ್ಯೋತ್ರೋಕ್ತಮ್ ।

ಮಾಡಲಾಗದೆಯೇ [ದಿಟ್ಠಾ] ಆಗುತ್ತಿರುವುದು ಕಂಡು ಬರುತ್ತದೆ, [ತಹ] ಅದೇ ಪ್ರಕಾರ [ಕಮ್ಮಾಣಂ] ಕರ್ಮಗಳ ವಿಪುಲ ಪ್ರಕಾರತೆಯು [ವಿಯಾಣಾಹಿ] ಪರದಿಂದ ಅಕೃತವೆಂದು ತಿಳಿಯುವುದು.

ಟೀಕೆ :- ಕರ್ಮಗಳ ವಿಚಿತ್ರತೆಯು (ಹಲವು ಪ್ರಕಾರತೆಯು) ಇತರದ ಮುಖಾಂತರ ಮಾಡಲಾಗುವುದಿಲ್ಲವೆಂದು ಹೇಳಿದೆ.

ಯಾವ ಪ್ರಕಾರ ತಮಗೆ ಯೋಗ್ಯವಾದ ಚಂದ್ರ-ಸೂರ್ಯರ ಪ್ರಕಾಶದ ಉಪಲಬ್ಧಿಯಿರುವಾಗ ಸಂಧ್ಯಾ-ಮೋಡ-ಇಂದ್ರಧನುಷ್ಯ-ಪ್ರಭಾಮಂಡಲ ಇವೇ ಮೊದಲಾಗಿ ಅನೇಕ ಪ್ರಕಾರದಿಂದ ಪುದ್ಗಲ ಸ್ಕಂಧ ಭೇದಗಳು ಅನ್ಯ ಕರ್ತೃವಿನ ಅಪೇಕ್ಷೆಯಿಲ್ಲದೆಯೇ ಉತ್ಪನ್ನವಾಗುತ್ತವೆ, ಅದೇ ಪ್ರಕಾರ ತಮಗೆ ಯೋಗ್ಯವಾದ ಜೀವ-ಪರಿಣಾಮದ ಉಪಲಬ್ಧಿಯಿರುವಾಗ ಜ್ಞಾನಾವರಣ ಮೊದಲಾದ ಅನೇಕ ಪ್ರಕಾರದ ಕರ್ಮಗಳೂ ಇತರ ಕರ್ತೃವಿನ ಅಪೇಕ್ಷೆಯಿಲ್ಲದೆಯೇ ಉತ್ಪನ್ನವಾಗುತ್ತವೆ.

ಭಾವಾರ್ಥ :- ಕರ್ಮಗಳ ವಿವಿಧತರವಾದ ಪ್ರಕೃತಿ - ಪ್ರದೇಶ - ಸ್ಥಿತಿ - ಅನುಭಾಗರೂಪದ ವಿಚಿತ್ರತೆಗಳೂ ಜೀವಕೃತವಾದವುಗಳಲ್ಲ, ಪುದ್ಗಲಕೃತವೇ ಇವೆ.

ಗಾಥೆ - ೬೭

ಗಾಥಾರ್ಥ :- [ಜೀವಾ ಪೋಗ್ಗಲಕಾಯಾ] ಜೀವ ಮತ್ತು ಪುದ್ಗಲಕಾಯಗಳು [ಅಣ್ಣಣ್ಣೋಗಾಢ - ಗಹಣಪಡಿಬದ್ಧಾ] (ವಿಶಿಷ್ಟ ಪ್ರಕಾರದಿಂದ) ಅನ್ಯೋನ್ಯ-ಅವಗಾಹದ ಗ್ರಹಣದಿಂದ (ಪರಸ್ಪರ) ಬದ್ಧವಾಗಿವೆ ; [ಕಾಲೇ ವಿಜುಜ್ಜಮಾಣಾ] ಕಾಲದಿಂದ ಬೇರೆಯಾದ ಮೇಲೆ [ಸುಹದುಕ್ಖಂ ದೇಂತಿ ಭುಂಜಂತಿ] ಸುಖದುಃಖ ಕೊಡುತ್ತವೆ ಮತ್ತು ಭೋಗಿಸುತ್ತವೆ. (ಎಂದರೆ ಪುದ್ಗಲಕಾಯಗಳು ಸುಖದುಃಖ ಕೊಡುತ್ತವೆ ಮತ್ತು ಜೀವಗಳು ಭೋಗಿಸುತ್ತವೆ.)

ಟೀಕೆ :- ನಿಶ್ಚಯದಿಂದ ಜೀವ ಮತ್ತು ಕರ್ಮಕ್ಕೆ ಒಂದರದೇ (ತನ್ನ-ತನ್ನ ರೂಪದ್ದೇ) ಕರ್ತೃತ್ವವಿದ್ದರೂ ವ್ಯವಹಾರದಿಂದ ಜೀವಕ್ಕೆ ಕರ್ಮದ ಮುಖಾಂತರ ಕೊಡಲ್ಪಟ್ಟ ಫಲದ ಉಪಭೋಗವು ವಿರೋಧಕ್ಕೆ ಪ್ರಾಪ್ತವಾಗುವುದಿಲ್ಲ

ಜೀವಮೇಣ್ ಪುದ್ಗಲಕಾಯ ಅನ್ಯೋನ್ಯ - ಅವಗಾಢ ಗ್ರಹಣದಿಂದ ಬದ್ಧವಿವೆ ।
ಅವು ಕಾಲದಿಂಬೇರೆಯಾದಾಗ ಸುಖದುಃಖ ಕೊಡುವವು ಮತ್ತು ಭೋಗಿಸುವವು ॥೬೭॥

ಜೀವಾ ಹಿ ಮೋಹರಾಗದ್ವೇಷಸ್ನಿಗ್ಧತ್ವಾತ್ಪುದ್ಗಲಸ್ಕಂಧಾಶ್ಚ ಸ್ವಭಾವಸ್ನಿಗ್ಧತ್ವಾದ್ಬಂಧಾವಸ್ಥಾಯಾಂ ಪರಮಾಣು-ದ್ವಂದ್ವಾನೀವಾನ್ಯೋನ್ಯಾವಗಾಹಗ್ರಹಣಪ್ರತಿಬದ್ಧತ್ವೇನಾವತಿಷ್ಠಂತೇ । ಯದು ತು ತೇ ಪರಸ್ಪರಂ ವಿಯುಜ್ಯಂತೇ, ತದೋದಿತಪ್ರಚ್ಯವಮಾನಾ ನಿಶ್ಚಯೇನ ಸುಖದುಃಖರೂಪಾತ್ಮಪರಿಣಾಮಾನಾಂ ವ್ಯವಹಾರೇಣೇಷ್ಟಾನಿಷ್ಟ-ವಿಷಯಾಣಾಂ ನಿಮಿತ್ತಮಾತ್ರತ್ವಾತ್ಪುದ್ಗಲಕಾಯಾಃ ಸುಖದುಃಖರೂಪಂ ಫಲಂ ಪ್ರಯಚ್ಛಂತಿ ಜೀವಾಶ್ಚ ನಿಶ್ಚಯೇನ

(ಎಂದರೆ 'ಕರ್ಮವು ಜೀವಕ್ಕೆ ಫಲ ಕೊಡುತ್ತದೆ ಮತ್ತು ಜೀವವು ಅದನ್ನು ಭೋಗಿಸುತ್ತದೆ'ಎಂಬ ಮಾತೂ ವ್ಯವಹಾರದಿಂದ ಸಂಭವಿಸುತ್ತದೆ)- ಎಂದು ಇಲ್ಲಿ ಹೇಳಿದೆ.

ಜೀವವು ಮೋಹರಾಗದ್ವೇಷಗಳಿಂದ ಸ್ನಿಗ್ಧವಾಗುವ ಕಾರಣ ಮತ್ತು ಪುದ್ಗಲಸ್ಕಂಧಗಳು ಸ್ವಭಾವದಿಂದ ಸ್ನಿಗ್ಧವಿರುವ ಕಾರಣ (ಅವು ಬಂಧಾವಸ್ಥೆಯಲ್ಲಿ - ಪರಮಾಣುದ್ವಂದ್ವ[೧]ಗಳಂತೆ - (ವಿಶಿಷ್ಟ ಪ್ರಕಾರದಿಂದ) ಅನ್ಯೋನ್ಯ ಅವಗಾಹದ ಗ್ರಹಣದಿಂದ ಬದ್ಧರೂಪದಿಂದಿರುತ್ತವೆ. ಯಾವಾಗ ಅವು ಪರಸ್ಪರ ಬೇರೆಯಾಗುತ್ತವೆ ಆಗ (ಕೆಳಗೆ ಹೇಳಿದಪ್ರಕಾರ ಪುದ್ಗಲಸ್ಕಂಧಗಳು ಫಲಕೊಡುತ್ತವೆ ಮತ್ತು ಜೀವಗಳು ಅದನ್ನು ಭೋಗಿಸುತ್ತವೆ) ಉದಯ ಹೊಂದಿ ಉದುರಿಹೋಗುವಂಥ ಪುದ್ಗಲಕಾಯಗಳು ಸುಖದುಃಖರೂಪವಾದ ಆತ್ಮ ಪರಿಣಾಮಗಳಿಗೆ ನಿಮಿತ್ತಮಾತ್ರವಿರುವ ವ್ಯವಹಾರದಿಂದ [೨] ಸುಖದುಃಖರೂಪವಾದ ಫಲವನ್ನು ಕೊಡುತ್ತವೆ ; ಮತ್ತುಜೀವವು[೨] ನಿಮಿತ್ತಭೂತಮಾತ್ರವಾದ ದ್ರವ್ಯಕರ್ಮದಿಂದ ನಿಷ್ಪನ್ನವಾಗುವಂಥ ಸುಖದುಃಖರೂಪ ಆತ್ಮಪರಿಣಾಮಗಳ ಭೋಕ್ತೃವಾಗುವ ಅಪೇಕ್ಷೆಯಿಂದ ನಿಶ್ಚಯದಿಂದ, ಮತ್ತು (ನಿಮಿತ್ತಭೂತಮಾತ್ರವಾದ) ದ್ರವ್ಯಕರ್ಮದ ಉದಯದಿಂದ ಸಂಪಾದಿಸಲ್ಪಟ್ಟ ಇಷ್ಟಾನಿಷ್ಟ ವಿಷಯಗಳ ಭೋಕ್ತೃವಾಗುವ ಅಪೇಕ್ಷೆಯಿಂದ ವ್ಯವಹಾರದಿಂದ, ಆ ಪ್ರಕಾರದ (ಸುಖದುಃಖರೂಪ)ಫಲವನ್ನು ಭೋಗಿಸುತ್ತದೆ. (ಎಂದರೆ ನಿಶ್ಚಯದಿಂದ ಸುಖದುಃಖ ಪರಿಣಾಮರೂಪ ಮತ್ತು ವ್ಯವಹಾರದಿಂದ ಇಷ್ಟಾನಿಷ್ಟ ವಿಷಯರೂಪ ಫಲವನ್ನು ಭೋಗಿಸುತ್ತದೆ.)

---

೧. ಪರಮಾಣುದ್ವಂದ್ವ = ಎರಡು ಪರಮಾಣುಗಳ ಕೂಟ ; ಎರಡು ಪರಮಾಣುಗಳಿಂದಾದ ಸ್ಕಂಧ ; ದ್ವಿ-ಅಣುಕ ಸ್ಕಂಧ.

೨. ೧) ಸುಖದುಃಖ ಪರಿಣಾಮಗಳಲ್ಲಿ ಹಾಗೂ ೨) ಇಷ್ಟಾನಿಷ್ಟ ವಿಷಯಗಳ ಸಂಯೋಗದಲ್ಲಿ ಶುಭಾಶುಭಕರ್ಮಗಳು ನಿಮಿತ್ತಭೂತವಿರುವುದರಿಂದ ಆ ಕರ್ಮಗಳಿಗೆ ಅವುಗಳ ನಿಮಿತ್ತಮಾತ್ರತನದ ಅಪೇಕ್ಷೆಯಿಂದಲೇ ''೧) ಸುಖದುಃಖಪರಿಣಾಮರೂಪ(ಫಲ) ಹಾಗೂ ೨) ಇಷ್ಟಾನಿಷ್ಟವಿಷಯರೂಪ ಫಲ 'ಕೊಡುವಂಥ' ''ದೆಂದು (ಉಪಚಾರದಿಂದ ಹೇಳಲಾಗುತ್ತದೆ. ಈಗ. ೧) ಸುಖದುಃಖಪರಿಣಾಮವಂತೂ ಜೀವದ ತನ್ನದೇ ಪರ್ಯಾಯರೂಪವಿರುವುದರಿಂದ ಜೀವವು ಸುಖದುಃಖ ಪರಿಣಾಮವನ್ನಂತೂ 'ನಿಶ್ಚಯದಿಂದ' ಭೋಗಿಸುತ್ತದೆ, ಮತ್ತು ಅದಕ್ಕಾಗಿ ಸುಖದುಃಖಪರಿಣಾಮದಲ್ಲಿ ನಿಮಿತ್ತಭೂತವಾಗಿ ವರ್ತಿಸುತ್ತ ಶುಭಾಶುಭ ಕರ್ಮಗಳಲ್ಲೂ (ಯಾವುದಕ್ಕೆ ಸುಖದುಃಖ ಪರಿಣಾಮರೂಪ ಫಲಕೊಡುವಂಥ'ವೆಂದು ಹೇಳಿತ್ತು ಅವುಗಳಲ್ಲೂ) ಆ ಅಪೇಕ್ಷೆಯಿಂದ ''ಅವು 'ನಿಶ್ಚಯದಿಂದ' ಜೀವಕ್ಕೆ ಸುಖದುಃಖ ಪರಿಣಾಮರೂಪ ಫಲ ಕೊಡುತ್ತವೆ''ಂದು ಹೇಳಲಾಗುತ್ತದೆ ; ಮತ್ತು ೨) ಇಷ್ಟಾನಿಷ್ಟ ವಿಷಯವಂತೂ ಜೀವದಿಂದ ತೀರ ಭಿನ್ನವಿರುವುದರಿಂದ ಜೀವವು ಇಷ್ಟಾನಿಷ್ಟ ವಿಷಯಗಳನ್ನಂತೂ 'ವ್ಯವಹಾರದಿಂದ' ಭೋಗಿಸುತ್ತದೆ, ಮತ್ತು ಅದಕ್ಕಾಗಿ ಇಷ್ಟಾನಿಷ್ಟ ವಿಷಯಗಳಲ್ಲಿ ನಿಮಿತ್ತಭೂತವಾಗಿ ವರ್ತಿಸುತ್ತ ಶುಭಾಶುಭ ಕರ್ಮಗಳಲ್ಲೂ (ಯಾವುದಕ್ಕೆ ''ಇಷ್ಟಾನಿಷ್ಟ ವಿಷಯರೂಪ ಫಲ ಕೊಡುವಂಥ''ವೆಂದು ಹೇಳಿತ್ತು ಅವುಗಳಲ್ಲೂ) ಆ ಅಪೇಕ್ಷೆಯಿಂದ ''ಅವು 'ವ್ಯವಹಾರದಿಂದ' ಜೀವಕ್ಕೆ ಇಷ್ಟಾನಿಷ್ಟ ವಿಷಯರೂಪ ಫಲ ಕೊಡುತ್ತವೆ''ಂದು ಹೇಳಲಾಗುತ್ತದೆ.

ಇಲ್ಲಿ (ಟೀಕೆಯ ಎರಡನೆಯ ಹಂತದಲ್ಲಿ) ಯಾವ 'ನಿಶ್ಚಯ' ಮತ್ತು 'ವ್ಯವಹಾರ'ದಂಥ ಎರಡು ಭಂಗಗಳನ್ನು ಮಾಡಿದೆ ಅವು ಕೇವಲ 'ಕರ್ಮನಿಮಿತ್ತಕವಾದ ಸುಖದುಃಖ ಪರಿಣಾಮಗಳು ಜೀವದಲ್ಲಾಗುತ್ತವೆ ಮತ್ತು ಕರ್ಮನಿಮಿತ್ತಕವಾದ ಇಷ್ಟಾನಿಷ್ಟವಿಷಯಗಳು ಜೀವದಿಂದ ತೀರ ಭಿನ್ನವಿವೆ'ಯೆಂಬ ಭೇದವನ್ನು ಸೂಚಿತಗೊಳಿಸುವುದಕ್ಕಾಗಿಯೇ ಮಾಡಿದೆ. ಆದರೆ ಇಲ್ಲಿ ಹೇಳಲಾದ ನಿಶ್ಚಯರೂಪ ಭಂಗದಿಂದ

ನಿಮಿತ್ತಮಾತ್ರಭೂತದ್ರವ್ಯಕರ್ಮನಿರ್ವರ್ತಿತಸುಖದುಃಖರೂಪಾತ್ಮಪರಿಣಾಮಾನಾಂ ವ್ಯವಹಾರೇಣ ದ್ರವ್ಯಕರ್ಮೋದಯಾಪಾದಿತೇಷ್ಟಾನಿಷ್ಟವಿಷಯಾಣಾಂ ಭೋಕ್ತೃತ್ವಾತ್ತಥಾವಿಧಂ ಫಲಂ ಭುಂಜಂತೇ ಇತಿ । ಏತೇನ ಜೀವಸ್ಯ ಭೋಕ್ತೃತ್ವಗುಣೋಽಪಿ ವ್ಯಾಖ್ಯಾತಃ ।

ತಮ್ಹಾ ಕಮ್ಮಂ ಕತ್ತಾ ಭಾವೇಣ ಹಿ ಸಂಜುದೋಧ ಜೀವಸ್ಸ ।
ಭೋತ್ತಾ ದು ಹವದಿ ಜೀವೋ ಚೇದಗಭಾವೇಣ ಕಮ್ಮಫಲಂ ॥೬೮॥

ತಸ್ಮಾತ್ಕರ್ಮ ಕರ್ತೃ ಭಾವೇನ ಹಿ ಸಂಯುತಮಥ ಜೀವಸ್ಯ ।
ಭೋಕ್ತಾ ತು ಭವತಿ ಜೀವಶ್ಚೇತಕಭಾವೇನ ಕರ್ಮಫಲಮ್ ॥೬೮॥

ಇದರಿಂದ(ಈ ಕಥನದಿಂದ) ಜೀವದ ಭೋಕ್ತೃತ್ವಗುಣದ್ದೂ ವ್ಯಾಖ್ಯಾನವಾಯಿತು.

ಗಾಥೆ - ೬೮

ಗಾಥಾರ್ಥ :- [ತಮ್ಹಾ] ಆದುದರಿಂದ [ಜೀವಸ್ಸ ಭಾವೇಣ ಹಿ ಸಂಜುದೋಧ] ಜೀವದ ಭಾವದಿಂದ ಸಂಯುಕ್ತವಾದಂಥ [ಕಮ್ಮಂ] ಕರ್ಮವು (ದ್ರವ್ಯಕರ್ಮವು) [ಕತ್ತಾ] ಕರ್ತೃವಿದೆ (ನಿಶ್ಚಯದಿಂದ ತನ್ನ ಕರ್ತೃ ಮತ್ತು ವ್ಯವಹಾರದಿಂದ ಜೀವಭಾವದ ಕರ್ತೃವಿದೆ ; ಆದರೆ ಅದು ಭೋಕ್ತೃವಿಲ್ಲ.) [ಭೋತ್ತಾದು] ಭೋಕ್ತೃವಂತೂ [ಜೀವೋ ಹವದಿ] (ಕೇವಲ) ಜೀವವಿದೆ [ಚೇದಗಭಾವೇಣ] ಚೇತಕಭಾವದ ಕಾರಣವಾಗಿ [ಕಮ್ಮಫಲಂ] ಕರ್ಮಫಲದ (ಭೋಕ್ತೃವಿದೆ.)

ಅದರಿಂದ ಜೀವದ ಭಾವದಿಂದ ಸಂಯುಕ್ತವಾದಂಥ ಕರ್ಮವು ಕರ್ತೃವಿದೆ ।
ಆದರೆ ಚೇತಕಭಾವದಕಾರಣ ಕರ್ಮಫಲದ ಭೋಕ್ತೃವಂತೂ ಜೀವವಿದೆ ॥೬೮॥

'ಪೌದ್ಗಲಿಕ ಕರ್ಮವು ಜೀವಕ್ಕೆ ನಿಜವಾಗಿ ಫಲ ಕೊಡುತ್ತವೆ ಮತ್ತು ಜೀವವು ನಿಜವಾಗಿ ಕರ್ಮವು ಕೊಡಲ್ಪಟ್ಟ ಫಲವನ್ನು ಭೋಗಿಸುತ್ತದೆ' ಯೆಂದು ತಿಳಿದುಕೊಳ್ಳಬಾರದು.

ಪಾರಮಾರ್ಥದಿಂದ ಯಾವುದೇ ಒಂದು ದ್ರವ್ಯವು ಬೇರೆ ಯಾವುದೇ ಒಂದು ದ್ರವ್ಯಕ್ಕೆ ಫಲ ಕೊಡುವ ಸಾಧ್ಯತೆಯಿಲ್ಲ ಮತ್ತು ಯಾವುದೇ ಒಂದು ದ್ರವ್ಯವು ಬೇರೆ ಯಾವುದೇ ಒಂದು ದ್ರವ್ಯದ ಹತ್ತಿರದಿಂದ ಫಲವನ್ನು ಪಡೆದುಕೊಂಡು ಭೋಗಿಸುವ ಸಾಧ್ಯತೆಯಿಲ್ಲ. ಒಂದು ವೇಳೆ ಪಾರಮಾರ್ಥ್ಯದಿಂದ ಯಾವುದೇ ಒಂದು ದ್ರವ್ಯವು ಬೇರೆ ದ್ರವ್ಯಕ್ಕೆ ಫಲ ಕೊಟ್ಟರೆ ಮತ್ತು ಆ ಬೇರೆ ದ್ರವ್ಯವು ಅದನ್ನು ಭೋಗಿಸಿದರೆ ಎರಡೂ ದ್ರವ್ಯಗಳು ಒಂದಾಗಿ ಹೋಗಬಹುದು. ಇಲ್ಲಿ ಟೀಕೆಯ ಮೊದಲನೆಯ ಹಂತದಲ್ಲಿ ಸಂಪೂರ್ಣ ಗಾಥೆಯ ಕಥನದ ಸಾರವನ್ನು ಹೇಳುತ್ತ ಶ್ರೀ ಟೀಕಾಕಾರರಾದ ಆಚಾರ್ಯದೇವರು ತಾವೇ, ಜೀವಕ್ಕೆ ಕರ್ಮದಿಂದ ಕೊಡಲ್ಪಟ್ಟ ಫಲದ ಉಪಭೋಗವು ವ್ಯವಹಾರದಿಂದಿದೆ ನಿಶ್ಚಯದಿಂದಿಲ್ಲವೆಂದು ಹೇಳಿದುದನ್ನು ವಿಶೇಷ ಲಕ್ಷ್ಯವಹಿಸುವುದು ಅವಶ್ಯಕವಿದೆ.

೩. ೧) ಸುಖದುಃಖ ಪರಿಣಾಮ ಮತ್ತು ೨) ಇಷ್ಟಾನಿಷ್ಟ ವಿಷಯವೆಂದು ಸುಖದುಃಖದಲ್ಲಿ ಎರಡು ಅರ್ಥಗಳಾಗುತ್ತವೆ. ಎಲ್ಲಿ 'ನಿಶ್ಚಯದಿಂದ' ಹೇಳಿದೆ ಅಲ್ಲಿ 'ಸುಖದುಃಖಪರಿಣಾಮ'ವೆಂಬ ಅರ್ಥವನ್ನು ತಿಳಿದುಕೊಳ್ಳಬೇಕು ಮತ್ತು ಎಲ್ಲಿ 'ವ್ಯವಹಾರದಿಂದ' ಹೇಳಿದೆ ಅಲ್ಲಿ 'ಇಷ್ಟಾನಿಷ್ಟ ವಿಷಯ'ವೆಂಬ ಅರ್ಥವನ್ನು ತಿಳಿದುಕೊಳ್ಳಬೇಕು.

ಕರ್ತೃತ್ವಭೋಕ್ತೃತ್ವವ್ಯಾಖ್ಯೋಪಸಂಹಾರೋಽಯಮ್ ।

ಶತ ಏತತ್ ಸ್ಥಿತಂ ನಿಶ್ಚಯೇನಾತ್ಮನಃ ಕರ್ಮ ಕರ್ತೃ, ವ್ಯವಹಾರೇಣ ಜೀವಭಾವಸ್ಯ; ಜೀವೋಽಪಿ-ನಿಶ್ಚಯೇನಾತ್ಮಭಾವಸ್ಯ ಕರ್ತಾ, ವ್ಯವಹಾರೇಣ ಕರ್ಮಣ ಇತಿ । ಯಥಾತ್ರೋಭಯನಯಾಭ್ಯಾಂ ಕರ್ಮ ಕರ್ತೃ, ತಥೈಕೇನಾಪಿ ನಯೇನ ನ ಭೋಕ್ತೃ । ಕುತಃ ? ಚೈತನ್ಯಪೂರ್ವಕಾನುಭೂತಿಸದ್ಭಾವಾಭಾವಾತ್ । ತತಶ್ಚೇತನತ್ವಾತ್ ಕೇವಲ ಏವ ಜೀವಃ ಕರ್ಮಫಲಭೂತಾನಾಂ ಕಥಂಚಿದಾತ್ಮನಃ ಸುಖದುಃಖಪರಿಣಾಮಾನಾಂ ಕಥಂಚಿದಿಷ್ಟಾನಿಷ್ಟವಿಷಯಾಣಾಂ ಭೋಕ್ತಾ ಪ್ರಸಿದ್ಧ ಇತಿ ।

ಏವಂ ಕತ್ತಾ ಭೋತ್ತಾ ಹೋಜ್ಜಂ ಅಪ್ಪಾ ಸಗೇಹಿಂ ಕಮ್ಮೇಹಿಂ ।
ಹಿಂಡದಿ ಪಾರಮಪಾರಂ ಸಂಸಾರಂ ಮೋಹಸಂಛಣ್ಣೋ ॥೬೯॥

ಏವಂ ಕರ್ತಾ ಭೋಕ್ತಾ ಭವನ್ನಾತ್ಮಾ ಸ್ವಕೈಃ ಕರ್ಮಭಿಃ ।
ಹಿಂಡತೇ ಪಾರಮಪಾರಂ ಸಂಸಾರಂ ಮೋಹಸಂಛನ್ನಃ ॥೬೯॥

ಟೀಕೆ :- ಇದು ಕರ್ತೃತ್ವ ಮತ್ತು ಭೋಕ್ತೃತ್ವ ವ್ಯಾಖ್ಯಾನದ ಉಪಸಂಹಾರವಿದೆ.

ಆದುದರಿಂದ (ಪೂರ್ವೋಕ್ತ ಕಥನದಿಂದ) ಕರ್ಮವು ನಿಶ್ಚಯದಿಂದ ತನ್ನ ಕರ್ತೃವಿದೆ, ವ್ಯವಹಾರದಿಂದ ಜೀವಭಾವದ ಕರ್ತೃವಿದೆ ; ಜೀವವೂ ನಿಶ್ಚಯದಿಂದ ತನ್ನ ಭಾವದ ಕರ್ತೃವಿದೆ, ವ್ಯವಹಾರದಿಂದ ಕರ್ಮದ ಕರ್ತೃವಿದೆಯೆಂಬುದು ನಿಶ್ಚಿತವಾಯಿತು.

ಯಾವ ಪ್ರಕಾರ ಇಲ್ಲಿ ಎರಡೂ ನಯಗಳಿಂದ ಕರ್ಮವು ಕರ್ತೃವಿದೆ, ಅದೇ ಪ್ರಕಾರ ಒಂದೂ ನಯದಿಂದ ಅದು ಭೋಕ್ತೃವಿಲ್ಲ. ಏಕೆ ? ಏಕೆಂದರೆ ಅದಕ್ಕೆ ಚೈತನ್ಯಪೂರ್ವಕ[೧]ವಾದ ಅನುಭೂತಿಯ ಸದ್ಭಾವವಿಲ್ಲ. ಆದುದರಿಂದ ಚೇತನತೆಯ ಕಾರಣವಾಗಿ ಕೇವಲ ಜೀವವೇ ಕರ್ಮಫಲದ-ಕಥಂಚಿತ್ ಆತ್ಮನ ಸುಖ-ದುಃಖಗಳ ಮತ್ತು ಕಥಂಚಿತ್ ಇಷ್ಟಾನಿಷ್ಟ ವಿಷಯಗಳ - ಭೋಕ್ತೃ ಪ್ರಸಿದ್ಧವಿದೆ.

ಗಾಥೆ - ೬೯

ಗಾಥಾರ್ಥ :- [ಏವಂ] ಈ ಪ್ರಕಾರವಾಗಿ [ಸಗೇಹಿಂ ಕಮ್ಮೇಹಿಂ] ತನ್ನ ಕರ್ಮಗಳಿಂದ [ಕತ್ತಾ ಭೋತ್ತಾ ಹೋಜ್ಜಂ] ಕರ್ತೃ-ಭೋಕ್ತೃವಾಗುತ್ತಿರುವ [ಅಪ್ಪಾ] ಆತ್ಮನು [ಮೋಹಸಂಛಣ್ಣೋ] ಮೋಹಾಚ್ಛಾದಿತನಾಗಿ ವರ್ತಿಸುತ್ತ (ಪಾರಮಪಾರಂ ಸಂಸಾರಂ] ಸಾಂತ ಅಥವಾ ಅನಂತ ಸಂಸಾರದಲ್ಲಿ [ಹಿಂಡದಿ] ಪರಿಭ್ರಮಣ ಮಾಡುತ್ತಾನೆ.

ಈ ತೆರದಿ ತನ್ನ ಕರ್ಮಗಳಿಂದ ಕರ್ತೃ-ಭೋಕ್ತೃವಾದಾತ್ಮಮೋಹಾಚ್ಛಾದಿತನಾಗಿ ।
ವರ್ತಿಸುತ ಸಾಂತವಿಲ್ಲವೆ ಅನಂತಸಂಸಾರದಿ ಪರಿಭ್ರಮಣ ಮಾಡುವನು ॥೬೯॥

---

೧. ಯಾವ ಅನುಭೂತಿಯು ಚೈತನ್ಯಪೂರ್ವಕವಾಗಿ ಆಗುವುದು ಅದಕ್ಕೇ ಇಲ್ಲಿ ಭೋಕ್ತೃತ್ವವೆಂದು ಹೇಳಿದೆ ; ಅದನ್ನು ಹೊರತುಪಡಿಸಿ ಇತರ ಅನುಭೂತಿಗೆ ಇಲ್ಲ.

ಕರ್ಮಸಂಯುಕ್ತತ್ವಮುಖೇನ ಪ್ರಭುತ್ವಗುಣವ್ಯಾಖ್ಯಾನಮೇತತ್ ।

ಏವಮಯಮಾತ್ಮಾ ಪ್ರಕಟಿತಪ್ರಭುತ್ವಶಕ್ತೇಃ ಸ್ವಕೈಃ ಕರ್ಮಭಿರ್ಗೃಹೀತಕರ್ತೃತ್ವಭೋಕ್ತೃತ್ವಾಧಿಕಾರೋऽನಾದಿ-ಮೋಹಾವಚ್ಛನ್ನತ್ವಾದುಪಜಾತವಿಪರೀತಾಭಿನಿವೇಶಃ ಪ್ರತ್ಯಸ್ತಮಿತಸಮ್ಯಗ್ಜ್ಞಾನಜ್ಯೋತಿಃ ಸಾಂತಮನಂತಂ ವಾ ಸಂಸಾರಂ ಪರಿಭ್ರಮತೀತಿ ।

ಉವಸಂತಖೀಣಮೋಹೋ ಮಗ್ಗಂ ಜಿಣಭಾಸಿದೇಣ ಸಮುವಗದೋ ।
ಣಾಣಾಣುಮಗ್ಗಚಾರೀ ಣಿವ್ವಾಣಪುರಂ ವಜದಿ ಧೀರೋ ॥೭೦॥

ಉಪಶಾಂತಕ್ಷೀಣಮೋಹೋ ಮಾರ್ಗಂ ಜಿನಭಾಷಿತೇನ ಸಮುಪಗತಃ ।
ಜ್ಞಾನಾನುಮಾರ್ಗಚಾರೀ ನಿರ್ವಾಣಪುರಂ ವ್ರಜತಿ ಧೀರಃ ॥೭೦॥

ಟೀಕೆ :- ಇದು ಕರ್ಮಸಂಯುಕ್ತತೆಯ ಮುಖ್ಯತೆಯಿಂದ ಪ್ರಭುತ್ವಗುಣದ ವ್ಯಾಖ್ಯಾನವಿದೆ.

ಈ ಪ್ರಕಾರ ಪ್ರಕಟವಾದ ಪ್ರಭುತ್ವಶಕ್ತಿಯ ಕಾರಣದಿಂದ ಯಾವನು ತನ್ನ ಕರ್ಮಗಳ ಮುಖಾಂತರ (ನಿಶ್ಚಯದಿಂದ ಭಾವಕರ್ಮಗಳ ಮತ್ತು ವ್ಯವಹಾರದಿಂದ ದ್ರವ್ಯಕರ್ಮಗಳ ಮುಖಾಂತರ) ಕರ್ತೃತ್ವ ಹಾಗೂ ಭೋಕ್ತೃತ್ವದ ಅಧಿಕಾರವನ್ನು ಗ್ರಹಣ ಮಾಡಿದ್ದಾನೆ ಅಂಥ ಈ ಆತ್ಮನಿಗೆ ಅನಾದಿಯಿಂದ ಮೋಹಾಚ್ಛಾದಿತತನದ ಕಾರಣವಾಗಿ ವಿಪರೀತ ಅಭಿನಿವೇಶದ[೧] ಉತ್ಪತ್ತಿಯಾಗಿರುವುದರಿಂದ ಸಮ್ಯಗ್ಜ್ಞಾನಜ್ಯೋತಿಯು ಅಸ್ತವಾಗಿ ಹೋಗಿದೆ, ಅದಕ್ಕಾಗಿ ಅವನು ಸಾಂತ ಅಥವಾ ಅನಂತವಾದ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾನೆ.

(ಈ ಪ್ರಕಾರವಾಗಿ ಜೀವದ ಕರ್ಮಸಹಿತತನದ ಮುಖ್ಯತೆಯೊಡನೆ ಪ್ರಭುತ್ವಗುಣದ ವ್ಯಾಖ್ಯಾನವನ್ನು ಮಾಡಲಾಯಿತು.)

ಗಾಥೆ - ೭೦

ಗಾಥಾರ್ಥ :- [ಜಿಣಭಾಸಿದೇಣ ಮಗ್ಗಂ ಸಮುವಗದೋ] ಯಾವನು (ಪುರುಷನು) ಜಿನವಚನದ ಮುಖಾಂತರ ಮಾರ್ಗವನ್ನು ಪ್ರಾಪ್ತಮಾಡಿಕೊಂಡು [ಉವಸಂತಖೀಣಮೋಹೋ] ಉಪಶಾಂತಕ್ಷೀಣ-ಮೋಹನಾಗುತ್ತ (ಎಂದರೆ ಯಾವನಿಗೆ ದರ್ಶನಮೋಹದ ಉಪಶಮ, ಕ್ಷಯ ಅಥವಾ ಕ್ಷಯೋಪಶಮವಾಗಿದೆ ಅಂಥವನಾಗುತ್ತ) [ಣಾಣಾಣುಮಗ್ಗಚಾರೀ] ಜ್ಞಾನಾನುಮಾರ್ಗದಲ್ಲಿ ವಿಹರಿಸುತ್ತಾನೆ (-ಜ್ಞಾನದ ಅನುಸರಣೆ ಮಾಡುವಂಥ ಮಾರ್ಗದಲ್ಲಿ ವರ್ತಿಸುತ್ತಾನೆ) [ಧೀರೋ] ಆ ಧೀರ ಪುರುಷನು [ಣಿವ್ವಾಣಪುರಂ ವಜದಿ] ನಿರ್ವಾಣಪುರಕ್ಕೆ ಪ್ರಾಪ್ತನಾಗುತ್ತಾನೆ.

ಜಿನವಚನದಿಂದ ಮಾರ್ಗವ ಪಡೆದು ಉಪಶಾಂತಕ್ಷೀಣಮೋಹಿಯಾಗುತ್ತ ।
ಜ್ಞಾನಾನುಮಾರ್ಗದಲಿ ವಿಹರಿಸುವಧೀರ ಶಿವಪುರವ ಪಡೆಯುವನು ॥೭೦॥

---

೧ ಅಭಿನಿವೇಶ = ಅಭಿಪ್ರಾಯ ; ಆಗ್ರಹ.

ಕರ್ಮವಿಯುಕ್ತತ್ವಮುಖೇನ ಪ್ರಭುತ್ವಗುಣವ್ಯಾಖ್ಯಾನಮೇತತ್ ।

ಅಯಮೇವಾತ್ಮಾ ಯದಿ ಜಿನಾಜ್ಞಯಾ ಮಾರ್ಗಮುಪಗಮ್ಯೋಪಶಾಂತಕ್ಷೀಣಮೋಹತ್ವಾತ್ಪ್ರಹೀಣ-ವಿಪರೀತಾಭಿನಿವೇಶಃ ಸಮುದ್ಭಿನ್ನಸಮ್ಯಗ್ಜ್ಞಾನಜ್ಯೋತಿಃ ಕರ್ತೃತ್ವಭೋಕ್ತೃತ್ವಾಧಿಕಾರಂ ಪರಿಸಮಾಪ್ಯ ಸಮ್ಯಕ್ಪ್ರಕಟಿತಪ್ರಭುತ್ವಶಕ್ತಿರ್ಜ್ಞಾನಜ್ಯೋತಿಃ ಕರ್ತೃತ್ವಭೋಕ್ತೃತ್ವಾಧಿಕಾರಂ ಪರಿಸಮಾಪ್ಯ ಸಮ್ಯಕ್ಪ್ರಕಟಿತಪ್ರಭುತ್ವಶಕ್ತಿ-ರ್ಜ್ಞಾನಸ್ಯೈವಾನುಮಾರ್ಗೇಣ ಚರತಿ, ತದಾ ವಿಶುದ್ಧಾತ್ಮತತ್ತ್ವೋಪಲಂಭರೂಪಮಪವರ್ಗನಗರಂ ವಿಗಾಹತ ಇತಿ।

ಅಥ ಜೀವವಿಕಲ್ಪಾ ಉಚ್ಯಂತೇ ।

ಏಕ್ಕೋ ಚೇವ ಮಹಪ್ಪಾ ಸೋ ದುವಿಯಪ್ಪೋ ತಿಲಕ್ಖಣೋ ಹೋದಿ ।
ಚದುಚಂಕಮಣೋ ಭಣಿದೋ ಪಂಚಗ್ಗಗುಣಪ್ಪಧಾಣೋ ಯ ॥೭೧॥

ಟೀಕೆ :- ಇದು ಕರ್ಮವಿಯುಕ್ತತೆಯ ಮುಖ್ಯತೆಯಿಂದ ಪ್ರಭುತ್ವಗುಣದ ವ್ಯಾಖ್ಯಾನವಿದೆ.

ಯಾವಾಗ ಇದೇ ಆತ್ಮನು ಜಿನಾಜ್ಞೆಯ ಮುಖಾಂತರ ಮಾರ್ಗವನ್ನು ಪ್ರಾಪ್ತಮಾಡಿಕೊಂಡು ಉಪಶಾಂತ ಕ್ಷೀಣಮೋಹತ್ವದ ಕಾರಣವಾಗಿ (ದರ್ಶನಮೋಹದ ಉಪಶಮ, ಕ್ಷಯ ಅಥವಾ ಕ್ಷಯೋಪಶಮದ ಕಾರಣವಾಗಿ) ಅವನಿಗೆ ವಿಪರೀತ ಅಭಿನಿವೇಶವು ನಷ್ಟವಾಗಿ ಹೋಗಿರುವುದರಿಂದ ಸಮ್ಯಗ್ಜ್ಞಾನಜ್ಯೋತಿಯು ಪ್ರಕಟ-ವಾಗಿರುವವನಾಗುತ್ತ, ಕರ್ತೃತ್ವ ಮತ್ತು ಭೋಕ್ತೃತ್ವದ ಅಧಿಕಾರವನ್ನು ಸಮಾಪ್ತಗೊಳಿಸಿ ಸಮ್ಯಕ್ ರೂಪದಿಂದ ಪ್ರಕಟವಾದ ಪ್ರಭುತ್ವಶಕ್ತಿವಂತನಾಗುತ್ತ ಜ್ಞಾನದ ಅನುಸರಣೆಯನ್ನೇ ಮಾಡುವಂಥ ಮಾರ್ಗದಲ್ಲಿ ವಿಹರಿಸುತ್ತಾನೆ (ಪ್ರವರ್ತಿಸುತ್ತಾನೆ, ಪರಿಣಮಿಸುತ್ತಾನೆ, ಆಚರಣೆ ಮಾಡುತ್ತಾನೆ), ಆಗ ಅವನು ವಿಶುದ್ಧ ಆತ್ಮತತ್ತ್ವದ ಉಪಲಬ್ಧಿರೂಪವಾದ ಅಪವರ್ಗ ನಗರವನ್ನು (ಮೋಕ್ಷಪುರವನ್ನು) ಪ್ರಾಪ್ತ ಮಾಡಿಕೊಳ್ಳುತ್ತಾನೆ.

(ಈ ರೀತಿಯಾಗಿ ಜೀವದ ಕರ್ಮರಹಿತತೆಯ ಮುಖ್ಯತೆಯೊಡನೆ ಪ್ರಭುತ್ವಗುಣದ ವ್ಯಾಖ್ಯಾನವನ್ನು ಮಾಡಲಾಯಿತು.)

ಈಗ ಜೀವದ ಭೇದಗಳನ್ನು ಹೇಳಲಾಗುತ್ತದೆ.

ಗಾಥೆ - ೭೧-೭೨

ಗಾಥಾರ್ಥ :- [ಸೋ ಮಹಪ್ಪಾ] ಆ ಮಹಾತ್ಮನು [ಏಕ್ಕೋ ಚೇವ] ಒಬ್ಬನೇ ಇದ್ದಾನೆ ; (ದುವಿಯಪ್ಪೋ) ಎರಡು ಭೇದಗಳುಳ್ಳವನಿದ್ದಾನೆ ಮತ್ತು [ತಿಲಕ್ಖಣೋ ಹೋದಿ] ಮೂರು ಲಕ್ಷಣಗಳುಳ್ಳವನಿದ್ದಾನೆ ; [ಚದುಚಂಕಮಣೋ] ಮತ್ತು ಅವನಿಗೆ ಚತುರ್ವಿಧ ಭ್ರಮಣವುಳ್ಳವನು [ಯ] ಮತ್ತು [ಪಂಚಗ್ಗಗುಣಪ್ಪಧಾಣೋ] ಐದು ಮುಖ್ಯ ಗುಣಗಳಿಂದ ಪ್ರಾಧಾನ್ಯತೆಯುಳ್ಳವನು [ಭಣಿದೋ] - ಎಂದು ಹೇಳಿದೆ. [ಉವಉತ್ತೋ ಜೀವ]

ಉತ್ತಮಮಹಾತ್ಮನೊಬ್ಬನಿದ್ದವನು ದ್ವಿಭೇದ, ತ್ರಿಲಕ್ಷಣಯುಕ್ತನಿಹನು ।
ಮತ್ತವನಿಗೆ ಚತುರ್ವಿಧ ಭ್ರಮಣ ಪಂಚಾಗ್ರಗುಣಪ್ರಧಾನನೆಂದು ಪೇಳಿದೆ ॥೭೧॥

ಛಕ್ಕಾಪಕ್ಕಮಜುತ್ತೋ ಉವಉತ್ತೋ ಸತ್ತಭಂಗಸಬ್ಭಾವೋ ।
ಅಟ್ಠಾಸಓ ಣವಟ್ಠೋ ಜೀವೋ ದಸಟ್ಠಾಣಗೋ ಭಣಿದೋ ॥೭೨॥

ಏಕ ಏವ ಮಹಾತ್ಮಾ ಸ ದ್ವಿವಿಕಲ್ಪಸ್ತ್ರಿಲಕ್ಷಣೋ ಭವತಿ ।
ಚತುಶ್ಚಂಕ್ರಮಣೋ ಭಣಿತಃ ಪಂಚಾಗ್ರಗುಣಪ್ರಧಾನಶ್ಚ ॥೭೧॥

ಷಟ್‌ಕಾಪಕ್ರಮಯುಕ್ತಃ ಉಪಯುಕ್ತಃ ಸಪ್ತಭಂಗಸದ್ಭಾವಃ ।
ಅಷ್ಟಾಶ್ರಯೋ ನವಾರ್ಥೋ ಜೀವೋ ದಶಸ್ಥಾನಗೋ ಭಣಿತಃ ॥೭೨॥

ಸ ಖಲು ಜೀವೋ ಮಹಾತ್ಮಾ ನಿತ್ಯಚೈತನ್ಯೋಪಯುಕ್ತತ್ವಾದೇಕ ಏವ, ಜ್ಞಾನದರ್ಶನಭೇದಾದ್ ದ್ವಿವಿಕಲ್ಪಃ, ಕರ್ಮಫಲಕಾರ್ಯಜ್ಞಾನಚೇತನಾಭೇದೇನ ಲಕ್ಷ್ಯಮಾಣತ್ವಾತ್ತ್ರಿಲಕ್ಷಣಃ ಧ್ರೌವ್ಯೋತ್ಪಾದವಿನಾಶಭೇದೇನ ವಾ, ಚತಸೃಷು ಗತಿಷು ಚಂಕ್ರಮಣತ್ವಾಚ್ಚತುಶ್ಚಂಕ್ರಮಣಃ, ಪಂಚಭಿಃ ಪಾರಿಣಾಮಿಕೌದಯಿಕಾದಿಭಿರಗ್ರಗುಣೈಃ ಪ್ರಧಾನತ್ವಾತ್ಪಂಚಾಗ್ರಗುಣಪ್ರಧಾನಃ, ಚತುಸೃಷು ದಿಕ್ಷೂರ್ಧ್ವಮಧಶ್ಚೇತಿ ಭವಾಂತರಸಂಕ್ರಮಣಷಟ್ಕೇನಾಪಕ್ರಮೇಣ ಯುಕ್ತತ್ವಾತ್ಷಟ್ಕಾಪಕ್ರಮಯುಕ್ತಃ, ಅಸ್ತಿನಾಸ್ತ್ಯಾದಿಭಿಃಸಪ್ತಭಂಗೈಃ ಸದ್ಭಾವೋ ಯಸ್ಯೇತಿ ಸಪ್ತಭಂಗಸದ್ಭಾವಃ, ಅಷ್ಟಾನಾಂ

ಉಪಯೋಗಸ್ವರೂಪಿಯಾದಂಥ ಆ ಜೀವನು [ಛಕ್ಕಾಪಕ್ಕಮ-ಜುತ್ತೋ] ಆರು ಅಪಕ್ರಮ[೧] ಸಹಿತನೂ, [ಸತ್ತಭಂಗ-ಸಬ್ಭಾವೋ] ಏಳು ಭಂಗದೊಡನೆ ಸದ್ಭಾವವುಳ್ಳವನೂ, [ಅಟ್ಠಾಸಓ] ಎಂಟರ ಆಶ್ರಯರೂಪನೂ, [ಣವಟ್ಠೋ] ಒಂಭತ್ತು-ಅರ್ಥರೂಪನೂ ಮತ್ತು [ದಸಟ್ಠಾಣಗೋ] ದಶಸ್ಥಾನಗತನೆಂದೂ [ಭಣಿದೋ] ಹೇಳಲಾಗಿದೆ.

ಟೀಕೆ :- ಆ ಮಹಾತ್ಮನಾದ ಜೀವನು ೧) ವಾಸ್ತವಿಕವಾಗಿ ನಿತ್ಯಚೈತನ್ಯ-ಉಪಯೋಗಿಯಾಗಿರುವುದರಿಂದ ''ಒಬ್ಬನೇ'' ಇದ್ದಾನೆ ; ೨) ಜ್ಞಾನ ಮತ್ತು ದರ್ಶನದಂಥ ಭೇದಗಳ ಕಾರಣವಾಗಿ ''ಎರಡು ಭೇದಗಳುಳ್ಳವ'' ನಿದ್ದಾನೆ; ೩) ಕರ್ಮಫಲಚೇತನ, ಕಾರ್ಯಚೇತನ ಮತ್ತು ಜ್ಞಾನಚೇತನದಂಥ ಭೇದಗಳ ಮುಖಾಂತರ ಅಥವಾ ಧ್ರೌವ್ಯ, ಉತ್ಪಾದ ಮತ್ತು ವಿನಾಶದಂಥ ಭೇದಗಳ ಮುಖಾಂತರ ಲಕ್ಷಿತನಾಗುವುದರಿಂದ ''ತ್ರಿಲಕ್ಷಣ (ಮೂರು ಲಕ್ಷಣವುಳ್ಳವ)''ನಿದ್ದಾನೆ; ೪) ನಾಲ್ಕುಗತಿಗಳಲ್ಲಿ ಭ್ರಮಣ ಮಾಡುತ್ತಿರುವುದರಿಂದ ''ಚತುರ್ವಿಧ ಭ್ರಮಣವುಳ್ಳವ''ನಿದ್ದಾನೆ; ೫) ಪಾರಿಣಾಮಿಕ, ಔದಯಿಕ ಇವೇ ಮೊದಲಾದ ಐದು ಮುಖ್ಯ ಗುಣಗಳಿಂದ ಪ್ರಾಧಾನ್ಯತೆಯಾಗಿರುವುದರಿಂದ ''ಐದು ಮುಖ್ಯ ಗುಣಗಳಲ್ಲಿ ಪ್ರಾಧಾನ್ಯತೆಯುಳ್ಳವ'ನಿದ್ದಾನೆ; ೬) ನಾಲ್ಕುದಿಕ್ಕುಗಳಲ್ಲಿ, ಮೇಲೆ ಮತ್ತು ಕೆಳಗೆ ಈ ಪ್ರಕಾರವಾಗಿ ಷಡ್‌ವಿಧ ಭವಾಂತರಗಮನರೂಪ ಅಪಕ್ರಮದಿಂದ ಯುಕ್ತನಾಗಿರುವ ಕಾರಣ (ಎಂದರೆ ಬೇರೆ ಭವದಲ್ಲಿ ಹೋಗುತ್ತಿರುವಾಗ ಮೇಲೆ ಹೇಳಿದ ಆರು ದಿಕ್ಕುಗಳಲ್ಲಿ

ಉಪಯೋಗರೂಪಾತ್ಮ ಆರು-ಅಪಕ್ರಮಸಹಿತ, ಸಪ್ತಭಂಗಸದ್ಭಾವನಿದ್ದು ।
ಉಪರಿ ಎಂಟು-ಆಶ್ರಯರೂಪ, ನವ-ಅರ್ಥರೂಪ, ದಶಸ್ಥಾನಗತನೆಂದಿದೆ ॥೭೨॥

---

೧. ಅಪಕ್ರಮ = (ಸಂಸಾರಿಯಾದ ಜೀವನಿಗೆ ಬೇರೆ ಭವದಲ್ಲಿ ಹೋಗುತ್ತಿರುವಾಗ) ಅನುಶ್ರೇಣೀ ಗಮನ ಎಂದರೆ ವಿಶೇಷ ದಿಕ್ಕುಗಳನ್ನು ಬಿಟ್ಟು ಗಮನ.

ಕರ್ಮಣಾಂ ಗುಣಾನಾಂ ವಾ ಆಶ್ರಯತ್ವಾದಷ್ಟಾಶ್ರಯಃ ನವಪದಾರ್ಥರೂಪೇಣ ವರ್ತನಾನ್ನವಾರ್ಥಃ, ಪೃಥಿವ್ಯಪ್ತೇಜೋವಾಯುವನಸ್ಪತಿಸಾಧಾರಣಪ್ರತ್ಯೇಕದ್ವಿತ್ರಿಚತುಃ ಪಂಚೇಂದ್ರಿಯರೂಪೇಷು ದಶಸು ಸ್ಥಾನೇಷು ಗತತ್ವಾದ್ದಶಸ್ಥಾನಗ ಇತಿ ।

ಪಯಡಿಟ್ಠಿದಿಅಣುಭಾಗಪ್ಪದೇಸಬಂಧೇಹಿಂ ಸವ್ವದೋ ಮುಕ್ಕೋ ।
ಉಡ್ಢಂ ಗಚ್ಛದಿ ಸೇಸಾ ವಿದಿಸಾವಜ್ಜಂ ಗದಿಂ ಜಂತಿ ॥೭೩॥

ಪ್ರಕೃತಿಸ್ಥಿತ್ಯನುಭಾಗಪ್ರದೇಶಬಂಧೈಃ ಸರ್ವತೋ ಮುಕ್ತಃ ।
ಊರ್ಧ್ವಂ ಗಚ್ಛತಿ ಶೇಷಾ ವಿದಿಗ್ವರ್ಜಾಂ ಗತಿಂ ಯಾಂತಿ ॥೭೩॥

ಬದ್ಧ ಜೀವಸ್ಯ ಷಡ್‌ಗತಯಃ ಕರ್ಮನಿಮಿತ್ತಾಃ । ಮುಕ್ತಸ್ಯಾಪ್ಯೂರ್ಧ್ವಗತಿರೇಕಾ ಸ್ವಾಭಾವಿಕೀತ್ಯತ್ರೋಕ್ತಮ್।

-ಇತಿ ಜೀವದ್ರವ್ಯಾಸ್ತಿಕಾಯವ್ಯಾಖ್ಯಾನಂ ಸಮಾಪ್ತಮ್ ।

ಗಮನವಾಗುತ್ತಿರುವುದರಿಂದ) ''ಆರು ಅಪಕ್ರಮ ಸಹಿತ''ನಿದ್ದಾನೆ ; ೭) ಅಸ್ತಿ, ನಾಸ್ತಿ ಮೊದಲಾದ ಏಳು ಭಂಗಗಳ ಮುಖಾಂತರ ಯಾವನ ಸದ್ಭಾವವಿದೆ ಅಂಥವನಾಗಿರುವುದರಿಂದ ''ಏಳು ಭಂಗದೊಡನೆ ಸದ್ಭಾವವುಳ್ಳವ''ನಿದ್ದಾನೆ; ೮) (ಜ್ಞಾನಾವರಣ ಮೊದಲಾದ) ಎಂಟು ಕರ್ಮಗಳ ಅಥವಾ (ಸಮ್ಯಕ್ತ್ವ ಮೊದಲಾದ) ಎಂಟು ಗುಣಗಳ ಆಶ್ರಯಭೂತನಾಗಿರುವುದರಿಂದ ''ಎಂಟರ ಆಶ್ರಯರೂಪ''ನಿದ್ದಾನೆ ; ೯) ಒಂಭತ್ತು ಪದಾರ್ಥಗಳ ರೂಪದಿಂದ ವರ್ತಿಸುತ್ತಿರುವುದರಿಂದ ''ಒಂಭತ್ತು - ಅರ್ಥರೂಪ''ನಿದ್ದಾನೆ; ೧೦) ಪೃಥ್ವಿ, ಜಲ, ಅಗ್ನಿ, ವಾಯು, ಸಾಧಾರಣ ವನಸ್ಪತಿ, ಪ್ರತ್ಯೇಕ ವನಸ್ಪತಿ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಮತ್ತು ಪಂಚೇಂದ್ರಿಯ ರೂಪವಾದ ಹತ್ತು ಸ್ಥಾನಗಳಲ್ಲಿ ಪ್ರಾಪ್ತನಾಗುವುದರಿಂದ ''ದಶಸ್ಥಾನಗತ''ನಿದ್ದಾನೆ.

ಗಾಥೆ - ೭೩

ಗಾಥಾರ್ಥ :- [ಪಯಡಿಟ್ಠಿದಿಅಣುಭಾಗಪ್ಪದೇಸಬಂಧೇಹಿಂ] ಪ್ರಕೃತಿಬಂಧ, ಸ್ಥಿತಿಬಂಧ, ಅನುಭಾಗಬಂಧ ಮತ್ತು ಪ್ರದೇಶಬಂಧದಿಂದ [ಸವ್ವದೋ ಮುಕ್ಕೋ] ಸಂಪೂರ್ಣವಾಗಿ ಮುಕ್ತವಾದಂಥ ಜೀವವು [ಉಡ್ಢಂ ಗಚ್ಛದಿ] ಊರ್ಧ್ವಗಮನ ಮಾಡುತ್ತದೆ ; [ಸೇಸಾ] ಉಳಿದ ಜೀವಗಳು (ಭವಾಂತರದಲ್ಲಿ ಹೋಗುತ್ತಿರುವಾಗ) [ವಿದಿಸಾವಜ್ಜಂ ಗದಿಂ ಜಂತಿ] ವಿಶೇಷ ದಿಕ್ಕುಗಳನ್ನು ಬಿಟ್ಟುಕೊಟ್ಟು ಗಮನ ಮಾಡುತ್ತವೆ.

ಟೀಕೆ :- ಬದ್ಧ ಜೀವಕ್ಕೆ ಕರ್ಮನಿಮಿತ್ತಕವಾಗಿ ಷಡ್‌ವಿಧದ ಗಮನ (ಎಂದರೆ ಯಾವುದರಲ್ಲಿ ಕರ್ಮವು ನಿಮಿತ್ತಭೂತವಿದೆ ಅಂಥ ಆರು ದಿಶೆಗಳಲ್ಲಿ ಗಮನ)ವಿರುತ್ತದೆ ; ಮುಕ್ತ ಜೀವಕ್ಕೂ ಸ್ವಾಭಾವಿಕವಾದಂಥ ಒಂದು ಊರ್ಧ್ವಗಮನವಿರುತ್ತದೆಯೆಂದು ಇಲ್ಲಿ ಹೇಳಿದೆ.

ಜೀವ ಪ್ರಕೃತಿ-ಸ್ಥಿತಿ-ಅನುಭಾಗ-ಮೇಣ್ ಪ್ರದೇಶಬಂಧದಿಂಪೂರ್ಣಮುಕ್ತನಾಗಿ ।
ಭುವರ್ಗಮನ[೧] ಮಾಡಿದರೆ ಶೇಷ ಜೀವವಿದಿಶಗಳ ಬಿಟ್ಟುಗಮಿಸುವವು ॥೭೩॥

---

೧ ಊರ್ಧ್ವ ಗಮನ.

ಅಥ ಪುದ್ಗಲದ್ರವ್ಯಾಸ್ತಿಕಾಯವ್ಯಾಖ್ಯಾನಮ್ ।

ಖಂಧಾ ಯ ಖಂಧದೇಸಾ ಖಂಧಪದೇಸಾ ಯ ಹೋಂತಿ ಪರಮಾಣೂ ।
ಇದಿ ತೇ ಚದುವ್ವಿಯಪ್ಪಾ ಪೋಗ್ಗಲಕಾಯಾ ಮುಣೇದವ್ವಾ ॥೭೪॥

ಸ್ಕಂಧಾಶ್ಚ ಸ್ಕಂಧದೇಶಾಃ ಸ್ಕಂಧಪ್ರದೇಶಾಶ್ಚ ಭವಂತಿ ಪರಮಾಣವಃ ।
ಇತಿ ತೇ ಚತುರ್ವಿಕಲ್ಪಾಃಪುದ್ಗಲಕಾಯಾ ಜ್ಞಾತವ್ಯಾಃ ॥೭೪॥

ಪುದ್ಗಲದ್ರವ್ಯವಿಕಲ್ಪಾದೇಶೋಽಯಮ್ ।

ಪುದ್ಗಲದ್ರವ್ಯಾಣಿ ಹಿ ಕದಾಚಿತ್ಸ್ಕಂಧಪರ್ಯಾಯೇಣ, ಕದಾಚಿತ್ಸ್ಕಂಧದೇಶಪರ್ಯಾಯೇಣ, ಕದಾಚಿತ್ಸ್ಕಂಧಪ್ರದೇಶಪರ್ಯಾಯೇಣ, ಕದಾಚಿತ್ಪರಮಾಣುತ್ವೇನಾತ್ರ ತಿಷ್ಠಂತಿ । ನಾನ್ಯಾ ಗತಿರಸ್ತಿ । ಇತಿ ತೇಷಾಂ ಚತುರ್ವಿಕಲ್ಪತ್ವಮಿತಿ ।

ಭಾವಾರ್ಥ :- ಸಂಪೂರ್ಣ ರಾಗಾದಿಭಾವಗಳಿಂದ ರಹಿತವಾದಂಥ ಯಾವ ಶುದ್ಧಾತ್ಮಾನುಭೂತಿ ಲಕ್ಷಣ ಧ್ಯಾನವಿದೆ ಅದರ ಬಲದಿಂದ ಚತುರ್ವಿಧದ ಬಂಧನಗಳಿಂದ ಸರ್ವಥಾ ಮುಕ್ತವಾದ ಜೀವವೂ ಸ್ವಾಭಾವಿಕವಾಗಿ ಅನಂತಜ್ಞಾನ ಮೊದಲಾದ ಗುಣಗಳಿಂದ ಯುಕ್ತವಾಗಿ ವರ್ತಿಸುತ್ತ, ಒಂದು ಸಮಯವರ್ತಿಯಾದ ಅವಿಗ್ರಹ ಗತಿಯ ಮುಖಾಂತರ (ಲೋಕಾಗ್ರದವರೆಗೆ) ಸ್ವಾಭಾವಿಕವಾಗಿ ಊರ್ಧ್ವಗಮನ ಮಾಡುತ್ತದೆ ಉಳಿದ ಸಂಸಾರೀ ಜೀವಗಳು ಮರಣಾಂತದಲ್ಲಿ ವಿದಿಶೆಗಳನ್ನು ಬಿಟ್ಟುಕೊಟ್ಟು ಮೊದಲು ಹೇಳಿದ ಆರು-ಅಪಕ್ರಮಸ್ವರೂಪ (ಕರ್ಮನಿಮಿತ್ತಕ)ಗಳಾದ ಅನುಶ್ರೇಣೀಗಮನ ಮಾಡುತ್ತವೆ.

ಈ ಪ್ರಕಾರವಾಗಿ ಜೀವದ್ರವ್ಯಾಸ್ತಿಕಾಯದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಪುದ್ಗಲದ್ರವ್ಯಾಸ್ತಿಕಾಯದ ವ್ಯಾಖ್ಯಾನವಿದೆ.

ಗಾಥೆ - ೭೪

ಗಾಥಾರ್ಥ :- [ಖಂಧಾ ಯ] ಸ್ಕಂಧ, [ಖಂಧದೇಸಾ] ಸ್ಕಂಧದೇಶ, [ಖಂಧಪದೇಸಾ] ಸ್ಕಂಧಪ್ರದೇಶ [ಯ] ಮತ್ತು [ಪರಮಾಣು ಹೋಂತಿ ಇದಿ] ಪರಮಾಣುವೆಂದು [ತೇ ಪೋಗ್ಗಲಕಾಯಾ] ಆ ಪುದ್ಗಲಕಾಯದಲ್ಲಿ [ಚದುವ್ವಿಯಪ್ಪಾ] ನಾಲ್ಕು ಭೇದಗಳೆಂದು [ಮುಣೇದವ್ವಾ] ತಿಳಿಯುವುದು.

ಟೀಕೆ :- ಇದು ಪುದ್ಗಲದ್ರವ್ಯದ ಭೇದಗಳ ಕಥನವಿದೆ.

ಪುದ್ಗಲದ್ರವ್ಯವು ಒಮ್ಮೊಮ್ಮೆ ಸ್ಕಂಧಪರ್ಯಾಯದಿಂದ, ಒಮ್ಮೊಮ್ಮೆ ಸ್ಕಂಧದೇಶರೂಪ ಪರ್ಯಾಯದಿಂದ, ಒಮ್ಮೊಮ್ಮೆ ಸ್ಕಂಧಪ್ರದೇಶರೂಪ ಪರ್ಯಾಯದಿಂದ ಮತ್ತು ಒಮ್ಮೊಮ್ಮೆ ಪರಮಾಣುರೂಪದಿಂದ ಇಲ್ಲಿ (ಲೋಕದಲ್ಲಿ)ಇರುತ್ತದೆ ; ಬೇರೆ ಯಾವ ಗತಿಯಿಲ್ಲ. ಹೀಗೆ ಅದರಲ್ಲಿ ನಾಲ್ಕು ಭೇದಗಳಿವೆ.

ಯಾವ ಜಡಪುದ್ಗಲಕಾಯವಿದೆಯದರಲಿ ನಾಲ್ಕು ಭೇದವೆಂದರಿವುದು ।
ಅವು ಸ್ಕಂಧ, ಸ್ಕಂಧದೇಶ, ಸ್ಕಂಧಪ್ರದೇಶ ಮತ್ತದರಂತೆ ಪರಮಾಣುವೆಂದು ॥೭೪॥

ಖಂಧಂ ಸಯಲಸಮತ್ಥಂ ತಸ್ಸ ದು ಅದ್ಧಂ ಭಣಂತಿ ದೇಸೋ ತ್ತಿ ।
ಅದ್ಧದ್ಧಂ ಚ ಪದೇಸೋ ಪರಮಾಣೂ ಚೇವ ಅವಿಭಾಗೀ ॥೭೫॥

ಸ್ಕಂಧಃ ಸಕಲಸಮಸ್ತಸ್ಯ ತ್ವರ್ಧಂ ಭಣಂತಿ ದೇಶ ಇತಿ ।
ಅರ್ಧಾರ್ಧಂ ಚ ಪ್ರದೇಶಃ ಪರಮಾಣುಶ್ಚೈವಾವಿಭಾಗೀ ॥೭೫॥

ಪುದ್ಗಲದ್ರವ್ಯವಿಕಲ್ಪನಿರ್ದೇಶೋಽಯಮ್ ।

ಅನಂತಾನಂತಪರಮಾಣ್ವಾರಬ್ಧೋಽಪ್ಯೇಕಃ ಸ್ಕಂಧೋ ನಾಮ ಪರ್ಯಾಯಃ । ತದರ್ಧಂ ಸ್ಕಂಧದೇಶೋ ನಾಮ ಪರ್ಯಾಯಃ । ತದರ್ಧಾರ್ಧಂ ಸ್ಕಂಧಪ್ರದೇಶೋ ನಾಮ ಪರ್ಯಾಯಃ । ಏವಂ ಭೇದವಶಾತ್ ದ್ವ್ಯಣುಕಸ್ಕಂಧಾದನಂತಾಃ ಸ್ಕಂಧಪ್ರದೇಶಪರ್ಯಾಯಾಃ । ನಿರ್ವಿಭಾಗೈಕಪ್ರದೇಶಃ ಸ್ಕಂಧಸ್ಯಾಂತ್ಯೋಭೇದಃ

ಗಾಥಾ -೭೫

ಗಾಥಾರ್ಥ :- [ಸಯಲಸಮತ್ಥಂ] ಸಕಲ-ಸಮಸ್ತ (ಪುದ್ಗಲಪಿಂಡಾತ್ಮಕವಾದ ಸಂಪೂರ್ಣ ವಸ್ತು) ಅದು [ಖಂಧಂ] ಸ್ಕಂಧವಿದೆ, (ತಸ್ಸ ಅದ್ಧಂ ದು] ಅದರ ಅರ್ಧಕ್ಕೆ [ದೇಸೋ ತ್ತಿ ಭಣಂತಿ] ದೇಶವೆಂದು ಹೇಳುತ್ತಾರೆ, [ಅದ್ಧದ್ಧಂ ಚ] ಅರ್ಧದ ಅರ್ಧವು ಅದು [ಪದೇಸೋ] ಪ್ರದೇಶವಿದೆ [ಚ] ಮತ್ತು [ಅವಿಭಾಗೀ] ಅವಿಭಾಗಿಯು ಅದು [ಪರಮಾಣೂ ಏವ] ನಿಜವಾಗಿ ಪರಮಾಣುವಿದೆ.

ಟೀಕೆ :- ಇದು ಪುದ್ಗಲದ್ರವ್ಯದ ಭೇದಗಳ ವರ್ಣನೆಯಿದೆ.

ಅನಂತಾನಂತ ಪರಮಾಣುಗಳಿಂದ ನಿರ್ಮಿತವಾಗಿದ್ದರೂ ಯಾವುದು ಒಂದು ಇದೆ ಅದು ಸ್ಕಂಧವೆಂಬ ಹೆಸರಿನ ಪರ್ಯಾಯವಿದೆ ; ಅದರ ಅರ್ಧವು ಸ್ಕಂಧದೇಶವೆಂಬ ಹೆಸರಿನ ಪರ್ಯಾಯವಿದೆ ; ಅರ್ಧದ ಅರ್ಧವು ಸ್ಕಂಧಪ್ರದೇಶವೆಂಬ ಹೆಸರಿನ ಪರ್ಯಾಯವಿದೆ. ಈ ಪ್ರಕಾರ ಭೇದದ ಕಾರಣ (ಬೇರೆಯಾಗುವ ಕಾರಣ)ವಾಗಿ ದ್ವಿ-ಅಣುಕ ಸ್ಕಂಧದವರೆಗೆ ಅನಂತ ಸ್ಕಂಧಪ್ರದೇಶರೂಪ ಪರ್ಯಾಯಗಳಾಗುತ್ತವೆ. ನಿರ್ವಿಭಾಗ-ಒಂದು ಪ್ರದೇಶವುಳ್ಳ ಸ್ಕಂಧದ ಕೊನೆಯ ಅಂಶವು ಅದು ಒಂದು ಪರಮಾಣುವಿದೆ. (ಈ ಪ್ರಕಾರ ಭೇದದಿಂದಾಗುವಂಥ[೧] ಪುದ್ಗಲವಿಕಲ್ಪಗಳ ವರ್ಣನೆಯಾಯಿತು.)

ಸಕಲ-ಸಮಸ್ತವದು 'ಸ್ಕಂಧ'ವಿದ್ದು ಅದರರ್ಧಕೆ 'ದೇಶ'ವೆಂದು ಹೇಳುವರು ।
ಸಕಲಾರ್ಧದ ಅರ್ಧವದು 'ಪ್ರದೇಶ'ವಿದ್ದು ಅವಿಭಾಗಿಯು 'ಪರಮಾಣು' ॥೭೫॥

---

೧. ಭೇದದಿಂದಾಗುವಂಥ ಪುದ್ಗಲವಿಕಲ್ಪಗಳ (ಪುದ್ಗಲಭೇದಗಳ) ಯಾವ ವರ್ಣನೆಯನ್ನು ಟೀಕಾಕಾರರಾದ ಶ್ರೀ ಜಯಸೇನಾಚಾರ್ಯದೇವರು ಮಾಡಿದ್ದಾರೆ ಅದರ ತಾತ್ಪರ್ಯವು ಈ ಕೆಳಗಿನಂತಿದೆ - ಅನಂತಪರಮಾಣುಪಿಂಡಾತ್ಮಕ ಘಟಪಟಾದಿರೂಪವಾದ ಯಾವ ವಿವಕ್ಷಿತ ಸಂಪೂರ್ಣ ವಸ್ತುವಿದೆ ಅದಕ್ಕೆ 'ಸ್ಕಂಧ'ವೆಂಬ ಸಂಜ್ಞೆಯಿದೆ. ಭೇದದ ಮುಖಾಂತರ ಅದರ ಯಾವ ಪುದ್ಗಲವಿಕಲ್ಪಗಳಾಗುತ್ತವೆ ಅವನ್ನು ಈ ಕೆಳಗಿನಂತೆ ದೃಷ್ಟಾಂತಾನುಸಾರವಾಗಿ ತಿಳಿಯುವುದು. ೧೬ ಪರಮಾಣುಗಳಿಂದ ನಿರ್ಮಿತವಾದ ಒಂದು ಪುದ್ಗಲಪಿಂಡವಿದೆ ಮತ್ತು ಅದು ಒಡೆದು ಅದರ ತುಂಡುಗಳಾಗುತ್ತವೆಂದು ಕಲ್ಪನೆ ಮಾಡಿಕೊಳ್ಳಿರಿ. ಅಲ್ಲಿ ೧೬ ಪರಮಾಣುಗಳ ಪೂರ್ಣ ಪಿಂಡಕ್ಕೆ 'ಸ್ಕಂಧ'ವೆಂದರೆ ೮ ಪರಮಾಣುಗಳ ಅದರ ಅರ್ಧಭಾಗರೂಪವಾದ ತುಂಡು ಅದು 'ದೇಶ'ವಿದೆ, ೪ ಪರಮಾಣುಗಳುಳ್ಳ ಅದರ ಕಾಲುಭಾಗರೂಪವಾದ ತುಂಡು

ಪರಮಾಣುರೇಕಃ । ಪುನರಪಿ ದ್ವಯೋಃಪರಮಾಣ್ವೋಃ ಸಂಘಾತಾದೇಕೋ ದ್ವ್ಯಣುಕಸ್ಕಂಧಪರ್ಯಾಯಃ । ಏವಂ ಸಂಘಾತವಶಾದನಂತಾಃ ಸ್ಕಂಧಪರ್ಯಾಯಾಃ । ಏವಂ ಭೇದಸಂಘಾತಾಭ್ಯಾಮಪ್ಯನಂತಾ ಭವಂತೀತಿ ।

ಬಾದರಸುಹುಮಗದಾಣಂ ಖಂಧಾಣಂ ಪೋಗ್ಗಲೋ ತ್ತಿ ವವಹಾರೋ ।
ತೇ ಹೋಂತಿ ಛಪ್ಪಯಾರಾ ತೇಲೋಕ್ಕಂ ಜೇಹಿಂ ಣಿಪ್ಪಣ್ಣಂ ॥೭೬॥

ಬಾದರಸೌಕ್ಷ್ಮ್ಯಗತಾನಾಂ ಸ್ಕಂಧಾನಾಂ ಪುದ್ಗಲಃ ಇತಿ ವ್ಯವಹಾರಃ ।
ತೇ ಭವಂತಿ ಷಟ್‌ಪ್ರಕಾರಾಸ್ತ್ರಿಲೋಕ್ಯಂ ಯೈಃ ನಿಷ್ಪನ್ನಮ್ ॥೭೬॥

ಸ್ಕಂಧಾನಾಂ ಪುದ್ಗಲವ್ಯವಹಾರಸಮರ್ಥನಮೇತತ್ ।

ಪುನಃ ಎರಡು ಪರಮಾಣುಗಳ ಸಂಗತಿಯಿಂದ (ಕೂಡುವಿಕೆಯಿಂದ) ಒಂದು ದ್ವಿ-ಅಣುಕ-ಸ್ಕಂಧರೂಪ ಪರ್ಯಾಯವಾಗುತ್ತದೆ. ಹೀಗೆ ಸಂಗತಿಯ ಕಾರಣದಿಂದ (ದ್ವಿಅಣುಕ-ಸ್ಕಂಧದ ಹಾಗೆ ತ್ರಿಅಣುಕ-ಸ್ಕಂಧ, ಚತುರಣುಕ-ಸ್ಕಂಧ ಇತ್ಯಾದಿ) ಅನಂತ ಸ್ಕಂಧರೂಪ ಪರ್ಯಾಯಗಳಾಗುತ್ತವೆ. (ಈ ಪ್ರಕಾರ ಸಂಗತಿ-ಯಿಂದಾಗುವಂಥ ಪುದ್ಗಲವಿಕಲ್ಪದ ವರ್ಣನೆಯಾಯಿತು.)

ಈ ಪ್ರಕಾರ ಭೇದ-ಸಂಗತಿ ಈ ಎರಡವುಗಳಿಂದಲೂ (ಯುಗಪತ್ ಭೇದ ಮತ್ತು ಸಂಗತಿ ಎರಡೂ ಆಗುವುದರಿಂದಲೂ) ಅನಂತ(ಸ್ಕಂಧರೂಪ ಪರ್ಯಾಯ)ಗಳಾಗುತ್ತವೆ. (ಹೀಗೆ ಭೇದ-ಸಂಗತಿಯಿಂದಾಗುವಂಥ ಪುದ್ಗಲ ವಿಕಲ್ಪದ ವರ್ಣನೆಯಾಯಿತು.)

ಗಾಥೆ - ೭೬

ಗಾಥಾರ್ಥ ಃ- [ಬಾದರಸುಹುಮಗದಾಣಂ] ಬಾದರ ಮತ್ತು ಸೂಕ್ಷ್ಮ ರೂಪದಿಂದ ಪರಿಣತವಾದ [ಖಂಧಾಣಂ] ಸ್ಕಂಧಗಳಿಗೆ [ಪೋಗ್ಗಲೋ ತ್ತಿ] 'ಪುದ್ಗಲ'ವೆಂದು [ವವಹಾರೋ] ವ್ಯವಹಾರವಿದೆ [ತೇ] ಅವು [ಛಪ್ಪಯಾರಾ ಹೋಂತಿ] ಆರು ಪ್ರಕಾರವಾಗಿವೆ, [ಜೇಹಿಂ] ಅವುಗಳಿಂದ [ತೇಲೋಕ್ಕಂ] ಮೂರು ಲೋಕಗಳು [ಣಿಪ್ಪಣ್ಣಂ] ನಿಷ್ಪನ್ನವಿವೆ.

ಯಾವ ಬಾದರ ಮೇಣ್ ಸೂಕ್ಷ್ಮಗತಸ್ಕಂಧಕ್ಕೆ 'ಪುದ್ಗಲ'ವೆಂಬ ವ್ಯವಹಾರವಿದೆ ।
ಅವು ಆರು ಪ್ರಕಾರಗಳಿದ್ದು ಅವುಗಳಿಂ ಮೂರು ಲೋಕಗಳು ನಿಷ್ಪನ್ನವಿವೆ ॥೭೬॥

ಅದು 'ಪ್ರದೇಶ'ವಿದೆ ಮತ್ತು ಅವಿಭಾಗಿ ಎಲ್ಲಕ್ಕಿಂತ ಚಿಕ್ಕ ತುಂಡು ಅದು 'ಪರಮಾಣು'ವಿದೆ. ಮತ್ತೆ ಯಾವ ಪ್ರಕಾರ ೧೬ ಪರಮಾಣುವುಳ್ಳ ಪೂರ್ಣ ಪಿಂಡಕ್ಕೆ 'ಸ್ಕಂಧ' ಸಂಜ್ಞೆಯಿದೆ, ಅದೇ ಪ್ರಕಾರ ೧೫ ರಿಂದ ಹಿಡಿದು ೯ ಪರಮಾಣುಗಳವರೆಗಿನ ಯಾವುದೇ ತುಂಡಕ್ಕೂ 'ಸ್ಕಂಧ' ಸಂಜ್ಞೆಯಿದೆ ; ಯಾವ ಪ್ರಕಾರ ೮ ಪರಮಾಣುಗಳುಳ್ಳ ಅದರ ಅರ್ಧಭಾಗರೂಪವಾದ ತುಂಡಿಗೆ 'ದೇಶ' ಸಂಜ್ಞೆಯಿದೆ; ಅದೇ ಪ್ರಕಾರ ೭ ರಿಂದ ಹಿಡಿದು ೫ ಪರಮಾಣುಗಳವರೆಗಿನ ಅದರ ಯಾವುದೇ ತುಂಡಕ್ಕೂ 'ದೇಶ' ಸಂಜ್ಞೆಯಿದೆ ; ಯಾವ ಪ್ರಕಾರ ೪ ಪರಮಾಣುವುಳ್ಳ ಅದರ ಕಾಲುಭಾಗರೂಪವಾದ ತುಂಡಿಗೆ 'ಪ್ರದೇಶ' ಸಂಜ್ಞೆಯಿದೆ, ಅದೇ ಪ್ರಕಾರ ಮೂರರಿಂದ ಹಿಡಿದು ಎರಡು ಪರಮಾಣುಗಳವರೆಗಿನ ಅದರ ಯಾವುದೇ ತುಂಡಿಗೂ 'ಪ್ರದೇಶ' ಸಂಜ್ಞೆಯಿದೆ - ಈ ದೃಷ್ಟಾಂತಕ್ಕನುಸರಿಸಿ ಭೇದದಿಂದಾಗುವಂಥ ಪುದ್ಗಲವಿಕಲ್ಪಗಳನ್ನು ತಿಳಿದುಕೊಳ್ಳುವುದು.

स्पर्शरसगंधवर्णगुणविशेषैः षट्स्थानपतितवृद्धिहानिभिः पूरणगलनधर्मत्वात् स्कंधव्यक्त्याविर्भावतिरोभावाभ्यामपि च पूरणगलनोपपत्तेः परमाणवः पुद्गला इति निश्चीयंते । स्कंधास्त्वनेकपुद्गलमय्येकपर्यायत्वेन पुद्गलेभ्योऽनन्यत्वात्पुद्गला इति व्यवह्रियंते, तथैव च बादरसूक्ष्मत्वपरिणामविकल्पैः षट्प्रकारतामापद्य त्रैलोक्यरूपेण निष्पद्य स्थितवंत इति । तथा हि – बादरबादराः, बादराः, बादरसूक्ष्माः, सूक्ष्मबादराः, सूक्ष्माः, सूक्ष्मसूक्ष्माः इति । तत्र छिन्नाः स्वयं संधानासमर्थाः काष्ठपाषाणादयो बादरबादराः । छिन्नाः स्वयं संधानसमर्थाः क्षीरघृततैलतोयरसप्रभृतयो बादराः । स्थूलोपलंभा अपि छेत्तुं भेत्तुमादातुमशक्याः छायातपतमोज्योत्स्नादयो बादरसूक्ष्माः । सूक्ष्मत्वेऽपि स्थूलोपलंभाः स्पर्शरसगंधशब्दाः सूक्ष्मबादराः । सूक्ष्मत्वेऽपि हि करणानुपलभ्याः कर्मवर्गणादयःसूक्ष्माः । अत्यंतसूक्ष्माः कर्मवर्गणाभ्योऽधो द्व्यणुकस्कंधपर्यंताः सूक्ष्मसूक्ष्मा इति ।

ಟೀಕೆ :- ಸ್ಕಂಧಗಳಲ್ಲಿ 'ಪುದ್ಗಲ'ವೆಂಬ ಯಾವ ವ್ಯವಹಾರವಿದೆ ಇದು ಅದರ ಸಮರ್ಥನೆಯಿದೆ.

೧) ಯಾವವುಗಳಲ್ಲಿ ಷಟ್‌ಸ್ಥಾನಪತಿತ (ಆರು ಸ್ಥಾನಗಳಲ್ಲಿ ಸಮಾವೇಶಗೊಳ್ಳುವಂಥ) ವೃದ್ಧಿ ಹಾನಿಗಳಾಗುತ್ತವೆ ಅಂಥ ಸ್ಪರ್ಶ-ರಸ-ಗಂಧ-ವರ್ಣರೂಪ ಗುಣವಿಶೇಷಗಳ ಕಾರಣ (ಪರಮಾಣುಗಳು) 'ಪೂರಣ-ಗಲನ' - ಧರ್ಮವುಳ್ಳವುಗಳಾಗಿರುವುದರಿಂದ ಹಾಗೂ ೨) ಸ್ಕಂಧವ್ಯಕ್ತತೆಯ (ಸ್ಕಂಧಪರ್ಯಾಯದ) ಆವಿರ್ಭಾವ ಮತ್ತು ತಿರೋಭಾವದ ಅಪೇಕ್ಷೆಯಿಂದಲೂ (ಪರಮಾಣುಗಳಲ್ಲಿ) 'ಪೂರಣ-ಗಲನ' ಸಂಭವಿಸುತ್ತಿರುವುದರಿಂದ ಪರಮಾಣುಗಳು ನಿಶ್ಚಯದಿಂದ 'ಪುದ್ಗಲ'[೧]ವಿವೆ, ಸ್ಕಂಧಗಳಂತೂ ಅನೇಕ ಪುದ್ಗಲಮಯ[೨] ಒಂದು ಪರ್ಯಾಯತ್ವದ ಕಾರಣ ಪುದ್ಗಲಗಳಿಂದ ಅನನ್ಯವಾಗಿರುವುದರಿಂದ ವ್ಯವಹಾರದಿಂದ 'ಪುದ್ಗಲ'ವಿವೆ; ಮತ್ತು (ಅವು) ಬಾದರತ್ವ ಹಾಗೂ ಸೂಕ್ಷ್ಮತ್ವರೂಪವಾದ ಪರಿಣಾಮಗಳ ಭೇದಗಳಿಂದ ಆರು ಪ್ರಕಾರಗಳನ್ನು ಪಡೆದು ಮೂರು ಲೋಕರೂಪವಾಗಿ ಸ್ಥಿರವಾಗಿವೆ. ಅವು ೧) ಬಾದರಬಾದರ ; ೨) ಬಾದರ ; ೩) ಬಾದರ ಸೂಕ್ಷ್ಮ ; ೪) ಸೂಕ್ಷ್ಮಬಾದರ ; ೫) ಸೂಕ್ಷ್ಮ ಮತ್ತು ೬) ಸೂಕ್ಷ್ಮಸೂಕ್ಷ್ಮವೆಂದು ಆರು ಪ್ರಕಾರದ ಸ್ಕಂಧಗಳಾಗಿವೆ. ಅವುಗಳಲ್ಲಿ ೧) ಕಲ್ಲು, ಇಟ್ಟಿಗೆ ಮೊದಲಾದವು (ಸ್ಕಂಧಗಳು) ಒಮ್ಮೆ ಛೇದಿಸಲ್ಪಟ್ಟ ಮೇಲೆ ಪುನಃ ತಾವೇ ಒಂದಾಗುವುದಿಲ್ಲ ಅವು (ಘನ ಪದಾರ್ಥಗಳು) 'ಬಾದರಬಾದರ'ವಿವೆ; ೨) ಹಾಲು, ತುಪ್ಪ, ಎಣ್ಣೆ, ನೀರು, ರಸ ಮೊದಲಾದವು (ಸ್ಕಂಧಗಳು)

---

೧ ಯಾವುದರಲ್ಲಿ 'ಸ್ಪರ್ಶ-ರಸ-ಗಂಧ-ವರ್ಣದ ಅಪೇಕ್ಷೆಯಿಂದ ಹಾಗೂ ಸ್ಕಂಧ ಪರ್ಯಾಯದ ಅಪೇಕ್ಷೆಯಿಂದ) ಪೂರಣ ಮತ್ತು ಗಲನವಿದೆ ಅದು ಪುದ್ಗಲವಿದೆ. ಪೂರಣ ಪೂರ್ತಿ ಮಾಡುವುದು ; ತುಂಬುವುದು ; ಪೂರ್ತಿ ; ಪುಷ್ಟಿ ; ವೃದ್ಧಿ. ಗಲನ = ಸೋರುವುದು; ಕ್ಷೀಣವಾಗುವುದು ; ಕೃಶವಾಗುವುದು ; ಹಾನಿ ; ನ್ಯೂನತೆ. [೧) ಪರಮಾಣುಗಳ ವಿಶೇಷ ಗುಣಗಳಾದ ಯಾವ ಸ್ಪರ್ಶ-ರಸ-ಗಂಧ-ವರ್ಣಗಳಿವೆ ಅವುಗಳೆಲ್ಲಾಗುವಂಥ ಷಟ್‌ಸ್ಥಾನಪತಿತ ವೃದ್ಧಿಯು ಅದು ಪೂರಣವಿದೆ ಮತ್ತು ಷಟ್ ಸ್ಥಾನಪತಿತ ಹಾನಿಯು ಅದು ಗಲನವಿದೆ; ಆದುದರಿಂದ ಪರಮಾಣುಗಳು ಹೀಗೆ ಪೂರಣ-ಗಲನಧರ್ಮವುಳ್ಳವುಗಳಿವೆ. ೨) ಪರಮಾಣುಗಳಲ್ಲಿ ಸ್ಕಂಧರೂಪಪರ್ಯಾಯದ ಆವಿರ್ಭಾವವಾಗುವುದು ಅದು ಪೂರಣವಿದೆ ಮತ್ತು ತಿರೋಭಾವವಾಗುವುದು ಅದು ಗಲನವಿದೆ ; ಪರಮಾಣುಗಳಲ್ಲಿ ಈ ಪ್ರಕಾರವಾಗಿಯೂ ಪೂರಣ-ಗಲನಗಳು ಸಂಭವಿಸುತ್ತವೆ.]

೨. ಸ್ಕಂಧವು ಅನೇಕ ಪರಮಾಣುಮಯವಾದ ಒಂದು ಪರ್ಯಾಯವಿರುವುದರಿಂದ ಅದು ಪರಮಾಣುಗಳಿಂದ ಅನನ್ಯವಿದೆ ; ಮತ್ತು ಪರಮಾಣುಗಳಂತೂ ಪುದ್ಗಲವಿವೆ ; ಅದಕ್ಕಾಗಿ ಸ್ಕಂಧವೂ ವ್ಯವಹಾರದಿಂದ ಪುದ್ಗಲವಿದೆ.

ಸವ್ವೇಸಿಂ ಖಂಧಾಣಂ ಜೋ ಅಂತೋ ತಂ ವಿಯಾಣ ಪರಮಾಣೂ ।
ಸೋ ಸಸ್ಸದೋ ಅಸದ್ದೋ ಏಕ್ಕೋ ಅವಿಭಾಗೀ ಮುತ್ತಿಭವ್ವೋ ॥೭೭॥

ಸರ್ವೇಷಾಂ ಸ್ಕಂಧಾನಾಂ ಯೋಽಂತ್ಯಸ್ತಂ ವಿಜಾನೀಹಿ ಪರಮಾಣುಮ್ ।
ಸ ಶಾಶ್ವತೋಽಶಬ್ದಃ ಏಕೋಽವಿಭಾಗೀ ಮೂರ್ತಿಭವಃ ॥೭೭॥

ಪರಮಾಣುವ್ಯಾಖ್ಯೇಯಮ್ ।

ಉಕ್ತಾನಾಂ ಸ್ಕಂಧರೂಪಪರ್ಯಾಯಾಣಾಂ ಯೋಽಂತ್ಯೋ ಭೇದಃ ಸ ಪರಮಾಣುಃ । ಸ ತು ಪುನರ್ವಿಭಾಗಾಭಾವಾದವಿಭಾಗೀ, ನಿರ್ವಿಭಾಗೈಕಪ್ರದೇಶತ್ವಾದೇಕಃ, ಮೂರ್ತದ್ರವ್ಯತ್ವೇನ ಸದಾಪ್ಯವಿನಶ್ವರತ್ವಾನ್ನಿತ್ಯಃ, ಅನಾದಿನಿಧನರೂಪಾದಿಪರಿಣಾಮೋತ್ಪನ್ನತ್ವಾನ್ಮೂರ್ತಿಭವಃ, ರೂಪಾದಿಪರಿಣಾಮೋತ್ಪನ್ನತ್ವೇಽಪಿ ಶಬ್ದಸ್ಯ ಪರಮಾಣುಗುಣತ್ವಾಭಾವಾತ್ಪುದ್ಗಲಸ್ಕಂಧಪರ್ಯಾಯತ್ವೇನ ವಕ್ಷ್ಯಮಾಣತ್ವಾಚ್ಚಾಶಬ್ದೋ ನಿಶ್ಚೀಯತ ಇತಿ ।

ಒಮ್ಮೆ ಭೇದಿಸಲ್ಪಟ್ಟ ಮೇಲೆ ತಾವೇ ಒಂದಾಗುತ್ತವೆ ಅವು (ಪ್ರವಾಹೀ ಪದಾರ್ಥಗಳು) 'ಬಾದರ'ವಿವೆ. ೩) ನೆರಳು, ಕತ್ತಲೆ, ಬಿಸಿಲು, ಬೆಳದಿಂಗಳು ಮೊದಲಾದವು (ಸ್ಕಂಧಗಳು) ಸ್ಥೂಲವಾಗಿ ತಿಳಿದುಬಂದರೂ ಅವುಗಳ ಭೇದನ, ಭೇದನ ಅಥವಾ (ಕೈಗಳಿಂದ) ಗ್ರಹಣ ಮಾಡಲಾಗುವುದಿಲ್ಲ ಅವು 'ಬಾದರಸೂಕ್ಷ್ಮ'ವಿವೆ ; ೪) ಸ್ಪರ್ಶ-ರಸ-ಗಂಧ-ಶಬ್ದಗಳು ಸೂಕ್ಷ್ಮವಾಗಿದ್ದರೂ ಸ್ಥೂಲವಾಗಿ ತಿಳಿದು ಬರುತ್ತವೆ (ಎಂದರೆ ಕಣ್ಣುಗಳನ್ನು ಬಿಟ್ಟು ಉಳಿದ ನಾಲ್ಕು ಇಂದ್ರಿಯಗಳ ವಿಷಯಭೂತವಾದ ಸ್ಕಂಧಗಳು ಕಣ್ಣುಗಳಿಂದ ಕಂಡು ಬಾರದಿದ್ದರೂ ಅವನ್ನು ಸ್ಪರ್ಶನೇಂದ್ರಿಯದಿಂದ ಸ್ಪರ್ಶ ಮಾಡಲಾಗುತ್ತದೆ, ನಾಲಿಗೆಯಿಂದ ಅವುಗಳ ಸ್ವಾದ ಪಡೆಯಲಾಗುತ್ತದೆ, ಮೂಗಿನಿಂದ ಮೂಸಿಸಲಾಗುತ್ತದೆ ಮತ್ತು ಕಿವಿಯಿಂದ ಕೇಳಲಾಗುತ್ತದೆ)ಅವು 'ಸೂಕ್ಷ್ಮಬಾದರ'ವಿವೆ ; ೫) ಕರ್ಮವರ್ಗಣ ಮೊದಲಾದವು (ಸ್ಕಂಧಗಳು) ಅವಕ್ಕೆ ಸೂಕ್ಷ್ಮತೆಯಿದೆ ಮತ್ತು ಅವು ಇಂದ್ರಿಯಗಳಿಂದ ತಿಳಿದುಬರುವಂಥವುಗಳಿಲ್ಲ ಅವು 'ಸೂಕ್ಷ್ಮ'ವಿವೆ ; ೬) ಕರ್ಮವರ್ಗಣದಿಂದ ಕೆಳಗಿನವು (ಕರ್ಮವರ್ಗಣಾತೀತ) ದ್ವಿಅಣುಕ-ಸ್ಕಂಧದವರೆಗಿನವು (ಸ್ಕಂಧಗಳು) ಅತ್ಯಂತ ಸೂಕ್ಷ್ಮವಿವೆ ಅವು 'ಸೂಕ್ಷ್ಮಸೂಕ್ಷ್ಮ'ವಿವೆ.

ಗಾಥೆ - ೭೭

ಗಾಥಾರ್ಥ :- [ಸವ್ವೇಸಿಂ ಖಂಧಾಣಂ] ಎಲ್ಲ ಸ್ಕಂಧಗಳ [ಜೋ ಅಂತೋ] ಯಾವ ಅಂತಿಮ ಭಾಗವಿದೆ [ತಂ] ಅದನ್ನು [ಪರಮಾಣೂ ವಿಯಾಣ] ಪರಮಾಣುವೆಂದು ತಿಳಿಯುವುದು. [ಸೋ] ಅದು [ಅವಿಭಾಗೀ] ಅವಿಭಾಗಿಯೂ, [ಏಕ್ಕೋ] ಏಕವೂ, [ಸಸ್ಸದೋ] ಶಾಶ್ವತವೂ, [ಮುತ್ತಿಭವ್ವೋ] ಮೂರ್ತಿ ಪ್ರಭವವೂ (ಮೂರ್ತರೂಪದಿಂದ ಉತ್ಪನ್ನವಾಗುವುದೂ) ಮತ್ತು [ಅಸದ್ದೋ] ಅಶಬ್ದವೂ ಆಗಿದೆ.

ಟೀಕೆ :- ಇದು ಪರಮಾಣುವಿನ ವ್ಯಾಖ್ಯೆಯಿದೆ.

ಎಲ್ಲ ಸ್ಕಂಧಗಳಾವಂತಿಮಭಾಗವಿದೆಯದನು ಪರಮಾಣುವೆಂದರಿವುದು ।
ಅಲ್ಲದೆ ಅದು ಏಕ, ಅವಿಭಾಗಿ, ಶಾಶ್ವತ, ಮೂರ್ತಪ್ರಭವ ಮೇಣಶಬ್ದವಿದೆ ॥೭೭॥

ಆದೇಸಮೇತ್ತಮುತ್ತೋ ಧಾದುಚದುಕ್ಕಸ್ಸ ಕಾರಣಂ ಜೋ ದು ।
ಸೋ ಣೇಓ ಪರಮಾಣೂ ಪರಿಣಾಮಗುಣೋ ಸಯಮಸದ್ದೋ ॥೭೮॥

ಆದೇಶಮಾತ್ರಮೂರ್ತಃ ಧಾತುಚತುಷ್ಕಸ್ಯ ಕಾರಣಂ ಯಸ್ತು ।
ಸ ಜ್ಞೇಯಃ ಪರಮಾಣುಃ ಪರಿಣಾಮಗುಣಃ ಸ್ವಯಮಶಬ್ದಃ ॥೭೮॥

ಪರಮಾಣೂನಾಂ ಜಾತ್ಯಂತರತ್ವನಿರಾಸೋಯಮ್ ।

ಪರಮಾಣೋರ್ಹಿ ಮೂರ್ತತ್ವನಿಬಂಧನಭೂತಾಃ ಸ್ಪರ್ಶರಸಗಂಧವರ್ಣಾ ಆದೇಶಮಾತ್ರೇಣೈವ ಭಿದ್ಯಂತೇ; ವಸ್ತುತಸ್ತು ಯಥಾ ತಸ್ಯ ಸ ಏವ ಪ್ರದೇಶ ಆದಿಃ, ಸ ಏವ ಮಧ್ಯಂ, ಸ ಏವಾಂತಃ ಇತಿ, ಏವಂ ದ್ರವ್ಯಗುಣಯೋರ-ವಿಭಕ್ತಪ್ರದೇಶತ್ವಾತ್ ಯ ಏವ ಪರಮಾಣೋಃ ಪ್ರದೇಶಃ, ಸ ಏವ ಸ್ಪರ್ಶಸ್ಯ, ಸ ಏವ ರಸಸ್ಯ, ಸ ಏವ ಗಂಧಸ್ಯ, ಸ ಏವ ರೂಪಸ್ಯೇತಿ । ತತಃ ಕ್ವಚಿತ್ಪರಮಾಣೌ ಗಂಧಗುಣೇ, ಕ್ವಚಿತ್ಗಂಧರಸಗುಣಯೋಃ, ಕ್ವಚಿತ್ ಗಂಧರಸರೂಪ-

---

ಮೊದಲು ಹೇಳಿದ ಪ್ರಕಾರ ಸ್ಕಂಧರೂಪ ಪರ್ಯಾಯಗಳ ಯಾವ ಅಂತಿಮ ಭೇದವಿದೆ(-ಎಲ್ಲಕ್ಕಿಂತ ಚಿಕ್ಕ ಅಂಶವಿದೆ)ಅದು ಪರಮಾಣುವಿದೆ. ಮತ್ತು ಅದಂತೂ ವಿಭಾಗದ ಅಭಾವದ ಕಾರಣವಾಗಿ ಅವಿಭಾಗಿಯಿದೆ; ನಿರ್ವಿಭಾಗ-ಏಕಪ್ರದೇಶಿಯಾಗಿರುವುದರಿಂದ ಏಕವಿದೆ ; ಮೂರ್ತದ್ರವ್ಯರೂಪದಿಂದ ಯಾವಾಗಲೂ ಅವಿನಾಶಿ-ಯಾಗಿರುವುದರಿಂದ ನಿತ್ಯವಿದೆ ; ಅನಾದಿ-ಅನಂತರೂಪ ಮೊದಲಾದವುಗಳ ಪರಿಣಾಮದಿಂದ ಉತ್ಪನ್ನವಾಗುವ ಕಾರಣ ಮೂರ್ತಿಪ್ರಭವ[೧]ವಿದೆ ; ಮತ್ತು ರೂಪಾದಿಗಳ ಪರಿಣಾಮದಿಂದ ಉತ್ಪನ್ನವಾದರೂ ಕೂಡ ಅಶಬ್ದವಿದೆಯೆಂಬುದು ನಿಶ್ಚಿತವಿದೆ, ಏಕೆಂದರೆ ಶಬ್ದವು ಪರಮಾಣುವಿನ ಗುಣವಲ್ಲ ಮತ್ತು ಅದರ (ಶಬ್ದದ) ಪುದ್ಗಲ ಸ್ಕಂಧಪರ್ಯಾಯ ರೂಪದಿಂದ ಈಗ (೭೯ ನೆಯ ಗಾಥೆಯಲ್ಲಿ)ಕಥನವಿದೆ.

ಗಾಥೆ - ೭೮

ಗಾಥಾರ್ಥ :- [ಜೋ ದು] ಯಾವುದು [ಆದೇಸಮೇತ್ತಮುತ್ತೋ] ಆದೇಶ ಮಾತ್ರದಿಂದ ಮೂರ್ತವಿದೆ (ಎಂದರೆ ಕೇವಲ ಭೇದವಿವಕ್ಷೆಯಿಂದ ಮೂರ್ತತ್ವವುಳ್ಳದ್ದೆಂದು ಕರೆಯಿಸಿಕೊಳ್ಳುತ್ತದೆ) ಮತ್ತು [ಧಾದುಚದುಕ್ಕಸ್ಸ ಕಾರಣಂ] ಯಾವುದು (ಪೃಥ್ವೀ ಮೊದಲಾದ) ನಾಲ್ಕು ಧಾತುಗಳಿಗೆ ಕಾರಣವಿದೆ [ಸೋ] ಅದು [ಪರಮಾಣೂ ಣೇಓ] ಪರಮಾಣುವೆಂದು ತಿಳಿಯುವುದು. [ಪರಿಣಾಮಗುಣೋ] ಏಕೆಂದರೆ ಅದು ಪರಿಣಾಮಗುಣವುಳ್ಳದ್ದಿದೆ ಮತ್ತು [ಸಯಮಸದ್ದೋ] ತಾನು ಅಶಬ್ದವಿದೆ.

ಟೀಕೆ :- ಇದು ಪರಮಾಣವು ಬೇರೆ-ಬೇರೆ ಜಾತಿಯದಿರುವುದರ ಖಂಡನೆಯಿದೆ.

ಆದೇಶಮಾತ್ರದಿಂಮೂರ್ತವಿದೆ, ನಾಲ್ಕು ಧಾತುಗಳ ಕಾರಣವಿದೆ ಯಾವುದು ।
ಅದು ಪರಮಾಣುವೆಂದರಿವುದು ಏಕೆಂದರದು ಪರಿಣಾಮಿತಾನಶಬ್ದವಿದೆ ॥೭೮॥

---

೧ ಮೂರ್ತಿಪ್ರಭವ = ಮೂರ್ತಸ್ವರೂಪದಿಂದ ಉತ್ಪನ್ನವಾಗುವಂಥದು ಎಂದರೆ ರೂಪ-ಗಂಧ-ರಸ-ಸ್ಪರ್ಶದ ಪರಿಣಾಮ ರೂಪದಿಂದ ಯಾವುದರ ಉತ್ಪಾದವಾಗುತ್ತದೆ ಅಂಥದು (ಮೂರ್ತಿ=ಮೂರ್ತತ್ವ).

ಗುಣೇಷು ಅಪಕೃಷ್ಯಮಾಣೇಷು ತದವಿಭಕ್ತಪ್ರದೇಶಃ ಪರಮಾಣುರೇವ ವಿನಶ್ಯತೀತಿ । ನ ತದಪಕರ್ಷೋ ಯುಕ್ತಃ ತತಃ ಪೃಥಿವ್ಯಪ್ತೇಜೋವಾಯುರೂಪಸ್ಯ ಧಾತುಚತುಷ್ಕಸ್ಯೈವ ಏವ ಪರಮಾಣುಃ ಕಾರಣಂ ಪರಿಣಾಮವಶಾತ್ । ವಿಚಿತ್ರೋ ಹಿ ಪರಮಾಣೋಃ ಪರಿಣಾಮಗುಣಃ ಕ್ವಚಿತ್ಕಸ್ಯಚಿದ್ಗುಣಸ್ಯ ವ್ಯಕ್ತಾವ್ಯಕ್ತತ್ವೇನ ವಿಚಿತ್ರಾಂ ಪರಿಣತಿಮಾದಧಾತಿ । ಯಥಾ ಚ ತಸ್ಯ ಪರಿಣಾಮವಶಾದವ್ಯಕ್ತೋ ಗಂಧಾದಿಗುಣೋಽಸ್ತೀತಿ ಪ್ರತಿಜ್ಞಾಯತೇ, ನ ತಥಾ ಶಬ್ದೋಽಪ್ಯವ್ಯಕ್ತೋಽಸ್ತೀತಿ ಜ್ಞಾತುಂ ಶಕ್ಯತೇ ತಸ್ಯೈಕಪ್ರದೇಶಸ್ಯಾನೇಕಪ್ರದೇಶಾತ್ಮಕೇನ ಶಬ್ದೇನ ಸಹೈಕತ್ವವಿರೋಧಾದಿತಿ ।

ಪರಮಾಣುವಿನಿಂದ ಮೂರ್ತತ್ವಕ್ಕೆ ಕಾರಣಭೂತಗಳಾದ ಸ್ಪರ್ಶ-ರಸ-ಗಂಧ ವರ್ಣಗಳನ್ನು ಆದೇಶ[೧] ಮಾತ್ರದಿಂದಲೇ ಭೇದಮಾಡಲಾಗುತ್ತದೆ ; ನಿಜವಾಗಿಯಂತೂ ಯಾವ ಪ್ರಕಾರ ಪರಮಾಣುವಿನದು ಅದೇ ಪ್ರದೇಶ ಆದಿ ಇದೆ, ಅದೇ ಮಧ್ಯವಿದೆ ಮತ್ತು ಅದೇ ಅಂತ್ಯವಿದೆ; ಅದೇ ಪ್ರಕಾರ ದ್ರವ್ಯ ಮತ್ತು ಗುಣದ ಪ್ರದೇಶವು ಅಭಿನ್ನವಿರುವುದರಿಂದ ಯಾವುದು ಪರಮಾಣುವಿನ ಪ್ರದೇಶವಿದೆ, ಅದೇ ಸ್ಪರ್ಶದ್ದಿದೆ, ಅದೇ ಗಂಧದ್ದಿದೆ, ಅದೇ ರೂಪದ್ದಿದೆ ಅದಕ್ಕಾಗಿ ಯಾವುದೇ ಪರಮಾಣುವಿನಲ್ಲಿ ಗಂಧ ಗುಣವು ಕಡಿಮೆಯಿದ್ದರೆ, ಯಾವುದೇ ಪರಮಾಣುವಿನಲ್ಲಿ ಗಂಧಗುಣ ಮತ್ತು ರಸಗುಣವು ಕಡಿಮೆಯಿದ್ದರೆ ಯಾವುದೇ ಪರಮಾಣುವಿನಲ್ಲಿ ಗಂಧಗುಣ, ರಸಗುಣ ಮತ್ತು ರೂಪಗುಣಗಳು ಕಡಿಮೆಯಿದ್ದರೆ ಆ ಗುಣದಿಂದ ಅಭಿನ್ನ-ಪ್ರದೇಶಿಯಾದ ಪರಮಾಣುವೇ ವಿನಷ್ಟವಾಗಬಹುದು. ಆದ್ದರಿಂದ ಆ ಗುಣದ ನ್ಯೂನತೆಯು ಯುಕ್ತ (ಉಚಿತ)ವಲ್ಲ. (ಯಾವುದೇ ಪರಮಾಣುವಿನಲ್ಲಿ ಒಂದು ಗುಣವೂ ಕಡಿಮೆಯಾದರೆ ಆ ಗುಣದೊಡನೆ ಅಭಿನ್ನ ಪ್ರದೇಶಿಯಾದ ಪರಮಾಣುವೇ ನಾಶವಾಗಿ ಬಿಡಬಹುದು ; ಅದಕ್ಕಾಗಿ ಎಲ್ಲ ಪರಮಾಣುಗಳು ಸಮಾನ ಗುಣವುಳ್ಳವೇ ಇವೆ, ಎಂದರೆ ಅವು ಬೇರೆ-ಬೇರೆ ಜಾತಿಯವಿಲ್ಲ.) ಅದಕ್ಕಾಗಿ ಒಂದೇ ಪರಮಾಣುವು ತನ್ನ ಪರಿಣಾಮದ ಕಾರಣವಾಗಿ ಪೃಥ್ವೀ, ಜಲ, ಅಗ್ನಿ ಮತ್ತು ವಾಯುರೂಪ ನಾಲ್ಕು ಧಾತುಗಳಿಗೆ ಕಾರಣವಿದೆ ; (ಎಂದರೆ ಪರಮಾಣುಗಳು ಒಂದೇ ಜಾತಿಯವಿದ್ದರೂ ಅವು ಪರಿಣಾಮದ ಕಾರಣವಾಗಿ ನಾಲ್ಕು ಧಾತುಗಳಿಗೆ ಕಾರಣವಾಗುತ್ತವೆ;) ಏಕೆಂದರೆ ವಿಚಿತ್ರವಾದಂಥ ಪರಮಾಣುವಿನ ಪರಿಣಾಮಗುಣವು ಎಲ್ಲೋ ಯಾವುದೋ ಗುಣದ ವ್ಯಕ್ತಾವ್ಯಕ್ತತೆ[೨]ಯಿಂದ ವಿಚಿತ್ರ ಪರಿಣತಿಯನ್ನು ಧಾರಣ ಮಾಡುತ್ತದೆ.

ಮತ್ತು ಯಾವ ಪ್ರಕಾರ ಪರಮಾಣುವಿಗೆ ಪರಿಣಾಮದ ಕಾರಣವಾಗಿ ಅವ್ಯಕ್ತ[೩]ವಾದ ಗಂಧಾದಿ ಗುಣಗಳಿವೆಯೆಂದು ತಿಳಿದುಬರುತ್ತದೆ ಅದೇ ಪ್ರಕಾರ ಶಬ್ದವೂ ಅವ್ಯಕ್ತವಿದೆಯೆಂದು ತಿಳಿದುಬರುವುದಿಲ್ಲ. ಏಕೆಂದರೆ ಏಕಪ್ರದೇಶಿಯಾದ ಪರಮಾಣುವಿಗೆ ಅನೇಕ ಪ್ರದೇಶಾತ್ಮಕವಾದ ಶಬ್ದದೊಡನೆ ಏಕತ್ವವಿರುವಲ್ಲಿ ವಿರೋಧವಿದೆ.

---

೧. ಆದೇಶ = ಕಥನ. [ಕೇವಲ ಭೇದ ಕಥನದ ಮುಖಾಂತರವೇ ಪರಮಾಣುವಿನಿಂದ ಸ್ಪರ್ಶ-ರಸ-ಗಂಧ-ವರ್ಣಗಳ ಭೇದ ಮಾಡಲಾಗುತ್ತದೆ ; ನಿಜವಾಗಿಯಂತೂ ಪರಮಾಣುವಿನಿಂದ ಸ್ಪರ್ಶ-ರಸ-ಗಂಧ-ವರ್ಣಗಳ ಅಭೇದವೇ ಇದೆ.]

೨. ವ್ಯಕ್ತಾವ್ಯಕ್ತತೆ = ವ್ಯಕ್ತತೆ ಅಥವಾ ಅವ್ಯಕ್ತತೆ ; ಪ್ರಕಟತೆ ಅಥವಾ ಅಪ್ರಕಟತೆ. [ಪೃಥ್ವಿಯಲ್ಲಿ ಸ್ಪರ್ಶ, ರಸ, ಗಂಧ ಮತ್ತು ವರ್ಣ - ಇವು ನಾಲ್ಕು ಗುಣಗಳು ವ್ಯಕ್ತ (ಎಂದರೆ ವ್ಯಕ್ತರೂಪದಿಂದ ಪರಿಣತ)ವಿರುತ್ತವೆ ; ನೀರಿನಲ್ಲಿ ಸ್ಪರ್ಶ, ರಸ ಮತ್ತು ವರ್ಣಗಳು ವ್ಯಕ್ತವಿರುತ್ತವೆ ಮತ್ತುಗಂಧವು ಅವ್ಯಕ್ತವಿರುತ್ತದೆ ; ಬೆಂಕಿಯಲ್ಲಿ ಸ್ಪರ್ಶ ಮತ್ತು ವರ್ಣಗಳು ವ್ಯಕ್ತವಿರುತ್ತವೆ ಮತ್ತು ಉಳಿದೆರಡು ಅವ್ಯಕ್ತವಿರುತ್ತವೆ ; ಗಾಳಿಯಲ್ಲಿ ಸ್ಪರ್ಶವು ವ್ಯಕ್ತವಿರುತ್ತದೆ ಉಳಿದ ಮೂರು ಅವ್ಯಕ್ತವಿರುತ್ತವೆ]

೩. ಯಾವ ಪ್ರಕಾರ ಪರಮಾಣುವಿನಲ್ಲಿ ಗಂಧಾದಿಗುಣಗಳು ಪೂರ್ಣ ಅವ್ಯಕ್ತರೂಪದಿಂದಿದ್ದರೂ ಅವಶ್ಯವಾಗಿ ಇದ್ದೇ ಇರುತ್ತವೆ; ಅದೇ ಪ್ರಕಾರ ಪರಮಾಣುವಿನಲ್ಲಿ ಶಬ್ದವೂ ಅವ್ಯಕ್ತರೂಪದಿಂದ ಇರುತ್ತಿರಬಹುದು ಎಂದಿಷ್ಟೇ ಅಲ್ಲ, ಶಬ್ದವಂತೂ ಪರಮಾಣುವಿನಲ್ಲಿ ವ್ಯಕ್ತರೂಪದಿಂದ ಅಥವಾ ಅವ್ಯಕ್ತರೂಪದಿಂದ ಒಂದಿಷ್ಟೂ ಇರುವುದೇ ಇಲ್ಲ.

ಸದ್ದೋ ಖಂಧಪ್ಪಭವೋ ಖಂಧೋ ಪರಮಾಣುಸಂಗಸಂಘಾದೋ ।
ಪುಟ್ಠೇಸು ತೇಸು ಜಾಯದಿ ಸದ್ದೋ ಉಪ್ಪಾದಿಗೋ ಣಿಯದೋ ॥೭೯॥

ಶಬ್ದಃ ಸ್ಕಂಧಪ್ರಭವಃ ಸ್ಕಂಧಃ ಪರಮಾಣುಸಂಗಸಂಘಾತಃ ।
ಸ್ಪೃಷ್ಟೇಷು ತೇಷು ಜಾಯತೇ ಶಬ್ದ ಉತ್ಪಾದಿಕೋ ನಿಯತಃ ॥೭೯॥

ಶಬ್ದಸ್ಯ ಪುದ್ಗಲಸ್ಕಂಧಪರ್ಯಾಯತ್ವಖ್ಯಾಪನಮೇತತ್ ।

ಇಹ ಹಿ ಬಾಹ್ಯಶ್ರವಣೇಂದ್ರಿಯಾವಲಂಬಿತೋ ಭಾವೇಂದ್ರಿಯಪರಿಚ್ಛೇದ್ಯೋ ಧ್ವನಿಃ ಶಬ್ದಃ । ಸ ಖಲು ಸ್ವರೂಪೇಣಾನಂತಪರಮಾಣೂನಾಮೇಕಸ್ಕಂಧೋ ನಾಮ ಪರ್ಯಾಯಃ । ಬಹಿರಂಗಸಾಧನೀಭೂತಮಹಾ-ಸ್ಕಂಧೇಭ್ಯಃ ತಥಾವಿಧಪರಿಣಾಮೇನ ಸಮುತ್ಪದ್ಯಮಾನತ್ವಾತ್ ಸ್ಕಂಧಪ್ರಭವಃ, ಯತೋ ಹಿ ಪರಸ್ಪರಾಭಿಹತೇಷು ಮಹಾಸ್ಕಂಧೇಷು ಶಬ್ದಃ ಸಮುಪಜಾಯತೇ । ಕಿಂ ಚ ಸ್ವಭಾವನಿರ್ವೃತ್ತಾಭಿರೇವಾನಂತಪರಮಾಣುಮಯೀಭಿಃ ಶಬ್ದಯೋಗ್ಯವರ್ಗಣಾಭಿರನ್ಯೋನ್ಯಮನುಪ್ರವಿಶ್ಯ ಸಮಂತತೋಽಭಿವ್ಯಾಪ್ಯ ಪೂರಿತೇಽಪಿ ಸಕಲೇ ಲೋಕೇ ಯತ್ರ ಯತ್ರ ಬಹಿರಂಗಕಾರಣಸಾಮಗ್ರೀ ಸಮುದೇತಿ ತತ್ರ ತತ್ರ ತಾಃ ಶಬ್ದತ್ವೇನ ಸ್ವಯಂ ವ್ಯಪರಿಣಮಂತ ಇತಿ ಶಬ್ದಸ್ಯ ನಿಯತಮುತ್ಪಾದ್ಯತ್ವಾತ್ ಸ್ಕಂಧಪ್ರಭವತ್ವಮಿತಿ ।

ಗಾಥೆ - ೭೯

ಗಾಥಾರ್ಥ ಃ- [ಸದ್ದೋ ಖಂಧಪ್ಪಭವ] ಶಬ್ದವು ಸ್ಕಂಧಜನ್ಯವಿದೆ. [ಖಂಧೋ ಪರಮಾಣು ಸಂಗಸಂಘಾದೋ] ಸ್ಕಂಧವು ಪರಮಾಣುದಲದ ಸಂಘಾತವಿದೆ, [ತೇಸು ಪುಟ್ಠೇಸು] ಮತ್ತು ಆ ಸ್ಕಂಧಗಳು ಸ್ಪರ್ಶಿತವಾಗುವುದರಿಂದ - ಅಪ್ಪಳಿಸುವುದರಿಂದ [ಸದ್ದೋ ಜಾಯದಿ] ಶಬ್ದವು ಉತ್ಪನ್ನವಾಗುತ್ತದೆ; [ಣಿಯದೋ ಉಪ್ಪಾದಿಗೋ] ಈ ಪ್ರಕಾರ ಅದು (ಶಬ್ದವು) ನಿಯತರೂಪದಿಂದ ಉತ್ಪಾದ್ಯವಿದೆ.

ಟೀಕೆ ಃ- ಶಬ್ದವು ಪುದ್ಗಲಸ್ಕಂಧ ಪರ್ಯಾಯವಿದೆಯೆಂದು ಇಲ್ಲಿ ದರ್ಶಿಸಲಾಗಿದೆ.

ಈ ಲೋಕದಲ್ಲಿ ಬಾಹ್ಯ ಶ್ರವಣೇಂದ್ರಿಯ[೧] ಮುಖಾಂತರ ಅವಲಂಬಿಸಿದ, ಭಾವೇಂದ್ರಿಯದ ಮುಖಾಂತರ ತಿಳಿಯಲು ಯೋಗ್ಯವಾದಂಥ ಯಾವ ಧ್ವನಿಯಿದೆ ಅದು ಶಬ್ದವಿದೆ. ಅದು (ಶಬ್ದವು) ವಾಸ್ತವಿಕವಾಗಿ ಸ್ವರೂಪದಿಂದ ಅನಂತಪರಮಾಣುಗಳ ಒಂದು ಸ್ಕಂಧರೂಪವಾದ ಪರ್ಯಾಯವಿದೆ. ಬಹಿರಂಗ ಸಾಧನಭೂತ (ಬಾಹ್ಯ-

---

ಸ್ಕಂಧೋತ್ಪನ್ನಶಬ್ದಗಳಿದ್ದು ಸ್ಕಂಧಗಳು ಪರಮಾಣುಸಮೂಹಸಂಘಾತವಿವೆ ।
ಸ್ಕಂಧಾಭಿಘಾತದಿಂದ ಶಬ್ದಜನಿಸುವವು ಅವು ನಿಯಮದಿಂದುತ್ಪಾದ್ಯವಿವೆ ॥೭೯॥

---

೧. ಶಬ್ದವು ಶ್ರವಣೇಂದ್ರಿಯದ ವಿಷಯವಿರುವುದರಿಂದ ಅದು ಮೂರ್ತವಿದೆ. ಅದಕ್ಕನುಸರಿಸಿ ಅದೆಷ್ಟೋ ಜನರು ಮನ್ನಿಸುವಂತೆ ಶಬ್ದವು ಆಕಾಶದ ಗುಣವಲ್ಲ, ಏಕೆಂದರೆ ಅಮೂರ್ತ ಆಕಾಶದ ಅಮೂರ್ತಗುಣವು ಇಂದ್ರಿಯದ ವಿಷಯವಾಗುವ ಸಾಧ್ಯತೆಯಿಲ್ಲ.

ಣೇಚ್ಛೋ ಣಾಣವಗಾಸೋ ಣ ಸಾವಗಾಸೋ ಪದೇಸದೋ ಭೇದಾ ।
ಖಂಧಾಣಂ ಪಿ ಯ ಕತ್ತಾ ಪವಿಹತ್ತಾ ಕಾಲಸಂಖಾಣಂ ॥೮೦॥

ನಿತ್ಯೋ ನಾನವಕಾಶೋ ನ ಸಾವಕಾಶಃ ಪ್ರದೇಶತೋ ಭೇತ್ತಾ ।
ಸ್ಕಂಧಾನಾಮಪಿ ಚ ಕರ್ತಾ ಪ್ರವಿಭಕ್ತಾ ಕಾಲಸಂಖ್ಯಾಯಾಃ ॥೮೦॥

ಕಾರಣಭೂತ)ವಾದ ಮಹಾಸ್ಕಂಧಗಳ ಮುಖಾಂತರ ತಥಾವಿಧ ಪರಿಣಾಮರೂಪ (ಶಬ್ದಪರಿಣಾಮರೂಪ)ವಾಗಿ ಉತ್ಪನ್ನವಾಗುವುದರಿಂದ ಅದು ಸ್ಕಂಧಜನ್ಯವಿದೆ, ಏಕೆಂದರೆ ಮಹಾಸ್ಕಂಧಗಳು ಪರಸ್ಪರ ಅಪ್ಪಳಿಸುವುದರಿಂದ ಶಬ್ದವು ಉತ್ಪನ್ನವಾಗುತ್ತದೆ. ಮತ್ತೆ ಈ ಮಾತನ್ನು ವಿಶೇಷವಾಗಿ ತಿಳಿಸಿಕೊಡಲಾಗುತ್ತದೆ - ಒಂದು ಇನ್ನೊಂದರಲ್ಲಿ ಪ್ರವಿಷ್ಟವಾಗಿ ಎಲ್ಲೆಡೆಗೆ ವ್ಯಾಪ್ತವಾಗಿ ಸ್ಥಿರವಾದಂಥ ಯಾವ ಸ್ವಭಾವನಿಷ್ಪನ್ನ (-ತನ್ನ ಸ್ವಭಾವದಿಂದಲೇ ನಿರ್ಮಿತ), ಅನಂತ ಪರಮಾಣುಮಯ ಶಬ್ದಯೋಗ್ಯ-ವರ್ಗಣೆಗಳಿಂದ ಸಂಪೂರ್ಣ ಲೋಕವು ಪರಿಪೂರ್ಣವಾದರೂ ಎಲ್ಲಿ-ಎಲ್ಲಿ ಬಹಿರಂಗ ಕಾರಣ-ಸಾಮಗ್ರಿಗಳು ಉದಿತವಾಗುತ್ತವೆ ಅಲ್ಲಿ - ಅಲ್ಲಿ ಆ ವರ್ಗಣೆಗಳು ಶಬ್ದ[೧] ರೂಪದಿಂದ ಸ್ವತಃ ಪರಿಣಮಿಸುತ್ತವೆ ; ಈ ಪ್ರಕಾರವಾಗಿ ಶಬ್ದವು ನಿಯತರೂಪದಿಂದ (ಅವಶ್ಯವಾಗಿ) ಉತ್ಪಾದ್ಯ[೨]ವಿದೆ; ಅದಕ್ಕಾಗಿ ಅದು ಸ್ಕಂಧ[೩] ಜನ್ಯವಿದೆ.

ಪ್ರದೇಶದಿಂದ ಅನವಕಾಶವಿಲ್ಲ, ಸಾವಕಾಶವಿಲ್ಲ ಪರಮಾಣು ನಿತ್ಯವಿದೆ ।
ಸ್ಕಂಧಗಳ ಭೇದಿಸುವ ರಚಿಯಿಸುವಮೇಣ್ಕಾಲ-ಸಂಖ್ಯೆಯ ಪ್ರವಿಭಾಗಿಯಿದೆ ॥೮೦॥

---

೧. ಶಬ್ದದಲ್ಲಿ ೧) ಪ್ರಾಯೋಗಿಕ ಮತ್ತು ೨) ವೈಶ್ರಸಿಕವೆಂದು ಎರಡು ಪ್ರಕಾರಗಳಿವೆ. ಪುರುಷ ಮೊದಲಾದವರ ಪ್ರಯೋಗದಿಂದ ಉತ್ಪನ್ನವಾಗುವಂಥ ಶಬ್ದವು ಪ್ರಾಯೋಗಿಕವಿದ್ದರೆ ಮೇಘಾದಿಗಳಿಂದ ಉತ್ಪನ್ನವಾಗುವಂಥ ಶಬ್ದವು ವೈಶ್ರಸಿಕವಿದೆ.

ಅಥವಾ ೧. ಭಾಷಾತ್ಮಕ ಮತ್ತು ೨) ಅಭಾಷಾತ್ಮಕವೆಂದು, ಶಬ್ದದಲ್ಲಿ ಎರಡು ಪ್ರಕಾರಗಳಿವೆ. ಅವುಗಳಲ್ಲಿ ಅಕ್ಷರಾತ್ಮಕ ಮತ್ತು ಅನಕ್ಷರಾತ್ಮಕವೆಂದು ಭಾಷಾತ್ಮಕ ಶಬ್ದದಲ್ಲಿ ಎರಡು ವಿಧವಿವೆ. ಸಂಸ್ಕೃತ, ಪ್ರಾಕೃತ ಮೊದಲಾದ ಭಾಷೆಯರೂಪದಿಂದ ಅದು ಅಕ್ಷರಾತ್ಮಕವಿದೆ ಮತ್ತು ದ್ವೀಂದ್ರಿಯ ಮೊದಲಾದ ಜೀವಗಳ ಶಬ್ದರೂಪದಿಂದ ಹಾಗೂ (ಕೇವಲೀ ಭಗವಂತರ) ದಿವ್ಯ ಧ್ವನಿ ರೂಪದಿಂದ ಅದು ಅನಕ್ಷರಾತ್ಮಕವಿದೆ. ಅಭಾಷಾತ್ಮಕ ಶಬ್ದವೂ ಪ್ರಾಯೋಗಿಕ ಮತ್ತು ವೈಶ್ರಸಿಕವೆಂದು ಎರಡು ವಿಧವಿದೆ. ವೀಣೆ, ಡೊಳ್ಳು, ಕೈತಾಳ, ಕೊಳಲು ಮೊದಲಾದವುಗಳಿಂದ ಉತ್ಪನ್ನವಾದುದು ಪ್ರಾಯೋಗಿಕವಿದೆ ಮತ್ತು ಮೇಘಾದಿಗಳಿಂದ ಉತ್ಪನ್ನವಾದುದು ವೈಶ್ರಸಿಕವಿದೆ.

ಯಾವುದೇ ಪ್ರಕಾರದ ಶಬ್ದವಾಗಲಿ ಆದರೆ ಎಲ್ಲ ಶಬ್ದಗಳ ಉಪಾದಾನಕಾರಣವು ಲೋಕದಲ್ಲಿ ಎಲ್ಲೆಡೆಗೆ ವ್ಯಾಪ್ತವಾದ ಶಬ್ದಯೋಗ್ಯ ವರ್ಗಣೆಗಳೇ ಆಗಿವೆ ; ಆ ವರ್ಗಣೆಗಳೇ ತಾವಾಗಿ ಶಬ್ದರೂಪದಿಂದ ಪರಿಣಮಿಸುತ್ತವೆ ; ನಾಲಿಗೆ, ಡೊಳ್ಳು, ಮೇಘ ಮೊದಲಾದವು ಕೇವಲ ನಿಮಿತ್ತಭೂತವಾಗಿವೆ.

೨. ಉತ್ಪಾದ್ಯ ಉತ್ಪನ್ನ ಮಾಡಿಸಲು ಯೋಗ್ಯ ; ಯಾವುದರ ಉತ್ಪತ್ತಿಯಲ್ಲಿ ಬೇರೆ ಯಾವುದು ನಿಮಿತ್ತವಿರುತ್ತದೆ ಅಂಥದು.

೩. ಸ್ಕಂಧಜನ್ಯ ಸ್ಕಂಧಗಳಿಂದ ಉತ್ಪನ್ನವಾಗುವಂಥದು ; ಯಾವುದರ ಉತ್ಪತ್ತಿಯಲ್ಲಿ ಸ್ಕಂಧಗಳು ನಿಮಿತ್ತವಾಗುತ್ತವೆ ಅಂಥದು. [ಸಂಪೂರ್ಣ ಲೋಕದಲ್ಲಿ ಎಲ್ಲೆಡೆಗೆ ವ್ಯಾಪ್ತವಾದ ಅನಂತಪರಮಾಣುಮಯ ಶಬ್ದಯೋಗ್ಯ ವರ್ಗಣೆಗಳು ಶಬ್ದರೂಪವಾಗಿ ತಾನಾಗಿ ಪರಿಣಮಿಸಿದರೂ ವಾಯು-ಕಂಠ-ತಾಲು-ಜಿಹ್ವೆ-ಓಷ್ಠ, ಘಂಟೆ ಮೊದಲಾದವು ಮಹಾಸ್ಕಂಧಗಳ ಅಪ್ಪಳಿಸುವಿಕೆಯು ಅದು ಬಹಿರಂಗಕಾರಣ ಸಾಮಗ್ರಿಯಿದೆ ಎಂದರೆ ಶಬ್ದರೂಪ ಪರಿಣಮನದಲ್ಲಿ ಆ ಮಹಾಸ್ಕಂಧಗಳು ನಿಮಿತ್ತಭೂತವಾಗಿರುವುದರಿಂದ ಆ ಅಪೇಕ್ಷೆಯಿಂದ (ನಿಮಿತ್ತ-ಅಪೇಕ್ಷೆಯಿಂದ) ಶಬ್ದಕ್ಕೆ ಸ್ಕಂಧಜನ್ಯವೆಂದು ವ್ಯವಹಾರದಿಂದ ಹೇಳಲಾಗುತ್ತದೆ.]

ಪರಮಾಣೋರೇಕಪ್ರದೇಶತ್ವಖ್ಯಾಪನಮೇತತ್ ।

ಪರಮಾಣುಃ ಸ ಖಲ್ವೇಕೇನ ಪ್ರದೇಶೇನ ರೂಪಾದಿಗುಣಸಾಮಾನ್ಯಭಾಜಾ ಸರ್ವದೈವಾವಿನಶ್ವರತ್ವಾನ್ನಿತ್ಯಃ, ಏಕೇನ ಪ್ರದೇಶೇನ ತದವಿಭಕ್ತವೃತ್ತೀನಾಂ ಸ್ಪರ್ಶಾದಿಗುಣಾನಾಮವಕಾಶದಾನಾನ್ನಾನವಕಾಶಃ, ಏಕೇನ ಪ್ರದೇಶೇನ ದ್ವ್ಯಾದಿಪ್ರದೇಶಾಭಾವಾದಾತ್ಮಾದಿನಾತ್ಮಮಧ್ಯೇನಾತ್ಮಾಂತೇನ ನ ಸಾವಕಾಶಃ ; ಏಕೇನ ಪ್ರದೇಶೇನ ಸ್ಕಂಧಾನಾಂ ಭೇದನಿಮಿತ್ತತ್ವಾತ್ ಸ್ಕಂಧಾನಾಂ ಭೇತ್ತಾ ; ಏಕೇನ ಪ್ರದೇಶೇನ ಸ್ಕಂಧಸಂಘಾತನಿಮಿತ್ತತ್ವಾತ್ಸ್ಕಂಧಾನಾಂ ಕರ್ತಾ; ಏಕೇನ ಪ್ರದೇಶೇನೈಕಾಕಾಶಪ್ರದೇಶಾತಿವರ್ತಿತದ್ಗತಿಪರಿಣಾಮಾಪನ್ನೇನ ಸಮಯಲಕ್ಷಣಕಾಲವಿಭಾಗಕರಣಾತ್ ಕಾಲಸ್ಯ ಪ್ರವಿಭಕ್ತಾ ; ಏಕೇನ ಪ್ರದೇಶೇನ ತತ್ಪೂರ್ತಿತದ್ವ್ಯಾದಿಭೇದಪೂರ್ವಿಕಾಯಾಃ ಸ್ಕಂಧೇಷು ದ್ರವ್ಯಸಂಖ್ಯಾಯಾಃ, ಏಕೇನ ಪ್ರದೇಶೇನ ತದವಚ್ಛಿನ್ನೈಕಾಕಾಶಪ್ರದೇಶಪೂರ್ವಿಕಾಯಾಃ ಕ್ಷೇತ್ರಸಂಖ್ಯಾಯಾಃ ಏಕೇನ ಪ್ರದೇಶೇನೈಕಾಕಾಶ-ಪ್ರದೇಶಾತಿವರ್ತಿತದ್ಗತಿಪರಿಣಾಮಾವಚ್ಛಿನ್ನಸಮಯಪೂರ್ವಿಕಾಯಾಃ ಕಾಲಸಂಖ್ಯಾಯಾಃ, ಏಕೇನ ಪ್ರದೇಶೇನ ತದ್ವಿವರ್ತಿಜಘನ್ಯವರ್ಣಾದಿಭಾವಾವಬೋಧಪೂರ್ವಿಕಾಯಾ ಭಾವಸಂಖ್ಯಾಯಾಃ ಪ್ರವಿಭಾಗಕರಣಾತ್ ಪ್ರವಿಭಕ್ತಾ ಸಂಖ್ಯಾಯಾ ಅಪೀತಿ ।

ಗಾಥೆ - ೮೦

ಗಾಥಾರ್ಥ ಃ- [ಪದೇಸದೋ] ಪ್ರದೇಶದ ಮುಖಾಂತರ [ಣೇಚ್ಛೋ] ಪರಮಾಣುವು ನಿತ್ಯವಿದೆ, [ಣಾಣವಗಾಸೋ] ಅನವಕಾಶವಿಲ್ಲ, [ಣ ಸಾವಗಾಸೋ] ಸಾವಕಾಶವಿಲ್ಲ, [ಖಂಧಾಣಂ ಭೇತ್ತಾ] ಸ್ಕಂಧಗಳನ್ನು ಭೇದಿಸುವಂಥ [ಪಿ ಯ ಕತ್ತಾ] ಹಾಗೂ ಮಾಡುವಂಥದ್ದಿದೆ. ಮತ್ತು [ಕಾಲ ಸಂಖಾಣಂ ಪವಿಹತ್ತಾ] ಕಾಲ ಹಾಗೂ ಸಂಖ್ಯೆಯನ್ನು ವಿಭಾಜನೆ ಮಾಡುವಂಥದ್ದಿದೆ. (ಎಂದರೆ ಕಾಲದ ವಿಭಾಜನೆ ಮಾಡುತ್ತದೆ ಮತ್ತು ಸಂಖ್ಯೆಯ ಅಳತೆ ಮಾಡುತ್ತದೆ).

ಟೀಕೆ ಃ- ಇದು ಪರಮಾಣುವಿನ ಏಕಪ್ರದೇಶತ್ವದ ಕಥನವಿದೆ.

ಯಾವುದು ಪರಮಾಣುವಿದೆ ಅದು ವಾಸ್ತವಿಕವಾಗಿ ಏಕಪ್ರದೇಶದ ಮುಖಾಂತರ - ಎಂದರೆ ಅದು ರೂಪಾದಿಗುಣಸಾಮಾನ್ಯವುಳ್ಳದ್ದಿದೆ ಅದರ ಮುಖಾಂತರ - ಯಾವಾಗಲೂ ಅವಿನಾಶಿಯಿರುವುದರಿಂದ ನಿತ್ಯವಿದೆ; ಅದು ವಾಸ್ತವಿಕವಾಗಿ ಏಕಪ್ರದೇಶದ ಮುಖಾಂತರ ಅದರಿಂದ (ಪ್ರದೇಶದಿಂದ) ಅಭಿನ್ನ ಅಸ್ತಿತ್ವವುಳ್ಳ ಸ್ಪರ್ಶಾದಿ ಗುಣಗಳಿಗೆ ಅವಕಾಶಕೊಡುತ್ತಿರುವುದರಿಂದ ಅನವಕಾಶವಿಲ್ಲ ; ಅದು ವಾಸ್ತವಿಕವಾಗಿ ಏಕಪ್ರದೇಶದ ಮುಖಾಂತರ (ಅದರಲ್ಲಿ) ಎರಡನೆಯ - ಮೊದಲಾದ ಪ್ರದೇಶಗಳ ಅಭಾವವಿರುವುದರಿಂದ ತಾನೇ ಆದಿ, ತಾನೇ ಮಧ್ಯ ಮತ್ತು ತಾನೇ ಅಂತ್ಯವಿರುವ ಕಾರಣ (ಎಂದರೆ ನಿರಂಶವಾಗುವ ಕಾರಣ) ಸಾವಕಾಶವಿಲ್ಲ ; ಅದು ವಾಸ್ತವಿಕವಾಗಿ ಏಕಪ್ರದೇಶದ ಮುಖಾಂತರ ಸ್ಕಂಧಗಳ ಭೇದಕ್ಕೆ ನಿಮಿತ್ತವಾಗುವುದರಿಂದ (ಎಂದರೆ ಸ್ಕಂಧದ ಹರಡುವಿಕೆಗೆ-ಒಡೆಯುವಿಕೆಗೆ) ನಿಮಿತ್ತವಿರುವುದರಿಂದ ಸ್ಕಂಧಗಳ ಭೇದನ ಮಾಡುವಂಥದ್ದಿದೆ ; ಅದು ವಾಸ್ತವಿಕವಾಗಿ ಏಕಪ್ರದೇಶದ ಮುಖಾಂತರ ಸ್ಕಂಧದ ಸಂಘಾತಕ್ಕೆ ನಿಮಿತ್ತವಿರುವುದರಿಂದ (ಎಂದರೆ ಸ್ಕಂಧದ ಕೂಡುವಿಕೆಗೆ- ನಿರ್ಮಾಣಕ್ಕೆ ನಿಮಿತ್ತವಿರುವುದರಿಂದ) ಸ್ಕಂಧಗಳ ಕರ್ತೃವಿದೆ ; ಅದು ವಾಸ್ತವಿಕವಾಗಿ ಏಕ ಪ್ರದೇಶದ ಮುಖಾಂತರ-ಎಂದರೆ

ಏಯರಸವಣ್ಣಗಂಧಂ ದೋಫಾಸಂ ಸದ್ದಕಾರಣಮಸದ್ದಂ ।
ಖಂಧಂತರಿದಂ ದವ್ವಂ ಪರಮಾಣುಂ ತಂ ವಿಯಾಣಾಹಿ ॥೮೧॥

ಏಕರಸವರ್ಣಗಂಧಂ ದ್ವಿಸ್ಪರ್ಶಂ ಶಬ್ದಕಾರಣಮಶಬ್ದಮ್ ।
ಸ್ಕಂಧಾಂತರಿತಂ ದ್ರವ್ಯಂ ಪರಮಾಣುಂ ತಂ ವಿಜಾನೀಹಿ ॥೮೧॥

ಅದು ಒಂದು ಆಕಾಶಪ್ರದೇಶದ ಅತಿಕ್ರಮಣ ಮಾಡುವಂಥ (ಉಲ್ಲಂಘನೆ ಮಾಡುವಂಥ) ತನ್ನ ಗತಿಪರಿಣಾಮಕ್ಕೆ ಪ್ರಾಪ್ತವಾಗುತ್ತದೆ ಅದರ ಮುಖಾಂತರ - 'ಸಮಯ'ವೆಂಬ ಹೆಸರಿನ ಕಾಲದ ವಿಭಾಗ ಮಾಡುತ್ತಿರುವುದರಿಂದ ಕಾಲ ವಿಭಾಜಕವಿದೆ ; ಅದು ವಾಸ್ತವಿಕವಾಗಿ ಒಂದು ಪ್ರದೇಶದ ಮುಖಾಂತರ ಸಂಖ್ಯೆಯ ವಿಭಾಜಕ[೧]ವೂ ಇದೆ, ಏಕೆಂದರೆ ೧) ಅದು ಏಕಪ್ರದೇಶದ ಮುಖಾಂತರ ಅದರ ರಚನೆಯಾಗುವಂಥ ಎರಡು ಮೊದಲಾದ ಭೇದಗಳಿಂದ ಹಿಡಿದು (ಮೂರು ಅಣು, ನಾಲ್ಕು ಅಣು, ಅಸಂಖ್ಯ ಅಣು ಇತ್ಯಾದಿ) ದ್ರವ್ಯ ಸಂಖ್ಯೆಯ ವಿಭಾಗವನ್ನು ಸ್ಕಂಧಗಳಲ್ಲಿ ಮಾಡುತ್ತದೆ, ೨) ಅದು ಒಂದು ಪ್ರದೇಶದ ಮುಖಾಂತರ ಅದರ ಎಷ್ಟು ಮರ್ಯಾದೆಯಿರುವ ಒಂದು 'ಆಕಾಶಪ್ರದೇಶದಿಂದ'[೨] ಹಿಡಿದು (ಎರಡು ಆಕಾಶಪ್ರದೇಶ, ಮೂರು ಆಕಾಶಪ್ರದೇಶ, ಅಸಂಖ್ಯ ಆಕಾಶಪ್ರದೇಶ ಇತ್ಯಾದಿ) ಕ್ಷೇತ್ರಸಂಖ್ಯೆಯ ವಿಭಾಗಮಾಡುತ್ತದೆ, ೩) ಅದು ಏಕಪ್ರದೇಶದ ಮುಖಾಂತರ ಒಂದು ಆಕಾಶಪ್ರದೇಶದ ಅತಿಕ್ರಮ ಮಾಡುವಂಥ ಅದರ ಗತಿಪರಿಣಾಮವು ಎಷ್ಟು ಮರ್ಯಾದೆಯಿರುವ 'ಸಮಯದಿಂದ'[೩] ಹಿಡಿದು (ಎರಡು ಸಮಯ, ಮೂರು ಸಮಯ, ಅಸಂಖ್ಯ ಸಮಯ ಇತ್ಯಾದಿ) ಕಾಲಸಂಖ್ಯೆಯ ವಿಭಾಗ ಮಾಡುತ್ತದೆ, ಮತ್ತು ೪) ಒಂದು ಪ್ರದೇಶದ ಮುಖಾಂತರ ಅದರಲ್ಲಿ ವಿವರ್ತನೆ ಪಡೆಯುವಂಥ (ಪರಿವರ್ತಿತ, ಪರಿಣಮಿತ) ಜಘನ್ಯ ವರ್ಣಾದಿಭಾವವನ್ನು ತಿಳಿಯುವಂಥ ಜ್ಞಾನದಿಂದ ಹಿಡಿದು ಭಾವಸಂಖ್ಯೆಯ ವಿಭಾಗ ಮಾಡುತ್ತದೆ.

ಒಂದೇ ರಸ-ವರ್ಣ-ಗಂಧ ಮೇಣೆರಡು ಸ್ಪರ್ಶಯುಕ್ತ ಪರಮಾಣುವಿದೆಯದು ।
ಸ್ಕಂಧದೊಳಗಿದ್ದರೂ ದ್ರವ್ಯವಿದೆ ಮತ್ತುದು ಶಬ್ದಕಾರಣ, ಅಶಬ್ದವಿದೆ ॥೮೧॥

೧. ವಿಭಾಜಕ = ವಿಭಾಗ ಮಾಡುವಂಥ ; ಅಳೆಯುವಂಥ. ಸ್ಕಂಧಗಳಲ್ಲಿ ದ್ರವ್ಯ ಸಂಖ್ಯೆಯ ಅಳತೆ (ಎಂದರೆ ಅವು ಎಷ್ಟು ಅಣು-ಪರಮಾಣುಗಳಿಂದಾಗಿವೆಯೆಂಬ ಅಳತೆ) ಮಾಡುವಲ್ಲಿ ಅಣುಗಳ-ಪರಮಾಣುಗಳ ಅಪೇಕ್ಷೆಯುಂಟಾಗುತ್ತದೆ, ಎಂದರೆ ಅಂಥ ಅಳತೆ ಪರಮಾಣುಗಳಿಂದಾಗುತ್ತದೆ. ಕ್ಷೇತ್ರದ ಅಳತೆಯು ಒಂದು 'ಆಕಾಶ ಪ್ರದೇಶ'ವಿದೆ ಮತ್ತು ಆಕಾಶ ಪ್ರದೇಶದ ವ್ಯಾಖ್ಯೆಯಲ್ಲಿ ಪರಮಾಣುವಿನ ಅಪೇಕ್ಷೆಯುಂಟಾಗುತ್ತದೆ ; ಅದಕ್ಕಾಗಿ ಕ್ಷೇತ್ರದ ಅಳತೆಯೂ ಪರಮಾಣುವಿನಿಂದಾಗುತ್ತದೆ. ಕಾಲದ ಅಳತೆಯು ಒಂದು 'ಸಮಯ'ವಿದೆ ಮತ್ತು ಸಮಯದ ವ್ಯಾಖ್ಯೆಯಲ್ಲಿ ಪರಮಾಣುವಿನ ಅಪೇಕ್ಷೆಯುಂಟಾಗುತ್ತದೆ ; ಅದಕ್ಕಾಗಿ ಕಾಲದ ಅಳತೆಯೂ ಪರಮಾಣುವಿನಿಂದಾಗುತ್ತದೆ. ಜ್ಞಾನಭಾವದ (ಜ್ಞಾನಪರ್ಯಾಯದ) ಅಳತೆಯು ಒಂದೇ ಆದ 'ಪರಮಾಣುವಿನಲ್ಲಿ ಪರಿಣಮಿತವಾದ ಜಘನ್ಯವರ್ಣಾದಿ ಭಾವವನ್ನು ತಿಳಿಯುವಷ್ಟು ಜ್ಞಾನ'ವಿದೆ ಮತ್ತು ಅದರಲ್ಲಿ ಪರಮಾಣುವಿನ ಅಪೇಕ್ಷೆಯುಂಟಾಗುತ್ತದೆ ; ಅದಕ್ಕಾಗಿ ಭಾವದ (ಜ್ಞಾನಭಾವದ) ಅಳತೆಯೂ ಪರಮಾಣುವಿನಿಂದಾಗುತ್ತದೆ. ಹೀಗೆ ಪರಮಾಣುವು ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವದ ಅಳತೆ ಮಾಡುವುದಕ್ಕಾಗಿ ಗಜದಂತಿದೆ.

೨. ಒಂದು ಪರಮಾಣು ಪ್ರದೇಶದಷ್ಟು ಆಕಾಶದ ಭಾಗಕ್ಕೆ (ಕ್ಷೇತ್ರಕ್ಕೆ) 'ಆಕಾಶಪ್ರದೇಶ'ವೆಂದು ಹೇಳಲಾಗುತ್ತದೆ. ಆ ಆಕಾಶಪ್ರದೇಶ'ವು ಕ್ಷೇತ್ರದ 'ಏಕ' (ಏಕಮ್)ಇದೆ. (ಎಣಿಕೆಗಾಗಿ ಯಾವುದೇ ವಸ್ತುವಿನ ಎಷ್ಟು ಎಷ್ಟು ಪರಿಮಾಣಕ್ಕೆ 'ಒಂದು ಅಳತೆ'ಯೆಂದು ಮನ್ನಿಸಲಾಗುತ್ತದೆ, ಅಷ್ಟು ಪರಿಮಾಣಕ್ಕೆ ಆ ವಸ್ತುವಿನ 'ಏಕ'ವೆಂದು ಹೇಳಲಾಗುತ್ತದೆ.)

೩. ಪರಮಾಣುವಿಗೆ ಒಂದು ಆಕಾಶ ಪ್ರದೇಶವೆಂದು ಇನ್ನೊಂದು ಅನಂತರ ಆಕಾಶ ಪ್ರದೇಶದಲ್ಲಿ (ಮಂದಗತಿಯಿಂದ) ಹೋಗುತ್ತಿರುವಾಗ ಎಷ್ಟು ಸಮಯ ಬೇಕಾಗುತ್ತದೆ ಅದಕ್ಕೆ 'ಸಮಯ'ವೆಂದು ಹೇಳಲಾಗುತ್ತದೆ.

ಪರಮಾಣುದ್ರವ್ಯೇ ಗುಣಪರ್ಯಾಯವೃತ್ತಿಪ್ರರೂಪಣಮೇತತ್ ।

ಸರ್ವತ್ರಾಪಿ ಪರಮಾಣೌ ರಸವರ್ಣಗಂಧಸ್ಪರ್ಶಾಃ ಸಹಭುವೋ ಗುಣಾಃ । ತೇ ಚ ಕ್ರಮಪ್ರವೃತ್ತೈಸ್ತತ್ರ ಸ್ವಪರ್ಯಾಯೈರ್ವರ್ತಂತೇ । ತಥಾ ಹಿ – ಪಂಚಾನಾಂ ರಸಪರ್ಯಾಯಾಣಾಮನ್ಯತಮೇನೈಕೇನೈಕದಾ ರಸೋ ವರ್ತತೇ। ಪಂಚಾನಾಂ ವರ್ಣಪರ್ಯಾಯಾಣಾಮನ್ಯತಮೇನೈಕೇನೈಕದಾ ವರ್ಣೋ ವರ್ತತೇ। ಉಭಯೋರ್ಗಂಧ -ಪರ್ಯಾಯಯೋರನ್ಯತರೇಣೈಕೇನೈಕದಾ ಗಂಧೋ ವರ್ತತೇ । ಚತುರ್ಣಾಂ ಶೀತಸ್ನಿಗ್ಧಶೀತರೂಕ್ಷೋಷ್ಣ-ಸ್ನಿಗ್ಧೋಷ್ಣರೂಕ್ಷರೂಪಾಣಾಂ ಸ್ಪರ್ಶಪರ್ಯಾಯದ್ವಂದ್ವಾನಾಮನ್ಯತಮೇನೈಕೇನೈಕದಾ ಸ್ಪರ್ಶೋ ವರ್ತತೇ । ಏವಮಯಮುಕ್ತಗುಣವೃತ್ತಿಃ ಪರಮಾಣುಃ ಶಬ್ದಸ್ಕಂಧಪರಿಣತಿಶಕ್ತಿಸ್ವಭಾವಾತ್ ಶಬ್ದಕಾರಣಮ್। ಏಕಪ್ರದೇಶತ್ವೇನ ಶಬ್ದಪರ್ಯಾಯಪರಿಣತಿವೃತ್ತ್ಯಭಾವಾದಶಬ್ದಃ । ಸ್ನಿಗ್ಧರೂಕ್ಷತ್ವಪ್ರತ್ಯಯಬಂಧವಶಾದನೇಕಪರಮಾಣ್ವೇಕತ್ವಪರಿಣತಿ-ರೂಪಸ್ಕಂಧಾಂತರಿತೋಽಪಿ ಸ್ವಭಾವಮಪರಿತ್ಯಜನ್ನುಪಾತ್ತಸಂಖ್ಯಿತ್ವಾದೇಕ ಏವ ದ್ರವ್ಯಮಿತಿ ।

ಗಾಥೆ - ೮೧

ಗಾಥಾರ್ಥ ಃ- [ತಂ ಪರಮಾಣುಂ] ಆ ಪರಮಾಣುವು [ಏಯರಸವಣ್ಣಗಂಧಂ] ಒಂದು ರಸವುಳ್ಳ, ಒಂದು ವರ್ಣವುಳ್ಳ, ಒಂದು ಗಂಧವುಳ್ಳ ಹಾಗೂ [ದೋಫಾಸಂ] ಎರಡು ಸ್ಪರ್ಶವುಳ್ಳದ್ದಿದೆ ; [ಸದ್ದಕಾರಣಂ] ಶಬ್ದದ ಕಾರಣವಿದೆ, [ಅಸದ್ದಂ] ಅಶಬ್ದವಿದೆ ಮತ್ತು [ಖಂದಂತರಿದಂ] ಸ್ಕಂಧದ ಒಳಗಡೆಯಿದ್ದಾಗ್ಯೂ - (ದವ್ವಂ) (ಪರಿಪೂರ್ಣ ಸ್ವತಂತ್ರ) ದ್ರವ್ಯವಿದೆಯೆಂದು [ವಿಯಾಣಾಹಿ] ತಿಳಿಯುವುದು.

ಟೀಕೆ ಃ- ಇದು ಪರಮಾಣುವಿನಲ್ಲಿ ಗುಣ-ಪರ್ಯಾಯ ವರ್ತನೆಯ (ಗುಣ ಮತ್ತು ಪರ್ಯಾಯ-ಗಳಿರುವುದರ) ಕಥನವಿದೆ.

ಪರಮಾಣುವಿನಲ್ಲಿ ಎಲ್ಲೆಡೆಗೆ ರಸ-ವರ್ಣ-ಗಂಧ-ಸ್ಪರ್ಶ ಸಹಭಾವಿಯಾದ ಗುಣಗಳಿರುತ್ತವೆ ; ಮತ್ತು ಆ ಗುಣಗಳು ಅದರಲ್ಲಿ ಕ್ರಮವರ್ತಿಯಾದ ತಮ್ಮ ಪರ್ಯಾಯಸಹಿತವಾಗಿ ವರ್ತಿಸುತ್ತವೆ. ಅದು ಹೀಗಿದೆ - ಐದು ರಸಪರ್ಯಾಯಗಳೊಳಗಿಂದ ಒಂದು ಸಮಯದಲ್ಲಿ ಯಾವುದೇ ಒಂದು (ರಸಪರ್ಯಾಯ) ಸಹಿತವಾದ ರಸವು ವರ್ತಿಸುತ್ತದೆ ; ಐದು ವರ್ಣಪರ್ಯಾಯಗಳೊಳಗಿಂದ ಒಂದು ಸಮಯದಲ್ಲಿ ಯಾವುದೇ ಒಂದು ವರ್ಣ ಪರ್ಯಾಯಸಹಿತವಾದ ವರ್ಣವು ವರ್ತಿಸುತ್ತದೆ ; ಎರಡು ಗಂಧ ಪರ್ಯಾಯಗಳೊಳಗಿಂದ ಒಂದು ಸಮಯದಲ್ಲಿ ಯಾವುದೇ ಒಂದು (ಗಂಧಪರ್ಯಾಯ) ಸಹಿತವಾದ ಗಂಧವು ವರ್ತಿಸುತ್ತದೆ ; ಶೀತ-ಸ್ನಿಗ್ಧ, ಶೀತ-ರೂಕ್ಷ, ಉಷ್ಣ-ಸ್ನಿಗ್ಧ ಮತ್ತು ಉಷ್ಣ-ರೂಕ್ಷ-ಈ ನಾಲ್ಕು ಸ್ಪರ್ಶಪರ್ಯಾಯಗಳ ಯುಗಲಗಳೊಳಗಿಂದ ಒಂದು ಸಮಯದಲ್ಲಿ ಯಾವುದೇ ಒಂದು ಯುಗಲ ಸಹಿತವಾದ ಸ್ಪರ್ಶವು ವರ್ತಿಸುತ್ತದೆ, ಹೀಗೆ ಯಾವುದರಲ್ಲಿ ಗುಣಗಳ ವರ್ತನ(ಅಸ್ತಿತ್ವ)ವನ್ನು ಹೇಳಲಾಗಿದೆ ಅಂಥ ಈ ಪರಮಾಣುವು ಶಬ್ದಸ್ಕಂಧರೂಪದಿಂದ ಪರಿಣಮಿತವಾಗುವ ಶಕ್ತಿರೂಪಸ್ವಭಾವ-ವುಳ್ಳದ್ದಿರುವುದರಿಂದ ಶಬ್ದದ ಕಾರಣವಿದೆ ; ಏಕಪ್ರದೇಶಿಯಿರುವ ಕಾರಣ ಶಬ್ದಪರ್ಯಾಯರೂಪ ಪರಿಣತಿ ಮಾಡದಿರುವುದರಿಂದ ಅಶಬ್ದವಿದೆ ; ಮತ್ತು ಸ್ನಿಗ್ಧ-ರೂಕ್ಷತ್ವದ ಕಾರಣ ಬಂಧವಾಗುವುದರಿಂದ ಅನೇಕ ಪರಮಾಣುಗಳ ಏಕತ್ವಪರಿಣತಿರೂಪವಾದ ಸ್ಕಂಧದ ಒಳಗಡೆಯಿದ್ದರೂ ಸ್ವಭಾವವನ್ನು ಬಿಟ್ಟುಕೊಡದೆ ಸಂಖ್ಯೆಗೆ ಪ್ರಾಪ್ತವಾಗುವುದರಿಂದ (ಎಂದರೆ ಪರಿಪೂರ್ಣ ಒಂದರಂತೆ ಬೇರೆಯಾಗಿ ಎಣಿಕೆಗೆ ಬರುವುದರಿಂದ) ಒಂದೇ [೧] ದ್ರವ್ಯವಿದೆ.

೧. ಸ್ಕಂಧದಲ್ಲೂ ಪ್ರತಿಯೊಂದು ಪರಮಾಣು ಸ್ವಯಂ ಪರಿಪೂರ್ಣವಿದೆ, ಸ್ವತಂತ್ರವಿದೆ, ಪರದ ಸಹಾಯತೆಯಿಲ್ಲದೆ ತನ್ನಿಂದಲೇ ತನ್ನ ಗುಣ-ಪರ್ಯಾಯದಲ್ಲಿ ಸ್ಥಿರವಿದೆಯೆಂದು ಇಲ್ಲಿ ತಿಳಿಸಿಕೊಡಲಾಗಿದೆ.

ಉವಭೋಜ್ಜಮಿಂದಿಏಹಿಂ ಯ ಇಂದಿಯಕಾಯಾ ಮಣೋ ಯ ಕಮ್ಮಾಣಿ ।
ಜಂ ಹವದಿ ಮುತ್ತಮಣ್ಣಂ ತಂ ಸವ್ವಂ ಪೋಗ್ಗಲಂ ಜಾಣೇ ॥೮೨॥

ಉಪಭೋಗ್ಯಮಿಂದ್ರಿಯೈಶ್ಚೇಂದ್ರಿಯಕಾಯಾ ಮನಶ್ಚ ಕರ್ಮಾಣಿ ।
ಯದ್ಭವತಿ ಮೂರ್ತಮನ್ಯತ್ ತತ್ಸರ್ವಂ ಪುದ್ಗಲಂ ಜಾನೀಯಾತ್ ॥೮೨॥

ಸಕಲಪುದ್ಗಲವಿಕಲ್ಪೋಪಸಂಹಾರೋಽಯಮ್ ।

ಇಂದ್ರಿಯವಿಷಯಾಃ ಸ್ಪರ್ಶರಸಗಂಧವರ್ಣಶಬ್ದಾಶ್ಚ, ದ್ರವ್ಯೇಂದ್ರಿಯಾಣಿ ಸ್ಪರ್ಶನರಸನಘ್ರಾಣಚಕ್ಷುಃ-ಶ್ರೋತ್ರಾಣಿ, ಕಾಯಾಃ ಔದಾರಿಕವೈಕ್ರಿಯಕಾಹಾರಕತೈಜಸಕಾರ್ಮಣಾನಿಶರೀರಾಣಿ, ದ್ರವ್ಯಮನಃ, ದ್ರವ್ಯಕರ್ಮಾಣಿ, ನೋಕರ್ಮಾಣಿ, ವಿಚಿತ್ರಪರ್ಯಾಯೋತ್ಪತ್ತಿಹೇತವೋಽನಂತಾ ಅನಂತಾಣುವರ್ಗಣಾಃ, ಅನಂತಾ ಅಸಂಖ್ಯೇಯಾಣುವರ್ಗಣಾಃ, ಅನಂತಾಃ ಸಂಖ್ಯೇಯಾಣುವರ್ಗಣಾಃ ದ್ವ್ಯಣುಕಸ್ಕಂಧಪರ್ಯಂತಾಃ, ಪರಮಾಣುಶ್ಚ, ಯದನ್ಯದಪಿ ಮೂರ್ತಂ ತತ್ಸರ್ವಂ ಪುದ್ಗಲವಿಕಲ್ಪತ್ವೇನೋಪಸಂಹರ್ತವ್ಯಮಿತಿ ।

-ಇತಿ ಪುದ್ಗಲದ್ರವ್ಯಾಸ್ತಿಕಾಯವ್ಯಾಖ್ಯಾನಮ್ ಸಮಾಪ್ತಮ್ ।

ಗಾಥೆ - ೮೨

ಗಾಥಾರ್ಥ ಃ- [ಇಂದಿಏಹಿಂ ಉವಭೋಜ್ಜಂ ಯ] ಇಂದ್ರಿಯಗಳಿಂದ ಉಪಭೋಗ್ಯ ವಿಷಯಗಳು, [ಇಂದಿಯಕಾಯಾ] ಇಂದ್ರಿಯಗಳು, ಶರೀರ, [ಮಣೋ] ಮನಸ್ಸು, [ಕಮ್ಮಾಣಿ] ಕರ್ಮ [ಯ] ಮತ್ತು [ಅಣ್ಣಂ ಜಂ] ಇತರ ಯಾವ ಎಲ್ಲ [ಮುತ್ತಂ ಹವದಿ] ಮೂರ್ತಗಳಿವೆ [ತಂ ಸವ್ವಂ] ಅವೆಲ್ಲವು [ಪೋಗ್ಗಲಂ ಜಾಣೇ] ಪುದ್ಗಲಗಳೆಂದು ತಿಳಿಯುವುದು.

ಟೀಕೆ ಃ- ಇದು ಎಲ್ಲ ಪುದ್ಗಲಭೇದಗಳ ಉಪಸಂಹಾರವಿದೆ.

ಸ್ಪರ್ಶ, ರಸ, ಗಂಧ, ವರ್ಣ ಮತ್ತು ಶಬ್ದರೂಪಗಳು (ಐದು) ಇಂದ್ರಿಯವಿಷಯ, ಸ್ಪರ್ಶನ, ರಸನ, ಘ್ರಾಣ, ಚಕ್ಷು ಮತ್ತು ಶ್ರೋತೃರೂಪಗಳು (ಐದು) ದ್ರವ್ಯೇಂದ್ರಿಯಗಳು, ಔದಾರಿಕ, ವೈಕ್ರಿಯಿಕ, ಆಹಾರಕ, ತೈಜಸ ಮತ್ತು ಕಾರ್ಮಣರೂಪಗಳು (ಐದು) ಶರೀರ, ದ್ರವ್ಯಮನ, ದ್ರವ್ಯಕರ್ಮ, ನೋಕರ್ಮ ವಿಚಿತ್ರ ಪರ್ಯಾಯಗಳ ಉತ್ಪತ್ತಿಗೆ ಹೇತುಭೂತ (ಎಂದರೆ ಅನೇಕ ಪ್ರಕಾರದ ಪರ್ಯಾಯಗಳು ಉತ್ಪನ್ನವಾಗುವುದಕ್ಕೆ ಕಾರಣಭೂತ) ಅನಂತ[೧] ಅನಂತಾಣುಕ ವರ್ಗಣಗಳು, ಅನಂತ ಅಸಂಖ್ಯಾತಾಣುಕ ವರ್ಗಣಗಳು ಮತ್ತು ದ್ವಿ-ಅಣುಕ

ಯಾವ ಇಂದ್ರಿಯಗಳಿಂದುಪಭೋಗ್ಯವಿಷಯ, ಇಂದ್ರಿಯಶರೀರಮನಸ್ಸುಕರ್ಮ ।
ಇವಲ್ಲದೆ ಬೇರಾವ ಮೂರ್ತವಿವೆಯವೆಲ್ಲ ಪುದ್ಗಲವೆಂದು ತಿಳಿಯುವುದು ॥೮೨॥

---

೧. ಜಗತ್ತಿನಲ್ಲಿಅನಂತ ಪರಮಾಣುಗಳಿಂದಾದ ವರ್ಗಣಗಳು ಅನಂತವಿವೆ, ಅಸಂಖ್ಯಾತ ಪರಮಾಣುಗಳಿಂದಾದವರ್ಗಣಗಳೂ ಅನಂತವಿವೆ ಮತ್ತು (ದ್ವಿ-ಅಣುಕಸ್ಕಂಧ, ತ್ರಿ-ಅಣುಕಸ್ಕಂಧ ಇತ್ಯಾದಿ) ಸಂಖ್ಯಾತ ಪರಮಾಣುಗಳಿಂದಾದ ವರ್ಗಣಗಳೂ ಅನಂತವಿವೆ. (ಅವಿಭಾಗಿ ಪರಮಾಣುಗಳೂ ಅನಂತವಿವೆ.)

ಅಥ ಧರ್ಮಾಧರ್ಮದ್ರವ್ಯಾಸ್ತಿಕಾಯವ್ಯಾಖ್ಯಾನಮ್ ।

ಧಮ್ಮತ್ಥಿಕಾಯಮರಸಂ ಅವಣ್ಣಗಂಧಂ ಅಸದ್ದಮಪ್ಫಾಸಂ ।
ಲೋಗಾಗಾಢಂ ಪುಟ್ಠಂ ಪಿಹುಲಮಸಂಕಾದಿಯಪದೇಸಂ ॥೮೩॥

ಧರ್ಮಾಸ್ತಿಕಾಯೋಽರಸೋಽವರ್ಣಗಂಧೋಽಶಬ್ದೋಽಸ್ಪರ್ಶಃ ।
ಲೋಕಾವಗಾಢಃ ಸ್ಪೃಷ್ಟಃ ಪೃಥುಲೋಽಸಂಖ್ಯಾತಪ್ರದೇಶಃ ॥೮೩॥

ಧರ್ಮಸ್ವರೂಪಾಖ್ಯಾನಮೇತತ್ ।

ಧರ್ಮೋ ಹಿ ಸ್ಪರ್ಶರಸಗಂಧವರ್ಣಾನಾಮತ್ಯಂತಾಭಾವಾದಮೂರ್ತಸ್ವಭಾವಃ । ತತ ಏವ ಚಾಶಬ್ದಃ । ಸಕಲಲೋಕಾಕಾಶಾಭವ್ಯಾಪ್ತಾವಸ್ಥಿತತ್ವಾಲ್ಲೋಕಾವಗಾಢಃ, ಅಯುತಸಿದ್ಧಪ್ರದೇಶತ್ವಾತ್ ಸ್ಪೃಷ್ಟಃ , ಸ್ವಭಾವಾದೇವ ಸರ್ವತೋ ವಿಸ್ತೃತತ್ವಾತ್ಪೃಥುಲಃ, ನಿಶ್ಚಯನಯೇನೈಕಪ್ರದೇಶೋಽಪಿ ವ್ಯವಹಾರನಯೇನಾಸಂಖ್ಯಾತಪ್ರದೇಶ ಇತಿ।

ಸ್ಕಂಧದವರೆಗಿನ ಅನಂತಸಂಖ್ಯಾತಾಣುಕ ವರ್ಗಣಗಳು ಹಾಗೂ ಪರಮಾಣು ಮತ್ತು ಇತರ ಯಾವ ಎಲ್ಲ ಮೂರ್ತವಿವೆ ಅವೆಲ್ಲವುಗಳನ್ನು ಪುದ್ಗಲದ ಭೇದರೂಪಗಳಲ್ಲಿ ಸೇರಿಸುವುದು.

ಭಾವಾರ್ಥ ಃ- ವೀತರಾಗ ಅತೀಂದ್ರಿಯ ಸುಖದ ಸ್ವಾದದಿಂದ ರಹಿತವಾದ ಜೀವಗಳಿಗೆ ಉಪಭೋಗ್ಯಂ ಪಂಚೇಂದ್ರಿಯ ವಿಷಯಗಳು, ಅತೀಂದ್ರಿಯ ಆತ್ಮಸ್ವರೂಪದಿಂದ ವಿಪರೀತವಾದ ಐದು ಇಂದ್ರಿಯಗಳು, ಅಶರೀರ ಆತ್ಮಪದಾರ್ಥದಿಂದ ಪ್ರತಿಪಕ್ಷಭೂತ ಐದು ಶರೀರಗಳು, ಮನೋಗತ-ವಿಕಲ್ಪಜಾಲಗಳಿಲ್ಲದ ಶುದ್ಧ ಜೀವಾಸ್ತಿಕಾಯದಿಂದ ವಿಪರೀತವಾದ ಮನಸ್ಸು, ಕರ್ಮರಹಿತ ಆತ್ಮದ್ರವ್ಯದಿಂದ ಪ್ರತಿಕೂಲವಾದ ಎಂಟು ಕರ್ಮ ಮತ್ತು ಅಮೂರ್ತ ಆತ್ಮಸ್ವಭಾವದಿಂದ ಪ್ರತಿಪಕ್ಷಭೂತವಾದ ಇತರ ಯಾವೆಲ್ಲ ಮೂರ್ತಗಳಿವೆ ಅವೆಲ್ಲವೂ ಪುದ್ಗಲವೆಂದು ತಿಳಿಯುವುದು.

ಈ ಪ್ರಕಾರವಾಗಿ ಪುದ್ಗಲದ್ರವ್ಯಾಸ್ತಿಕಾಯದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಧರ್ಮಾಸ್ತಿಕಾಯ ಮತ್ತು ಅಧರ್ಮಾಸ್ತಿಕಾಯದ ವ್ಯಾಖ್ಯಾನವಿದೆ.

ಗಾಥೆ - ೮೩

ಗಾಥಾರ್ಥ ಃ- [ಧಮ್ಮತ್ಥಿಕಾಯಂ] ಧರ್ಮಾಸ್ತಿಕಾಯವು [ಅಪ್ಫಾಸಂ] ಅಸ್ಪರ್ಶ, [ಅರಸಂ] ಅರಸ, [ಅವಣ್ಣಗಂಧಂ] ಅಗಂಧ, ಅವರ್ಣ ಮತ್ತು [ಅಸದ್ದಂ] ಅಶಬ್ದವಿದೆ ; [ಲೋಗಾಗಾಢಂ] ಲೋಕ ವ್ಯಾಪಕವಿದೆ ; (ಪುಟ್ಠಂ) ಅಖಂಡ [ಪಿಹುಲಂ] ವಿಶಾಲ ಮತ್ತು [ಅಸಂಖಾದಿಯಪದೇಸಂ] ಅಸಂಖ್ಯಾತ ಪ್ರದೇಶಿಯಿದೆ.

ಟೀಕೆ ಃ- ಇದು ಧರ್ಮದ (ಧರ್ಮಾಸ್ತಿಕಾಯದ) ಸ್ವರೂಪದ ಕಥನವಿದೆ.

ಧರ್ಮಾಸ್ತಿಕಾಯ ಅಸ್ಪರ್ಶ, ಅರಸ, ಅಗಂಧ, ಅವರ್ಣ ಮೇಣಶಬ್ದವಿದೆ ।
ಕೂರ್ಮೆಯಿಂ ಲೋಕವ್ಯಾಪಕ, ಅಖಂಡ, ವಿಶಾಲಮತ್ತಸಂಖ್ಯಾತಪ್ರದೇಶಿಯಿದೆ ॥೮೩॥

ಅಗುರುಗಲಘುಗೇಹಿಂ ಸಯಾ ತೇಹಿಂ ಅಣಂತೇಹಿಂ ಪರಿಣದಂ ಣಿಚ್ಚಂ ।
ಗದಿಕಿರಿಯಾಜುತ್ತಾಣಂ ಕಾರಣಭೂದಂ ಸಯಮಕಜ್ಜಂ ॥೮೪॥

ಅಗುರುಕಲಘುಕೈಃ ಸದಾ ತೈಃ ಅನಂತೈಃ ಪರಿಣತಃ ನಿತ್ಯಃ ।
ಗತಿಕ್ರಿಯಾಯುಕ್ತಾನಾಂ ಕಾರಣಭೂತಃ ಸ್ವಯಮಕಾರ್ಯಃ ॥೮೪॥

ಧರ್ಮಸ್ಯೈವಾವಶಿಷ್ಟಸ್ವರೂಪಾಖ್ಯಾನಮೇತತ್ ।

ಅಪಿ ಚ ಧರ್ಮಃ ಅಗುರುಲಘುಭಿರ್ಗುಣೈರಗುರುಲಘುತ್ವಾಭಿಧಾನಸ್ಯ ಸ್ವರೂಪಪ್ರತಿಷ್ಠತ್ವನಿಬಂಧನಸ್ಯ ಸ್ವಭಾವಸ್ಯಾವಿಭಾಗಪರಿಚ್ಛೇದೈಃ ಪ್ರತಿಸಮಯಸಂಭವತ್ಷಟ್‌ಸ್ಥಾನಪತಿತವೃದ್ಧಿಹಾನಿಭಿರನಂತೈಃ ಸದಾ ಪರಿಣತತ್ವಾದುತ್ಪಾದವ್ಯಯವತ್ವೇऽಪಿ ಸ್ವರೂಪಾದಪ್ರಚ್ಯವನಾನ್ನಿತ್ಯಃ, ಗತಿಕ್ರಿಯಾಪರಿಣತಾನಾಮುದಾಸೀನಾವಿನಾ-ಭೂತಸಹಾಯಮಾತ್ರತ್ವಾತ್ತಾರಣಭೂತಃ, ಸ್ವಾಸ್ತಿತ್ವಮಾತ್ರನಿರ್ವೃತ್ತತ್ವಾತ್ ಸ್ವಯಮಕಾರ್ಯ ಇತಿ ।

ಸ್ಪರ್ಶ, ರಸ, ಗಂಧ ಮತ್ತು ವರ್ಣದ ತೀರ ಅಭಾವವಿರುವುದರಿಂದ ಧರ್ಮ (ಧರ್ಮಾಸ್ತಿಕಾಯ)ವು ವಾಸ್ತವಿಕವಾಗಿ ಅಮೂರ್ತಸ್ವಭಾವವುಳ್ಳದ್ದಿದೆ; ಅದಕ್ಕಾಗಿ ಅಶಬ್ದವಿದೆ ; ಸಂಪೂರ್ಣ ಲೋಕಾಕಾಶದಲ್ಲಿ ವ್ಯಾಪ್ತವಾಗಿರುವುದರಿಂದ ಲೋಕವ್ಯಾಪಕವಿದೆ ; ಅಯುತಸಿದ್ಧ [೧] ಪ್ರದೇಶವುಳ್ಳದ್ದಿರುವುದರಿಂದ ಅಖಂಡವಿದೆ ; ಸ್ವಭಾವದಿಂದಲೇ ಎಲ್ಲೆಡೆಗೆ ವಿಸ್ತೃತವಿರುವುದರಿಂದ ವಿಶಾಲವಿದೆ ; ನಿಶ್ಚಯನಯದಿಂದ ಏಕಪ್ರದೇಶಿ[೨]ಯಾಗಿದ್ದರೂ ವ್ಯವಹಾರನಯದಿಂದ ಅಸಂಖ್ಯಾತ ಪ್ರದೇಶಿಯಿದೆ.

ಗಾಥೆ - ೮೪

ಗಾಥಾರ್ಥ :- [ಅಣಂತೇಹಿಂ ತೇಹಿಂ ಅಗುರುಗಲಘುಗೇಹಿಂ] ಅದು (ಧರ್ಮಾಸ್ತಿಕಾಯವು) ಅನಂತವಾದಂಥ ಯಾವ ಅಗುರುಲಘು(ಗುಣ, ಅಂಶ)ಗಳಿವೆ ಅವುಗಳ ರೂಪವಾಗಿ [ಸಯಾ ಪರಿಣದಂ] ಯಾವಾಗಲೂ ಪರಿಣಮಿಸುತ್ತದೆ, [ಣಿಚ್ಚಂ] ನಿತ್ಯವಿದೆ, [ಗದಿಕಿರಿಯಾಜುತ್ತಾಣಂ] ಗತಿಕ್ರಿಯಾಯುಕ್ತ ಮತ್ತು [ಕಾರಣಭೂದಂ] ಕಾರಣಭೂತ (ನಿಮಿತ್ತರೂಪ)ವಿದೆ ಮತ್ತು [ಸಯಮಕಜ್ಜಂ] ತಾನು ಅಕಾರ್ಯವಿದೆ.

ಟೀಕೆ :- ಇದು ಧರ್ಮದ್ದೇ ಉಳಿದ ಸ್ವರೂಪದ ಕಥನವಿದೆ.

ಅದು ಅನಂತ ಅಗುರುಲಘುಗಳರೂಪದಿಂ ಸದೈವ ಪರಿಣಮಿಸುವುದು ।
ಅದು ನಿತ್ಯ, ಗತಿಕ್ರಿಯೆಯುಕ್ತ, ಕಾರಣಭೂತಮೇಣ್ ಸ್ವಯಮಕಾರ್ಯವಿದೆ ॥೮೪॥

---

೧. ಯುತಸಿದ್ಧ = ಜೋಡಣೆಯಾದ ; ಸಂಯೋಗಸಿದ್ಧ. [ಧರ್ಮಾಸ್ತಿಕಾಯದಲ್ಲಿ ಬೇರೆ-ಬೇರೆ ಪ್ರದೇಶಗಳ ಸಂಯೋಗವಾಗಿದೆಯೆಂದಿಲ್ಲ, ಅದಕ್ಕಾಗಿ ಅದರಲ್ಲಿ ಮಧ್ಯದೊಳಗೆ ವ್ಯವಧಾನ-ಅಂತರ-ಅವಕಾಶವಿಲ್ಲ; ಆದುದರಿಂದಲೇ ಧರ್ಮಾಸ್ತಿಕಾಯವು ಅಖಂಡವಿದೆ.]

೨. ಏಕಪ್ರದೇಶಿ ಅವಿಭಾಜ್ಯ-ಏಕಕ್ಷೇತ್ರವುಳ್ಳ, (ನಿಶ್ಚಯನಯದಿಂದ ಧರ್ಮಾಸ್ತಿಕಾಯವು ಅವಿಭಾಜ್ಯ-ಏಕಪದಾರ್ಥ- ವಿರುವುದರಿಂದ ಅವಿಭಾಜ್ಯ-ಏಕಕ್ಷೇತ್ರವುಳ್ಳದ್ದಿದೆ.)

ಉದಯಂ ಜಹ ಮಚ್ಛಾಣಂ ಗಮಣಾಣುಗ್ಗಹಕರಂ ಹವದಿ ಲೋಏ ।
ತಹ ಜೀವಪೋಗ್ಗಲಾಣಂ ಧಮ್ಮಂ ದವ್ವಂ ವಿಯಾಣಾಹಿ ॥೮೫॥

ಉದಕಂ ಯಥಾ ಮತ್ಸ್ಯಾನಾಂ ಗಮನಾನುಗ್ರಹಕರಂ ಭವತಿ ಲೋಕೇ ।
ತಥಾ ಜೀವಪುದ್ಗಲಾನಾಂ ಧರ್ಮದ್ರವ್ಯಂ ವಿಜಾನೀಹಿ ॥೮೫॥

ಪುನಃ ಧರ್ಮ (ಧರ್ಮಾಸ್ತಿಕಾಯ)ವು ಅಗುರುಲಘುಗುಣಗಳ[೧] ರೂಪದಿಂದ ಎಂದರೆ ಅಗುರುಲಘುತ್ವವೆಂಬ ಹೆಸರಿನ ಯಾವ ಸ್ವರೂಪಪ್ರತಿಷ್ಠತ್ವಕ್ಕೆ ಕಾರಣಭೂತವಾದ ಸ್ವಭಾವವಿದೆ ಅದರ ಅವಿಭಾಗ ಪ್ರತಿಚ್ಛೇದಗಳ ರೂಪದಿಂದ - ಎಂದರೆ ಅವು ಪ್ರತಿಯೊಂದು ಸಮಯಕ್ಕಾಗುವಂಥ ಷಟ್‌ಸ್ಥಾನಪತಿತ[೨] ವೃದ್ಧಿ ಹಾನಿಯುಳ್ಳ ಅನಂತವಿವೆ ಅವುಗಳ ರೂಪದಿಂದ - ಯಾವಾಗಲೂ ಪರಿಣಮಿಸುವುದರಿಂದ ಉತ್ಪಾದವ್ಯಯ ಯುಕ್ತವಿದೆ, ಆದಾಗ್ಯೂ ಸ್ವರೂಪದಿಂದ ಚ್ಯುತವಾಗದಿರುವುದರಿಂದ ನಿತ್ಯವಿದೆ ; ಗತಿಕ್ರಿಯಾಪರಿಣತಿಗೆ (ಗತಿಕ್ರಿಯೆಯರೂಪದಿಂದ ಪರಿಣಮಿಸುವಲ್ಲಿ ಜೀವ-ಪುದ್ಗಲಗಳಿಗೆ) ಉದಾಸೀನ[೩] ಅವಿನಾಭಾವಿ[೪] ಸಹಾಯ ಮಾತ್ರವಿರುವುದರಿಂದ (ಗತಿಕ್ರಿಯಾಪರಿಣತಿಗೆ) ಕಾರಣಭೂತವಿದೆ ; ತನ್ನ ಅಸ್ತಿತ್ವಮಾತ್ರದಿಂದ ನಿಷ್ಪನ್ನವಾಗುವ ಕಾರಣ ತಾನು ಅಕಾರ್ಯವಿದೆ (ಎಂದರೆ ಸ್ವಯಂಸಿದ್ಧವಿರುವ ಕಾರಣ ಬೇರೆ ಯಾವುದರಿಂದ ಉತ್ಪನ್ನವಾಗಿಲ್ಲ, ಅದಕ್ಕಾಗಿ ಬೇರೆ ಯಾವುದೇ ಕಾರಣದ ಕಾರ್ಯರೂಪವಾಗಿಲ್ಲ.)

ಗಾಥೆ - ೮೫

ಗಾಥಾರ್ಥ :- [ಜಹ] ಯಾವ ಪ್ರಕಾರ [ಲೋಏ] ಜಗತ್ತಿನಲ್ಲಿ [ಉದಯಂ] ನೀರು [ಮಚ್ಛಾಣಂ] ಮೀನುಗಳಿಗೆ [ಗಮಣಾಣುಗ್ಗಹಕರಂ ಹವದಿ] ಗಮನದಲ್ಲಿ ಅನುಗ್ರಹ ಮಾಡುತ್ತದೆ, [ತಹ] ಅದೇ ಪ್ರಕಾರ

ಹೇಗೆ ಲೋಕದಲ್ಲಿ ನೀರು ಮೀನುಗಳಿಗೆ ಗಮನದಲನುಗ್ರಹ ಮಾಡುವುದು ।
ಹಾಗೆ ಧರ್ಮದ್ರವ್ಯ ಜೀವ-ಪುದ್ಗಲಗಳಿಗೆ ಗಮನದಲನುಗ್ರಹ ಮಾಡುವುದು ॥೮೫॥

೧. ಗುಣ-ಅಂಶ ; ಅವಿಭಾಗ ಪ್ರತಿಚ್ಛೇದ. [ಎಲ್ಲ ದ್ರವ್ಯಗಳಂತೆ ಧರ್ಮಾಸ್ತಿಕಾಯದಲ್ಲಿ ಅಗುರುಲಘುತ್ವವೆಂಬ ಹೆಸರಿನ ಸ್ವಭಾವವಿದೆ. ಆ ಸ್ವಭಾವವು ಧರ್ಮಾಸ್ತಿಕಾಯಕ್ಕೆ ಸ್ವರೂಪ ಪ್ರತಿಷ್ಠತ್ವಕ್ಕೆ (ಎಂದರೆ ಸ್ವರೂಪದಲ್ಲಿರುವುದಕ್ಕೆ) ಕಾರಣಭೂತವಿದೆ. ಅದರ ಅವಿಭಾಗ ಪ್ರತಿಚ್ಛೇದಗಳಿಗೆ ಇಲ್ಲಿ ಅಗುರುಲಘುಗುಣ (ಅಂಶ)ಗಳೆಂದು ಹೇಳಿದೆ.]

೨. ಷಟ್‌ಸ್ಥಾನಪತಿತವೃದ್ಧಿ ಹಾನಿ - ಆರು ಸ್ಥಾನಗಳಲ್ಲಿ ಸಮಾವೇಶಗೊಳ್ಳುವಂಥ ವೃದ್ಧಿ ಹಾನಿ ; ಷಟ್‌ಗುಣ ವೃದ್ಧಿಹಾನಿ. (ಅಗುರುಲಘುತ್ವ ಸ್ವಭಾವದ ಅನಂತ ಅಂಶಗಳಲ್ಲಿ ಸ್ವಭಾವದಿಂದಲೇ ಪ್ರತಿಸಮಯಕ್ಕೆ ಷಟ್‌ಗುಣ ವೃದ್ಧಿಹಾನಿಯಾಗುತ್ತಿರುತ್ತದೆ.)

೩. ಯಾವ ಪ್ರಕಾರ ಸಿದ್ಧಭಗವಂತರು ಉದಾಸೀನರಿದ್ದರೂ ಸಿದ್ಧಗುಣಗಳ ಅನುರಾಗರೂಪದಿಂದ ಪರಿಣಮಿಸುವ ಭವ್ಯ ಜೀವಗಳಿಗೆ ಸಿದ್ಧಗತಿಗೆ ಸಹಕಾರಿಕಾರಣಭೂತರಿದ್ದಾರೆ, ಅದೇ ಪ್ರಕಾರ ಧರ್ಮವೂ ಉದಾಸೀನವಿದ್ದರೂ ತಮ್ಮ - ತಮ್ಮ ಭಾವಗಳಿಂದಲೇ ಗತಿರೂಪವಾಗಿ ಪರಿಣಮಿಸುವ ಜೀವ-ಪುದ್ಗಲಗಳಿಗೆ ಗತಿಗೆ ಸಹಕಾರಿ ಕಾರಣವಿದೆ.

೪. ಯಾವುದೇ ಒಂದು ಬೇರೆ ಯಾವುದೇ ಇನ್ನೊಂದಿಲ್ಲದೆ ಆಗದಿದ್ದರೆ ಮೊದಲನೇಯದಕ್ಕೆ ಎರಡನೆಯದರ ಅವಿನಾಭಾವಿಯೆಂದು ಹೇಳಲಾಗುತ್ತದೆ. ಇಲ್ಲಿ ಧರ್ಮದ್ರವ್ಯವನ್ನು 'ಗತಿಕ್ರಿಯಾ ಪರಿಣತಿಯ ಅವಿನಾಭಾವಿ ಸಹಾಯಮಾತ್ರವೆಂದು ಹೇಳಿದೆ ಅದರ ಅರ್ಥವೆಂದರೆ - ಗತಿಕ್ರಿಯಾ ಪರಿಣತವಾದ ಜೀವ-ಪುದ್ಗಲಗಳಿಲ್ಲದಿದ್ದರೆ ಅಲ್ಲಿ ಧರ್ಮದ್ರವ್ಯವು ಅದಕ್ಕೆ ಸಹಾಯಮಾತ್ರವೂ ಇಲ್ಲ ; ಜೀವ-ಪುದ್ಗಲಗಳು ಸ್ವಯಂ ಗತಿಕ್ರಿಯಾರೂಪದಿಂದ ಪರಿಣತವಾದಾಗಲೇ ಧರ್ಮದ್ರವ್ಯವು ಅದಕ್ಕೆ ಉದಾಸೀನ ಸಹಾಯಮಾತ್ರರೂಪ (ನಿಮಿತ್ತಮಾತ್ರರೂಪ)ವಿದೆ, ಇಲ್ಲದಿದ್ದರೆ ಇಲ್ಲ.

ಧರ್ಮಸ್ಯ ಗತಿಹೇತುತ್ವೇ ದೃಷ್ಟಾಂತೋಯಮ್ ।

ಯಥೋದಕಂ ಸ್ವಯಮಗಚ್ಛದ್ಗಮಯಚ್ಛಸ್ವಯಮೇವ ಗಚ್ಛತಾಂ ಮತ್ಸ್ಯಾನಾಮುದಾಸೀನಾವಿನಾಭೂತ-ಸಹಾಯಕಾರಣಮಾತ್ರತ್ವೇನ ಗಮನಮನುಗೃಹ್ಣಾತಿ, ತಥಾ ಧರ್ಮೋ೭ಪಿ ಸ್ವಯಮಗಚ್ಛನ್ ಅಗಮಯಂಶ್ಚ ಸ್ವಯಮೇವ ಗಚ್ಛತಾಂ ಜೀವಪುದ್ಗಲಾನಾಮುದಾಸೀನಾವಿನಾಭೂತಸಹಾಯಕಾರಣಮಾತ್ರತ್ವೇನ ಗಮನಮನು-ಗೃಹ್ಣಾತಿ ಇತಿ ।

ಜಹ ಹವದಿ ಧಮ್ಮದವ್ವಂ ತಹ ತಂ ಜಾಣೇಹ ದವ್ವಮಧಮಕ್ಖಂ ।
ಠಿದಿಕಿರಿಯಾಜುತ್ತಾಣಂ ಕಾರಣಭೂದಂ ತು ಪುಢವೀವ ॥೮೬॥

ಯಥಾ ಭವತಿ ಧರ್ಮದ್ರವ್ಯಂ ತಥಾ ತಜ್ಜಾನೀಹಿ ದ್ರವ್ಯಮಧರ್ಮಾಖ್ಯಮ್ ।
ಸ್ಥಿತಿಕ್ರಿಯಾಯುಕ್ತಾನಾಂ ಕಾರಣಭೂತಂ ತು ಪೃಥಿವೀವ ॥೮೬॥

[ಧಮ್ಮಂ ದವ್ವಂ] ಧರ್ಮದ್ರವ್ಯವು [ಜೀವಪೋಗ್ಗಲಾಣಂ] ಜೀವ-ಪುದ್ಗಲಗಳಿಗೆ ಗಮನದಲ್ಲಿ ಅನುಗ್ರಹ ಮಾಡುತ್ತದೆ (ನಿಮಿತ್ತಭೂತವಾಗುತ್ತದೆ)ಯೆಂದು [ವಿಯಾಣಾಹಿ] ತಿಳಿಯುವುದು.

ಟೀಕೆ :- ಇದು ಧರ್ಮದ ಗತಿಹೇತುತ್ವದ ದೃಷ್ಟಾಂತವಿದೆ.

ಯಾವ ಪ್ರಕಾರ ನೀರು ತಾನು ಗಮನ ಮಾಡದೆ ಮತ್ತು (ಇತರವನ್ನು) ಗಮನ ಮಾಡಿಸದೆ, ತಾವಾಗಿಯೇ ಗಮನ ಮಾಡುತ್ತಿರುವ ಮೀನುಗಳಿಗೆ ಉದಾಸೀನ ಅವಿನಾಭಾವಿಯಾದ ಸಹಾಯರೂಪ ಕಾರಣ ಮಾತ್ರರೂಪದಿಂದ ಗಮನದಲ್ಲಿ ಅನುಗ್ರಹ ಮಾಡುತ್ತದೆ, ಅದೇ ಪ್ರಕಾರ ಧರ್ಮ (ಧರ್ಮಾಸ್ತಿಕಾಯ)ವೂ ತಾನು ಗಮನ ಮಾಡದೆ ಮತ್ತು (ಇತರವನ್ನು) ಗಮನ ಮಾಡಿಸದೆ, ತಾವಾಗಿಯೇ ಗಮನ ಮಾಡುತ್ತಿರುವ ಜೀವ-ಪುದ್ಗಲಗಳಿಗೆ ಉದಾಸೀನ ಅವಿನಾಭಾವಿಯಾದ ಸಹಾಯರೂಪ ಕಾರಣಮಾತ್ರರೂಪದಿಂದ ಗಮನದಲ್ಲಿ[೧] ಅನುಗ್ರಹ ಮಾಡುತ್ತದೆ.

ಗಾಥೆ - ೮೬

ಗಾಥಾರ್ಥ :- [ಜಹ] ಯಾವ ಪ್ರಕಾರ [ಧಮ್ಮದವ್ವಂ ಹವದಿ] ಧರ್ಮದ್ರವ್ಯವಿದೆ [ತಹ] ಅದೇ ಪ್ರಕಾರ [ಅಧಮಕ್ಖಂ ದವ್ವಂ] ಅಧರ್ಮವೆಂಬ ಹೆಸರಿನ ದ್ರವ್ಯವನ್ನೂ [ಜಾಣೇಹ] ತಿಳಿಯುವುದು ; [ತಂ ತು] ಆದರೆ ಅದು (ಗತಿಕ್ರಿಯಾಯುಕ್ತಕ್ಕೆ ಕಾರಣಭೂತವಾಗುವ ಬದಲು)[ಠಿದಿಕಿರಿಯಾಜುತ್ತಾಣಂ] ಸ್ಥಿತಿಕ್ರಿಯಾಯುಕ್ತಕ್ಕೆ

ಆ ಧರ್ಮನಾಮದದ್ರವ್ಯದಂತೆ ಅಧರ್ಮನಾಮದ ದ್ರವ್ಯವಿದೆಯೆಂದರಿವುದು ।
ಅಧರ್ಮದ್ರವ್ಯವು ಸ್ಥಿತಿಕ್ರಿಯೆಯುಕ್ತಕೆ ಪೃಥ್ವಿಯಂತೆ ಕಾರಣಭೂತವಿದೆ ॥೮೬॥

---

೧. ಗಮನದಲ್ಲಿ ಅನುಗ್ರಹ ಮಾಡುವುದು ಎಂದರೆ ಗಮನದಲ್ಲಿ ಉದಾಸೀನ ಅವಿನಾಭಾವಿಯಾದ ಸಹಾಯರೂಪ (ನಿಮಿತ್ತರೂಪ) ಕಾರಣಮಾತ್ರವಾಗುವುದು.

ಅಧರ್ಮಸ್ವರೂಪಾಖ್ಯಾನಮೇತತ್ ।

ಯಥಾ ಧರ್ಮಃ ಪ್ರಜ್ಞಾಪಿತಸ್ತಥಾऽಧರ್ಮೋ೭ಪಿ ಪ್ರಜ್ಞಾಪನೀಯಃ । ಅಯಂ ತು ವಿಶೇಷಃ । ಸ ಗತಿಕ್ರಿಯಾಯುಕ್ತಾನಾಮುದಕವತ್ಕಾರಣಭೂತಃ, ವಿಷಃ ಪುನಃ ಸ್ಥಿತಿಕ್ರಿಯಾಯುಕ್ತಾನಾಂ ಪೃಥಿವೀವತ್ಕಾರಣಭೂತಃ । ಯಥಾ ಪೃಥಿವೀ ಸ್ವಯಂ ಪೂರ್ವಮೇವ ತಿಷ್ಠಂತೀ ಪರಮಸ್ಥಾಪಯಂತೀ ಚ ಸ್ವಯಮೇವ ತಿಷ್ಠತಾ-ಮಶ್ವಾದೀನಾಮುದಾಸೀನಾವಿನಾಭೂತಸಹಾಯಕಾರಣಮಾತ್ರತ್ವೇನಸ್ಥಿತಿಮನುಗೃಹ್ಣಾತಿ, ತಥಾऽಧರ್ಮೋ೭ಪಿ ಸ್ವಯಂ ಪೂರ್ವಮೇವ ತಿಷ್ಠನ್ ಪರಮಸ್ಥಾಪಯಂಶ್ಚ ಸ್ವಯಮೇವ ತಿಷ್ಠತಾಂ ಜೀವಪುದ್ಗಲಾನಾಮುದಾಸೀನಾವಿನಾ-ಭೂತಸಹಾಯಕಾರಣಮಾತ್ರತ್ವೇನಸ್ಥಿತಿ ಮನುಗೃಹ್ಣಾತೀತಿ ।

ಜಾದೋ ಅಲೋಗಲೋಗೋ ಜೇಸಿಂ ಸಬ್ಭಾವದೋ ಯ ಗಮಣಠಿದೀ ।
ದೋ ವಿ ಯ ಮಯಾ ವಿಭತ್ತಾ ಅವಿಭತ್ತಾ ಲೋಯಮೇತ್ತಾ ಯ ॥೮೭॥

ಜಾತಮಲೋಕಲೋಕಂ ಯಯೋಃ ಸದ್ಭಾವತಶ್ಚ ಗಮನಸ್ಥಿತೀ ।
ದ್ವಾವಪಿ ಚ ಮತೌ ವಿಭಕ್ತಾವವಿಭಕ್ತೌ ಲೋಕಮಾತ್ರೌ ಚ ॥೮೭॥

[ಪುಢವೀವ] ಪೃಥ್ವಿಯ ಹಾಗೆ [ಕಾರಣಭೂದಂ] ಕಾರಣಭೂತವಿದೆ. (ಎಂದರೆ ಸ್ಥಿತಿ ಕ್ರಿಯಾಪರಿಣತ ಜೀವ-ಪುದ್ಗಲಗಳಿಗೆ ನಿಮಿತ್ತಭೂತವಿದೆ.)

ಟೀಕೆ :- ಇದು ಅಧರ್ಮ ಸ್ವರೂಪದ ಕಥನವಿದೆ.

ಯಾವ ಪ್ರಕಾರ ಧರ್ಮದ ವಿವೇಚನೆ ಮಾಡಲಾಯಿತು ಅದೇ ಪ್ರಕಾರ ಅಧರ್ಮದ ವಿವೇಚನೆಯನ್ನು ಮಾಡುವುದೂ ಯೋಗ್ಯವಿದೆ. ಆದರೆ ಇಲ್ಲಿ (ಕೆಳಗೆ ಹೇಳಿದ ಪ್ರಕಾರ) ವ್ಯತ್ಯಾಸವಿದೆ ; ಅದು (ಧರ್ಮಾಸ್ತಿಕಾಯವು) ಗತಿಕ್ರಿಯಾಯುಕ್ತಕ್ಕೆ ನೀರಿನ ಹಾಗೆ ಕಾರಣಭೂತವಿದೆ ಮತ್ತು ಇದು (ಅಧರ್ಮಾಸ್ತಿಕಾಯವು) ಸ್ಥಿತಿಕ್ರಿಯಾಯುಕ್ತಕ್ಕೆ ಪೃಥ್ವಿಯ ಹಾಗೆ ಕಾರಣಭೂತವಿದೆ. ಯಾವ ಪ್ರಕಾರ ಪೃಥ್ವಿಯು ಮೊದಲಿನಿಂದಲೇ ತಾನು ಸ್ಥಿತಿರೂಪ (ಸ್ಥಿರ)ವಾಗಿರುತ್ತ ಹಾಗೂ ಇತರಕ್ಕೆ ಸ್ಥಿತಿ (ಸ್ಥಿರತೆ)ಯನ್ನುಂಟು ಮಾಡದೆ, ತಾವಾಗಿಯೇ ಸ್ಥಿತಿರೂಪದಿಂದ ಪರಿಣಮಿಸುವ ಕುದುರೆ ಮೊದಲಾದುವಕ್ಕೆ ಉದಾಸೀನ ಅವಿನಾಭಾವಿ ಸಹಾಯರೂಪಕಾರಣಮಾತ್ರದಂತೆ ಸ್ಥಿತಿಯಲ್ಲಿ ಅನುಗ್ರಹ ಮಾಡುತ್ತದೆ, ಅದೇ ಪ್ರಕಾರ ಅಧರ್ಮ (ಅಧರ್ಮಾಸ್ತಿಕಾಯ)ವೂ ತಾನು ಮೊದಲಿನಿಂದಲೇ ಸ್ಥಿತಿರೂಪದಿಂದ ವರ್ತಿಸುತ್ತ ಮತ್ತು ಇತರಕ್ಕೆ ಸ್ಥಿತಿಯನ್ನುಂಟು ಮಾಡದೆ, ತಾವಾಗಿಯೇ ಸ್ಥಿತಿರೂಪದಿಂದ ಪರಿಣಮಿಸುತ್ತಿರುವ ಜೀವ-ಪುದ್ಗಲಗಳಿಗೆ ಉದಾಸೀನ ಅವಿನಾಭಾವಿ ಸಹಾಯರೂಪ ಕಾರಣಮಾತ್ರದಂತೆ ಸ್ಥಿತಿಯಲ್ಲಿ ಅನುಗ್ರಹ ಮಾಡುತ್ತದೆ.

ಯಾವಲೋಕ-ಅಲೋಕಮೇಣ್ಣತಿ-ಸ್ಥಿತಿಗಳು ಧರ್ಮಾಧರ್ಮಗಳಿಂದಾಗುವವು ।
ಅವೆರಡು ಭಿನ್ನ-ಅಭಿನ್ನವಾಗಿದ್ದು ಸಕಲಲೋಕಪ್ರಮಾಣವಾಗಿರುವವು ॥೮೭॥

ಧರ್ಮಾಧರ್ಮಸದ್ಭಾವೇ ಹೇತೂಪನ್ಯಾಸೋಽಯಮ್ ।

ಧರ್ಮಾಧರ್ಮೌ ವಿದ್ಯೇತೇ, ಲೋಕಾಲೋಕವಿಭಾಗಾನ್ಯಥಾನುಪಪತ್ತೇಃ । ಜೀವಾದಿಸರ್ವಪದಾರ್ಥಾನಾಮೇಕತ್ರ ವೃತ್ತಿರೂಪೋ ಲೋಕಃ । ಶುದ್ಧೈಕಾಕಾಶವೃತ್ತಿರೂಪೋಽಲೋಕಃ । ತತ್ರ ಜೀವಪುದ್ಗಲೌ ಸ್ವರಸತ ಏವ ಗತಿತಪೂರ್ವಸ್ಥಿತಿಪರಿಣಾಮಾಪನ್ನೌ । ತಯೋರ್ಯದಿ ಗತಿಪರಿಣಾಮಂ ತತ್ಪೂರ್ವಸ್ಥಿತಿಪರಿಣಾಮಂ ವಾ ಸ್ವಯಮನುಭವತೋ ರ್ಬಹಿರಂಗಹೇತೂ ಧರ್ಮಾಧರ್ಮೌ ನ ಭವೇತಾಮ್, ತದಾ ತಯೋರ್ನಿರರ್ಗಲಗತಿಸ್ಥಿತಿಪರಿಣಾಮತ್ವಾದಲೋಕೇಽಪಿ ವೃತ್ತಿಃ ಕೇನ ವಾರ್ಯೇತ । ತತೋ ನ ಲೋಕಾಲೋಕವಿಭಾಗಃ ಸಿಧ್ಯೇತ । ಧರ್ಮಾಧರ್ಮಯೋಸ್ತು ಜೀವಪುದ್ಗಲಯೋರ್ಗತಿತಪೂರ್ವಸ್ಥಿತ್ಯೋರ್ಬಹಿರಂಗಹೇತುತ್ವೇನ ಸದ್ಭಾವೇಽಭ್ಯುಪಗಮ್ಯಮಾನೇ ಲೋಕಾಲೋಕವಿಭಾಗೋ ಜಾಯತ ಇತಿ । ಕಿಂಚ ಧರ್ಮಾಧರ್ಮೌ ದ್ವಾವಪಿ ಪರಸ್ಪರಂ ಪೃಥಗ್ಭೂತಾಸ್ತಿತ್ವನಿರ್ವೃತ್ತತ್ವಾದ್ವಿಭಕ್ತೌ । ಏಕಕ್ಷೇತ್ರಾವಗಾಢತ್ವಾದವಿಭಕ್ತೌ । ನಿಷ್ಕ್ರಿಯತ್ವೇನ ಸಕಲಲೋಕವರ್ತಿನೋರ್ಜೀವಪುದ್ಗಲಯೋರ್ಗತಿಸ್ಥಿತ್ಯುಪಗ್ರಹಕರಣಾಲ್ಲೋಕ ಮಾತ್ರಾವಿತಿ ।

ಗಾಥೆ - ೮೭

ಗಾಥಾರ್ಥ :- [ಗಮಣಠಿದಿ] (ಜೀವ-ಪುದ್ಗಲಗಳ) ಗತಿ-ಸ್ಥಿತಿ [ಯ) ಮತ್ತು [ಅಲೋಗಲೋಗೋ] ಅಲೋಕ ಹಾಗೂ ಲೋಕದ ವಿಭಾಗವು, [ಜೇಸಿಂ ಸಬ್ಭಾವದೋ] ಅವೆರಡು ದ್ರವ್ಯಗಳ ಸದ್ಭಾವದಿಂದ [ಜಾದೋ] ಆಗುತ್ತದೆ. [ಯ] ಮತ್ತು [ದೋ ವಿ] ಅವೆರಡೂ [ವಿಭತ್ತಾ] ವಿಭಕ್ತ, [ಅವಿಭತ್ತಾ] ಅವಿಭಕ್ತ [ಯ] ಮತ್ತು [ಲೋಯಮೇತ್ತಾ] ಲೋಕಪ್ರಮಾಣವೆಂದು [ಮಯಾ] ಹೇಳಲಾಗಿದೆ.

ಟೀಕೆ :- ಇಲ್ಲಿ ಧರ್ಮ ಮತ್ತು ಅಧರ್ಮದ ಸದ್ಭಾವದ ಸಿದ್ಧಿಯ ಕುರಿತು ಉದ್ದೇಶವನ್ನು ದರ್ಶಿಸಲಾಗಿದೆ

ಧರ್ಮ ಮತ್ತು ಅಧರ್ಮ ಇವೆರಡೂ ವಿದ್ಯಮಾನವಿವೆ, ಏಕೆಂದರೆ ಅವಿಲ್ಲದಿದ್ದರೆ ಲೋಕ-ಅಲೋಕದ ವಿಭಾಗವು ಸಿದ್ಧವಾಗುವುದಿಲ್ಲ. ಜೀವ ಮೊದಲಾದ ಎಲ್ಲ ಪದಾರ್ಥಗಳ ಏಕತ್ರ-ಅಸ್ತಿತ್ವರೂಪ ಲೋಕವಿದೆ ; ಒಂದು ಶುದ್ಧ ಆಕಾಶದ ಅಸ್ತಿತ್ವರೂಪ ಅಲೋಕವಿದೆ. ಅಲ್ಲಿ ಜೀವ ಮತ್ತು ಪುದ್ಗಲಗಳು ಸ್ವರಸದಿಂದಲೇ (ಸ್ವಭಾವದಿಂದಲೇ) ಗತಿಪರಿಣಾಮಕ್ಕೆ ಹಾಗೂ ಗತಿಯೊಡನೆ ಸ್ಥಿತಿಪರಿಣಾಮಕ್ಕೆ ಪ್ರಾಪ್ತವಾಗುತ್ತದೆ. ಒಂದು ವೇಳೆ ತಾವು ಗತಿಪರಿಣಾಮ ಅಥವಾ ಗತಿಪೂರ್ವಕ ಸ್ಥಿತಿಪರಿಣಾಮದ ಸ್ವಯಂ ಅನುಭವ ಮಾಡುವಂಥ ಆ ಜೀವ-ಪುದ್ಗಲಗಳಿಗೆ ಬಹಿರಂಗಹೇತುವಾಗಿ ಧರ್ಮ ಮತ್ತು ಅಧರ್ಮಗಳಿಲ್ಲದಿದ್ದರೆ ಜೀವ-ಪುದ್ಗಲಗಳ ನಿರರ್ಗಲ[೧]ವಾದ ಗತಿಪರಿಣಾಮ ಮತ್ತು ಸ್ಥಿತಿಪರಿಣಾಮವಾಗುವುದರಿಂದ ಅಲೋಕದಲ್ಲೂ ಅವುಗಳ (ಜೀವ-ಪುದ್ಗಲಗಳ) ವೃತ್ತಿಯನ್ನು ಯಾರಿಂದ ನಿವಾರಿಸುವ ಸಾಧ್ಯತೆಯಿದೆ ? (ಯಾರಿಂದಲೂ ನಿವಾರಣೆ ಮಾಡಲಾಗುವುದಿಲ್ಲ.) ಅದಕ್ಕಾಗಿ ಲೋಕ ಮತ್ತು ಅಲೋಕದ ವಿಭಾಗವು ಸಿದ್ಧವಾಗುವುದಿಲ್ಲ. ಆದರೆ ಜೀವ-ಪುದ್ಗಲಗಳಿಗೆ ಗತಿಯ ಮತ್ತು ಗತಿಪೂರ್ವಕ ಸ್ಥಿತಿಯ ಬಹಿರಂಗ ಹೇತುಗಳ ರೂಪದಲ್ಲಿ ಧರ್ಮ ಮತ್ತು ಅಧರ್ಮದ ಸದ್ಭಾವವನ್ನು ಸ್ವೀಕಾರ ಮಾಡಲಾದರೆ ಲೋಕ ಮತ್ತು ಅಲೋಕದ ವಿಭಾಗವು (ಸಿದ್ಧ) ಆಗುತ್ತದೆ. (ಆದ್ದರಿಂದ ಧರ್ಮ ಮತ್ತು ಅಧರ್ಮಗಳು ವಿದ್ಯಮಾನವಿವೆ.) ಮತ್ತು (ಅವುಗಳ ಸಂಬಂಧದಲ್ಲಿ ವಿಶೇಷ ವಿವರಣೆಯು ಹೀಗಿದೆ-) ಧರ್ಮ ಮತ್ತು ಅಧರ್ಮ-ಇವೆರಡೂ ಪರಸ್ಪರ ಪೃಥಗ್ಭೂತ ಅಸ್ತಿತ್ವದಿಂದ ನಿಷ್ಪನ್ನವಿರುವುದರಿಂದ ವಿಭಕ್ತ(ಭಿನ್ನ)ವಿವೆ.

೧. ನಿರರ್ಗಲ = ನಿರಂಕುಶ ; ಮರ್ಯಾದೆಯಿಲ್ಲದ.

ಣ ಯ ಗಚ್ಛದಿ ಧಮ್ಮತ್ಥೀ ಗಮಣಂ ಣ ಕರೇದಿ ಅಣ್ಣದವಿಯಸ್ಸ ।
ಹವದಿ ಗದಿಸ್ಸ ಯ ಪಸರೋ ಜೀವಾಣಂ ಪೋಗ್ಗಲಾಣಂ ಚ ॥೮೮॥

ನ ಚ ಗಚ್ಛತಿ ಧರ್ಮಾಸ್ತಿಕೋ ಗಮನಂ ನ ಕರೋತ್ಯನ್ಯದ್ರವ್ಯಸ್ಯ ।
ಭವತಿ ಗತೇಃ ಸಃ ಪ್ರಸರೋ ಜೀವಾನಾಂ ಪುದ್ಗಲಾನಾಂ ಚ ॥೮೮॥

ಧರ್ಮಾಧರ್ಮಯೋರ್ಗತಿಸ್ಥಿತಿಹೇತುತ್ವೇऽಪ್ಯತ್ಯಂತೌದಾಸೀನ್ಯಾಖ್ಯಾಪನಮೇತತ್ ।

ಯಥಾ ಹಿ ಗತಿಪರಿಣತಃ ಪ್ರಭಂಜನೋ ವೈಜಯಂತೀನಾಂ ಗತಿಪರಿಣಾಮಸ್ಯ ಹೇತುಕರ್ತಾऽವಲೋಕ್ಯತೇ, ನ ತಥಾ ಧರ್ಮಃ । ಸ ಖಲು ನಿಷ್ಕ್ರಿಯತ್ವಾತ್ ನ ಕದಾಚಿದಪಿ ಗತಿಪರಿಣಾಮಮೇವಾಪದ್ಯತೇ । ಕುತೋऽಸ್ಯ

ಏಕಕ್ಷೇತ್ರಾವಗಾಹಿಯಿರುವುದರಿಂದ ಅವಿಭಕ್ತ (ಅಭಿನ್ನ)ವಿವೆ ; ಸಂಪೂರ್ಣಲೋಕದಲ್ಲಿ ಪ್ರವರ್ತಮಾನವಾದ ಜೀವ-ಪುದ್ಗಲಗಳಿಗೆ ಗತಿ-ಸ್ಥಿತಿಯಲ್ಲಿ ನಿಷ್ಕ್ರಿಯರೂಪದಿಂದ ಅನುಗ್ರಹ ಮಾಡುತ್ತವೆ ಅದಕ್ಕಾಗಿ (ನಿಮಿತ್ತರೂಪ-ವಾಗುತ್ತಿರುವುದರಿಂದ) ಲೋಕ ಪ್ರಮಾಣವಿದೆ.

ಗಾಥೆ - ೮೮

ಗಾಥಾರ್ಥ ಃ- [ಧಮ್ಮತ್ಥೀ] ಧರ್ಮಾಸ್ತಿಕಾಯವು [ಣ ಗಚ್ಛದಿ] ಗಮನ ಮಾಡುವುದಿಲ್ಲ [ಯ] ಮತ್ತು [ಅಣ್ಣದವಿಯಸ್ಸ] ಬೇರೆ ದ್ರವ್ಯವನ್ನು [ಗಮಣಂ ಣ ಕರೇದಿ] ಗಮನ ಮಾಡಿಸುವುದಿಲ್ಲ ; ಅದು [ಜೀವಾಣಂ ಪೋಗ್ಗಲಾಣಂ ಚ] ಜೀವ ಹಾಗೂ ಪುದ್ಗಲಗಳಿಗೆ (ಗತಿಪರಿಣಾಮದಲ್ಲಿ ಕೇವಲ ಆಶ್ರಯರೂಪವಿರುವುದರಿಂದ) [ಗದಿಸ್ಸ ಪಸರೋ] ಗತಿಗೆ ಉದಾಸೀನ ಪ್ರಸಾರಕ (ಎಂದರೆ ಗತಿ ಪ್ರಸಾರದಲ್ಲಿ ಉದಾಸೀನ ನಿಮಿತ್ತಭೂತ) [ಭವತಿ] ಇದೆ.

ಟೀಕೆ ಃ- ಧರ್ಮ ಮತ್ತು ಅಧರ್ಮಗಳು ಗತಿ ಮತ್ತು ಸ್ಥಿತಿಗೆ ಹೇತುಗಳಾಗಿದ್ದರೂ ಅವು ತೀರ ಉದಾಸೀನವಿವೆಯೆಂದು ಇಲ್ಲಿ ಹೇಳಲಾಗಿದೆ.

ಯಾವ ಪ್ರಕಾರ ಗತಿಪರಿಣತ ಪವನವು ಧ್ವಜಗಳ ಗತಿಪರಿಣಾಮಕ್ಕೆ ಉದ್ದೇಶಕರ್ತೃವಾಗಿ ಕಂಡು ಬರುತ್ತದೆ; ಅದೇ ಪ್ರಕಾರ ಧರ್ಮವು (ಜೀವ-ಪುದ್ಗಲಗಳ ಗತಿಪರಿಣಾಮಕ್ಕೆ ಉದ್ದೇಶಕರ್ತೃವಾಗಿ) ಇಲ್ಲ- ಅದು (ಧರ್ಮವು) ವಾಸ್ತವಿಕವಾಗಿ ನಿಷ್ಕ್ರೀಯವಿರುವುದರಿಂದ ಗತಿಪರಿಣಾಮಕ್ಕೆಂದೂ ಪ್ರಾಪ್ತವಾಗುವುದಿಲ್ಲವೆಂದ ಮೇಲೆ ಅದಕ್ಕೆ (ಇತರದ) ಸಹಕಾರಿ[೧]ಯಂತೆ ಪರದ ಗತಿಪರಿಣಾಮದ ಹೇತುಕರ್ತೃತ್ವವು ಹೇಗಿರುವುದು ? (ಇರುವುದಿಲ್ಲ.) ಆದರೆ ಯಾವ

ಗಮನ ತಾ ಮಾಡುವುದಿಲ್ಲ ಧರ್ಮಾಸ್ತಿ ಪರದ್ರವ್ಯಗಳ ಮಾಡಿಸುವುದಿಲ್ಲ ।
ಗಮನದಲುದಾಸೀನ ಪ್ರಸಾರಕವಿದೆಯದು ಜೀವ-ಪುದ್ಗಲಗಳಿಗೆ ॥೮೮॥

೧. ಸಹಕಾರೀ ಜೊತೆಯಲ್ಲಿ ಕಾರ್ಯ ಮಾಡುವಂಥ ಎಂದರೆ ಜೊತೆಯಲ್ಲಿಚಲನೆ ಮಾಡುವಂಥ [ಧ್ವಜದೊಡನೆ ಗಾಳಿಯೂ ಚಲನೆ ಮಾಡುತ್ತಿರುವುದರಿಂದ ಇಲ್ಲಿ ಗಾಳಿಗೆ (ಧ್ವಜದ) ಸಹಕಾರಿಯ ಹಾಗೆ ಹೇತುಕರ್ತೃವೆಂದು ಹೇಳಿದೆ ; ಮತ್ತು ಜೀವ-ಪುದ್ಗಲಗಳೊಡನೆ ಧರ್ಮಾಸ್ತಿಕಾಯವು ಗಮನ ಮಾಡದೆ (ಎಂದರೆ ಸಹಕಾರಿಯಾಗದೆ), ಅವಕ್ಕೆ ಕೇವಲ (ಗತಿಯಲ್ಲಿ) ಆಶ್ರಯ ರೂಪ ಕಾರಣವಾಗುವುದರಿಂದ

ಸಹಕಾರಿತ್ವೇನ ಪರೇಷಾಂ ಗತಿಪರಿಣಾಮಸ್ಯ ಹೇತುಕರ್ತೃತ್ವಮ್ । ಕಿಂತು ಸಲಿಲಮಿವ ಮತ್ಸ್ಯಾನಾಂ ಜೀವ-ಪುದ್ಗಲಾನಾಮಾಶ್ರಯಕಾರಣಮಾತ್ರತ್ವೇನೋದಾಸೀನ ಏವಾಸೌ ಗತೇಃ ಪ್ರಸರೋ ಭವತಿ । ಅಪಿ ಚ ಯಥಾ ಗತಿಪೂರ್ವಸ್ಥಿತಿಪರಿಣತಸ್ತುರಂಗೋऽಶ್ವವಾರಸ್ಯ ಸ್ಥಿತಿಪರಿಣಾಮಸ್ಯ ಹೇತುಕರ್ತಾऽವಲೋಕ್ಯತೇ, ನ ತಥಾऽಧರ್ಮಃ । ಸ ಖಲು ನಿಷ್ಕ್ರೀಯತ್ವಾತ್ ನ ಕದಾಚಿದಪಿ ಗತಿಪೂರ್ವಸ್ಥಿತಿಪರಿಣಾಮಮೇವಾಪದ್ಯತೇ । ಕುತೋऽಸ್ಯ ಸಹಸ್ಥಾಯಿತ್ವೇನ ಪರೇಷಾಂ ಗತಿಪೂರ್ವಸ್ಥಿತಿಪರಿಣಾಮಮೇವಾಪದ್ಯತೇ ।ಕುತೋऽಸ್ಯ ಸಹಸ್ಥಾಯಿತ್ವೇನ ಪರೇಷಾಂ ಗತಿಪೂರ್ವಸ್ಥಿತಿ-ಪರಿಣಾಮಸ್ಯ ಹೇತುಕರ್ತೃತ್ವಮ್ । ಕಿಂತು ಪೃಥಿವೀವಸ್ತುರಂಗಸ್ಯ ಜೀವಪುದ್ಗಲಾನಾಮಾಶ್ರಯಕಾರಣ-ಮಾತ್ರತ್ವೇನೋದಾಸೀನ ಏವಾಸೌ ಗತಿಪೂರ್ವಸ್ಥಿತೇಃ ಪ್ರಸರೋ ಭವತೀತಿ ।

ಪ್ರಕಾರ ನೀರು ಮೀನುಗಳಿಗೆ (ಗತಿಪರಿಣಾಮದಲ್ಲಿ) ಕೇವಲ ಆಶ್ರಯರೂಪಕಾರಣದ ಹಾಗೆ ಗತಿಯ ಉದಾಸೀನ ಪ್ರಸಾರಕವೇ ಇದೆ, ಅದೇ ಪ್ರಕಾರ ಧರ್ಮವು ಜೀವ ಪುದ್ಗಲಗಳಿಗೆ (ಗತಿಪರಿಣಾಮದಲ್ಲಿ) ಕೇವಲ ಆಶ್ರಯರೂಪ ಕಾರಣದ ಹಾಗೆ ಗತಿಯ ಉದಾಸೀನ ಪ್ರಸಾರಕವೇ (ಎಂದರೆ ಗತಿಪ್ರಸಾರದ ಉದಾಸೀನ ನಿಮಿತ್ತವೇ) ಇದೆ.

ಮತ್ತು (ಅಧರ್ಮಾಸ್ತಿಕಾಯದ ಸಂಬಂಧದಲ್ಲೂ ಹೀಗಿದೆ-) ಯಾವ ಪ್ರಕಾರ ಗತಿಪೂರ್ವಕ ಸ್ಥಿತಿಪರಿಣತವಾದ ಅಶ್ವವು ಅಶ್ವಾರೋಹಿಯ (ಗತಿಪೂರ್ವಕ) ಸ್ಥಿತಿಪರಿಣಾಮದ ಹೇತುಕರ್ತೃವಾಗಿ ಕಂಡು ಬರುತ್ತದೆ, ಅದೇ ಪ್ರಕಾರ ಅಧರ್ಮವು (ಜೀವ-ಪುದ್ಗಲಗಳಿಗೆ ಗತಿಪೂರ್ವಕ ಸ್ಥಿತಿಪರಿಣಾಮದ ಹೇತುಕರ್ತೃವು) ಇಲ್ಲ. ಅದು (ಅಧರ್ಮವು) ವಾಸ್ತವಿಕವಾಗಿ ನಿಷ್ಕ್ರಿಯವಿರುವುದರಿಂದ ಎಂದೂ ಗತಿಪೂರ್ವಕ ಸ್ಥಿತಿಪರಿಣಾಮಕ್ಕೆ ಪ್ರಾಪ್ತವಾಗುವುದಿಲ್ಲ; ಎಂದ ಮೇಲೆ ಅದಕ್ಕೆ (ಇತರದ) ಸಹಸ್ಥಾಯಿ[೧]ಯ ಹಾಗೆ ಪರದ ಗತಿಪೂರ್ವಕ ಸ್ಥಿತಿಪರಿಣಾಮದ ಹೇತುಕರ್ತೃವು ಹೇಗಿರುವುದು ? (ಇರುವುದಿಲ್ಲ) ಆದರೆ ಯಾವ ಪ್ರಕಾರ ಪೃಥ್ವಿಯು ಕುದುರೆಗೆ (ಗತಿಪೂರ್ವಕ ಸ್ಥಿತಿಪರಿಣಾಮದಲ್ಲಿ) ಕೇವಲ ಆಶ್ರಯರೂಪಕಾರಣದ ಹಾಗೆ ಗತಿಪೂರ್ವಕಸ್ಥಿತಿಯ ಉದಾಸೀನ ಪ್ರಸಾರಕವೇ ಇದೆ, ಅದೇ ಪ್ರಕಾರ ಅಧರ್ಮವು ಜೀವ-ಪುದ್ಗಲಗಳಿಗೆ (ಗತಿಪೂರ್ವಕಸ್ಥಿತಿಪರಿಣಾಮದಲ್ಲಿ) ಕೇವಲ ಆಶ್ರಯರೂಪ ಕಾರಣದ ಹಾಗೆ ಗತಿಪೂರ್ವಕಸ್ಥಿತಿಯ ಉದಾಸೀನ ಪ್ರಸಾರಕವೇ (ಎಂದರೆ ಗತಿಪೂರ್ವಕ-ಸ್ಥಿತಿ ಪ್ರಸಾರಕ್ಕೆ ಉದಾಸೀನ ನಿಮಿತ್ತವೇ) ಇದೆ.

ಧರ್ಮಾಸ್ತಿಕಾಯಕ್ಕೆ ಉದಾಸೀನ ನಿಮಿತ್ತವೆಂದು ಹೇಳಿದೆ. ಗಾಳಿಗೆ ಹೇತುಕರ್ತೃವೆಂದು ಹೇಳಿರುವುದರ ಅರ್ಥವು ಗಾಳಿಯು ಧ್ವಜಗಳ ಗತಿ ಪರಿಣಾಮವನ್ನು ಮಾಡಿಸುತ್ತಿರಬಹುದೆಂದು ತಿಳಿದುಕೊಳ್ಳಬಾರದು. ಉದಾಸೀನ ನಿಮಿತ್ತವಿರಲಿ ಅಥವಾ ಹೇತುಕರ್ತೃವಿರಲಿ - ಎರಡೂ ಪರದಲ್ಲಿ ಅಕಿಂಚಿತ್ಕರವಿವೆ. ಅವುಗಳಲ್ಲಿ ಕೇವಲ ಮೇಲೆ ಹೇಳಿದ ಪ್ರಕಾರವೇ ಅಂತರವಿದೆ. ಈಗ ಮುಂದಿನ ಗಾಥೆಯ ಟೀಕೆಯಲ್ಲಿ ಆಚಾರ್ಯದೇವರು ''ವಾಸ್ತವಿಕವಾಗಿ ಎಲ್ಲ ಗತಿಸ್ಥಿತಿಯುಳ್ಳ ಪದಾರ್ಥಗಳು ನಿಶ್ಚಯದಿಂದ ತಮ್ಮ ಪರಿಣಾಮಗಳಿಂದಲೇ ಗತಿಸ್ಥಿತಿಯನ್ನು ಮಾಡುತ್ತವೆ''ಯೆಂದು ತಾವೇ ಹೇಳುವವರಿದ್ದಾರೆ. ಅದಕ್ಕಾಗಿ ಧ್ವಜ, ಅಶ್ವಾರೋಹಿ ಇತ್ಯಾದಿಗಳೆಲ್ಲವು ತಮ್ಮ ಪರಿಣಾಮಗಳಿಂದಲೇ ಗತಿಸ್ಥಿತಿಯನ್ನು ಮಾಡುತ್ತವೆ, ಅದರಲ್ಲಿ ಧರ್ಮ ಹಾಗೂ ಗಾಳಿ ಮತ್ತು ಅಧರ್ಮ ಹಾಗೂ ಅಶ್ವ-ಇವು ಅವಿಶೇಷರೂಪದಿಂದ ಅಕಿಂಚಿತ್ಕರವಿವೆಯೆಂದು ನಿರ್ಣಯ ಮಾಡುವುದು.]

೧. ಸಹಸ್ಥಾಯಿ = ಜೊತೆಯಲ್ಲಿ ಸ್ಥಿತಿ (ಸ್ಥಿರತೆ) ಮಾಡುವಂಥವು. (ಕುದುರೆಯು ಅಶ್ವಾರೋಹಿಯೊಡನೆ ಸ್ಥಿತಿ ಮಾಡುತ್ತದೆ, ಅದಕ್ಕಾಗಿ ಇಲ್ಲಿ ಕುದುರೆಗೆ ಅಶ್ವಾರೋಹಿಯ ಸ್ಥಿತಿ ಪರಿಣಾಮದ ಹೇತುಕರ್ತೃವೆಂದು ಹೇಳಿದೆ. ಅಧರ್ಮಾಸ್ತಿಕಾಯವಂತೂ ಗತಿಪೂರ್ವಕ ಸ್ಥಿತಿಗೆ - ಪ್ರಾಪ್ತವಾಗುವಂಥ ಜೀವ-ಪುದ್ಗಲಗಳೊಡನೆ ಸ್ಥಿತಿ ಮಾಡುವುದಿಲ್ಲ, ಮೊದಲೇ ಸ್ಥಿತವಿದೆ ; ಹೀಗೆ ಅದು ಸಹಸ್ಥಾಯಿಯಿಲ್ಲದಿರುವುದರಿಂದ ಜೀವ-ಪುದ್ಗಲಗಳಿಗೆ ಗತಿಪೂರ್ವಕ ಸ್ಥಿತಿಪರಿಣಾಮದ ಹೇತುಕರ್ತೃವಿಲ್ಲ.)

ವಿಜ್ಜದಿ ಜೇಸಿಂ ಗಮಣಂ ಠಾಣ ಪುಣ ತೇಸಿಮೇವ ಸಂಭವದಿ ।
ತೇ ಸಗಪರಿಣಾಮೇಹಿಂ ದು ಗಮಣಂ ಠಾಣಂ ಚ ಕುವ್ವಂತಿ ॥೮೯॥

ವಿದ್ಯತೇ ಯೇಷಾಂ ಗಮನಂ ಸ್ಥಾನಂ ಪುನಸ್ತೇಷಾಮೇವ ಸಂಭವತಿ ।
ತೇ ಸ್ವಕಪರಿಣಾಮೈಸ್ತು ಗಮನಂ ಸ್ಥಾನಂ ಚ ಕುರ್ವಂತಿ ॥೮೯॥

ಧರ್ಮಾ ಧರ್ಮಯೋರೌದಾಸೀನ್ಯೇ ಹೇತೂಪನ್ಯಾಸೋಽಯಮ್ ।

ಧರ್ಮಃ ಕಿಲ ನ ಜೀವಪುದ್ಗಲಾನಾಂ ಕದಾಚಿದ್ಗತಿಹೇತುತ್ವಮಭ್ಯಸ್ಯತಿ, ನ ಕದಾಚಿತ್ಸ್ಥಿತಿಹೇತುತ್ವಮಧರ್ಮಃ। ತೌ ಹಿ ಪರೇಷಾಂ ಗತಿಸ್ಥಿತ್ಯೋರ್ಯದಿ ಮುಖ್ಯಹೇತೂ ಸ್ಯಾತಾಂ ತದಾ ಯೇಷಾಂ ಗತಿಸ್ತೇಷಾಂ ಗತಿರೇವ, ನ ಸ್ಥಿತಿಃ, ಯೇಷಾಂ ಸ್ಥಿತಿಸ್ತೇಷಾಂ ಸ್ಥಿತಿರೇವ, ನ ಗತಿಃ । ತತ ಏಕೇಷಾಮಪಿ ಗತಿಸ್ಥಿತಿದರ್ಶನಾದನುಮೀಯತೇ ನ ತೌ ತಯೋರ್ಮುಖ್ಯಹೇತೂ । ಕಿಂತು ವ್ಯವಹಾರನಯವ್ಯವಸ್ಥಾಪಿತೌ ಉದಾಸೀನೌ । ಕಥಮೇವಂ ಗತಿಸ್ಥಿತಿಮತಾಂ ಪದಾರ್ಥಾನಾಂ ಗತಿಸ್ಥಿತೀ ಭವತ ಇತಿ ಚೇತ್, ಸರ್ವೇ ಹಿ ಗತಿಸ್ಥಿತಿಮಂತಃ ಪದಾರ್ಥಾಃ ಸ್ವಪರಿಣಾಮೈರೇವ ನಿಶ್ಚಯೇನ ಗತಿಸ್ಥಿತೀ ಕುರ್ವಂತೀತಿ ।

-ಇತಿ ಧರ್ಮಾಧರ್ಮದ್ರವ್ಯಾಸ್ತಿಕಾಯವ್ಯಾಖ್ಯಾನಂ ಸಮಾಪ್ತಮ್ ।

ಗಾಥೆ - ೮೯

ಗಾಥಾರ್ಥ :- [ಜೇಸಿಂ ಗಮಣಂ ವಿಜ್ಜದಿ] (ಧರ್ಮ-ಅಧರ್ಮಗಳು ಗತಿ-ಸ್ಥಿತಿಗೆ ಮುಖ್ಯ ಹೇತುಗಳಾಗಿಲ್ಲ, ಏಕೆಂದರೆ) ಯಾವವುಗಳಿಗೆ ಗತಿಯಿರುತ್ತದೆ [ತೇಸಿಮೇವ ಪುಣ ಠಾಣಂ ಸಂಭವದಿ] ಅವಕ್ಕೇ ಪುನಃಸ್ಥಿತಿಯಿರುತ್ತದೆ. (ಮತ್ತು ಯಾವವುಗಳಿಗೆ ಸ್ಥಿತಿಯಿರುತ್ತದೆ ಅವಕ್ಕೇ ಪುನಃ ಗತಿಯಿರುತ್ತದೆ.) ಅವಂತೂ (ಗತಿಸ್ಥಿತಿಯುಕ್ತಪದಾರ್ಥಗಳಂತೂ) [ಸಗಪರಿಣಾಮೇಹಿಂ] ತಮ್ಮ ಪರಿಣಾಮಗಳಿಂದ [ಗಮಣಂ ಠಾಣಂ ಚ] ಗತಿ ಮತ್ತು ಸ್ಥಿತಿ [ಕುವ್ವಂತಿ] ಮಾಡುತ್ತವೆ.

ಟೀಕೆ :- ಇದು ಧರ್ಮ ಮತ್ತು ಅಧರ್ಮದ ಉದಾಸೀನತೆಯ ಸಂಬಂಧದಲ್ಲಿ ಹೇತು ಹೇಳಲಾಗಿದೆ.

ವಾಸ್ತವಿಕವಾಗಿ (ನಿಶ್ಚಯದಿಂದ) ಧರ್ಮವು ಜೀವ-ಪುದ್ಗಲಗಳಿಗೆಂದೂ ಗತಿಹೇತುವಾಗುವುದಿಲ್ಲ, ಅಧರ್ಮವೆಂದೂ ಸ್ಥಿತಿಹೇತುವಾಗುವುದಿಲ್ಲ ; ಏಕೆಂದರೆ ಅವು ಇತರಕ್ಕೆ ಒಂದು ವೇಳೆ ಗತಿಸ್ಥಿತಿಗೆ ಮುಖ್ಯ ಹೇತು (ನಿಶ್ಚಯಹೇತು)ಗಳಾದರೆ ಯಾವವುಗಳಿಗೆ ಗತಿಯಿದೆ ಅವಕ್ಕೆ ಗತಿಯೇ ಇರಬೇಕಾಗುವುದು, ಸ್ಥಿತಿಯು ಇರಕೂಡದು ; ಮತ್ತು ಯಾವವುಗಳಿಗೆ ಸ್ಥಿತಿಯಿದೆ ಅವಕ್ಕೆ ಸ್ಥಿತಿಯೇ ಇರಬೇಕಾಗುವುದು, ಗತಿಯು ಇರಕೂಡದು. ಆದರೆ ಒಂದಕ್ಕೇನೇ (ಅದೇ ಒಂದು ಪದಾರ್ಥಕ್ಕೆ) ಗತಿ ಮತ್ತು ಸ್ಥಿತಿಗಳು ಕಂಡು ಬರುತ್ತವೆ ; ಅದಕ್ಕಾಗಿ ಅವು (ಧರ್ಮ-ಅಧರ್ಮಗಳು) ಗತಿ-ಸ್ಥಿತಿಗಳಿಗೆ ಮುಖ್ಯ ಹೇತುಗಳಲ್ಲವೆಂಬ ಊಹೆ ಮೂಡುತ್ತದೆ. ಆದರೆ ವ್ಯವಹಾರನಯವು ಸ್ಥಾಪಿಸಿದ (ವ್ಯವಹಾರನಯದ ಮುಖಾಂತರ ಸ್ಥಾಪಿತ-ಕಥಿತವಾದ) ಉದಾಸೀನ ಹೇತುಗಳಿವೆ.

ಯಾವವುಗಳಿಗೆ ಗತಿಯಿದೆಯವಕೆ ಮತ್ತೆ ಸ್ಥಿರತೆ ಸಂಭವಿಸುವುದು ।
ಅವೆಲ್ಲವು ತಮ್ಮ ಪರಿಣಾಮಗಳಿಂದ ಗತಿ-ಸ್ಥಿತಿಯ ಮಾಡುತಿರುವವು ॥೮೯॥

ಅಥ ಆಕಾಶದ್ರವ್ಯಾಸ್ತಿಕಾಯವ್ಯಾಖ್ಯಾನಮ್ ।

ಸವ್ವೇಸಿಂ ಜೀವಾಣಂ ಸೇಸಾಣಂ ತಹ ಯ ಪೋಗ್ಗಲಾಣಂ ಚ ।
ಜಂ ದೇದಿ ವಿವರಮಖಿಲಂ ತಂ ಲೋಗೇ ಹವದಿ ಆಗಾಸಂ ॥೯೦॥

ಸರ್ವೇಷಾಂ ಜೀವಾನಾಂ ಶೇಷಾಣಾಂ ತಥೈವ ಪುದ್ಗಲಾನಾಂ ಚ ।
ಯದ್ದದಾತಿ ವಿವರಮಖಿಲಂ ತಲ್ಲೋಕೇ ಭವತ್ಯಾಕಾಶಮ್ ॥೯೦॥

ಆಕಾಶಸ್ವರೂಪಾವ್ಯಾಖ್ಯಾನಮೇತತ್ ।

ಷಡ್‌ದ್ರವ್ಯಾತ್ಮಕೇ ಲೋಕೇ ಸರ್ವೇಷಾಂ ಶೇಷದ್ರವ್ಯಾಣಾಂ ಯತ್ಸಮಸ್ತಾವಕಾಶನಿಮಿತ್ತಂ ವಿಶುದ್ಧಕ್ಷೇತ್ರ-ರೂಪಂ ತದಾಕಾಶಮಿತಿ ।

ಪ್ರಶ್ನೆ :- ಹೀಗಿದ್ದರೆ ಗತಿಸ್ಥಿತಿಯುಕ್ತ ಪದಾರ್ಥಗಳಿಗೆ ಗತಿಸ್ಥಿತಿಗಳು ಯಾವ ಪ್ರಕಾರವಾಗುತ್ತವೆ ?

ಉತ್ತರ :- ವಾಸ್ತವಿಕವಾಗಿ ಗತಿಸ್ಥಿತಿಯುಕ್ತ ಸಂಪೂರ್ಣ ಪದಾರ್ಥಗಳು ನಿಶ್ಚಯದಿಂದ ತಮ್ಮ ಪರಿಣಾಮ-ಗಳಿಂದಲೇ ಗತಿ- ಸ್ಥಿತಿಗಳನ್ನು ಮಾಡುತ್ತವೆ.

ಈ ಪ್ರಕಾರವಾಗಿ ಧರ್ಮಾಸ್ತಿಕಾಯ ಮತ್ತು ಅಧರ್ಮಾಸ್ತಿಕಾಯದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಆಕಾಶದ್ರವ್ಯಾಸ್ತಿಕಾಯದ ವ್ಯಾಖ್ಯಾನವಿದೆ.

ಗಾಥೆ - ೯೦

ಗಾಥಾರ್ಥ :- [ಲೋಗೇ] ಲೋಕದಲ್ಲಿ [ಜೀವಾಣಾಂ] ಜೀವಗಳಿಗೆ [ಚ] ಮತ್ತು [ಪೋಗ್ಗಲಾಣಂ] ಪುದ್ಗಲಗಳಿಗೆ [ತಹ ಯ] ಅದೇ ಪ್ರಕಾರ [ಸವ್ವೇಸಿಂ ಸೇಸಾಣಂ] ಉಳಿದ ಸಮಸ್ತ ದ್ರವ್ಯಗಳಿಗೆ [ಜಂ] ಯಾವುದು [ಅಖಿಲಂ ವಿವರಂ] ಸಂಪೂರ್ಣ ಅವಕಾಶ [ದೇದಿ] ಕೊಡುತ್ತದೆ [ತಂ] ಅದು [ಆಗಾಸಂ ಹವದಿ] ಆಕಾಶವಿದೆ.

ಟೀಕೆ :- ಇದು ಆಕಾಶದ ಸ್ವರೂಪದ ಕಥನವಿದೆ.

ಷಟ್‌ದ್ರವ್ಯಾತ್ಮಕವಾದ ಲೋಕದಲ್ಲಿ ಉಳಿದ ಎಲ್ಲ[೧] ದ್ರವ್ಯಗಳಿಗೆ ಯಾವುದು ಪರಿಪೂರ್ಣ ಅವಕಾಶಕ್ಕೆ ನಿಮಿತ್ತವಿದೆ ಅದು ಆಕಾಶವಿದೆ. ಏಕೆಂದರೆ ಅದು (ಆಕಾಶವು) ವಿಶುದ್ಧಕ್ಷೇತ್ರರೂಪವಿದೆ.

ಯಾವುದು ಲೋಕದಿ ಜೀವ-ಪುದ್ಗಲಗಳಿಗೆ ಅಂತೆ ಉಳಿದೆಲ್ಲ ದ್ರವ್ಯಗಳಿಗೆ ।
ಅವಕಾಶವನು ಪೂರ್ಣಕೊಡುತಿರುವುದದು ಆಕಾಶನಾಮದ ದ್ರವ್ಯವಿದೆ ॥೯೦॥

---

೧. ನಿಶ್ಚಯನಯದಿಂದ ನಿತ್ಯನಿರಂಜನ-ಜ್ಞಾನಮಯ ಪರಮಾನಂದವು ಯಾವವುಗಳ ಒಂದು ಲಕ್ಷಣವಿದೆ ಅಂಥ ಅನಂತಾನಂತ ಜೀವಗಳು, ಅವುಗಳಿಂದ ಅನಂತಗುಣಿತವಾದ ಪುದ್ಗಲಗಳು, ಅಸಂಖ್ಯ ಕಾಲಾಣುಗಳು ಮತ್ತು ಅಸಂಖ್ಯ ಪ್ರದೇಶಿಯಾದ ಧರ್ಮ-ಅಧರ್ಮ-ಈ ಎಲ್ಲ ದ್ರವ್ಯಗಳು ವಿಶಿಷ್ಟ ಅವಗಾಹಗುಣದಿಂದ ಲೋಕಾಕಾಶದಲ್ಲಿ- ಆ ಲೋಕಾಕಾಶವು ಕೇವಲ ಅಸಂಖ್ಯ ಪ್ರದೇಶಿಯಾಗಿದ್ದರೂ - ಅದು ಕೂಡ ಅವಕಾಶವನ್ನು ಪ್ರಾಪ್ತಮಾಡಿಕೊಳ್ಳುತ್ತವೆ.

ಜೀವಾ ಪೋಗ್ಗಲಕಾಯಾ ಧಮ್ಮಾಧಮ್ಮಾ ಯ ಲೋಗದೋ ಣಣ್ಣಾ ।
ತತ್ತೋ ಅಣಣ್ಣಮಣ್ಣಂ ಆಯಾಸಂ ಅಂತವದಿರಿತ್ತಂ ॥೯೧॥

ಜೀವಾಃ ಪುದ್ಗಲಕಾಯಾಃ ಧರ್ಮಾಧರ್ಮೌ ಚ ಲೋಕತೋऽನನ್ಯೇ ।
ತತೋऽನನ್ಯದನ್ಯದಾಕಾಶಮಂತವ್ಯತಿರಿಕ್ತಮ್ ॥೯೧॥

ಲೋಕಾದ್ಬಹಿರಾಕಾಶಸೂಚನೇಯಮ್ ।

ಜೀವಾದೀನಿ ಶೇಷದ್ರವ್ಯಾಣ್ಯವಧೃತಪರಿಮಾಣತ್ವಾಲ್ಲೋಕಾದನನ್ಯಾನ್ಯೇವ । ಆಕಾಶಂ ತ್ವನಂತತ್ವಾಲ್ಲೋಕಾದನನ್ಯದನ್ಯಚ್ಚೇತಿ ।

ಗಾಥೆ - ೯೧

ಗಾಥಾರ್ಥ :- [ಜೀವಾ ಪೋಗ್ಗಲಕಾಯಾ ಧಮ್ಮಾಧಮ್ಮಾ ಯ] ಜೀವ, ಪುದ್ಗಲಕಾಯ, ಧರ್ಮ, ಅಧರ್ಮ (ಹಾಗೂ ಕಾಲ) ಇವು [ಲೋಗದೋ ಣಣ್ಣಾ] ಲೋಕದಿಂದ ಅನನ್ಯವಿವೆ [ಅಂತವದಿರಿತ್ತಂ ಆಯಾಸಂ] ಕೊನೆಯಿಲ್ಲದಂಥ ಆಕಾಶವು [ತತ್ತೋ] ಅದರಿಂದ (ಲೋಕದಿಂದ) [ಅಣಣ್ಣಮಣ್ಣಂ] ಅನನ್ಯ ಮತ್ತು ಅನ್ಯವಿದೆ.

ಟೀಕೆ :- ಇದು ಲೋಕದ ಹೊರಗೂ ಆಕಾಶವಿರುವುದರ ಸೂಚಕವಿದೆ.

ಜೀವ ಮೊದಲಾದ ಉಳಿದ ದ್ರವ್ಯಗಳು (ಆಕಾಶವನ್ನು ಹೊರತುಪಡಿಸಿ ಇತರ ದ್ರವ್ಯಗಳು) ಮರ್ಯಾದೆಗೆ ಒಳಪಟ್ಟ ಪರಿಣಾಮವುಳ್ಳವುಗಳಾಗಿರುವುದರ ಕಾರಣ ಲೋಕದಿಂದ ಅನನ್ಯವೇ[೧] ಇವೆ ; ಆಕಾಶವಂತೂ ಅನಂತವಾಗಿರುವ ಕಾರಣ ಲೋಕದಿಂದ ಅನನ್ಯ ಮತ್ತು ಅನ್ಯವಿದೆ.

ಜೀವ, ಪುದ್ಗಲಕಾಯ, ಧರ್ಮಾಧರ್ಮ, ಕಾಲಗಳಿವು ಲೋಕದಿಂದನನ್ಯವಿವೆ ।
ಅವಸಾನವಿಲ್ಲದಾಕಾಶ ಲೋಕದಿಂದನನ್ಯ ಮತ್ತದರಂತೆ ಅನ್ಯವಿದೆ ॥೯೧॥

---

೧. ಇಲ್ಲಿ ಸಾಮಾನ್ಯರೂಪದಿಂದ ಲೋಕದಿಂದ ಪದಾರ್ಥಗಳ ಅನನ್ಯತೆಯನ್ನು ಹೇಳಿದ್ದರೂ ನಿಶ್ಚಯದಿಂದ ಅಮೂರ್ತತ್ವ ಕೇವಲಜ್ಞಾನತ್ವ ಸಹಜಪರಮಾನಂದತ್ವ, ನಿತ್ಯನಿರಂಜನತ್ವ ಇವೇ ಮೊದಲಾದ ಲಕ್ಷಣಗಳಿಂದ ಇತರ ದ್ರವ್ಯಗಳಿಂದ ಜೀವಗಳ ಅನ್ಯತೆಯಿದೆ ಮತ್ತು ತಮ್ಮ - ತಮ್ಮ ಲಕ್ಷಣಗಳಿಂದ ಇತರ ದ್ರವ್ಯಗಳ ಭಿನ್ನತೆಯಿದೆಯೆಂದು ತಿಳಿದುಕೊಳ್ಳಬೇಕು.

ಆಗಾಸಂ ಅವಗಾಸಂ ಗಮಣಟ್ಠಿದಿಕಾರಣೇಹಿಂ ದೇದಿ ಜದಿ ।
ಉಡ್ಢಂಗದಿಪ್ಪಧಾಣಾ ಸಿದ್ಧಾ ಚಿಟ್ಠಂತಿ ಕಿಧ ತತ್ಥ ॥೯೨॥

ಆಕಾಶಮವಕಾಶಂ ಗಮನಸ್ಥಿತಿಕಾರಣಾಭ್ಯಾಂ ದದಾತಿ ಯದಿ ।
ಊರ್ಧ್ವಂಗತಿಪ್ರಧಾನಾಃ ಸಿದ್ಧಾಃ ತಿಷ್ಠಂತಿ ಕಥಂ ತತ್ರ ॥೯೨॥

ಆಕಾಶಸ್ಯಾವಕಾಶೈಕಹೇತೋರ್ಗತಿಸ್ಥಿತಿಹೇತುತ್ವಶಂಕಾಯಾಂ ದೋಷೋಪನ್ಯಾಸೋऽಯಮ್ ।

ಯದಿ ಖಲ್ವಾಕಾಶಮವಗಾಹಿನಾಮವಗಾಹಹೇತುರಿವ ಗತಿಸ್ಥಿತಿಮತಾಂ ಗತಿಸ್ಥಿತಿಹೇತುರಪಿ ಸ್ಯಾತ್, ತದಾ ಸರ್ವೋತ್ಕೃಷ್ಟಸ್ವಾಭಾವಿಕೋರ್ಧ್ವಗತಿಪರಿಣತಾ ಭಗವಂತಃ ಸಿದ್ಧಾ ಬಹಿರಂಗಾಂತರಂಗಸಾಧನಸಾಮಗ್ರ್ಯಾಂ ಸತ್ಯಾಮಪಿ ಕುತಸ್ತತ್ರಾಕಾಶೇ ತಿಷ್ಠಂತೀತಿ ।

ಗಾಥೆ - ೯೨

ಗಾಥಾರ್ಥ ಃ- [ಜದಿ ಆಗಾಸಂ] ಒಂದು ವೇಳೆ ಆಕಾಶವು [ಗಮಣಟ್ಠಿದಿಕಾರಣೇಹಿಂ] ಗತಿ-ಸ್ಥಿತಿಗಳಿಗೆ ಕಾರಣಸಹಿತವಾಗಿ [ಅವಗಾಸಂ ದೇದಿ] ಅವಕಾಶವನ್ನು ಕೊಡುತ್ತಿದ್ದರೆ (ಎಂದರೆ ಒಂದು ವೇಳೆ ಆಕಾಶವು ಅವಕಾಶಹೇತುವೂ ಇದ್ದರೆ ಮತ್ತು ಗತಿ-ಸ್ಥಿತಿ ಹೇತುವೂ ಇದ್ದರೆ) [ಉಡ್ಢಂಗದಿಪ್ಪಧಾಣಾ ಸಿದ್ಧಾ] ಊರ್ಧ್ವಗತಿ ಪ್ರಧಾನರಾದ ಸಿದ್ಧರು [ತತ್ಥ] ಅದರಲ್ಲಿ (ಆಕಾಶದಲ್ಲಿ) [ಕಿಧ] ಅದೇಕೆ [ಚಿಟ್ಠಂತಿ] ಸ್ಥಿರವಿರುತ್ತಾರೆ ? (ಮುಂದೆ ಗಮನವನ್ನೇಕೆ ಮಾಡುವುದಿಲ್ಲ ?)

ಟೀಕೆ ಃ- ಯಾವುದು ಕೇವಲ ಅವಕಾಶಕ್ಕೇನೇ ಹೇತುವಾಗಿದೆ ಅಂಥ ಯಾವ ಆಕಾಶವಿದೆ ಅದರಲ್ಲಿ ಗತಿಸ್ಥಿತಿಹೇತುತ್ವವೂ ಇರುವುದರ ಕುರಿತು ಸಂದೇಹಪಟ್ಟರೆ ಅದರಲ್ಲಿ ದೋಷವು ಬರುತ್ತದೆಯೆಂಬುದರ ಕಥನವು ಇದಾಗಿದೆ.

ಒಂದು ವೇಳೆ ಆಕಾಶವು, ಯಾವ ಪ್ರಕಾರ ಅದು ಅವಗಾಹ [೧] ವುಳ್ಳವುಗಳಿಗೆ ಅವಗಾಹ ಹೇತುವಿದೆ ಅದೇ ಪ್ರಕಾರ ಗತಿಸ್ಥಿತಿವುಳ್ಳವುಗಳಿಗೂ ಗತಿಸ್ಥಿತಿಹೇತುವಾದರೆ ಸರ್ವೋತ್ಕೃಷ್ಟ ಸ್ವಾಭಾವಿಕ ಊರ್ಧ್ವಗತಿಯಿಂದ ಪರಿಣತರಾದ ಸಿದ್ಧಭಗವಂತರು ಬಹಿರಂಗ - ಅಂತರಂಗ ಸಾಧನರೂಪ ಸಾಮಗ್ರಿಗಳಿದ್ದರೂ ಕೂಡ ಅದೇಕೆ (ಯಾವ ಕಾರಣ) ಅದರಲ್ಲಿ -ಆಕಾಶದಲ್ಲಿ ಸ್ಥಿರವಿರುತ್ತಾರೆ ?

ಆಕಾಶವದು ಗತಿ-ಸ್ಥಿತಿಯಕಾರಣಸಹಿತ ಅವಕಾಶಕೊಡುತ್ತಿದ್ದರೆ ।
ಆಕಾಶದಲಿ ಊರ್ಧ್ವಗತಿಪ್ರಧಾನಸಿದ್ಧರು ಅದು ಹೇಗೆ ಸ್ಥಿರವಾದರು ? ॥೯೨॥

---

[೧] ಅವಗಾಹ = ಲೀನವಾಗುವುದು ; ಮಗ್ನವಾಗುವುದು ; ಅವಕಾಶಪಡೆಯುವುದು।

ಜಮ್ಹಾ ಉವರಿಟ್ಠಾಣಂ ಸಿದ್ಧಾಣಂ ಜಿಣವರೇಹಿಂ ಪಣ್ಣತ್ತಂ ।
ತಮ್ಹಾ ಗಮಣಟ್ಠಾಣಂ ಆಯಾಸೇ ಜಾಣ ಣತ್ಥಿ ತ್ತಿ ॥೯೩॥

ಯಸ್ಮಾದುಪರಿಸ್ಥಾನಂ ಸಿದ್ಧಾನಾಂ ಜಿನವರೈಃ ಪ್ರಜ್ಞಪ್ತಮ್ ।
ತಸ್ಮಾದ್ಗಮನಸ್ಥಾನಮಾಕಾಶೇ ಜಾನೀಹಿ ನಾಸ್ತೀತಿ ॥೯೩॥

ಸ್ಥಿತಿಪಕ್ಷೋಪನ್ಯಾಸೋಽಯಮ್ ।

ಯತೋ ಗತ್ವಾ ಭಗವಂತಃ ಸಿದ್ಧಾಃ ಲೋಕೋಪರ್ಯವತಿಷ್ಠಂತೇ, ತತೋ ಗತಿಸ್ಥಿತಿಹೇತುತ್ವಮಾಕಾಶೇ ನಾಸ್ತೀತಿ ನಿಶ್ಚೇತವ್ಯಮ್ । ಲೋಕಾಲೋಕಾವಚ್ಛೇದಕೌ ಧರ್ಮಾಧರ್ಮಾವೇದಗತಿಸ್ಥಿತಿಹೇತೂ ಮಂತವ್ಯಾವಿತಿ ।

ಜದಿ ಹವದಿ ಗಮಣಹೇದೂ ಆಗಾಸಂ ಠಾಣಕಾರಣಂ ತೇಸಿಂ ।
ಪಸಜದಿ ಅಲೋಗಹಾಣೀ ಲೋಗಸ್ಸ ಯ ಅಂತಪರಿವುಡ್ಢೀ ॥೯೪॥

ಗಾಥೆ - ೯೩

ಗಾಥಾರ್ಥ ಃ- [ಜಮ್ಹಾ] ಯಾವುದರಿಂದ [ಜಿಣವರೇಹಿಂ] ಜಿನೇಶ್ವರರು [ಸಿದ್ಧಾಣಂ] ಸಿದ್ಧರ [ಉವರಿಟ್ಠಾಣಂ] ಸ್ಥಿತಿಯು ಲೋಕದ ಮೇಲೆ - [ಪಣ್ಣತ್ತಂ] ಎಂದು ಹೇಳಿದ್ದಾರೆ, [ತಮ್ಹಾ] ಆದ್ದರಿಂದ [ಗಮಣಟ್ಠಾಣಂ ಆಯಾಸೇ ಣತ್ಥಿ] ಗತಿ-ಸ್ಥಿತಿಗಳು ಆಕಾಶದಲ್ಲಿ ಇರುವುದಿಲ್ಲ (ಎಂದರೆ ಗತಿ-ಸ್ಥಿತಿ ಹೇತುತ್ವಗಳು ಆಕಾಶದಲ್ಲಿಲ್ಲ) [ತ್ತಿ ಜಾಣ] - ಎಂದು ತಿಳಿಯುವುದು.

ಟೀಕೆ ಃ- (ಗತಿಪಕ್ಷದ ಸಂಬಂಧವಾಗಿ ಕಥನ ಮಾಡಿದನಂತರ) ಇದು ಸ್ಥಿತಿಪಕ್ಷದ ಸಂಬಂಧವಾಗಿ ಕಥನವಿದೆ.

ಯಾವುದರಿಂದ ಸಿದ್ಧಭಗವಂತರು ಗಮನ ಮಾಡಿ ಲೋಕದ ಮೇಲೆ ಸ್ಥಿರರಾಗುತ್ತಾರೆ (ಎಂದರೆ ಲೋಕದ ಮೇಲೆ ಗತಿಪೂರ್ವಕವಾಗಿ ಸ್ಥಿತಿ ಮಾಡುತ್ತಾರೆ), ಅದರಿಂದ ಗತಿಸ್ಥಿತಿಹೇತುತ್ವವು ಆಕಾಶದಲ್ಲಿಲ್ಲವೆಂಬುದನ್ನು ನಿಶ್ಚಯ ಮಾಡುವುದು ; ಲೋಕ ಮತ್ತು ಅಲೋಕದ ವಿಭಾಗವನ್ನು ಮಾಡುವಂಥ ಧರ್ಮ ಹಾಗೂ ಅಧರ್ಮಗಳಿಗೇನೇ ಗತಿ ಹಾಗೂ ಸ್ಥಿತಿಯ ಹೇತುತ್ವವನ್ನು ಮನ್ನಿಸುವುದು.

ಲೋಕಾಗ್ರದಲಿ ಸಿದ್ಧರ ಸ್ಥಿರತೆಯ ಜಿನವರ ಯಾವುದರಿಂದ ಪೇಳಿಹರು ।
ಆ ಕಾರಣದಿ ಆಕಾಶದಲಿ ಗತಿ-ಸ್ಥಿತಿಹೇತುತ್ವವಿಲ್ಲವೆಂದರಿಯುವುದು ॥೯೩॥

ಆಕಾಶವು ಜೀವ -ಪುದ್ಗಲಗಳಿಗೆ ಗತಿಹೇತು ಮೇಣ್ ಸ್ಥಿತಿಹೇತುವಿದ್ದರೆ ।
ಲೋಕಾಂತದ ವೃದ್ಧಿಯ ಪ್ರಸಂಗವಿಲ್ಲದೆ ಅಲೋಕದ ಹಾನಿಯುಂಟಾಗುವುದು ॥೯೪॥

ಯದಿ ಭವತಿ ಗಮನಹೇತುರಾಕಾಶಂ ಸ್ಥಾನಕಾರಣಂ ತೇಷಾಮ್ ।
ಪ್ರಸಜತ್ಯಲೋಕಹಾನಿರ್ಲೋಕಸ್ಯ ಚಾಂತಪರಿವೃದ್ಧಿಃ ॥೯೪॥

ಆಕಾಶಸ್ಯ ಗತಿಸ್ಥಿತಿಹೇತುತ್ವಾಭಾವೇ ಹೇತೂಪನ್ಯಾಸೋಽಯಮ್ ।

ನಾಕಾಶಂ ಗತಿಸ್ಥಿತಿಹೇತುಃ, ಲೋಕಾಲೋಕಸೀಮವ್ಯವಸ್ಥಾಯಾಸ್ತಥೋಪಪತ್ತೇಃ । ಯದಿ ಗತಿಸ್ಥಿತ್ಯೋರಾಕಾಶಮೇವ ನಿಮಿತ್ತಮಿಷ್ಯೇತ್, ತದಾ ತಸ್ಯ ಸರ್ವತ್ರ ಸದ್ಭಾವಾಜ್ಜೀವಪುದ್ಗಲಾನಾಂ ಗತಿಸ್ಥಿತ್ಯೋರ್ನಿಃ ಸೀಮತಾತ್ತತ್ಪ್ರತಿಕ್ಷಣಮಲೋಕೋ ಹೀಯತೇ, ಪೂರ್ವಂ ಪೂರ್ವಂ ವ್ಯವಸ್ಥಾಪ್ಯಮಾನಶ್ಚಾಂತೋ ಲೋಕಸ್ಯೋತ್ತರೋತ್ತರ - ಪರಿವೃದ್ಧ್ಯಾ ವಿಘಟತೇ । ತತೋ ನ ತತ್ರ ತದ್ಧೇತುರಿತಿ ।

ತಮ್ಹಾ ಧಮ್ಮಾಧಮ್ಮಾ ಗಮಣಟ್ಠಿದಿಕಾರಣಾಣಿ ಣಾಗಾಸಂ ।
ಇದಿ ಜಿಣವರೇಹಿಂ ಭಣಿದಂ ಲೋಗಸಹಾವಂ ಸುಣಂತಾಣಂ ॥೯೫॥

ಗಾಥೆ - ೯೪

ಗಾಥಾರ್ಥ :- [ಜದಿ] ಒಂದು ವೇಳೆ [ಆಗಾಸಂ] ಆಕಾಶವು [ತೇಸಿಂ] ಜೀವ-ಪುದ್ಗಲಗಳಿಗೆ [ಗಮಣಹೇದೂ] ಗತಿಹೇತು ಮತ್ತು [ಠಾಣಕಾರಣಂ] ಸ್ಥಿತಿಹೇತು [ಹವದಿ] ಇದ್ದರೆ [ಅಲೋಗಹಾಣೀ] ಅಲೋಕದ ಹಾನಿಯ [ಯ] ಮತ್ತು [ಲೋಗಸ್ಸ ಅಂತಪರಿವುಡ್ಢೀ] ಲೋಕದ ಕೊನೆಯ ವೃದ್ಧಿಯ [ಪಸಜದಿ] ಪ್ರಸಂಗವು ಬರುವುದು.

ಟೀಕೆ :- ಇಲ್ಲಿ ಆಕಾಶಕ್ಕೆ ಗತಿಸ್ಥಿತಿಹೇತುತ್ವದ ಅಭಾವವಿರುವ ಸಂಬಂಧದಲ್ಲಿ ಹೇತುವನ್ನು ಉಪಸ್ಥಿತ ಮಾಡಲಾಗಿದೆ.

ಆಕಾಶಕ್ಕೆ ಗತಿಸ್ಥಿತಿಯು ಹೇತುವಿಲ್ಲ, ಏಕೆಂದರೆ ಲೋಕ ಮತ್ತು ಅಲೋಕದ ಸೀಮೆಯ ವ್ಯವಸ್ಥೆಯು ಇದೇ ಪ್ರಕಾರ ಸಿದ್ಧವಾಗುತ್ತದೆ. ಒಂದು ವೇಳೆ ಆಕಾಶಕ್ಕೇನೇ ಗತಿ-ಸ್ಥಿತಿಯ ನಿಮಿತ್ತವೆಂದು ಮನ್ನಿಸಹೋದರೆ ಎಲ್ಲೆಡೆಗೆ ಆಕಾಶದ ಸದ್ಭಾವವಿರುವ ಕಾರಣ ಜೀವ-ಪುದ್ಗಲಗಳ ಗತಿ-ಸ್ಥಿತಿಗೆ ಯಾವ ಮೇರೆಯೇ ಉಳಿಯದಿರುವುದರಿಂದ ಪ್ರತಿಯೊಂದು ಕ್ಷಣದಲ್ಲಿ ಅಲೋಕದ ಹಾನಿಯಾದೀತು. ಮತ್ತು ಮೊದಮೊದಲು ವ್ಯವಸ್ಥಿತಗೊಳಿಸಿದ ಲೋಕದ ಕೊನೆಯು ಉತ್ತರೋತ್ತರ ವೃದ್ಧಿ ಹೊಂದುವುದರಿಂದ ಲೋಕದ ಕೊನೆಯೇ ಮುರಿದುಹೋದೀತು (ಎಂದರೆ ಮೊದಮೊದಲು ನಿಶ್ಚಿತವಾದ ಲೋಕದ ಕೊನೆಯು ಮತ್ತೆ ಮತ್ತೆ ಮುಂದೆ ಬೆಳೆಯುತ್ತ ಹೋಗುವುದರಿಂದ ಲೋಕದ ಕೊನೆಯೇ ಸಿದ್ಧವಾಗಲಾರದು) ಆದುದರಿಂದ ಆಕಾಶದಲ್ಲಿ ಗತಿ-ಸ್ಥಿತಿಯ ಹೇತುತ್ವವಿಲ್ಲ.

ಗಾಥೆ - ೯೫

ಗಾಥಾರ್ಥ :- [ತಮ್ಹಾ] ಆದುದರಿಂದ [ಗಮಣಟ್ಠಿದಿಕಾರಣಾಣಿ] ಗತಿ ಮತ್ತು ಸ್ಥಿತಿಗೆ ಕಾರಣವು [ಧಮ್ಮಾಧಮ್ಮಾ] ಧರ್ಮ ಮತ್ತು ಅಧರ್ಮಗಳಿವೆ, [ಣಾಗಾಸಂ] ಆಕಾಶವಿಲ್ಲ. [ಇದಿ] ಎಂದು [ಲೋಗ-ಸಹಾವಂ

ಅದರಿಂದ ಗತಿ-ಸ್ಥಿತಿ ಕಾರಣಗಳು ಧರ್ಮಾಧರ್ಮಗಳಿವೆ ಆಕಾಶವಿಲ್ಲ ।
ಇದನರಿಯೆಂದು ಶ್ರೋತೃಗಳಿಗೆ ಲೋಕಸ್ವಭಾವವ ಜಿನವರ ಪೇಳಿಹರು ॥೯೫॥

ತಸ್ಮಾದ್ಧರ್ಮಾಧರ್ಮೌ ಗಮನಸ್ಥಿತಿಕಾರಣೇ ನಾಕಾಶಮ್ ।
ಇತಿ ಜಿನವರೈಃ ಭಣಿತಂ ಲೋಕಸ್ವಭಾವಂ ಶೃಣ್ವತಾಮ್ ॥೯೫॥

ಆಕಾಶಸ್ಯ ಗತಿಸ್ಥಿತಿಹೇತುತ್ವನಿರಾಸವ್ಯಾಖ್ಯೋಪಸಂಹಾರೋಽಯಮ್ ।

ಧರ್ಮಾಧರ್ಮಾವೇವ ಗತಿಸ್ಥಿತಿಕಾರಣೇ ನಾಕಾಶಮಿತಿ ।

ಧಮ್ಮಾಧಮ್ಮಾಗಾಸಾ ಅಪುಧಬ್ಭೂದಾ ಸಮಾಣಪರಿಮಾಣಾ ।
ಪುಧಗುವಲದ್ಧಿವಿಸೇಸಾ ಕರೇಂತಿ ಏಗತ್ತಮಣ್ಣತ್ತಂ ॥೯೬॥

ಧರ್ಮಾಧರ್ಮಾಕಾಶಾನ್ಯಪೃಥಗ್ಭೂತಾನಿ ಸಮಾನಪರಿಮಾಣಾನಿ ।
ಪೃಥಗುಪಲಬ್ಧಿವಿಶೇಷಾಣಿ ಕುರ್ವಂತೇಕತ್ವಮನ್ಯತ್ವಮ್ ॥೯೬॥

ಧರ್ಮಾಧರ್ಮಲೋಕಾಕಾಶಾನಾಮವಗಾಹವಶಾದೇಕತ್ವೇऽಪಿ ವಸ್ತುತ್ವೇನಾನ್ಯತ್ವಮತ್ರೋಕ್ತಮ್ ।

ಧರ್ಮಾಧರ್ಮಲೋಕಾಕಾಶಾನಿ ಹಿ ಸಮಾನಪರಿಮಾಣತ್ವಾತ್ಸಹಾವಸ್ಥಾನಮಾತ್ರೇಣೈವೈಕತ್ವಭಾಂಜಿ । ವಸ್ತುತಸ್ತು ವ್ಯವಹಾರೇಣ ಗತಿಸ್ಥಿತ್ಯವಗಾಹಹೇತುತ್ವರೂಪೇಣ, ನಿಶ್ಚಯೇನ ವಿಭಕ್ತಪ್ರದೇಶತ್ವರೂಪೇಣ ವಿಶೇಷೇಣ ಪೃಥಗುಪಲಭ್ಯಮಾನೇನಾನ್ಯತ್ವಭಾಂಜ್ಯೇವ ಭವಂತೀತಿ ।

– ಇತಿ ಆಕಾಶದ್ರವ್ಯಾಸ್ತಿಕಾಯವ್ಯಾಖ್ಯಾನಂ ಸಮಾಪ್ತಮ್ ।

ಸುಣಂತಾಣಂ] ಲೋಕಸ್ವಭಾವದ ಶ್ರೋತೃಗಳಿಗೆ [ಜಿಣವರೇಹಿಂ ಭಣಿದಂ] ಜಿನೇಶ್ವರರು ಹೇಳಿದ್ದಾರೆ.

ಟೀಕೆ :- ಇದು ಆಕಾಶಕ್ಕೆ ಸ್ಥಿತಿಗತಿಹೇತುತ್ವವಿರುವುದರ ಖಂಡನೆಯ ಸಂಬಂಧವಾಗಿರುವ ಕಥನದ ಉಪಸಂಹಾರವಿದೆ.

ಧರ್ಮ ಮತ್ತು ಅಧರ್ಮಗಳೇ ಗತಿ ಮತ್ತು ಸ್ಥಿತಿಗೆ ಕಾರಣವಿವೆ, ಆಕಾಶವು ಇಲ್ಲ.

ಗಾಥೆ - ೯೬

ಗಾಥಾರ್ಥ :- [ಧಮ್ಮಾಧಮ್ಮಾಗಾಸಾ] ಧರ್ಮ, ಅಧರ್ಮ ಮತ್ತು ಆಕಾಶ (ಲೋಕಾಕಾಶ)ಗಳು [ಸಮಾಣಪರಿಮಾಣಾ] ಸಮಾನ ಪರಿಮಾಣವುಳ್ಳವುಗಳು [ಅಪುಧಬ್ಭೂದಾ] ಅಪೃಥಗ್ಭೂತಗಳಿರುವುದರಿಂದ ಹಾಗೂ [ಪುಧಗುವಲದ್ಧಿವಿಸೇಸಾ] ಪೃಥಕ್-ಉಪಲಬ್ಧ (ಭಿನ್ನ-ಭಿನ್ನ) ವಿಶೇಷವುಳ್ಳವುಗಳಿರುವುದರಿಂದ [ಏಗತ್ತಮಣ್ಣತ್ತಂ] ಏಕತ್ವ ಹಾಗೂ ಅನ್ಯತ್ವವನ್ನು [ಕರೇಂತಿ] ಮಾಡುತ್ತವೆ.

ಟೀಕೆ :- ಇಲ್ಲಿ ಅವಗಾಹದ ಅಪೇಕ್ಷೆಯಿಂದ ಧರ್ಮ, ಅಧರ್ಮ ಮತ್ತು ಲೋಕಾಕಾಶದ ಏಕತ್ವವಿದ್ದರೂ ಕೂಡ ವಸ್ತುರೂಪದಿಂದ ಅನ್ಯತ್ವವೆಂದು ಹೇಳಲಾಗಿದೆ.

ಆ ಧರ್ಮಾಧರ್ಮ-ಆಕಾಶಗಳು ಸಮಾನ ಪರಿಮಾಣಯುತ ಅಪೃಥಕತ್ವದಿಂ ।
ಅದರಂತೆ ಭಿನ್ನ-ಭಿನ್ನ ವಿಶೇಷದಿಂ ಏಕತ್ವಮೇಣನ್ಯತ್ವವ ಮಾಡುವವು ॥೯೬॥

ಅಥ ಚೂಲಿಕಾ ।

ಆಗಾಸಕಾಲಜೀವಾ ಧಮ್ಮಾಧಮ್ಮಾ ಯ ಮುತ್ತಿ ಪರಿಹೀಣಾ ।
ಮುತ್ತಂ ಪೋಗ್ಗಲದವ್ವಂ ಜೀವೋ ಖಲು ಚೇದಣೋ ತೇಸು ॥೯೭॥

ಆಕಾಶಕಾಲಜೀವಾ ಧರ್ಮಾಧರ್ಮೌ ಚ ಮೂರ್ತಿಪರಿಹೀನಾಃ ।
ಮೂರ್ತಂ ಪುದ್ಗಲದ್ರವ್ಯಂ ಜೀವಃ ಖಲು ಚೇತನಸ್ತೇಷು ॥೯೭॥

ಧರ್ಮ, ಅಧರ್ಮ ಮತ್ತು ಲೋಕಾಕಾಶಗಳು ಸಮಾನ ಪರಿಮಾಣಗಳುಳ್ಳವುಗಳಾಗಿರುವ ಕಾರಣ ಕೇವಲ ಜೊತೆಯಲ್ಲಿರುವುದರಿಂದಲೇ (ಕೇವಲ ಏಕಕ್ಷೇತ್ರಾವಗಾಹದ ಅಪೇಕ್ಷೆಯಿಂದಲೇ) ಏಕತ್ವವುಳ್ಳವುಗಳಿವೆ; ವಾಸ್ತವಿಕವಾಗಿಯಂತೂ, ೧) ವ್ಯವಹಾರದಿಂದ ಗತಿಹೇತುತ್ವ, ಸ್ಥಿತಿಹೇತುತ್ವ ಮತ್ತು ಅವಗಾಹನಹೇತುತ್ವರೂಪ (ಪೃಥಕ್-ಉಪಲಬ್ಧ ವಿಶೇಷದಿಂದ) ಹಾಗೂ ೨) ನಿಶ್ಚಯದಿಂದ ವಿಭಕ್ತ[೧] ಪ್ರದೇಶತ್ವರೂಪ ಪೃಥಕ್-ಉಪಲಬ್ಧ ವಿಶೇಷ[೨]ದಿಂದ ಅವು ಅನ್ಯತ್ವವುಳ್ಳವುಗಳೇ ಇವೆ.

ಭಾವಾರ್ಥ :- ಧರ್ಮ, ಅಧರ್ಮ ಮತ್ತು ಲೋಕಾಕಾಶಗಳ ಏಕತ್ವವನ್ನಂತೂ ಕೇವಲ ಏಕಕ್ಷೇತ್ರಾವಗಾಹದ ಅಪೇಕ್ಷೆಯಿಂದಲೇ ಹೇಳಲಾಗುತ್ತದೆ ; ವಸ್ತುರೂಪದಿಂದಂತೂ ಅವುಗಳಿಗೆ ಅನ್ಯತ್ವವೇ ಇದೆ, ಏಕೆಂದರೆ ೧) ಅವುಗಳ ಲಕ್ಷಣಗಳು ಗತಿಹೇತುತ್ವ, ಸ್ಥಿತಿಹೇತುತ್ವ ಮತ್ತು ಅವಗಾಹನಹೇತುತ್ವರೂಪದಿಂದ ಬೇರೆ-ಬೇರೆಯಾಗಿವೆ ಮತ್ತು ೨) ಅವುಗಳ ಪ್ರದೇಶಗಳೂ ಬೇರೆ - ಬೇರೆಯಾಗಿವೆ.

ಈ ಪ್ರಕಾರವಾಗಿ ಆಕಾಶದ್ರವ್ಯಾಸ್ತಿಕಾಯದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಚೂಲಿಕೆ[೩] ಯಿದೆ.

ಗಾಥೆ - ೯೭

ಗಾಥಾರ್ಥ :- [ಆಗಾಸಕಾಲಜೀವಾ] ಆಕಾಶ, ಕಾಲ, ಜೀವ [ಧಮ್ಮಾಧಮ್ಮಾ ಯ] ಧರ್ಮ ಮತ್ತು ಅಧರ್ಮಗಳು [ಮುತ್ತಿಪರಿಹೀಣಾ] ಅಮೂರ್ತವಿವೆ, [ಪೋಗ್ಗಲದವ್ವಂ ಮುತ್ತಂ] ಪುದ್ಗಲ ದ್ರವ್ಯವು ಮೂರ್ತವಿದೆ. [ತೇಸು] ಅವುಗಳಲ್ಲಿ [ಜೀವೋ] ಜೀವವು [ಖಲು] ವಾಸ್ತವಿಕವಾಗಿ [ಚೇದಣೋ] ಚೇತನವಿದೆ.

ಜೀವ ಮತ್ತದರಂತೆ ಆಕಾಶ, ಧರ್ಮ, ಅಧರ್ಮ, ಕಾಲವಿವೆಲ್ಲ ಅಮೂರ್ತವಿವೆ ।
ಕೇವಲ ಪುದ್ಗಲದ್ರವ್ಯ ಮೂರ್ತವಿದ್ದವುಗಳಲಿ ಜೀವ ನಿಜದಿ ಚೇತನವಿದೆ ॥೯೭॥

---

೧. ವಿಭಕ್ತ = ಭಿನ್ನ. [ಧರ್ಮ, ಅಧರ್ಮ ಮತ್ತು ಆಕಾಶಕ್ಕೆ ಭಿನ್ನಪ್ರದೇಶತ್ವವಿದೆ.]

೨. ವಿಶೇಷ = ವಿಶಿಷ್ಟತೆ ; ವಿಶೇಷತೆ ; ಮುಖ್ಯತೆ. (ವ್ಯವಹಾರದಿಂದ ಹಾಗೂ ನಿಶ್ಚಯದಿಂದ ಧರ್ಮ, ಅಧರ್ಮ ಮತ್ತು ಆಕಾಶದ ವಿಶೇಷಗಳು ಪೃಥಕ್ = ಉಪಲಬ್ಧವಿವೆ ಎಂದರೆ ಬೇರೆ-ಬೇರೆಯಾಗಿ ಕಂಡು ಬರುತ್ತವೆ.)

೩. ಚೂಲಿಕೆ = ಶಾಸ್ತ್ರದಲ್ಲಿ ಯಾವುದರ ಕಥನವಾಗಿಲ್ಲ ಅದರ ವ್ಯಾಖ್ಯಾನ ಮಾಡುವುದು ಅಥವಾ ಯಾವುದರ ಕಥನವಾಗಿ ಹೋಗಿದೆ ಅದರ ವಿಶೇಷ ವ್ಯಾಖ್ಯಾನ ಮಾಡುವುದು ಅಥವಾ ಎರಡರ ಯಥಾಯೋಗ್ಯ ವ್ಯಾಖ್ಯಾನ ಮಾಡುವುದು.

ಅತ್ರ ದ್ರವ್ಯಾಣಾಂ ಮೂರ್ತಾಮೂರ್ತತ್ವಂ ಚೇತನಾಚೇತನತ್ವಂ ಚೋಕ್ತಮ್ ।

ಸ್ಪರ್ಶರಸಗಂಧವರ್ಣಸದ್ಭಾವಸ್ವಭಾವಂ ಮೂರ್ತಂ, ಸ್ಪರ್ಶರಸಗಂಧವರ್ಣಾಭಾವಸ್ವಭಾವಮಮೂರ್ತಮ್। ಚೈತನ್ಯಸದ್ಭಾವಸ್ವಭಾವಂ ಚೇತನಂ, ಚೈತನ್ಯಾಭಾವಸ್ವಭಾವಮಚೇತನಮ್ । ತತ್ರಾಮೂರ್ತಮಾಕಾಶಂ, ಅಮೂರ್ತಃ, ಕಾಲಃ, ಅಮೂರ್ತಃ ಸ್ವರೂಪೇಣ ಜೀವಃ ಪರರೂಪಾವೇಶಾನ್ಮೂರ್ತೋಽಪಿ, ಅಮೂರ್ತೋ ಧರ್ಮಃ, ಅಮೂರ್ತೋಽಧರ್ಮಃ, ಮೂರ್ತಃ ಪುದ್ಗಲ ಏವೈಕ ಇತಿ । ಅಚೇತನಮಾಕಾಶಂ, ಅಚೇತನಃ ಕಾಲಃ, ಅಚೇತನೋ ಧರ್ಮಃ, ಅಚೇತನೋಽಧರ್ಮಃ, ಅಚೇತನಃ ಪುದ್ಗಲಃ, ಚೇತನೋ ಜೀವ ಏವೈಕ ಇತಿ ।

ಜೀವಾ ಪೋಗ್ಗಲಕಾಯಾ ಸಹ ಸಕ್ಕಿರಿಯಾ ಹವಂತಿ ಣ ಯ ಸೇಸಾ ।
ಪೋಗ್ಗಲಕರಣಾ ಜೀವಾ ಖಂಧಾ ಖಲು ಕಾಲಕರಣಾ ದು ॥೯೮॥

ಟೀಕೆ :- ಇಲ್ಲಿ ದ್ರವ್ಯಗಳ ಮೂರ್ತಾಮೂರ್ತತೆಯನ್ನು (ಮೂರ್ತತನ ಅಥವಾ ಅಮೂರ್ತತನ) ಮತ್ತು ಚೇತನಾಚೇತನತೆಯನ್ನು (ಚೇತನತನ ಅಥವಾ ಅಚೇತನತನ) ಹೇಳಲಾಗಿದೆ.

ಸ್ಪರ್ಶ-ರಸ-ಗಂಧ-ವರ್ಣಗಳ ಸದ್ಭಾವವು ಯಾವುದರ ಸ್ವಭಾವವಿದೆ ಅದು ಮೂರ್ತವಿದೆ ; ಸ್ಪರ್ಶ-ರಸ-ಗಂಧ-ವರ್ಣಗಳ ಅಭಾವವು ಯಾವುದರ ಸ್ವಭಾವವಿದೆ ಅದು ಅಮೂರ್ತವಿದೆ. ಚೈತನ್ಯದ ಸದ್ಭಾವವು ಯಾವುದರ ಸ್ವಭಾವವಿದೆ ಅದು ಚೇತನವಿದೆ ; ಚೈತನ್ಯದ ಅಭಾವವು ಯಾವುದರ ಸ್ವಭಾವವಿದೆ ಅದು ಅಚೇತನವಿದೆ. ಅಲ್ಲಿ ಆಕಾಶವು ಅಮೂರ್ತವಿದೆ, ಕಾಲವು ಅಮೂರ್ತವಿದೆ. ಜೀವವು ಸ್ವರೂಪದಿಂದ ಅಮೂರ್ತವಿದೆ, ಪರರೂಪದಲ್ಲಿ ಪ್ರವೇಶ[೧] ಮಾಡುವುದರಿಂದ (ಮೂರ್ತದ್ರವ್ಯದ ಸಂಯೋಗದ ಅಪೇಕ್ಷೆಯಿಂದ) ಮೂರ್ತವೂ ಇದೆ, ಧರ್ಮವು ಅಮೂರ್ತವಿದೆ, ಅಧರ್ಮವು ಅಮೂರ್ತವಿದೆ ; ಪುದ್ಗಲವೊಂದೇ ಮೂರ್ತವಿದೆ. ಆಕಾಶವು ಅಚೇತನವಿದೆ,ಕಾಲವು ಅಚೇತನವಿದೆ, ಧರ್ಮವು ಅಚೇತನವಿದೆ, ಅಧರ್ಮವು ಅಚೇತನವಿದೆ, ಪುದ್ಗಲವು ಅಚೇತನವಿದೆ ; ಜೀವವೊಂದೇ ಚೇತನವಿದೆ.

ಗಾಥೆ - ೯೮

ಗಾಥಾರ್ಥ :- [ಸಹ ಜೀವಾ ಪೋಗ್ಗಲಕಾಯಾ] ಬಾಹ್ಯಕರಣಸಹಿತ ಸ್ಥಿರವಾದ ಜೀವ ಮತ್ತು ಪುದ್ಗಲಗಳು [ಸಕ್ಕಿರಿಯಾ ಹವಂತಿ] ಸಕ್ರಿಯಗಳಿವೆ, [ಣ ಯ ಸೇಸಾ] ಉಳಿದ ದ್ರವ್ಯಗಳು ಸಕ್ರಿಯವಿಲ್ಲ (ನಿಷ್ಕ್ರಿಯವಿವೆ) ; [ಜೀವ] ಜೀವಗಳು [ಪೋಗ್ಗಲಕರಣಾ] ಪುದ್ಗಲಕರಣವುಳ್ಳವು (ಯಾವವುಗಳಿಗೆ

ಜೀವ-ಪುದ್ಗಲಗಳು ಸಹಭೂತ ಸಕ್ರಿಯವಿದ್ದರೆ ಶೇಷ ನಿಷ್ಕ್ರಿಯವಿವೆ ।
ಜೀವ ಪುದ್ಗಲನಿಮಿತ್ತ ಸಕ್ರಿಯವಿದ್ದರೆ ಸ್ಕಂಧಕಾಲನಿಮಿತ್ತ ಸಕ್ರಿಯವಿದೆ ॥೯೮॥

೧. ಜೀವವು ನಿಶ್ಚಯದಿಂದ ಅಮೂರ್ತ-ಅಖಂಡ-ಒಂದು ಪ್ರತಿಭಾಸಮಯವಿರುವುದರಿಂದ ಅಮೂರ್ತವಿದೆ, ರಾಗಾದಿಗಳಿಲ್ಲದ ಸಹಜಾನಂದವು ಯಾವುದರ ಒಂದು ಸ್ವಭಾವವಿದೆ ಅಂಥ ಆತ್ಮತತ್ತ್ವದ ಭಾವನೆಯಿಲ್ಲದೆ ಜೀವದಿಂದ ಉಪಾರ್ಜಿಸಲ್ಪಟ್ಟ ಯಾವ ಮೂರ್ತಕರ್ಮವಿದೆ ಅದರ ಸಂಸರ್ಗದ ಮುಖಾಂತರ ವ್ಯವಹಾರದಿಂದ ಮೂರ್ತವೂ ಇದೆ.

ಜೀವಾಃ ಪುದ್ಗಲಕಾಯಾಃ ಸಹ ಸಕ್ರಿಯಾ ಭವಂತಿ ನ ಚ ಶೇಷಾಃ ।
ಪುದ್ಗಲಕರಣಾ ಜೀವಾಃ ಸ್ಕಂಧಾ ಖಲು ಕಾಲಕರಣಾಸ್ತು ॥೯೮॥

ಅತ್ರ ಸಕ್ರಿಯನಿಷ್ಕ್ರಿಯತ್ವಮುಕ್ತಮ್ ।

ಪ್ರದೇಶಾಂತರಪ್ರಾಪ್ತಿಹೇತುಃ ಪರಿಸ್ಪಂದನರೂಪಪರ್ಯಾಯಃ ಕ್ರಿಯಾ । ತತ್ರ ಸಕ್ರಿಯಾ ಬಹಿರಂಗಸಾಧನೇನ ಸಹಭೂತಾಃ ಜೀವಾಃ, ಸಕ್ರಿಯಾ ಬಹಿರಂಗಸಾಧನೇನ ಸಹಭೂತಾಃ ಪುದ್ಗಲಾಃ । ನಿಷ್ಕ್ರಿಯಮಾಕಾಶಂ, ನಿಷ್ಕ್ರಿಯೋ ಧರ್ಮಃ, ನಿಷ್ಕ್ರಿಯೋಽಧರ್ಮಃ ನಿಷ್ಕ್ರಿಯಃ ಕಾಲಃ । ಜೀವಾನಾಂ ಸಕ್ರಿಯತ್ವಸ್ಯ ಬಹಿರಂಗಸಾಧನಂ ಕರ್ಮ-ನೋಕರ್ಮೋಪಚಯರೂಪಾಃಪುದ್ಗಲಾ ಇತಿ ತೇ ಪುದ್ಗಲಕರಣಾಃ । ತದಭಾವಾನ್ನಿಃ ಕ್ರಿಯತ್ವಂ ಸಿದ್ಧಾನಾಮ್ । ಪುದ್ಗಲಾನಾಂ ಸಕ್ರಿಯತ್ವಸ್ಯ ಬಹಿರಂಗಸಾಧನಂ ಪರಿಣಾಮನಿರ್ವರ್ತಕಃ ಕಾಲ ಇತಿ ತೇ ಕಾಲಕರಣಾಃ । ನ ಚ ಕರ್ಮಾದೀನಾಮೀವ ಕಾಲಸ್ಯಾಭಾವಃ । ತತೋ ನ ಸಿದ್ಧಾನಾಮಿವ ನಿಷ್ಕ್ರಿಯತ್ವಂ ಪುದ್ಗಲಾನಾಮಿತಿ ।

ಸಕ್ರಿಯತನದಲ್ಲಿ ಪುದ್ಗಲವು ಬಹಿರಂಗ ಸಾಧನವಿದೆ ಅಂಥವು)ಗಳಿವೆ [ಖಂಧಾ ಖಲು ಕಾಲಕರಣಾ ದು] ಮತ್ತು ಸ್ಕಂಧಗಳು ಎಂದರೆ ಪುದ್ಗಲಗಳಂತೂ ಕಾಲಕರಣವುಳ್ಳವು (ಯಾವವುಗಳಿಗೆ ಸಕ್ರಿಯತನದಲ್ಲಿ ಕಾಲವು ಬಹಿರಂಗ ಸಾಧನವಿದೆ ಅಂಥವು)ಗಳಿವೆ.

ಟೀಕೆ :- ಇಲ್ಲಿ (ದ್ರವ್ಯಗಳ) ಸಕ್ರಿಯ-ನಿಷ್ಕ್ರಿಯತನಗಳನ್ನು ಹೇಳಲಾಗಿದೆ.

ಪ್ರದೇಶಾಂತರ ಪ್ರಾಪ್ತಿಗೆ ಹೇತು (ಅನ್ಯಪ್ರದೇಶದ ಪ್ರಾಪ್ತಿಗೆ ಕಾರಣ)ವಾದಂಥ ಯಾವ ಪರಿಸ್ಪಂದರೂಪ ಪರ್ಯಾಯವಿದೆ ಅದು ಕ್ರಿಯೆಯಿದೆ. ಅಲ್ಲಿ ಬಹಿರಂಗ ಸಾಧನೆಯೊಡನಿರುವಂಥ ಜೀವಗಳು ಸಕ್ರಿಯವಿವೆ ; ಬಹಿರಂಗ ಸಾಧನೆಯೊಡನಿರುವಂಥ ಪುದ್ಗಲಗಳು ಸಕ್ರಿಯವಿವೆ. ಆಕಾಶವು ನಿಷ್ಕ್ರಿಯವಿದೆ ; ಧರ್ಮವು ನಿಷ್ಕ್ರಿಯವಿದೆ; ಅಧರ್ಮವು ನಿಷ್ಕ್ರಿಯವಿದೆ ; ಕಾಲವು ನಿಷ್ಕ್ರಿಯವಿದೆ.

ಜೀವಗಳಿಗೆ ಸಕ್ರಿಯತನದ ಬಹಿರಂಗ ಸಾಧನಗಳು ಕರ್ಮ-ನೋಕರ್ಮಗಳ ಸಂಚಯರೂಪ ಪುದ್ಗಲಗಳಿವೆ, ಅದಕ್ಕಾಗಿ ಜೀವಗಳು ಪುದ್ಗಲಕರಣವುಳ್ಳವುಗಳಿವೆ. ಅದರ ಅಭಾವದ ಕಾರಣ (ಪುದ್ಗಲಕರಣದ ಅಭಾವದ ಕಾರಣ) ಸಿದ್ಧರಿಗೆ ನಿಷ್ಕ್ರಿಯತನವಿದೆ. (ಎಂದರೆ ಸಿದ್ಧರಿಗೆ ಕರ್ಮ-ನೋಕರ್ಮಗಳ ಸಂಚಯರೂಪ ಪುದ್ಗಲಗಳ ಅಭಾವವಿರುವುದರಿಂದ ಅವರು ನಿಷ್ಕ್ರಿಯರಿದ್ದಾರೆ.) ಪುದ್ಗಲಗಳಿಗೆ ಸಕ್ರಿಯತನದ ಬಹಿರಂಗ ಸಾಧನವು ಪರಿಣಾಮ ನಿಷ್ಪಾದಕ [೧] ಕಾಲವಿದೆ ; ಅದಕ್ಕಾಗಿ ಪುದ್ಗಲಗಳು ಕಾಲಕರಣವುಳ್ಳವುಗಳಿವೆ.

ಕರ್ಮಾದಿಗಳ ಹಾಗೆ (ಎಂದರೆ ಯಾವ ಪ್ರಕಾರ ಕರ್ಮ-ನೋಕರ್ಮರೂಪ ಪುದ್ಗಲಗಳ ಅಭಾವವಾಗುತ್ತದೆ ಹಾಗೆ)ಕಾಲದ ಅಭಾವವಾಗುವುದಿಲ್ಲ ; ಅದಕ್ಕಾಗಿ ಸಿದ್ಧರ ಹಾಗೆ (ಎಂದರೆ ಯಾವ ಪ್ರಕಾರ ಸಿದ್ಧರಿಗೆ ನಿಷ್ಕ್ರಿಯತನವಿರುತ್ತದೆ ಆ ಪ್ರಕಾರ) ಪುದ್ಗಲಗಳಿಗೆ ನಿಷ್ಕ್ರಿಯತನವಿರುವುದಿಲ್ಲ.

---

೧. ಪರಿಣಾಮನಿಷ್ಪಾದಕ = ಪರಿಣಾಮವನ್ನು ಉತ್ಪನ್ನ ಮಾಡುವಂಥದು ; ಪರಿಣಾಮವು ಉತ್ಪನ್ನವಾಗುಲ್ಲಿ ಯಾವುದು ನಿಮಿತ್ತಭೂತ (ಬಹಿರಂಗ ಸಾಧನಭೂತ)ವಿದೆ ಅಂಥದು.

ಜೇ ಖಲು ಇಂದಿಯಗೆಜ್ಝಾ ವಿಸಯಾ ಜೀವೇಹಿಂ ಹೋಂತಿ ತೇ ಮುತ್ತಾ ।
ಸೇಸಂ ಹವದಿ ಅಮುತ್ತಂ ಚಿತ್ತಂ ಉಭಯಂ ಸಮಾದಿಯದಿ ॥೯೯॥

ಯೇ ಖಲು ಇಂದ್ರಿಯಗ್ರಾಹ್ಯಾ ವಿಷಯಾ ಜೀವೈರ್ಭವಂತಿ ತೇ ಮೂರ್ತಾಃ ।
ಶೇಷಂ ಭವತ್ಯಮೂರ್ತಂ ಚಿತ್ತಮುಭಯಂ ಸಮಾದದಾತಿ ॥೯೯॥

ಮೂರ್ತಾಮೂರ್ತಲಕ್ಷಣಾಖ್ಯಾನಮೇತತ್ ।

ಇಹ ಹೀ ಜೀವೈಃ ಸ್ಪರ್ಶನರಸನಘ್ರಾಣಚಕ್ಷುರ್ಶ್ರೋತ್ರೇಂದ್ರಿಯೈಸ್ತದ್ವಿಷಯಭೂತಾಃ ಸ್ಪರ್ಶರಸಗಂಧವರ್ಣ-ಸ್ವಭಾವಾ ಅರ್ಥಾ ಗೃಹ್ಯಂತೇ । ಶ್ರೋತ್ರೇಂದ್ರಿಯೇಣ ತು ತ ಏವ ತದ್ವಿಷಯಹೇತುಭೂತಶಬ್ದಾಕಾರಪರಿಣತಾ ಗೃಹ್ಯಂತೇ। ತೇ ಕದಾಚಿತ್ಸ್ಥೂಲಸ್ಕಂಧತ್ವಮಾಪನ್ನಾಃ ಕದಾಚಿತ್ಸೂಕ್ಷ್ಮತ್ವಮಾಪನ್ನಾಃ ಕದಾಚಿತ್ಪರಮಾಣುತ್ವಮಾಪನ್ನಾಃ ಇಂದ್ರಿಯಗ್ರಹಣಯೋಗ್ಯತಾಸದ್ಭಾವಾದ್ ಗೃಹ್ಯಮಾಣಾ ಅಗೃಹ್ಯಮಾಣಾ ವಾ ಮೂರ್ತಾ ಇತ್ಯುಚ್ಯಂತೇ । ಶೇಷಮಿತರತ್ ಸಮಸ್ತಮಪ್ಯರ್ಥಜಾತಂ ಸ್ಪರ್ಶರಸಗಂಧ ವರ್ಣಾಭಾವಸ್ವಭಾವಮಿಂದ್ರಿಯಗ್ರಹಣಯೋಗ್ಯತಾಯಾ ಅಭಾವಾದಮೂರ್ತಮಿತ್ಯುಚ್ಯತೇ । ಚಿತ್ತಗ್ರಹಣಯೋಗ್ಯತಾಸದ್ಭಾವಭಾಗ್ಭವತಿ ತದುಭಯಮಪಿ ; ಚಿತ್ತಂ ಹ್ಯನಿಯತವಿಷಯಮಪ್ರಾಪ್ಯಕಾರಿ ಮತಿಶ್ರುತಜ್ಞಾನಸಾಧನೀಭೂತಂ ಮೂರ್ತಮಮೂರ್ತಂ ಚ ಸಮಾದದಾತೀತಿ।

- ಇತಿ ಚೂಲಿಕಾ ಸಮಾಪ್ತಾ ।

ಗಾಥೆ - ೯೯

ಗಾಥಾರ್ಥ ಃ- [ಜೇ ಖಲು] ಯಾವ ಪದಾರ್ಥಗಳು [ಜೀವೇಹಿಂ ಇಂದ್ರಿಯಗೇಜ್ಝಾ ವಿಸಯಾ] ಜೀವಗಳಿಗೆ ಇಂದ್ರಿಯಗ್ರಾಹ್ಯ ವಿಷಯಗಳಾಗಿವೆ [ತೇ ಮುತ್ತಾ ಹೋಂತಿ] ಅವು ಮೂರ್ತವಾಗಿವೆ ಮತ್ತು [ಸೇಸಂ] ಉಳಿದ ಪದಾರ್ಥ ಸಮೂಹವು [ಅಮುತ್ತಂ ಹವದಿ] ಅಮೂರ್ತವಿದೆ. [ಚಿತ್ತಂ] ಮನಸ್ಸು [ಉಭಯಂ] ಅವೆರಡನ್ನು [ಸಮಾದಿಯದಿ] ಗ್ರಹಣ ಮಾಡುತ್ತದೆ (-ತಿಳಿಯುತ್ತದೆ).

ಟೀಕೆ ಃ- ಇದು ಮೂರ್ತ ಮತ್ತು ಅಮೂರ್ತದ ಲಕ್ಷಣದ ಕಥನವಿದೆ.

ಈ ಜಗತ್ತಿನಲ್ಲಿ ಜೀವಗಳಿಗೆ ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ ಮತ್ತು ಚಕ್ಷುರಿಂದ್ರಿಯದ ಮುಖಾಂತರ ಅವುಗಳ (ಆ ಇಂದ್ರಿಯಗಳ) ವಿಷಯಭೂತಗಳಾದ ಸ್ಪರ್ಶ-ರಸ-ಗಂಧ-ವರ್ಣ ಸ್ವಭಾವವುಳ್ಳ ಪದಾರ್ಥಗಳು (ಸ್ಪರ್ಶ, ರಸ, ಗಂಧ ಮತ್ತು ವರ್ಣಗಳು ಯಾವವುಗಳ ಸ್ವಭಾವವಿವೆ, ಅಂಥ ಪದಾರ್ಥಗಳು) ಗ್ರಹಣವಾಗುತ್ತವೆ (ತಿಳಿದುಬರುತ್ತವೆ); ಮತ್ತು ಶ್ರೋತೇಂದ್ರಿಯದಿಂದ ಅವೇ ಪದಾರ್ಥಗಳು ಅದರ

ಜೀವಗಳಿಗಿಂದ್ರಿಯಗ್ರಾಹ್ಯವಾಗುವ ವಿಷಯಗಳೆಲ್ಲ ಮೂರ್ತವಾಗಿಹವು ।
ಅವನುಳಿದೆಲ್ಲ ಮೂರ್ತವಿದ್ದು ಚಿತ್ತ ಅವೆರಡನು ಗ್ರಹಣ ಮಾಡುವುದು ॥೯೯॥

ಅಥ ಕಾಲದ್ರವ್ಯವ್ಯಾಖ್ಯಾನಮ್ ।

ಕಾಲೋ ಪರಿಣಾಮಭವೋ ಪರಿಣಾಮೋ ದವ್ವಕಾಲಸಂಭೂದೋ ।
ದೋಣ್ಹಂ ಏಸ ಸಹಾವೋ ಕಾಲೋ ಖಣಭಂಗುರೋ ಣಿಯದೋ ॥೧೦೦॥

ಕಾಲಃ ಪರಿಣಾಮಭವಃ ಪರಿಣಾಮೋ ದ್ರವ್ಯಕಾಲಸಂಭೂತಃ ।
ದ್ವಯೋರೇಷ ಸ್ವಭಾವಃ ಕಾಲಃ ಕ್ಷಣಭಂಗುರೋ ನಿಯತಃ ॥೧೦೦॥

(ಶ್ರೋತ್ರೇಂದ್ರಿಯದ) ವಿಷಯಹೇತುಭೂತ [೧] ಶಬ್ದಾಕಾರದಿಂದ ಪರಿಣಮಿತವಾಗಿ ಗ್ರಹಣವಾಗುತ್ತವೆ, ಅವು (ಆ ಪದಾರ್ಥಗಳು) ಒಮ್ಮೊಮ್ಮೆ ಸ್ಥೂಲಸ್ಕಂಧತ್ವಕ್ಕೆ ಪ್ರಾಪ್ತವಾಗುತ್ತ, ಒಮ್ಮೊಮ್ಮೆ ಸೂಕ್ಷ್ಮತ್ವಕ್ಕೆ (ಸೂಕ್ಷ್ಮಸ್ಕಂಧತ್ವಕ್ಕೆ) ಪ್ರಾಪ್ತವಾಗುತ್ತ ಮತ್ತು ಒಮ್ಮೊಮ್ಮೆ ಪರಮಾಣುತನಕ್ಕೆ ಪ್ರಾಪ್ತವಾಗುತ್ತ ಇಂದ್ರಿಯಗಳಿಂದ ಗ್ರಹಣವಾಗಲಿ ಅಥವಾ ಆಗದಿರಲಿ, ಇಂದ್ರಿಯಗಳಿಂದ ಗ್ರಹಣವಾಗುವ ಯೋಗ್ಯತೆಯ (ಯಾವಾಗಲೂ) ಸದ್ಭಾವವಿರುವುದರಿಂದ 'ಮೂರ್ತ'ವೆಂದು ಕರೆಸಿಕೊಳ್ಳುತ್ತವೆ.

ಸ್ಪರ್ಶ-ರಸ-ಗಂಧ-ವರ್ಣಗಳ ಅಭಾವವು ಯಾವುದರ ಸ್ವಭಾವವಿದೆ ಅಂಥ ಉಳಿದ ಬೇರೆಲ್ಲ ಪದಾರ್ಥ ಸಮೂಹವು ಇಂದ್ರಿಯಗಳಿಂದ ಗ್ರಹಣವಾಗುವ ಯೋಗ್ಯತೆಯ ಅಭಾವದ ಕಾರಣ 'ಅಮೂರ್ತ'ವೆಂದು ಕರೆಸಿಕೊಳ್ಳುತ್ತವೆ.

ಅವೆರಡೂ (ಮೊದಲು ಹೇಳಿದ ಎರಡೂ ಪ್ರಕಾರದ ಪದಾರ್ಥಗಳು) ಮನಸ್ಸಿನಿಂದ ಗ್ರಹಣವಾಗುವ ಯೋಗ್ಯತೆಯ ಸದ್ಭಾವವುಳ್ಳವುಗಳಿವೆ ; ಚಿತ್ತವು ಅನಿಯತ [೨] ವಿಷಯವುಳ್ಳ, ಅಪ್ರಾಪ್ಯಕಾರಿ [೩] ಮತ್ತು ಮತಿಶ್ರುತ ಜ್ಞಾನದ ಸಾಧನಭೂತ (ಮತಿಜ್ಞಾನ ಹಾಗೂ ಶ್ರುತಜ್ಞಾನದಲ್ಲಿ ನಿಮಿತ್ತಭೂತ)ವಿದೆ, ಅದು ಮೂರ್ತ ಹಾಗೂ ಅಮೂರ್ತವನ್ನು ಗ್ರಹಣಮಾಡುತ್ತದೆ (ತಿಳಿಯುತ್ತದೆ).

ಈ ಪ್ರಕಾರವಾಗಿ ಚೂಲಿಕೆಯು ಸಮಾಪ್ತವಾಯಿತು.

ಈಗ ಕಾಲದ್ರವ್ಯದ ವ್ಯಾಖ್ಯಾನವಿದೆ.

ಪರಿಣಾಮದಿಂ ಕಾಲ ಉದಿಸಿದರೆ ದ್ರವ್ಯಕಾಲದಿಂ ಪರಿಣಾಮ ಪುಟ್ಟುವುದು ।
ಎರಡರದಿದು ಸ್ವಭಾವವಿದ್ದು ಕಾಲಕ್ಷಣಭಂಗುರ ಮೇಣ್ ನಿತ್ಯವಿಹುದು ॥೧೦೦॥

---

೧. ಆ ಸ್ಪರ್ಶ-ರಸ-ಗಂಧ-ವರ್ಣಸ್ವಭಾವವುಳ್ಳ ಪದಾರ್ಥಗಳಿಗೆ (ಎಂದರೆ ಪುದ್ಗಲಗಳಿಗೆ)ಶ್ರೋತ್ರೇಂದ್ರಿಯದ ವಿಷಯವಾಗುವಲ್ಲಿ ಹೇತುಭೂತವು ಶಬ್ದಾಕಾರ ಪರಿಣಾಮವಿರುವುದರಿಂದ ಆ ಪದಾರ್ಥ (ಪುದ್ಗಲ)ಗಳು ಶಬ್ದಾಕಾರದಿಂದ ಪರಿಣಮಿತವಾಗುತ್ತ ಶ್ರೋತ್ರೇಂದ್ರಿಯದ ಮುಖಾಂತರ ಗ್ರಹಣವಾಗುತ್ತದೆ.

೨. ಅನಿಯತ = ಅನಿಶ್ಚಿತ. [ಯಾವ ಪ್ರಕಾರ ಐದು ಇಂದ್ರಿಯಗಳೊಳಗೆ ಪ್ರತಿಯೊಂದು ಇಂದ್ರಿಯದ ವಿಷಯವು ನಿಯತವಿದೆ ಅದೇ ಪ್ರಕಾರ ಮನಸ್ಸಿನ ವಿಷಯವು ನಿಯತವಿಲ್ಲ, ಅನಿಯತವಿದೆ.]

೩. ಅಪ್ರಾಪ್ಯಕಾರಿ = ಜ್ಞೇಯವಿಷಯಗಳ ಸ್ಪರ್ಶಮಾಡದೆ ಕಾರ್ಯ ಮಾಡುವಂಥದು ; ತಿಳಿದುಕೊಳ್ಳುವಂಥದು. ಮನಸ್ಸು ಮತ್ತು ಕಣ್ಣು ಅಪ್ರಾಪ್ಯಕಾರಿಯಿವೆ ; ಕಣ್ಣುಗಳನ್ನು ಬಿಟ್ಟು ಉಳಿದ ನಾಲ್ಕು ಇಂದ್ರಿಯಗಳು ಪ್ರಾಪ್ಯಕಾರಿಯಿವೆ.

ವ್ಯವಹಾರಕಾಲಸ್ಯ ನಿಶ್ಚಯಕಾಲಸ್ಯ ಚ ಸ್ವರೂಪಾಖ್ಯಾನಮೇತತ್ ।

ತತ್ರ ಕ್ರಮಾನುಪಾತೀ ಸಮಯಾಖ್ಯಃ ಪರ್ಯಾಯೋ ವ್ಯವಹಾರಕಾಲಃ, ತದಾಧಾರಭೂತಂ ದ್ರವ್ಯಂ ನಿಶ್ಚಯಕಾಲಃ । ತತ್ರ ವ್ಯವಹಾರಕಾಲೋ ನಿಶ್ಚಯಕಾಲಪರ್ಯಾಯರೂಪೋಽಪಿ ಜೀವ ಪುದ್ಗಲಾನಾಂ ಪರಿಣಾಮೇನಾವಚ್ಛಿದ್ಯಮಾನತ್ವಾತ್ತತ್ಪರಿಣಾಮಭವ ಇತ್ಯುಪಗೀಯತೇ, ಜೀವಪುದ್ಗಲಾನಾಂ ಪರಿಣಾಮಸ್ತು ಬಹಿರಂಗನಿಮಿತ್ತಭೂತದ್ರವ್ಯಕಾಲಸದ್ಭಾವೇ ಸತಿ ಸಂಭೂತತ್ವಾದ್ ದ್ರವ್ಯಕಾಲಸಂಭೂತ ಇತ್ಯಭಿಧೀಯತೇ । ತತ್ರೇದಂ ತಾತ್ಪರ್ಯಂ-ವ್ಯವಹಾರಕಾಲೋ ಜೀವಪುದ್ಗಲಪರಿಣಾಮೇನ ನಿಶ್ಚೀಯತೇ, ನಿಶ್ಚಯಕಾಲಸ್ತು ತತ್ಪರಿಣಾಮಾನ್ಯಥಾನುಪಪತ್ತ್ಯೇತಿ । ತತ್ರ ಕ್ಷಣಭಂಗೀವ್ಯವಹಾರಕಾಲಃ ಸೂಕ್ಷ್ಮ ಪರ್ಯಾಯಸ್ಯ ತಾವನ್ಮಾತ್ರತ್ವಾತ್, ನಿತ್ಯೋ ನಿಶ್ಚಯಕಾಲಃ ಸ್ವಗುಣಪರ್ಯಾಯಾಧಾರದ್ರವ್ಯತ್ವೇನ ಸರ್ವದೈವಾವಿನಶ್ವರತ್ವಾದಿತಿ ।

ಗಾಥೆ - ೧೦೦

ಗಾಥಾರ್ಥ :- [ಕಾಲೋ ಪರಿಣಾಮಭವೋ] ಕಾಲವು ಪರಿಣಾಮದಿಂದ ಉತ್ಪನ್ನವಾಗುತ್ತದೆ (ಎಂದರೆ ವ್ಯವಹಾರಕಾಲದ ಅಳತೆಯು ಜೀವ-ಪುದ್ಗಲಗಳ ಪರಿಣಾಮದಿಂದಾಗುತ್ತದೆ); [ಪರಿಣಾಮೋ ದವ್ವ ಕಾಲಸಂಭೂದೋ] ಪರಿಣಾಮವು ದ್ರವ್ಯಕಾಲದಿಂದ ಉತ್ಪನ್ನವಾಗುತ್ತದೆ. [ದೋಣ್ಹಂ ಏಸ ಸಹಾವೋ] ಇದು ಎರಡರ ಸ್ವಭಾವವಿದೆ. [ಕಾಲೋ ಖಣಭಂಗುರೋ ಣಿಯದೋ] ಕಾಲವು ಕ್ಷಣಭಂಗುರ ಮತ್ತು ನಿತ್ಯವಿದೆ.

ಟೀಕೆ :- ಇದು ವ್ಯವಹಾರಕಾಲ ಹಾಗೂ ನಿಶ್ಚಯಕಾಲದ ಸ್ವರೂಪದ ಕಥನವಿದೆ.

ಅಲ್ಲಿ 'ಸಮಯ'ವೆಂಬ ಹೆಸರಿನ ಯಾವ ಕ್ರಮಿತ ಪರ್ಯಾಯವಿದೆ ಅದು ವ್ಯವಹಾರಕಾಲವಿದೆ ; ಅದರ ಆಧಾರಭೂತವಾದ ದ್ರವ್ಯವು ಅದು ನಿಶ್ಚಯಕಾಲವಿದೆ.

ಅಲ್ಲಿ ವ್ಯವಹಾರಕಾಲವು ನಿಶ್ಚಯಕಾಲದ ಪರ್ಯಾಯರೂಪವಾಗಿದ್ದರೂ ಜೀವ-ಪುದ್ಗಲಗಳ ಪರಿಣಾಮದಿಂದ ಅಳತೆಯಾಗುತ್ತದೆ - ತಿಳಿದು ಬರುತ್ತದೆ ಅದಕ್ಕಾಗಿ 'ಜೀವ-ಪುದ್ಗಲಗಳ ಪರಿಣಾಮದಿಂದ ಉತ್ಪನ್ನವಾಗುವಂಥ'ದೆಂದು ಹೇಳಲಾಗುತ್ತದೆ ; ಮತ್ತು ಜೀವ-ಪುದ್ಗಲಗಳ ಪರಿಣಾಮಗಳು ಬಹಿರಂಗ-ನಿಮಿತ್ತ ಭೂತವಾದ ದ್ರವ್ಯಕಾಲದ ಸದ್ಭಾವದಲ್ಲಿ ಉತ್ಪನ್ನವಾಗುವ ಕಾರಣ 'ದ್ರವ್ಯಕಾಲದಿಂದ ಉತ್ಪನ್ನವಾಗುವಂಥ'ವೆಂದು ಎನ್ನಲಾಗುತ್ತದೆ. ತಾತ್ಪರ್ಯವೇನೆಂದರೆ -ವ್ಯವಹಾರಕಾಲವು ಜೀವ-ಪುದ್ಗಲಗಳ ಪರಿಣಾಮದಿಂದ ನಿಶ್ಚಿತವಾಗುತ್ತದೆ ; ಮತ್ತು ನಿಶ್ಚಯಕಾಲವು ಜೀವ-ಪುದ್ಗಲಗಳ ಪರಿಣಾಮದ ಅನ್ಯಥಾ ಅನುಪಪತ್ತಿಯಿಂದ (ಎಂದರೆ ಜೀವ-ಪುದ್ಗಲಗಳ ಪರಿಣಾಮವು ಬೇರೆ ಪ್ರಕಾರದಿಂದ ಸಿದ್ಧವಾಗುವುದಿಲ್ಲವೆಂದು) ನಿಶ್ಚಿತವಾಗುತ್ತದೆ.

ಅಲ್ಲಿ ವ್ಯವಹಾರಕಾಲವು ಕ್ಷಣಭಂಗಿ[೧] ಯಿದೆ, ಏಕೆಂದರೆ ಅದು ಕೇವಲ ಸೂಕ್ಷ್ಮ ಪರ್ಯಾಯದಷ್ಟೇ (ಕ್ಷಣಮಾತ್ರದಷ್ಟೇ, ಸಮಯಮಾತ್ರದಷ್ಟೇ,) ಇದೆ ; ನಿಶ್ಚಯಕಾಲವು ನಿತ್ಯವಿದೆ, ಏಕೆಂದರೆ ಅದು ತನ್ನ ಗುಣ-ಪರ್ಯಾಯಗಳ ಆಧಾರಭೂತವಾದ ದ್ರವ್ಯದಿಂದ ಯಾವಾಗಲೂ ಅವಿನಾಶಿಯಿದೆ.

---

೧) ಕ್ಷಣಭಂಗಿ = ಪ್ರತಿಕ್ಷಣಕ್ಕೆ ನಷ್ಟವಾಗುವಂಥ ; ಪ್ರತಿಯೊಂದು ಸಮಯಕ್ಕೆ ಯಾವುದರ ನಾಶವಾಗುತ್ತದೆ ಅಂಥದು ; ಕ್ಷಣಭಂಗುರ ; ಕ್ಷಣಿಕ.

ಕಾಲೋ ತ್ತಿ ಯ ವವದೇಸೋ ಸಬ್ಭಾವಪರೂವಗೋ ಹವದಿ ಣಿಚ್ಚೋ ।
ಉಪ್ಪಣ್ಣಪ್ಪದ್ಧಂಸೀ ಅವರೋ ದೀಹಂತರಟ್ಠಾಈ ॥೧೦೧॥

ಕಾಲ ಇತಿ ಚ ವ್ಯಪದೇಶ ಸದ್ಭಾವಪ್ರರೂಪಕೋ ಭವತಿ ನಿತ್ಯಃ ।
ಉತ್ಪನ್ನಪ್ರಧ್ವಂಸ್ಯಪರೋ ದೀರ್ಘಾಂತರಸ್ಥಾಯೀ ॥೧೦೧॥

ನಿತ್ಯಕ್ಷಣಿಕತ್ವೇನ ಕಾಲವಿಭಾಗಖ್ಯಾಪನಮೇತತ್ ।

ಯೋ ಹಿ ದ್ರವ್ಯವಿಶೇಷಃ 'ಅಯಂ ಕಾಲಃ, ಅಯಂ ಕಾಲಃ' ಇತಿ ಸದಾ ವ್ಯಪದಿಶ್ಯತೇ ಸ ಖಲು ಸ್ವಸ್ಯ ಸದ್ಭಾವಮಾವೇದಯನ್ ಭವತಿ ನಿತ್ಯಃ। ಯಸ್ತು ಪುನರುತ್ಪನ್ನಮಾತ್ರ ಏವ ಪ್ರಧ್ವಂಸ್ಯತೇ ಸ ಖಲು ತಸ್ಯೈವ ದ್ರವ್ಯವಿಶೇಷಸ್ಯ ಸಮಯಾಖ್ಯಃ ಪರ್ಯಾಯ ಇತಿ । ಸ ತೂತ್ಪಂಗಿತಕ್ಷಣಭಂಗೋಽಪ್ಯುಪದರ್ಶಿತಸ್ವಸಂತಾನೋ ನಯ-ಬಲಾದ್ದೀರ್ಘಾಂತರಸ್ಥಾಯ್ಯುಪಗೀಯಮಾನೋ ನ ದುಷ್ಯತಿ ; ತತೋ ನ ಖಲ್ವಾವಲಿಕಾಪಲ್ಯೋಪಮ-ಸಾಗರೋಪಮಾದಿವ್ಯವಹಾರೋ ವಿಪ್ರತಿಷಿಧ್ಯತೇ। ತದತ್ರ ನಿಶ್ಚಯಕಾಲೋ ನಿತ್ಯಃ ದ್ರವ್ಯರೂಪತ್ವಾತ್, ವ್ಯವಹಾರಕಾಲಃ ಕ್ಷಣಿಕಃ ಪರ್ಯಾಯ ರೂಪತ್ವಾದಿತಿ ।

ಗಾಥೆ - ೧೦೧

ಗಾಥಾರ್ಥ :- [ಕಾಲೋ ತ್ತಿ ಯ ವವದೇಸೋ] 'ಕಾಲ'ವೆಂಬ ವ್ಯಪದೇಶವು [ಸಬ್ಭಾವಪರೂವಗೋ] ಸದ್ಭಾವದ ಪ್ರರೂಪಕವಿದೆ ಅದಕ್ಕಾಗಿ [ಣಿಚ್ಚೋ ಹವದಿ] ಕಾಲ (ನಿಶ್ಚಯಕಾಲ)ವು ನಿತ್ಯವಿದೆ. [ಉಪ್ಪಣ್ಣಪ್ಪದ್ಧಂಸೀ ಅವರೋ] ಉತ್ಪನ್ನಧ್ವಂಸಿಯಾದಂಥ ಯಾವ ಎರಡನೆಯಕಾಲವಿದೆ (ಎಂದರೆ ಉತ್ಪನ್ನವಾದೊಡನೆಯೇ ನಾಶವಾಗುವಂಥ ಯಾವ ವ್ಯವಹಾರಕಾಲವಿದೆ) ಅದು [ದೀಹಂದತರಟ್ಠಾಈ] (ಕ್ಷಣಿಕವಾಗಿದ್ದರೂ ಪ್ರವಾಹ ಅಪೇಕ್ಷೆಯಿಂದ) ದೀರ್ಘಸ್ಥಿತಿಯದೂ ಇದೆ. (ಎಂದು ಹೇಳಲಾಗುತ್ತದೆ.)

ಟೀಕೆ :- ಇದು ಕಾಲದ 'ನಿತ್ಯ' ಮತ್ತು 'ಕ್ಷಣಿಕ' ಹೀಗೆ ಎರಡು ವಿಭಾಗಗಳ ಕಥನವಿದೆ.

'ಇದು ಕಾಲವಿದೆ, ಇದು ಕಾಲವಿದೆ' - ಹೀಗೆ ಮಾಡಿ ಯಾವಾಗಲೂ ದ್ರವ್ಯವಿಶೇಷದ ವ್ಯಪದೇಶ (ನಿರ್ದೇಶ, ಕಥನ)ಮಾಡಲಾಗುತ್ತದೆ ಅದು (ದ್ರವ್ಯವಿಶೇಷ ಎಂದರೆ ನಿಶ್ಚಯಕಾಲರೂಪ ಮುಖ್ಯ-ದ್ರವ್ಯವು) ನಿಜವಾಗಿ ತನ್ನ ಸದ್ಭಾವವನ್ನು ಪ್ರಕಟಪಡಿಸುತ್ತ ನಿತ್ಯವಿದೆ ; ಮತ್ತು ಯಾವುದು ಉತ್ಪನ್ನವಾದೊಡನೆಯೇ ನಷ್ಟವಾಗುತ್ತದೆ ಅದು (ವ್ಯವಹಾರಕಾಲವು) ನಿಜವಾಗಿ ಅದೇ ದ್ರವ್ಯವಿಶೇಷದ 'ಸಮಯ'ವೆಂಬ ಹೆಸರಿನ ಪರ್ಯಾಯವಿದೆ. ಅದು ಕ್ಷಣಭಂಗುರವಿದ್ದರೂ ತನ್ನ ಸಂತತಿಯನ್ನು (ಪ್ರವಾಹವನ್ನು) ತೋರಿಸಿಕೊಡುತ್ತದೆ ಅದಕ್ಕಾಗಿ ಅದಕ್ಕೆ ನಯದ ಸಾಮರ್ಥ್ಯದಿಂದ 'ದೀರ್ಘಕಾಲದವರೆಗೆ ಸ್ಥಿರವಿರುವಂಥ'ದ್ದೆಂದು ಹೇಳುವಲ್ಲಿ ದೋಷವಿಲ್ಲ ; ಆದುದರಿಂದ ಆವಲಿಕೆ, ಪಲ್ಯೋಪಮ, ಸಾಗರೋಪಮ ಇವೇ ಮೊದಲಾದ ವ್ಯವಹಾರದ ನಿಷೇಧ ಮಾಡಲಾಗುವುದಿಲ್ಲ.

'ಕಾಲ'ವೆಂಬ ಸಂಜ್ಞೆ ಸತ್ಪರೂಪಕವಿರುವುದರಿಂದ ಕಾಲನಿತ್ಯವಿರುವುದು ।
ಅಲೆಯಂತೆ ಉತ್ಪನ್ನಧ್ವಂಸಿಯಾದಿನ್ನೊಂದದುದೀರ್ಘಾಂತರಸ್ಥಾಯಿಯೆನಿಪುದು ॥೧೦೧॥

ಏದೇ ಕಾಲಾಗಾಸಾ ಧಮ್ಮಾಧಮ್ಮಾ ಯ ಪೋಗ್ಗಲಾ ಜೀವಾ ।
ಲಬ್ಭಂತಿ ದವ್ವಸಣ್ಣಂ ಕಾಲಸ್ಸ ದು ಣತ್ಥಿ ಕಾಯತ್ತಂ ॥೧೦೨॥

ಏತೇ ಕಾಲಾಕಾಶೇ ಧರ್ಮಾಧರ್ಮೌ ಚ ಪುದ್ಗಲಾ ಜೀವಾಃ ।
ಲಭಂತೇ ದ್ರವ್ಯಸಂಜ್ಞಾಂ ಕಾಲಸ್ಯ ತು ನಾಸ್ತಿ ಕಾಯತ್ವಮ್ ॥೧೦೨॥

ಕಾಲಸ್ಯ ದ್ರವ್ಯಾಸ್ತಿಕಾಯತ್ವವಿಧಿಪ್ರತಿಷೇಧವಿಧಾನಮೇತತ್ ।

ಯಥಾ ಖಲು ಜೀವಪುದ್ಗಲಧರ್ಮಾಧರ್ಮಾಕಾಶಾನಿ ಸಕಲದ್ರವ್ಯಲಕ್ಷಣಸದ್ಭಾವಾದ್ ದ್ರವ್ಯವ್ಯಪದೇಶಭಾಂಜಿ ಭವಂತಿ, ತಥಾ ಕಾಲೋಽಪಿ । ಇತ್ಯೇವಂ ಷಡ್‌ದ್ರವ್ಯಾಣಿ । ಕಿಂತು ಯಥಾ ಜೀವಪುದ್ಗಲ-ಧರ್ಮಾಧರ್ಮಾಕಾಶಾನಾಂ ದ್ವ್ಯಾದಿಪ್ರದೇಶಲಕ್ಷಣತ್ವಮಸ್ತ್ಯಸ್ತಿಕಾಯತ್ವಂ, ನ ತಥಾ ಲೋಕಾಕಾಶಪ್ರದೇಶಸಂಖ್ಯಾ-ನಾಮಪಿ ಕಾಲಾಣೂನಾಮೇಕಪ್ರದೇಶತ್ವಾದಸ್ತ್ಯಸ್ತಿಕಾಯತ್ವಮ್ । ಅತ ಏವ ಚ ಪಂಚಾಸ್ತಿಕಾಯಪ್ರಕರಣೇ ನ ಹೀಹ ಮುಖ್ಯತ್ವೇನೋಪನ್ಯಸ್ತಃ ಕಾಲಃ । ಜೀವಪುದ್ಗಲಪರಿಣಾಮಾವಚ್ಛಿದ್ಯಮಾನಪರ್ಯಾಯತ್ವೇನ ತತ್ಪರಿಣಾಮಾನ್ಯ-ಥಾನುಪಪತ್ತ್ಯಾನುಮೀಯಮಾನದ್ರವ್ಯತ್ವೇನಾತ್ಮೈವಾಂತರ್ಭಾವಿತಃ ।

-ಇತಿ ಕಾಲದ್ರವ್ಯವ್ಯಾಖ್ಯಾನಂ ಸಮಾಪ್ತಮ್ ।

ಈ ಪ್ರಕಾರ ಇಲ್ಲಿ ನಿಶ್ಚಯಕಾಲವು ದ್ರವ್ಯರೂಪವಿರುವುದರಿಂದ ನಿತ್ಯವಿದೆ, ಮತ್ತು ವ್ಯವಹಾರಕಾಲವು ಪರ್ಯಾಯರೂಪವಿರುವುದರಿಂದ ಕ್ಷಣಿಕವಿದೆಯೆಂದು ಹೇಳಿದೆ.

ಗಾಥೆ - ೧೦೨

ಗಾಥಾರ್ಥ ಃ- [ಏದೇ] ಈ [ಕಾಲಾಗಾಸಾ] ಕಾಲ, ಆಕಾಶ [ಧಮ್ಮಾಧಮ್ಮಾ] ಧರ್ಮ, ಅಧರ್ಮ, [ಪೋಗ್ಗಲಾ] ಪುದ್ಗಲ [ಯ] ಮತ್ತು [ಜೀವಾ] ಜೀವ (ಇವೆಲ್ಲವು) [ದವ್ವ-ಸಣ್ಣಂ ಲಬ್ಭಂತಿ] 'ದ್ರವ್ಯ' ಸಂಜ್ಞೆಯನ್ನು ಪಡೆಯುತ್ತವೆ ; [ಕಾಲಸ್ಸ ದು] ಆದರೆ ಕಾಲಕ್ಕೆ [ಕಾಯತ್ತಂ] ಕಾಯತ್ವವು [ಣತ್ಥಿ] ಇಲ್ಲ.

ಟೀಕೆ ಃ- ಇಲ್ಲಿ ಕಾಲಕ್ಕೆ ದ್ರವ್ಯತ್ವದ ವಿಧಾನ ಮತ್ತು ಅಸ್ತಿಕಾಯತ್ವದ ನಿಷೇಧದ ಕಥನವಿದೆ (ಎಂದರೆ ಕಾಲಕ್ಕೆ ದ್ರವ್ಯತನವಿದೆ ಆದರೆ ಅಸ್ತಿಕಾಯತನವಿಲ್ಲವೆಂದು ಇಲ್ಲಿ ಕಥನವಿದೆ.)

ಯಾವ ಪ್ರಕಾರ ವಾಸ್ತವಿಕವಾಗಿ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶಕ್ಕೆ ದ್ರವ್ಯದ ಸಮಸ್ತ ಲಕ್ಷಣಗಳ ಸದ್ಭಾವವಿರುವುದರಿಂದ ಅವು 'ದ್ರವ್ಯ' ಸಂಜ್ಞೆಗೆ ಪ್ರಾಪ್ತವಾಗುತ್ತವೆ, ಅದೇ ಪ್ರಕಾರ ಕಾಲವೂ (ಅದಕ್ಕೆ ದ್ರವ್ಯದ ಸಮಸ್ತಲಕ್ಷಣಗಳ ಸದ್ಭಾವವಿರುವುದರಿಂದ) 'ದ್ರವ್ಯ' ಸಂಜ್ಞೆಗೆ ಪ್ರಾಪ್ತವಾಗುತ್ತದೆ. ಈ ಪ್ರಕಾರವಾಗಿ ಆರು ದ್ರವ್ಯಗಳಿವೆ. ಆದರೆ ಯಾವ ಪ್ರಕಾರ ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತದರಂತೆ ಕಾಲ ಇವೆಲ್ಲವು ।
ತಾವೆ 'ದ್ರವ್ಯ' ಸಂಜ್ಞೆಗೆ ಪ್ರಾಪ್ತವಾಗುವುವಾದರೆ ಕಾಲವೊಂದಕೆಕಾಯತ್ವವಿಲ್ಲ ॥೧೦೨॥

ಏವ ಪವಯಣಸಾರಂ ಪಂಚತ್ಥಿಯಸಂಗಹಂ ವಿಯಾಣೆತ್ತಾ ।
ಜೋ ಮುಯದಿ ರಾಗದೋಸೇ ಸೋ ಗಾಹದಿ ದುಕ್ಖಪರಿಮೋಕ್ಖಂ ।।೧೦೩।।

ಏವಂ ಪ್ರವಚನಸಾರಂ ಪಂಚಾಸ್ತಿಕಾಯಸಂಗ್ರಹಂ ವಿಜ್ಞಾಯ ।
ಯೋ ಮುಂಚತಿ ರಾಗದ್ವೇಷೌ ಸ ಗಾಹತೇ ದುಃಖಪರಿಮೋಕ್ಷಮ್ ।।೧೦೩।।

ಆಕಾಶಕ್ಕೆ ದ್ವಿ-ಆದಿ[೧] ಪ್ರದೇಶಗಳು ಯಾವುದರ ಲಕ್ಷಣವಿದೆ ಅಂಥ ಅಸ್ತಿಕಾಯತನವಿದೆ, ಅದೇ ಪ್ರಕಾರ ಕಾಲಾಣುಗಳಿಗೆ -ಅವುಗಳ ಸಂಖ್ಯೆಯು ಲೋಕಾಕಾಶದ ಪ್ರದೇಶಗಳಷ್ಟು (ಅಸಂಖ್ಯ)ಇದ್ದರೂ - ಏಕಪ್ರದೇಶಿತನದ ಕಾರಣ ಅಸ್ತಿಕಾಯತ್ವವಿಲ್ಲ. ಮತ್ತು ಹೀಗಿರುವುದರಿಂದಲೇ (ಎಂದರೆ ಕಾಲವು ಅಸ್ತಿಕಾಯವಿಲ್ಲದಿರುವುದರಿಂದಲೇ) ಇಲ್ಲಿ ಪಂಚಾಸ್ತಿಕಾಯದ ಪ್ರಕರಣದಲ್ಲಿ ಮುಖ್ಯವಾಗಿ ಕಾಲದ ಕಥನವನ್ನು ಮಾಡಲಾಗಿಲ್ಲ; (ಆದರೆ) ಜೀವ ಪುದ್ಗಲಗಳ ಪರಿಣಾಮದ ಮುಖಾಂತರ ಯಾವುದು ತಿಳಿದು ಬರುತ್ತದೆ - ಅಳತೆಯಾಗುತ್ತದೆ ಅಂಥದು ಅದರ ಪರ್ಯಾಯಗಳಿರುವುದರಿಂದ ಹಾಗೂ ಜೀವ-ಪುದ್ಗಲಗಳ ಪರಿಣಾಮದ ಅನ್ಯಥಾ ಅನುಪಪತ್ತಿಯಿಂದ ಯಾವುದರ ಅನುಮಾನವಾಗುತ್ತದೆ ಅಂಥ ಆ ದ್ರವ್ಯವಿರುವುದರಿಂದ ಅದನ್ನು ಇಲ್ಲಿ ಅಂತರ್ಭೂತ[೨] ಗೊಳಿಸಲಾಗಿದೆ.

ಈ ಪ್ರಕಾರವಾಗಿ ಕಾಲದ್ರವ್ಯದ ವ್ಯಾಖ್ಯಾನವು ಸಮಾಪ್ತವಾಯಿತು.

ಗಾಥೆ - ೧೦೩

ಗಾಥಾರ್ಥ :- [ಏವಂ] ಈ ಪ್ರಕಾರ [ಪವಯಣಸಾರಂ] ಪ್ರವಚನದ ಸಾರಭೂತವಾದ [ಪಂಚತ್ಥಿಯಸಂಗಹಂ] 'ಪಂಚಾಸ್ತಿಕಾಯಸಂಗ್ರಹ'ವನ್ನು [ವಿಯಾಣೆತ್ತಾ] ತಿಳಿದುಕೊಂಡು [ಜೋ] ಯಾವನು [ರಾಗದೋಸೇ] ರಾಗ-ದ್ವೇಷಗಳನ್ನು [ಮುಯದಿ] ಬಿಡುತ್ತಾನೆ, [ಸೋ] ಅವನು [ದುಕ್ಖಪರಿಮೋಕ್ಖಂ ಗಾಹದಿ] ದುಃಖದಿಂದ ಪರಿಮುಕ್ತನಾಗುತ್ತಾನೆ.

ಈ ವಿಧ ಪ್ರವಚನಸಾರರೂಪ 'ಪಂಚಾಸ್ತಿಕಾಯಸಂಗ್ರಹ'ವ ತಿಳಿದುಕೊಂಡು ।
ಯಾವನು ರಾಗದ್ವೇಷಗಳ ಬಿಡುವನವನು ದುಃಖದಿಂ ಪರಿಮುಕ್ತನಾಗುವನು ।।೧೦೩।।

---

೧. ದ್ವಿ-ಆದಿ ಎರಡು ಅಥವಾ ಹೆಚ್ಚು ; ಎರಡರಿಂದ ಅನಂತದವರೆಗೆ.

೨. ಅಂತರ್ಭೂತ ಮಾಡುವುದು-ಒಳಗೆ ಒಂದಾಗುವುದು ; ಸಮಾವಿಷ್ಟ ಮಾಡುವುದು ; ಸಮಾವೇಶ ಮಾಡುವುದು. [ಈ 'ಪಂಚಾಸ್ತಿಕಾಯಸಂಗ್ರಹ'ವೆಂಬ ಹೆಸರಿನ ಶಾಸ್ತ್ರದಲ್ಲಿ ಮುಖ್ಯರೂಪದಿಂದ ಕಾಲದ ವರ್ಣನೆಯಿಲ್ಲ, ಮುಖ್ಯರೂಪದಿಂದ ಐದು ಅಸ್ತಿಕಾಯಗಳ ವರ್ಣನೆಯಿದೆ. ಅಲ್ಲಿ ಜೀವಾಸ್ತಿಕಾಯ ಮತ್ತು ಪುದ್ಗಲಾಸ್ತಿಕಾಯದ ಪರಿಣಾಮಗಳ ವರ್ಣನೆ ಮಾಡುತ್ತ, ಆ ಪರಿಣಾಮಗಳಿಂದ ಯಾವುದರ ಪರಿಣಾಮಗಳು ತಿಳಿದುಬರುತ್ತವೆ - ಅಳತೆಯಾಗುತ್ತವೆ ಆ ಪದಾರ್ಥದ (ಕಾಲದ) ಹಾಗೂ ಆ ಪರಿಣಾಮಗಳ ಅನ್ಯಥಾ ಅನುಪಪತ್ತಿಯಿಂದ ಯಾವುದರ ಅನುಮಾನವಾಗುತ್ತದೆ ಆ ಪದಾರ್ಥದ (ಕಾಲದ) ವರ್ಣನೆಯನ್ನು ಗೌಣರೂಪದಿಂದ ಮಾಡುವುದು ಉಚಿತವಿದೆಯೆಂದು ನಂಬಿ ಇಲ್ಲಿ ಪಂಚಾಸ್ತಿಕಾಯ ಪ್ರಕರಣದಲ್ಲಿ ಗೌಣರೂಪದಿಂದ ಕಾಲದ ವರ್ಣನೆ ಮಾಡಿದೆ.]

ತದವಬೋಧಫಲಪುರಸ್ಸರಃ ಪಂಚಾಸ್ತಿಕಾಯವ್ಯಾಖ್ಯೋಪಸಂಹಾರೋಽಯಮ್ ।

ನ ಖಲು ಕಾಲಕಲಿತಪಂಚಾಸ್ತಿಕಾಯೇಭ್ಯೋಽನ್ಯತ್ ಕಿಮಪಿ ಸಕಲೇನಾಪಿ ಪ್ರವಚನೇನ ಪ್ರತಿಪಾದ್ಯತೇ । ತತಃ ಪ್ರವಚನಸಾರ ಏವಾಯಂ ಪಂಚಾಸ್ತಿಕಾಯಸಂಗ್ರಹಃ । ಯೋ ಹಿ ನಾಮಾಮುಂ ಸಮಸ್ತವಸ್ತುತತ್ತ್ವಭಿಧಾಯಿನಮರ್ಥತೋಽರ್ಥಿತಯಾವಬುಧ್ಯಾತ್ಮೈವ ಜೀವಾಸ್ತಿಕಾಯಾಂತರ್ಗತಮಾತ್ಮಾನಂ ಸ್ವರೂಪೇಣಾತ್ಯಂತವಿಶುದ್ಧಚೈತನ್ಯಸ್ವಭಾವಂ ನಿಶ್ಚಿತ್ಯ ಪರಸ್ಪರಕಾರ್ಯಕಾರಣೀಭೂತಾನಾದಿರಾಗದ್ವೇಷಪರಿಣಾಮಕರ್ಮಬಂಧಸಂತತಿಸಮಾರೋಪಿತಸ್ವರೂಪವಿಕಾರಂ ತದಾತ್ವೇಽನುಭೂಯಮಾನಮವಲೋಕ್ಯ ತತ್ಕಾಲೋನ್ಮೀಲಿತವಿವೇಕಜ್ಯೋತಿಃ ಕರ್ಮಬಂಧಸಂತತಿಪ್ರವರ್ತಿಕಾಂ ರಾಗದ್ವೇಷಪರಿಣತಿಮತ್ಯಸ್ಯತಿ, ಸ ಖಲು ಜೀರ್ಯಮಾಣಸ್ನೇಹೋ ಜಘನ್ಯಸ್ನೇಹಗುಣಾಭಿಮುಖಪರಮಾಣುವದ್ಬಾಹ್ಯಬಂಧಪರಾಙ್ಮುಖಃ ಪೂರ್ವಬಂಧಾತ್ಪ್ರತ್ಯವಮಾನಃ ಶಿಖಿತಪ್ತೋದಕದೌಸ್ಥ್ಯಾನುಕಾರಿಣೋ ದುಃಖಸ್ಯ ಪರಿಮೋಕ್ಷಂ ವಿಗಾಹತ ಇತಿ ।

ಟೀಕೆ :- ಇಲ್ಲಿ ಪಂಚಾಸ್ತಿಕಾಯದ ಅವಬೋಧನೆಯ ಫಲವನ್ನು ಹೇಳಿ, ಪಂಚಾಸ್ತಿಕಾಯದ ವ್ಯಾಖ್ಯಾನದ ಉಪಸಂಹಾರ ಮಾಡಲಾಗಿದೆ.

ವಾಸ್ತವಿಕವಾಗಿ ಸಂಪೂರ್ಣ (ದ್ವಾದಶಾಂಗರೂಪದಿಂದ ವಿಸ್ತೀರ್ಣವಾದ) ಪ್ರವಚನವು ಕಾಲಸಹಿತವಾಗಿ ಪಂಚಾಸ್ತಿಕಾಯದಿಂದ ಬೇರೆಯಾದುದೇನನ್ನೂ ಪ್ರತಿಪಾದನೆ ಮಾಡುವುದಿಲ್ಲ ; ಅದಕ್ಕಾಗಿ ಪ್ರವಚನದ ಸಾರವೇ ಈ 'ಪಂಚಾಸ್ತಿಕಾಯಸಂಗ್ರಹ'ವಿದೆ. ಸಮಸ್ತ ವಸ್ತುತತ್ತ್ವದ ಕಥನಮಾಡುವಂಥ ಈ 'ಪಂಚಾಸ್ತಿಕಾಯಸಂಗ್ರಹ'ವನ್ನು ಯಾವ ಪುರುಷನು ಅರ್ಥತಃ [೧] ಅರ್ಥಿರೂಪದಿಂದ [೨] ತಿಳಿದುಕೊಂಡು ಇದರಲ್ಲಿಯೇ ಹೇಳಿದ ಜೀವಾಸ್ತಿಕಾಯದಲ್ಲಿ ಅಂತರ್ಗತ [೩] ಸ್ಥಿರವಿರುವ ತನ್ನನ್ನು (ತನ್ನ ಆತ್ಮನನ್ನು) ಸ್ವರೂಪದಿಂದ ಅತ್ಯಂತ ವಿಶುದ್ಧ ಚೈತನ್ಯಸ್ವಭಾವವುಳ್ಳವನೆಂದು ನಿಶ್ಚಿತ ಮಾಡಿ, ಪರಸ್ಪರ [೪] ಕಾರ್ಯಕಾರಣಭೂತದಂಥ ಅನಾದಿಯಾದ ರಾಗದ್ವೇಷ ಪರಿಣಾಮಗಳು ಮತ್ತು ಕರ್ಮಬಂಧದ ಪರಂಪರೆಯಿಂದ ಯಾರಲ್ಲಿ ಸ್ವರೂಪವಿಕಾರವು [೫] ಆರೋಪಿತವಿದೆ [೬] ಅಂಥ ತನ್ನನ್ನು (ತನ್ನ ಆತ್ಮನನ್ನು) ಆ ಸಮಯಕ್ಕೆ ಅನುಭವದಲ್ಲಿ ಬರುತ್ತಿರುವುದನ್ನು ನೋಡಿ, ಆ ಸಮಯದಲ್ಲಿ ವಿವೇಕಜ್ಯೋತಿಯು

---

೧. ಅರ್ಥತಃ = ಅರ್ಥಕ್ಕನುಸರಿಸಿ ; ವಾಚ್ಯದ ಲಕ್ಷ್ಯಮಾಡಿ ; ವಾಚ್ಯಸಾಪೇಕ್ಷ ; ಯಥಾರ್ಥರೀತಿಯಿಂದ.

೨. ಅರ್ಥಿರೂಪದಿಂದ = ಯಾಚಕರೂಪದಿಂದ ; ಸೇವಕರೂಪದಿಂದ ; ಅಗತ್ಯರೂಪದಿಂದ ; ಏನಾದರೂ ಪಡೆದುಕೊಳ್ಳುವ ಪ್ರಯೋಜನದಿಂದ (ಎಂದರೆ ಹಿತಪ್ರಾಪ್ತಿಯ ಉದ್ದೇಶದಿಂದ).

೩. ಜೀವಾಸ್ತಿಕಾಯದಲ್ಲಿ ತಾನು (ತನ್ನ ಆತ್ಮನು) ಒಂದಾಗುತ್ತಾನೆ, ಅದಕ್ಕಾಗಿ ಹೇಗೆ ಜೀವಾಸ್ತಿಕಾಯದ ಸ್ವರೂಪದ ವರ್ಣನೆ ಮಾಡಲಾಗಿದೆ ಹಾಗೆಯೇ ತನ್ನ ಸ್ವರೂಪವಿದೆ, ಎಂದರೆ ತಾನೂ ಸ್ವರೂಪದಿಂದ ಅತ್ಯಂತ ವಿಶುದ್ಧ ಚೈತನ್ಯ ಸ್ವಭಾವವುಳ್ಳವನಿದ್ದಾನೆ.

೪. ರಾಗದ್ವೇಷಪರಿಣಾಮ ಮತ್ತು ಕರ್ಮಬಂಧ ಇವು ಅನಾದಿಕಾಲದಿಂದ ಒಂದು - ಇನ್ನೊಂದಕ್ಕೆ ಕಾರ್ಯ-ಕಾರಣರೂಪವಿವೆ.

೫. ಸ್ವರೂಪ ವಿಕಾರ = ಸ್ವರೂಪದ ವಿಕಾರ. [ಸ್ವರೂಪದಲ್ಲಿ ೧) ದ್ರವ್ಯಾರ್ಥಿಕನಯದ ವಿಷಯಭೂತ ಸ್ವರೂಪ, ಮತ್ತು ೨) ಪರ್ಯಾಯಾರ್ಥಿಕನಯದ ವಿಷಯಭೂತ ಸ್ವರೂಪವೆಂದು ಎರಡು ಪ್ರಕಾರವಿವೆ. ಜೀವದಲ್ಲಿ ಯಾವ ವಿಕಾರವಾಗುತ್ತದೆ ಅದು ಪರ್ಯಾಯಾರ್ಥಿಕನಯದ ವಿಷಯಭೂತ ಸ್ವರೂಪದಲ್ಲಿ ಆಗುತ್ತದೆ ; ದ್ರವ್ಯಾರ್ಥಿಕನಯದ ವಿಷಯಭೂತಸ್ವರೂಪದಲ್ಲಿಲ್ಲ ಆ (ದ್ರವ್ಯಾರ್ಥಿಕನಯದ ವಿಷಯಭೂತ) ಸ್ವರೂಪವಂತೂ ಯಾವಾಗಲೂ ಅತ್ಯಂತ ವಿಶುದ್ಧ ಚೈತನ್ಯಾತ್ಮಕವಿದೆ.]

೬. ಆರೋಪಿತ = (ಹೊಸ ಎಂದರೆ ಔಪಾಧಿಕ ರೂಪದಿಂದ) ಮಾಡಿದ. [ಸ್ಫಟಿಕ ಮಣಿಯಲ್ಲಿ ಔಪಾಧಿಕರೂಪದಿಂದಾಗುವಂಥ ವರ್ಣಾವಸ್ಥೆಯಂತೆ ಜೀವದಲ್ಲಿ ಔಪಾಧಿಕರೂಪದಿಂದ ವಿಕಾರ ಪರ್ಯಾಯಗಳಾಗುತ್ತಿರುವುದು ಒಮ್ಮೊಮ್ಮೆ ಅನುಭವದಲ್ಲಿ ಬರುತ್ತದೆ.]

ಮುಣಿಊಣ ಏತದಟ್ಠಂ ತದಣುಗಮಣುಜ್ಜದೋ ಣಿಹದ ಮೋಹೋ ।
ಪಸಮಿಯರಾಗದ್ದೋಸೋ ಹವದಿ ಹದಪರಾಪರೋ ಜೀವೋ ॥೧೦೪॥

ಜ್ಞಾತ್ವೈತದರ್ಥಂ ತದನುಗಮನೋದ್ಯತೋ ನಿಹತಮೋಹಃ ।
ಪ್ರಶಮಿತರಾಗದ್ವೇಷೋ ಭವತಿ ಹತಪರಾಪರೋ ಜೀವಃ ॥೧೦೪॥

ಪ್ರಕಟವಾಗುವುದರಿಂದ (ಎಂದರೆ ಅತ್ಯಂತ ವಿಶುದ್ಧವಾದ ಚೈತನ್ಯಸ್ವಭಾವದ ಮತ್ತು ವಿಕಾರದ ಭೇದಜ್ಞಾನವು ಅದೇ ಕಾಲಕ್ಕೆ ಪ್ರಕಟಪ್ರವರ್ತಮಾನವಾಗುವುದರಿಂದ) ಕರ್ಮಬಂಧದ ಪರಂಪರೆಯನ್ನು ಪ್ರವರ್ತನಗೊಳಿಸುವಂಥ ರಾಗದ್ವೇಷಪರಿಣತಿಯನ್ನು ಬಿಟ್ಟುಕೊಡುತ್ತಾನೆ, ಆ ಪುರುಷನು ವಾಸ್ತವಿಕವಾಗಿ ಯಾವುದರ ಸ್ನೇಹ [೧] ವು ಜೀರ್ಣವಾಗುತ್ತ ಹೋಗುತ್ತದೆ ಅಂಥ ಜಘನ್ಯ ಸ್ನೇಹ [೨] ಗುಣದ ಸಮ್ಮುಖವಾಗಿ ವರ್ತಿಸುತ್ತಿರುವ ಪರಮಾಣುವಿನ ಹಾಗೆ ಭಾವೀ ಬಂಧದಿಂದ ಪರಾಙ್ಮುಖವಾಗಿ ವರ್ತಿಸುತ್ತ ಮೊದಲಿನ ಬಂಧದಿಂದ ಬಿಡುಗಡೆಹೊಂದುತ್ತ ಅಗ್ನಿತಪ್ತಜಲದ ದುಃಸ್ಥಿತಿ [೩] ಯಂತೆ ಯಾವ ದುಃಖವಿದೆ ಅದರಿಂದ ಪರಿಮುಕ್ತನಾಗುತ್ತಾನೆ.

ಗಾಥೆ - ೧೦೪

ಗಾಥಾರ್ಥ :- [ಜೀವೋ] ಜೀವನು [ಏತದಟ್ಠಂ ಮುಣಿಊಣ] ಈ ಅರ್ಥವನ್ನು ತಿಳಿದುಕೊಂಡು (ಈ ಶಾಸ್ತ್ರದ ಅರ್ಥಭೂತವಾದ ಶುದ್ಧಾತ್ಮನನ್ನು ತಿಳಿದುಕೊಂಡು), [ತದಣುಗಮಣುಜ್ಜದೋ] ಅದಕ್ಕನುಸಾರವಾದ ಉದ್ಯಮವನ್ನು ಮಾಡುತ್ತ [ಣಿಹದ ಮೋಹೋ] ಹತಮೋಹನಾಗಿ (ದರ್ಶನಮೋಹದ ಕ್ಷಯ ಮಾಡಿದವನಾಗಿ), [ಪಸಮಿಯರಾಗದ್ದೋಸೋ] ರಾಗ-ದ್ವೇಷಗಳನ್ನು ಪ್ರಶಮಿತ (ನಿವೃತ್ತ)ಗೊಳಿಸಿ, [ಹದಪರಾಪರೋ ಹವದಿ] ಪೂರ್ವೋತ್ತರ ಬಂಧಗಳನ್ನು ನಾಶಮಾಡಿದವನಾಗುತ್ತಾನೆ.

ಜೀವನೀ ಅರ್ಥವ ತಿಳಿದು ಅದರನುಸಾರ ಪ್ರಯತ್ನಿಸಿ ಹತಮೋಹನಾಗಿ ।
ಅವನು ರಾಗದ್ವೇಷ ಪ್ರಶಮಿಸಿ ಪೂರ್ವೋತ್ತರ ಬಂಧರಹಿತನಾಗುವನು ॥೧೦೪॥

---

೧. ಸ್ನೇಹ = ರಾಗಾದಿರೂಪವಾದ ಸ್ನಿಗ್ಧತೆ.

೨. ಸ್ನೇಹ = ಸರ್ವಗುಣದ ಪರ್ಯಾಯರೂಪವಾದ ಸ್ನಿಗ್ಧತೆ, [ಯಾವ ಪ್ರಕಾರ ಜಘನ್ಯ ಸ್ನಿಗ್ಧತೆಯ ಸಮ್ಮುಖವಾಗಿ ವರ್ತಿಸುತ್ತಿರುವ ಪರಮಾಣುವು ಭಾವೀ ಬಂಧದಿಂದ ಪರಾಙ್ಮುಖವಿದೆ, ಅದೇ ಪ್ರಕಾರ ಯಾರ ರಾಗಾದಿಗಳು ಜೀರ್ಣವಾಗುತ್ತ ಹೋಗುತ್ತವೆ ಅಂಥ ಪುರುಷನು ಭಾವೀ ಬಂಧದಿಂದ ಪರಾಙ್ಮುಖನಿದ್ದಾನೆ.]

೩. ದುಃಸ್ಥಿತಿ = ಅಶಾಂತಸ್ಥಿತಿ. (ಎಂದರೆ ಮೇಲೆ-ಕೆಳಗೆ ಆಗುವುದು ; ಸಳಮಳವಾಗುವುದು); ಅಸ್ಥಿರತೆ ; ಕೀಳು ಅವಸ್ಥೆ ; [ಯಾವ ಪ್ರಕಾರ ಅಗ್ನಿತಪ್ತ ನೀರು ಕುದಿಯುತ್ತದೆ, ಮೇಲೆ -ಕೆಳಗೆ ಆಗುತ್ತಿರುತ್ತದೆ, ಅದೇ ಪ್ರಕಾರ ದುಃಖವು ಆಕುಲಮಯವಾಗಿದೆ.]

ದುಃಖವಿಮೋಕ್ಷಕರಣಕ್ರಮಾಖ್ಯಾನಮೇತತ್ ।

ಏತಸ್ಯ ಶಾಸ್ತ್ರಸ್ಯಾರ್ಥಭೂತಂ ಶುದ್ಧಚೈತನ್ಯಸ್ವಭಾವಮಾತ್ಮಾನಂ ಕಶ್ಚಿಜ್ಜೀವಸ್ತಾವಜ್ಜಾನೀತೇ । ತತಸ್ತಮೇವಾನುಗಂತುಮುದ್ಯಮತೇ । ತತೋಽಸ್ಯ ಕ್ಷೀಯತೇ ದೃಷ್ಟಿಮೋಹಃ । ತತಃಸ್ವರೂಪಪರಿಚಯಾದುನ್ಮಜ್ಜತಿ ಜ್ಞಾನಜ್ಯೋತಿಃ । ತತೋ ರಾಗದ್ವೇಷೌಪ್ರಶಾಮ್ಯತಃ । ತತಃ ಉತ್ತರಃ ಪೂರ್ವಶ್ಚ ಬಂಧೋ ವಿನಶ್ಯತಿ । ತತಃ ಪುನರ್ಬಂಧಹೇತುತ್ವಾಭಾವಾತ್ ಸ್ವರೂಪಸ್ಥೋ ನಿತ್ಯಂ ಪ್ರತಪತೀತಿ ।

ಇತಿ ಸಮಯವ್ಯಾಖ್ಯಾಯಾಮಂತರ್ನೀತಷಡ್ದ್ರವ್ಯಪಂಚಾಸ್ತಿಕಾಯವರ್ಣನಃ ಪ್ರಥಮಃ ಶ್ರುತಸ್ಕಂಧಃ ಸಮಾಪ್ತಃ ।

ಟೀಕೆ :- ಇದು ದುಃಖದಿಂದ ವಿಮುಕ್ತವಾಗುವುದರ ಕ್ರಮದ ವರ್ಣನೆಯಿದೆ.

ಮೊದಲು ಯಾವನೋ ಓರ್ವ ಜೀವನು ಈ ಶಾಸ್ತ್ರದ ಅರ್ಥಭೂತವಾದ ಶುದ್ಧಚೈತನ್ಯ ಸ್ವಭಾವವುಳ್ಳ (ತನ್ನ)ಆತ್ಮನನ್ನು ತಿಳಿಯುತ್ತಾನೆ ; ಅದರಿಂದ (ಮತ್ತೆ) ಅದರ ಅನುಸರಣೆಯದೇ ಉದ್ಯಮ ಮಾಡುತ್ತಾನೆ ; ಅದಕ್ಕಾಗಿ ಅವನಿಗೆ ದೃಷ್ಟಿಮೋಹದ ಕ್ಷಯವಾಗುತ್ತದೆ ; ಹೀಗಾಗುವುದರಿಂದ ಸ್ವರೂಪಪರಿಚಯದ ಕಾರಣವಾಗಿ ಜ್ಞಾನಜ್ಯೋತಿಯು ಪ್ರಕಟವಾಗುತ್ತದೆ ; ಅದರಿಂದ ರಾಗ-ದ್ವೇಷಗಳು ಪ್ರಶಮಿತವಾಗುತ್ತವೆ - ನಿವೃತ್ತವಾಗುತ್ತವೆ ; ಆದ್ದರಿಂದ ಉತ್ತರ ಮತ್ತು ಪೂರ್ವ (ಅನಂತರದ ಮತ್ತು ಮೊದಲಿನ) ಬಂಧವು ವಿನಷ್ಟವಾಗುತ್ತದೆ ; ಇದರಿಂದ ಮತ್ತೆ ಬಂಧವಾಗುವ ಹೇತುತ್ವದ ಅಭಾವವಾಗುವುದರಿಂದ ಯಾವಾಗಲೂ ಸ್ವಸ್ವರೂಪದಿಂದ ತಪಿಸುತ್ತಾನೆ - ಪ್ರತಾಪವಂತನಾಗಿ ವರ್ತಿಸುತ್ತಾನೆ. (ಎಂದರೆ ಆ ಜೀವನು ಯಾವಾಗಲೂ ತನ್ನ ಸ್ವರೂಪದಲ್ಲಿದ್ದು ಪರಮಾನಂದ ಜ್ಞಾನಾದಿರೂಪನಾಗಿ ಪರಿಣಮಿಸುತ್ತಾನೆ.)

.

ಈ ಪ್ರಕಾರ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವ ಪ್ರಣೀತ ಶ್ರೀ ಪಂಚಾಸ್ತಿಕಾಯಸಂಗ್ರಹ ಶಾಸ್ತ್ರದ ಶ್ರೀಮದ್ ಅಮೃತಚಂದ್ರಾಚಾರ್ಯದೇವವಿರಚಿತ ಸಮಯವ್ಯಾಖ್ಯೆಯೆಂಬ ಹೆಸರಿನ ಟೀಕೆಯಲ್ಲಿ ಷಡ್‌ದ್ರವ್ಯ-ಪಂಚಾಸ್ತಿಕಾಯ ವರ್ಣನೆಯೆಂಬ ಮೊದಲನೆಯ ಶ್ರುತಸ್ಕಂಧವು ಸಮಾಪ್ತವಾಯಿತು.

-೨-

ನವಪದಾರ್ಥಪೂರ್ವಕ



ದ್ರವ್ಯಸ್ವರೂಪಪ್ರತಿಪಾದನೇನ
ಶುದ್ಧಂ ಬುಧಾನಾಮಿಹ ತತ್ತ್ವಮುಕ್ತಮ್ ।
ಪದಾರ್ಥಭಂಗೇನ ಕೃತಾವತಾರಂ
ಪ್ರಕೀರ್ತ್ಯತೇ ಸಂಪ್ರತಿ ವರ್ತ್ಮ ತಸ್ಯ ॥೭॥

ಅಭಿವಂದಿಊಣ ಸಿರಸಾ ಅಪುಣಬ್ಭವಕಾರಣಂ ಮಹಾವೀರಂ ।
ತೇಸಿಂ ಪಯತ್ಥಭಂಗಂ ಮಗ್ಗಂ ಮೋಕ್ಖಸ್ಸ ವೋಚ್ಛಾಮಿ ॥೧೦೫॥

ಅಭಿವಂದ್ಯ ಶಿರಸಾ ಅಪುನರ್ಭವಕಾರಣಂ ಮಹಾವೀರಮ್ ।
ಶೇಷಾಂ ಪದಾರ್ಥಭಂಗಂ ಮಾರ್ಗಂ ಮೋಕ್ಷಸ್ಯ ವಕ್ಷ್ಯಾಮಿ ॥೧೦೫॥

ಪ್ರಾರಂಭದಲ್ಲಿ ಶ್ರೀ ಅಮೃತಚಂದ್ರಾಚಾರ್ಯದೇವರು ಮೊದಲನೆಯ ಶ್ರುತಸ್ಕಂಧದಲ್ಲಿ ಏನನ್ನು ಹೇಳಲಾಗಿದೆ ಮತ್ತು ಎರಡನೆಯ ಶ್ರುತಸ್ಕಂಧದಲ್ಲಿ ಏನನ್ನು ಹೇಳಲಾಗುವುದೆಂಬುದನ್ನು ತೀರ ಸಂಕ್ಷೇಪದಲ್ಲಿ ಶ್ಲೋಕದ ಮುಖಾಂತರ ತಿಳಿಸುತ್ತಾರೆ.

ಶ್ಲೋಕಾರ್ಥ :- ಇಲ್ಲಿ (ಈ ಶಾಸ್ತ್ರದ ಮೊದಲನೆಯ ಶ್ರುತಸ್ಕಂಧದಲ್ಲಿ) ದ್ರವ್ಯಸ್ವರೂಪದ ಪ್ರತಿಪಾದನೆಯಿಂದ ಬುಧಪುರುಷರಿಗೆ (ಬುದ್ಧಿವಂತ ಜೀವರುಗಳಿಗೆ) ಶುದ್ಧತತ್ತ್ವದ (ಶುದ್ಧಾತ್ಮತತ್ತ್ವದ) ಉಪದೇಶ ಕೊಡಲಾಯಿತು. ಈಗ ಪದಾರ್ಥಭೇದದ ಮುಖಾಂತರ ಉಪೋದ್ಘಾತ ಮಾಡಿ (ನವ-ಪದಾರ್ಥರೂಪಭೇದದ ಮುಖಾಂತರ

ಅಪುನರ್ಭವದಕುರಿತು ಶ್ರೀಮಹಾವೀರರಿಗೆ ತಲೆಬಾಗಿ ಅಭಿವಂದಿಸಿ ।
ಆ ಪದಾರ್ಥಗಳ ಭೇದ ಮತ್ತದರಂತೆ ಮೋಕ್ಷದ ಮಾರ್ಗವನೀಗ ಪೇಳುವೆನು ॥೧೦೫॥

ಆಪ್ತಸ್ತುತಿಪುರಸ್ಸರಾ ಪ್ರತಿಜ್ಞೇಯಮ್ ।

ಅಮುನಾ ಹಿ ಪ್ರವರ್ತಮಾನಮಹಾಧರ್ಮತೀರ್ಥಸ್ಯ ಮೂಲಕರ್ತೃತ್ವೇನಾಪುನರ್ಭವಕಾರಣಸ್ಯ ಭಗವತಃ ಪರಮಭಟ್ಟಾರಕಮಹಾದೇವಾಧಿದೇವಶ್ರೀವರ್ಧಮಾನಸ್ವಾಮಿನಃ ಸಿದ್ಧಿನಿಬಂಧನಭೂತಾಂ ಭಾವಸ್ತುತಿಮಾಸೂತ್ರ್ಯ, ಕಾಲಕಲಿತಪಂಚಾಸ್ತಿಕಾಯಾನಾಂ ಪದಾರ್ಥವಿಕಲ್ಪೋ ಮೋಕ್ಷಸ್ಯ ಮಾರ್ಗಶ್ಚ ವಕ್ತವ್ಯತ್ವೇನ ಪ್ರತಿಜ್ಞಾತ ಇತಿ ।

ಸಮ್ಮತ್ತಣಾಣಜುತ್ತಂ ಚಾರಿತ್ತಂ ರಾಗದೋಸಪರಿಹೀಣಂ ।
ಮೋಕ್ಖಸ್ಸ ಹವದಿ ಮಗ್ಗೋ ಭವ್ವಾಣಂ ಲದ್ಧಬುದ್ಧೀಣಂ ॥೧೦೬॥

ಸಮ್ಯಕ್ತ್ವಜ್ಞಾನಯುಕ್ತಂ ಚಾರಿತ್ರ ರಾಗದ್ವೇಷಪರಿಹೀಣಮ್ ।
ಮೋಕ್ಷಸ್ಯ ಭವತಿ ಮಾರ್ಗೋ ಭವ್ಯಾನಾಂ ಲಬ್ಧಬುದ್ಧೀನಾಮ್ ॥೧೦೬॥

ಪ್ರಾರಂಭ ಮಾಡಿ) ಅದರ ಮಾರ್ಗದ (ಶುದ್ಧಾತ್ಮತತ್ತ್ವದ ಮಾರ್ಗದ ಎಂದರೆ ಅದರ ಮೋಕ್ಷ ಮಾರ್ಗದ) ವರ್ಣನೆಯನ್ನು ಮಾಡಲಾಗುತ್ತದೆ.

(ಈಗ ಈ ಎರಡನೆಯ ಶ್ರುತಸ್ಕಂಧದಲ್ಲಿ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವ ವಿರಚಿತ ಗಾಥಾ ಸೂತ್ರವನ್ನು ಪ್ರಾರಂಭ ಮಾಡಲಾಗುತ್ತದೆ,-)

ಗಾಥೆ - ೧೦೫

ಗಾಥಾರ್ಥ :- [ಅಪುಣಬ್ಭವಕಾರಣಂ] ಅಪುನರ್ಭವಕ್ಕೆ ಕಾರಣರಾದ [ಮಹಾವೀರಂ] ಶ್ರೀ ಮಹಾವೀರರಿಗೆ [ಸಿರಸಾ ಅಭಿವಂದಿಊಣ] ತಲೆಬಾಗಿ ನಮಸ್ಕರಿಸಿ, [ತೇಸಿಂ ಪಯತ್ಥಭಂಗಂ] ಅವರ ಪದಾರ್ಥಭೇದ (ಕಾಲಸಹಿತವಾಗಿ ಪಂಚಾಸ್ತಿಕಾಯದ ನವಪದಾರ್ಥರೂಪಭೇದ) ಮತ್ತು [ಮೋಕ್ಖಸ್ಸ ಮಗ್ಗಂ] ಮೋಕ್ಷದ ಮಾರ್ಗವನ್ನು [ವೋಚ್ಛಾಮಿ] ಹೇಳುವೆನು.

ಟೀಕೆ :- ಇದು ಆಪ್ತರ ಸ್ತುತಿಯೊಡನೆ ಪ್ರತಿಜ್ಞೆಯಿದೆ.

ಪ್ರವರ್ತಮಾನ ಮಹಾಧರ್ಮತೀರ್ಥದ ಮೂಲಕರ್ತೃಗಳೆಂದು ಯಾರು ಅಪುನರ್ಭವಕ್ಕೆ[೧] ಕಾರಣರಿದ್ದಾರೆ ಅಂಥ ಭಗವಾನ, ಪರಮಭಟ್ಟಾರಕ, ಮಹಾದೇವಾಧಿದೇವ ಶ್ರೀ ವರ್ಧಮಾನಸ್ವಾಮಿಯ ಸಿದ್ಧತ್ವಕ್ಕೆ ನಿಮಿತ್ತಭೂತ

ಆ ಸಮ್ಯಕ್ತ್ವಜ್ಞಾನಸಂಯುಕ್ತವದರಂತೆ ರಾಗದ್ವೇಷವಿಲ್ಲದ ಚಾರಿತ್ರವದು ।
ಲೇಸಾದ ಲಬ್ಧಬುದ್ಧಿಯಭವ್ಯಜೀವಗಳಿಗೆ ಮೋಕ್ಷದಮಾರ್ಗವಿರುವುದು ॥೧೦೬॥

---

೧. ಅಪುನರ್ಭವ = ಮೋಕ್ಷ. [ಪರಮಪೂಜ್ಯ ಭಗವಾನ ಶ್ರೀ ವರ್ಧಮಾನ ಸ್ವಾಮಿಗಳು ವರ್ತಮಾನದಲ್ಲಿ ಪ್ರವರ್ತಿತವಾದ ಯಾವ ರತ್ನತ್ರಯಾತ್ಮಕ ಮಹಾಧರ್ಮತೀರ್ಥವಿದೆ ಅದರ ಮೂಲ ಪ್ರತಿಪಾದಕರಿರುವುದರಿಂದ ಮೋಕ್ಷ ಸುಖರೂಪ ಸುಧಾರಸದ ಪಿಪಾಸೆಯುಳ್ಳ - ಭವ್ಯರಿಗೆ ಮೋಕ್ಷದ ನಿಮಿತ್ತಭೂತರಿದ್ದಾರೆ.]

ಮೋಕ್ಷಮಾರ್ಗಸ್ಯೈವ ತಾವತ್ಸೂಚನೇಯಮ್ ।

ಸಮ್ಯಕ್ತ್ವಜ್ಞಾನಯುಕ್ತಮೇವ ನಾಸಮ್ಯಕ್ತ್ವಜ್ಞಾನಯುಕ್ತಂ, ಚಾರಿತ್ರಮೇವ ನಾಚಾರಿತ್ರಂ, ರಾಗದ್ವೇಷಪರಿಹೀಣಮೇವ ನ ರಾಗದ್ವೇಷಾಪರಿಹೀಣಮ್, ಮೋಕ್ಷಸ್ಯೈವ ನ ಭಾವತೋ ಬಂಧಸ್ಯ, ಮಾರ್ಗ ಏವ ನಾಮಾರ್ಗಃ, ಭವ್ಯಾನಾಮೇವ ನಾಭವ್ಯಾನಾಂ, ಲಬ್ಧಬುದ್ಧೀನಾಮೇವ ನಾಲಬ್ಧಬುದ್ಧೀನಾಂ, ಕ್ಷೀಣಕಷಾಯತ್ವೇ ಭವತ್ಯೇನ ನ ಕಷಾಯಸಹಿತತ್ವೇ ಭವತೀತ್ಯಷ್ಟಧಾ ನಿಯಮೋಽತ್ರ ದ್ರಷ್ಟವ್ಯಃ ।

ಸಮ್ಮತ್ತಂ ಸದ್ದಹಣಂ ಭಾವಾಣಂ ತೇಸಿಮಧಿಗಮೋ ಣಾಣಂ ।
ಚಾರಿತ್ತಂ ಸಮಭಾವೋ ವಿಸಯೇಸು ವಿರೂಢಮಗ್ಗಾಣಂ ॥೧೦೭॥

ಸಮ್ಯಕ್ತ್ವಂ ಶ್ರದ್ಧಾನಂ ಭಾವಾನಾಂ ಶೇಷಾಮಧಿಗಮೋ ಜ್ಞಾನಮ್ ।
ಚಾರಿತ್ರಂ ಸಮಭಾವೋ ವಿಷಯೇಷು ವಿರೂಢಮಾರ್ಗಾಣಾಮ್ ॥೧೦೭॥

ಭಾವಸ್ತುತಿಮಾಡಿ, ಕಾಲಸಹಿತ ಪಂಚಾಸ್ತಿಕಾಯದ ಪದಾರ್ಥಭೇದ (ಎಂದರೆ ಆರು ದ್ರವ್ಯಗಳ ನವಪದಾರ್ಥ ರೂಪಭೇದ) ಹಾಗೂ ಮೋಕ್ಷದ ಮಾರ್ಗ ಹೇಳುವ ಪ್ರತಿಜ್ಞೆಯನ್ನು ಈ ಗಾಥಾಸೂತ್ರದಲ್ಲಿ ಮಾಡಿದ್ದಾರೆ.

ಗಾಥೆ - ೧೦೭

ಗಾಥಾರ್ಥ ಃ- [ಸಮ್ಮತ್ತಣಾಣಜುತ್ತಂ] ಸಮ್ಯಕ್ತ್ವ ಮತ್ತು ಜ್ಞಾನದಿಂದ ಸಂಯುಕ್ತವಾದಂಥ [ಚಾರಿತ್ತಂ ಚಾರಿತ್ರವು - [ರಾಗದೋಸಪರಿಹೀಣಂ] ಯಾವುದು ರಾಗ-ದ್ವೇಷಗಳಿಂದ ರಹಿತವಿದೆ ಅದು, [ಲದ್ಧಬುದ್ಧೀಣಂ] ಲಬ್ಧಬುದ್ಧಿಯುಳ್ಳ [ಭವ್ವಾಣಂ] ಭವ್ಯ ಜೀವರುಗಳಿಗೆ [ಮೋಕ್ಖಸ್ಸ ಮಗ್ಗೋ] ಮೋಕ್ಷದ ಮಾರ್ಗವು [ಹವದಿ] ಇರುತ್ತದೆ.

ಟೀಕೆ ಃ- ಇದು ಮೊದಲು ಮೋಕ್ಷಮಾರ್ಗದ್ದೇ ಸೂಚನೆಯಿದೆ.

ಸಮ್ಯಕ್ತ್ವ ಮತ್ತು ಜ್ಞಾನದಿಂದಲೇ ಯುಕ್ತವಾದ-ಅಸಮ್ಯಕ್ತ್ವ ಮತ್ತು ಅಜ್ಞಾನದಿಂದ ಯುಕ್ತವಲ್ಲದ, ಚಾರಿತ್ರವೇ -ಅಚಾರಿತ್ರವಲ್ಲ, ರಾಗ-ದ್ವೇಷ ರಹಿತವಾದಂಥುದೇ (ಚಾರಿತ್ರ) - ರಾಗದ್ವೇಷ ಸಹಿತವಾದಂಥುದಲ್ಲ, ಮೋಕ್ಷದ್ದೇ-ಭಾವತಃ[೧] ಬಂಧದ್ದಲ್ಲ, ಮಾರ್ಗವೇ-ಅಮಾರ್ಗವಲ್ಲ, ಭವ್ಯರಿಗೇ-ಅಭವ್ಯರಿಗಲ್ಲ, ಲಬ್ಧಬುದ್ಧಿ[೨]

ಭಾವಗಳ ಶ್ರದ್ಧೆಯದು ಸಮ್ಯಕ್ತ್ವವಿದ್ದು ಅವುಗಳ ಬೋಧ ಜ್ಞಾನವಿದೆ ।
ಆ ವಿಶೇಷರೂಢ ಮಾರ್ಗವಾಗಿ ವಿಷಯಗಳಲಿ ಸಾಮ್ಯವದು ಚಾರಿತ್ರವಿದೆ ॥೧೦೭॥

---

೧. ಭಾವತಃ = ಭಾವಾನುಸಾರ ; ಆಶಯಾನುಸಾರ. [‘ಮೋಕ್ಷದ್ದೆ’ಂದು ಹೇಳುತ್ತಲೇ ‘ಬಂಧದ್ದಲ್ಲ’ವೆಂಬ ಭಾವವು ಎಂದರೆ ಆಶಯವು ಸ್ಪಷ್ಟವಾಗಿ ತಿಳಿವಳಿಕೆಯಲ್ಲಿ ಬರುತ್ತದೆ.]

೨. ಲಬ್ಧಬುದ್ಧಿ ಃ ಯಾರು ಬುದ್ಧಿಯನ್ನು ಪ್ರಾಪ್ತಮಾಡಿಕೊಂಡಿದ್ದಾರೆ ಅಂಥವರು.

ಸಮ್ಯಗ್ದರ್ಶನಜ್ಞಾನಚಾರಿತ್ರಾಣಾಂ ಸೂಚನೇಯಮ್ ।

ಭಾವಾಃ ಖಲು ಕಾಲಕಲಿತಪಂಚಾಸ್ತಿಕಾಯವಿಕಲ್ಪರೂಪಾ ನವ ಪದಾರ್ಥಾಃ । ತೇಷಾಂ ಮಿಥ್ಯಾದರ್ಶನೋದಯಾಪಾದಿತಾಶ್ರದ್ಧಾನಾಭಾವಸ್ವಭಾವಂ ಭಾವಾಂತರಂ ಶ್ರದ್ಧಾನಂ ಸಮ್ಯಗ್ದರ್ಶನಂ, ಶುದ್ಧಚೈತನ್ಯರೂಪಾತ್ಮತತ್ತ್ವವಿನಿಶ್ಚಯಬೀಜಮ್ । ತೇಷಾಮೇವ ಮಿಥ್ಯಾದರ್ಶನೋದಯಾನ್ನೈಯಾನಸಂಸ್ಕಾರಾದಿ★ ಸ್ವರೂಪವಿಪರ್ಯಯೇಣಾಧ್ಯವಸೀಯಮಾನಾನಾಂ ತನ್ನಿವೃತ್ತೌ ಸಮಂಜಸಾಧ್ಯವಸಾಯಃ ಸಮ್ಯಗ್ಜ್ಞಾನಂ, ಮನಾಗ್ಜ್ಞಾನಚೇತನಾಪ್ರಧಾನಾತ್ಮತತ್ತ್ವೋಪಲಂಭಬೀಜಮ್ । ಸಮ್ಯಗ್ದರ್ಶನಜ್ಞಾನಸನ್ನಿಧಾನಾದಮಾರ್ಗೇಭ್ಯಃ ಸಮಗ್ರೇಭ್ಯಃ ಪರಿಚ್ಯುತ್ಯ ಸ್ವತತ್ತ್ವೇ ವಿಶೇಷೇಣ ರೂಢಮಾರ್ಗಾಣಾಂ ಸತಾಮಿಂದ್ರಿಯಾನಿಂದ್ರಿಯವಿಷಯ-ಭೂತೇಷ್ವರ್ಥೇಷುರಾಗದ್ವೇಷಪೂರ್ವಕವಿಕಾರಾಭಾವಾನ್ನಿರ್ವಿಕಾರಾವಬೋಧಸ್ವಭಾವಃ ಸಮಭಾವಶ್ಚಾರಿತ್ರಂ, ತದಾತ್ವಾಯತಿರಮಣೀಯಮನಣೀಯಸೌಖ್ಯಸ್ಯೈಕಬೀಜಮ್ । ಇತ್ಯೇಷ ತ್ರಿಲಕ್ಷಣೋ ಮೋಕ್ಷಮಾರ್ಗಃ ಪುರಸ್ತಾನ್ನಿಶ್ಚಯವ್ಯವಹಾರಾಭ್ಯಾಂ ವ್ಯಾಖ್ಯಾಸ್ಯತೇ । ಇಹ ತು ಸಮ್ಯಗ್ದರ್ಶನಜ್ಞಾನಯೋರ್ವಿಷಯ-ಭೂತಾನಾಂ ನವಪದಾರ್ಥಾನಾಮುಪೋದ್ಘಾತಹೇತುತ್ವೇನ ಸೂಚಿತ ಇತಿ ।

ಯವರಿಗೇ - ಅಲಬ್ಧಬುದ್ಧಿಯವರಿಗಲ್ಲ, ಕ್ಷೀಣಕಷಾಯತನದಲ್ಲಿಯೇ[೧] ಆಗುತ್ತದೆ - ಕಷಾಯಸಹಿತತನದಲ್ಲಿ ಆಗುವುದಿಲ್ಲ. ಹೀಗೆ ಎಂಟು ಪ್ರಕಾರದಿಂದ ಇಲ್ಲಿ ನಿಯಮ ನೋಡುವುದು (ಎಂದರೆ ಈ ಗಾಥೆಯಲ್ಲಿ ಮೇಲಿನಂತೆ ಎಂಟು ಪ್ರಕಾರದಿಂದ ನಿಯಮ ಹೇಳಿದೆಯೆಂದು ತಿಳಿದುಕೊಳ್ಳುವುದು,)

ಗಾಥೆ - ೧೦೭

ಗಾಥಾರ್ಥ :- [ಭಾವಾಣಂ] ಭಾವಗಳ (ನವಪದಾರ್ಥಗಳ) [ಸದ್ದಹಣಂ] ಶ್ರದ್ಧೆಯು [ಸಮ್ಮತ್ತಂ] ಅದು ಸಮ್ಯಕ್ತ್ವವಿದೆ ; [ತೇಸಿಮಧಿಗಮೋ] ಅವುಗಳ ಅವಬೋಧವು [ಣಾಣಂ] ಅದು ಜ್ಞಾನವಿದೆ ; [ವಿರೂಢಮಗ್ಗಣಂ] (ನಿಜತತ್ತ್ವದಲ್ಲಿ) ಯಾವವುಗಳ ಮಾರ್ಗವು ವಿಶೇಷರೂಢವಾಗಿದೆ ಅವುಗಳ [ವಿಸಏಸು] ವಿಷಯಗಳ ಕುರಿತು ವರ್ತಿಸುತ್ತಿರುವ [ಸಮಭಾವೋ] ಸಮಭಾವವು [ಚಾರಿತ್ತಂ] ಅದು ಚಾರಿತ್ರವಿದೆ.

ಟೀಕೆ :- ಇಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಸೂಚನೆಯಿದೆ.

ಕಾಲಸಹಿತ ಪಂಚಾಸ್ತಿಕಾಯದ ಭೇದರೂಪಗಳಾದ ನವಪದಾರ್ಥಗಳು ಅವು ವಾಸ್ತವದಲ್ಲಿ 'ಭಾವ'ಗಳಿವೆ. ಆ 'ಭಾವಗಳ' ಮಿಥ್ಯಾದರ್ಶನದ ಉದಯದಿಂದ ಪ್ರಾಪ್ತವಾಗುವಂಥ ಯಾವ ಅಶ್ರದ್ಧೆಯಿದೆ ಅದರ ಅಭಾವ ಸ್ವಭಾವವುಳ್ಳ ಯಾವ ಭಾವಾಂತರ[೨] ಶ್ರದ್ಧೆ (ಎಂದರೆ ನವಪದಾರ್ಥಗಳ ಶ್ರದ್ಧೆ)ಯಿದೆ ಅದು ಸಮ್ಯಗ್ದರ್ಶನವಿದೆ.

---

೧. ಕ್ಷೀಣಕಷಾಯತನದಲ್ಲಿಯೇ = ಕ್ಷೀಣಕಷಾಯತನವಾದೊಡನೆಯೇ ; ಕ್ಷೀಣಕಷಾಯತನವಾಗುವುದು ಆಗಲೇ -ಸಮ್ಯಗ್ದರ್ಶನ ಜ್ಞಾನಯುಕ್ತಚಾರಿತ್ರ - ಏಕೆಂದರೆ ಅದು ರಾಗದ್ವೇಷರಹಿತವಿರುವುದು ; ಲಬ್ಧಬುದ್ಧಿ ಭವ್ಯಜೀವರುಗಳಿಗೆ ಕ್ಷೀಣಕಷಾಯತನವಾದೊಡನೆಯೇ ಮೋಕ್ಷದ ಮಾರ್ಗವು ಪ್ರಾಪ್ತವಾಗುತ್ತದೆ.

೨. ಭಾವಾಂತರ - ಭಾವವಿಶೇಷ ; ಮುಖ್ಯಭಾವ ; ಎರಡನೆಯಭಾವ ; ಬೇರೆ ಭಾವ. ನವಪದಾರ್ಥಗಳ ಅಶ್ರದ್ಧಾನದ ಅಭಾವವು ಯಾವುದರ ಸ್ವಭಾವವಿದೆ ಅಂಥ ಭಾವಾಂತರವು (ನವಪದಾರ್ಥಗಳ ಶ್ರದ್ಧಾನರೂಪವಾದ ಭಾವವು) ಅದು ಸಮ್ಯಗ್ದರ್ಶನವಿದೆ.

★ ಇಲ್ಲಿ'ಸಂಸ್ಕಾರಾದಿ'ಗೆ ಪ್ರತಿಯಾಗಿ ಬಹಳ ಮಾಡಿ 'ಸಂಸ್ಕಾರಾದಿವ' ಇರಬೇಕೆಂದೆನಿಸುತ್ತದೆ.

ಜೀವಾಜೀವಾ ಭಾವಾ ಪುಣ್ಣಂ ಪಾವಂ ಚ ಆಸವಂ ತೇಸಿಂ ।
ಸಂವರಣಂ ಣಿಜ್ಜರಣಂ ಬಂಧೋ ಮೋಕ್ಖೋ ಯ ತೇ ಅಟ್ಠಾ ॥೧೦೮॥

ಏಕೆಂದರೆ ಅದು (ಸಮ್ಯಗ್ದರ್ಶನವು) ಶುದ್ಧಚೈತನ್ಯರೂಪವಾದ ಆತ್ಮತತ್ತ್ವದ ವಿನಿಶ್ಚಯದ[೧] ಬೀಜವಿದೆ, ನೌಕಾಗಮನದ[೨] ಸಂಸ್ಕಾರದಂತೆ ಮಿಥ್ಯಾದರ್ಶನದ ಉದಯದ ಕಾರಣವಾಗಿ ಯಾವ ಸ್ವರೂಪವಿಪರ್ಯಯದೊಡನೆ ಅಧ್ಯವಸಿತಗಳಾಗುತ್ತವೆ (ಎಂದರೆ ವಿಪರೀತ ಸ್ವರೂಪದಿಂದ ತಿಳಿವಳಿಕೆಯಲ್ಲಿ ಬರುತ್ತವೆ - ಭಾಸವಾಗುತ್ತವೆ) ಅಂಥ ಆ 'ಭಾವಗಳ'ದ್ದೇ (ನವಪದಾರ್ಥಗಳದ್ದೇ), ಮಿಥ್ಯಾದರ್ಶನದ ಉದಯದ ನಿವೃತ್ತಿಯಾದ ಮೇಲೆ ಯಾವ ಸಮ್ಯಕ್ ಅಧ್ಯವಸಾಯ (ಸತ್ಯ ತಿಳಿವಳಿಕೆ, ಯಥಾರ್ಥ ಅವಭಾಸ, ನಿಜವಾದ ಅವಬೋಧ)ವಾಗುವುದು ಅದು ಸಮ್ಯಗ್ಜ್ಞಾನವಿದೆ. ಏಕೆಂದರೆ ಅದು (ಸಮ್ಯಗ್ಜ್ಞಾನವು) ಕೆಲ ಅಂಶಗಳಲ್ಲಿ ಜ್ಞಾನಚೇತನಪ್ರಧಾನವಾದ ಆತ್ಮತತ್ತ್ವದ ಉಪಲಬ್ಧಿಯ (ಅನುಭೂತಿಯ) ಬೀಜವಿದೆ. ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನದ ಸದ್ಭಾವದ ಕಾರಣವಾಗಿ ಎಲ್ಲ ಅಮಾರ್ಗಗಳಿಂದ ಬಿಡುಗಡೆ ಹೊಂದಿ ಯಾರು ಸ್ವತತ್ತ್ವದಲ್ಲಿ ವಿಶೇಷರೂಪದಿಂದ ರೂಢ[೩] ಮಾರ್ಗವುಳ್ಳವರಾಗಿದ್ದಾರೆ ಅವರಿಗೆ ಇಂದ್ರಿಯ ಮತ್ತು ಮನಸ್ಸಿನ ವಿಷಯಭೂತವಾದ ಪದಾರ್ಥಗಳ ಕುರಿತು ರಾಗದ್ವೇಷಪೂರ್ವಕ ವಿಕಾರದ ಅಭಾವದ ಕಾರಣದಿಂದಾಗಿ ಯಾವ ನಿರ್ವಿಕಾರ ಜ್ಞಾನಸ್ವಭಾವವುಳ್ಳ ಸಮಭಾವವಾಗುತ್ತದೆ ಅದು ಚಾರಿತ್ರವಿದೆ - ಏಕೆಂದರೆ ಅದು (ಚಾರಿತ್ರವು) ಆ ಕಾಲದಲ್ಲಿ ಮತ್ತು ಮುಂಬರುವ ಕಾಲದಲ್ಲಿ ರಮಣೀಯವಿದೆ ಮತ್ತು ಅಪುನರ್ಭವದ (ಮೋಕ್ಷದ) ಮಹಾಸೌಖ್ಯದ ಒಂದು ಬೀಜವಿದೆ.

ಇಂಥ ಈ ತ್ರಿಲಕ್ಷಣ (ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಾತ್ಮಕ) ಮೋಕ್ಷಮಾರ್ಗದ ವ್ಯಾಖ್ಯಾನವನ್ನು ಮುಂದೆ ನಿಶ್ಚಯ ಮತ್ತು ವ್ಯವಹಾರದಿಂದ ಮಾಡಲಾಗುವುದು. ಇಲ್ಲಿಯಂತೂ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನದ ವಿಷಯಭೂತ ನವಪದಾರ್ಥಗಳ ಉಪೋದ್ಘಾತದ[೪] ಹೇತುರೂಪದಿಂದ ಅದರ ಸೂಚನೆ ಕೊಡಲಾಗಿದೆ.

ಜೀವ ಅಜೀವವೆಂದೆರೆಡು ಭಾವ ಅವೆರಡರ ಪುಣ್ಯ, ಪಾಪ ಮೇಣಾಸ್ರವ ।
ಸಂವರ, ನಿರ್ಜರೆ, ಬಂಧ ಮತ್ತದರಂತೆ ಮೋಕ್ಷವಿವೆಲ್ಲ ಪದಾರ್ಥಗಳಿವೆ ॥೧೦೮॥

---

೧. ವಿನಿಶ್ಚಯ = ನಿಶ್ಚಯ ; ದೃಢವಾದ ನಿಶ್ಚಯ.

೨. ಯಾವ ಪ್ರಕಾರ ನೌಕೆಯಲ್ಲಿ ಕುಳಿತಂಥ ಯಾವುದೇ ಮನುಷ್ಯನಿಗೆ ನೌಕೆಯ ಗತಿಯ ಸಂಸ್ಕಾರ ವಶದಿಂದ ಪದಾರ್ಥಗಳು ವಿಪರೀತ ಸ್ವರೂಪದಿಂದ ತಿಳಿವಳಿಕೆಯಲ್ಲಿ ಬರುತ್ತವೆ (ಎಂದರೆ ತಾನು ಗತಿಮಾನವಿದ್ದರೂ ಸ್ಥಿರವಿದ್ದೇನೆಂದು ತಿಳಿವಳಿಕೆಯಲ್ಲಿ ಬರುತ್ತದೆ ಮತ್ತು ವೃಕ್ಷ, ಪರ್ವತ ಮೊದಲಾದವು ಸ್ಥಿರವಿದ್ದರೂ ಗತಿಮಾನವಾಗಿ ತಿಳಿವಳಿಕೆಯಲ್ಲಿ ಬರುತ್ತವೆ) ಅದೇ ಪ್ರಕಾರ ಜೀವನಿಗೆ ಮಿಥ್ಯಾದರ್ಶನದ ಉದಯವಶದಿಂದ ನವಪದಾರ್ಥಗಳು ವಿಪರೀತ ಸ್ವರೂಪದಿಂದ ತಿಳಿವಳಿಕೆಯಲ್ಲಿ ಬರುತ್ತವೆ.

೩. ರೂಢ = ಗಟ್ಟಿ ; ಪರಿಚಯದಿಂದ ದೃಢವಾದ (ಸಮ್ಯಗ್ಜ್ಞಾನದ ಕಾರಣವಾಗಿ ಯಾವ ಸ್ವತತ್ತ್ವಗತ ಮಾರ್ಗವು ವಿಶೇಷ ರೂಢವಾಗಿದೆ ಅವರಿಗೆ ಇಂದ್ರಿಯ ಮನಸ್ಸಿನ ವಿಷಯಗಳ ಕುರಿತು ರಾಗದ್ವೇಷದ ಅಭಾವದ ಕಾರಣ ವರ್ತಿಸುತ್ತಿರುವ ನಿರ್ವಿಕಾರ ಜ್ಞಾನಸ್ವಭಾವಿಯಾದ ಸಮಭಾವವು ಅದು ಚಾರಿತ್ರವಿದೆ.)

೪. ಉಪೋದ್ಘಾತ = ಪ್ರಸ್ತಾವನೆ. [ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವು ಮೋಕ್ಷಮಾರ್ಗವಿದೆ. ಮೋಕ್ಷಮಾರ್ಗದ ಪ್ರಥಮ ಎರಡು ಅಂಗಗಳಾದ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನಗಳ ವಿಷಯವು ನವಪದಾರ್ಥಗಳಿವೆ ; ಆದ್ದರಿಂದ ಈಗ ಮುಂದಿನ ಗಾಥೆಗಳಲ್ಲಿ ನವ ಪದಾರ್ಥಗಳ ವ್ಯಾಖ್ಯಾನ ಮಾಡಲಾಗುತ್ತದೆ. ಮೋಕ್ಷಮಾರ್ಗದ ವಿಸ್ತಾರವಾದ ವ್ಯಾಖ್ಯಾನವನ್ನು ಮುಂದೆ ಮಾಡಲಾಗುವುದು. ಇಲ್ಲಿಯಂತೂ ನವಪದಾರ್ಥಗಳ ವ್ಯಾಖ್ಯಾನದ ಪ್ರಸ್ತಾವನೆಯ ಹೇತುರೂಪದಿಂದ ಕೇವಲ ಅದರ ಸೂಚನೆ ಕೊಡಲಾಗಿದೆ.]

ಜೀವಾಜೀವೌ ಭಾವೌ ಪುಣ್ಯಂ ಪಾಪಂ ಚಾಸ್ರವಸ್ತಯೋಃ ।
ಸಂವರನಿರ್ಜರಬಂಧಾ ಮೋಕ್ಷಶ್ಚ ಭವಂತಿ ತೇ ಅರ್ಥಾಃ ॥೧೦೮॥

ಪದಾರ್ಥಾನಾಂ ನಾಮಸ್ವರೂಪಾಭಿಧಾನಮೇತತ್ ।

ಜೀವಃ, ಅಜೀವಃ, ಪುಣ್ಯಂ ಪಾಪಂ, ಆಸ್ರವಃ, ಸಂವರಃ, ನಿರ್ಜರಾ, ಬಂಧಃ, ಮೋಕ್ಷ ಇತಿ ನವಪದಾರ್ಥಾನಾಂ ನಾಮಾನಿ । ತತ್ರ ಚೈತನ್ಯಲಕ್ಷಣೋ ಜೀವಾಸ್ತಿಕ ಏವೇಹ ಜೀವಃ । ಚೈತನ್ಯಾಭಾವಲಕ್ಷಣೋऽಜೀವಃ । ಸ ಪಂಚಧಾ ಪೂರ್ವೋಕ್ತ ಏವ-ಪುದ್ಗಲಾಸ್ತಿಕಃ, ಧರ್ಮಾಸ್ತಿಕಃ, ಅಧರ್ಮಾಸ್ತಿಕಃ, ಆಕಾಶಾಸ್ತಿಕಃ, ಕಾಲದ್ರವ್ಯಂ ಚೇತಿ । ಇಮೌ ಹಿ ಜೀವಾಜೀವೌ ಪೃಥಗ್ಭೂತಾಸ್ತಿತ್ವನಿರ್ವೃತ್ತತ್ವೇನ ಭಿನ್ನಸ್ವಭಾವಭೂತೌ ಮೂಲಪದಾರ್ಥೌ । ಜೀವಪುದ್ಗಲಸಂಯೋಗಪರಿಣಾಮನಿರ್ವೃತ್ತಾಃ ಸಪ್ತಾನ್ಯೇ ಪದಾರ್ಥಾಃ । ಶುಭಪರಿಣಾಮೋ ಜೀವಸ್ಯ , ತನ್ನಿಮಿತ್ತಃ ಕರ್ಮಪರಿಣಾಮಃ ಪುದ್ಗಲಾನಾಂ ಚ ಪುಣ್ಯಮ್ । ಅಶುಭಪರಿಣಾಮೋ ಜೀವಸ್ಯ , ತನ್ನಿಮಿತ್ತಃ ಕರ್ಮಪರಿಣಾಮಃ

ಗಾಥೆ - ೧೦೮

ಗಾಥಾರ್ಥ ಃ- [ಜೀವಾಜೀವಾ ಭಾವಾ] ಜೀವ ಮತ್ತು ಅಜೀವವೆಂಬೆರಡು ಭಾವಗಳು (ಎಂದರೆ ಮೂಲ ಪದಾರ್ಥಗಳು) ಹಾಗೂ [ತೇಸಿಂ] ಅವೆರಡರ [ಪುಣ್ಣಂ] ಪುಣ್ಯ [ಪಾವಂ ಚ] ಪಾಪ, [ಆಸವಂ] ಆಸ್ರವ [ಸಂವರಣಂ ಣಿಜ್ಜರಣಂ ಬಂಧೋ] ಸಂವರ, ನಿರ್ಜರೆ, ಬಂಧ [ಯ] ಮತ್ತು [ಮೋಕ್ಖೋ] ಮೋಕ್ಷ [ತೇ ಅಟ್ಠಾ] ಅವು (ಒಂಭತ್ತು) ಪದಾರ್ಥಗಳಿವೆ.

ಟೀಕೆ ಃ- ಇದು ಪದಾರ್ಥಗಳ ಹೆಸರು ಮತ್ತು ಸ್ವರೂಪದ ಕಥನವಿದೆ.

ಜೀವ-ಅಜೀವ, ಪುಣ್ಯ , ಪಾಪ, ಆಸ್ರವ, ಸಂವರ, ನಿರ್ಜರೆ, ಬಂಧ ಮತ್ತು ಮೋಕ್ಷವೆಂದು ಇವು ಒಂಭತ್ತು ಪದಾರ್ಥಗಳ ಹೆಸರುಗಳಿವೆ.

ಅವುಗಳಲ್ಲಿ ಚೈತನ್ಯವು ಯಾವುದರ ಲಕ್ಷಣವಿದೆ ಅಂಥ ಜೀವಾಸ್ತಿಕವೇ (ಜೀವಾಸ್ತಿಕಾಯವೇ) ಇಲ್ಲಿ ಜೀವವಿದೆ. ಯಾವುದರ ಲಕ್ಷಣವು ಚೈತನ್ಯದ ಅಭಾವವಿದೆ ಅದು ಅಜೀವವಿದೆ ಅದು (ಅಜೀವವು) ಪುದ್ಗಲಾಸ್ತಿ, ಧರ್ಮಾಸ್ತಿ, ಅಧರ್ಮಾಸ್ತಿ, ಆಕಾಶಾಸ್ತಿ ಮತ್ತು ಕಾಲದ್ರವ್ಯ - ಹೀಗೆ ಐದು ಪ್ರಕಾರವಾಗಿದೆಯೆಂದು ಈ ಮೊದಲೇ ಹೇಳಲಾಗಿದೆ. ಈ ಜೀವ ಮತ್ತು ಅಜೀವಗಳು (ಎರಡೂ) ಪೃಥಕ್ ಅಸ್ತಿತ್ವದ ಮುಖಾಂತರ ನಿಷ್ಪನ್ನವಿರುವುದರಿಂದ ಭಿನ್ನಸ್ವಭಾವ ಹೊಂದಿರುವ ಅವೆರಡು ಮೂಲ ಪದಾರ್ಥಗಳಿವೆ.

ಜೀವ ಮತ್ತು ಪುದ್ಗಲದ ಸಂಯೋಗಪರಿಣಾಮದಿಂದ ಉತ್ಪನ್ನವಾಗುವಂಥ ಬೇರೆ ಏಳು ಪದಾರ್ಥಗಳಿವೆ. (ಅವುಗಳ ಸಂಕ್ಷಿಪ್ತ ಸ್ವರೂಪವು ಈ ಕೆಳಗಿನಂತಿದೆ-) ಜೀವದ ಶುಭಪರಿಣಾಮಗಳು (ಅದು ಪುಣ್ಯವಿದೆ) ಹಾಗೂ ಅವು (ಶುಭಪರಿಣಾಮಗಳು) ಯಾವವುಗಳ ನಿಮಿತ್ತವಾಗಿವೆ ಅಂಥ ಪುದ್ಗಲಗಳ ಕರ್ಮಪರಿಣಾಮಗಳು (ಶುಭ ಕರ್ಮರೂಪ ಪರಿಣಾಮಗಳು) ಅದು ಪುಣ್ಯವಿದೆ. ಜೀವದ ಅಶುಭ ಪರಿಣಾಮಗಳು (ಅದು ಪಾಪವಿದೆ) ಹಾಗೂ ಅವು (ಅಶುಭ ಪರಿಣಾಮಗಳು) ಯಾವವುಗಳ ನಿಮಿತ್ತವಾಗಿವೆ ಅಂಥ ಪುದ್ಗಲಗಳ ಕರ್ಮಪರಿಣಾಮಗಳು (ಅಶುಭ ಕರ್ಮರೂಪ ಪರಿಣಾಮಗಳು) ಅದು ಪಾಪವಿದೆ. ಜೀವದ ಮೋಹರಾಗದ್ವೇಷರೂಪ ಪರಿಣಾಮಗಳು (ಅದು ಆಸ್ರವವಿದೆ) ಹಾಗೂ ಅವು (ಮೋಹರಾಗದೇಷರೂಪರಿಣಾಮಗಳು) ಯಾವವುಗಳ ನಿಮಿತ್ತವಾಗಿವೆ

ಪುದ್ಗಲಾನಾಂ ಚ ಪಾಪಮ್ । ಮೋಹರಾಗದ್ವೇಷಪರಿಣಾಮೋ ಜೀವಸ್ಯ , ತನ್ನಿಮಿತ್ತಃ ಕರ್ಮಪರಿಣಾಮೋ ಯೋಗದ್ವಾರೇಣ ಪ್ರವಿಶತಾಂ ಪುದ್ಗಲಾನಾಂಚಾಸ್ರವಃ । ಮೋಹರಾಗದ್ವೇಷಪರಿಣಾಮನಿರೋಧೋ ಜೀವಸ್ಯ , ತನ್ನಿಮಿತ್ತಃ ಕರ್ಮಪರಿಣಾಮನಿರೋಧೋ ಯೋಗದ್ವಾರೇಣ ಪ್ರವಿಶತಾಂ ಪುದ್ಗಲಾನಾಂ ಚ ಸಂವರಃ । ಕರ್ಮವೀರ್ಯಶಾತನಸಮರ್ಥೋ ಬಹಿರಂಗಾಂತರಂಗತಪೋಭಿರ್ಬೃಂಹಿತಶುದ್ಧೋಪಯೋಗೋ ಜೀವಸ್ಯ , ತದನುಭಾವನೀರಸೀಭೂತಾನಾಮೇಕದೇಶಸಂಕ್ಷಯಃ ಸಮುಪಾತ್ತಕರ್ಮಪುದ್ಗಲಾನಾಂ ಚ ನಿರ್ಜರಾ । ಮೋಹರಾಗದ್ವೇಷಸ್ನಿಗ್ಧಪರಿಣಾಮೋ ಜೀವಸ್ಯ , ತನ್ನಿಮಿತ್ತೇನ ಕರ್ಮತ್ವಪರಿಣತಾನಾಂ ಜೀವೇನ ಸಹಾನ್ಯೋನ್ಯಸಂಮೂರ್ಚ್ಛನಂ ಪುದ್ಗಲಾನಾಂ ಚ ಬಂಧಃ । ಅತ್ಯಂತಶುದ್ಧಾತ್ಮೋಪಲಂಭೋ ಜೀವಸ್ಯ , ಜೀವೇನ ಸಹಾತ್ಯಂತವಿಶ್ಲೇಷಃ ಕರ್ಮಪುದ್ಗಲಾನಾಂ ಚ ಮೋಕ್ಷ ಇತಿ ।

ಅಥ ಜೀವಪದಾರ್ಥಾನಾಂ ವ್ಯಾಖ್ಯಾನಂ ಪ್ರಪಂಚಯತಿ ।

ಜೀವಾ ಸಂಸಾರತ್ಥಾ ಣಿವ್ವಾದಾ ಚೇದಣಪ್ಪಗಾ ದುವಿಹಾ ।
ಉವಓಗಲಕ್ಖಣಾ ವಿ ಯ ದೇಹಾದೇಹಪ್ಪವೀಚಾರಾ ॥೧೦೯॥

ಅಂಥ ಆ ಯೋಗದಿಂದ ಪ್ರವಿಷ್ಟವಾಗುವಂಥ ಪುದ್ಗಲಗಳ ಕರ್ಮಪರಿಣಾಮವು ಅದು ಆಸ್ರವವಿದೆ. ಜೀವದ ಮೋಹ ರಾಗದ್ವೇಷರೂಪ ಪರಿಣಾಮಗಳ ನಿರೋಧವು (ಅದು ಸಂವರವಿದೆ) ಹಾಗೂಅದು (ಮೋಹರಾಗದ್ವೇಷ ರೂಪಪರಿಣಾಮಗಳ ನಿರೋಧವು) ಯಾವುದರ ನಿಮಿತ್ತವಿದೆ ಅಂಥ ಆ ಯೋಗದಿಂದ ಪ್ರವಿಷ್ಟವಾಗುವಂಥ ಪುದ್ಗಲಗಳ ಕರ್ಮಪರಿಣಾಮದ ನಿರೋಧವು ಅದು ಸಂವರವಿದೆ. ಕರ್ಮವೀರ್ಯದ (ಕರ್ಮ ಶಕ್ತಿಯ) ಶಾತನ [೧] ಮಾಡುವಲ್ಲಿ ಸಮರ್ಥವಾದಂಥ ಯಾವ ಬಹಿರಂಗ ಮತ್ತು ಅಂತರಂಗ (ಹನ್ನೆರಡು ಪ್ರಕಾರದ) ತಪಸ್ಸುಗಳ ಮುಖಾಂತರ ವೃದ್ಧಿಗೆ ಪ್ರಾಪ್ತವಾದ ಜೀವದ ಶುದ್ಧೋಪಯೋಗವು (ಅದು ನಿರ್ಜರೆಯಿದೆ) ಹಾಗೂ ಅದರ ಪ್ರಭಾವದಿಂದ (ವೃದ್ಧಿಗೆ ಪ್ರಾಪ್ತವಾದ ಶುದ್ಧೋಪಯೋಗದ ನಿಮಿತ್ತದಿಂದ) ನೀರಸವಾದಂಥ ಉಪಾರ್ಜಿತ ಕರ್ಮಪುದ್ಗಲಗಳ ಏಕದೇಶ ಸಂಕ್ಷಯವು [೨] ಅದು ನಿರ್ಜರೆಯಿದೆ. ಜೀವದ ಮೋಹರಾಗ ದ್ವೇಷಗಳಿಂದ ಸ್ನಿಗ್ಧಪರಿಣಾಮಗಳು (ಅದು ಬಂಧವಿದೆ) ಹಾಗೂ ಅವುಗಳ (ಸ್ನಿಗ್ಧ ಪರಿಣಾಮಗಳ) ನಿಮಿತ್ತದಿಂದ ಕರ್ಮರೂಪವಾಗಿ ಪರಿಣಮಿಸಿದ ಪುದ್ಗಲಗಳ ಜೀವದೊಡನಿರುವ ಅನ್ಯೋನ್ಯ ಅವಗಾಹನವು (ವಿಶಿಷ್ಟ ಶಕ್ತಿಸಹಿತ ಏಕಕ್ಷೇತ್ರಾವಗಾಹ ಸಂಬಂಧವು) ಅದು ಬಂಧವಿದೆ. ಜೀವದ ತೀರಶುದ್ಧ ಆತ್ಮೋಪಲಬ್ಧಿಯು (ಅದು ಮೋಕ್ಷವಿದೆ) ಹಾಗೂ ಜೀವದಿಂದ ಕರ್ಮಪುದ್ಗಲಗಳ ಅತ್ಯಂತ ವಿಶ್ಲೇಷವು (ವಿಯೋಗವು) ಅದು ಮೋಕ್ಷವಿದೆ.

ಈಗ ಜೀವ ಪದಾರ್ಥದ ವ್ಯಾಖ್ಯಾನವನ್ನು ವಿಸ್ತಾರಪೂರ್ವಕ ಮಾಡಲಾಗುತ್ತದೆ.

ಜೀವ ಸಂಸಾರಿ ಸಿದ್ಧವೆಂದೆರಡು ತೆರ, ಅವೆರಡು, ಚೇತನಾತ್ಮಕವಂತೆ ।
ಅವೆರಡು ಉಪಯೋಗ ಲಕ್ಷಣವಿದ್ದು ಒಂದು ಸದೇಹವಿನ್ನೊಂದದೇಹವಿದೆ ॥೧೦೯॥

---

೧. ಶಾತನ ಮಾಡುವುದು = ತಿಳುವು ಮಾಡುವುದು ; ಹೀನ ಮಾಡುವುದು ; ಕ್ಷೀಣ ಮಾಡುವುದು ; ನಷ್ಟ ಮಾಡುವುದು.
೨. ಸಂಕ್ಷಯ = ಸಮ್ಯಕ್ ಪ್ರಕಾರದಿಂದ ಕ್ಷಯ.

ಜೀವಾಃ ಸಂಸಾರಸ್ಥಾ ನಿರ್ವೃತ್ತಾಃ ಚೇತನಾತ್ಮಕಾ ದ್ವಿವಿಧಾಃ ।
ಉಪಯೋಗಲಕ್ಷಣಾ ಅಪಿ ಚ ದೇಹಾದೇಹಪ್ರವೀಚಾರಾಃ ॥೧೦೯॥

ಜೀವಸ್ವರೂಪೋದ್ದೇಶೋಽಯಮ್ ।

ಜೀವಾಃ ಹಿ ದ್ವಿವಿಧಾಃ, ಸಂಸಾರಸ್ಥಾ ಅಶುದ್ಧಾ, ನಿರ್ವೃತ್ತಾಃ ಶುದ್ಧಾಶ್ಚ । ತೇ ಖಲೂಭಯೇಽಪಿ ಚೇತನಾಸ್ವಭಾವಾಃ, ಚೇತನಾಪರಿಣಾಮಲಕ್ಷಣೇನೋಪಯೋಗೇನ ಲಕ್ಷಣೀಯಾಃ । ತತ್ರ ಸಂಸಾರಸ್ಥಾದೇಹಪ್ರವೀಚರಾಃ, ನಿರ್ವೃತ್ತಾ ಅದೇಹಪ್ರವೀಚಾರಾ ಇತಿ ।

ಪುಢವೀ ಯ ಉದಗಮಗಣೇ ವಾಉ ವಣಪ್ಫದಿ ಜೀವಸಂಸಿದಾ ಕಾಯಾ ।
ದೇಂತಿ ಖಲು ಮೋಹಬಹುಲಂ ಫಾಸಂ ಬಹುಗಾ ವಿ ತೇ ತೇಸಿಂ ॥೧೧೦॥

ಗಾಥೆ - ೧೦೯

ಗಾಥಾರ್ಥ ಃ- [ಸಂಸಾರತ್ಥಾ ಣಿವ್ವಾದಾ] ಸಂಸಾರಿ ಮತ್ತು ಸಿದ್ಧವೆಂದು [ಜೀವಾ ದುವಿಹಾ] ಜೀವಗಳು ಎರಡು ಪ್ರಕಾರವಾಗಿವೆ. [ಚೇದಣಪ್ಪಾ] ಅವು ಚೇತನಾತ್ಮಕ (ಚೇತನಸ್ವಭಾವವುಳ್ಳ) [ವಿ ಯ] ಹಾಗೂ [ಉವಓಗಲಕ್ಖಣಾ] ಉಪಯೋಗಲಕ್ಷಣವುಳ್ಳವುಗಳಿವೆ. [ದೇಹಾದೇಹಪ್ಪವೀಚಾರಾ] ಸಂಸಾರೀ ಜೀವಗಳು ದೇಹದಲ್ಲಿ ವರ್ತಿಸುವಂಥ ಎಂದರೆ ದೇಹಸಹಿತವಿವೆ ಮತ್ತು ಸಿದ್ಧಜೀವಗಳು ದೇಹದಲ್ಲಿ ವರ್ತಿಸದಂಥ ಎಂದರೆ ದೇಹರಹಿತವಿವೆ.

ಟೀಕೆ ಃ- ಇದು ಜೀವ ಸ್ವರೂಪದ ವರ್ಣನೆಯಿದೆ.

೧) ಸಂಸಾರಿ ಎಂದರೆ ಅಶುದ್ಧ ಮತ್ತು ೨) ಸಿದ್ಧ ಎಂದರೆ ಶುದ್ಧವೆಂದು ಜೀವಗಳು ಎರಡು ಪ್ರಕಾರವಾಗಿವೆ. ಅವೆರಡೂ ವಾಸ್ತವದಲ್ಲಿ ಚೇತನಾಸ್ವಭಾವವುಳ್ಳವುಗಳಿವೆ ಮತ್ತು ಚೇತನಾ [೧] ಪರಿಣಾಮಸ್ವರೂಪ ಉಪಯೋಗದಿಂದ ಲಕ್ಷಿತವಾಗಲು ಯೋಗ್ಯ (ಗುರುತಿಸಲಾಗಲು ಯೋಗ್ಯ)ವಿವೆ. ಅವುಗಳಲ್ಲಿ ಸಂಸಾರೀ ಜೀವಗಳು ದೇಹದಲ್ಲಿ ವರ್ತಿಸುವಂಥ ಎಂದರೆ ದೇಹಸಹಿತವಿವೆ ಮತ್ತು ಸಿದ್ಧಜೀವಗಳು ದೇಹದಲ್ಲಿ ವರ್ತಿಸದಂಥ ಎಂದರೆ ದೇಹರಹಿತವಿವೆ.

ಗಾಥೆ - ೧೧೦

ಗಾಥಾರ್ಥ ಃ- [ಪುಢವೀ] ಪೃಥ್ವೀಕಾಯ, [ಉದಗಂ] ಅಪಕಾಯ, [ಅಗಣೀ] ಅಗ್ನಿಕಾಯ [ವಾಉ] ವಾಯುಕಾಯ, [ಯ] ಮತ್ತು [ವಣಪ್ಫದಿ] ವನಸ್ಪತಿಕಾಯ - [ಕಾಯಾ] ಈ ಕಾಯಗಳು [ಜೀವಸಂಸಿದಾ] ಜೀವಸಹಿತವಿವೆ. [ಬಹುಗಾ ವಿ ತೇ] (ಅವಾಂತರ ಜಾತಿಗಳ ಅಪೇಕ್ಷೆಯಿಂದ) ಅವುಗಳ ಸಂಖ್ಯೆ ಹೆಚ್ಚಿದ್ದರೂ

ಭೂಮಿ, ಜಲ, ಅಗ್ನಿ, ವಾಯು, ವನಸ್ಪತಿಕಾಯವಿವೆಲ್ಲ ಜೀವಸಹಿತವಿವೆ ।
ಅಮಿತಕಾಯಗಳಿವು ಅತಿಮೋಹಸಂಯುಕ್ತ ಸ್ಪರ್ಶಕೊಡುವವು ಜೀವಕೆ ॥

---

೧. ಚೇತನದ ಪರಿಣಾಮವು ಅದು ಉಪಯೋಗವಿದೆ. ಆ ಉಪಯೋಗವು ಜೀವರೂಪ ಲಕ್ಷ್ಯದ ಲಕ್ಷಣವಿದೆ.

ಪೃಥಿವೀ ಚೋದಕಮಗ್ನಿರ್ವಾಯುರ್ವನಸ್ಪತಿಃ ಜೀವಸಂಸ್ರಿತಾಃ ಕಾಯಾಃ ।
ದದತಿ ಖಲು ಮೋಹಬಹುಲಂ ಸ್ಪರ್ಶಂ ಬಹುಕಾ ಅಪಿ ತೇ ತೇಷಾಮ್ ॥೧೧೦॥

ಪೃಥಿವೀಕಾಯಿಕಾದಿಪಂಚಭೇದೋದ್ದೇಶೋऽಯಮ್ ।

ಪೃಥಿವೀಕಾಯಾಃ, ಆಪ್‌ಕಾಯಾಃ, ತೇಜಃಕಾಯಾಃ, ವಾಯುಕಾಯಾಃ, ವನಸ್ಪತಿಕಾಯಾಃ ಇತ್ಯೇತೇ ಪುದ್ಗಲಪರಿಣಾಮಾ ಬಂಧವಶಾಜ್ಜೀವಾನುಸಂಶ್ರಿತಾಃ, ಅವಾಂತರಜಾತಿಭೇದಾದ್ಬಹುಕಾ ಅಪಿ ಸ್ಪರ್ಶನೇಂದ್ರಿಯಾವರಣಕ್ಷಯೋಪಶಮಭಾಜಾಂ ಜೀವಾನಾಂ ಬಹಿರಂಗಸ್ಪರ್ಶನೇಂದ್ರಿಯನಿರ್ವೃತ್ತಿಭೂತಾಃ ಕರ್ಮಫಲಚೇತನಾ-ಪ್ರಧಾನತ್ವಾನ್ಮೋಹಬಹುಲಮೇವ ಸ್ಪರ್ಶೋಪಲಂಭಂ ಸಂಪಾದಯಂತೀತಿ ।

ಕೂಡ ಅವೆಲ್ಲವು [ತೇಸಿಂ] ಅವುಗಳಲ್ಲಿರುವಂಥ ಜೀವಗಳಿಗೆ [ಖಲು] ವಾಸ್ತವಿಕವಾಗಿ [ಮೋಹಬಹುಲಂ] ಅತ್ಯಂತ ಮೋಹದಿಂದ ಸಂಯುಕ್ತವಾಗಿ [ಫಾಸಂ ದೇಂತಿ] ಸ್ಪರ್ಶಕೊಡುತ್ತವೆ. (ಎಂದರೆ ಸ್ಪರ್ಶಜ್ಞಾನದಲ್ಲಿ ನಿಮಿತ್ತವಾಗುತ್ತವೆ.)

ಟೀಕೆ :- ಇದು (ಸಂಸಾರೀ ಜೀವಗಳ ಭೇದಗಳೊಳಗಿಂದ) ಪೃಥ್ವೀಕಾಯಿಕ ಮೊದಲಾದ ಐದು ಭೇದಗಳ ಕಥನವಿದೆ.

ಪೃಥ್ವೀಕಾಯ[೧], ಆಪ್‌ಕಾಯ, ಅಗ್ನಿಕಾಯ, ವಾಯುಕಾಯ ಮತ್ತು ವನಸ್ಪತಿಕಾಯದಂಥ ಈ ಪುದ್ಗಲ ಪರಿಣಾಮಗಳು ಬಂಧವಶದಿಂದ (ಬಂಧದ ಕಾರಣವಾಗಿ) ಜೀವಸಹಿತವಾಗಿವೆ. ಅವಾಂತರ ಜಾತಿ [೨] ರೂಪ ಭೇದ ಮಾಡಿದ ಮೇಲೆ ಅವು ಅನೇಕವಾದರೂ ಅವೆಲ್ಲವು (ಪುದ್ಗಲಪರಿಣಾಮಗಳು) ಸ್ಪರ್ಶನೇಂದ್ರಿಯಾವರಣದ ಕ್ಷಯೋಪಶಮವುಳ್ಳ ಜೀವಗಳಿಗೆ ಬಹಿರಂಗ ಸ್ಪರ್ಶನೇಂದ್ರಿಯದ ರಚನಾಭೂತವಾಗಿ ವರ್ತಿಸುತ್ತ, ಕರ್ಮಫಲ ಚೇತನದ ಪ್ರಾಧಾನ್ಯತ್ವದ ಕಾರಣ ಅತ್ಯಂತ ಮೋಹಸಹಿತವೇ ಸ್ಪರ್ಶೋಪಲಬ್ಧಿ[೩]ಯನ್ನು ಸಂಪ್ರಾಪ್ತ ಮಾಡಿಸುತ್ತವೆ.

---

೧. ಕಾಯ = ಶರೀರ, (ಪೃಥ್ವೀಕಾಯ ಮೊದಲಾದ ಕಾಯಗಳು ಪುದ್ಗಲಪರಿಣಾಮಗಳಿವೆ ; ಜೀವದೊಡನೆ ಅವುಗಳ ಬಂಧವಾಗುವ ಕಾರಣ ಅವು ಜೀವಸಹಿತವಿರುತ್ತವೆ.

೨. ಅವಾಂತರ ಜಾತಿ = ಅಂತರ್ಗತ - ಜಾತಿ. (ಪೃಥ್ವೀಕಾಯ, ಆಪ್‌ಕಾಯ, ಅಗ್ನಿಕಾಯ ಮತ್ತು ವಾಯುಕಾಯ - ಈ ನಾಲ್ಕರಲ್ಲಿ ಪ್ರತಿಯೊಂದಕ್ಕೆ ಅಂತರ್ಗತ - ಜಾತಿರೂಪ ಭೇದಗಳು ಏಳು ಲಕ್ಷ ಇವೆ ; ವನಸ್ಪತಿಕಾಯಕ್ಕೆ ಹತ್ತು ಲಕ್ಷ ಭೇದಗಳಿವೆ.)

೩. ಸ್ಪರ್ಶೋಪಲಬ್ಧಿ - ಸ್ಪರ್ಶದ ಉಪಲಬ್ಧಿ ; ಸ್ಪರ್ಶದ ಜ್ಞಾನ ; ಸ್ಪರ್ಶದ ಅನುಭವ. [ಪೃಥ್ವೀಕಾಯಿಕ ಮೊದಲಾದ ಜೀವಗಳಿಗೆ ಸ್ಪರ್ಶನೇಂದ್ರಿಯಾವರಣದ (ಭಾವ ಸ್ಪರ್ಶನೇಂದ್ರಿಯ ಆವರಣದ) ಕ್ಷಯೋಪಶಮವಿರುತ್ತದೆ ಮತ್ತು ಆಯಾ ಕಾಯಗಳು ಬಾಹ್ಯಸ್ಪರ್ಶನೇಂದ್ರಿಯದ ರಚನಾರೂಪವಿರುವುದರಿಂದ ಆಯಾ ಕಾಯಗಳು ಆಯಾ ಜೀವಗಳಿಗೆ ಸ್ಪರ್ಶದ ಉಪಲಬ್ಧಿಯಲ್ಲಿ ನಿಮಿತ್ತಭೂತವಿರುತ್ತವೆ. ಆ ಜೀವಗಳಿಗೆ ಆಗುವಂಥ ಆ ಸ್ಪರ್ಶೋಪಲಬ್ಧಿಯು ಪ್ರಬಲ ಮೋಹಸಹಿತವೇ ಇರುತ್ತದೆ, ಏಕೆಂದರೆ ಆ ಜೀವಗಳು ಕರ್ಮಫಲಚೇತನಾಪ್ರಧಾನವಿರುತ್ತವೆ.]

ತಿ ತ್ಥಾವರತಣುಜೋಗಾ ಅಣಿಲಾಣಲಕಾಇಯಾ ಯ ತೇಸು ತಸಾ ।
ಮಣಪರಿಣಾಮವಿರಹಿದಾ ಜೀವಾ ಏಇಂದಿಯಾ ಣೇಯಾ ॥೧೧೧॥

ತ್ರಯಃ ಸ್ಥಾವರತನುಯೋಗಾ ಅನಿಲಾನಲಕಾಯಿಕಾಶ್ಚ ತೇಷು ತ್ರಸಾಃ ।
ಮನಃಪರಿಣಾಮವಿರಹಿತಾ ಜೀವಾ ಏಕೇಂದ್ರಿಯಾ ಜ್ಞೇಯಾಃ ॥೧೧೧॥

ಏದೇ ಜೀವಣಿಕಾಯಾ ಪಂಚವಿಧಾ ಪುಢವಿಕಾಇಯಾದೀಯಾ ।
ಮಣಪರಿಣಾಮವಿರಹಿದಾ ಜೀವಾ ಏಗೇಂದಿಯಾ ಭಣಿಯಾ ॥೧೧೨॥

ಏತೇ ಜೀವನಿಕಾಯಾಃ ಪಂಚವಿಧಾಃಪೃಥಿವೀಕಾಯಿಕಾದ್ಯಾಃ ।
ಮನಃಪರಿಣಾಮವಿರಹಿತಾ ಜೀವಾ ಏಕೇಂದ್ರಿಯಾ ಭಣಿತಾಃ ॥೧೧೨॥

ಗಾಥೆ - ೧೧೧

ಗಾಥಾರ್ಥ :- [ತೇಸು] ಅವುಗಳಲ್ಲಿ [ತಿ] ಮೂರು (ಪೃಥ್ವೀಕಾಯಿಕ, ಅಪ್‌ಕಾಯಿಕ ಮತ್ತು ವನಸ್ಪತಿಕಾಯಿಕ) ಜೀವಗಳು [ತ್ಥಾವರತಣುಜೋಗಾ] ಸ್ಥಾವರಶರೀರದ ಸಂಯೋಗವುಳ್ಳವುಗಳಿವೆ [ಯ] ಮತ್ತು [ಅಣಿಲಾಣಲಕಾಇಯಾ] ವಾಯುಕಾಯಿಕ ಹಾಗೂ ಅಗ್ನಿಕಾಯಿಕ ಜೀವಗಳು [ತಸಾ] ತ್ರಸವಿವೆ[೧] ; [ಮಣಪರಿಣಾಮವಿರಹಿದಾ] ಅವೆಲ್ಲವು ಮನಪರಿಣಾಮವಿಲ್ಲದ [ಏಇಂದಿಯಾ ಜೀವಾ] ಏಕೇಂದ್ರಿಯ ಜೀವಗಳೆಂದು [ಣೇಯಾ] ತಿಳಿಯುವುದು.

ಗಾಥೆ -೧೧೨

ಗಾಥಾರ್ಥ :- [ಏದೇ] ಇವು [ಪುಢವಿಕಾಇಯಾದೀಯಾ] ಪೃಥ್ವೀಕಾಯಿಕ ಮೊದಲಾದ [ಪಂಚವಿಧಾ] ಐದು ಪ್ರಕಾರದ [ಜೀವಣಿಕಾಯಾ] ಜೀವನಿಕಾಯಗಳಿಗೆ [ಮಣಪರಿಣಾಮವಿರಹಿದಾ] ಮನಪರಿಣಾಮವಿಲ್ಲದ [ಏಗೇಂದಿಯಾ ಜೀವ] ಏಕೇಂದ್ರಿಯ ಜೀವಗಳೆಂದು [ಭಣಿಯಾ] ಸರ್ವಜ್ಞರು ಹೇಳಿದ್ದಾರೆ.

ಅವುಗಳಲಿ ಮೂರು ಜೀವ ಸ್ಥಾವರಕಾಯವಿದ್ದು ಅಗ್ನಿ-ವಾಯು ಜೀವ ತ್ರಸವಿವೆ ।
ಅವೆಲ್ಲವು ಮನಪರಿಣಾಮಗಳಿಲ್ಲದ ಏಕೇಂದ್ರಿಯ ಜೀವವೆಂದರಿವುದು ॥೧೧೧॥

ಇವೆಲ್ಲ ಪೃಥ್ವಿಕಾಯಿಕ ಮೊದಲಾದೈದು ಪ್ರಕಾರದ ಜೀವನಿಕಾಯಗಳಿಗೆ ।
ಆವಗಂ ಮನಪರಿಣಾಮಗಳಿಲ್ಲದ ಏಕೇಂದ್ರಿ ಜೀವಗಳೆಂದು ಪೇಳಿದೆ ॥೧೧೨॥

---

೧. ವಾಯುಕಾಯಿಕ ಹಾಗೂ ಅಗ್ನಿಕಾಯಿಕ ಜೀವಗಳಿಗೆ ಚಲನ ಕ್ರಿಯೆಯನ್ನು ನೋಡಿ ವ್ಯವಹಾರದಿಂದ ತ್ರಸವೆಂದು ಹೇಳಲಾಗುತ್ತದೆ. ನಿಶ್ಚಯದಿಂದಂತೂ ಅವೂ ಸ್ಥಾವರನಾಮಕರ್ಮಾಧೀನತೆಯ ಕಾರಣ-ವ್ಯವಹಾರದಿಂದ ಅವಕ್ಕೆ ಚಲನೆಯಿದ್ದರೂ -ಸ್ಥಾವರವೇ ಇವೆ.

ಪೃಥಿವೀಕಾಯಿಕಾದೀನಾಂ ಪಂಚಾನಾಮೇಕೇಂದ್ರಿಯತ್ವನಿಯಮೋಽಯಮ್ ।

ಪೃಥಿವೀಕಾಯಿಕಾದಯೋ ಹಿ ಜೀವಾಃ ಸ್ಪರ್ಶನೇಂದ್ರಿಯಾವರಣಕ್ಷಯೋಪಶಮಾತ್ ಶೇಷೇಂದ್ರಿ-ಯಾವರಣೋದಯೇ ನೋಇಂದ್ರಿಯಾವರಣೋದಯೇ ಚ ಸತ್ಯೇಕೇಂದ್ರಿಯಾ ಅಮನಸೋ ಭವಂತೀತಿ ।

ಅಂಡೇಸು ಪವಡ್ಢಂತಾ ಗಬ್ಭತ್ಥಾ ಮಾಣುಸಾ ಯ ಮುಚ್ಛಗಯಾ ।
ಜಾರಿಸಯಾ ತಾರಿಸಯಾ ಜೀವಾ ಏಗೇಂದಿಯಾ ಣೇಯಾ ॥೧೧೩॥

ಅಂಡೇಷು ಪ್ರವರ್ಧಮಾನಾ ಗರ್ಭಸ್ಥಾ ಮಾನುಷಾಶ್ಚ ಮೂರ್ಚ್ಛಾಂ ಗತಾಃ ।
ಯಾದೃಶಾಸ್ತಾದೃಶಾ ಜೀವಾ ಏಕೇಂದ್ರಿಯಾ ಜ್ಞೇಯಾಃ ॥೧೧೩॥

ಏಕೇಂದ್ರಿಯಾಣಾಂ ಚೈತನ್ಯಾಸ್ತಿತ್ವೇ ದೃಷ್ಟಾಂತೋಪನ್ಯಾಸೋಽಯಮ್ ।

ಅಂಡಾಂತರ್ಲೀನಾನಾಂ ಗರ್ಭಸ್ಥಾನಾಂ ಮೂರ್ಚ್ಛಿತಾನಾಂ ಚ ಬುದ್ಧಿಪೂರ್ವಕವ್ಯಾಪಾರಾದರ್ಶನೇಽಪಿ ಯೇನ ಪ್ರಕಾರೇಣ ಜೀವತ್ವಂ ನಿಶ್ಚೀಯತೇ, ತೇನ ಪ್ರಕಾರೇಣೈಕೇಂದ್ರಿಯಾಣಾಮಪಿ, ಉಭಯೇಷಾಮಪಿ ಬುದ್ಧಿಪೂರ್ವಕವ್ಯಾಪಾರಾದರ್ಶನಸ್ಯ ಸಮಾನತ್ವಾದಿತಿ ।

ಟೀಕೆ :- ಇದು ಪೃಥ್ವೀಕಾಯಿಕ ಮೊದಲಾದ ಐದು (ಐದು ವಿಧ) ಜೀವಗಳಿಗೆ ಏಕೇಂದ್ರಿಯತನದ ನಿಯಮವಿದೆ.

ಪೃಥ್ವೀಕಾಯಿಕ ಮೊದಲಾದ ಜೀವಗಳು ಸ್ಪರ್ಶನೇಂದ್ರಿಯದ (ಭಾವಸ್ಪರ್ಶನೇಂದ್ರಿಯದ) ಆವರಣದ ಕ್ಷಯೋಪಶಮದ ಕಾರಣ ಹಾಗೂ ಉಳಿದ ಇಂದ್ರಿಯಗಳ (ನಾಲ್ಕು ಭಾವೇಂದ್ರಿಯಗಳ) ಆವರಣದ ಉದಯ ಹಾಗೂ ಮನಸ್ಸಿನ (ಭಾವಮನಸ್ಸಿನ) ಆವರಣದ ಉದಯವಿರುವುದರಿಂದ ಮನರಹಿತ ಏಕೇಂದ್ರಿಯಗಳಿವೆ.

ಗಾಥೆ - ೧೧೩

ಗಾಥಾರ್ಥ :- [ಅಂಡೇಸು ಪವಡ್ಢಂತಾ] ಮೊಟ್ಟೆಯಲ್ಲಿ ಬೆಳೆಯುವಂಥ ಪ್ರಾಣಿ, [ಗಬ್ಭತ್ಥಾ] ಗರ್ಭದಲ್ಲಿರುವ ಪ್ರಾಣಿ [ಯ] ಮತ್ತು [ಮುಚ್ಛಗಯಾ ಮಾಣುಸಾ] ಮೂರ್ಛೆಹೋದ ಮನುಷ್ಯರು [ಜಾರಿಸಯಾ] ಹೇಗೆ (ಬುದ್ಧಿಪೂರ್ವಕ ವ್ಯಾಪಾರರಹಿತ) ಇರುತ್ತಾರೆ, [ತಾರಿಸಯಾ] ಹಾಗೆ [ಏಗೇಂದಿಯಾ ಜೀವಾ] ಏಕೇಂದ್ರಿಯ ಜೀವಗಳೆಂದು [ಣೇಯಾ] ತಿಳಿಯುವುದು.

ಟೀಕೆ :- ಇದು ಏಕೇಂದ್ರಿಯಗಳಿಗೆ ಚೈತನ್ಯದ ಅಸ್ತಿತ್ವವಿರುವ ಸಂಬಂಧದಲ್ಲಿ ದೃಷ್ಟಾಂತದ ಕಥನವಿದೆ.

ಹೇಗೆ ಮೊಟ್ಟೆಯಲಿ, ಗರ್ಭದಲ್ಲಿರುವ ಮೇಣ್ಮೂರ್ಛೆ ಹೋದ ಮನುಷ್ಯರಿರುವರು ।
ಹಾಗೆ ಇವೆಲ್ಲ ಐದು ವಿಧದೇಕೇಂದ್ರಿ ಜೀವಗಳಿವೆಯೆಂದು ತಿಳಿಯುವುದು ॥೧೧೩॥

ಸಂಬುಕ್ಕಮಾದುವಾಹಾ ಸಂಖಾ ಸಿಪ್ಪೀ ಅಪಾದಗಾ ಯ ಕಿಮಿ ।
ಜಾಣಂತಿ ರಸಂ ಫಾಸಂ ಜೇ ತೇ ಬೇಇಂದಿಯಾ ಜೀವಾ ॥೧೧೪॥

ಶಂಬೂಕಮಾತೃವಾಹಾಃ ಶಂಖಾಃ ಶುಕ್ತಯೋಽಪಾದಕಾಃ ಚ ಕೃಮಯಃ ।
ಜಾನಂತಿ ರಸಂ ಸ್ಪರ್ಶಂ ಯೇ ತೇ ದ್ವೀಂದ್ರಿಯಾಃ ಜೀವಾಃ ॥೧೧೪॥

ಏತೇ ಸ್ಪರ್ಶನರಸನೇಂದ್ರಿಯಾವರಣಕ್ಷಯೋಪಶಮಾತ್ ಶೇಷೇಂದ್ರಿಯಾವರಣೋದಯೇ ನೋ-

ಮೊಟ್ಟೆಯಲ್ಲಿರುವ, ಗರ್ಭದಲ್ಲಿರುವ ಮತ್ತು ಮೂರ್ಛೆಹೋದ ಪ್ರಾಣಿಗಳಿಗೆ ಬುದ್ಧಿಪೂರ್ವಕ ವ್ಯಾಪಾರವು ಕಂಡುಬಾರದಿದ್ದರೂ ಅವುಗಳಿಗೆ ಜೀವತ್ವವಿದೆಯೆಂಬುದರ ನಿಶ್ಚಯವನ್ನು ಹೇಗೆ ಮಾಡಲಾಗುತ್ತದೆ, ಅದೇ ಪ್ರಕಾರ ಏಕೇಂದ್ರಿಯಗಳ ಜೀವತ್ವದ್ದೂ ನಿಶ್ಚಯಮಾಡಲಾಗುತ್ತದೆ ; ಏಕೆಂದರೆ ಎರಡರಲ್ಲೂ ಬುದ್ಧಿಪೂರ್ವಕ ವ್ಯಾಪಾರದ ಅದರ್ಶನವು [೧] ಸಮಾನವಿದೆ.

ಭಾವಾರ್ಥ ಃ- ಯಾವ ಪ್ರಕಾರ ಗರ್ಭಸ್ಥ ಮೊದಲಾದ ಪ್ರಾಣಿಗಳಲ್ಲಿ ವ್ಯವಹಾರದ ಅಭಾವವಿದ್ದರೂ ಈಹಾಪೂರ್ವಕ ಜೀವತ್ವವು ಇದ್ದೇ ಇದೆ, ಅದೇ ಪ್ರಕಾರ ಏಕೇಂದ್ರಿಯಗಳಲ್ಲೂ ಈಹಾಪೂರ್ವಕ ವ್ಯವಹಾರದ ಅಭಾವವಿದ್ದರೂ ಜೀವತ್ವವು ಇದ್ದೇ ಇದೆಯೆಂದು ಆಗಮ, ಅನುಮಾನ ಇತ್ಯಾದಿಗಳಿಂದ ನಿಶ್ಚಿತಪಡಿಸಲಾಗುತ್ತದೆ.

ಜೀವವು ಪರಮಾರ್ಥದಿಂದ ಸ್ವಾಧೀನವೂ ಅನಂತಜ್ಞಾನ ಮತ್ತು ಸೌಖ್ಯಸಹಿತವಾಗಿದ್ದರೂ ಕೂಡ ಅಜ್ಞಾನದಿಂದ ಪರಾಧೀನವೂ, ಇಂದ್ರಿಯಸುಖದಲ್ಲಿ ಆಸಕ್ತವೂ ಆಗಿ ಯಾವ ಕರ್ಮಬಂಧ ಮಾಡಿಕೊಳ್ಳುತ್ತದೆ ಅದರ ನಿಮಿತ್ತದಿಂದ ತನ್ನನ್ನು ಏಕೇಂದ್ರಿಯ ಮತ್ತು ದುಃಖಿಯನ್ನಾಗಿ ಮಾಡುತ್ತದೆಯೆಂಬ ತಾತ್ಪರ್ಯವನ್ನು ಇಲ್ಲಿ ಗ್ರಹಣ ಮಾಡಬೇಕು.

ಗಾಥೆ - ೧೧೪

ಗಾಥಾರ್ಥ ಃ- [ಸಂಬುಕ್ಕಮಾದುವಾಹಾ] ಬಸವನಹುಳ, ಮಾತೃವಾಹ, [ಸಂಖಾ] ಶಂಕ, [ಸಿಪ್ಪೀ] ಸಿಂಪು [ಯ] ಮತ್ತು [ಅಪಾದಗಾ ಕಿಮೀ] ಕಾಲಿಲ್ಲದ ಹುಳಗಳು [ಜೇ] ಯಾವ [ರಸಂ ಫಾಸಂ] ರಸ ಮತ್ತು ಸ್ಪರ್ಶವನ್ನು [ಜಾಣಂತಿ] ತಿಳಿಯುತ್ತವೆ [ತೇ] ಅವು - [ಬೇಇಂದಿಯಾ ಜೀವಾ] ದ್ವೀಂದ್ರಿಯ ಜೀವಗಳಿವೆ.

ಟೀಕೆ ಃ- ಇದು ದ್ವೀಂದ್ರಿಯ ಜೀವಗಳ ಪ್ರಕಾರದ ಸೂಚನೆಯಿದೆ.

ಬಸವನಹುಳ, ಮಾತೃವಾಹ, ಶಂಕ, ಸಿಂಪು ಮೇಣ್ ಕಾಲಿಲ್ಲದ ಕ್ರಿಮಿಗಳಿವು ।
ರಸಮೇಣ್ ಸ್ಪರ್ಶವನು ತಿಳಿಯುವುದರಿಂದವು ದ್ವೀಂದ್ರಿಯ ಜೀವಗಳಿವೆ ॥೧೧೪॥

---

೧. ಅದರ್ಶನ- ದೃಷ್ಟಿಗೋಚರವಾಗದಿರುವುದು.

ಇಂದ್ರಿ ಯಾವರಣೋದಯೇ ಚ ಸತಿ ಸ್ಪರ್ಶರಸಯೋಃ ಪರಿಚ್ಛೇತ್ತಾರೋ ದ್ವೀಂದ್ರಿಯಾ ಅಮನಸೋ ಭವಂತೀತಿ ।

ಜೂಗಾಗುಂಭೀಮಕ್ಕಣಪಿಪೀಲಿಯಾ ವಿಚ್ಛುಯಾದಿಯಾ ಕೀಡಾ ।
ಜಾಣಂತಿ ರಸಂ ಫಾಸಂ ಗಂಧಂ ತೇಇಂದಿಯಾ ಜೀವಾ ॥೧೧೫॥

ಯೂಕಾಕುಂಭೀಮತ್ಕುಣಪಿಪೀಲಿಕಾ ವೃಶ್ಚಿಕಾದಯಃ ಕೀಟಾಃ ।
ಜಾನಂತಿ ರಸಂ ಸ್ಪರ್ಶಂ ಗಂಧಂ ತ್ರೀಂದ್ರಿಯಾಃ ಜೀವಾಃ ॥೧೧೫॥

ತ್ರೀಂದ್ರಿಯಪ್ರಕಾರಸೂಚನೇಯಮ್ ।

ಏತೇ ಸ್ಪರ್ಶನರಸನಘ್ರಾಣೇಂದ್ರಿಯಾವರಣಕ್ಷಯೋಪಶಮಾತ್ ಶೇಷೇಂದ್ರಿಯಾವರಣೋದಯೇ ನೋಇಂದ್ರಿಯಾವರಣೋದಯೇ ಚ ಸತಿ ಸ್ಪರ್ಶರಸಗಂಧಾನಾಂ ಪರಿಚ್ಛೇತ್ತಾರಸ್ತ್ರೀಂದ್ರಿಯಾ ಅಮನಸೋ ಭವಂತೀತಿ।

ಸ್ಪರ್ಶನೇಂದ್ರಿಯ ಮತ್ತು ರಸನೇಂದ್ರಿಯದ (ಇವೆರಡು ಭಾವೇಂದ್ರಿಯಗಳ) ಆವರಣದ ಕ್ಷಯೋಪಶಮದ ಕಾರಣ ಹಾಗೂ ಉಳಿದ ಇಂದ್ರಿಯಗಳ (ಮೂರು ಭಾವೇಂದ್ರಿಯಗಳ) ಆವರಣದ ಉದಯ ಮತ್ತು ಮನಸ್ಸಿನ (ಭಾವಮನದ) ಆವರಣದ ಉದಯವಿರುವುದರಿಂದ ಸ್ಪರ್ಶ ಮತ್ತು ರಸವನ್ನು ತಿಳಿಯುವಂಥ ಈ (ಬಸವನಹುಳ ಮೊದಲಾದ) ಜೀವಗಳು ಮನಸ್ಸಿಲ್ಲದ ದ್ವೀಂದ್ರಿಯ ಜೀವಗಳಿವೆ.

ಗಾಥೆ - ೧೧೫

ಗಾಥಾರ್ಥ :- [ಜೂಗಾಗುಂಭೀಮಕ್ಕಣಪಿಪೀಲಿಯಾ] ಹೇನು, ಕೆಂಪು ಇರುವೆ, ತಗಣೆ, ಇರುವೆ ಮತ್ತು [ವಿಚ್ಛುಯಾದಿಯಾ] ಚೇಳು ಮೊದಲಾದ [ಕೀಡಾ] ಪ್ರಾಣಿಗಳು [ರಸಂ ಫಾಸಂ ಗಂಧಂ] ರಸ, ಸ್ಪರ್ಶ ಮತ್ತು ಗಂಧವನ್ನು [ಜಾಣಂತಿ] ತಿಳಿಯುತ್ತವೆ; [ತೇಇಂದಿಯಾ ಜೀವಾ] ಅವು ತ್ರೀಂದ್ರಿಯ ಜೀವಗಳಿವೆ.

ಟೀಕೆ :- ಇದು ತ್ರೀಂದ್ರಿಯ ಜೀವಗಳ ಪ್ರಕಾರದ ಸೂಚನೆಯಿದೆ.

ಸ್ಪರ್ಶನೇಂದ್ರಿಯ, ರಸನೇಂದ್ರಿಯ ಮತ್ತು ಘ್ರಾಣೇಂದ್ರಿಯ ಆವರಣದ ಕ್ಷಯೋಪಶಮದ ಕಾರಣ ಹಾಗೂ ಉಳಿದ ಇಂದ್ರಿಯಗಳ ಆವರಣದ ಉದಯ ಮತ್ತು ಮನಸ್ಸಿನ ಆವರಣದ ಉದಯವಿರುವುದರಿಂದ ಸ್ಪರ್ಶ, ರಸ ಮತ್ತು ಗಂಧವನ್ನು ತಿಳಿಯುವಂಥ ಈ (ಹೇನು ಮೊದಲಾದ) ಜೀವಗಳು ಮನಸ್ಸಿಲ್ಲದ ತ್ರೀಂದ್ರಿಯ ಜೀವಗಳಿವೆ.

ಹೇನು, ಕೆಂಪು ಇರುವೆ, ತಗಣೆ, ಇರುವೆ ಮೇಣ್ ಚೇಳು ಮೊದಲಾದ ಪ್ರಾಣಿಗಳು ।
ತಾನೆ ರಸ, ಗಂಧ ಮೇಣ್ ಸ್ಪರ್ಶವನು ತಿಳಿಯುವುದರಿಂದವು ತ್ರೀಂದ್ರಿಯವಿವೆ ॥೧೧೫॥

ಉದ್ದಂಸಮಸಯಮಕ್ಖಿಯಮಧುಕರಿಭಮರಾ ಪಯಂಗಮಾದೀಯಾ ।
ರೂವಂ ರಸಂ ಚ ಗಂಧಂ ಫಾಸಂ ಪುಣ ತೇ ವಿಜಾಣಂತಿ ॥೧೧೬॥

ಉದ್ದಂಶಮಶಕಮಕ್ಷಿಕಾಮಧುಕರೀಭಾರಮರಾಃ ಪತಂಗಾದ್ಯಾಃ ।
ರೂಪಂ ರಸಂ ಚ ಗಂಧಂ ಸ್ಪರ್ಶಂ ಪುನಸ್ತೇ ವಿಜಾನಂತಿ ॥೧೧೬॥

ಚತುರಿಂದ್ರಿಯಪ್ರಕಾರಸೂಚನೇಯಮ್ ।

ಏತೇ ಸ್ಪರ್ಶನರಸನಘ್ರಾಣಚಕ್ಷುರಿಂದ್ರಿಯಾವರಣಕ್ಷಯೋಪಶಮಾತ್ ಶ್ರೋತ್ರೇಂದ್ರಿಯಾವರಣೋದಯೇ ನೋಇಂದ್ರಿಯಾವರಣೋದಯೇ ಚ ಸತಿ ಸ್ಪರ್ಶರಸಗಂಧವರ್ಣಾನಾಂ ಪರಿಚ್ಛೇತ್ತಾರಶ್ಚತುರಿಂದ್ರಿಯಾ ಅಮನಸೋ ಭವಂತೀತಿ ।

ಸುರಣರಣಾರಯತಿರಿಯಾ ವಣ್ಣರಸಪ್ಫಾಸಗಂಧಸದ್ದಣ್ಹೂ ।
ಜಲಚರಥಲಚರಖಚರಾ ಬಲಿಯಾ ಪಂಚೇಂದ್ರಿಯಾ ಜೀವಾ ॥೧೧೭॥

ಗಾಥೆ - ೧೧೬

ಗಾಥಾರ್ಥ ಃ- [ಪುಣ] ಪುನಃ [ಉದ್ದಂಸಮಸಯಮಕ್ಖಿಯಮಧುಕರಿಭಮರಾ] ದೋಮೆ, ಸೊಳ್ಳೆ, ನೊಣ, ಜೇನುನೊಣ, ದುಂಬಿ ಮತ್ತು [ಪಯಂಗಮಾದೀಯಾ ತೇ] ದೀಪದ ಹುಳ ಮೊದಲಾದ ಜೀವಗಳು [ರೂವಂ] ರೂಪ, [ರಸಂ] ರಸ, [ಗಂಧಂ] ಗಂಧ (ಚ) ಮತ್ತು [ಫಾಸಂ] ಸ್ಪರ್ಶವನ್ನು [ವಿಜಾಣಂತಿ] ತಿಳಿಯುತ್ತವೆ. (ಅವು ಚತುರಿಂದ್ರಿಯ ಜೀವಗಳಿವೆ.)

ಟೀಕೆ ಃ- ಇದು ಚತುರಿಂದ್ರಿಯ ಜೀವಗಳ ಪ್ರಕಾರದ ಸೂಚನೆಯಿದೆ.

ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ ಮತ್ತು ಚಕ್ಷುರಿಂದ್ರಿಯದ ಆವರಣದ ಕ್ಷಯೋಪಶಮದ ಕಾರಣ ಹಾಗೂ ಶ್ರೋತ್ರೇಂದ್ರಿಯ ಆವರಣದ ಉದಯ ಮತ್ತು ಮನಸ್ಸಿನ ಆವರಣದ ಉದಯವಿರುವುದರಿಂದ ಸ್ಪರ್ಶ, ರಸ, ಗಂಧ ಮತ್ತು ವರ್ಣವನ್ನು ತಿಳಿಯುವಂಥ ಈ (ದೋಮೆ ಮೊದಲಾದ) ಜೀವಗಳು ಮನಸ್ಸಿಲ್ಲದ ಚತುರಿಂದ್ರಿಯ ಜೀವಗಳಿವೆ.

ಯಾವ ದೋಮೆಸೊಳ್ಳೆ ನೊಣ ಜೇನುನೊಣದುಂಬಿಮೇಣ್ದೀಪದಹುಳ ಇತ್ಯಾದಿ ।
ಜೀವಗಳಿವು ರೂಪ, ರಸ, ಗಂಧವದರಂತೆ ಸ್ಪರ್ಶವನು ತಿಳಿಯುವವು ॥೧೧೬॥

ಆ ವರ್ಣ, ರಸ, ಸ್ಪರ್ಶ, ಗಂಧಮೇಣ್‌ಶಬ್ದ ತಿಳಿವ ಸುರ-ನರ-ನಾರಕ-ತಿರ್ಯಂಚ ।
ಅವು-ಜಲಚರ, ಭೂಚರ, ಖೇಚರವಿವೆ - ಬಲಿಷ್ಠ ಪಂಚೇಂದ್ರಿ ಜೀವಗಳಿವೆ ॥೧೧೭॥

ಸುರನರನಾರಕತಿರ್ಯಂಚೋ ವರ್ಣರಸಸ್ಪರ್ಶಗಂಧಶಬ್ದ ಜ್ಞಾಃ ।
ಜಲಚರಸ್ಥಲಚರಖಚರಾ ಬಲಿನಃ ಪಂಚೇಂದ್ರಿಯಾ ಜೀವಾಃ ॥೧೧೭॥

ಪಂಚೇಂದ್ರಿಯಪ್ರಕಾರಸೂಚನೇಯಮ್ ।

ಅಥ ಸ್ಪರ್ಶನರಸನಘ್ರಾಣಚಕ್ಷುಃ ಶ್ರೋತ್ರೇಂದ್ರಿಯಾವರಣಕ್ಷಯೋಪಶಮಾತ್ ನೋಇಂದ್ರಿಯಾವರಣೋದಯೇ ಸತಿ ಸ್ಪರ್ಶರಸಗಂಧವರ್ಣಶಬ್ದಾನಾಂ ಪರಿಚ್ಛೇತ್ತಾರಃ ಪಂಚೇಂದ್ರಿಯಾ ಅಮನಸ್ಕಾಃ । ಕೇಚಿತ್ತು ನೋಇಂದ್ರಿಯಾವರಣಸ್ಯಾಪಿ ಕ್ಷಯೋಪಶಮಾತ್ ಸಮನಸ್ಕಾಶ್ಚ ಭವಂತಿ । ತತ್ರ ದೇವಮನುಷ್ಯನಾರಕಾಃ ಏವ, ತಿರ್ಯಂಚ ಉಭಯಜಾತೀಯಾ ಇತಿ ।

ದೇವಾ ಚಉಣ್ಣಿಕಾಯಾ ಮಣುಯಾ ಪುಣ ಕಮ್ಮಭೋಗಭೂಮೀಯಾ ।
ತಿರಿಯಾ ಬಹುಪ್ಪಯಾರಾ ಣೇರಇಯಾ ಪುಢವಿಭೇಯಗದಾ ॥೧೧೮॥

ದೇವಾಶ್ಚತುರ್ನಿಕಾಯಾಃ ಮನುಜಾಃ ಪುನಃ ಕರ್ಮಭೋಗಭೂಮಿಜಾಃ ।
ತಿರ್ಯಂಚಃ ಬಹುಪ್ರಕಾರಾಃ ನಾರಕಾಃ ಪೃಥಿವೀಭೇದಗತಾಃ ॥೧೧೮॥

ಗಾಥೆ - ೧೧೭

ಗಾಥಾರ್ಥ :- [ವಣ್ಣರಸಪ್ಫಾಸಗಂಧಸದ್ದಣ್ಹೂ] ವರ್ಣ, ರಸ, ಸ್ಪರ್ಶ, ಗಂಧ ಮತ್ತು ಶಬ್ದವನ್ನು ತಿಳಿಯುವಂಥ [ಸುರಣರಣಾರಯತಿರಿಯಾ] ದೇವ-ಮನುಷ್ಯ-ನಾರಕ-ತಿರ್ಯಂಚಗಳು- [ಜಲಚರಥಲಚರ-ಖಚರಾ] ಯಾವ ಜಲಚರ, ಸ್ಥಲಚರ, ಖೇಚರವಾಗುತ್ತವೆ ಅವು [ಬಲಿಯಾ ಪಂಚೇಂದಿಯಾ ಜೀವಾ] ಬಲಿಷ್ಠ ಪಂಚೇಂದ್ರಿಯ ಜೀವಗಳಿವೆ.

ಟೀಕೆ :- ಇದು ಪಂಚೇಂದ್ರಿಯ ಜೀವಗಳ ಪ್ರಕಾರದ ಸೂಚನೆಯಿದೆ.

ಸ್ಪರ್ಶನೇಂದ್ರಿಯ, ರಸನೇಂದ್ರಿಯ, ಘ್ರಾಣೇಂದ್ರಿಯ ಚಕ್ಷುರಿಂದ್ರಿಯ ಮತ್ತು ಶ್ರೋತ್ರೇಂದ್ರಿಯದ ಆವರಣದ ಕ್ಷಯೋಪಶಮದ ಕಾರಣ ಮನಸ್ಸಿನ ಆವರಣದ ಉದಯವಿರುವುದರಿಂದ ಸ್ಪರ್ಶ, ರಸ, ಗಂಧ, ವರ್ಣ ಮತ್ತು ಶಬ್ದವನ್ನು ತಿಳಿಯುವಂಥ ಜೀವಗಳು ಮನವಿಲ್ಲದ ಪಂಚೇಂದ್ರಿಯ ಜೀವಗಳಿವೆ ; ಕೆಲ (ಪಂಚೇಂದ್ರಿಯ ಜೀವ)ವಂತೂ ಅವಕ್ಕೆ ಮನಸ್ಸಿನ ಆವರಣದ್ದೂ ಕ್ಷಯೋಪಶಮವಾಗಿರುವುದರಿಂದ ಮನಸ್ಸುಸಹಿತ (ಪಂಚೇಂದ್ರಿಯ ಜೀವಗಳು) ಇರುತ್ತವೆ.

ಅವುಗಳಲ್ಲಿ ದೇವ, ಮನುಷ್ಯ ಮತ್ತು ನಾರಕಿಗಳು ಮನಸ್ಸು ಸಹಿತವೇ ಇರುತ್ತವೆ ; ತಿರ್ಯಂಚಗಳು ಎರಡೂ ಜಾತಿಯ (ಎಂದರೆ ಮನರಹಿತ ಹಾಗೂ ಮನಸಹಿತ) ಇರುತ್ತವೆ.

ಸುರ ನಾಲ್ಕು ಪ್ರಕಾರ ನರ ಕರ್ಮಭೂಮಿಜ ಭೋಗಭೂಮಿಜವೆಂದಿರ್ತೆರವಿವೆ ।
ತಿರಿಯಂಚ ಪಲತೆರ ನಾರಕಿಗಳದವುಗಳ ಪೃಥ್ವೀಭೇದದಷ್ಟಿವೆ ॥೧೧೮॥

ಇಂದ್ರಿಯಭೇದೇನೋಕ್ತಾನಾಂ ಜೀವಾನಾಂ ಚತುರ್ಗತಿಸಂಬಂಧತ್ವೇನೋಪಸಂಹಾರೋಽಯಮ್ ।

ದೇವಗತಿನಾಮ್ನೋ ದೇವಾಯುಷಶ್ಚೋದಯಾದ್ದೇವಾಃ, ತೇ ಚ ಭವನವಾಸಿವ್ಯಂತರಜ್ಯೋತಿಷ್ಕವೈಮಾನಿಕ-ನಿಕಾಯಭೇದಾಚ್ಚತುರ್ಧಾ । ಮನುಷ್ಯಗತಿನಾಮ್ನೋ ಮನುಷ್ಯಾಯುಷಶ್ಚ ಉದಯಾನ್ಮನುಷ್ಯಾಃ । ತೇ ಕರ್ಮಭೋಗಭೂಮಿಜಭೇದಾತ್ ದ್ವೇಧಾ । ತಿರ್ಯಗ್ಗತಿನಾಮ್ನಸ್ತಿರ್ಯಗಾಯುಷಶ್ಚ ಉದಯಾತ್ತಿರ್ಯಂಚಃ । ತೇ ಪೃಥಿವೀಶಂಬೂಕಯೂಕೋದ್ದಂಶಜಲಚರೋರಗಪಕ್ಷಿಪರಿಸರ್ಪಚತುಷ್ಪದಾದಿಭೇದಾದನೇಕಧಾ । ನರಕಗತಿನಾಮ್ನೋ-ನರಕಾಯುಷಶ್ಚ ಉದಯಾನ್ನಾರಕಾಃ । ತೇ ರತ್ನಶರ್ಕರಾವಾಲುಕಾಪಂಕಧೂಮತಮೋಮಹಾತಮಃಪ್ರಭಾ ಭೂಮಿಜಭೇದಾತ್ಸಪ್ತಧಾ । ತತ್ರ ದೇವಮನುಷ್ಯನಾರಕಾಃ ಪಂಚೇಂದ್ರಿಯಾ ಏವ । ತಿರ್ಯಂಚಸ್ತು ಕೇಚಿತ್ಪಂಚೇಂದ್ರಿಯಾಃ, ಕೇಚಿದೇಕ-ದ್ವಿ-ತ್ರಿ-ಚತುರಿಂದ್ರಿಯಾ ಅಪೀತಿ ।

ಗಾಥೆ - ೧೧೮

ಗಾಥಾರ್ಥ ಃ- [ದೇವಾ ಚಉಣ್ಣಿಕಾಯಾ] ದೇವತೆಗಳ ನಾಲ್ಕು ನಿಕಾಯವಿವೆ, [ಮಣುಯಾ ಕಮ್ಮಭೋಗಭೂಮೀಯಾ] ಮನುಷ್ಯರಲ್ಲಿ ಕರ್ಮಭೂಮಿಜ ಮತ್ತು ಭೋಗಭೂಮಿಜವೆಂದು ಎರಡು ಪ್ರಕಾರವಿವೆ, [ತಿರಿಯಾ ಬಹುಪ್ಪಯಾರಾ] ತಿರ್ಯಂಚದಲ್ಲಿ ಅನೇಕ ಪ್ರಕಾರವಿವೆ [ಪುಣ] ಮತ್ತು [ಣೇರಇಯಾ ಪುಢವಿಭೇಯಗದಾ] ನಾರಕಿಗಳ ಭೇದವು ಅವುಗಳ ಪೃಥ್ವಿಗಳ ಭೇದದಷ್ಟಿವೆ.

ಟೀಕೆ ಃ- ಇದು ಇಂದ್ರಿಯಗಳ ಭೇದದ ಅಪೇಕ್ಷೆಯಿಂದ ಹೇಳಲಾದ ಜೀವಗಳ ಚತುರ್ಗತಿ - ಸಂಬಂಧವನ್ನು ತಿಳಿಸಿಕೊಡುವ ಉಪಸಂಹಾರವಿದೆ. (ಎಂದರೆ ಇಲ್ಲಿ ಏಕೇಂದ್ರಿಯ-ದ್ವೀಂದ್ರಿಯಾದಿರೂಪ ಜೀವಭೇದಗಳ ಸಂಬಂಧವನ್ನು ನಾಲ್ಕು ಗತಿಯೊಡನೆ ತೋರಿಸಿಕೊಟ್ಟು ಆ ಜೀವಭೇದಗಳ ಉಪಸಂಹಾರ ಮಾಡಲಾಗಿದೆ.

ದೇವಗತಿನಾಮ ಮತ್ತು ದೇವಾಯುವಿನ ಉದಯದಿಂದ (ಎಂದರೆ ದೇವಗತಿನಾಮಕರ್ಮ ಮತ್ತು ದೇವಾಯು ಕರ್ಮದ ಉದಯದ ನಿಮಿತ್ತದಿಂದ) ದೇವವಾಗುತ್ತವೆ ; ಅವು ಭವನವಾಸಿ, ವ್ಯಂತರ, ಜ್ಯೋತಿಷ್ಕ ಮತ್ತು ವೈಮಾನಿಕವೆಂದು ನಿಕಾಯ[೧] ಭೇದಗಳ ಕಾರಣ ನಾಲ್ಕು ಪ್ರಕಾರವಿವೆ. ಮನುಷ್ಯಗತಿನಾಮ ಮತ್ತು ಮನುಷ್ಯಾಯುವಿನ ಉದಯದಿಂದ ಮನುಷ್ಯವಾಗುತ್ತವೆ ; ಅವು ಕರ್ಮಭೂಮಿಜ ಮತ್ತು ಭೋಗಭೂಮಿಜದಂಥ ಭೇದಗಳ ಕಾರಣ ಎರಡು ಪ್ರಕಾರವಿವೆ. ತಿರ್ಯಂಚಗತಿನಾಮ ಮತ್ತು ತಿರ್ಯಂಚಾಯುವಿನ ಉದಯದಿಂದ ತಿರ್ಯಂಚವಾಗುತ್ತವೆ ; ಅವು ಪೃಥ್ವೀ, ಬಸವನಹುಳ, ಹೇನು, ದೋಮೆ, ಜಲಚರ, ಸರ್ಪ, ಪಕ್ಷಿ, ಪರಿಸರ್ಪ ಚತುಷ್ಪಾದ ಇತ್ಯಾದಿ ಭೇದಗಳ ಕಾರಣ ಅನೇಕ ಪ್ರಕಾರವಿವೆ. ನರಕಗತಿನಾಮ ಮತ್ತು ನರಕಾಯುವಿನ ಉದಯದಿಂದ ನಾರಕಿಯಾಗುತ್ತವೆ ; ಅವು ರತ್ನಪ್ರಭಾಭೂಮಿಜ, ಶರ್ಕರಾಪ್ರಭಾಭೂಮಿಜ, ವಾಲುಕಾಪ್ರಭಾಭೂಮಿಜ, ಪಂಕಪ್ರಭಾಭೂಮಿಜ, ಧೂಮಪ್ರಭಾಭೂಮಿಜ, ತಮಃಪ್ರಭಾಭೂಮಿಜ ಮತ್ತು ಮಹಾತಮಃಪ್ರಭಾಭೂಮಿಜವೆಂಬ ಭೇದಗಳ ಕಾರಣ ಏಳು ಪ್ರಕಾರದ್ದಿವೆ.

ಅವುಗಳಲ್ಲಿ ದೇವ, ಮನುಷ್ಯ ಮತ್ತು ನಾರಕಿಗಳು ಪಂಚೇಂದ್ರಿಯವೇ ಇರುತ್ತವೆ. ತಿರ್ಯಂಚವಂತೂ

---

೧. ನಿಕಾಯ - ಸಮೂಹ.

ಖೀಣೇ ಪುವ್ವಣಿಬದ್ದೇ ಗದಿಣಾಮೇ ಆಉಸೇ ಯ ತೇ ವಿ ಖಲು ।
ಪಾಉಣ್ಣಂತಿ ಯ ಅಣ್ಣಂ ಗದಿಮಾಉಸ್ಸಂ ಸಲೇಸ್ಸವಸಾ ॥೧೧೯॥

ಕ್ಷೀಣೇ ಪೂರ್ವನಿಬದ್ಧೇ ಗತಿನಾಮ್ನಿ ಆಯುಷಿ ಚ ತೇऽಪಿ ಖಲು ।
ಪ್ರಾಪ್ನುವಂತಿ ಚಾನ್ಯಾಂ ಗತಿಮಾಯುಷ್ಕಂ ಸ್ವಲೇಶ್ಯಾವಶಾತ್ ॥೧೧೯॥

ಗತ್ಯಾಯುರ್ನಾಮೋದಯನಿರ್ವೃತ್ತತ್ವಾದ್ದೇವತ್ವಾದೀನಾಮನಾತ್ಮಸ್ವಭಾವತ್ವೋದ್ಯೋತನಮೇತತ್ ।

ಕ್ಷೀಯತೇ ಹಿ ಕ್ರಮೇಣಾರಬ್ಧಫಲೋ ಗತಿನಾಮವಿಶೇಷ ಆಯುರ್ವಿಶೇಷಶ್ಚ ಜೀವಾನಾಮ್ । ಏವಮಪಿ ತೇಷಾಂ ಗತ್ಯಂತರಸ್ಯಾಯುರಂತರಸ್ಯ ಚ ಕಷಾಯಾನುರಂಜಿತಾ ಯೋಗಪ್ರವೃತ್ತಿರ್ಲೇಶ್ಯಾ ಭವತಿ ಬೀಜಂ, ತತಸ್ತದುಚಿತಮೇವ ಗತ್ಯಂತರಮಾಯುರಂತರಂ ಚ ತೇ ಪ್ರಾಪ್ನುವಂತಿ । ಏಂ ಕ್ಷೀಣಾಕ್ಷೀಣಾಭ್ಯಾಮಪಿ ಪುನಃ ಪುನರ್ನವೀಭೂತಾಭ್ಯಾಂ ಗತಿನಾಮಾಯುಃಕರ್ಮಭ್ಯಾಮನಾತ್ಮಸ್ವಭಾವಭೂತಾಭ್ಯಾಮಪಿ ಚಿರಮನುಗಮ್ಯಮಾನಾಃ ಸಂಸರಂತ್ಯಾತ್ಮಾನಮಚೇತಯಮಾನಾ ಜೀವಾ ಇತಿ ।

ಕೆಲವು ಪಂಚೇಂದ್ರಿಯವಿರುತ್ತವೆ ಕೆಲವು ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ ಮತ್ತು ಚತುರಿಂದ್ರಿಯಗಳೂ ಇರುತ್ತವೆ.

ಭಾವಾರ್ಥ :- ನಾಲ್ಕು ಗತಿಗಳಲ್ಲಿ ವಿಲಕ್ಷಣ ಮತ್ತು ಸ್ವಾತ್ಮೋಪಲಬ್ಧಿ ಲಕ್ಷಣಯುಕ್ತವಾದಂಥ ಯಾವ ಸಿದ್ಧಗತಿಯಿದೆ ಅದರ ಭಾವನೆಯಿಂದ ರಹಿತವಾದ ಜೀವಗಳು ಅಥವಾ ಸಿದ್ಧಸದೃಶ ನಿಜಶುದ್ಧಾತ್ಮನ ಭಾವನೆಯಿಂದ ರಹಿತವಾದ ಜೀವಗಳು ಯಾವ ಚತುರ್ಗತಿನಾಮಕರ್ಮವನ್ನು ಉಪಾರ್ಜನೆ ಮಾಡುತ್ತವೆ ಅದರ ಉದಯ ವಶದಿಂದ ಅವು ದೇವಾದಿಗತಿಗಳಲ್ಲಿ ಉತ್ಪನ್ನವಾಗುತ್ತವೆಯೆಂಬ ತಾತ್ಪರ್ಯವನ್ನು ಇಲ್ಲಿ ಗ್ರಹಣ ಮಾಡಬೇಕು.

ಗಾಥೆ - ೧೧೯

ಗಾಥಾರ್ಥ :- [ಪುವ್ವಣಿಬದ್ದೇ] ಮೊದಲು ಬದ್ಧವಾದ [ಗದಿಣಾಮೇ ಆಉಸೇ ಯ] ಗತಿನಾಮ ಕರ್ಮ ಮತ್ತು ಆಯುಷ್ಯಕರ್ಮಗಳು [ಖೀಣೇ] ಕ್ಷೀಣವಾಗುವುದರಿಂದ [ತೇ ವಿ] ಜೀವಗಳು [ಸಲೇಸ್ಸವಸಾ] ತಮ್ಮ ಲೇಶ್ಯೆಯ ವಶದಿಂದ [ಖಲು] ವಾಸ್ತವಿಕವಾಗಿ [ಅಣ್ಣಂ ಗದಿಮಾಉಸ್ಸಂ ಯ] ಬೇರೆ ಗತಿ ಮತ್ತು ಆಯುಷ್ಯವನ್ನು [ಪಾಉಣ್ಣಂತಿ] ಪ್ರಾಪ್ತಮಾಡಿಕೊಳ್ಳುತ್ತವೆ.

ಟೀಕೆ :- ಇಲ್ಲಿ ಗತಿನಾಮಕರ್ಮ ಮತ್ತು ಆಯುಕರ್ಮದ ಉದಯದಿಂದ ನಿಷ್ಪನ್ನವಾಗುತ್ತಿರುವುದರಿಂದ ದೇವತ್ವಾದಿಗಳು ಅನಾತ್ಮಸ್ವಭಾವಭೂತವಾಗಿವೆ (ಎಂದರೆ ದೇವತ್ವ, ಮನುಷ್ಯತ್ವ, ತಿರ್ಯಂಚತ್ವ ಮತ್ತು ನಾರಕತ್ವಗಳು ಆತ್ಮನ ಸ್ವಭಾವಗಳಲ್ಲ) ಎಂದು ತಿಳಿಸಿಕೊಡಲಾಗಿದೆ.

ಯಾವ ಪೂರ್ವನಿಬದ್ಧ ಗತಿನಾಮ ಮೇಣಾಯುಕರ್ಮ ಕ್ಷೀಣವಾಗುವುದರಿಂದ ।
ಜೀವ ತನ್ನ ಲೇಶ್ಯಾವಶದಿಂದ ಬೇರೆಗತಿ ಮೇಣಾಯುಷ್ಕವನು ಪಡೆಯುವುದು ॥೧೧೯॥

ಏದೇ ಜೀವಣಿಕಾಯಾ ದೇಹಪ್ಪವಿಚಾರಮಸ್ಸಿದಾ ಭಣಿದಾ ।
ದೇಹವಿಹೂಣಾ ಸಿದ್ಧಾ ಭವ್ವಾ ಸಂಸಾರಿಣೋ ಅಭವ್ವಾ ಯ ॥೧೨೦॥

ಏತೇ ಜೀವನಿಕಾಯಾ ದೇಹಪ್ರವೀಚಾರಮಾಶ್ರಿತಾಃಭಣಿತಾಃ ।
ದೇಹವಿಹೀನಾಃ ಸಿದ್ಧಾಃ ಭವ್ಯಾಃ ಸಂಸಾರಿಣೋऽಭವ್ಯಾಶ್ಚ ॥೧೨೦॥

ಜೀವಗಳಿಗೆ ಯಾವುದರ ಫಲವು ಪ್ರಾರಂಭವಾಗಿ ಬಿಡುವಂಥ ಅಂಥ ಗತಿನಾಮಕರ್ಮ ಮತ್ತು ಅಂಥ ಆಯುಕರ್ಮಗಳು ಕ್ರಮದಿಂದ ನಾಶಕ್ಕೆ ಪ್ರಾಪ್ತವಾಗುತ್ತವೆ. ಹೀಗಾದರೂ ಕೂಡ ಅವಕ್ಕೆ ಕಷಾಯಾನುರಂಜಿತ [೧] ಯೋಗ ಪ್ರವೃತ್ತಿರೂಪ ಲೇಶ್ಯೆಯು ಬೇರೆ ಗತಿ ಮತ್ತು ಬೇರೆ ಆಯುವಿನ ಬೀಜವಿರುತ್ತದೆ, (ಎಂದರೆ ಲೇಶ್ಯೆಯು ಬೇರೆ ಗತಿನಾಮಕರ್ಮ ಮತ್ತು ಬೇರೆ ಆಯುಕರ್ಮದ ಕಾರಣವಿರುತ್ತದೆ) ಅದಕ್ಕಾಗಿ ಅದಕ್ಕನುಸರಿಸಿಯೇ ಬೇರೆ ಗತಿ ಮತ್ತು ಬೇರೆ ಆಯುವನ್ನು ಅವು ಪ್ರಾಪ್ತಮಾಡಿಕೊಳ್ಳುತ್ತವೆ. ಈ ಪ್ರಕಾರವಾಗಿ ಕ್ಷೀಣ-ಅಕ್ಷೀಣತ್ವಕ್ಕೆ [೨] ಪ್ರಾಪ್ತವಾದರೂ ಪುನಃ ಪುನಃ ಹೊಸದಾಗಿ ಉತ್ಪನ್ನವಾಗುವಂಥ ಗತಿನಾಮಕರ್ಮ ಮತ್ತು ಆಯುಕರ್ಮಗಳು (ಪ್ರವಾಹರೂಪದಿಂದ) - ಅವು ಅನಾತ್ಮಸ್ವಭಾವಭೂತವಿದ್ದಾಗ್ಯೂ ಚಿರಕಾಲ (ಜೀವಗಳ) ಜೊತೆ-ಜೊತೆಯಲ್ಲಿರುತ್ತಿರುವುದರಿಂದ ಆತ್ಮನನ್ನು ಚೇತಿಸದಂಥ ಜೀವಗಳು ಸಂಸರಣ ಮಾಡುತ್ತವೆ (ಎಂದರೆ ಆತ್ಮನ ಅನುಭವ ಮಾಡದಂಥ ಜೀವಗಳು ಸಂಸಾರದಲ್ಲಿ ಪರಿಭ್ರಮಣ ಮಾಡುತ್ತವೆ.)

ಭಾವಾರ್ಥ ಃ- ಜೀವಗಳಿಗೆ ದೇವತ್ವಾದಿಗಳ ಪ್ರಾಪ್ತಿಯಲ್ಲಿ ಪೌದ್ಗಲಿಕ ಕರ್ಮಗಳು ನಿಮಿತ್ತಭೂತವಿರುವುದರಿಂದ ದೇವತ್ವಾದಿಗಳು ಜೀವದ ಸ್ವಭಾವವಲ್ಲ.

(ದೇವನು ಸತ್ತು ದೇವನೇ ಆಗುತ್ತಾನೆ ಮತ್ತು ಮನುಷ್ಯನು ಸತ್ತು ಮನುಷ್ಯನೇ ಆಗುತ್ತಾನೆಂಬ ಮನ್ನಣೆಯದೂ ಇಲ್ಲಿ ನಿಷೇಧವಾಯಿತು. ಜೀವಗಳಿಗೆ ತಮ್ಮ ಲೇಶ್ಯಾಯೋಗ್ಯವೇ ಗತಿನಾಮಕರ್ಮ ಮತ್ತು ಆಯುಕರ್ಮದ ಬಂಧವಾಗುತ್ತದೆ ಮತ್ತು ಇದರಿಂದ ಅದಕ್ಕೆ ಯೋಗ್ಯವೇ ಬೇರೆ ಗತಿ-ಆಯುಗಳು ಪ್ರಾಪ್ತವಾಗುತ್ತವೆ.)

ಗಾಥೆ - ೧೨೦

ಗಾಥಾರ್ಥ ಃ- [ಏದೇ ಜೀವಣಿಕಾಯಾ] ಈ (ಮೊದಲು ಹೇಳಿದ) ಜೀವನಿಕಾಯವು [ದೇಹಪ್ಪವಿಚಾರಮಸ್ಸಿದಾ] ದೇಹದಲ್ಲಿ ವರ್ತಿಸುವಂಥ ಎಂದರೆ ದೇಹಸಹಿತವೆಂದು [ಭಣಿದಾ] ಹೇಳಲಾಗಿದೆ; [ದೇಹವಿಹೂಣಾ ಸಿದ್ಧಾ] ದೇಹರಹಿತರಾದಂಥವರು ಸಿದ್ಧರಿದ್ದಾರೆ. [ಸಂಸಾರಿಣೋ] ಸಂಸಾರಿಗಳಲ್ಲಿ [ಭವ್ವಾ ಅಭವ್ವಾ ಯ] ಭವ್ಯ ಮತ್ತು ಅಭವ್ಯವೆಂದು ಎರಡು ಪ್ರಕಾರಗಳಿವೆ.

ಮೊದಲು ಹೇಳಿದ ಜೀವನಿಕಾಯವೆಲ್ಲ ದೇಹಸಹಿತವೆಂದು ಹೇಳಲಾಗಿದೆ ।
ಅದೇಹರು ಸಿದ್ಧರಿದ್ದು ಸಂಸಾರಿ ಭವ್ಯ-ಅಭವ್ಯವೆಂದೆರಡು ತೆರವಾಗಿದೆ ॥೧೨೦॥

---

೧. ಕಷಾಯಾನುರಂಜಿತ = ಕಷಾಯರಂಜಿತ ; ಕಷಾಯದಿಂದ ಆಸಕ್ತವಾದ. (ಕಷಾಯದಿಂದ ಅನುರಂಜಿತಯೋಗ ಪ್ರವೃತ್ತಿಯು ಅದು ಲೇಶ್ಯೆಯಿದೆ.)

೨. ಮೊದಲಿನ ಕರ್ಮಗಳು ಕ್ಷೀಣವಾಗುತ್ತವೆ ಮತ್ತು ಅನಂತರದವು ಅಕ್ಷೀಣರೂಪದಿಂದ ವರ್ತಿಸುತ್ತವೆ.

ಉಕ್ತ ಜೀವಪ್ರಪಂಚೋಪಸಂಹಾರೋಽಯಮ್ ।

ಏತೇ ಹ್ಯುಕ್ತಪ್ರಕಾರಾಃ ಸರ್ವೇ ಸಂಸಾರಿಣೋ ದೇಹಪ್ರವೀಚಾರಾಃ, ಅದೇಹಪ್ರವೀಚಾರಾ ಭಗವಂತಃ ಸಿದ್ಧಾಃ ಶುದ್ಧಾ ಜೀವಾಃ । ತತ್ರ ದೇಹಪ್ರವೀಚಾರತ್ವಾದೇಕಪ್ರಕಾರತ್ವೇಽಪಿ ಸಂಸಾರಿಣೋ ದ್ವಿಪ್ರಕಾರಾಃ ಭವ್ಯಾ ಅಭವಾಶ್ಚ । ತೇ ಶುದ್ಧಸ್ವರೂಪೋಪಲಂಭಶಕ್ತಿಸದ್ಭಾವಾಸದ್ಭಾವಾಭ್ಯಾಂ ಪಾಚ್ಯಾಪಾಚ್ಯಮುದ್ಗಲವದಭಿಧೀಯಂತ ಇತಿ ।

ण हिइंदियाणि जीवा कायाऽ पुण छप्पयारऽ पण्णत्ता ।
जं हवदि तेसु णाणं जीवो त्ति य तं परूवेंति ॥೧೨೧॥

ನ ಹಿಂದ್ರಿಯಾಣಿ ಜೀವಾಃ ಕಾಯಾಃ ಪುನಃ ಷಟ್‌ಪ್ರಕಾರಾಃ ಪ್ರಜ್ಞಪ್ತಾಃ ।
ಯದ್ಭವತಿ ತೇಷು ಜ್ಞಾನಂ ಜೀವ ಇತಿ ಚ ತತ್ಪ್ರರೂಪಯಂತಿ ॥೧೨೧॥

ವ್ಯವಹಾರಜೀವತ್ವೈಕಾಂತಪ್ರತಿಪತ್ತಿನಿರಾಸೋಽಯಮ್ ।

ಟೀಕೆ :- ಇದು ಉಕ್ತ (ಮೊದಲು ಹೇಳಲ್ಪಟ್ಟ) ಜೀವ ವಿಸ್ತಾರದ ಉಪಸಂಹಾರವಿದೆ.

ಯಾವವುಗಳ ಪ್ರಕಾರ (ಮೊದಲು ಹೇಳಲ್ಪಟ್ಟಂಥ ಈ ಎಲ್ಲ ಸಂಸಾರೀ ಜೀವಗಳು ದೇಹದಲ್ಲಿ ವರ್ತಿಸುವಂಥವು (ಎಂದರೆ ದೇಹಸಹಿತ) ಇವೆ ; ದೇಹದಲ್ಲಿ ವರ್ತಿಸದಂಥವರು (ಎಂದರೆ ದೇಹರಹಿತರು) ಸಿದ್ಧಭಗವಂತರಿದ್ದಾರೆ - ದೇಹದಲ್ಲಿ ವರ್ತಿಸುವ ಅಪೇಕ್ಷೆಯಿಂದ ಸಂಸಾರೀ ಜೀವಗಳದ್ದು ಒಂದೇ ಪ್ರಕಾರವಿದ್ದರೂ ಅವು ಭವ್ಯ ಮತ್ತು ಅಭವ್ಯವೆಂದು ಎರಡು ಪ್ರಕಾರವಾಗಿವೆ. 'ಪಾಚ್ಯ ಮತ್ತು ಅಪಾಚ್ಯ'[೧] ಹೆಸರು ಕಾಳಿನಂತೆ ಯಾವವುಗಳಲ್ಲಿ ಶುದ್ಧಸ್ವರೂಪದ ಉಪಲಬ್ಧಿಯ[೨] ಶಕ್ತಿಯ ಸದ್ಭಾವವಿದೆ ಅವಕ್ಕೆ 'ಭವ್ಯ' ಮತ್ತು ಯಾವವುಗಳಲ್ಲಿ ಶುದ್ಧಸ್ವರೂಪದ ಉಪಲಬ್ಧಿಯ ಶಕ್ತಿಯ ಅಸದ್ಭಾವವಿದೆ ಅವಕ್ಕೆ 'ಅಭವ್ಯ'ವೆಂದು ಹೇಳಲಾಗುತ್ತದೆ.

ಗಾಥೆ - ೧೨೧

ಗಾಥಾರ್ಥ :- [ण हि इंदियाणि जीव] (ವ್ಯವಹಾರದಿಂದ ಹೇಳಲಾಗುವಂಥ ಏಕೇಂದ್ರಿಯ ಮೊದಲಾದ ಹಾಗೂ ಪೃಥ್ವೀಕಾಯಿಕ ಮೊದಲಾದ 'ಜೀವಗಳಲ್ಲಿ') ಇಂದ್ರಿಯಗಳು ಜೀವಗಳಲ್ಲ ಮತ್ತು [छप्पयार पण्णत्ता काया पुण] ಆರು ಪ್ರಕಾರದ ಶಾಸ್ತ್ರೋಕ್ತ ಕಾಯಗಳೂ ಜೀವಗಳಲ್ಲ ; [तेसु] ಅವುಗಳಲ್ಲಿ [जं णाणं हवदि] ಯಾವ ಜ್ಞಾನವಿದೆ [तं जीवो] ಅದು ಜೀವವಿದೆ [त्ति य परूवेंति] ಎಂದು (ಜ್ಞಾನಿಗಳು) ಪ್ರರೂಪಣೆ ಮಾಡುತ್ತಾರೆ.

ಯಾವ ಇಂದ್ರಿಯಗಳು ಜೀವವಲ್ಲ ಷಡ್‌ವಿಧಕಾಯಗಳು ಕೂಡ ಜೀವವಲ್ಲ ।
ಅವುಗಳಲಿ ಯಾವ ಜ್ಞಾನವಿದೆಯದು ಜೀವವೆಂದು ಪ್ರರೂಪಿಸುವರು ॥೧೨೧॥

---

೧. ಪಾಚ್ಯ = ಕದಿಯುವ ಯೋಗ್ಯತೆಯುಳ್ಳ ; ಅಪಾಚ್ಯ = ಕುದಿಯುವ ಯೋಗ್ಯತೆಯಿಲ್ಲದ.
೨. ಉಪಲಬ್ಧಿ = ಪ್ರಾಪ್ತಿ ; ಅನುಭವ.

ಯ ಇಮೇ ಏಕೇಂದ್ರಿಯಾದಯಃ ಪೃಥಿವೀಕಾಯಿಕಾದಯಶ್ಚಾನಾದಿಜೀವಪುದ್ಗಲಪರಸ್ಪರಾವಗಾಹಮವ-ಲೋಕ್ಯ ವ್ಯವಹಾರನಯೇನ ಜೀವಪ್ರಾಧಾನ್ಯಾಜ್ಜೀವಾ ಇತಿ ಪ್ರಜ್ಞಾಪ್ಯಂತೇ । ನಿಶ್ಚಯನಯೇನ ತೇಷು ಸ್ಪರ್ಶಾನಾದೀಂದ್ರಿಯಾಣಿ ಪೃಥಿವ್ಯಾದಯಶ್ಚ ಕಾಯಾಃ ಜೀವಲಕ್ಷಣಭೂತಚೈತನ್ಯಸ್ವಭಾವಾಭಾವಾನ್ನ ಜೀವಾ ಭವಂತೀತಿ । ತೇಷ್ವೇವ ಯತ್ಸ್ವಪರಪರಿಚ್ಛಿತ್ತಿರೂಪೇಣ ಪ್ರಕಾಶಮಾನಂ ಜ್ಞಾನಂ ತದೇವ ಗುಣಗುಣಿನೋಃ ಕಥಂಚಿದಭೇದಾಜ್ಜೀವತ್ವೇನ ಪ್ರರೂಪ್ಯತ ಇತಿ ।

ಜಾಣದಿ ಪಸ್ಸದಿ ಸವ್ವಂ ಇಚ್ಛದಿ ಸುಕ್ಖಂ ಬಿಭೇದಿ ದುಕ್ಖಾದೋ ।
ಕುವ್ವದಿ ಹಿದಮಹಿದಂ ವಾ ಭುಂಜದಿ ಜೀವೋ ಫಲಂ ತೇಸಿಂ ॥೧೨೨॥

ಜಾನಾತಿ ಪಶ್ಯತಿ ಸರ್ವಮಿಚ್ಛತಿ ಸೌಖ್ಯಂ ಬಿಭೇತಿ ದುಃಖಾತ್ ।
ಕರೋತಿ ಹಿತಮಹಿತಂ ವಾ ಭುಂಕ್ತೇ ಜೀವಃ ಫಲಂ ತಯೋಃ ॥೧೨೨॥

ಟೀಕೆ :- ಇದು ವ್ಯವಹಾರ ಜೀವತ್ವದ ಏಕಾಂತದ ಪ್ರತಿಪತ್ತಿಯ [೧] ಖಂಡನೆಯಿದೆ (ಎಂದರೆ ಯಾವುದಕ್ಕೆ ಕೇವಲ ವ್ಯವಹಾರನಯದಿಂದ ಜೀವವೆಂದು ಹೇಳಲಾಗುತ್ತದೆ ಅದನ್ನು ವಾಸ್ತವಿಕವಾಗಿ ಜೀವರೂಪದಿಂದ ಸ್ವೀಕಾರಮಾಡುವುದು ಉಚಿತವಲ್ಲವೆಂಬುದನ್ನು ಇಲ್ಲಿ ತಿಳಿಸಿಕೊಡಲಾಗಿದೆ.)

ಈ ಯಾವವುಗಳಿಗೆ ಏಕೇಂದ್ರಿಯ ಮೊದಲಾದ ಹಾಗೂ ಪೃಥ್ವೀಕಾಯಿಕ ಮೊದಲಾದ 'ಜೀವಗಳೆ'ಂದು ಹೇಳಲಾಗುತ್ತದೆ ಅವು ಜೀವ-ಪುದ್ಗಲಗಳ ಪರಸ್ಪರ ಅನಾದಿ ಅವಗಾಹವನ್ನು ನೋಡಿ ವ್ಯವಹಾರನಯದಿಂದ ಜೀವದ ಪ್ರಾಧಾನ್ಯತೆಯ ಮುಖಾಂತರ (ಜೀವಕ್ಕೆ ಮುಖ್ಯತೆಯನ್ನು ಕೊಟ್ಟು) 'ಜೀವಗಳೆ'ಂದು ಹೇಳಲಾಗುತ್ತದೆ. ನಿಶ್ಚಯನಯದಿಂದ ಅವುಗಳಲ್ಲಿ ಸ್ಪರ್ಶನ ಮೊದಲಾದ ಇಂದ್ರಿಯಗಳು ಹಾಗೂ ಪೃಥ್ವೀ ಮೊದಲಾದ ಕಾಯಗಳು ಜೀವದ ಲಕ್ಷಣಭೂತ ಚೈತನ್ಯಸ್ವಭಾವದ ಅಭಾವದ ಕಾರಣವಾಗಿ ಜೀವಗಳಲ್ಲ ; ಅವುಗಳಲ್ಲೇ ಸ್ವ-ಪರದ ಜ್ಞಪ್ತಿರೂಪದಿಂದ ಪ್ರಕಾಶಿತವಾದ ಯಾವ ಜ್ಞಾನವಿದೆ ಅದೇ, ಗುಣ-ಗುಣಿಯ ಕಥಂಚಿತ್ ಅಭೇದದ ಕಾರಣ, ಜೀವರೂಪದಿಂದ ಪ್ರರೂಪಣೆ ಮಾಡಲಾಗುತ್ತದೆ.

ಗಾಥೆ - ೧೨೨

ಗಾಥಾರ್ಥ :- [ಜೀವೋ] ಜೀವವು [ಸವ್ವಂ ಜಾಣದಿ ಪಸ್ಸದಿ] ಎಲ್ಲವನ್ನು ತಿಳಿಯುತ್ತದೆ ಮತ್ತು ನೋಡುತ್ತದೆ, [ಸುಕ್ಖಂ ಇಚ್ಛದಿ] ಸುಖದ ಇಚ್ಛೆ ಮಾಡುತ್ತದೆ, [ದುಕ್ಖಾದೋ ಬಿಭೇದಿ) ದುಃಖಕ್ಕೆ ಹೆದರುತ್ತದೆ, [ಹಿದಮಹಿದಂ] ಹಿತ-ಅಹಿತಗಳನ್ನು (ಶುಭ-ಅಶುಭಭಾವಗಳನ್ನು) [ಕುವ್ವದಿ] ಮಾಡುತ್ತದೆ [ವಾ] ಮತ್ತು [ತೇಸಿಂ ಫಲಂ ಭುಂಜದಿ] ಅವುಗಳ ಫಲವನ್ನು ಭೋಗಿಸುತ್ತದೆ.

ಜೀವವೆಲ್ಲ ತಿಳಿಯುವುದು ನೋಡುವುದು ಸುಖವಿಚ್ಛಿಸಿ ದುಃಖದಿಂ ಬೆದರುವುದು ।
ಜೀವ ಹಿತಾಹಿತಗಳ ಮಾಡಿ ಮತ್ತವುಗಳ ಫಲವ ಭೋಗಿಸುವುದು ॥೧೨೨॥

---

೧. ಪ್ರತಿಪತ್ತಿ = ಸ್ವೀಕೃತಿ; ಮನ್ನಣೆ.

ಅನ್ಯಾಸಾಧಾರಣಜೀವಕಾರ್ಯಖ್ಯಾಪನಮೇತತ್ ।

ಚೈತನ್ಯಸ್ವಭಾವತ್ವಾತ್ಕರ್ತೃಸ್ಥಾಯಾಃ ಕ್ರಿಯಾಯಾಃ ಜ್ಞಪ್ತೇರ್ದ್ದಶೇಶ್ಚ ಜೀವ ಏವ ಕರ್ತಾ, ನ ತತ್ಸಂಬಂಧಃ ಪುದ್ಗಲೋ, ಯಥಾಕಾಶಾದಿ । ಸುಖಾಭಿಲಾಷಕ್ರಿಯಾಯಾಃ ದುಃಖೋದ್ವೇಗಕ್ರಿಯಾಯಾಃ ಸ್ವಸಂವೇದಿತ-ಹಿತಾಹಿತನಿರ್ವರ್ತನಕ್ರಿಯಾಯಾಶ್ಚ ಚೈತನ್ಯವಿವರ್ತರೂಪಸಂಕಲ್ಪಪ್ರಭವತ್ವಾತ್ಸ ಏವ ಕರ್ತಾ, ನಾನ್ಯಃ । ಶುಭಾಶುಭಕರ್ಮಫಲಭೂತಾಯಾ ಇಷ್ಟಾನಿಷ್ಟ ವಿಷಯೋಪಭೋಗಕ್ರಿಯಾಯಾಶ್ಚ ಸುಖದುಃಖಸ್ವರೂಪಸ್ವ-ಪರಿಣಾಮಕ್ರಿಯಾಯಾ ಇವ ಸ ಇವ ಕರ್ತಾ, ನಾನ್ಯಃ । ಏತೇನಾಸಾಧಾರಣಕಾರ್ಯಾನುಮೇಯತ್ವಂ ಪುದ್ಗಲ-ವ್ಯತಿರಿಕ್ತಸ್ಯಾತ್ಮನೋದ್ಯೋತಿತಮಿತಿ।

ಟೀಕೆ :- ಇದು ಇತರದಿಂದ ಅಸಾಧಾರಣವಾದಂಥ ಜೀವಕಾರ್ಯಗಳ ಕಥನವಿದೆ (ಎಂದರೆ ಇತರ ದ್ರವ್ಯಗಳಿಂದ ಅಸಾಧಾರಣವಾದಂಥ ಯಾವ ಜೀವದ ಕಾರ್ಯಗಳಿವೆ ಅವನ್ನು ಇಲ್ಲಿ ತಿಳಿಸಿಕೊಡಲಾಗಿದೆ.)

ಚೈತನ್ಯಸ್ವಭಾವತನದ ಕಾರಣ ಕರ್ತೃಸ್ಥಿತ (ಕರ್ತೃವಿನಲ್ಲಿರುವಂಥ)ಕ್ರಿಯೆಯ-ಜ್ಞಪ್ತಿ ಅಥವಾ ದೃಶಿಯಕರ್ತೃವು ಜೀವವೇ ಇದೆ ; ಅದರ (ಕ್ರಿಯೆಯ) ಸಂಬಂಧದಲ್ಲಿರುವಂಥ ಪುದ್ಗಲವು ಅದರ ಕರ್ತೃವಿಲ್ಲ, ಯಾವ ಪ್ರಕಾರ ಆಕಾಶಾದಿಗಳಿಲ್ಲ ಅದೇ ಪ್ರಕಾರ ಇಲ್ಲ. (ಚೈತನ್ಯಸ್ವಭಾವದ ಕಾರಣ ತಿಳಿಯುವ ಮತ್ತು ನೋಡುವ ಕ್ರಿಯೆಯ ಕರ್ತೃವು ಜೀವವೇ ಇದೆ ; ಎಲ್ಲಿ ಜೀವವಿದೆ ಅಲ್ಲಿ ನಾಲ್ಕೂ ಅರೂಪಿ ಅಚೇತನ ದ್ರವ್ಯಗಳಿದ್ದರೂ ಅವು ಯಾವ ಪ್ರಕಾರ ತಿಳಿಯುವ ಮತ್ತು ನೋಡುವ ಕ್ರಿಯೆಯ ಕರ್ತೃಗಳಿಲ್ಲ ಅದೇ ಪ್ರಕಾರ ಜೀವದೊಡನೆ ಸಂಬಂಧವಾಗಿರುವಂಥ ಕರ್ಮ-ನೋಕರ್ಮರೂಪದ ಪುದ್ಗಲಗಳೂ ಆ ಕ್ರಿಯೆಯ ಕರ್ತೃಗಳಿಲ್ಲ.) ಚೈತನ್ಯದ ವಿವರ್ತರೂಪ (ಪರಿವರ್ತನರೂಪ) ಸಂಕಲ್ಪದ ಉತ್ಪತ್ತಿಯು (ಜೀವದಲ್ಲಿ) ಇರುವ ಕಾರಣ ಸುಖದ ಅಭಿಲಾಷೆರೂಪ ಕ್ರಿಯೆಯ, ದುಃಖದ ಉದ್ವೇಗರೂಪ ಕ್ರಿಯೆಯ ಹಾಗೂ ಸ್ವಸಂವೇದಿತ ಹಿತ-ಅಹಿತದ ನಿಷ್ಪತ್ತಿರೂಪ ಕ್ರಿಯೆಯ (ತನ್ನಿಂದ ಜಾಗೃತ ಮಾಡಲಾಗುವ ಶುಭ-ಅಶುಭ ಭಾವಗಳನ್ನು ನಿರ್ಮಿಸುವ ರೂಪ ಕ್ರಿಯೆಯ) ಕರ್ತೃವು ಜೀವವೇ ಇದೆ ; ಬೇರೆಯಿಲ್ಲ. ಶುಭಾಶುಭಕರ್ಮದ ಫಲಭೂತ ಇಷ್ಟಾನಿಷ್ಟ[೧] ವಿಷಯೋಪಭೋಗಕ್ರಿಯೆಯ, ಸುಖ-ದುಃಖರೂಪ ತನ್ನ ಪರಿಣಾಮ ಕ್ರಿಯೆಯ ಹಾಗೆ, ಜೀವವೇ ಕರ್ತೃವಿದೆ ; ಬೇರೆಯಿಲ್ಲ.

(ಮೇಲೆ ಹೇಳಿದ) ಅಸಾಧಾರಣ ಕಾರ್ಯಗಳ ಮುಖಾಂತರ ಪುದ್ಗಲಗಳಿಂದ ಭಿನ್ನವಾಗುವಂಥ ಆತ್ಮನು ಅನುಮೇಯ (ಅನುಮಾನ ಮಾಡಲು ಯೋಗ್ಯ)ನಿದ್ದಾನೆಂದು ಇದರಿಂದ ತಿಳಿಸಲಾಯಿತು.

ಭಾವಾರ್ಥ :- ಶರೀರ, ಇಂದ್ರಿಯ, ಮನಸ್ಸು, ಕರ್ಮ ಮೊದಲಾದ ಪುದ್ಗಲಗಳು ಅಥವಾ ಬೇರೆ ಯಾವ ಅಚೇತನ ದ್ರವ್ಯಗಳೆಂದೂ ತಿಳಿಯುವುದಿಲ್ಲ, ನೋಡುವುದಿಲ್ಲ, ಸುಖದ ಇಚ್ಛೆ ಮಾಡುವುದಿಲ್ಲ, ದುಃಖದಿಂದ ಹೆದರುವುದಿಲ್ಲ, ಹಿತ-ಅಹಿತದಲ್ಲಿ ಪ್ರವರ್ತಿಸುವುದಿಲ್ಲ ಅಥವಾ ಅವುಗಳ ಫಲವನ್ನು ಭೋಗಿಸುವುದಿಲ್ಲ; ಅದಕ್ಕಾಗಿ ಯಾವುದು ತಿಳಿಯುತ್ತದೆ ಮತ್ತು ನೋಡುತ್ತದೆ, ಸುಖದ ಇಚ್ಛೆ ಮಾಡುತ್ತದೆ, ದುಃಖದಿಂದ ಭಯಭೀತವಾಗುತ್ತದೆ, ಶುಭ-ಅಶುಭ ಭಾವಗಳಲ್ಲಿ ಪ್ರವರ್ತಿಸುತ್ತದೆ ಮತ್ತು ಅವುಗಳ ಫಲವನ್ನು ಭೋಗಿಸುತ್ತದೆ, ಅದು ಅಚೇತನ ಪದಾರ್ಥಗಳೊಡನಿದ್ದರೂ ಕೂಡ ಎಲ್ಲ ಅಚೇತನ ಪದಾರ್ಥಗಳ ಕ್ರಿಯೆಗಳಿಂದ ತೀರ ವಿಶಿಷ್ಟಪ್ರಕಾರದ

---

೧. ಇಷ್ಟಾನಿಷ್ಟ ವಿಷಯಗಳು ಯಾವುದರಲ್ಲಿ ನಿಮಿತ್ತಭೂತವಾಗುತ್ತವೆ ಅಂಥ ಸುಖ-ದುಃಖ ಪರಿಣಾಮಗಳ ಉಪಭೋಗ ರೂಪಕ್ರಿಯೆಯನ್ನು ಜೀವವು ಮಾಡುತ್ತಿರುವುದರಿಂದ ಅದಕ್ಕೆ ಇಷ್ಟಾನಿಷ್ಟ ವಿಷಯಗಳ ಉಪಭೋಗರೂಪಕ್ರಿಯೆಯ ಕರ್ತೃವೆಂದು ಹೇಳಲಾಗುತ್ತದೆ.

ಏವಮಭಿಗಮ್ಮ ಜೀವಂ ಅಣ್ಣೇಹಿಂ ವಿ ಪಜ್ಜಏಹಿಂ ಬಹುಗೇಹಿಂ ।
ಅಭಿಗಚ್ಛದು ಅಜ್ಜೀವಂ ಣಾಣಂತರಿದೇಹಿಂ ಲಿಂಗೇಹಿಂ ॥೧೨೩॥

ಏವಮಭಿಗಮ್ಯ ಜೀವಮನ್ಯೈರಪಿ ಪರ್ಯಾಯೈರ್ಬಹುಕೈಃ ।
ಅಭಿಗಚ್ಛತ್ವಜೀವಂ ಜ್ಞಾನಾಂತರಿತೈರ್ಲಿಂಗೈಃ ॥೧೨೩॥

ಜೀವಾಜೀವವ್ಯಾಖ್ಯೋಪಸಂಹಾರೋಪಕ್ಷೇಪಸೂಚನೇಯಮ್ ।

ಏವಮನಯಾ ದಿಶಾ ವ್ಯವಹಾರನಯೇನ ಕರ್ಮಗ್ರಂಥಪ್ರತಿಪಾದಿತಜೀವಗುಣಮಾರ್ಗಣಾಸ್ಥಾನಾದಿ-ಪ್ರಪಂಚಿತವಿಚಿತ್ರವಿಕಲ್ಪರೂಪೈಃ, ನಿಶ್ಚಯನಯೇನ ಮೋಹರಾಗದ್ವೇಷಪರಿಣತಿಸಂಪಾದಿತವಿಶ್ವರೂಪತ್ವಾತ್ತದ್ವಾಚಿದ-ಶುದ್ಧೈಃ ಕದಾಚಿತ್ತದಭಾವಾಚ್ಛುದ್ಧೈಶ್ಚೈತನ್ಯವಿವರ್ತಗ್ರಂಥಿರೂಪೈರ್ಬಹುಭಿಃ ಪರ್ಯಾಯೈಃ ಜೀವಮಧಿಗಚ್ಛೇತ್ । ಅಧಿಗಮ್ಯ ಚೈವಮಚೈತನ್ಯಸ್ವಭಾವತ್ವಾತ್ ಜ್ಞಾನಾದರ್ಥಾಂತರಭೂತೈರಿತಃ ಪ್ರಪಂಚ್ಯಮಾನೈರ್ಲಿಂಗೈರ್ಜೀವ-ಸಂಬದ್ಧಮಸಂಬದ್ಧಂ ವಾ ಸ್ವತೋ ಭೇದಬುದ್ಧಿಪ್ರಸಿದ್ಧ್ಯರ್ಥಮಜೀವಮಧಿಗಚ್ಛೇದಿತಿ ।

-ಇತಿ ಜೀವಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಕ್ರಿಯೆಗಳನ್ನು ಮಾಡುವಂಥ ಒಂದು ವಿಶಿಷ್ಟವಾದ ಪದಾರ್ಥವಿದೆ. ಈ ಪ್ರಕಾರ ಜೀವವೆಂಬ ಚೈತನ್ಯಸ್ವಭಾವದ ಪದಾರ್ಥ ವಿಶೇಷವು - ಜ್ಞಾನಿಗಳು ಸ್ವತಃ ಯಾವುದರ ಸ್ಪಷ್ಟ ಅನುಭವ ಮಾಡುತ್ತಾರೆ ಅದು -ತನ್ನ ಅಸಾಧಾರಣ ಕ್ರಿಯೆಗಳಿಂದ ಅನುಮೇಯವೂ ಇದೆ.

ಗಾಥೆ - ೧೨೩

ಗಾಥಾರ್ಥ :- [ಏವಂ] ಈ ಪ್ರಕಾರ [ಅಣ್ಣೇಹಿಂ ವಿ ಬಹುಗೇಹಿಂ ಪಜ್ಜಏಹಿಂ] ಇತರವೂ ಬಹಳಷ್ಟು ಪರ್ಯಾಯಗಳಿಂದ [ಜೀವಂ ಅಭಿಗಮ್ಮ] ಜೀವವನ್ನು ತಿಳಿದುಕೊಂಡು [ಣಾಣಂತರಿದೇಹಿಂ ಲಿಂಗೇಹಿಂ] ಜ್ಞಾನದಿಂದ ಬೇರೆಯಾದಂಥ [ಜಡ] ಲಿಂಗಗಳಿಂದ [ಅಜ್ಜೀವಂ ಅಭಿಗಚ್ಛದು] ಅಜೀವವನ್ನು ತಿಳಿಯುವುದು.

ಟೀಕೆ :- ಇದು ಜೀವ-ವ್ಯಾಖ್ಯಾನದ ಉಪಸಂಹಾರ ಮತ್ತು ಅಜೀವ-ವ್ಯಾಖ್ಯಾನದ ಪ್ರಾರಂಭದ ಸೂಚನೆಯಿದೆ.

ಹೀಗೆ ಈ ನಿರ್ದೇಶನಕ್ಕನುಸರಿಸಿ (ಎಂದರೆ ಮೇಲೆ ಸಂಕ್ಷೇಪದಲ್ಲಿ ತಿಳಿಸಿದ ಪ್ರಕಾರ), ೧) ವ್ಯವಹಾರ ನಯದಿಂದ ಕರ್ಮಗ್ರಂಥವು [೧] ಪ್ರತಿಪಾದಿಸಿದ ಜೀವಸ್ಥಾನ-ಗುಣಸ್ಥಾನ-ಮಾರ್ಗಣಾಸ್ಥಾನ ಇತ್ಯಾದಿಗಳಿಂದ ಪ್ರಪಂಚಿತ [೨] ವಿಚಿತ್ರಭೇದರೂಪ ಅನೇಕ ಪರ್ಯಾಯಗಳ ಮುಖಾಂತರ, ಹಾಗೂ ೨) ನಿಶ್ಚಯನಯದಿಂದ ಮೋಹರಾಗ-

---

ಅನೇಕ ವಿಧ ಬೇರೆ ಪರ್ಯಾಯಗಳಿಂದ ಹೀಗೆ ಜೀವವನು ತಿಳಿದುಕೊಂಡು ।
ಜ್ಞಾನ ವಿಭಿನ್ನ ಜಡಲಿಂಗಗಳಿಂದ ಅಜೀವ ಪದಾರ್ಥವನು ತಿಳಿಯುವುದು ॥೧೨೩॥

---

೧. ಕರ್ಮಗ್ರಂಥ ಪ್ರತಿಪಾದಿತ = ಗೊಮ್ಮಟಸಾರಾದಿ ಕರ್ಮಪದ್ಧತಿಯ ಗ್ರಂಥಗಳಲ್ಲಿ ಪ್ರರೂಪಿತ - ನಿರೂಪಿತ.
೨. ಪ್ರಪಂಚಿತ = ವಿಸ್ತಾರ-ಪೂರ್ವಕ ಹೇಳಿದ.

ಅಥ ಅಜೀವಪದಾರ್ಥವ್ಯಾಖ್ಯಾನಮ್ ।

ಆಗಾಸಕಾಲಪೋಗ್ಗಲಧಮ್ಮಾಧಮ್ಮೇಸು ಣತ್ಥಿ ಜೀವಗುಣಾ ।
ತೇಸಿಂ ಅಚೇದಣತ್ತಂ ಭಣಿದಂ ಜೀವಸ್ಸ ಚೇದಣದಾ ॥೧೨೪॥

ಆಕಾಶಕಾಲಪುದ್ಗಲಧರ್ಮಾಧರ್ಮೇಷು ನ ಸಂತಿ ಜೀವಗುಣಾಃ ।
ಶೇಷಾಮಚೇತನತ್ವಂ ಭಣಿತಂ ಜೀವಸ್ಯ ಚೇತನತಾ ॥೧೨೪॥

ದ್ವೇಷಪರಿಣತಿಯಿಂದ ಸಂಪ್ರಾಪ್ತವಾದ ವಿಶ್ವರೂಪತೆಯ [೧] ಕಾರಣ ಒಮ್ಮೊಮ್ಮೆ ಅಶುದ್ಧ (ದಂಥ) ಮತ್ತು ಒಮ್ಮೊಮ್ಮೆ ಅದರ (ಮೋಹರಾಗದ್ವೇಷಪರಿಣತಿಯ) ಅಭಾವದ ಕಾರಣ ಶುದ್ಧದಂಥ ಚೈತನ್ಯವಿವರ್ತಗ್ರಂಥಿ [೨] ರೂಪ ಅನೇಕ ಪರ್ಯಾಯಗಳಿಂದ ಜೀವವನ್ನು ತಿಳಿಯುವುದು. ಈ ಪ್ರಕಾರ ಜೀವವನ್ನು ತಿಳಿದುಕೊಂಡು, ಅಚೈತನ್ಯಸ್ವಭಾವದ ಕಾರಣ ಜ್ಞಾನದಿಂದ ಅರ್ಥಾಂತರಭೂತ [೩] ದಂಥ ಇಲ್ಲಿಂದ (ಈಗಿನ ಗಾಥೆಯಲ್ಲಿ) ಹೇಳಲಾಗುವಂಥ ಲಿಂಗಗಳ ಮುಖಾಂತರ ಜೀವ [೪] - ಸಂಬದ್ಧ ಅಥವಾ ಜೀವ-ಅಸಂಬದ್ಧ ಅಜೀವವನ್ನು ತಮ್ಮಿಂದ ಭೇದಬುದ್ಧಿಯ ಪ್ರಸಿದ್ಧಿಯ ಅರ್ಥದಿಂದ ತಿಳಿದುಕೊಳ್ಳುವುದು.

ಈ ಪ್ರಕಾರವಾಗಿ ಜೀವ ಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಅಜೀವ ಪದಾರ್ಥದ ವ್ಯಾಖ್ಯಾನವಿದೆ.

ಗಾಥೆ - ೧೨೪

ಗಾಥಾರ್ಥ :- [ಆಗಾಸಕಾಲಪೋಗ್ಗಲಧಮ್ಮಾಧಮ್ಮೇಸು] ಆಕಾಶ, ಕಾಲ, ಪುದ್ಗಲ, ಧರ್ಮ ಮತ್ತು ಅಧರ್ಮಗಳಲ್ಲಿ [ಜೀವಗುಣಾ ಣತ್ಥಿ] ಜೀವದ ಗುಣಗಳಿಲ್ಲ ; (ಏಕೆಂದರೆ) [ತೇಸಿಂ ಅಚೇದಣತ್ತಂ ಭಣಿದಂ] ಅವುಗಳಿಗೆ ಅಚೇತನತೆಯನ್ನು ಹೇಳಲಾಗಿದೆ, [ಜೀವಸ್ಸ ಚೇದಣದಾ] ಜೀವಕ್ಕೆ ಚೇತನತೆಯನ್ನು ಹೇಳಿದೆ.

ಜೀವ ಗುಣಗಳಿಲ್ಲ ಆಕಾಶ, ಕಾಲ, ಪುದ್ಗಲ, ಧರ್ಮ ಮೇಣಧರ್ಮಗಳಲಿ ।
ಅವುಗಳಿಗೆ ಅಚೇತನತೆ ಹೇಳಿದರೆ ಜೀವಕ್ಕೆ ಚೇತನತೆ ಹೇಳಿದೆ ॥೧೨೪॥

---

೧. ಮೋಹರಾಗದ್ವೇಷ ಪರಿಣತಿಯ ಕಾರಣ ಜೀವಕ್ಕೆ ವಿಶ್ವರೂಪತೆ ಎಂದರೆ ಅನೇಕ ರೂಪತೆಯು ಪ್ರಾಪ್ತವಾಗುತ್ತದೆ.

೨. ಗ್ರಂಥಿ-ಗಂಟು. (ಜೀವದ ಒಮ್ಮೊಮ್ಮೆ ಅಶುದ್ಧ ಮತ್ತು ಒಮ್ಮೊಮ್ಮೆ ಶುದ್ಧದಂಥ ಪರ್ಯಾಯಗಳು ಚೈತನ್ಯವಿವರ್ತದ ಚೈತನ್ಯ ಪರಿಣಮನದ-ಗ್ರಂಥಿಗಳಿವೆ ; ನಿಶ್ಚಯನಯದಿಂದ ಜೀವವನ್ನು ಅವುಗಳಿಂದ ತಿಳಿದುಕೊಳ್ಳು.)

೩. ಜ್ಞಾನದಿಂದ ಅರ್ಥಾಂತರಭೂತ=ಜ್ಞಾನದಿಂದ ಬೇರೆ ವಸ್ತುಭೂತ; ಜ್ಞಾನದಿಂದ ಬೇರೆ ಎಂದರೆ ಜಡ. ಅಜೀವದ ಸ್ವಭಾವವು ಅಚೈತನ್ಯವಿರುವ ಕಾರಣ ಜ್ಞಾನದಿಂದ ಬೇರೆಯಾದಂಥ ಜಡ ಚಿಹ್ನೆಗಳ ಮುಖಾಂತರ ಅದು ತಿಳಿದು ಬರುತ್ತದೆ.

೪. ಜೀವದೊಡನೆ ಸಂಬದ್ಧ ಅಥವಾ ಜೀವದೊಡನೆ ಅಸಂಬದ್ಧದಂಥ ಅಜೀವವನ್ನು ತಿಳಿದುಕೊಳ್ಳುವ ಪ್ರಯೋಜನವು ಸಂಪೂರ್ಣ ಅಜೀವಗಳು ತನ್ನಿಂದ (ತನ್ನ ಜೀವದಿಂದ) ತೀರ ಭಿನ್ನವಿವೆಯೆಂಬ ಬುದ್ಧಿಯು ಉತ್ಪನ್ನವಾಗುವುದಿದೆ.

ಆಕಾಶಾದೀನಾಮೇವಾಜೀವತ್ವೇ ಹೇತೂಪನ್ಯಾಸೋಽಯಮ್ ।

ಆಕಾಶಕಾಲಪುದ್ಗಲ ಧರ್ಮಾಧರ್ಮೇಷು ಚೈತನ್ಯವಿಶೇಷರೂಪಾ ಜೀವಗುಣಾ ನೋ ವಿದ್ಯಂತೇ । ಆಕಾಶಾದೀನಾಂ ತೇಷಾಮಚೇತನತ್ವಸಾಮಾನ್ಯತ್ವಾತ್ । ಅಚೇತನತ್ವಸಾಮಾನ್ಯಂ ಚಾಕಾಶಾದೀನಾಮೇವ, ಜೀವಸ್ಯೈವ ಚೇತನತ್ವಸಾಮಾನ್ಯಾದಿತಿ ।

ಸುಹದುಕ್ಖಜ್ಞಾಣಣಾ ವಾ ಹಿದಪರಿಯಮ್ಮಂ ಚ ಅಹಿದಭೀರುತ್ತಂ ।
ಜಸ್ಸ ಣ ವಿಜ್ಜದಿ ಣೆಚ್ಚಂ ತಂ ಸಮಣಾ ಬೇಂತಿ ಅಜ್ಜೀವಂ ॥೧೨೫॥

ಸುಖದುಃಖಜ್ಞಾನಂ ವಾ ಹಿತಪರಿಕರ್ಮ ಚಾಹಿತಭೀರುತ್ವಮ್ ।
ಯಸ್ಯ ನ ವಿದ್ಯತೇ ನಿತ್ಯಂ ತಂ ಶ್ರಮಣಾ ವಿಂದಂತ್ಯಜೀವಮ್ ॥೧೨೫॥

ಆಕಾಶಾದೀನಾಮಚೇತನತ್ವಸಾಮಾನ್ಯೇ ಪುನರನುಮಾನಮೇತತ್ ।

ಸುಖದುಃಖಜ್ಞಾನಸ್ಯ ಹಿತಪರಿಕರ್ಮಣೋಽಹಿತಭೀರುತ್ವಸ್ಯ ಚೇತಿ ಚೈತನ್ಯವಿಶೇಷಾಣಾಂ ನಿತ್ಯಮನುಪಲಬ್ಧೇರವಿದ್ಯಮಾನಚೈತನ್ಯಸಾಮಾನ್ಯಾ ಏವಾಕಾಶಾದಯೋಽಜೀವಾ ಇತಿ ।

ಟೀಕೆ :- ಇದು ಆಕಾಶಾದಿಗಳದ್ದೇ ಅಜೀವತನ ದರ್ಶಿಸುವುದಕ್ಕಾಗಿ ಹೇತುವಿನ ಕಥನವಿದೆ.

ಆಕಾಶ, ಕಾಲ, ಪುದ್ಗಲ, ಧರ್ಮ ಮತ್ತು ಅಧರ್ಮಗಳಲ್ಲಿ ಚೈತನ್ಯವಿಶೇಷಗಳ ರೂಪವಾಗಿ ಜೀವಗುಣಗಳು ವಿದ್ಯಮಾನವಿಲ್ಲ ; ಏಕೆಂದರೆ ಆ ಆಕಾಶ ಮೊದಲಾದವುಗಳಿಗೆ ಅಚೇತನತ್ವಸಾಮಾನ್ಯವಿದೆ ಮತ್ತು ಅಚೇತನತ್ವ ಸಾಮಾನ್ಯವು ಆಕಾಶ ಮೊದಲಾದವುಗಳಿಗೇ ಇದೆ, ಏಕೆಂದರೆ ಜೀವಕ್ಕೇನೇ ಚೇತನತ್ವ ಸಾಮಾನ್ಯವಿದೆ.

ಗಾಥೆ - ೧೨೫

ಗಾಥಾರ್ಥ :- [ಸುಹದುಕ್ಖಜಾಣಣಾ ವಾ] ಸುಖದುಃಖದ ಜ್ಞಾನ, [ಹಿದಪರಿಯಮ್ಮಂ] ಹಿತದ ಉದ್ಯಮ [ಚ] ಮತ್ತು [ಅಹಿದಭೀರುತ್ತಂ] ಅಹಿತದ ಭಯ - [ಜಸ್ಸ ಣೆಚ್ಚಂ ಣ ವಿಜ್ಜದಿ] ಇವು ಯಾವುದಕ್ಕೆ ಯಾವಾಗಲೂ ಇರುವುದಿಲ್ಲ, [ತಂ] ಅದಕ್ಕೆ [ಸಮಣಾ] ಶ್ರಮಣರು [ಅಜ್ಜೀವಂ ಬೇಂತಿ] ಅಜೀವವೆಂದು ಹೇಳುತ್ತಾರೆ.

ಟೀಕೆ :- ಇದು ಮತ್ತೆ ಆಕಾಶ ಮೊದಲಾದವುಗಳ ಅಚೇತನತ್ವ ಸಾಮಾನ್ಯವನ್ನು ನಿಶ್ಚಿತಪಡಿಸುವುದಕ್ಕಾಗಿ ಅನುಮಾನವಿದೆ.

ಸುಖ-ದುಃಖದ ಸಂಚೇತನ ಹಿತದುದ್ಯೋಗ ಮೇಣಹಿತದ ಹೆದರಿಕೆಯು ।
ಅಖಂಡ ಯಾವವುಗಳಿಗಿಲ್ಲವನು ಅಜೀವವೆಂದು ಶ್ರಮಣ ಪೇಳಿಹರು ॥೧೨೫॥

ಸಂಠಾಣಾ ಸಂಘಾದಾ ವಣ್ಣರಸಪ್ಫಾಸಗಂಧಸದ್ದಾ ಯ ।
ಪೋಗ್ಗಲದವ್ವಪ್ಪಭವಾ ಹೋಂತಿ ಗುಣಾ ಪಜ್ಜಯಾ ಯ ಬಹೂ ॥೧೨೬॥

ಅರಸಮರೂವಮಗಂಧಂ ಅವ್ವತ್ತಂ ಚೇದಣಾಗುಣಮಸದ್ದಂ ।
ಜಾಣ ಅಲಿಂಗಗ್ಗಹಣಂ ಜೀವಮಣಿದ್ದಿಟ್ಠಸಂಠಾಣಂ ॥೧೨೭॥

ಆಕಾಶ ಮೊದಲಾದುವಕ್ಕೆ ಸುಖದುಃಖದ ಜ್ಞಾನ, ಹಿತದ[೧] ಉದ್ಯಮ ಮತ್ತು ಅಹಿತದ ಭಯ - ಈ ಚೈತನ್ಯವಿಶೇಷಗಳದ್ದು ಯಾವಾಗಲೂ ಅನುಪಲಬ್ಧಿಯಿದೆ. (ಎಂದರೆ ಈ ಚೈತನ್ಯವಿಶೇಷಗಳು ಆಕಾಶ ಮೊದಲಾದುವಕ್ಕೆ ಯಾವ ಕಾಲದಲ್ಲೂ ಕಂಡುಬರುವುದಿಲ್ಲ), ಅದಕ್ಕಾಗಿ ಆಕಾಶ ಮೊದಲಾದ ಅಜೀವಗಳಿಗೆ ಚೈತನ್ಯಸಾಮಾನ್ಯವು ವಿದ್ಯಮಾನವಿಲ್ಲ. (ಎಂದು ನಿಶ್ಚಿತವಾಗುತ್ತದೆ.)

ಭಾವಾರ್ಥ :- ಯಾವುದಕ್ಕೆ ಚೈತನ್ಯಸಾಮಾನ್ಯವಿದೆ ಅದಕ್ಕೆ ಚೈತನ್ಯವಿಶೇಷವು ಇರಲೇಬೇಕಾಗುವುದು. ಯಾವುದಕ್ಕೆ ಚೈತನ್ಯವಿಶೇಷವಿಲ್ಲ ಅದಕ್ಕೆ ಚೈತನ್ಯಸಾಮಾನ್ಯವೂ ಇರುವುದಿಲ್ಲ. ಈಗ ಆಕಾಶ ಮೊದಲಾದ ಐದು ದ್ರವ್ಯಗಳಿಗೆ ಸುಖದುಃಖದ ಸಂಚೇತನ, ಹಿತಕ್ಕಾಗಿ ಪ್ರಯತ್ನ ಮತ್ತು ಅಹಿತದ ಭಯ - ಈ ಚೈತನ್ಯ ವಿಶೇಷವೆಂದೂ ಕಂಡುಬರುವುದಿಲ್ಲ ; ಅದಕ್ಕಾಗಿ ಆಕಾಶ ಮೊದಲಾದುವಕ್ಕೆ ಚೇತನತ್ವಸಾಮಾನ್ಯವೂ ಇಲ್ಲ ಎಂದರೆ ಅಚೇತನತ್ವ ಸಾಮಾನ್ಯವೇ ಇದೆಯೆಂಬುದು ನಿಶ್ಚಿತವಾಗುತ್ತದೆ.

ಗಾಥೆ - ೧೨೬-೧೨೭

ಗಾಥಾರ್ಥ :- [ಸಂಠಾಣಾ] (ಸಮಚತುರಸ್ರ ಮೊದಲಾದ) ಸಂಸ್ಥಾನ, [ಸಂಘಾದಾ] (ಔದಾರಿಕ ಮೊದಲಾದ ಶರೀರಸಂಬಂಧದ) ಸಂಘಾತ, [ವಣ್ಣರಸಪ್ಫಾಸಗಂಧಸದ್ದಾ ಯ] ವರ್ಣ, ರಸ, ಸ್ಪರ್ಶ, ಗಂಧ

ಯಾವ ಸಂಸ್ಥಾನ - ಸಂಘಾತ, ವರ್ಣ-ರಸ-ಸ್ಪರ್ಶ-ಗಂಧವದರಂತೆ ಶಬ್ದಗಳು ।
ಇವೆಲ್ಲವನೇಕಗುಣ ಮೇಣ್ಪರ್ಯಾಯಗಳು ಪುದ್ಗಲದ್ರವ್ಯದಿಂದ ನಿಷ್ಪನ್ನವಿವೆ ॥೧೨೬॥

ಅರಸ, ಅರೂಪ, ಅಗಂಧ, ಅವ್ಯಕ್ತ, ಅಶಬ್ದಮೇಣ್ ಅನಿರ್ದಿಷ್ಟ-ಸಂಸ್ಥಾನ ।
ಇರೆ ಚೇತನಾಗುಣವುಳ್ಳ, ಇಂದ್ರಿಯಗ್ರಾಹ್ಯವಿಲ್ಲದನು ಜೀವವೆಂದರಿವುದು ॥೧೨೭॥

---

೧. ಹಿತ ಮತ್ತು ಅಹಿತದ ಸಂಬಂಧದಲ್ಲಿ ಆಚಾರ್ಯಶ್ರೇಷ್ಠ ಶ್ರೀ ಜಯಸೇನಾಚಾರ್ಯಕೃತ ತಾತ್ಪರ್ಯವೃತ್ತಿಯೆಂಬ ಟೀಕೆಯಲ್ಲಿ ಈ ಕೆಳಗೆ ಹೇಳಿದ ಪ್ರಕಾರ ವಿವರಣೆಯಿದೆ-

ಅಜ್ಞಾನಿಯಾದ ಜೀವಗಳು ಹೂವಿನ ಮಾಲೆ, ಸ್ತ್ರೀ, ಚಂದನ ಮೊದಲಾದುವಕ್ಕೆ ಹಾಗೂ ಅವುಗಳಿಗೆ ಕಾರಣಭೂತಗಳಾದ ದಾನ-ಪೂಜಾದಿಗಳಿಗೆ ಹಿತವೆಂದು ತಿಳಿದುಕೊಳ್ಳುತ್ತವೆ ಮತ್ತು ಸರ್ಪ, ವಿಷ, ಕಂಟಕ ಮೊದಲಾದವುವಕ್ಕೆ ಅಹಿತವೆಂದು ತಿಳಿಯುತ್ತವೆ. ಸಮ್ಯಗ್ಜ್ಞಾನಿಗಳಾದ ಜೀವರುಗಳು ಅಕ್ಷಯ ಅನಂತ ಸುಖಕ್ಕೆ ಹಾಗೂ ಅದಕ್ಕೆ ಕಾರಣಭೂತವಾದ ನಿಶ್ಚಯ ರತ್ನತ್ರಯ ಪರಿಣತ ಪರಮಾತ್ಮ ದ್ರವ್ಯಕ್ಕೆ ಹಿತವೆಂದು ತಿಳಿಯುತ್ತಾರೆ ಮತ್ತು ಆಕುಲತೆಯ ಉತ್ಪಾದಕವಾದಂಥ ದುಃಖಕ್ಕೆ ಹಾಗೂ ಅದಕ್ಕೆ ಕಾರಣಭೂತವಾದ ಮಿಥ್ಯಾತ್ವರಾಗಾದಿ ಪರಿಣತ ಆತ್ಮದ್ರವ್ಯಕ್ಕೆ ಅಹಿತವೆಂದು ತಿಳಿಯುತ್ತಾರೆ.

ಸಂಸ್ಥಾನಾನಿ ಸಂಘಾತಾಃ ವರ್ಣರಸಸ್ಪರ್ಶಗಂಧಶಬ್ದಾಶ್ಚ ।
ಪುದ್ಗಲದ್ರವ್ಯಪ್ರಭಾವಾ ಭವಂತಿ ಗುಣಾಃ ಪರ್ಯಾಯಾಶ್ಚ ಬಹವಃ ॥೧೨೬॥

ಅರಸಮರೂಪಮಗಂಧಮವ್ಯಕ್ತಂ ಚೇತನಾಗುಣಮಶಬ್ದಮ್ ।
ಜಾನೀಹ್ಯಲಿಂಗಗ್ರಹಣಂ ಜೀವಮನಿರ್ದಿಷ್ಟಸಂಸ್ಥಾನಮ್ ॥೧೨೭॥

ಜೀವಪುದ್ಗಲಯೋಃ ಸಂಯೋಗೇऽಪಿ ಭೇದನಿಬಂಧನಸ್ವರೂಪಾಖ್ಯಾನಮೇತತ್ ।

ಯತ್ಖಲು ಶರೀರಶರೀರಿಸಂಯೋಗೇ ಸ್ಪರ್ಶರಸಗಂಧವರ್ಣಗುಣತ್ವಾತ್ಸಶಬ್ದತ್ವಾತ್ಸಂಸ್ಥಾನಸಂಘಾತಾದಿ-ಪರ್ಯಾಯಪರಿಣತತ್ವಾಚ್ಚ ಇಂದ್ರಿಯಗ್ರಹಣಯೋಗ್ಯಂ , ತತ್ಪುದ್ಗಲದ್ರವ್ಯಮ್ । ಯತ್ಪುನರಸ್ಪರ್ಶರಸಗಂಧವರ್ಣ-ಗುಣತ್ವಾದಶಬ್ದತ್ವಾದನಿರ್ದಿಷ್ಟಸಂಸ್ಥಾನತ್ವಾದವ್ಯಕ್ತತ್ವಾದಿಪರ್ಯಾಯೈಃ ಪರಿಣತತ್ವಾಚ್ಚ ನೇಂದ್ರಿಯಗ್ರಹಣಯೋಗ್ಯಂ , ತಚ್ಚೇತನಾಗುಣತ್ವಾತ್ ರೂಪಿಭ್ಯೋऽರೂಪಿಭ್ಯಶ್ಚಾಜೀವೇಭ್ಯೋ ವಿಶಿಷ್ಟಂ ಜೀವದ್ರವ್ಯಮ್ । ಏವಮಿಹ ಜೀವಾಜೀವಯೋರ್ವಾಸ್ತವೋ ಭೇದಃ ಸಮ್ಯಗ್ಜ್ಞಾನಿನಾಂ ಮಾರ್ಗಪ್ರಸಿದ್ಧ್ಯರ್ಥಂ ಪ್ರತಿಪಾದಿತ ಇತಿ ।

- ಇತಿ ಅಜೀವಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಮತ್ತು ಶಬ್ದ - [ಬಹೂ ಗುಣಾ ಪಜ್ಜಯಾ ಯ] ಹೀಗೆ ಯಾವ ಅನೇಕ ಗುಣಗಳು ಮತ್ತು ಪರ್ಯಾಯಗಳಿವೆ. [ಪೋಗ್ಗಲದವ್ವಪ್ಪಭವಾ ಹೋಂತಿ] ಅವು ಪುದ್ಗಲದ್ರವ್ಯ ನಿಷ್ಪನ್ನವಾಗಿವೆ.

[ಅರಸಮರೂವಮಗಂಧಂ] ಯಾವುದು ಅರಸ, ಅರೂಪ ಮತ್ತು ಅಗಂಧವಿದೆ [ಅವ್ವತ್ತಂ] ಅವ್ಯಕ್ತವಿದೆ, [ಅಸದ್ದಂ] ಅಶಬ್ದವಿದೆ, [ಅಣಿದ್ದಿಟ್ಠಸಂತಾಣಂ] ಅನಿರ್ದಿಷ್ಟ-ಸಂಸ್ಥಾನವಿದೆ (ಎಂದರೆ ಅದರದು ಯಾವುದೇ ಸಂಸ್ಥಾನವನ್ನು ಹೇಳಲು ಬರುವಂತಿಲ್ಲ), [ಚೇದಣಾಗುಣಂ] ಚೇತನಾಗುಣವುಳ್ಳದ್ದಿದೆ ಮತ್ತು [ಅಲಿಂಗಗ್ಗಹಣಂ] ಇಂದ್ರಿಯಗಳ ಮುಖಾಂತರ ಅಗ್ರಾಹ್ಯವಿದೆ [ಜೀವಂ ಜಾಣ] ಅದಕ್ಕೆ ಜೀವವೆಂದು ತಿಳಿಯುವುದು.

ಟೀಕೆ :- ಜೀವವು ಪುದ್ಗಲಗಳ ಸಂಯೋಗದಲ್ಲೂ ಕೂಡ, ಅವುಗಳ ಭೇದದ ಕಾರಣಭೂತ ಸ್ವರೂಪದ ಕಥನವು ಇದಾಗಿದೆ (ಎಂದರೆ ಜೀವ ಮತ್ತು ಪುದ್ಗಲಗಳ ಸಂಯೋಗದಲ್ಲೂ ಕೂಡ ಯಾವುದರ ಮುಖಾಂತರ ಅವುಗಳ ಭೇದವನ್ನು ತಿಳಿದುಕೊಳ್ಳುವ ಸಾಧ್ಯತೆಯಿದೆ ಅಂಥ ಅವುಗಳ ಭಿನ್ನ-ಭಿನ್ನ ಸ್ವರೂಪದ ಕಥನವು ಇದಾಗಿದೆ.)

ಶರೀರ ಮತ್ತು ಶರೀರಿ [೧]ಯ ಸಂಯೋಗದಲ್ಲಿ೧) ಯಾವುದು ವಾಸ್ತವಿಕವಾಗಿ ಸ್ಪರ್ಶ-ರಸ-ಗಂಧ-ವರ್ಣ ಗುಣಗಳುಳ್ಳದ್ದಿರುವ ಕಾರಣ, ಸಶಬ್ದವಿರುವ ಕಾರಣ ಮತ್ತು ಸಂಸ್ಥಾನಸಂಘಾತ ಮೊದಲಾದ ಪರ್ಯಾಯಗಳ ರೂಪದಿಂದ ಪರಿಣತವಿರುವ ಕಾರಣ ಇಂದ್ರಿಯ ಗ್ರಹಣಯೋಗ್ಯವಿದೆ ಅದು ಪುದ್ಗಲದ್ರವ್ಯವಿದೆ ; ಮತ್ತು ೨) ಯಾವುದು ಸ್ಪರ್ಶ-ರಸ-ಗಂಧ-ವರ್ಣ ಗುಣಗಳಿಂದ ರಹಿತವಿರುವ ಕಾರಣ, ಅಶಬ್ದವಿರುವ ಕಾರಣ, ಅನಿರ್ದಿಷ್ಟ ಸಂಸ್ಥಾನವಿರುವ ಕಾರಣ ಮತ್ತು ಅವ್ಯಕ್ತತ್ವಾದಿ[೨] ಪರ್ಯಾಯಗಳ ರೂಪದಿಂದ ಪರಿಣತವಿರುವ ಕಾರಣ

---

೧. ಶರೀರಿ = ದೇಹಿ ; ಶರೀರವುಳ್ಳವ (ಎಂದರೆ ಆತ್ಮ),

೨. ಅವ್ಯಕ್ತತ್ವಾದಿ - ಅವ್ಯಕ್ತ ಮೊದಲಾದ ; ಅಪ್ರಗಟತ್ವ ಮೊದಲಾದ.

ಉಕ್ತೌ ಮೂಲಪದಾರ್ಥೌ । ಅಥ ಸಂಯೋಗಪರಿಣಾಮನಿವೃತ್ತೇತರಸಪ್ತಪದಾರ್ಥಾನಾಮು-ಪೋದ್ಘಾತಾರ್ಥಂ ಜೀವಪುದ್ಗಲಕರ್ಮಚಕ್ರಮನುವರ್ಣ್ಯತೇ-

ಜೋ ಖಲು ಸಂಸಾರತ್ಥೋ ಜೀವೋ ತತ್ತೋ ದು ಹೋದಿ ಪರಿಣಾಮೋ ।
ಪರಿಣಾಮಾದೋ ಕಮ್ಮಂ ಕಮ್ಮಾದೋ ಹೋದಿ ಗದಿಸು ಗದೀ ॥೧೨೮॥

ಗದಿಮಧಿಗದಸ್ಸ ದೇಹೋ ದೇಹಾದೋ ಇಂದಿಯಾಣಿ ಜಾಯಂತೇ ।
ತೇಹಿಂ ದು ವಿಸಯಗ್ಗಹಣಂ ತತ್ತೋ ರಾಗೋ ವ ದೋಸೋ ವಾ ॥೧೨೯॥

ಇಂದ್ರಿಯಗ್ರಹಣ ಯೋಗ್ಯವಿಲ್ಲ ಅದು ಚೇತನಾಗುಣಮಯತ್ವದ ಕಾರಣ ರೂಪಿ ಮತ್ತು ಅರೂಪಿ ಅಜೀವಗಳಿಂದ ವಿಶಿಷ್ಟ[೧](ಭಿನ್ನ)ವಾದಂಥ ಜೀವದ್ರವ್ಯವಿದೆ.

ಈ ಪ್ರಕಾರ ಇಲ್ಲಿ ಜೀವ ಮತ್ತು ಅಜೀವದ ವಾಸ್ತವಿಕ ಭೇದ ಸಮ್ಯಗ್ಜ್ಞಾನಿಗಳ ಮಾರ್ಗದ ಪ್ರಸಿದ್ಧಿಯ ಕುರಿತು ಪ್ರತಿಪಾದನೆ ಮಾಡಲಾಯಿತು.

[ಭಾವಾರ್ಥ :- ಅನಾದಿಯಿಂದ ಮಿಥ್ಯಾವಾಸನೆಯ ಕಾರಣ ಜೀವರುಗಳಿಗೆ ತಾನು ಯಾರು ಎಂಬುದರ ವಾಸ್ತವಿಕ ಜ್ಞಾನವಿಲ್ಲ ಮತ್ತು ತಮ್ಮನ್ನು ಶರೀರ ಮೊದಲಾದವುಗಳ ರೂಪವಾಗಿ ಮನ್ನಿಸುತ್ತಾರೆ. ಅವರಿಗೆ ಜೀವದ್ರವ್ಯ ಮತ್ತು ಅಜೀವದ್ರವ್ಯದ ಯಥಾರ್ಥ ಭೇದವನ್ನು ತಿಳಿಸಿ ಮುಕ್ತಿಯಮಾರ್ಗವನ್ನು ಪ್ರಾಪ್ತ ಮಾಡಿಸುವ ಉದ್ದೇಶದಿಂದ ಇಲ್ಲಿ ಜಡ ಪುದ್ಗಲ-ದ್ರವ್ಯದ ಮತ್ತು ಚೇತನ ಜೀವದ್ರವ್ಯದ ವೀತರಾಗ ಸರ್ವಜ್ಞ ಕಥಿತ ಲಕ್ಷಣವನ್ನು ಹೇಳಲಾಯಿತು. ಯಾವ ಜೀವನು ಆ ಲಕ್ಷಣಗಳನ್ನು ತಿಳಿದುಕೊಂಡು ತನ್ನನ್ನು ಸ್ವತಃಸಿದ್ಧ ಸ್ವತಂತ್ರದ್ರವ್ಯರೂಪದಿಂದ ಗುರುತಿಸಿ, ಭೇದವಿಜ್ಞಾನಿ ಅನುಭವಿಯಾಗುತ್ತಾನೆ ಅವನು ತನ್ನ ಆತ್ಮದ್ರವ್ಯದಲ್ಲಿ ಲೀನನಾಗಿ ಮೋಕ್ಷಮಾರ್ಗವನ್ನು ಸಾಧಿಸಿ ಶಾಶ್ವತವೂ, ನಿರಾಕುಲವೂ ಆದ ಸುಖದ ಭೋಕ್ತವಾಗುತ್ತಾನೆ.]

ಈ ಪ್ರಕಾರವಾಗಿ ಅಜೀವಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

ಎರಡು ಮೂಲಪದಾರ್ಥಗಳನ್ನು ಹೇಳಲಾಯಿತು. ಈಗ (ಅವುಗಳ) ಸಂಯೋಗ ಪರಿಣಾಮದಿಂದ ನಿಷ್ಪನ್ನವಾಗುವಂಥ ಇತರ ಏಳು ಪದಾರ್ಥಗಳ ಉಪೋದ್ಘಾತದ ಹೇತುವಾಗಿ ಜೀವಕರ್ಮ ಮತ್ತು ಪುದ್ಗಲ ಕರ್ಮದ ಚಕ್ರದ ವರ್ಣನೆಯನ್ನು ಮಾಡಲಾಗುತ್ತದೆ.

ಪ್ರಪಂಚಗತ ಯಾವ ಜೀವವಿದೆಯದಕೆ ನಿಜದಿ ಪರಿಣಾಮವಾಗುವುದು ।
ಆ ಪರಿಣಾಮದಿಂದಕರ್ಮ, ಕರ್ಮದಿಂ ಗತಿಗಳಲಿ ಗಮನವಾಗುವುದು ॥೧೨೮॥

ಆ ಗತಿಪ್ರಾಪ್ತಿಯಿಂ ದೇಹವಾಗುವುದು, ದೇಹದಿಂ ಇಂದ್ರಿಯಗಳುಂಟಾಗುವವು ।
ಆಗ ಅವುಗಳಿಂ ವಿಷಯಗ್ರಹಣ, ಅದರಿಂದರಾಗದ್ವೇಷವಾಗುವವು ॥೧೨೯॥

---

೧. ವಿಶಿಷ್ಟ = ಭಿನ್ನ ; ವಿಲಕ್ಷಣ ; ಮುಖ್ಯ ಪ್ರಕಾರದ

ಜಾಯದಿ ಜೀವಸ್ಸೇವಂ ಭಾವೋ ಸಂಸಾರಚಕ್ಕವಾಲಮ್ಮಿ ।
ಇದಿ ಜಿಣವರೇಹಿಂ ಭಣಿದೋ ಅಣಾದಿಣಿಧಣೋ ಸಣಿಧಣೋ ವಾ ॥೧೩೦॥

ಯಃ ಖಲು ಸಂಸಾರಸ್ಥೋ ಜೀವಸ್ತತಸ್ತು ಭವತಿ ಪರಿಣಾಮಃ ।
ಪರಿಣಾಮಾತ್ಕರ್ಮ ಕರ್ಮಣೋ ಭವತಿ ಗತಿಷು ಗತಿಃ ॥೧೨೮॥
ಗತಿಮಧಿಗತಸ್ಯ ದೇಹೋ ದೇಹಾದಿಂದ್ರಿಯಾಣಿ ಜಾಯಂತೇ ।
ತೈಸ್ತು ವಿಷಯಗ್ರಹಣಂ ತತೋ ರಾಗೋ ವಾ ದ್ವೇಷೋ ವಾ ॥೧೨೯॥
ಜಾಯತೇ ಜೀವಸ್ಯೈವಂ ಭಾವಃ ಸಂಸಾರಚಕ್ರವಾಲೇ ।
ಇತಿ ಜಿನವರೈರ್ಭಣಿತೋಽನಾದಿನಿಧನಃ ಸನಿಧನೋ ವಾ ॥೧೩೦॥

ಇಹ ಹಿ ಸಂಸಾರಿಣೋ ಜೀವಾದನಾದಿಬಂಧನೋಪಾಧಿವಶೇನ ಸ್ನಿಗ್ಧಃ ಪರಿಣಾಮೋ ಭವತಿ । ಪರಿಣಾಮಾತ್ಪುನಃ ಪುದ್ಗಲಪರಿಣಾಮಾತ್ಮಕಂ ಕರ್ಮ । ಕರ್ಮಣೋ ನಾರಕಾದಿಗತಿಷು ಗತಿಃ। ಗತ್ಯಧಿಗಮನಾದ್ದೇಹಃ। ದೇಹಾದಿಂದ್ರಿಯಾಣಿ। ಇಂದ್ರಿಯೇಭ್ಯೋ ವಿಷಯಗ್ರಹಣಮ್ । ವಿಷಯಗ್ರಹಣಾದ್ರಾಗದ್ವೇಷೌ । ರಾಗದ್ವೇಷಾಭ್ಯಾಂ

ಗಾಥೆ - ೧೨೮-೧೩೦

ಗಾಥಾರ್ಥ ಃ- [ಜೋ] ಯಾವುದು [ಖಲು] ನಿಜವಾಗಿ [ಸಂಸಾರತ್ಥೋ ಜೀವೋ] ಸಂಸಾರದಲ್ಲಿ ಸ್ಥಿರವಾದ ಜೀವವಿದೆ [ತತ್ತೋ ದು ಪರಿಣಾಮೋ ಹೋದಿ] ಅದರಿಂದ ಪರಿಣಾಮಗಳಾಗುತ್ತವೆ (ಎಂದರೆ ಅದಕ್ಕೆ ಸ್ನಿಗ್ಧ ಪರಿಣಾಮಗಳಾಗುತ್ತವೆ), [ಪರಿಣಾಮಾದೋ ಕಮ್ಮಂ] ಪರಿಣಾಮಗಳಿಂದ ಕರ್ಮ ಮತ್ತು [ಕಮ್ಮಾದೋ] ಕರ್ಮದಿಂದ [ಗದಿಸು ಗದೀ ಹೋದಿ] ಗತಿಗಳಲ್ಲಿ ಗಮನವಾಗುತ್ತದೆ.

[ಗದಿಮಧಿಗದಸ್ಸ ದೇಹೋ] ಗತಿಪ್ರಾಪ್ತವಾದ ಜೀವಕ್ಕೆ ದೇಹವಾಗುತ್ತದೆ. [ದೇಹಾದೋ ಇಂದಿಯಾಣಿ ಜಾಯಂತೇ] ದೇಹದಿಂದ ಇಂದ್ರಿಯಗಳಾಗುತ್ತವೆ [ತೇಹಿಂ ದು ವಿಸಯಗ್ಗಹಣಂ] ಇಂದ್ರಿಯಗಳಿಂದ ವಿಷಯಗ್ರಹಣ ಮತ್ತು [ತತ್ತೋ ರಾಗೋ ವ ದೋಸೋ ವಾ] ವಿಷಯಗ್ರಹಣದಿಂದ ರಾಗ ಅಥವಾ ದ್ವೇಷಗಳಾಗುತ್ತವೆ.

[ಏವಂ ಭಾವೋ] ಇಂಥ ಭಾವಗಳು [ಸಂಸಾರ ಚಕ್ಕವಾಲಮ್ಮಿ] ಸಂಸಾರ ಚಕ್ರದಲ್ಲಿ [ಜೀವಸ್ಸ] ಜೀವಕ್ಕೆ [ಅಣಾದಿಣಿಧಣೋ ಸನಿಧಣೋ ವಾ] ಅನಾದಿ-ಅನಂತ ಅಥವಾ ಅನಾದಿ-ಸಾಂತ [ಜಾಯದಿ] ಆಗುತ್ತಿರುತ್ತವೆ - [ಇದಿ ಜಿಣವರೇಹಿಂ ಭಣಿದೋ] ಎಂದು ಜಿನೇಶ್ವರರು ಹೇಳಿದ್ದಾರೆ.

ಟೀಕೆ ಃ- ಈ ಜಗತ್ತಿನಲ್ಲಿ ಸಂಸಾರೀ ಜೀವಕ್ಕೆ ಅನಾದಿ ಬಂಧನರೂಪ ಉಪಾಧಿಯ ವಶದಿಂದ ಸ್ನಿಗ್ಧ ಪರಿಣಾಮಗಳಾಗುತ್ತವೆ ; ಪರಿಣಾಮದಿಂದ ಪುದ್ಗಲ ಪರಿಣಾಮಾತ್ಮಕವಾದ ಕರ್ಮ, ಕರ್ಮದಿಂದ ನರಕ ಮೊದಲಾದ

ಜೀವಕ್ಕೆ ಸಂಸಾರ ಚಕ್ರದಲಿ ಅನಾದಿ - ಅನಂತವಿಲ್ಲವೆ ಅನಾದಿ - ಸಾಂತ ।
ಭಾವಗಳು ಈ ತೆರದಿ ಆಗುತ್ತಿರುವುವೆಂದು ಶ್ರೀ ಜಿನದೇವ ಪೇಳಿಹರು ॥೧೩೦॥

ಪುನಃ ಸ್ನಿಗ್ಧಃ ಪರಿಣಾಮಃ । ಪರಿಣಾಮಾತ್ಪುನಃ ಪುದ್ಗಲಪರಿಣಾಮಾತ್ಮಕಂ ಕರ್ಮ । ಕರ್ಮಣಃ ಪುನರ್ನಾರಕಾದಿಗತಿಷು ಗತಿಃ । ಗತ್ಯಧಿಗಮನಾತ್ಪುನರ್ದೇಹಃ । ದೇಹಾತ್ಪುನರಿಂದ್ರಿಯಾಣಿ । ಇಂದ್ರಿಯೇಭ್ಯಃ ಪುನರ್ವಿಷಯಗ್ರಹಣಮ್ । ವಿಷಯಗ್ರಹಣಾತ್ಪುನಾರಾಗದ್ವೇಷೌ । ರಾಗದ್ವೇಷಾಭ್ಯಾಂ ಪುನರಪಿ ಸ್ನಿಗ್ಧಃ ಪರಿಣಾಮಃ । ಏವಮಿದಮನ್ಯೋನ್ಯ-ಕಾರ್ಯಕಾರಣಭೂತಜೀವಪುದ್ಗಲಪರಿಣಾಮಾತ್ಮಕಂ ಕರ್ಮಜಾಲಂ ಸಂಸಾರಚಕ್ರೇ ಜೀವಸ್ಯಾನಾದ್ಯನಿಧನಂ ಅನಾದಿಸನಿಧನಂ ವಾ ಚಕ್ರವತ್ಪರಿವರ್ತತೇ । ತದತ್ರ ಪುದ್ಗಲಪರಿಣಾಮನಿಮಿತ್ತೋ ಜೀವಪರಿಣಾಮೋ ಜೀವಪರಿಣಾಮನಿಮಿತ್ತಃ ಪುದ್ಗಲಪರಿಣಾಮಶ್ಚವಕ್ಷ್ಯಮಾಣಪದಾರ್ಥಬೀಜತ್ವೇನ ಸಂಪ್ರಧಾರಣೀಯ ಇತಿ ।

ಗತಿಗಳಲ್ಲಿ ಗಮನ, ಗತಿಯ ಪ್ರಾಪ್ತಿಯಿಂದ ದೇಹ, ದೇಹದಿಂದ ಇಂದ್ರಿಯಗಳು, ಇಂದ್ರಿಯಗಳಿಂದ ವಿಷಯಗ್ರಹಣ, ವಿಷಯಗ್ರಹಣದಿಂದ ರಾಗದ್ವೇಷ, ರಾಗದ್ವೇಷಗಳಿಂದ ಮತ್ತೆ ಸ್ನಿಗ್ಧ ಪರಿಣಾಮ, ಪರಿಣಾಮದಿಂದ ಮತ್ತೆ ಪುದ್ಗಲ ಪರಿಣಾಮಾತ್ಮಕವಾದ ಕರ್ಮ, ಕರ್ಮದಿಂದ ಮತ್ತೆ ನರಕ ಮೊದಲಾದ ಗತಿಗಳಲ್ಲಿ ಗಮನ, ಗತಿಯ ಪ್ರಾಪ್ತಿಯಿಂದ ಮತ್ತೆ ದೇಹ, ದೇಹದಿಂದ ಮತ್ತೆ ಇಂದ್ರಿಯಗಳು, ಇಂದ್ರಿಯಗಳಿಂದ ಮತ್ತೆ ವಿಷಯಗ್ರಹಣ, ವಿಷಯಗ್ರಹಣದಿಂದ ಮತ್ತೆ ರಾಗದ್ವೇಷ ರಾಗದ್ವೇಷಗಳಿಂದ ಮತ್ತೆ ಸ್ನಿಗ್ಧಪರಿಣಾಮಗಳು. ಈ ಪ್ರಕಾರ ಅನ್ಯೋನ್ಯ ಕಾರ್ಯಕಾರಣಭೂತ [೧] ಜೀವಪರಿಣಾಮಾತ್ಮಕ ಮತ್ತು ಪುದ್ಗಲಪರಿಣಾಮಾತ್ಮಕ ಕರ್ಮಜಾಲವು ಸಂಸಾರಚಕ್ರದಲ್ಲಿ ಜೀವಕ್ಕೆ ಅನಾದಿ-ಅನಂತರೂಪದಿಂದ ಅಥವಾ ಅನಾದಿ-ಸಾಂತರೂಪದಿಂದ ಚಕ್ರದ ಹಾಗೆ ಪುನಃ ಪುನಃ ಆಗುತ್ತಿರುತ್ತದೆ.

ಹೀಗೆ ಇಲ್ಲಿ ಪುದ್ಗಲ ಪರಿಣಾಮಗಳು ಯಾವವುಗಳಿಗೆ ನಿಮಿತ್ತವಿವೆ ಅಂಥ ಜೀವಪರಿಣಾಮ ಮತ್ತು ಜೀವ ಪರಿಣಾಮಗಳು ಯಾವವುಗಳಿಗೆ ನಿಮಿತ್ತವಿವೆ ಅಂಥ ಪುದ್ಗಲ ಪರಿಣಾಮಗಳು ಈಗ ಹೇಳಲಾಗುವಂಥ (ಪುಣ್ಯ ಮೊದಲಾದ ಏಳು) ಪದಾರ್ಥಗಳಿಗೆ ಬೀಜರೂಪವಿವೆಯೆಂದು ತಿಳಿಯುವುದು. (ಎಂದು ಹೇಳಿದೆ)

ಭಾವಾರ್ಥ :- ಜೀವ ಮತ್ತು ಪುದ್ಗಲಗಳಿಗೆ ಪರಸ್ಪರ ನಿಮಿತ್ತ-ನೈಮಿತ್ತಿಕ ರೂಪದಿಂದ ಪರಿಣಾಮ-ಗಳಾಗುತ್ತವೆ. ಆ ಪರಿಣಾಮದ ಕಾರಣವಾಗಿ ಪುಣ್ಯ ಮೊದಲಾದ ಪದಾರ್ಥಗಳು ಉತ್ಪನ್ನವಾಗುತ್ತವೆ. ಅವುಗಳ ವರ್ಣನೆಯನ್ನು ಮುಂದಿನ ಗಾಥೆಗಳಲ್ಲಿ ಮಾಡಲಾಗುವುದು.

ಪ್ರಶ್ನೆ :- ಪುಣ್ಯ ಮೊದಲಾದ ಏಳು ಪದಾರ್ಥಗಳ ಪ್ರಯೋಜನವು ಜೀವ ಮತ್ತು ಅಜೀವ ಇವೆರಡರಿಂದಲೇ ಪೂರ್ಣವಾಗಿ ಹೋಗುತ್ತದೆ, ಏಕೆಂದರೆ ಅವು ಜೀವ ಮತ್ತು ಅಜೀವದ ಪರ್ಯಾಯಗಳೇ ಇವೆ. ಎಂದ ಮೇಲೆ ಮತ್ತೆ ಆ ಏಳು ಪದಾರ್ಥಗಳನ್ನೇಕೆ ಹೇಳಲಾಗುತ್ತಿದೆ ?

ಉತ್ತರ :- ಭವ್ಯರಿಗೆ ಹೇಯ ತತ್ತ್ವ ಮತ್ತು ಉಪಾದೇಯ ತತ್ತ್ವಗಳನ್ನು (ಎಂದರೆ ಹೇಯ ಮತ್ತು ಉಪಾದೇಯ ತತ್ತ್ವಗಳ ಸ್ವರೂಪ ಹಾಗೂ ಅವುಗಳ ಕಾರಣವನ್ನು ತಿಳಿಸಿಕೊಡುವ ಉದ್ದೇಶದಿಂದ ಅವುಗಳ ಕಥನವಿದೆ. ದುಃಖವು ಹೇಯತತ್ತ್ವವಿದ್ದು ಅದರ ಕಾರಣವು ಸಂಸಾರವಿದೆ, ಸಂಸಾರದ ಕಾರಣವು ಆಸ್ರವ ಮತ್ತು ಬಂಧ ಇವೆರಡಿವೆ (ಅಥವಾ ವಿಸ್ತಾರಪೂರ್ವಕ ಹೇಳಿದರೆ ಪುಣ್ಯ, ಪಾಪ, ಆಸ್ರವ ಮತ್ತು ಬಂಧ ಇವು ನಾಲ್ಕು ಇವೆ) ಮತ್ತು ಅವುಗಳ ಕಾರಣವು ಮಿಥ್ಯಾದರ್ಶನ-ಜ್ಞಾನ-ಚಾರಿತ್ರಗಳಿವೆ. ಸುಖವು ಉಪಾದೇಯ ತತ್ತ್ವವಿದೆ,

---

೧. ಕಾರ್ಯ ಎಂದರೆ ನೈಮಿತ್ತಿಕ ಮತ್ತು ಕಾರಣ ಎಂದರೆ ನಿಮಿತ್ತ. ಜೀವ ಪರಿಣಾಮಾತ್ಮಕ ಕರ್ಮ ಮತ್ತು ಪುದ್ಗಲ ಪರಿಣಾಮಾತ್ಮಕ ಕರ್ಮ ಇವು ಪರಸ್ಪರ ಕಾರ್ಯ ಕಾರಣಭೂತ ಎಂದರೆ ನೈಮಿತ್ತಿಕ-ನಿಮಿತ್ತಭೂತವಿವೆ, ಆ ಕರ್ಮಗಳು ಯಾವುದೇ ಜೀವಕ್ಕೆ ಅನಾದಿ - ಅನಂತ ಮತ್ತು ಇನ್ನಾವುದಕ್ಕೊ ಅನಾದಿ - ಸಾಂತವಿರುತ್ತವೆ.

ಅಥ ಪುಣ್ಯಪಾಪಪದಾರ್ಥವ್ಯಾಖ್ಯಾನಮ್ ।

ಮೋಹೋ ರಾಗೋ ದೋಸೋ ಚಿತ್ತಪಸಾದೋ ಯ ಜಸ್ಸ ಭಾವಮ್ಮಿ ।
ವಿಜ್ಜದಿ ತಸ್ಸ ಸುಹೋ ವಾ ಅಸುಹೋ ವಾ ಹೋದಿ ಪರಿಣಾಮೋ ॥೧೩೧॥

ಮೋಹೋ ರಾಗೋ ದ್ವೇಷಶ್ಚಿತ್ತಪ್ರಸಾದಃ ವಾ ಯಸ್ಯ ಭಾವೇ ।
ವಿದ್ಯತೇ ತಸ್ಯ ಶುಭೋ ವಾ ಅಶುಭೋ ವಾ ಭವತಿ ಪರಿಣಾಮಃ ॥೧೩೧॥

ಅದರ ಕಾರಣವು ಮೋಕ್ಷವಿದೆ, ಮೋಕ್ಷದ ಕಾರಣವು ಸಂವರ ಮತ್ತು ನಿರ್ಜರೆಗಳಿವೆ ಮತ್ತು ಅವುಗಳ ಕಾರಣವು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳಿವೆ. ಈ ಪ್ರಯೋಜನಭೂತವಾದ ಮಾತನ್ನು ಭವ್ಯಜೀವಿಗಳಿಗೆ ಪ್ರಕಟರೂಪದಿಂದ ತಿಳಿಸಿಕೊಡುವ ಉದ್ದೇಶವಾಗಿ ಪುಣ್ಯ ಮೊದಲಾದ ಏಳು [೧] ಪದಾರ್ಥಗಳ ಕಥನವಿದೆ.

ಈಗ ಪುಣ್ಯ-ಪಾಪ ಪದಾರ್ಥದ ವ್ಯಾಖ್ಯಾನವಿದೆ.

ಗಾಥಾ - ೧೩೧

ಗಾಥಾರ್ಥ :- [ಜಸ್ಸ ಭಾವಮ್ಮಿ] ಯಾವ ಭಾವದಲ್ಲಿ (ಮೋಹೋ) ಮೋಹ, [ರಾಗೋ] ರಾಗ, [ದೋಸೋ] ದ್ವೇಷ, [ಯ] ಅಥವಾ [ಚಿತ್ತಪಸಾದೋ] ಚಿತ್ತದ ಪ್ರಸನ್ನತೆ [ವಿಜ್ಜದಿ] ಇರುತ್ತದೆ. [ತಸ್ಸ] ಅವನಿಗೆ [ಸುಹೋ ವಾ ಅಸುಹೋ ವಾ] ಶುಭ ಅಥವಾ ಅಶುಭ [ಪರಿಣಾಮೋ] ಪರಿಣಾಮಗಳು [ಹೋದಿ] ಆಗುತ್ತವೆ.

ಯಾವನ ಭಾವದಲಿ ಮೋಹ, ರಾಗ, ದ್ವೇಷವಿಲ್ಲವೆ ಚಿತ್ತದ ಪ್ರಸನ್ನತೆಯಿದೆ ।
ಅವನಿಗೆ ಶುಭವಿಲ್ಲವೆ ಅಶುಭ ಪರಿಣಾಮಗಳ ಸದ್ಭಾವವಿರುವುದು ॥೧೩೧॥

---

೧. ಅಜ್ಞಾನಿ ಮತ್ತು ಜ್ಞಾನಿ ಜೀವಗಳು ಪುಣ್ಯ ಮೊದಲಾದ ಏಳು ಪದಾರ್ಥಗಳಲ್ಲಿ ಯಾವ ಯಾವ ಪದಾರ್ಥಗಳ ಕರ್ತೃಗಳಿದ್ದಾರೆಂಬುದರ ಸಂಬಂಧದಲ್ಲಿ ಶ್ರೀ ಜಯಸೇನಾಚಾರ್ಯದೇವಕೃತ ತಾತ್ಪರ್ಯವೃತ್ತಿಯೆಂಬ ಟೀಕೆಯಲ್ಲಿ ಹೀಗೆ ವರ್ಣನೆಯಿದೆ,-

ಅಜ್ಞಾನಿ ಜೀವನು ನಿರ್ವಿಕಾರ ಸ್ವಸಂವೇದನದ ಅಭಾವದ ಕಾರಣ ಪಾಪ ಪದಾರ್ಥದ ಹಾಗೂ ಆಸ್ರವ ಬಂಧ-ಪದಾರ್ಥಗಳ ಕರ್ತೃವಾಗುತ್ತಾನೆ ; ಒಮ್ಮೊಮ್ಮೆ ಮಂದಮಿಥ್ಯಾತ್ವದ ಉದಯದಿಂದ, ನೋಡಿದ - ಕೇಳಿದ - ಅನುಭವಿಸಿದ ಭೋಗಗಳ ಆಕಾಂಕ್ಷೆಯರೂಪ ನಿದಾನ ಬಂಧದಿಂದ, ಭವಿಷ್ಯ ಕಾಲದಲ್ಲಿ ಪಾಪದ ಅನುಬಂಧ ಮಾಡುವಂಥ ಪುಣ್ಯ-ಪದಾರ್ಥದ್ದೂ ಕರ್ತೃವಾಗುತ್ತಾನೆ. ಯಾವ ಜ್ಞಾನಿ ಜೀವನಿದ್ದಾನೆ ಅವನು ನಿರ್ವಿಕಾರ-ಆತ್ಮತತ್ತ್ವವಿಷಯದ ರುಚಿ, ಆ ವಿಷಯದ ಜ್ಞಪ್ತಿ ಮತ್ತು ಆ ವಿಷಯದ ನಿಶ್ಚಲ ಅನುಭೂತಿರೂಪ ಅಭೇದರತ್ನತ್ರಯ ಪರಿಣಾಮದಿಂದ ಸಂವರ-ನಿರ್ಜರೆ-ಮೋಕ್ಷ ಪದಾರ್ಥಗಳ ಕರ್ತೃವಾಗುತ್ತಾನೆ ; ಮತ್ತು ಜೀವವು ಯಾವಾಗ ಪೂರ್ವೋಕ್ತ ನಿಶ್ಚಯ ರತ್ನತ್ರಯದಲ್ಲಿ ಸ್ಥಿರವುಳಿಯುವುದಿಲ್ಲ ಆಗ ನಿರ್ದೋಷ ಪರಮಾತ್ಮಸ್ವರೂಪ ಅರಹಂತ-ಸಿದ್ಧರ ಮತ್ತು ಅವರ (ನಿರ್ದೋಷ ಪರಮಾತ್ಮನ) ಆರಾಧನೆ ಮಾಡುವಂಥ ಆಚಾರ್ಯ ಉಪಾಧ್ಯಾಯ-ಸಾಧುಗಳ ನಿರ್ಭರ ಅಸಾಧಾರಣ ಭಕ್ತಿರೂಪದಂಥ ಯಾವ ಸಂಸಾರ ವಿಚ್ಛೇದಕ್ಕೆ ಕಾರಣಭೂತ, ಪರಂಪರೆಯಿಂದ ಮುಕ್ತಿಗೆ ಕಾರಣಭೂತ, ತೀರ್ಥಂಕರ ಮೊದಲಾದ ಪುಣ್ಯದ ಅನುಬಂಧ ಮಾಡುವಂಥ ವಿಶಿಷ್ಟ ಪುಣ್ಯವಿದೆ ಅದನ್ನು ಅನೀಹಿತ ವೃತ್ತಿಯಲ್ಲಿ ನಿದಾನ ರಹಿತ ಪರಿಣಾಮದಿಂದ ಮಾಡುತ್ತಾನೆ. ಹೀಗೆ ಅಜ್ಞಾನಿ ಜೀವನು ಪಾಪ ಮೊದಲಾದ ನಾಲ್ಕು ಪದಾರ್ಥಗಳ ಕರ್ತೃವಿದ್ದಾನೆ ಮತ್ತು ಜ್ಞಾನಿ ಜೀವನು ಸಂವರ ಮೊದಲಾದ ಮೂರು ಪದಾರ್ಥಗಳ ಕರ್ತೃವಿದ್ದಾನೆ.

ಪುಣ್ಯಪಾಪಯೋಗ್ಯಭಾವಸ್ವಭಾವಾಖ್ಯಾಪನಮೇತತ್ ।

ಇಹ ಹಿ ದರ್ಶನಮೋಹನೀಯವಿಪಾಕಕಲುಷಪರಿಣಾಮತಾ ಮೋಹಃ । ವಿಚಿತ್ರಚಾರಿತ್ರಮೋಹನೀಯ-ವಿಪಾಕಪ್ರತ್ಯಯೇ ಪ್ರೀತ್ಯಪ್ರೀತೀ ರಾಗದ್ವೇಷೌ । ತಸ್ಯೈವ ಮಂದೋದಯೇ ವಿಶುದ್ಧಪರಿಣಾಮತಾ ಚಿತ್ತಪ್ರಸಾದ-ಪರಿಣಾಮಃ । ಏವಮಿಮೇ ಯಸ್ಯ ಭಾವೇ ಭವಂತಿ, ತಸ್ಯಾವಶ್ಯಂ ಭವತಿ ಶುಭೋಽಶುಭೋ ವಾ ಪರಿಣಾಮಃ । ತತ್ರ ಯತ್ರ ಪ್ರಶಸ್ತರಾಗಶ್ಚಿತ್ತಪ್ರಸಾದಶ್ಚ ತತ್ರ ಶುಭಃ ಪರಿಣಾಮಃ, ಯತ್ರ ತು ಮೋಹದ್ವೇಷಾವಪ್ರಶಸ್ತರಾಗಶ್ಚ ತತ್ರಾಽಶುಭ ಇತಿ ।

ಸುಹಪರಿಣಾಮೋ ಪುಣ್ಣಂ ಅಸುಹೋ ಪಾವಂ ತಿ ಹವದಿ ಜೀವಸ್ಸ ।
ದೋಣ್ಹಂ ಪೋಗ್ಗಲಮೇತ್ತೋ ಭಾವೋ ಕಮ್ಮತ್ತಣಂ ಪತ್ತೋ ॥೧೩೨॥

ಶುಭಪರಿಣಾಮಃ ಪುಣ್ಯಮಶುಭಃ ಪಾಪಮಿತಿ ಭವತಿ ಜೀವಸ್ಯ ।
ದ್ವಯೋಃ ಪುದ್ಗಲಮಾತ್ರೋ ಭಾವಃ ಕರ್ಮತ್ವಂ ಪ್ರಾಪ್ತಃ ॥೧೩೨॥

ಟೀಕೆ :- ಇದು ಪುಣ್ಯ-ಪಾಪಗಳ ಯೋಗ್ಯ ಭಾವದ ಸ್ವಭಾವದ (ಸ್ವರೂಪದ) ಕಥನವಿದೆ.

ಇಲ್ಲಿ ದರ್ಶನ ಮೋಹನೀಯದ ವಿಪಾಕದಿಂದ ಯಾವ ಕಲುಷಿತವಾದ ಪರಿಣಾಮಗಳಾಗುತ್ತವೆ ಅದು ಮೋಹವಿದೆ ; ವಿಚಿತ್ರ (-ಅನೇಕ ಪ್ರಕಾರದ) ಚಾರಿತ್ರಮೋಹನೀಯದ ವಿಪಾಕವು ಯಾವುದರ ಆಶ್ರಯ (ನಿಮಿತ್ತ)ವಿದೆ ಅಂಥ ಪ್ರೀತಿ-ಅಪ್ರೀತಿಗಳು ಅವು ರಾಗ-ದ್ವೇಷಗಳಿವೆ ; ಅದರದೇ (ಚಾರಿತ್ರಮೋಹನೀಯದ್ದೇ) ಮಂದವಾದ ಉದಯದಿಂದ ಆಗುವಂಥ ಯಾವ ವಿಶುದ್ಧ ಪರಿಣಾಮವು ಅದು ಚಿತ್ತಪ್ರಸಾದ ಪರಿಣಾಮ[೧]ವಿದೆ. (ಮನಸ್ಸಿನ ಪ್ರಸನ್ನತೆಯ ರೂಪವಾದ ಪರಿಣಾಮವಿದೆ) ಈ ಪ್ರಕಾರವಾಗಿ ಇದು (ಮೋಹ, ರಾಗ, ದ್ವೇಷ ಅಥವಾ ಚಿತ್ತಪ್ರಸಾದವು) ಯಾವನ ಭಾವದಲ್ಲಿದೆ ಅವನಿಗೆ ಅವಶ್ಯವಾಗಿ ಶುಭ ಅಥವಾ ಅಶುಭ ಪರಿಣಾಮಗಳಿವೆ. ಅದರಲ್ಲಿ ಎಲ್ಲಿ ಪ್ರಶಸ್ತರಾಗ ಹಾಗೂ ಚಿತ್ತಪ್ರಸಾದವಿದೆ ಅಲ್ಲಿ ಶುಭ ಪರಿಣಾಮವಿದೆ ಮತ್ತು ಎಲ್ಲಿ ಮೋಹ, ದ್ವೇಷ ಹಾಗೂ ಅಪ್ರಶಸ್ತರಾಗವಿದೆ ಅಲ್ಲಿ ಅಶುಭ ಪರಿಣಾಮವಿದೆ.

ಜೀವದ ಶುಭ ಪರಿಣಾಮ ಪುಣ್ಯವಿದ್ದರೆ ಅಶುಭ ಪರಿಣಾಮ ಪಾಪವಿದೆ ।
ಅವೆರಡರಿಂದ ಪೌದ್ಗಲಿಕ ಪರಿಣಾಮ ಕರ್ಮತ್ವವನು ಪಡೆಯುವುದು ॥೧೩೨॥

[ಇಲ್ಲಿ ಜ್ಞಾನಿಯ ವಿಶಿಷ್ಟ ಪುಣ್ಯವನ್ನು ಸಂಸಾರ ವಿಚ್ಛೇದಕ್ಕೆ ಕಾರಣಭೂತವೆಂದು ಹೇಳಿರುವ ಆಶಯವನ್ನು ಹೀಗೆ ತಿಳಿದುಕೊಳ್ಳಬೇಕು - ನಿಜವಾಗಿಯಂತೂ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳೇ ಸಂಸಾರ ವಿಚ್ಛೇದಕ್ಕೆ ಕಾರಣಭೂತವಿವೆ ; ಆದರೆ ಯಾವಾಗ ಆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳು ಅಪೂರ್ಣಾವಸ್ಥೆಯಲ್ಲಿರುತ್ತವೆ ಆಗ ಅದರೊಡನೆ ಅನಿಚ್ಛಿತ ವೃತ್ತಿಯಿಂದ ವರ್ತಿಸುತ್ತಿರುವ ವಿಶಿಷ್ಟ ಪುಣ್ಯದಲ್ಲಿ ಸಂಸಾರ ವಿಚ್ಛೇದದ ಕಾರಣತನದ ಆರೋಪ ಮಾಡಲಾಗುತ್ತದೆ. ಆ ಆರೋಪವು ವಾಸ್ತವಿಕ ಕಾರಣದ ಸಮ್ಯಗ್ದರ್ಶನಾದಿಗಳ - ಅಸ್ತಿತ್ವದಲ್ಲೇ ಆಗುವ ಸಾಧ್ಯತೆಯಿದೆ.]

೧. ಪ್ರಸಾದ = ಪ್ರಸನ್ನತೆ ; ವಿಶುದ್ಧತೆ ; ನಿರ್ಮಲತೆ.

ಪುಣ್ಯಪಾಪಸ್ವರೂಪಾಖ್ಯಾನಮೇತತ್ ।

ಜೀವಸ್ಯ ಕರ್ತುರ್ನಿಶ್ಚಯಕರ್ಮತಾಮಾಪನ್ನಃ ಶುಭಪರಿಣಾಮೋ ದ್ರವ್ಯಪುಣ್ಯಸ್ಯ ನಿಮಿತ್ತಮಾತ್ರತ್ವೇನ ಕಾರಣೀಭೂತತ್ವಾತ್ತದಾಸ್ರವಕ್ಷಣಾದೂರ್ಧ್ವಂ ಭವತಿ ಭಾವಪುಣ್ಯಮ್ । ಏವಂ ಜೀವಸ್ಯ ಕರ್ತುರ್ನಿಶ್ಚಯಕರ್ಮತಾಮಾಪನ್ನೋಽಶುಭಪರಿಣಾಮೋ ದ್ರವ್ಯಪಾಪಸ್ಯ ನಿಮಿತ್ತಮಾತ್ರತ್ವೇನ ಕಾರಣೀಭೂತತ್ವಾತ್ತದಾಸ್ರವಕ್ಷಣಾದೂರ್ಧ್ವಂ ಭಾವಪಾಪಮ್ । ಪುದ್ಗಲಸ್ಯ ಕರ್ತುರ್ನಿಶ್ಚಯಕರ್ಮತಾಮಾಪನ್ನೋ ವಿಶಿಷ್ಟಪ್ರಕೃತಿತ್ವಪರಿಣಾಮೋ ಜೀವಶುಭ-ಪರಿಣಾಮನಿಮಿತ್ತೋ ದ್ರವ್ಯಪುಣ್ಯಮ್ । ಪುದ್ಗಲಸ್ಯ ಕರ್ತುರ್ನಿಶ್ಚಯಕರ್ಮತಾಮಾಪನ್ನೋ ವಿಶಿಷ್ಟಪ್ರಕೃತಿತ್ವ-ಪರಿಣಾಮೋ ಜೀವಾಶುಭಪರಿಣಾಮನಿಮಿತ್ತೋ ದ್ರವ್ಯಪಾಪಮ್ । ಏವಂ ವ್ಯವಹಾರನಿಶ್ಚಯಾಭ್ಯಾಮಾತ್ಮನೋ ಮೂರ್ತಮಮೂರ್ತ ಚ ಕರ್ಮ ಪ್ರಜ್ಞಾಪಿತಮಿತಿ ।

ಗಾಥೆ - ೧೩೨

ಗಾಥಾರ್ಥ ಃ- [ಜೀವಸ್ಸ] ಜೀವದ [ಸುಹಪರಿಣಾಮೋ] ಶುಭ ಪರಿಣಾಮಗಳು [ಪುಣ್ಣಂ] ಪುಣ್ಯವಿದೆ. ಮತ್ತು [ಅಸುಹೋ] ಅಶುಭ ಪರಿಣಾಮಗಳು [ಪಾವಂ ತಿ ಹವದಿ] ಪಾಪವಿದೆ ; [ದೋಣ್ಹಂ] ಅವೆರಡರ ಮುಖಾಂತರ [ಪೋಗ್ಗಲಮೇತ್ತೋ ಭಾವೋ] ಪುದ್ಗಲಮಾತ್ರ ಭಾವಗಳು [ಕಮ್ಮತ್ತಣಂ ಪತ್ತೋ] ಕರ್ಮತನಕ್ಕೆ ಪ್ರಾಪ್ತವಾಗುತ್ತವೆ (ಎಂದರೆ ಜೀವದ ಪುಣ್ಯ-ಪಾಪಭಾವದ ನಿಮಿತ್ತದಿಂದ ಸಾತಾ-ಅಸಾತಾದ ವೇದನೀಯ ಮೊದಲಾದ ಪುದ್ಗಲಮಾತ್ರ ಪರಿಣಾಮಗಳು ವ್ಯವಹಾರದಿಂದ ಜೀವದ ಕರ್ಮಗಳೆಂದು ಹೇಳಲಾಗುತ್ತದೆ.)

ಟೀಕೆ ಃ- ಇದು ಪುಣ್ಯ-ಪಾಪಗಳ ಸ್ವರೂಪದ ಕಥನವಿದೆ.

ಜೀವರೂಪ ಕರ್ತೃವಿನ ನಿಶ್ಚಯ ಕರ್ಮಭೂತ[೧] ಶುಭ ಪರಿಣಾಮಗಳು ದ್ರವ್ಯ ಪುಣ್ಯಕ್ಕೆ ನಿಮಿತ್ತ ಮಾತ್ರರೂಪದಿಂದ ಕಾರಣಭೂತವಿರುವುದರಿಂದ 'ದ್ರವ್ಯ ಪುಣ್ಯಾಸ್ರವದ' ಪ್ರಸಂಗದ ಅನುಸರಣೆ ಮಾಡಿ (ಅನುಲಕ್ಷ್ಯ ಮಾಡಿ) ಆ ಶುಭ ಪರಿಣಾಮಗಳು 'ಭಾವಪುಣ್ಯ'ವಿವೆ. (ಸಾತಾವೇದನೀಯ ಮೊದಲಾದ ದ್ರವ್ಯ ಪುಣ್ಯಾಸ್ರವದ ಯಾವ ಪ್ರಸಂಗವಾಗುತ್ತದೆ ಅದರಲ್ಲಿ ಜೀವದ ಶುಭ ಪರಿಣಾಮಗಳು ನಿಮಿತ್ತಕಾರಣವಿರುವುದರಿಂದ 'ದ್ರವ್ಯಪುಣ್ಯಾಸ್ರವ'ದ ಪ್ರಸಂಗದ ಹಿಂದೆ-ಹಿಂದೆ ಅದರ ನಿಮಿತ್ತಭೂತವಾದ ಶುಭ ಪರಿಣಾಮಕ್ಕೂ 'ಭಾವಪುಣ್ಯ'ವೆಂಬ ಹೆಸರಿದೆ.) ಹೀಗೆ ಜೀವರೂಪ ಕರ್ತೃವಿನ ನಿಶ್ಚಯ ಕರ್ಮಭೂತ ಅಶುಭ ಪರಿಣಾಮಗಳು ದ್ರವ್ಯ ಪಾಪಕ್ಕೆ ನಿಮಿತ್ತ ಮಾತ್ರರೂಪದಿಂದ ಕಾರಣಭೂತವಿರುವುದರಿಂದ 'ದ್ರವ್ಯಪಾಪಾಸ್ರವದ' ಪ್ರಸಂಗದ ಅನುಸರಣೆ ಮಾಡಿ (ಅನುಲಕ್ಷ್ಯ ಮಾಡಿ) ಆ ಅಶುಭ ಪರಿಣಾಮಗಳು 'ಭಾವಪಾಪ'ವಿವೆ.

ಪುದ್ಗಲರೂಪ ಕರ್ತೃವಿನ ನಿಶ್ಚಯ ಕರ್ಮಭೂತ[೨] ವಿಶಿಷ್ಟ ಪ್ರಕೃತಿರೂಪ ಪರಿಣಾಮಗಳು (ಸಾತಾ-ವೇದನೀಯ ಮೊದಲಾದ ಮುಖ್ಯ ಪ್ರಕೃತಿರೂಪ ಪರಿಣಾಮಗಳು) - ಯಾವವುಗಳಲ್ಲಿ ಜೀವದ ಶುಭ ಪರಿಣಾಮಗಳು ನಿಮಿತ್ತವಿವೆ ಅವು-ದ್ರವ್ಯ ಪುಣ್ಯವಿವೆ. ಪುದ್ಗಲರೂಪ ಕರ್ತೃವಿನ ನಿಶ್ಚಯ ಕರ್ಮಭೂತ ವಿಶಿಷ್ಟ ಪ್ರಕೃತಿರೂಪ

---

೧. ಜೀವವು ಕರ್ತೃವಿದೆ ಮತ್ತು ಶುಭ ಪರಿಣಾಮವು ಅದರ (ಅಶುದ್ಧ ನಿಶ್ಚಯನಯದಿಂದ) ನಿಶ್ಚಯ ಕರ್ಮವಿದೆ.

೨. ಪುದ್ಗಲವು ಕರ್ತೃವಿದೆ ಮತ್ತು ವಿಶಿಷ್ಟ ಪ್ರಕೃತಿರೂಪ ಪರಿಣಾಮವು ಅದರ ನಿಶ್ಚಯ ಕರ್ಮವಿದೆ. (ಎಂದರೆ ನಿಶ್ಚಯದಿಂದ ಪುದ್ಗಲವು ಕರ್ತೃವಿದೆ ಮತ್ತು ಸಾತಾವೇದನೀಯಾದಿ ವಿಶಿಷ್ಟ ಪ್ರಕೃತಿರೂಪ ಪರಿಣಾಮವು ಅದರ ಕರ್ಮವಿದೆ.)

ಜಮ್ಹಾ ಕಮ್ಮಸ್ಸ ಫಲಂ ವಿಸಯಂ ಫಾಸೇಹಿಂ ಭುಂಜದೇ ಣಿಯದಂ ।
ಜೀವೇಣ ಸುಹಂ ದುಕ್ಖಂ ತಮ್ಹಾ ಕಮ್ಮಾಣಿ ಮುತ್ತಾಣಿ ॥೧೩೩॥

ಯಸ್ಮಾತ್ಕರ್ಮಣಃ ಫಲಂ ವಿಷಯಃ ಸ್ಪರ್ಶೈರ್ಭುಜ್ಯತೇ ನಿಯತಮ್ ।
ಜೀವೇನ ಸುಖಂ ದುಃಖಂ ತಸ್ಮಾತ್ಕರ್ಮಾಣಿ ಮೂರ್ತಾನಿ ॥೧೩೩॥

ಮೂರ್ತಕರ್ಮಸಮರ್ಥನಮೇತತ್ ।

ಯತೋ ಹಿ ಕರ್ಮಣಾಂ ಫಲಭೂತಃ ಸುಖದುಃಖಹೇತುವಿಷಯೋ ಮೂರ್ತೋ ಮೂರ್ತೈರಿಂದ್ರಿಯೈ-ರ್ಜೀವೇನ ನಿಯತಂ ಭುಜ್ಯತೇ, ತತಃ ಕರ್ಮಣಾಂ ಮೂರ್ತತ್ವಮನುಮೀಯತೇ । ತಥಾ ಹಿ-ಮೂರ್ತಂ ಕರ್ಮ, ಮೂರ್ತಸಂಬಂಧೇನಾನುಭೂಯಮಾನಮೂರ್ತಫಲತ್ವಾದಾಖುವಿಷವದಿತಿ ।

ಪರಿಣಾಮಗಳು (ಅಸಾತಾವೇದನೀಯ ಮೊದಲಾದ ವಿಶಿಷ್ಟ ಪ್ರಕೃತಿರೂಪ ಪರಿಣಾಮಗಳು) ಯಾವವುಗಳಲ್ಲಿ ಜೀವದ ಅಶುಭ ಪರಿಣಾಮಗಳು ನಿಮಿತ್ತವಿವೆ ಅವು - ದ್ರವ್ಯಪಾಪಗಳಿವೆ.

ಈ ಪ್ರಕಾರ ವ್ಯವಹಾರ ಮತ್ತು ನಿಶ್ಚಯದ ಮುಖಾಂತರ ಆತ್ಮನಿಗೆ ಮೂರ್ತ ಹಾಗೂ ಅಮೂರ್ತ ಕರ್ಮಗಳನ್ನು ದರ್ಶಿಸಲಾಯಿತು.

ಭಾವಾರ್ಥ :- ನಿಶ್ಚಯದಿಂದ ಜೀವದ ಅಮೂರ್ತ ಶುಭಾಶುಭ ಪರಿಣಾಮರೂಪ ಭಾವಪುಣ್ಯಪಾಪಗಳು ಜೀವದ ಕರ್ಮಗಳಿವೆ. ಶುಭಾಶುಭ ಪರಿಣಾಮಗಳು ದ್ರವ್ಯಪುಣ್ಯಪಾಪದ ನಿಮಿತ್ತ ಕಾರಣವಾಗುವುದರಿಂದ ಮೂರ್ತದಂಥ ಆ ಪುದ್ಗಲ ಪರಿಣಾಮರೂಪ (ಸಾತಾ-ಅಸಾತಾ ವೇದನೀಯ ಮೊದಲಾದ) ದ್ರವ್ಯಪುಣ್ಯ ಪಾಪಗಳು ವ್ಯವಹಾರದಿಂದ ಜೀವದ ಕರ್ಮಗಳೆಂದು ಹೇಳಲಾಗುತ್ತದೆ.

ಗಾಥೆ - ೧೩೩

ಗಾಥಾರ್ಥ :- [ಜಮ್ಹಾ] ಏಕೆಂದರೆ [ಕಮ್ಮಸ್ಸ ಫಲಂ] ಕರ್ಮದ ಫಲಭೂತವಾದ [ವಿಸಯಂ] ಯಾವ [ಮೂರ್ತ] ವಿಷಯಗಳಿವೆ ಅವು [ಣಿಯದಂ] ನಿಯಮದಿಂದ [ಫಾಸೇಹಿಂ] (ಮೂರ್ತದಂಥ) ಸ್ಪರ್ಶನೇಂದ್ರಿಯ ಮೊದಲಾದವುಗಳ ಮುಖಾಂತರ [ಜೀವೇಣ] ಜೀವದಿಂದ [ಸುಹಂ ದುಕ್ಖಂ] ಸುಖರೂಪ ಅಥವಾ ದುಃಖರೂಪದಿಂದ [ಭುಂಜದೇ] ಭೋಗಿಸಲಾಗುತ್ತವೆ. [ತಮ್ಹಾ] ಅದಕ್ಕಾಗಿ [ಕಮ್ಮಾಣಿ] ಕರ್ಮಗಳು [ಮುತ್ತಾಣಿ] ಮೂರ್ತವಿವೆ.

ಟೀಕೆ :- ಇದು ಕರ್ಮಗಳು ಮೂರ್ತವಿವೆಯೆಂಬುದರ ಸಮರ್ಥನೆಯಿದೆ.

ಸುಖ-ದುಃಖಗಳಿಗೆ ಹೇತುಭೂತವಾದ ಮೂರ್ತ ವಿಷಯಗಳು ಕರ್ಮದ ಫಲಗಳಿದ್ದು ಅವು ನಿಯಮದಿಂದ ಮೂರ್ತ ಇಂದ್ರಿಯಗಳ ಮುಖಾಂತರ ಜೀವದಿಂದ ಭೋಗಿಸಲ್ಪಡುವುದರಿಂದ ಕರ್ಮದ ಮೂರ್ತತನದ ಊಹೆ

ಕರ್ಮದ ಫಲಭೂತಮೂರ್ತವಿಷಯ ನಿಯಮದಿಂ ಸ್ಪರ್ಶಾದಿ ಇಂದ್ರಿಯಗಳಿಂದ ।
ಕರ್ಮಮೂರ್ತವಿವೆ, ಜೀವದಿಂ ಸುಖದುಃಖರೂಪವಾಗಿ ಭೋಗಿಸುವುದರಿಂದ ॥೧೩೩॥

ಮುತ್ತೋ ಫಾಸದಿ ಮುತ್ತಂ ಮುತ್ತೋ ಮುತ್ತೇಣ ಬಂಧಮಣುಹವದಿ ।
ಜೀವೋ ಮುತ್ತಿವಿರಹಿದೋ ಗಾಹದಿ ತೇ ತೇಹಿಂ ಉಗ್ಗಹದಿ ॥೧೩೪॥

ಮೂರ್ತಃ ಸ್ಪೃಶತಿ ಮೂರ್ತಂ ಮೂರ್ತೋ ಮೂರ್ತೇನ ಬಂಧಮನುಭವತಿ ।
ಜೀವೋ ಮೂರ್ತಿವಿರಹಿತೋ ಗಾಹತಿ ತಾನಿ ತೈರವಗಾಹ್ಯತೇ ॥೧೩೪॥

ಮೂರ್ತಕರ್ಮಣೋರಮೂರ್ತಜೀವಮೂರ್ತಕರ್ಮಣೋಶ್ಚಬಂಧ ಪ್ರಕಾರಸೂಚನೇಯಮ್ ।

ಇಹ ಹಿ ಸಂಸಾರಿಣಿ ಜೀವೇಽನಾದಿಸಂತಾನೇನ ಪ್ರವೃತ್ತಮಾಸ್ತೇ ಮೂರ್ತಕರ್ಮ । ತತ್ಸ್ಪರ್ಶಾದಿಮತ್ತ್ವಾದ್ಗಾಮಿ ಮೂರ್ತಕರ್ಮ ಸ್ಪೃಶತಿ, ತತಸ್ತನ್ಮೂರ್ತಂ ತೇನ ಸಹ ಸ್ನೇಹಗುಣವಶಾದ್ಬಂಧ-ಮನುಭವತಿ । ಏಷ ಮೂರ್ತಯೋಃ ಕರ್ಮಣೋರ್ಬಂಧಪ್ರಕಾರಃ । ಅಥ ನಿಶ್ಚಯನಯೇನಾಮೂರ್ತೋ ಜೀವೋಽನಾದಿಮೂರ್ತಕರ್ಮನಿಮಿತ್ತರಾಗಾದಿಪರಿಣಾಮಸ್ನಿಗ್ಧಃ ಸನ್ ವಿಶಿಷ್ಟತಯಾ ಮೂರ್ತಾನಿ ಕರ್ಮಾಣ್ಯವಗಾಹತೇ, ತತ್ಪರಿಣಾಮನಿಮಿತ್ತಲಬ್ಧಾತ್ಮಪರಿಣಾಮೈಃ ಮೂರ್ತಕರ್ಮಭಿರಪಿ ವಿಶಿಷ್ಟತಯಾಽವಗಾಹ್ಯತೇ ಚ । ಅಯಂ ತ್ವನ್ಯೋನ್ಯಾವಗಾಹಾತ್ಮಕೋ ಜೀವಮೂರ್ತಕರ್ಮಣೋರ್ಬಂಧಪ್ರಕಾರಃ । ಏವಮಮೂರ್ತಸ್ಯಾಪಿ

ಮಾಡಲಾಗುತ್ತದೆ. ಯಾವ ಪ್ರಕಾರ ಇಲಿಯ ವಿಷವು ಮೂರ್ತವಿದೆ ಅದೇ ಪ್ರಕಾರ ಕರ್ಮವು ಮೂರ್ತವಿದೆ, ಏಕೆಂದರೆ (ಇಲಿಯ ವಿಷದ ಫಲದಂತೆ) ಮೂರ್ತದಸಂಬಂಧದಿಂದ ಅನುಭವದಲ್ಲಿ ಬರುವಂಥ ಮೂರ್ತವು ಅದರ ಫಲವಿದೆ. ಇಲಿಯ ವಿಷದ ಫಲವು (ಶರೀರದಲ್ಲಿ ಬಾವು ಬರುವುದು, ಜ್ವರ ಬರುವುದು ಇತ್ಯಾದಿ) ಮೂರ್ತವಿದೆ ಮತ್ತು ಮೂರ್ತ ಶರೀರದ ಸಂಬಂಧದಿಂದ ಅನುಭವದಲ್ಲಿ ಬರುತ್ತದೆ - ಭೋಗಿಸಲಾಗುತ್ತದೆ. ಅದಕ್ಕಾಗಿ ಇಲಿಯ ವಿಷವು ಮೂರ್ತವಿದೆಯೆಂಬ ಅನುಮಾನಮಾಡಲಾಗುತ್ತದೆ ; ಅದೇ ಪ್ರಕಾರ ಕರ್ಮದ ಫಲವು (ವಿಷಯವು) ಮೂರ್ತವಿದೆ ಮತ್ತು ಮೂರ್ತ ಇಂದ್ರಿಯಗಳ ಸಂಬಂಧದಿಂದ ಅನುಭವದಲ್ಲಿ ಬರುತ್ತದೆ - ಭೋಗಿಸಲಾಗುತ್ತದೆ. ಅದಕ್ಕಾಗಿ ಕರ್ಮವು ಮೂರ್ತವಿದೆಯೆಂದು ಅನುಮಾನ ಮಾಡಲಾಗುತ್ತದೆ.)

ಗಾಥೆ - ೧೩೪

ಗಾಥಾರ್ಥ ಃ- [ಮುತ್ತೋ ಮುತ್ತಂ ಫಾಸದಿ] ಮೂರ್ತವು ಮೂರ್ತವನ್ನು ಸ್ಪರ್ಶ ಮಾಡುತ್ತದೆ. [ಮುತ್ತೋ ಮುತ್ತೇಣ] ಮೂರ್ತವು ಮೂರ್ತದೊಡನೆ [ಬಂಧಮಣುಹವದಿ] ಬಂಧಕ್ಕೆ ಪ್ರಾಪ್ತವಾಗುತ್ತದೆ; [ಮುತ್ತವಿರಹಿದೋ ಜೀವೋ] ಮೂರ್ತತ್ವವಿಲ್ಲದ ಜೀವವು [ತೇ ಗಾಹದಿ] ಮೂರ್ತ ಕರ್ಮಗಳಿಗೆ ಅವಗಾಹ ಕೊಡುತ್ತದೆ ಮತ್ತು [ತೇಹಿಂ ಉಗ್ಗಹದಿ] ಮೂರ್ತಕರ್ಮಗಳು ಜೀವಕ್ಕೆ ಅವಗಾಹ ಕೊಡುತ್ತವೆ (ಎಂದರೆ ಎರಡೂ ಒಂದು - ಇನ್ನೊಂದರಲ್ಲಿ ಅವಗಾಹವನ್ನು ಪ್ರಾಪ್ತಮಾಡಿಕೊಳ್ಳುತ್ತವೆ.)

ಟೀಕೆ ಃ- ಇದು ಮೂರ್ತಕರ್ಮದೊಡನೆ ಮೂರ್ತಕರ್ಮದ ಯಾವ ಬಂಧಪ್ರಕಾರವಿದೆ ಮತ್ತು ಮೂರ್ತಕರ್ಮದೊಡನೆ ಅಮೂರ್ತ ಜೀವದ ಯಾವ ಬಂಧ ಪ್ರಕಾರವಿದೆ ಅದರ ಸೂಚನೆಯಿದೆ.

ಮೂರ್ತಮೂರ್ತವ ಸ್ಪರ್ಶಿಪುದು ಮೂರ್ತಮೂರ್ತದೊಡನೆ ಬಂಧಕರ್ಹಮಪ್ಪುದು ।
ಮೂರ್ತವಲ್ಲದಜೀವ ಮೂರ್ತಕರ್ಮಗಳಿಗನ್ಯೋನ್ಯ ಅವಗಾಹ ನೀಡುವವು ॥೧೩೪॥

ಜೀವಸ್ಯ ಮೂರ್ತೇನ ಪುಣ್ಯಪಾಪಕರ್ಮಣಾ ಕಥಂಚಿದ್ಬಂಧೋ ನ ವಿರುಧ್ಯತೇ ।

-ಇತಿ ಪುಣ್ಯಪಾಪಪದಾರ್ಥವ್ಯಾಖ್ಯಾನಮ್ ।

ಅಥ ಆಸ್ರವಪದಾರ್ಥವ್ಯಾಖ್ಯಾನಮ್ ।

ರಾಗೋ ಜಸ್ಸ ಪಸತ್ಥೋ ಅಣುಕಂಪಾಸಂಸಿದೋ ಯ ಪರಿಣಾಮೋ ।
ಚಿತ್ತಮ್ಹಿ ಣತ್ಥಿ ಕಲುಸಂ ಪುಣ್ಣಂ ಜೀವಸ್ಸ ಆಸವದಿ ॥೧೩೫॥

ಇಲ್ಲಿ (ಈ ಜಗತ್ತಿನಲ್ಲಿ) ಸಂಸಾರೀ ಜೀವದಲ್ಲಿ ಮೂರ್ತಕರ್ಮವು ಅನಾದಿ ಸಂತತಿಯಿಂದ (ಪ್ರವಾಹದಿಂದ) ಪ್ರವರ್ತಿಸುತ್ತ ವಿದ್ಯಮಾನವಿದೆ. ಅದು ಸ್ಪರ್ಶಾದಿಯುಳ್ಳದ್ದಿರುವುದರ ಕಾರಣ ಮುಂಬರುವ ಮೂರ್ತ ಕರ್ಮವನ್ನು ಸ್ಪರ್ಶಮಾಡುತ್ತದೆ ; ಅದರಿಂದ ಮೂರ್ತವಾದ ಅದು (ಮೊದಲಿನ ಕರ್ಮವು) ಅದರೊಡನೆ ಸ್ನಿಗ್ಧತ್ವ ಗುಣದ ವಶದಿಂದ (ತನ್ನ ಸ್ನಿಗ್ಧರೂಕ್ಷತ್ವ ಪರ್ಯಾಯದ ಕಾರಣ) ಬಂಧಕ್ಕೆ ಪ್ರಾಪ್ತವಾಗುತ್ತದೆ. ಇದು ಮೂರ್ತಕರ್ಮದೊಡನೆ ಮೂರ್ತಕರ್ಮದ ಬಂಧದ ಪ್ರಕಾರವಿದೆ.

ಮತ್ತೆ (ಮೂರ್ತಕರ್ಮಗಳೊಡನೆ ಅಮೂರ್ತ ಜೀವದ ಬಂಧದ ಪ್ರಕಾರವು ಈ ಪ್ರಕಾರವಾಗಿದೆ.) ನಿಶ್ಚಯನಯದಿಂದ ಅಮೂರ್ತವಿರುವಂಥ ಜೀವವು ಅನಾದಿ ಮೂರ್ತಕರ್ಮವು ಅದರ ನಿಮಿತ್ತವಿರುವಂಥ ರಾಗಾದಿ ಪರಿಣಾಮಗಳ ಮುಖಾಂತರ ಸ್ನಿಗ್ಧವಾಗಿ ವರ್ತಿಸುತ್ತ ವಿಶಿಷ್ಟ ರೂಪದಿಂದ ಮೂರ್ತಕರ್ಮಗಳನ್ನು ಅವಗಾಹಿಸುತ್ತದೆ - ವ್ಯಾಪಿಸುತ್ತದೆ (ಎಂದರೆ ಒಂದು -ಇನ್ನೊಂದರ ಪರಿಣಾಮದಲ್ಲಿ ನಿಮಿತ್ತಮಾತ್ರವಾಗುವಂಥ ಸಂಬಂಧ ವಿಶೇಷದೊಡನೆ ಮೂರ್ತಕರ್ಮಗಳ ಕ್ಷೇತ್ರದಲ್ಲಿ ವ್ಯಾಪ್ತವಾಗುತ್ತದೆ) ಮತ್ತು ಆ ರಾಗಾದಿ ಪರಿಣಾಮಗಳ ನಿಮಿತ್ತದಿಂದ ಯಾವ ತನ್ನ (ಜ್ಞಾನಾವರಣಾದಿ)ಪರಿಣಾಮಗಳಿಗೆ ಪ್ರಾಪ್ತವಾಗುತ್ತವೆ ಅಂಥ ಮೂರ್ತ ಕರ್ಮಗಳೂ ವಿಶಿಷ್ಟರೂಪದಿಂದ ಜೀವವನ್ನು ಅವಗಾಹಿಸುತ್ತವೆ (ಎಂದರೆ ಜೀವದ ಪ್ರದೇಶಗಳೊಡನೆ ವೈಶಿಷ್ಟ್ಯಪೂರ್ವಕ ಏಕಕ್ಷೇತ್ರಾವಗಾಹಕ್ಕೆ ಪ್ರಾಪ್ತವಾಗುತ್ತವೆ.) ಇದು ಜೀವ ಮತ್ತು ಮೂರ್ತಕರ್ಮದ ಅನ್ಯೋನ್ಯ ಅವಗಾಹ ಸ್ವರೂಪವಾದ ಬಂಧದ ಪ್ರಕಾರವಿದೆ. ಈ ಪ್ರಕಾರ ಅಮೂರ್ತವಾದ ಜೀವದ್ದೂ ಮೂರ್ತ ಪುಣ್ಯ ಪಾಪ ಕರ್ಮಗಳೊಡನೆ ಕಥಂಚಿತ್ (ಯಾವುದೇ ಪ್ರಕಾರ) ಬಂಧ ವಿರೋಧಕ್ಕೆ ಪ್ರಾಪ್ತವಾಗುವುದಿಲ್ಲ.

ಈ ಪ್ರಕಾರವಾಗಿ ಪುಣ್ಯ-ಪಾಪ ಪದಾರ್ಥಗಳ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಆಸ್ರವಪದಾರ್ಥದ ವ್ಯಾಖ್ಯಾನವಿದೆ.

ಗಾಥೆ - ೧೩೫

ಗಾಥಾರ್ಥ :- [ಜಸ್ಸ] ಯಾವ ಜೀವಕ್ಕೆ [ಪಸತ್ಥೋ ರಾಗೋ] ಪ್ರಶಸ್ತ ರಾಗವಿದೆ, [ಅಣುಕಂಪಾ ಸಂಸಿದೋ ಪರಿಣಾಮೋ] ಅನುಕಂಪೆಯಿಂದ ಕೂಡಿದ ಪರಿಣಾಮವಿದೆ [ಯ] ಮತ್ತು [ಚಿತ್ತಮ್ಹಿ ಕಲುಸಂ ಣತ್ಥಿ] ಚಿತ್ತದೊಳಗೆ ಕಲುಷತೆಯ ಅಭಾವವಿದೆ, [ಜೀವಸ್ಸ] ಆ ಜೀವಕ್ಕೆ [ಪುಣ್ಣಂ ಆಸವದಿ] ಪುಣ್ಯದ ಆಸ್ರವವಾಗುತ್ತದೆ.

ಯಾವ ಜೀವನಿಗೆ ಪ್ರಶಸ್ತರಾಗವಿದೆ, ಅನುಕಂಪೆಯುಳ್ಳ ಪರಿಣಾಮವಿದೆ ।
ಇವಲ್ಲದೆ ಚಿತ್ತದಿ ಅಕಲ್ಮಷಭಾವವಿದೆಯವಗೆ ಪುಣ್ಯಾಸ್ರವಮಪ್ಪುದು ॥೧೩೫॥

ರಾಗೋ ಯಸ್ಯ ಪ್ರಶಸ್ತೋಽನುಕಂಪಾಸಂಶ್ರಿತಶ್ಚ ಪರಿಣಾಮಃ ।
ಚಿತ್ತೇ ನಾಸ್ತಿ ಕಾಲುಷ್ಯಂ ಪುಣ್ಯಂ ಜೀವಸ್ಯಾಸ್ರವತಿ ॥೧೩೫॥

ಪುಣ್ಯಾಸ್ರವಸ್ವರೂಪಾಖ್ಯಾನಮೇತತ್ ।

ಪ್ರಶಸ್ತ ರಾಗೋಽನುಕಂಪಾಪರಿಣತಿಃ ಚಿತ್ತಸ್ಯಾಕಲುಷತ್ವಂ ಚೇತಿ ತ್ರಯಃ ಶುಭಾ ಭಾವಾಃ ದ್ರವ್ಯಪುಣ್ಯಾಸ್ರವಸ್ಯ ನಿಮಿತ್ತಮಾತ್ರತ್ವೇನ ಕಾರಣಭೂತತ್ವಾತ್ತದಾಸ್ರವಕ್ಷಣಾದೂರ್ಧ್ವಂ ಭಾವಪುಣ್ಯಾಸ್ರವಃ । ತನ್ನಿಮಿತ್ತ ಶುಭಕರ್ಮಪರಿಣಾಮೋ ಯೋಗದ್ವಾರೇಣ ಪ್ರವಿಶತಾಂ ಪುದ್ಗಲಾನಾಂ ದ್ರವ್ಯಪುಣ್ಯಾಸ್ರವ ಇತಿ ।

ಅರಹಂತಸಿದ್ಧಸಾಹುಸು ಭತ್ತೀ ಧಮ್ಮಮ್ಮಿ ಜಾ ಯ ಖಲು ಚೇಟ್ಠಾ ।
ಅಣುಗಮಣಂ ಪಿ ಗುರೂಣಂ ಪಸತ್ಥರಾಗೋ ತ್ತಿ ವುಚ್ಚಂತಿ ॥೧೩೬॥

ಅರ್ಹತ್ಸಿದ್ಧಸಾಧುಷು ಭಕ್ತಿರ್ಧರ್ಮೇ ಯಾ ಚ ಖಲು ಚೇಷ್ಟಾ ।
ಅನುಗಮನಮಪಿ ಗುರೂಣಾಂ ಪ್ರಶಸ್ತರಾಗ ಇತಿ ಬ್ರುವಂತಿ ॥೧೩೬॥

ಟೀಕೆ :- ಇದು ಪುಣ್ಯಾಸ್ರವದ ಸ್ವರೂಪದ ಕಥನವಿದೆ.

ಪ್ರಶಸ್ತರಾಗ, ಅನುಕಂಪೆಯ ಪರಿಣತಿ ಮತ್ತು ಚಿತ್ತದ ಅಕಲುಷತೆ - ಇವು ಮೂರು ಶುಭಭಾವಗಳು ದ್ರವ್ಯಪುಣ್ಯಾಸ್ರವಕ್ಕೆ ನಿಮಿತ್ತಮಾತ್ರರೂಪದಿಂದ ಕಾರಣಭೂತಗಳಿರುವುದರಿಂದ 'ದ್ರವ್ಯಪುಣ್ಯಾಸ್ರವದ' ಪ್ರಸಂಗದ ಅನುಸರಣೆ [೧] ಮಾಡಿ (-ಅನುಲಕ್ಷ್ಯ ಮಾಡಿ) ಆ ಶುಭಭಾವಗಳು ಭಾವಪುಣ್ಯಾಸ್ರವಗಳಿವೆ ಮತ್ತು ಅವು (ಶುಭ ಭಾವಗಳು) ಯಾವುದರ ನಿಮಿತ್ತವಾಗಿವೆ ಅಂಥ ಆ ಯೋಗದ ಮುಖಾಂತರ ಪ್ರವಿಷ್ಟವಾಗುವಂಥ ಪುದ್ಗಲಗಳ ಶುಭ ಕರ್ಮ ಪರಿಣಾಮಗಳು (ಶುಭ ಕರ್ಮರೂಪ ಪರಿಣಾಮಗಳು) ಅವು ದ್ರವ್ಯಪುಣ್ಯಾಸ್ರವಗಳಿವೆ.

ಗಾಥೆ -೧೩೬

ಗಾಥಾರ್ಥ :- [ಅರಹಂತಸಿದ್ಧಸಾಹುಸು ಭತ್ತೀ] ಅರಹಂತ-ಸಿದ್ಧ-ಸಾಧುಗಳ ಕುರಿತು ಭಕ್ತಿ, [ಧಮ್ಮಮ್ಮಿ ಜಾ ಯ ಖಲು ಚೇಟ್ಠಾ] ಧರ್ಮದಲ್ಲಿ ಯಥಾರ್ಥವಾದ ಪ್ರವೃತ್ತಿ [ಅಣುಗಮಣಂ ಪಿ ಗುರೂಣಂ] ಮತ್ತು ಗುರುಗಳ ಅನುಗಮನ, [ಪಸತ್ಥರಾಗೋ ತ್ತಿ ವುಚ್ಚಂತಿ] ಇದಕ್ಕೆ 'ಪ್ರಶಸ್ತ ರಾಗ'ವೆಂದು ಹೇಳಲಾಗುತ್ತದೆ.

ಅರಹಂತ-ಸಿದ್ಧ-ಸಾಧುಗಳ ಕುರಿತು ಭಕ್ತಿ, ಧರ್ಮದಲಿ ಯಥಾರ್ಥ ಪ್ರವೃತ್ತಿ ।
ಗುರುಗಳ ಅನುಸರಣೆ ಮಾಡುವುದಿವೆಲ್ಲಕೆ 'ಪ್ರಶಸ್ತರಾಗ'ವೆನ್ನುವರು ॥೧೩೬॥

---

೧. ಸಾತಾವೇದನೀಯ ಮೊದಲಾದ ಪುದ್ಗಲ ಪರಿಣಾಮರೂಪ ದ್ರವ್ಯಪುಣ್ಯಾಸ್ರವದ ಯಾವ ಪ್ರಸಂಗವು ಸಿದ್ಧವಾಗುತ್ತದೆ ಅದರಲ್ಲಿ ಜೀವದ ಪ್ರಶಸ್ತರಾಗಾದಿ ಶುಭಭಾವಗಳು ನಿಮಿತ್ತ ಕಾರಣವಿರುವುದರಿಂದ 'ದ್ರವ್ಯಪುಣ್ಯಾಸ್ರವ' ಪ್ರಸಂಗದ ಹಿಂದೆ-ಹಿಂದೆ ಅದರ ನಿಮಿತ್ತಭೂತವಾದ ಶುಭ ಭಾವಗಳಿಗೂ 'ಭಾವಪುಣ್ಯಾಸ್ರವ'ವೆಂಬ ಹೆಸರು ಇದೆ.

ಪ್ರಶಸ್ತರಾಗಸ್ವರೂಪಾಖ್ಯಾನಮೇತತ್ ।

ಅರ್ಹತ್ಸಿದ್ಧಸಾಧುಷು ಭಕ್ತಿಃ , ಧರ್ಮೇ ವ್ಯವಹಾರಚಾರಿತ್ರಾನುಷ್ಠಾನೇ ವಾಸನಾಪ್ರಧಾನಾ ಚೇಷ್ಟಾ, ಗುರೂಣಾಮಾಚಾರ್ಯಾದೀನಾಂ ರಸಿಕತ್ವೇನಾನುಗಮನಮ್ – ಏಷಃ ಪ್ರಶಸ್ತೋ ರಾಗಃ ಪ್ರಶಸ್ತವಿಷಯತ್ವಾತ್ । ಅಯಂ ಹಿ ಸ್ಥೂಲಲಕ್ಷ್ಯತಯಾ ಕೇವಲಭಕ್ತಿಪ್ರಧಾನಸ್ಯಾಜ್ಞಾನಿನೋ ಭವತಿ ಉಪರಿತನಭೂಮಿಕಾಯಾಮಲ-ಬ್ಧಾಸ್ಪದಸ್ಯಾಸ್ಥಾನರಾಗನಿಷೇಧಾರ್ಥಂ ತೀವ್ರರಾಗಜ್ವರವಿನೋದಾರ್ಥಂ ವಾ ಕದಾಚಿಜ್ಜ್ಞಾನಿನೋಽಪಿ ಭವತೀತಿ ।

ಟೀಕೆ ಃ- ಇದು ಪ್ರಶಸ್ತರಾಗದ ಸ್ವರೂಪದ ಕಥನವಿದೆ.

ಅರಹಂತ-ಸಿದ್ಧ-ಸಾಧುಗಳ [೧] ಕುರಿತು ಭಕ್ತಿ , ಧರ್ಮದಲ್ಲಿ-ವ್ಯವಹಾರ ಚಾರಿತ್ರದ ಅನುಷ್ಠಾನ [೨] ದಲ್ಲಿ-ಭಾವನಾಪ್ರಧಾನ ಪ್ರವೃತ್ತಿ [೩] ಮತ್ತು ಗುರುಗಳ - ಆಚಾರ್ಯಾದಿಗಳ - ರಸಿಕರೂಪದಿಂದ ಅನುಗಮನ [೪] ಇದು 'ಪ್ರಶಸ್ತರಾಗ'ವಿದೆ ಏಕೆಂದರೆ ಅದರ ವಿಷಯವು ಪ್ರಶಸ್ತವಿದೆ.

---

೧. ಅರಹಂತ-ಸಿದ್ಧ-ಸಾಧುಗಳಲ್ಲಿ ಅರಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸಾಧು-ಈ ಐವರ ಸಮಾವೇಶವಾಗಿ ಹೋಗುತ್ತದೆ, ಏಕೆಂದರೆ 'ಸಾಧುಗಳಲ್ಲಿ' ಆಚಾರ್ಯ, ಉಪಾಧ್ಯಾಯ ಮತ್ತು ಸಾಧು-ಈ ಮೂವರ ಸಮಾವೇಶವಾಗುತ್ತದೆ.

[ನಿರ್ದೋಷ ಪರಮಾತ್ಮನಿಂದ ಪ್ರತಿಪಕ್ಷಭೂತಗಳಾದ ಆರ್ತ-ರೌದ್ರಧ್ಯಾನಗಳಿಂದ ಉಪಾರ್ಜಿಸಲ್ಪಟ್ಟ ಯಾವ ಜ್ಞಾನಾವರಣಾದಿ ಪ್ರಕೃತಿಗಳನ್ನು, ರಾಗಾದಿ ವಿಕಲ್ಪಗಳಿಲ್ಲದ ಧರ್ಮ-ಶುಕ್ಲಧ್ಯಾನಗಳಿಂದ ವಿನಾಶಗೊಳಿಸಿ ಯಾವ ಕ್ಷುಧಾದಿ ಹದಿನೆಂಟು ದೋಷಗಳಿಲ್ಲದೆ ಮತ್ತು ಕೇವಲಜ್ಞಾನಾದಿ ಅನಂತ ಚತುಷ್ಟಯ ಸಹಿತರಾಗಿದ್ದಾರೆ ಅವರು ಅರಹಂತರೆಂದು ಕರೆಸಿಕೊಳ್ಳುತ್ತಾರೆ.]

ಲೌಕಿಕ ಅಂಜನಸಿದ್ಧ ಮೊದಲಾದವುಗಳಿಂದ ವಿಲಕ್ಷಣವಾದಂಥ ಯಾವ ಜ್ಞಾನಾವರಣಾದಿ - ಅಷ್ಟ ಕರ್ಮಗಳ ಅಭಾವದಿಂದ ಸಮ್ಯಕ್ತ್ವ ಮೊದಲಾದ - ಅಷ್ಟಗುಣಾತ್ಮಕರಿದ್ದಾರೆ ಮತ್ತು ಲೋಕಾಗ್ರದಲ್ಲಿ ವಾಸಿಸುತ್ತಾರೆ ಅವರು ಸಿದ್ಧರಿದ್ದಾರೆ.

ವಿಶುದ್ಧ ಜ್ಞಾನ-ದರ್ಶನ ಸ್ವಭಾವವುಳ್ಳ ಆತ್ಮತತ್ತ್ವದ ನಿಶ್ಚಯರುಚಿ, ಹಾಗೆಯೇ ಜ್ಞಪ್ತಿ, ಹಾಗೆಯೇ ನಿಶ್ಚಲ-ಅನುಭೂತಿ, ಪರದ್ರವ್ಯದ ಇಚ್ಛೆಯ ಪರಿಹಾರದೊಡನೆ ಅದೇ ಆತ್ಮದ್ರವ್ಯದಲ್ಲಿ ಪ್ರತಪನ ಎಂದರೆ ತಪಶ್ಚರಣ ಮತ್ತು ತನ್ನ ಶಕ್ತಿಯನ್ನು ಬಚ್ಚಿಡದೆ ಹಾಗೆಯೇ ಅನುಷ್ಠಾನ - ಹೀಗೆ ನಿಶ್ಚಯ ಪಂಚಾಚಾರವನ್ನು ಮತ್ತು ಅದರ ಸಾಧಕವಾದ ವ್ಯವಹಾರ ಪಂಚಾಚಾರವನ್ನು ಆಚಾರಾದಿ ಶಾಸ್ತ್ರಗಳಲ್ಲಿ ಹೇಳಿದಂಥ ವಿಧಿಯನ್ನು - ಎಂದರೆ ಉಭಯ ಆಚಾರಗಳನ್ನು ಯಾರು ತಾವು ಆಚರಿಸುತ್ತಾರೆ ಮತ್ತು ಇತರರಿಗೆ ಅದರ ಆಚರಣೆ ಮಾಡಿಸುತ್ತಾರೆ ಅವರು ಆಚಾರ್ಯರಿದ್ದಾರೆ.

ಐದು ಅಸ್ತಿಕಾಯಗಳಲ್ಲಿ ಜೀವಾಸ್ತಿಕಾಯವನ್ನು, ಆರು ದ್ರವ್ಯಗಳಲ್ಲಿ ಶುದ್ಧ ಜೀವ ದ್ರವ್ಯವನ್ನು, ಏಳು ತತ್ತ್ವಗಳಲ್ಲಿ ಶುದ್ಧ ಜೀವತತ್ತ್ವವನ್ನು ಮತ್ತು ಒಂಭತ್ತು ಪದಾರ್ಥಗಳಲ್ಲಿ ಶುದ್ಧ ಜೀವ ಪದಾರ್ಥವನ್ನು ಯಾರು ನಿಶ್ಚಯ ನಯದಿಂದ ಉಪಾದೇಯವೆಂದು ಹೇಳುತ್ತಾರೆ ಮತ್ತು ಭೇದಾಭೇದ ರತ್ನತ್ರಯಸ್ವರೂಪ ಮೋಕ್ಷಮಾರ್ಗದ ಪ್ರರೂಪಣೆ ಮಾಡುತ್ತಾರೆ ಹಾಗೂ ತಾವು ಸ್ವತಃ ಅನುಭವ ಮಾಡುತ್ತಾರೆ ಅವರು ಉಪಾಧ್ಯಾಯರಿದ್ದಾರೆ.

ನಿಶ್ಚಯ ಚತುರ್ವಿಧ - ಆರಾಧನೆಯಿಂದ ಯಾರು ಶುದ್ಧ ಆತ್ಮಸ್ವರೂಪದ ಸಾಧನೆ ಮಾಡುತ್ತಾರೆ ಅವರು ಸಾಧುಗಳಿದ್ದಾರೆ.)

೨. ಅನುಷ್ಠಾನ = ಆಚರಣ ; ಆಚರಣೆ ; ಕಾರ್ಯರೂಪದಲ್ಲಿ ತರುವುದು.

೩. ಭಾವಪ್ರಧಾನ ಪ್ರವೃತ್ತಿ = ಭಾವಪ್ರಧಾನ ಚೇಷ್ಟೆ ; ಶುಭಭಾವ ಪ್ರಧಾನ ವ್ಯಾಪಾರ.

೪. ಅನುಗಮನ = ಅನುಸರಣೆ ; ಆಜ್ಞಾಧಾರಕತನ ; ಅನುಕೂಲ ವರ್ತನೆ. [ಗುರುಗಳ ಕುರಿತು ರಸಿಕರೂಪದಿಂದ (ಉಲ್ಲಾಸದಿಂದ, ಉತ್ಸಾಹದಿಂದ, ರುಚಿಪೂರ್ವಕ) ಆಜ್ಞಾಧಾರಕನಾಗಿ ವರ್ತಿಸುವುದು ಅದು ಪ್ರಶಸ್ತರಾಗವಿದೆ.]

ತಿಸಿದಂ ವ ಭುಕ್ಖಿದಂ ವಾ ದುಹಿದಂ ದಟ್ಠೂಣ ಜೋ ದು ದುಹಿದಮಣೋ ।
ಪಡಿವಜ್ಜದಿ ತಂ ಕಿವಯಾ ತಸ್ಸೇಸಾ ಹೋದಿ ಅಣುಕಂಪಾ ॥೧೩೭॥

ತೃಷಿತಂ ಬುಭುಕ್ಷಿತಂ ವಾ ದುಃಖಿತಂ ದೃಷ್ಟ್ವಾ ಯಸ್ತು ದುಃಖಿತಮನಾಃ ।
ಪ್ರತಿಪದ್ಯತೇ ತಂ ಕೃಪಯಾ ತಸ್ಯೈಷಾ ಭವತ್ಯನುಕಂಪಾ ॥೧೩೭॥

ಅನುಕಂಪಾಸ್ವರೂಪಾಖ್ಯಾನಮೇತತ್ ।

ಕಂಚಿದುದನ್ಯಾದಿದುಃಖಪ್ಲುತಮವಲೋಕ್ಯ ಕರುಣಯಾ ತತ್ಪ್ರತಿಚಿಕೀರ್ಷಾಕುಲಿತಚಿತ್ತತ್ವಮಜ್ಞಾನಿನೋಽನು-ಕಂಪಾ । ಜ್ಞಾನಿನಸ್ತ್ವಧಸ್ತನಭೂಮಿಕಾಸು ವಿಹರಮಾಣಸ್ಯ ಜನ್ಮಾರ್ಣವನಿಮಗ್ನಜಗದವಲೋಕನಾನ್ಮನಾಗ್ಮನಃಖೇದ ಇತಿ।

ಇದು (ಪ್ರಶಸ್ತರಾಗವು) ವಾಸ್ತವಿಕವಾಗಿ ಸ್ಥೂಲಲಕ್ಷಣ[೧] ವುಳ್ಳದ್ದಾಗಿರುವುದರಿಂದ ಕೇವಲ ಭಕ್ತಿಪ್ರಧಾನನಾದಂಥ ಅಜ್ಞಾನಿಗೆ ಆಗುತ್ತದೆ ; ಉಚ್ಚ ಭೂಮಿಕೆಯಲ್ಲಿ (ಮೇಲಿನ ಗುಣಸ್ಥಾನಗಳಲ್ಲಿ) ಸ್ಥಿರತೆ ಪ್ರಾಪ್ತವಾಗದಿದ್ದಾಗ, ಅಸ್ಥಾನದ[೨] ರಾಗ ತಡೆಯುವ ಉದ್ದೇಶದಿಂದ ಅಥವಾ ತೀವ್ರ ರಾಗಜ್ವರವನ್ನು ನಿವಾರಿಸುವ ಉದ್ದೇಶದಿಂದ ಒಮ್ಮೊಮ್ಮೆ ಜ್ಞಾನಿಗೂ ಆಗುತ್ತದೆ.

ಗಾಥೆ - ೧೩೭

ಗಾಥಾರ್ಥ :- [ತಿಸಿದಂ] ತೃಷಾತುರ, [ಭುಕ್ಖಿದಂ] ಕ್ಷುಧಾತುರ [ವಾ] ಅಥವಾ [ದುಹಿದಂ] ದುಃಖಿಯಾದವರನ್ನು [ದಟ್ಠೂಣ] ನೋಡಿ [ಜೋ ದು] ಯಾವ ಜೀವನು [ದುಹಿದಮಣೋ] ಮನಸ್ಸಿನಲ್ಲಿ ದುಃಖಿಯಾಗಿ [ತಂ ಕಿವಯಾ ಪಡಿವಜ್ಜದಿ] ಅವರ ಕುರಿತು ಕರುಣೆಯಿಂದ ವರ್ತಿಸುತ್ತಾನೆ [ತಸ್ಸ ಏಸಾ ಅಣುಕಂಪಾ ಹೋದಿ] ಅವನ ಆ ಭಾವವು ಅನುಕಂಪೆಯಿದೆ.

ಟೀಕೆ :- ಇದು ಅನುಕಂಪೆಯ ಸ್ವರೂಪದ ಕಥನವಿದೆ.

ಹಸಿವೆ ಬಾಯಾರಿಕೆಯಿಂದ ಪೀಡಿತವಾದ ಯಾವುದೇ ಪ್ರಾಣಿಯನ್ನು ನೋಡಿ ಕರುಣೆಯ ಕಾರಣ ಅದರ ಪ್ರತೀಕಾರ (ಉಪಾಯ) ಮಾಡುವ ಇಚ್ಛೆಯಿಂದ ಚಿತ್ತದಲ್ಲಿ ಆಕುಲತೆಯಾಗುವುದು ಅದು ಅಜ್ಞಾನಿಯ ಅನುಕಂಪೆ ಇದೆ (ಜ್ಞಾನಿಯ ಅನುಕಂಪೆಯಂತೂ ಕೆಳಗಿನ ಭೂಮಿಕೆಯಲ್ಲಿ ವಿಹರಿಸುತ್ತಿರುವಾಗ (ತಾನು ಕೆಳಗಿನ ಗುಣಸ್ಥಾನಗಳಲ್ಲಿ ವರ್ತಿಸುತ್ತಿರುವಾಗ), ಭವಾರ್ಣವದಲ್ಲಿ ವಿಮಗ್ನವಾದ ಜಗತ್ತಿನ ಅವಲೋಕನೆಯಿಂದ (ಎಂದರೆ

ಯಾವ ಜೀವನು ತೃಷಿತ, ಕ್ಷುಧಿತ, ದುಃಖಿತನನು ನೋಡಿ ಮನದಿ ದುಃಖ ಮೇಣ್ ।
ಅವನ ಕುರಿತು ಕರುಣೆಯಿಂ ವರ್ತಿಪನವನಭಾವ ಅನುಕಂಪೆಯಹುದು ॥೧೩೭॥

---

೧. ಅಜ್ಞಾನಿಯ ಲಕ್ಷ್ಯ (ಧ್ಯೇಯ)ವು ಸ್ಥೂಲವಿರುವುದರಿಂದ ಅವನಿಗೆ ಕೇವಲ ಭಕ್ತಿಯದೇ ಪ್ರಾಧಾನ್ಯತೆಯಿರುತ್ತದೆ.

೨. ಅಸ್ಥಾನದ - ಅಯೋಗ್ಯ ಸ್ಥಾನದ ; ಅಯೋಗ್ಯ ವಿಷಯದ ಕಡೆಗಿನ ; ಅಯೋಗ್ಯ ಪದಾರ್ಥದ ಅವಲಂಬನೆ ಪಡೆವವ.

ಕ್ರೋಧೋ ವ ಜದಾ ಮಾಣೋ ಮಾಯಾ ಲೋಭೋ ವ ಚಿತ್ತಮಾಸೇಜ್ಜ ।
ಜೀವಸ್ಸ ಕುಣದಿ ಖೋಹಂ ಕಲುಸೋ ತ್ತಿ ಯ ತಂ ಬುಧಾ ಬೇಂತಿ ॥೧೩೮॥

ಕ್ರೋಧೋ ವಾ ಯದಾ ಮಾನೋ ಮಾಯಾ ಲೋಭೋ ವಾ ಚಿತ್ತಮಾಸಾದ್ಯ ।
ಜೀವಸ್ಯ ಕರೋತಿ ಕ್ಷೋಭಂ ಕಾಲುಷ್ಯಮಿತಿ ಚ ತಂ ಬುಧಾ ವದಂತಿ ॥೧೩೮॥

ಚಿತ್ತಕಲುಷತ್ವಸ್ವರೂಪಾಖ್ಯಾನಮೇತತ್ ।

ಕ್ರೋಧಮಾನಮಾಯಾಲೋಭಾನಾಂ ತೀವ್ರೋದಯೇ ಚಿತ್ತಸ್ಯ ಕ್ಷೋಭಃ ಕಾಲುಷ್ಯಮ್ । ತೇಷಾಮೇವ ಮಂದೋದಯೇ ತಸ್ಯ ಪ್ರಸಾದೋಽಕಾಲುಷ್ಯಮ್ । ತತ್ ಕಾದಾಚಿತ್ಕವಿಶಿಷ್ಟಕಷಾಯಕ್ಷಯೋಪಶಮೇ ಸತ್ಯಜ್ಞಾನಿನೋ ಭವತಿ । ಕಷಾಯೋದಯಾನುವೃತ್ತೇರಸಮಗ್ರವ್ಯಾವರ್ತಿತೋಪಯೋಗಸ್ಯಾವಾಂತರಭೂಮಿಕಾಸು ಕದಾಚಿತ್ ಜ್ಞಾನಿನೋಽಪಿ ಭವತೀತಿ ।

ಸಂಸಾರ ಸಾಗರದಲ್ಲಿ ಮುಳುಗಿ ಹೋದ ಜಗತ್ತನ್ನು ನೋಡುವುದರಿಂದ) ಮನಸ್ಸಿನಲ್ಲಿ ಸ್ವಲ್ಪ ಖೇದವಾಗುವುದು ಅದು ಇದೆ [೧].

ಗಾಥೆ - ೧೩೮

ಗಾಥಾರ್ಥ ಃ- [ಜದಾ] ಯಾವಾಗ (ಕೋಧೋ ವ) ಕ್ರೋಧ, [ಮಾಣೋ] ಮಾನ, [ಮಾಯಾ] ಮಾಯೆ [ವ] ಅಥವಾ [ಲೋಭೋ] ಲೋಭವು [ಚಿತ್ತಮಾಸೇಜ್ಜ] ಚಿತ್ತದ ಆಶ್ರಯ ಪಡೆದು [ಜೀವಸ್ಸ] ಜೀವಕ್ಕೆ [ಖೋಹಂ ಕುಣದಿ] ಕ್ಷೋಭೆಯನ್ನು ಮಾಡುತ್ತದೆ, ಆಗ [ತಂ] ಅದಕ್ಕೆ [ಬುಧಾ] ಜ್ಞಾನಿಗಳು [ಕಲುಸೋ ತ್ತಿ ಯ ಬೇಂತಿ] 'ಕಲುಷತೆ'ಯೆಂದು ಹೇಳುತ್ತಾರೆ.

ಟೀಕೆ ಃ- ಇದು ಚಿತ್ತದ ಕಲುಷತೆಯ ಸ್ವರೂಪದ ಕಥನವಿದೆ.

ಕ್ರೋಧ, ಮಾನ, ಮಾಯೆ ಮತ್ತು ಲೋಭದ ಉದಯದಿಂದ ಚಿತ್ತದಲ್ಲಿ ಕ್ಷೋಭೆಯಾಗುವುದು ಅದು ಕಲುಷತೆಯಿದೆ. ಅವುಗಳದೇ (ಕ್ರೋಧಾದಿಗಳದ್ದೇ) ಮಂದವಾದ ಉದಯದಿಂದ ಚಿತ್ತದಲ್ಲಿ ಪ್ರಸನ್ನತೆಯಾಗುವುದು ಅದು ಅಕಲುಷತೆಯಿದೆ. ಆ ಅಕಲುಷತೆಯು ಯಾವಾಗಲಾದರೂ ಕಷಾಯದ ವಿಶಿಷ್ಟ (-ವಿಶೇಷ ಪ್ರಕಾರದ ಕ್ಷಯೋಪಶಮವಾದ ಮೇಲೆ ಅಜ್ಞಾನಿಗೆ ಆಗುತ್ತದೆ ; ಕಷಾಯದ ಉದಯದ ಅನುಸರಣೆ ಮಾಡುವಂಥ ಪರಿಣತಿ

ಯಾವಾಗ ಕ್ರೋಧ, ಮಾನ, ಮಾಯೆಯಿಲ್ಲವೆ ಲೋಭ ಚಿತ್ತದಾಶ್ರಯ ಪಡೆದು ।
ಜೀವಕೆ ಕ್ಷೋಭೆ ಮಾಡುವಾಗ ಅದನು ಬುಧರು ಕಾಲುಷ್ಯವೆನ್ನುವರು ॥೧೩೮॥

---

೧. ಶ್ರೀ ಜಯಸೇನಾಚಾರ್ಯದೇವಕೃತ ಟೀಕೆಯಲ್ಲಿ ಈ ಗಾಥೆಯ ವಿವರಣೆ ಹೀಗಿದೆ - ತೀವ್ರ ತೃಷೆ, ತೀವ್ರ ಕ್ಷುಧೆ, ತೀವ್ರ ರೋಗಾದಿಗಳಿಂದ ಪೀಡಿತವಾದ ಪ್ರಾಣಿಯನ್ನು ನೋಡಿ ಅಜ್ಞಾನಿ ಜೀವನು 'ನಾನು ಯಾವುದೇ ಪ್ರಕಾರ ಇದರ ನಿವಾರಣೆ ಮಾಡುವೆ' ನೆಂದು ವ್ಯಾಕುಲನಾಗಿ ಅನುಕಂಪೆ ಮಾಡುತ್ತಾನೆ ; ಜ್ಞಾನಿಯಂತೂ ತನ್ನಾತ್ಮ ಸ್ವಭಾವವನ್ನು ಪ್ರಾಪ್ತ ಮಾಡಿಕೊಳ್ಳಲಾರದೆ (ಎಂದರೆ ತನ್ನಾತ್ಮನಿಗೆ ಅನುಭವದ ಉಪಲಬ್ಧಿಯಾಗದಿದ್ದಾಗ), ಸಂಕ್ಲೇಶದ ಪರಿತ್ಯಾಗದಿಂದ (ಅಶುಭ ಭಾವವನ್ನು ಬಿಟ್ಟು) ಯಥಾ ಸಂಭವ ಪ್ರತೀಕಾರ ಮಾಡುತ್ತಾನೆ ಮತ್ತು ಅವನನ್ನು ದುಃಖಿಯನ್ನಾಗಿ ನೋಡಿ ವಿಶೇಷ ಸಂವೇಗ ಮತ್ತು ವೈರಾಗ್ಯದ ಭಾವನೆ ಮಾಡುತ್ತಾನೆ.

ಚರಿಯಾ ಪಮಾದಬಹುಲಾ ಕಾಲುಸ್ಸಂ ಲೋಲದಾ ಯ ವಿಸಯೇಸು ।
ಪರಪರಿದಾವಪವಾದೋ ಪಾವಸ್ಸ ಯ ಆಸವಂ ಕುಣದಿ ॥೧೩೯॥

ಚರ್ಯಾ ಪ್ರಮಾದಬಹುಲಾ ಕಾಲುಷ್ಯಂ ಲೋಲುತಾ ಚ ವಿಷಯೇಷು ।
ಪರಪರಿತಾಪಾಪವಾದಃ ಪಾಪಸ್ಯ ಚಾಸ್ರವಂ ಕರೋತಿ ॥೧೩೯॥

ಪಾಪಾಸ್ರವಸ್ವರೂಪಾಖ್ಯಾನಮೇತತ್ ।

ಪ್ರಮಾದಬಹುಲಚರ್ಯಾ ಪರಿಣತಿಃ, ಕಾಲುಷ್ಯಪರಿಣತಿಃ, ವಿಷಯಲೌಲ್ಯಪರಿಣತಿಃ, ಪರಪರಿತಾಪ-ಪರಿಣತಿಃ, ಪರಾಪವಾದಪರಿಣತಿಶ್ಚೇತಿ ಪಂಚಾಶುಭಾ ಭಾವಾ ದ್ರವ್ಯಪಾಪಾಸ್ರವಸ್ಯ ನಿಮಿತ್ತಮಾತ್ರತ್ವೇನ ಕಾರಣಭೂತತ್ವಾತ್ತದಾಸ್ರವಲಕ್ಷಣಾದೂರ್ಧ್ವಂ ಭಾವಪಾಪಾಸ್ರವಃ । ತನ್ನಿಮಿತ್ತೋಽಶುಭಕರ್ಮಪರಿಣಾಮೋ ಯೋಗದ್ವಾರೇಣ ಪ್ರವಿಶತಾಂ ಪುದ್ಗಲಾನಾಂ ದ್ರವ್ಯಪಾಪಾಸ್ರವ ಇತಿ ।

ಯೊಳಗಿಂದ ಉಪಯೋಗವನ್ನು ಅಸಮಗ್ರರೂಪದಿಂದ[೧] ವಿಮುಖಿಗೊಳಿಸಿದ್ದರೆ ಆಗ (ಎಂದರೆ ಕಷಾಯದ ಉದಯದ ಅನುಸರಣೆ ಮಾಡುವಂಥ ಪರಿಣಮನದೊಳಗಿಂದ ಉಪಯೋಗವನ್ನು ಪೂರ್ಣ ವಿಮುಖಿಗೊಳಿಸದಿದ್ದರೆ ಆಗ), ಮಧ್ಯಮ ಭೂಮಿಕೆಗಳಲ್ಲಿ (ಮಧ್ಯಮಗುಣಸ್ಥಾನಗಳಲ್ಲಿ) ಯಾವಾಗಲಾದರೂ ಜ್ಞಾನಿಗೂ ಆಗುತ್ತದೆ.

ಗಾಥೆ - ೧೩೯

ಗಾಥಾರ್ಥ :- [ಪಮಾದಬಹುಲಾ ಚರಿಯಾ] ಹೆಚ್ಚು ಪ್ರಮಾದಯುಕ್ತ ನಡತೆ, [ಕಾಲುಸ್ಸಂ] ಕಲುಷತೆ, [ವಿಸಯೇಸು ಯ ಲೋಲದಾ] ವಿಷಯಗಳ ಕುರಿತು ಆಸಕ್ತಿ, [ಪರಪರಿದಾವಪವಾದೋ] ಇತರರಿಗೆ ದುಃಖ ಕೊಡುವುದು ಮತ್ತು ಇತರರ ಮೇಲೆ ತಪ್ಪು ಹೊರಿಸಿ ಮಾತನಾಡುವುದು - ಇವು [ಪಾವಸ್ಸ ಯ ಆಸವಂ ಕುಣದಿ] ಪಾಪದ ಆಸ್ರವ ಮಾಡುತ್ತವೆ.

ಟೀಕೆ :- ಇದು ಪಾಪಾಸ್ರವದ ಸ್ವರೂಪದ ಕಥನವಿದೆ.

ಹೆಚ್ಚು ಪ್ರಮಾದಯುಕ್ತ ಚರ್ಯಾರೂಪವಾದ ಪರಿಣತಿ (ಅತ್ಯಂತ ಪ್ರಮಾದದಿಂದ ತುಂಬಿ ಹೋದ ಆಚರಣೆಯ ರೂಪವಾದ ಪರಿಣತಿ, ವಿಷಯ ಲೋಲುಪತೆಯ ರೂಪವಾದ ಪರಿಣತಿ (ಇತರರಿಗೆ ದುಃಖ ಕೊಡುವ ರೂಪದ ಪರಿಣತಿ) ಮತ್ತು ಇತರರಿಗೆ ಅಪವಾದ ಹೊರಿಸುವ ರೂಪದ ಪರಿಣತಿ - ಈ ಐದು ಅಶುಭ ಭಾವಗಳು ದ್ರವ್ಯ ಪಾಪಾಸ್ರವಕ್ಕೆ ನಿಮಿತ್ತಮಾತ್ರರೂಪದಿಂದ ಕಾರಣಭೂತವಿರುವುದರಿಂದ 'ದ್ರವ್ಯ ಪಾಪಸ್ರವದ' ಪ್ರಸಂಗದ ಅನುಸರಣೆ[೨] ಮಾಡಿ (ಅನುಲಕ್ಷ್ಯ ಮಾಡಿ) ಆ ಅಶುಭ ಭಾವಗಳು ಭಾವಪಾಪಾಸ್ರವವಿವೆ ಮತ್ತು

ಉರುಪ್ರಮಾದವುಳ್ಳ ವೃತ್ತಿ, ಕಲುಷತೆ, ವಿಷಯಗಳ ಕುರಿತು ಲೋಲುಪತೆ ।
ಪರರಿಗೆ ಪರಿತಾಪ ಮೇಣಪವಾದ ಮಾತಿವು ಪಾಪಾಸ್ರವ ಮಾಡುವವು ॥೧೩೯॥

---

೧. ಅಸಮಗ್ರ ರೂಪದಿಂದ = ಅಪೂರ್ಣ ರೂಪದಿಂದ ; ಅಂಶತಃ.

೨. ಅಸಾತಾವೇದನೀಯ ಮೊದಲಾದ ಪುದ್ಗಲ ಪರಿಣಾಮರೂಪ ದ್ರವ್ಯಪಾಪಾಸ್ರವದ ಯಾವ ಪ್ರಸಂಗವು ಸಿದ್ಧವಾಗುತ್ತದೆ. ಅದರಲ್ಲಿ ಜೀವದ ಅಶುಭ ಭಾವಗಳು ನಿಮಿತ್ತ ಕಾರಣವಿರುವುದರಿಂದ 'ದ್ರವ್ಯಪಾಪಾಸ್ರವ' ಪ್ರಸಂಗದ ಹಿಂದೆ - ಹಿಂದೆ ಅದಕ್ಕೆ ನಿಮಿತ್ತಭೂತವಾದ ಅಶುಭ ಭಾವಗಳಿಗೂ 'ಭಾವಪಾಪಾಸ್ರವ'ವೆಂಬ ಹೆಸರು ಇದೆ.

ಸಣ್ಣಾಓ ಯ ತಿಲೇಸ್ಸಾ ಇಂದಿಯವಸದಾ ಯ ಅಟ್ಟರುದ್ದಾಣೆ ।
ಣಾಣಂ ಚ ದುಪ್ಪಉತ್ತಂ ಮೋಹೋ ಪಾವಪ್ಪದಾ ಹೋಂತಿ ॥೧೪೦॥

ಸಂಜ್ಞಾಶ್ಚ ತ್ರಿಲೇಶ್ಯಾ ಇಂದ್ರಿಯವಶತಾ ಚಾರ್ತರೌದ್ರೇ ।
ಜ್ಞಾನಂ ಚ ದುಃಪ್ರಯುಕ್ತಂ ಮೋಹಃ ಪಾಪಪ್ರದಾ ಭವಂತಿ ॥೧೪೦॥

ಪಾಪಾಸ್ರವಭೂತಭಾವಪ್ರಪಂಚಾಖ್ಯಾನಮೇತತ್ ।

ತೀವ್ರಮೋಹವಿಪಾಕಪ್ರಭವಾ ಆಹಾರಭಯಮೈಥುನಪರಿಗ್ರಹಸಂಜ್ಞಾಃ , ತೀವ್ರಕಷಾಯೋದಯಾನುರಂಜಿತಯೋಗಪ್ರವೃತ್ತಿರೂಪಾಃ ಕೃಷ್ಣನೀಲಕಾಪೋತಲೇಶ್ಯಾಸ್ತಿಸ್ರಃ , ರಾಗದ್ವೇಷೋದಯಪ್ರಕರ್ಷಾದಿಂದ್ರಿಯಾಧೀನತ್ವಮ್ , ರಾಗದ್ವೇಷೋದ್ರೇಕಾತ್ತ್ರಿಯಸಂಯೋಗಾಪ್ರಿಯವಿಯೋಗವೇದನಾಮೋಕ್ಷಣನಿದಾನಾಕಾಂಕ್ಷಣರೂಪಮಾರ್ತಮ್ , ಕಷಾಯಕ್ರೂರಾಶಯತ್ವಾದ್ಧಿಂಸಾऽಸತ್ಯಸ್ತೇಯವಿಷಯಸಂರಕ್ಷಣಾನಂದರೂಪಂ ರೌದ್ರಮ್ , ನೈಷ್ಕರ್ಮ್ಯಂ ತು ಶುಭಕರ್ಮಣಶ್ಚಾನ್ಯತ್ರ ದುಷ್ಟತಯಾ ಪ್ರಯುಕ್ತಂ ಜ್ಞಾನಮ್ , ಸಾಮಾನ್ಯೇನ ದರ್ಶನಚಾರಿತ್ರಮೋಹನೀಯೋದಯೋಪಜನಿತಾವಿವೇಕರೂಪೋ ಮೋಹಃ, - ಏಷಃ ಭಾವಪಾಪಾಸ್ರವಪ್ರಪಂಚೋ ದ್ರವ್ಯಪಾಪಾಸ್ರವಪ್ರಪಂಚಪ್ರದೋ ಭವತೀತಿ ।

-ಇತಿ ಆಸ್ರವಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಅಥ ಸಂವರಪದಾರ್ಥವ್ಯಾಖ್ಯಾನಮ್ ।

ಅವು (ಅಶುಭಭಾವಗಳು) ಯಾವವುಗಳಿಗೆ ನಿಮಿತ್ತವಿವೆ ಅಂಥ ಆ ಯೋಗದ ಮುಖಾಂತರ ಪ್ರವಿಷ್ಟವಾಗುವಂಥ ಪುದ್ಗಲಗಳ ಅಶುಭಕರ್ಮ ಪರಿಣಾಮಗಳು (ಅಶುಭ ಕರ್ಮರೂಪವಾದ ಪರಿಣಾಮಗಳು)ಅವು ದ್ರವ್ಯ-ಪಾಪಾಸ್ರವಗಳಿವೆ.

ಗಾಥೆ - ೧೪೦

ಗಾಥಾರ್ಥ ಃ- [ಸಣ್ಣಾಓ ಯ] (ನಾಲ್ಕು) ಸಂಜ್ಞೆಗಳು, [ತಿಲೇಸ್ಸಾ] ಮೂರು ಲೇಶ್ಯೆಗಳು, [ಇಂದಿಯವಸದಾ ಯ) ಇಂದ್ರಿಯಾಧೀನತೆ, [ಅಟ್ಟರುದ್ದಾಣಿ] ಆರ್ತ-ರೌದ್ರ ಧ್ಯಾನಗಳು, [ದುಪ್ಪಉತ್ತಂ ಣಾಣಂ] ದುಃಪ್ರಯುಕ್ತವಾದ ಜ್ಞಾನ (ದುಷ್ಟರೂಪದಿಂದ ಅಶುಭ ಕಾರ್ಯಗಳಲ್ಲಿ ತೊಡಗಿರುವ ಜ್ಞಾನ) [ಯ] ಮತ್ತು [ಮೋಹೋ] ಮೋಹ - [ಪಾವಪ್ಪದಾ ಹೋಂತಿ] ಈ ಭಾವಗಳು ಪಾಪಪ್ರದಗಳಾಗಿವೆ.

ಟೀಕೆ ಃ- ಇದು ವಿಸ್ತಾರದಿಂದ ಪಾಪಾಸ್ರವಭೂತ ಭಾವಗಳ ಕಥನವಿದೆ.

ಯಾವ ಸಂಜ್ಞೆಗಳು, ಮೂರು ಲೇಶ್ಯೆಗಳು, ಇಂದ್ರಿಯವಶತೆ, ಆರ್ತರೌದ್ರಧ್ಯಾನ ।
ಇವಲ್ಲದೆ ದುಃಪ್ರಯುಕ್ತಜ್ಞಾನಮೇಣ್ ಮೋಹವೀಭಾವಗಳು ಪಾಪಪ್ರದವಿವೆ ॥೧೪೦॥

ಇಂದಿಯಕಸಾಯಸಣ್ಣಾ ಣಿಗ್ಗಹಿದಾ ಜೇಹಿಂ ಸುಟ್ಠು ಮಗ್ಗಮ್ಹಿ ।
ಜಾವತ್ತಾವತ್ತೇಸಿಂ ಪಿಹಿದಂ ಪಾವಾಸವಚ್ಛಿದ್ದಂ ॥೧೪೧॥

ಇಂದ್ರಿಯಕಷಾಯಸಂಜ್ಞಾ ನಿಗೃಹೀತಾ ಯೈಃ ಸುಷ್ಠು ಮಾರ್ಗೇ ।
ಯಾವತ್ತಾವತ್ತೇಷಾಂ ಪಿಹಿತಂ ಪಾಪಾಸ್ರವಛಿದ್ರಮ್ ॥೧೪೧॥

ಅನಂತರತ್ವಾತ್ಪಾಪಸ್ಯೈವ ಸಂವರಾಖ್ಯಾನಮೇತತ್ ।

ತೀವ್ರ ಮೋಹದ ಉದಯದಿಂದ ಉತ್ಪನ್ನವಾಗುವಂಥ ಆಹಾರ-ಭಯ-ಮೈಥುನ-ಪರಿಗ್ರಹಸಂಜ್ಞೆಗಳು, ತೀವ್ರ ಕಷಾಯದ ಉದಯದಿಂದ ಅನುರಂಜಿತ[೧] ಯೋಗ ಪ್ರವೃತ್ತಿರೂಪವಾದ ಕೃಷ್ಣ-ನೀಲ-ಕಾಪೋತವೆಂಬ ಹೆಸರಿನ ಮೂರು ಲೇಶ್ಯೆಗಳು ; ರಾಗ-ದ್ವೇಷಗಳ ಉದಯದ ಪ್ರಕರ್ಷದ[೨] ಕಾರಣ ವರ್ತಿಸುತ್ತಿರುವ ಇಂದ್ರಿಯಾಧೀನತೆ ; ರಾಗ-ದ್ವೇಷಗಳ ಉದ್ರೇಕದ[೩] ಕಾರಣ ಪ್ರಿಯವಸ್ತುವಿನ ಸಂಯೋಗದ, ಅಪ್ರಿಯ ವಸ್ತುವಿನ ವಿಯೋಗದ ವೇದನೆಯಿಂದ ಬಿಡುಗಡೆ ಹೊಂದುವ ಮತ್ತು ನಿದಾನದ ಇಚ್ಛೆಯ ರೂಪವಾದ ಆರ್ತಧ್ಯಾನ ; ಕಷಾಯದಿಂದ ಕ್ರೂರ[೪] ವಾದಂಥ ಪರಿಣಾಮದ ಕಾರಣವಾಗಿ ಆಗುವಂಥ ಹಿಂಸಾನಂದ, ಅಸತ್ಯಾನಂದ, ಸ್ತೇಯಾನಂದ ಹಾಗೂ ವಿಷಯ ಸಂರಕ್ಷಣಾನಂದರೂಪ ರೌದ್ರಧ್ಯಾನ,; ನಿಷ್ಪ್ರಯೋಜನ (ವ್ಯರ್ಥ) ವಾದ ಶುಭ ಕರ್ಮದಿಂದ ಇತರೆಡೆ (ಅಶುಭ ಕಾರ್ಯದಲ್ಲಿ) ದುಷ್ಟರೂಪದಿಂದ ತೊಡಗಿರುವ ಜ್ಞಾನ ; ಮತ್ತು ಸಾಮಾನ್ಯರೂಪದಿಂದ ದರ್ಶನ ಚಾರಿತ್ರ ಮೋಹನೀಯದ ಉದಯದಿಂದ ಉತ್ಪನ್ನವಾದ ಅವಿವೇಕ ರೂಪದ ಮೋಹ-ಇವು ಭಾವ ಪಾಪಾಸ್ರವದ ವಿಸ್ತಾರವು ದ್ರವ್ಯಪಾಪಾಸ್ರವದ ವಿಸ್ತಾರವನ್ನು ಪ್ರದಾನ ಮಾಡುವಂಥದ್ದಿದೆ. (ಎಂದರೆ ಮೇಲೆ ಹೇಳಿದ ಭಾವ ಪಾಪಾಸ್ರವ ರೂಪವಾದ ಅನೇಕ ವಿಧದ ಭಾವಗಳು ಆಯಾಯ ಅನೇಕ ವಿಧದ ದ್ರವ್ಯಪಾಪಾಸ್ರವದಲ್ಲಿ ನಿಮಿತ್ತಭೂತವಾಗಿವೆ.)

ಈ ಪ್ರಕಾರವಾಗಿ ಆಸ್ರವ ಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

ಗಾಥಾ - ೧೪೧

ಗಾಥಾರ್ಥ ಃ- [ಜೇ ಹಿಂ] ಯಾರು [ಸುಟ್ಠು ಮಗ್ಗಮ್ಹಿ] ಒಳ್ಳೆಯ ರೀತಿಯಿಂದ ಮಾರ್ಗದಲ್ಲಿದ್ದು ಕೊಂಡು [ಇಂದಿಯಕಸಾಯಸಣ್ಣಾ] ಇಂದ್ರಿಯಗಳು, ಕಷಾಯಗಳು ಮತ್ತು ಸಂಜ್ಞೆಗಳನ್ನು [ಜಾವತ್

ಯಾವನು ಮಾರ್ಗದಲಿದ್ದು ಇಂದ್ರಿಯ, ಕಷಾಯ, ಸಂಜ್ಞೆಗಳನೆಷ್ಟು ನಿಗ್ರಹಿಪನು ।
ಅವನಿಗಷ್ಟು ಪ್ರಮಾಣದಲಿ ಪಾಪಾಸ್ರವದ ರಂಧ್ರಗಳು ಮುಚ್ಚಿಹೋಗುವವು ॥೧೪೧॥

೧. ಅನುರಂಜಿತ = ಬಣ್ಣ ಹಾಕಿದ. ಕಷಾಯದ ಉದಯದಿಂದ ಅನುರಂಜಿತವಾದ ಯೋಗ ಪ್ರವೃತ್ತಿಯು ಅದು ಲೇಶ್ಯೆಯಿದೆ. ಅಲ್ಲಿ ಕೃಷ್ಣ ಮೊದಲಾದ ಮೂರು ಲೇಶ್ಯೆಗಳು ತೀವ್ರ ಕಷಾಯದ ಉದಯದಿಂದ ಅನುರಂಜಿತ ಯೋಗಪ್ರವೃತ್ತಿರೂಪವಿದೆ.

೨. ಪ್ರಕರ್ಷ - ಉತ್ಕರ್ಷ ; ಉಗ್ರತೆ.

೩. ಉದ್ರೇಕ = ಅಧಿಕ್ಯ ; ಹೆಚ್ಚಳ.

೪. ಕ್ರೂರ = ನಿರ್ದಯ ; ಕಠೋರ ; ಉಗ್ರ.

ಮಾರ್ಗೋ ಹಿ ಸಂವರಃ ತನ್ನಿಮಿತ್ತಮಿಂದ್ರಿಯಾಣಿ ಕಷಾಯಾಃ ಸಂಜ್ಞಾಶ್ಚ ಯಾವತಾಂಶೇನ ಯಾವಂತಂ ವಾ ಕಾಲಂ ನಿಗೃಹ್ಯಂತೇ ತಾವತಾಂಶೇನ ತಾವಂತಂ ವಾ ಕಾಲಂ ಪಾಪಾಸ್ರವದ್ವಾರಂ ಪಿಧೀಯತೇ । ಇಂದ್ರಿಯ-ಕಷಾಯಸಂಜ್ಞಾಃ ಭಾವಪಾಪಾಸ್ರವೋ ದ್ರವ್ಯಪಾಪಾಸ್ರವಹೇತುಃ ಪೂರ್ವಮುಕ್ತಃ । ಇಹ ತನ್ನಿರೋಧೋ ಭಾವಪಾಪಸಂವರೋ ದ್ರವ್ಯಪಾಪಸಂವರಹೇತುರವದಾರಣೀಯ ಇತಿ ।

ಜಸ್ಸ ಣ ವಿಜ್ಜದಿ ರಾಗೋ ದೋಸೋ ಮೋಹೋ ವ ಸವ್ವದವ್ವೇಸು ।
ಣಾಸವದಿ ಸುಹಂ ಅಸುಹಂ ಸಮಸುಹದುಕ್ಖಸ್ಸ ಭಿಕ್ಖುಸ್ಸ ॥೧೪೨॥

ಯಸ್ಯ ನ ವಿದ್ಯತೇ ರಾಗೋ ದ್ವೇಷೋ ಮೋಹೋ ವಾ ಸರ್ವದ್ರವ್ಯೇಷು ।
ನಾಸ್ರವತಿ ಶುಭಮಶುಭಂ ಸಮಸುಖದುಃಖಸ್ಯ ಭಿಕ್ಷೋಃ ॥೧೪೨॥

ಸಾಮಾನ್ಯಸಂವರಸ್ವರೂಪಾಖ್ಯಾನಮೇತತ್ ।

ಣಿಗ್ಗಹಿದಾ] ಎಷ್ಟು ನಿಗ್ರಹ ಮಾಡುತ್ತಾರೆ [ತಾವತ್] ಅಷ್ಟು [ಪಾವಾಸವಚ್ಛಿದ್ದಂ] ಪಾಪಾಸ್ರವದ ಛಿದ್ರಗಳು [ತೇಸಿಂ] ಅವರಿಗೆ [ಪಿಹಿದಂ] ಬಂದಾಗುತ್ತವೆ.

ಟೀಕೆ :- ಪಾಪದ ಅನಂತರ ಇರುವುದರಿಂದ ಇದು ಪಾಪದ್ವೇನೇ ಸಂವರದ ಕಥನವಿದೆ. (ಎಂದರೆ ಪಾಪದ ಕಥನದ ನಂತರ ಕೂಡಲೇ ಇರುವುದರಿಂದ ಇಲ್ಲಿ ಪಾಪದ್ವೇನೇ ಸಂವರದ ಕಥನವನ್ನು ಮಾಡಲಾಗಿದೆ.)

ವಾಸ್ತವಿಕವಾಗಿ ಮಾರ್ಗವೆಂದರೆ ಸಂವರವಿದೆ ; ಅದರ ನಿಮಿತ್ತದಿಂದ (ಅದರ ಉದ್ದೇಶದಿಂದ) ಇಂದ್ರಿಯಗಳು ಕಷಾಯಗಳು ಹಾಗೂ ಸಂಜ್ಞೆಗಳನ್ನು ಎಷ್ಟು ಅಂಶದಲ್ಲಿ ಅಥವಾ ಎಷ್ಟು ಕಾಲದವರೆಗೆ ನಿಗ್ರಹ ಮಾಡಲಾಗುತ್ತದೆ ಅಷ್ಟು ಅಂಶದಲ್ಲಿ ಅಥವಾ ಅಷ್ಟು ಕಾಲದವರೆಗೆ ಪಾಪಾಸ್ರವದ ದ್ವಾರವು ಬಂದಾಗುತ್ತದೆ.

ಇಂದ್ರಿಯಗಳಿಗೆ, ಕಷಾಯಗಳಿಗೆ ಮತ್ತು ಸಂಜ್ಞೆಗಳಿಗೆ - ಭಾವ ಪಾಪಾಸ್ರವಕ್ಕೆ ದ್ರವ್ಯಪಾಪಾಸ್ರವಕ್ಕೆ ಹೇತು (ನಿಮಿತ್ತ)ವನ್ನು ಮೊದಲು (೧೪೦ನೆಯ ಗಾಥೆಯಲ್ಲಿ) ಹೇಳಲಾಗಿತ್ತು ; ಇಲ್ಲಿ (ಈ ಗಾಥೆಯಲ್ಲಿ) ಅವುಗಳ ನಿರೋಧ (ಇಂದ್ರಿಯಗಳ, ಕಷಾಯಗಳ ಮತ್ತು ಸಂಜ್ಞೆಗಳ ನಿರೋಧ)ವೆಂದರೆ ಭಾವಪಾಪಸಂವರವು ದ್ರವ್ಯಪಾಪಸಂವರದ ಹೇತುವೆಂದು ತಿಳಿಯುವುದು.

ಗಾಥೆ - ೧೪೨

ಗಾಥಾರ್ಥ :- [ಜಸ್ಸ] ಯಾವನಿಗೆ [ಸವ್ವದವ್ವೇಸು] ಎಲ್ಲ ದ್ರವ್ಯಗಳ ಕುರಿತು [ರಾಗೋ] ರಾಗ, [ದೋಸೋ] ದ್ವೇಷ [ವ] ಅಥವಾ [ಮೋಹೋ] ಮೋಹವು [ಣ ವಿಜ್ಜದಿ] ಇಲ್ಲ, [ಸಮಸುಹದುಕ್ಖಸ್ಸ ಭಿಕ್ಖುಸ್ಸ] ಆ ಸಮಸುಖದುಃಖದ ಭಿಕ್ಷುವಿಗೆ (-ಸುಖ-ದುಃಖಗಳ ಕುರಿತು ಸಮಭಾವದಿಂದಿರುವಂಥ ಮುನಿಗೆ [ಸುಹಂ ಅಸುಹಂ] ಶುಭ ಮತ್ತು ಅಶುಭ ಕರ್ಮಗಳು [ಣಾಸವದಿ] ಆಸ್ರವಿತವಾಗುವುದಿಲ್ಲ.

ಸಮಸ್ತ ದ್ರವ್ಯಗಳ ಕುರಿತು ಯಾರಿಗೆ ರಾಗದ್ವೇಷವಥವಮೋಹವಿಲ್ಲ ।
ಸಮಸುಖದುಃಖಿಯಾದಾಭಿಕ್ಷುವಿಗೆ ಶುಭಮೇಣಶುಭಕರ್ಮಾಸ್ರವವಿಲ್ಲ ॥೧೪೨॥

ಯಸ್ಯ ರಾಗರೂಪೋ ದ್ವೇಷರೂಪೋ ಮೋಹರೂಪೋ ವಾ ಸಮಗ್ರಪರದ್ರವ್ಯೇಷು ನ ಹಿ ವಿದ್ಯತೇ ಭಾವಃ ತಸ್ಯ ನಿರ್ವಿಕಾರಚೈತನ್ಯತ್ವಾತ್ಸಮಸುಖದುಃಖಸ್ಯ ಭಿಕ್ಷೋಃ ಶುಭಮಶುಭಂ ಚ ಕರ್ಮ ನಾಸ್ರವತಿ, ಕಿಂತು ಸಂವ್ರಿಯತ ಏವ । ತದತ್ರ ಮೋಹರಾಗದ್ವೇಷಪರಿಣಾಮನಿರೋಧೋ ಭಾವಸಂವರಃ । ತನ್ನಿಮಿತ್ತಃ ಶುಭಾಶುಭ-ಕರ್ಮಪರಿಣಾಮನಿರೋಧೋ ಯೋಗದ್ವಾರೇಣ ಪ್ರವಿಶತಾಂ ಪುದ್ಗಲಾನಾಂ ದ್ರವ್ಯಸಂವರ ಇತಿ ।

ಜಸ್ಸ ಜದಾ ಖಲು ಪುಣ್ಣಂ ಜೋಗೇ ಪಾವಂ ಚ ಣತ್ಥಿ ವಿರದಸ್ಸ ।
ಸಂವರಣಂ ತಸ್ಸ ತದಾ ಸುಹಾಸುಹಕದಸ್ಸ ಕಮ್ಮಸ್ಸ ॥೧೪೩॥

ಯಸ್ಯ ಯದಾ ಖಲು ಪುಣ್ಯಂ ಯೋಗೇ ಪಾಪಂ ಚ ನಾಸ್ತಿ ವಿರತಸ್ಯ ।
ಸಂವರಣಂ ತಸ್ಯ ತದಾ ಶುಭಾಶುಭಕೃತಸ್ಯ ಕರ್ಮಣಃ ॥೧೪೩॥

ವಿಶೇಷೇಣ ಸಂವರಸ್ವರೂಪಾಖ್ಯಾನಮೇತತ್ ।

ಟೀಕೆ :- ಇದು ಸಾಮಾನ್ಯರೂಪದಿಂದ ಸಂವರದ ಸ್ವರೂಪದ ಕಥನವಿದೆ.

ಯಾವನಿಗೆ ಸಂಪೂರ್ಣ ಪರದ್ರವ್ಯಗಳ ಕುರಿತು ರಾಗರೂಪ, ದ್ವೇಷರೂಪ ಅಥವಾ ಮೋಹರೂಪಗಳಾದ ಭಾವಗಳಿರುವುದಿಲ್ಲ ಆ ಭಿಕ್ಷುವಿಗೆ - ಯಾವನಿಗೆ ನಿರ್ವಿಕಾರ ಚೈತನ್ಯತನದ ಕಾರಣ ಸಮಸುಖದುಃಖ[೧]ವಿದೆ ಅವನಿಗೆ - ಶುಭ ಮತ್ತು ಅಶುಭ ಕರ್ಮದ ಆಸ್ರವವಾಗುವುದಿಲ್ಲ, ಆದರೆ ಸಂವರವೇ ಆಗುತ್ತದೆ. ಅದಕ್ಕಾಗಿ ಇಲ್ಲಿ ಮೋಹರಾಗದ್ವೇಷ ಪರಿಣಾಮದ ನಿರೋಧವು ಅದು ಭಾವಸಂವರವಿದೆ ಮತ್ತು ಅದು (ಮೋಹ ರಾಗದ್ವೇಷರೂಪ ಪರಿಣಾಮದ ನಿರೋಧವು) ಯಾವುದರ ನಿಮಿತ್ತವಿದೆ ಅಂಥ ಆ ಯೋಗದ ಮುಖಾಂತರ ಪ್ರವಿಷ್ಟವಾಗುವಂಥ ಪುದ್ಗಲಗಳ ಶುಭಾಶುಭ ಕರ್ಮ ಪರಿಣಾಮದ (-ಶುಭಾಶುಭ ಕರ್ಮರೂಪ ಪರಿಣಾಮದ) ನಿರೋಧವು ಅದು ದ್ರವ್ಯಸಂವರವಿದೆ.

ಗಾಥೆ - ೧೪೩

ಗಾಥಾರ್ಥ :- [ಜಸ್ಸ] ಯಾವನಿಗೆ (ಯಾವ ಮುನಿಗೆ), [ವಿರದಸ್ಸ] ವಿರಕ್ತಿಯು ವರ್ತಿಸುತ್ತ [ಜೋಗೇ] ಯೋಗದಲ್ಲಿ [ಪುಣ್ಣಂ ಪಾವಂ ಚ] ಪುಣ್ಯ ಮತ್ತು ಪಾಪಗಳು [ಜದಾ] ಯಾವಾಗ [ಖಲು]

ಯಾವಾಗ ಯೋಗದಲಿ ಪುಣ್ಯಪಾಪವಿಲ್ಲದೆ ನಿಜದಿ ವಿರಕ್ತಿ ವರ್ತಿಪುದು ।
ಆವಾಗ ಅವನಿಗೆ ಶುಭಾಶುಭ ಭಾವಕೃತ ಕರ್ಮದ ಸಂವರವಾಗುವುದು ॥೧೪೩॥

---

೧. ಸಮಸುಖದುಃಖ = ಯಾವನಿಗೆ ಸುಖದುಃಖಗಳಲ್ಲಿ ಸಮಭಾವವಿದೆ ; ಯಾವನಿಗೆ ಇಷ್ಟಾನಿಷ್ಟಸಂಯೋಗಗಳಲ್ಲಿ ಹರ್ಷಶೋಕಾದಿ ವಿಷಮ ಪರಿಣಾಮಗಳಾಗುವುದಿಲ್ಲ. [ಯಾವನಿಗೆ ರಾಗದ್ವೇಷ ಮೋಹಗಳಿಲ್ಲ ಆ ಮುನಿಯು ನಿರ್ವಿಕಾರ ಚೈತನ್ಯಮಯನಿದ್ದಾನೆ ಎಂದರೆ ಅವನ ಚೈತನ್ಯ ಪರ್ಯಾಯದಲ್ಲೂ ವಿಕಾರವಿಲ್ಲದಿರುವುದರಿಂದ ಅವನು ಸಮಸುಖ ದುಃಖಿಯಿದ್ದಾನೆ.]

ಯಸ್ಯ ಯೋಗಿನೋ ವಿರತಸ್ಯ ಸರ್ವತೋ ನಿವೃತ್ತಸ್ಯ ಯೋಗೇ ವಾಙ್ಮನಃಕಾಯಕರ್ಮಣಿ ಶುಭಪರಿಣಾಮ-ರೂಪಂ ಪುಣ್ಯಮಶುಭಪರಿಣಾಮರೂಪಂ ಪಾಪಂ ಚ ಯದಾ ನ ಭವತಿ ತಸ್ಯ ತದಾ ಶುಭಾಶುಭಭಾವಕೃತಸ್ಯ ದ್ರವ್ಯಕರ್ಮಣಃ ಸಂವರಃ ಸ್ವಕಾರಣಾಭಾವಾತ್ಪ್ರಸಿದ್ಧ್ಯತಿ । ತದತ್ರ ಶುಭಾಶುಭಪರಿಣಾಮನಿರೋಧೋ ಭಾವಪುಣ್ಯಪಾಪಸಂವರೋ ದ್ರವ್ಯಪುಣ್ಯಪಾಪಸಂವರಸ್ಯ ಹೇತುಃ ಪ್ರಧಾನೋಽವಧಾರಣೀಯ ಇತಿ ।

- ಇತಿ ಸಂವರಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಅಥ ನಿರ್ಜರಾಪದಾರ್ಥವ್ಯಾಖ್ಯಾನಮ್ ।

ಸಂವರಜೋಗೇಹಿಂ ಜುದೋ ತವೇಹಿಂ ಜೋ ಚಿಟ್ಠದೇ ಬಹುವಿಹೇಹಿಂ ।
ಕಮ್ಮಾಣಂ ಣಿಜ್ಜರಣಂ ಬಹುಗಾಣಂ ಕುಣದಿ ಸೋ ಣಿಯದಂ ॥೧೪೪॥

ಸಂವರಯೋಗಾಭ್ಯಾಂ ಯುಕ್ತಸ್ತಪೋಭಿರ್ಯಶ್ಚೇಷ್ಟತೇ ಬಹುವಿಧೈಃ ।
ಕರ್ಮಣಾಂ ನಿರ್ಜರಣಂ ಬಹುಕಾನಾಂ ಕರೋತಿ ಸ ನಿಯತಮ್ ॥೧೪೪॥

ನಿರ್ಜರಾಸ್ವರೂಪಾಖ್ಯಾನಮೇತತ್ ।

ನಿಜವಾಗಿ [ಣತ್ಥಿ] ಇರುವುದಿಲ್ಲ [ತದಾ] ಆಗ [ತಸ್ಸ] ಅವನಿಗೆ [ಸುಹಾಸುಹಕದಸ್ಸ ಕಮ್ಮಸ್ಸ] ಶುಭಾಶುಭ ಭಾವಕೃತ ಕರ್ಮದ [ಸಂವರಣಂ] ಸಂವರವಾಗುತ್ತದೆ.

ಟೀಕೆ :- ಇದು ವಿಶೇಷರೂಪದಿಂದ ಸಂವರದ ಸ್ವರೂಪದ ಕಥನವಿದೆ.

ಯಾವ ಯೋಗಿಗೆ ವಿರತಿ ಎಂದರೆ ಸರ್ವಥಾ ನಿವೃತ್ತಿಯು ವರ್ತಿಸುತ್ತ, ಯೋಗದಲ್ಲಿ - ವಚನ, ಮನಸ್ಸು ಮತ್ತು ಕಾಯ ಸಂಬಂಧದ ಕ್ರಿಯೆಗಳಲ್ಲಿ - ಶುಭಪರಿಣಾಮರೂಪ ಪುಣ್ಯ ಮತ್ತು ಅಶುಭ ಪರಿಣಾಮರೂಪ ಪಾಪವು ಯಾವಾಗ ಇರುವುದಿಲ್ಲ ಆಗ ಅವನಿಗೆ ಶುಭಾಶುಭಭಾವಕೃತ ದ್ರವ್ಯಕರ್ಮದ (-ಶುಭಾಶುಭಭಾವವು ಯಾವುದರ ನಿಮಿತ್ತವಿದೆ ಅಂಥ ದ್ರವ್ಯಕರ್ಮದ), ತನ್ನ ಕಾರಣದ ಅಭಾವದ ಮೂಲಕ ಸಂವರವಾಗುತ್ತದೆ. ಆದುದರಿಂದ ಇಲ್ಲಿ (ಈ ಗಾಥೆಯಲ್ಲಿ) ಶುಭಾಶುಭ ಪರಿಣಾಮದ ನಿರೋಧವು - ಭಾವಪುಣ್ಯಪಾಪ ಸಂವರವು - ದ್ರವ್ಯಪುಣ್ಯಪಾಪ ಸಂವರದ ಪ್ರಧಾನ ಹೇತು [೧]ವೆಂದು ತಿಳಿಯುವುದು.

ಈ ಪ್ರಕಾರ ಸಂವರ ಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

ಯಾವನು ಸಂವರಯೋಗದಿಂ ಯುಕ್ತನಿದ್ದು ಬಹುವಿಧತಪಸಹವರ್ತಿಪನು ।
ಅವನು ನಿಯಮದಿಂದನೇಕಕರ್ಮಗಳ ನಿರ್ಜರೆಯ ಮಾಡುವನು ॥೧೪೪॥

---

೧. ಪ್ರಧಾನ ಹೇತು = ಮುಖ್ಯ ನಿಮಿತ್ತ. [ದ್ರವ್ಯಸಂವರದಲ್ಲಿ 'ಮುಖ್ಯ ನಿಮಿತ್ತ'ವು ಜೀವದ ಶುಭಾಶುಭ ಪರಿಣಾಮದ ನಿರೋಧವಿದೆ, ಯೋಗದ ನಿರೋಧವಲ್ಲ, (ಇಲ್ಲಿ ದ್ರವ್ಯಸಂವರದ ಉಪಾದಾನಕಾರಣ-ನಿಶ್ಚಯಕಾರಣವಂತೂ ಸ್ವಯಂ ಪುದ್ಗಲವೇ ಇದೆಯೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದು ಯೋಗ್ಯವಾಗಿದೆ.]

ಶುಭಾಶುಭಪರಿಣಾಮನಿರೋಧಃ ಸಂವರಃ, ಶುದ್ಧೋಪಯೋಗೋ ಯೋಗಃ । ತಾಭ್ಯಾಂ ಯುಕ್ತಸ್ತಪೋಭಿರನಶನಾವಮೌದರ್ಯವೃತ್ತಿಪರಿಸಂಖ್ಯಾನರಸಪರಿತ್ಯಾಗವಿವಿಕ್ತಶಯ್ಯಾಸನಕಾಯಕ್ಲೇಶಾದಿ-ಭೇದಾದ್ಬಹಿರಂಗೈಃ ಪ್ರಾಯಶ್ಚಿತ್ತವಿನಯವೈಯಾವೃತ್ತ್ಯಸ್ವಾಧ್ಯಾಯವ್ಯುತ್ಸರ್ಗಧ್ಯಾನಭೇದಾದಂತರಂಗೈಶ್ಚ ಬಹು-ವಿಧೈರ್ಯಶ್ಚೇಷ್ಟತೇ ಸ ಖಲು ಬಹೂನಾಂ ಕರ್ಮಣಾಂ ನಿರ್ಜರಣಂ ಕರೋತಿ । ತದತ್ರ ಕರ್ಮವೀರ್ಯಶಾತನ-ಸಮರ್ಥೋ ಬಹಿರಂಗಾಂತರಂಗತಪೋಭಿರ್ಬೃಂಹಿತಃ ಶುದ್ಧೋಪಯೋಗೋ ಭಾವನಿರ್ಜರಾ, ತದನುಭಾವ-ನೀರಸೀಭೂತಾನಾಮೇಕದೇಶಸಂಕ್ಷಯಃ ಸಮುಪಾತ್ತಕರ್ಮಪುದ್ಗಲಾನಾಂ ದ್ರವ್ಯನಿರ್ಜರೇತಿ ।

ಈಗ ನಿರ್ಜರಾಪದಾರ್ಥದ ವ್ಯಾಖ್ಯಾನವಿದೆ.

ಗಾಥಾ-೧೪೪

ಗಾಥಾರ್ಥ :- [ಸಂವರಜೋಗೇಹಿಂ ಜುದೋ] ಸಂವರ ಮತ್ತು ಯೋಗದಿಂದ (ಶುದ್ಧೋಪ-ಯೋಗದಿಂದ) ಯುಕ್ತನಾದಂಥ [ಜೋ] ಯಾವ ಜೀವನು [ಬಹುವಿಹೇಹಿಂ ತವೇಹಿಂ ಚಿಟ್ಠದೇ] ಹಲವು ವಿಧದ ತಪಸ್ಸುಗಳಿಂದೊಡಗೂಡಿ ವರ್ತಿಸುತ್ತಾನೆ, [ಸೋ] ಅವನು [ಣಿಯದಂ] ನಿಯಮದಿಂದ [ಬಹುಗಾಣಂ ಕಮ್ಮಾಣಂ] ಅನೇಕ ಕರ್ಮಗಳ [ಣಿಜ್ಜರಣಂ ಕುಣದಿ] ನಿರ್ಜರೆ ಮಾಡುತ್ತಾನೆ.

ಟೀಕೆ :- ಇದು ನಿರ್ಜರೆಯ ಸ್ವರೂಪದ ಕಥನವಿದೆ.

ಸಂವರ ಎಂದರೆ ಶುಭಾಶುಭ ಪರಿಣಾಮದ ನಿರೋಧ, ಮತ್ತು ಯೋಗ ಎಂದರೆ ಶುದ್ಧೋಪಯೋಗವು ಅವುಗಳಿಂದ (ಸಂವರ ಮತ್ತು ಯೋಗದಿಂದ) ಯುಕ್ತನಾದ ಯಾವನು (ಪುರುಷನು), ಅನಶನ, ಅವಮೌದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ ಮತ್ತು ಕಾಯಕ್ಲೇಶ ಮೊದಲಾದ ಭೇದಗಳುಳ್ಳ ಬಹಿರಂಗ ತಪಸ್ಸುಗಳ ಸಹಿತ ಮತ್ತು ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಮತ್ತು ಧ್ಯಾನದಂಥ ಭೇದಗಳುಳ್ಳ ಅಂತರಂಗ ತಪಸ್ಸುಗಳ ಸಹಿತ - ಹೀಗೆ ಹಲವು ವಿಧ ತಪಸ್ಸು[೧]ಗಳಿಂದೊಡಗೂಡಿ ವರ್ತಿಸುತ್ತಾನೆ ಅವನು (ಪುರುಷನು) ನಿಜವಾಗಿ ಅನೇಕ ಕರ್ಮಗಳ ನಿರ್ಜರೆ ಮಾಡುತ್ತಾನೆ. ಅದಕ್ಕಾಗಿ ಇಲ್ಲಿ (ಗಾಥೆಯಲ್ಲಿ) ಕರ್ಮದ ವೀರ್ಯದ (ಕರ್ಮದ ಶಕ್ತಿಯ) ಶಾತನ[೨] ಮಾಡುವಲ್ಲಿ ಸಮರ್ಥವಾದಂಥ ಯಾವ ಬಹಿರಂಗ ಮತ್ತು

---

೧. ಯಾವ ಜೀವಕ್ಕೆ ಸಹಜ ಶುದ್ಧ ಸ್ವರೂಪದ ಪ್ರತಪನರೂಪವಾದ ನಿಶ್ಚಯ ತಪವಿದೆ ಆ ಜೀವದ, ಹಟವಿಲ್ಲದೆ ವರ್ತಿಸುತ್ತಿರುವ ಅನಶನಾದಿ ಸಂಬಂಧದ ಭಾವಗಳಿಗೆ ತಪಸ್ಸೆಂದು ಹೇಳಲಾಗುತ್ತದೆ. ಅದರಲ್ಲಿ ವರ್ತಿಸುತ್ತಿರುವ ಶುದ್ಧಿರೂಪ ಅಂಶವು ಅದು ನಿಶ್ಚಯ-ತಪವಿದೆ ಮತ್ತು ಶುಭತ್ವರೂಪ ಅಂಶಕ್ಕೆ ವ್ಯವಹಾರ-ತಪಸ್ಸೆಂದು ಹೇಳಲಾಗುತ್ತದೆ. (ಮಿಥ್ಯಾದೃಷ್ಟಿಗೆ ನಿಶ್ಚಯ-ತಪಸ್ಸು ಇಲ್ಲದಿರುವುದರಿಂದ ಅವನ ಅನಶನಾದಿ ಸಂಬಂಧದ ಶುಭಭಾವಗಳಿಗೆ ವ್ಯವಹಾರ-ತಪಸ್ಸೆಂದೂ ಹೇಳಲಾಗುವುದಿಲ್ಲ; ಏಕೆಂದರೆ ಎಲ್ಲಿ ಯಥಾರ್ಥ ತಪಸ್ಸಿನ ಸದ್ಭಾವವೇ ಇಲ್ಲ ಅಲ್ಲಲ್ಲಿ ಆ ಶುಭಭಾವಗಳಲ್ಲಿ ಯಾವುದರ ಆರೋಪ ಮಾಡಲಾಗುವುದು ?)

೨. ಶಾತನ ಮಾಡುವುದು = ತಿಳುವು ಮಾಡುವುದು ; ಕ್ಷೀಣ ಮಾಡುವುದು ; ನಾಶ ಮಾಡುವುದು.

ಜೋ ಸಂವರೇಣ ಜುತ್ತೋ ಅಪ್ಪಟ್ಠಪಸಾಧಗೋ ಹಿ ಅಪ್ಪಾಣಂ ।
ಮುಣಿಊಣ ಝಾದಿ ಣಿಯದಂ ಣಾಣಂ ಸೋ ಸಂಧುಣೋದಿಕಮ್ಮರಯಂ ॥೧೪೫॥

ಯಃ ಸಂವರೇಣ ಯುಕ್ತಃ ಆತ್ಮಾರ್ಥಪ್ರಸಾಧಕೋ ಹ್ಯಾತ್ಮಾನಮ್ ।
ಜ್ಞಾತ್ವಾ ಧ್ಯಾಯತಿ ನಿಯತಂ ಜ್ಞಾನಂ ಸ ಸಂಧುನೋತಿ ಕರ್ಮರಜಃ ॥೧೪೫॥

ಮುಖ್ಯನಿರ್ಜರಾಕಾರಣೋಪನ್ಯಾಸೋಽಯಮ್ ।

ಯೋ ಹಿ ಸಂವರೇಣ ಶುಭಾಶುಭಪರಿಣಾಮಪರಮನಿರೋಧೇನ ಯುಕ್ತಃ ಪರಿಜ್ಞಾತವಸ್ತುಸ್ವರೂಪಃ ಪರಪ್ರಯೋಜನೇಭ್ಯೋ ವ್ಯಾವೃತ್ತಬುದ್ಧಿಃ ಕೇವಲಂ ಸ್ವಪ್ರಯೋಜನಸಾಧನೋದ್ಯತಮನಾಃ ಆತ್ಮಾನಂ ಸ್ವೋಪಲಂಭೇನೋಪಲಭ್ಯ ಗುಣಗುಣಿನೋರ್ವಸ್ತುತ್ವೇನಾಭೇದಾತ್ತದೇವ ಜ್ಞಾನಂ ಸ್ವಂ ಸ್ವೇನಾವಿಚಲಿತ-

---

ಅಂತರಂಗ ತಪಸ್ಸುಗಳಿಂದ ವೃದ್ಧಿಗೆ[೧] ಪ್ರಾಪ್ತವಾದ ಶುದ್ಧೋಪಯೋಗವು ಅದು ಭಾವನಿರ್ಜರೆಯಿದೆ ಮತ್ತು ಅವುಗಳ ಪ್ರಭಾವದಿಂದ (ವೃದ್ಧಿಗೆ ಪ್ರಾಪ್ತವಾದ ಶುದ್ಧೋಪಯೋಗದ ನಿಮಿತ್ತದಿಂದ) ನೀರಸವಾದಂಥ ಉಪಾರ್ಜಿತ ಕರ್ಮಪುದ್ಗಲಗಳ ಏಕದೇಶ ಸಂಕ್ಷಯವು[೨] ಅದು ದ್ರವ್ಯನಿರ್ಜರೆಯಿದೆ.

ಗಾಥೆ - ೧೪೫

ಗಾಥಾರ್ಥ :- [ಸಂವರೇಣ ಜುತ್ತೋ] ಸಂವರದಿಂದ ಯುಕ್ತನಾದಂಥ [ಜೋ] ಯಾವ ಜೀವನು [ಅಪ್ಪಟ್ಠಪಸಾಧಗೋ ಹಿ] ನಿಜವಾಗಿ ಆತ್ಮಾರ್ಥದ ಪ್ರಸಾಧಕ (ತನ್ನ ಪ್ರಯೋಜನದ ಉತ್ಕೃಷ್ಟ ಸಾಧಕ)ನಾಗಿ ವರ್ತಿಸುತ್ತ [ಅಪ್ಪಾಣಂ ಮುಣಿಊಣ] ಆತ್ಮನನ್ನು ತಿಳಿದುಕೊಂಡು (ಅನುಭವಮಾಡಿ) [ಣಾಣಂ ಣಿಯದಂ ಝಾದಿ] ಜ್ಞಾನವನ್ನು ನಿಶ್ಚಲರೂಪದಿಂದ ಧ್ಯಾನಿಸುತ್ತಾನೆ [ಸೋ] ಅವನು [ಕಮ್ಮರಯಂ] ಕರ್ಮರಜವನ್ನು [ಸಂಧುಣೋದಿ] ಜಾಡಿಸಿ ಬಿಡುತ್ತಾನೆ.

ಟೀಕೆ :- ಇದು ನಿರ್ಜರೆಯ ಮುಖ್ಯ ಕಾರಣದ ಕಥನವಿದೆ.

ಯಾವನು ಸಂವರಸಹ ಆತ್ಮಾರ್ಥದ ಪ್ರಸಾಧಕ ಆತ್ಮನನು ತಿಳಿದುಕೊಂಡು ।
ಅವನು ನಿಶ್ಚಲರೂಪದಿಂದ ಜ್ಞಾನವ ಧ್ಯಾನಿಸಿ ಕರ್ಮರಜವ ಕಳೆಯುವನು ॥೧೪೫॥

---

೧. ವೃದ್ಧಿಗೆ ಪ್ರಾಪ್ತ = ಬೆಳೆದ ; ಉಗ್ರವಾದ. [ಸಂವರ ಮತ್ತು ಶುದ್ಧೋಪಯೋಗವುಳ್ಳ ಜೀವನಿಗೆ ಯಾವಾಗ ಉಗ್ರ ಶುದ್ಧೋಪಯೋಗವಿರುತ್ತದೆ ಆಗ ಅನೇಕ ಕರ್ಮಗಳ ನಿರ್ಜರೆಯಾಗುತ್ತದೆ. ಶುದ್ಧೋಪಯೋಗದ ಉಗ್ರತೆ ಮಾಡುವ ವಿಧಿಯೆಂದರೆ ಶುದ್ಧ ಆತ್ಮದ್ರವ್ಯದ ಅವಲಂಬನದ ಉಗ್ರತೆ ಮಾಡುವುದೇ ಇದೆ. ಹೀಗೆ ಮಾಡುವವನಿಗೆ ಸಹಜಾವಸ್ಥೆಯಲ್ಲಿ ಹಟವಿಲ್ಲದ ಯಾವ ಅನಶನಾದಿ ಸಂಬಂಧದ ಭಾವಗಳು ವರ್ತಿಸುತ್ತವೆ (ಶುಭತ್ವರೂಪ ಅಂಶದೊಡನೆ) ಉಗ್ರ-ಶುದ್ಧರೂಪ ಅಂಶವಿರುತ್ತದೆ ಅದರಿಂದ ಅನೇಕ ಕರ್ಮಗಳ ನಿರ್ಜರೆಯಾಗುತ್ತದೆ. (ಮಿಥ್ಯಾದೃಷ್ಟಿಗಂತೂ ಶುದ್ಧಾತ್ಮದ್ರವ್ಯದ ಭಾಸವೇ ಆಗದಿರುವುದರಿಂದ ಅವನಿಗೆ ಸಂವರವಿಲ್ಲ, ಶುದ್ಧೋಪಯೋಗವಿಲ್ಲ, ಶುದ್ಧೋಪಯೋಗದ ವೃದ್ಧಿಯದಂತೂ ಮಾತೆಲ್ಲಿ ಉಳಿಯಿತು ? ಅದಕ್ಕಾಗಿ ಅವನಿಗೆ ಸಹಜಾವಸ್ಥೆಯಿಲ್ಲದ-ಹಠಪೂರ್ವಕ-ಅನಶನಾದಿ ಸಂಬಂಧದ ಶುಭಭಾವಗಳು ಕದಾಚಿತ್ ಇದ್ದರೂ ಕೂಡ ಮೋಕ್ಷಕ್ಕೆ ಹೇತುಭೂತವಾದ ನಿರ್ಜರೆಯು ಒಂದಿಷ್ಟೂ ಇರುವುದಿಲ್ಲ.]

೨. ಸಂಕ್ಷಯ =ಸಮ್ಯಕ್ ಪ್ರಕಾರದಿಂದ ಕ್ಷಯ.

ಮನಾಸ್ಸಂಚೇತಯತೇ ಸ ಖಲು ನಿತಾಂತನಿಸ್ನೇಹಃ ಪ್ರಹೀಣಸ್ನೇಹಾಭ್ಯಂಗಪರಿಷ್ವಂಗಶುದ್ಧಸ್ಫಟಿಕಸ್ತಂಭವತ್ ಪೂರ್ವೋಪಾತ್ತಂ ಕರ್ಮರಜಃ ಸಂಧುನೋತಿ । ಏತೇನ ನಿರ್ಜರಾಮುಖ್ಯತ್ವೇ ಹೇತುತ್ವಂ ಧ್ಯಾನಸ್ಯ ದ್ಯೋತಿತಮಿತಿ ।

ಜಸ್ಸ ಣ ವಿಜ್ಜದಿ ರಾಗೋ ದೋಸೋ ಮೋಹೋ ವ ಜೋಗಪರಿಕಮ್ಮೋ ।
ತಸ್ಸ ಸುಹಾಸುಹಡಹಣೋ ಝಾಣಮಓ ಜಾಯದೇ ಅಗಣೇ ॥೧೪೬॥

ಯಸ್ಯ ನ ವಿದ್ಯತೇ ರಾಗೋ ದ್ವೇಷೋ ಮೋಹೋ ವಾ ಯೋಗಪರಿಕರ್ಮ ।
ತಸ್ಯ ಶುಭಾಶುಭದಹನೋ ಧ್ಯಾನಮಯೋ ಜಾಯತೇ ಅಗ್ನಿಃ ॥೧೪೬॥

ಸಂವರದಿಂದ ಎಂದರೆ ಶುಭಾಶುಭ ಪರಿಣಾಮದ ಪರಮ ನಿರೋಧದಿಂದ ಯುಕ್ತನಾದಂಥ ಯಾವ ಜೀವನು ವಸ್ತು ಸ್ವರೂಪವನ್ನು (ಹೇಯ-ಉಪಾದೇಯ ತತ್ತ್ವವನ್ನು) ಸರಿಯಾಗಿ ತಿಳಿದುಕೊಳ್ಳುತ್ತ ಪರ-ಪ್ರಯೋಜನದಿಂದ ಅವನ ಬುದ್ಧಿಯು ವ್ಯಾವೃತ್ತ[೧]ವಾಗಿದೆ ಮತ್ತು ಕೇವಲ ತನ್ನ ಪ್ರಯೋಜನದ ಸಾಧನೆಯಲ್ಲಿ ಅವನ ಮನಸ್ಸು[೨] ಉದ್ಯತ[೩]ವಾಗಿರುವ ಹಾಗೆ ವರ್ತಿಸುತ್ತ, ಆತ್ಮನನ್ನು ತನ್ನ ಉಪಲಬ್ಧಿಯಿಂದ ಉಪಲಬ್ಧಗೊಳಿಸಿ (ತನ್ನ ಸ್ವಾನುಭವದ ಮುಖಾಂತರ ಅನುಭವ ಮಾಡಿ), ಗುಣ-ಗುಣಿಯ ವಸ್ತುರೂಪದಿಂದ ಅಭೇದವಿರುವ ಕಾರಣ ಅದೇ ಜ್ಞಾನವನ್ನು[೪] - ತನ್ನನ್ನು - ತನ್ನಿಂದ ಅವಿಚಲ ಪರಿಣತಿಯುಳ್ಳವನಾಗಿ ಸಂಚೇತಿಸುತ್ತಾನೆ ಆ ಜೀವನು ನಿಜವಾಗಿ ಅತ್ಯಂತ ನಿಃಸ್ನೇಹ[೫] ನಾಗಿ ವರ್ತಿಸುತ್ತ - ಅವನಿಗೆ ಸ್ನೇಹದ[೬] - ಲೇಪದ ಸಂಗವು ಪ್ರಕ್ಷೀಣವಾಗಿರುವಂತೆ ಶುದ್ಧ ಸ್ಫಟಿಕದ ಸ್ತಂಭದ ಹಾಗೆ - ಮೊದಲು ಉಪಾರ್ಜಿಸಲ್ಪಟ್ಟ ಕರ್ಮರಜವನ್ನು ಉದುರಿಸಿ ಬಿಡುತ್ತಾನೆ.

ಇದರಿಂದ (ಈ ಗಾಥೆಯಿಂದ) ನಿರ್ಜರೆಯ ಮುಖ್ಯ ಹೇತುವು ಧ್ಯಾನ[೭] ವಿದೆಯೆಂಬುದನ್ನು ತಿಳಿಸಿ ಕೊಡಲಾಗಿದೆ.

ಯಾವನಿಗೆ ಮೋಹಮೇಣ್ ರಾಗದ್ವೇಷಗಳಿಲ್ಲ ಯೋಗಗಳ ಸೇವನೆಯಿಲ್ಲ ।
ಅವನಿಗೆ ಶುಭಾಶುಭವ ಸುಡುವ ಧ್ಯಾನಮಯದಗ್ನಿ ಪ್ರಕಟಿಸುವುದು ॥೧೪೬॥

---

೧. ವ್ಯಾವೃತ್ತವಾಗು = ನಿವೃತ್ತವಾಗು ; ವಿಮುಖವಾಗು.

೨. ಮನ = ಮತಿ ; ಬುದ್ಧಿ ; ಭಾವ ; ಪರಿಣಾಮ.

೩. ಉದ್ಯತವಾಗು = ತತ್ಪರವಾಗು ; ತೊಡಗು ; ಉದ್ಯಮವಂತನಾಗು ; ಒಲಿಯು.

೪. ಗುಣೀ ಮತ್ತು ಗುಣದಲ್ಲಿ ವಸ್ತು-ಅಪೇಕ್ಷೆಯಿಂದ ಅಭೇದವಿರುವುದರಿಂದ ಆತ್ಮನೆಂದರೂ ಅಥವಾ ಜ್ಞಾನವೆಂದರೂ ಎರಡೂ ಒಂದೇ ಇವೆ. ಮೇಲೆ ಯಾವುದನ್ನು 'ಆತ್ಮ'ಶಬ್ದದಿಂದ ಕಥನ ಮಾಡಿತ್ತು ಅದನ್ನೇ ಇಲ್ಲಿ 'ಜ್ಞಾನ' ಶಬ್ದದಿಂದ ಕಥನ ಮಾಡಿದೆ. ಆ ಜ್ಞಾನದಲ್ಲಿ - ನಿಜಾತ್ಮನಲ್ಲಿ - ನಿಜಾತ್ಮನ ಮುಖಾಂತರ ನಿಶ್ಚಲ ಪರಿಣತಿ ಮಾಡಿ ಅವನ ಸಂಚೇತನ - ಸಂವೇದನ - ಅನುಭವನ ಮಾಡುವುದುಅದು ಧ್ಯಾನವಿದೆ.

೫. ನಿಃಸ್ನೇಹ = ಸ್ನೇಹವಿಲ್ಲದ ; ಮೋಹ ರಾಗದ್ವೇಷಗಳಿಲ್ಲದ.

೬. ಸ್ನೇಹ = ಎಣ್ಣೆ ; ಸ್ನಿಗ್ಧಪದಾರ್ಥ ; ಸ್ನಿಗ್ಧತೆ .

೭. ಈ ಧ್ಯಾನವು ಶುದ್ಧಭಾವರೂಪವಿದೆ.

ಧ್ಯಾನಸ್ವರೂಪಾಭಿಧಾನಮೇತತ್ ।

ಶುದ್ಧಸ್ವರೂಪೇऽವಿಚಲಿತಚೈತನ್ಯವೃತ್ತಿರ್ಹಿ ಧ್ಯಾನಮ್ । ಅಥಾಸ್ಯಾತ್ಮಲಾಭವಿಧಿರಭಿಧೀಯತೇ । ಯದಾ ಖಲು ಯೋಗೀ ದರ್ಶನಚಾರಿತ್ರಮೋಹನೀಯವಿಪಾಕಂ ಪುದ್ಗಲಕರ್ಮತ್ವಾತ್ ಕರ್ಮಸು । ಸಂಹೃತ್ಯ , ತದನುವೃತ್ತೇಃ ವ್ಯಾವೃತ್ತ್ಯೋಪಯೋಗಮಮುಹ್ಯಂತಮರಜ್ಯಂತಮದ್ವಿಷಂತಂ ಚಾತ್ಯಂತಶುದ್ಧಏವಾತ್ಮನಿ ನಿಷ್ಕಂಪಂ ನಿವೇಶಯತಿ, ತದಾಸ್ಯ ನಿಷ್ಕ್ರಿಯಚೈತನ್ಯರೂಪಸ್ವರೂಪವಿಶ್ರಾಂತಸ್ಯ ವಾಙ್ಮನಃಕಾಯಾನಭಾವಯತಃ ಸ್ವಕರ್ಮಸ್ವವ್ಯಾಪಾರಯತಃ ಸಕಲಶುಭಾಶುಭಕರ್ಮೇಂಧನದಹನಸಮರ್ಥತ್ವಾದಗ್ನಿಕಲ್ಪಂ ಪರಮಪುರುಷಾರ್ಥಸಿದ್ಧ್ಯುಪಾಯಭೂತಂ ಧ್ಯಾನಂ ಜಾಯತೇ ಇತಿ । ತಥಾ ಚೋಕ್ತಮ್ - ''ಅಜ್ಜ ವಿ ತಿರಯಣಸುದ್ಧಾ ಅಪ್ಪಾ ಝಾವಿವಿ ಲಹಇ ಇಂದತ್ತಂ । ಲೋಯಂತಿಯದೇವತ್ತಂ ತತ್ಥ ಚುಆ ಣಿವ್ವುದಿಂ ಜಂತಿ ॥'' ''ಅಂತೋ ಣತ್ಥಿ ಸುಈಣಂ ಕಾಲೋ ಥೋಇ ವಯಂ ಚ ದುಮ್ಮೇಹಾ । ತಣ್ಣವರಿ ಸಿಕ್ಖಿಯವ್ವಂ ಜಂ ಜರ ಮರಣಂ ಖಯಂ ಕುಣಇ ॥''★

-ಇತಿ ನಿರ್ಜರಾ ಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಗಾಥೆ - ೧೪೬

ಗಾಥಾರ್ಥ ಃ- [ಜಸ್ಸ] ಯಾವನಿಗೆ [ಮೋಹೋ ರಾಗೋ ದೋಸೋ] ಮೋಹ ಮತ್ತು ರಾಗ-ದ್ವೇಷಗಳು [ಣ ವಿಜ್ಜದಿ] ಇಲ್ಲ [ವ] ಹಾಗೂ [ಜೋಗಪರಿಕಮ್ಮೋ] ಯೋಗಗಳ ಸೇವನೆಯಿಲ್ಲ (ಎಂದರೆ ಮನ-ವಚನ-ಕಾಯಗಳ ಕುರಿತು ಉಪೇಕ್ಷೆಯಿದೆ), [ತಸ್ಸ] ಅವನಿಗೆ [ಸುಹಾಸುಹಡಹಣೋ] ಶುಭಾಶುಭಗಳನ್ನು ಸುಟ್ಟುಹಾಕುವಂಥ [ಜಾಣಮಓ ಅಗಣೀ] ಧ್ಯಾನಮಯವಾದ ಅಗ್ನಿಯು [ಜಾಯದೇ] ಪ್ರಕಟವಾಗುತ್ತದೆ.

ಟೀಕೆ ಃ- ಇದು ಧ್ಯಾನದ ಸ್ವರೂಪದ ಕಥನವಿದೆ.

ಶುದ್ಧ ಸ್ವರೂಪದಲ್ಲಿ ಅವಿಚಲಿತವಾದ ಚೈತನ್ಯ ಪರಿಣತಿಯು ಅದು ಯಥಾರ್ಥ ಧ್ಯಾನವಿದೆ. ಆ ಧ್ಯಾನವು ಪ್ರಕಟವಾಗುವ ವಿಧಿಯನ್ನು ಈಗ ಹೇಳಲಾಗುತ್ತದೆ - ಯಾವಾಗ ವಾಸ್ತವಿಕವಾಗಿ ಯೋಗಿಯು, ದರ್ಶನ ಮೋಹನೀಯ ಮತ್ತು ಚಾರಿತ್ರ ಮೋಹನೀಯದ ವಿಪಾಕವು ಪುದ್ಗಲಕರ್ಮವಿರುವುದರಿಂದ ಆ ವಿಪಾಕವನ್ನು (ತನ್ನಿಂದ ಭಿನ್ನವಾದಂಥ ಅಚೇತನ) ಕರ್ಮಗಳಲ್ಲಿ ಒಟ್ಟುಗೂಡಿಸಿ, ಅದಕ್ಕನುಸರಿಸಿ ಪರಿಣತಿಯಿಂದ ಉಪಯೋಗವನ್ನು ವ್ಯಾವೃತ್ತಗೊಳಿಸಿ (ಆ ವಿಪಾಕದ ಅನುರೂಪವಾಗಿ ಪರಿಣಮನದೊಳಗಿಂದ ಉಪಯೋಗದ ನಿವರ್ತನೆ ಮಾಡಿ) ಮೋಹಿ, ರಾಗಿ, ದ್ವೇಷಿಯಾಗದಂಥ ಆ ಉಪಯೋಗವನ್ನು ಅತ್ಯಂತ ಶುದ್ಧ ಆತ್ಮನಲ್ಲಿಯೇ ನಿಷ್ಕಂಪ ರೂಪದಿಂದ ಲೀನಗೊಳಿಸುತ್ತಾನೆ, ಆಗ ಆ ಯೋಗಿಗೆ - ಯಾವನು ತನ್ನ ನಿಷ್ಕ್ರಿಯ ಚೈತನ್ಯರೂಪ ಸ್ವರೂಪದಲ್ಲಿ ವಿಶ್ರಾಂತನಿದ್ದಾನೆ, ಮನ-ವಚನ-ಕಾಯಗಳ ಅನುಭವನ ಮಾಡುವುದಿಲ್ಲ ಮತ್ತು ತನ್ನ ಕರ್ಮಗಳಲ್ಲಿ ವ್ಯಾಪಾರ[೧] ಮಾಡುವುದಿಲ್ಲ ಅವನಿಗೆ - ಎಲ್ಲ ಶುಭಾಶುಭ ಕರ್ಮರೂಪದ ಸೌದೆಯನ್ನು ಸುಟ್ಟು ಹಾಕುವಲ್ಲಿ ಸಮರ್ಥವಿರುವುದರಿಂದ ಅಗ್ನಿಗೆ

★ ಇವೆರಡು ಉದ್ಧೃತ ಗಾಥೆಯೊಳಗೆ ಮೊದಲಿನ ಗಾಥೆಯು ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವ ಪ್ರಣೀತ ಮೋಕ್ಷ ಪ್ರಾಭೃತದ್ದಿದೆ.

೧. ವ್ಯಾಪಾರ = ಪ್ರವೃತ್ತಿ. [ಸ್ವರೂಪವಿಶ್ರಾಂತ ಯೋಗಿಗೆ ತನ್ನ ಪೂರ್ವೋಪಾರ್ಜಿತ ಕರ್ಮಗಳಲ್ಲಿ ಪ್ರವರ್ತನೆಯಿರುವುದಿಲ್ಲ, ಏಕೆಂದರೆ ಅವನು ಮೋಹನೀಯಕರ್ಮದ ವಿಪಾಕವನ್ನು ತನ್ನಿಂದ ಭಿನ್ನ - (ಅಚೇತನ)ವೆಂದು ತಿಳಿಯುತ್ತಾನೆ ಹಾಗೂ ಆ ಕರ್ಮವಿಪಾಕದ ಅನುರೂಪ ಪರಿಣಮನದಿಂದ ಅವನು ಉಪಯೋಗವನ್ನು ವಿಮುಖಗೊಳಿಸಿದ್ದಾನೆ.]

ಅಥ ಬಂಧಪದಾರ್ಥವ್ಯಾಖ್ಯಾನಮ್ ।

ಜಂ ಸುಹಮಸುಹಮುದಿಣ್ಣಂ ಭಾವಂ ರತ್ತೋ ಕರೇದಿ ಜದಿ ಅಪ್ಪಾ ।
ಸೋ ತೇಣ ಹವದಿ ಬದ್ಧೋ ಪೋಗ್ಗಲಕಮ್ಮೇಣ ವಿವಿಹೇಣ ॥೧೪೭॥

ಯಂ ಶುಭಮಶುಭಮುದೀರ್ಣಂ ಭಾವಂ ರಕ್ತಃ ಕರೋತಿ ಯದ್ಯಾತ್ಮಾ ।
ಸ ತೇನ ಭವತಿ ಬದ್ಧಃ ಪುದ್ಗಲಕರ್ಮಣಾ ವಿವಿಧೇನ ॥೧೪೭॥

ಸಮಾನವಾದಂಥ ಪರಮಪುರುಷಾರ್ಥಸಿದ್ಧಿಗೆ[೧] ಉಪಾಯಭೂತವಾದ ಧ್ಯಾನವು ಪ್ರಕಟವಾಗುತ್ತದೆ.

ಈ ಸಮಯದಲ್ಲೂ ಮೂರು ರತ್ನಗಳಿಂದ ಶುದ್ಧನಾದ ಜೀವನು (ಈ ಕಾಲದಲ್ಲೂ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪ ರತ್ನಗಳಿಂದ ಶುದ್ಧನಾದಂಥ ಮುನಿಯು) ಆತ್ಮನ ಧ್ಯಾನ ಮಾಡಿ ಇಂದ್ರತ್ವ ಹಾಗೂ ಲೌಕಾಂತಿಕ ದೇವತ್ವವನ್ನು ಪಡೆಯುತ್ತಾನೆ ಮತ್ತು ಅಲ್ಲಿಂದ ಚ್ಯುತನಾಗಿ (ಮನುಷ್ಯಭವ ಪಡೆದು) ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

ಶ್ರುತಿಗಳ ಅಂತವಿಲ್ಲ (ಶಾಸ್ತ್ರಗಳ ಕೊನೆಯಿಲ್ಲ) ಕಾಲವು ಅಲ್ಪವಿದೆ ಮತ್ತು ನಾವು ದುರ್ಮೇಧ[೨]ರಿದ್ದೇವೆ. ಅದಕ್ಕಾಗಿ ಯಾವುದು ಜನ್ಮ-ಮರಣಗಳ ಕ್ಷಯ ಮಾಡುತ್ತದೆ ಅಂಥ ಶಾಸ್ತ್ರವೇ ಸೇವನೆ ಮಾಡಲು ಯೋಗ್ಯವಿದೆ.

ಭಾವಾರ್ಥ :- ನಿರ್ವಿಕಾರ ನಿಷ್ಕ್ರಿಯ ಚೈತನ್ಯ ಚಮತ್ಕಾರದಲ್ಲಿ ನಿಶ್ಚಲವಾದ ಪರಿಣತಿಯು ಅದು ಧ್ಯಾನವಿದೆ.[೩] ಈ ಧ್ಯಾನವು ಮೋಕ್ಷದ ಉಪಾಯರೂಪವಿದೆ.

ಯಾವ ಪ್ರಕಾರ ಸ್ವಲ್ಪೇ ಬೆಂಕಿಯು ಕೂಡ ಬಹಳಷ್ಟು ಹುಲ್ಲು ಮತ್ತು ಕಟ್ಟಿಗೆಯ ರಾಶಿಯನ್ನು ಅಲ್ಪ ಕಾಲದಲ್ಲಿ ಸುಟ್ಟು ಬಿಡುತ್ತದೆ, ಅದೇ ಪ್ರಕಾರ ಮಿಥ್ಯಾತ್ವ - ಕಷಾಯ ಮೊದಲಾದ ವಿಭಾವದ ಪರಿತ್ಯಾಗಸ್ವರೂಪ ಭೀಕರ ಬಿರುಗಾಳಿಯಿಂದ ಪ್ರಜ್ವಲಿತವಾದ ಮತ್ತು ಅಪೂರ್ವ-ಅದ್ಭುತ-ಪರಮ-ಆಹ್ಲಾದಾತ್ಮಕ ಸುಖಸ್ವರೂಪವಾದ ಘೃತದಿಂದ ಸೇಚಿಸಲ್ಪಟ್ಟ ನಿಶ್ಚಲ ಆತ್ಮಸಂವೇದನರೂಪ ಧ್ಯಾನಾಗ್ನಿಯು ಮೂಲೋತ್ತರ ಪ್ರಕೃತಿ-ಭೇದವುಳ್ಳ ಕರ್ಮರೂಪವಾದ ಸೌದೆಯ ರಾಶಿಯನ್ನು ಕ್ಷಣ ಮಾತ್ರದಲ್ಲಿ ಸುಟ್ಟುಹಾಕುತ್ತದೆ.

ಯಾವ ಆತ್ಮನು ಆಸಕ್ತನಾಗಿ ಉದಿತ ಶುಭಾಶುಭಭಾವಗಳ ಮಾಡುವನು ।
ಅವನು ಆ ಭಾವಗಳಿಂದ ವಿವಿಧ ಪುದ್ಗಲಕರ್ಮಗಳಿಂ ಬದ್ಧನಾಗುವನು ॥೧೪೭॥

---

೧. ಪುರುಷಾರ್ಥ = ಪುರುಷನ ಅರ್ಥ ; ಪುರುಷನ ಪ್ರಯೋಜನ ; ಆತ್ಮನ ಪ್ರಯೋಜನ ; ಆತ್ಮ ಪ್ರಯೋಜನ ; (ಪರಮ ಪುರುಷಾರ್ಥ ಎಂದರೆ ಆತ್ಮನ ಪರಮ ಪ್ರಯೋಜನವು ಮೋಕ್ಷವಿದೆ ಮತ್ತು ಆ ಮೋಕ್ಷವು ಧ್ಯಾನದಿಂದ ಸಾಧಿಸುತ್ತದೆ, ಅದಕ್ಕಾಗಿ ಪರಮ ಪುರುಷಾರ್ಥದ (ಮೋಕ್ಷದ) ಸಿದ್ಧಿಯ ಉಪಾಯವು ಧ್ಯಾನವಿದೆ.

೨. ದುರ್ಮೇಧ = ಅಲ್ಪಬುದ್ಧಿಯುಳ್ಳ ; ಮಂದಬುದ್ಧಿ.

೩. ಮುನಿಗೆ ಯಾವ ಶುದ್ಧಾತ್ಮಸ್ವರೂಪದ ನಿಶ್ಚಯ ಉಗ್ರ ಅವಲಂಬನೆಯು ವರ್ತಿಸುತ್ತದೆ ಅದಕ್ಕೆ ಇಲ್ಲಿ ಮುಖ್ಯವಾಗಿ 'ಧ್ಯಾನ'ವೆಂದು ಹೇಳಿದೆ. (ಶುದ್ಧಾತ್ಮಾವಲಂಬನದ ಉಗ್ರತೆಗೆ ಮುಖ್ಯತೆ ಕೊಡದಿದ್ದರೆ ಅವಿರತ ಸಮ್ಯಗ್ದೃಷ್ಟಿಗೂ 'ಜಘನ್ಯಧ್ಯಾನ'ವನ್ನು ಹೇಳುವಲ್ಲಿ ವಿರೋಧವಿಲ್ಲ, ಏಕೆಂದರೆ ಅವನಿಗೆ ಶುದ್ಧಾತ್ಮಸ್ವರೂಪದ ಜಘನ್ಯ ಅವಲಂಬನೆಯಂತೂ ಇರುತ್ತದೆ.)

ಬಂಧಸ್ವರೂಪಾಖ್ಯಾನಮೇತತ್ ।

ಯದಿ ಖಲ್ವಯಮಾತ್ಮಾ ಪರೋಪಾಶ್ರಯೇಣಾನಾದಿರಕ್ತಃ ಕರ್ಮೋದಯಪ್ರಭಾವತ್ವಾದುದೀರ್ಣಂ ಶುಭಮಶುಭಂ ವಾ ಭಾವಂ ಕರೋತಿ, ತದಾ ಸ ಆತ್ಮಾ ತೇನ ನಿಮಿತ್ತಭೂತೇನ ಭಾವೇನ ಪುದ್ಗಲಕರ್ಮಣಾ ವಿವಿಧೇನ ಬದ್ಧೋ ಭವತಿ । ತದತ್ರ ಮೋಹರಾಗದ್ವೇಷಸ್ನಿಗ್ಧಃ ಶುಭೋಽಶುಭೋ ವಾ ಪರಿಣಾಮೋ ಜೀವಸ್ಯ ಭಾವಬಂಧಃ, ತನ್ನಿಮಿತ್ತೇನ ಶುಭಾಶುಭಕರ್ಮತ್ವಪರಿಣತಾನಾಂ ಜೀವೇನ ಸಹಾನ್ಯೋನ್ಯಮೂರ್ಚ್ಛನಂ ಪುದ್ಗಲಾನಾಂ ದ್ರವ್ಯಬಂಧ ಇತಿ ।

ಈ ಪಂಚಮಕಾಲದಲ್ಲೂ ಯಥಾಶಕ್ತಿ ಧ್ಯಾನವು ಆಗುವ ಸಾಧ್ಯತೆಯಿದೆ. ಈ ಕಾಲದಲ್ಲಿ ಶುಕ್ಲಧ್ಯಾನದ ವಿಚ್ಛೇದವಿದೆ, ಧರ್ಮಧ್ಯಾನದ್ದಿಲ್ಲ. ಇಂದೂ ಇಲ್ಲಿಂದ ಜೀವರುಗಳು ಧರ್ಮಧ್ಯಾನ ಮಾಡಿ ದೇವಭವ ಮತ್ತು ಪುನಃ ಮನುಷ್ಯಭವ ಪಡೆದು ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ ಮತ್ತು ಹೆಚ್ಚು ಶಾಸ್ತ್ರಾಭ್ಯಾಸ ಮಾಡಿದವರೇ ಧ್ಯಾನ ಮಾಡುವ ಸಾಧ್ಯತೆಯಿದೆಯೆಂದೂ ಇಲ್ಲ ; ಆದರೆ ಸಾರಭೂತವಾದ ಅಲ್ಪ ಶ್ರುತದಿಂದಲೂ ಧ್ಯಾನವಾಗುತ್ತದೆ. ಆದುದರಿಂದ ಮೋಕ್ಷಾರ್ಥಿಗಳಿಗೆ ಶುದ್ಧಾತ್ಮನ ಪ್ರತಿಪಾದಕವೂ, ಸಂವರ-ನಿರ್ಜರೆಯನ್ನು ಮಾಡುವಂಥದೂ, ಜನ್ಮ-ಮರಣಗಳನ್ನು ದೂರಮಾಡುವಂಥದೂ ಆದ ಸಾರಭೂತ ಉಪದೇಶವನ್ನು ಗ್ರಹಣ ಮಾಡಿ ಧ್ಯಾನ ಮಾಡುವುದು ಯೋಗ್ಯವಾಗಿದೆ.

[ಮೇಲೆ ಹೇಳಿದ ಧ್ಯಾನದ ಮೂಲವು ಸಮ್ಯಗ್ದರ್ಶನವೆಂಬುದನ್ನು ಇಲ್ಲಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಸಮ್ಯಗ್ದರ್ಶನವಿಲ್ಲದೆ ಧ್ಯಾನವಾಗುವುದಿಲ್ಲ, ಏಕೆಂದರೆ ನಿರ್ವಿಕಾರ ನಿಷ್ಕಿಯ ಚೈತನ್ಯ ಚಮತ್ಕಾರದ (ಶುದ್ಧಾತ್ಮನ) ಸಮ್ಯಕ್ ಪ್ರತೀತಿಯಿಲ್ಲದೆ ಅದರಲ್ಲಿ ನಿಶ್ಚಲವಾದ ಪರಿಣತಿಯು ಎಲ್ಲಿಂದಾಗುವ ಸಾಧ್ಯತೆಯಿದೆ ? ಅದಕ್ಕಾಗಿ ಮೋಕ್ಷದ ಉಪಾಯಭೂತವಾದ ಧ್ಯಾನ ಮಾಡುವ ಇಚ್ಛೆಯನ್ನಿಡುವಂಥ ಜೀವಕ್ಕೆ ಮೊದಲಂತೂ ಜಿನೋಕ್ತ ದ್ರವ್ಯಗುಣಪರ್ಯಾಯರೂಪ ವಸ್ತು ಸ್ವರೂಪದ ಯಥಾರ್ಥ ತಿಳಿವಿನೊಡನೆ ನಿರ್ವಿಕಾರ ನಿಷ್ಕಿಯ ಚೈತನ್ಯ ಚಮತ್ಕಾರದ ಸಮ್ಯಕ್ ಪ್ರತೀತಿಯ ಉದ್ಯಮವನ್ನು ಎಲ್ಲ ಪ್ರಕಾರದಿಂದ ಮಾಡುವುದು ಯೋಗ್ಯವಿದೆ ; ಅದರ ನಂತರವೇ ಆ ಚೈತನ್ಯ ಚಮತ್ಕಾರದಲ್ಲಿ ವಿಶೇಷ ಲೀನತೆಯ ಯಥಾರ್ಥ ಉದ್ಯಮವಾಗುವ ಸಾಧ್ಯತೆಯಿದೆ.]

ಈ ಪ್ರಕಾರವಾಗಿ ನಿರ್ಜರೆ ಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

ಈಗ ಬಂಧ ಪದಾರ್ಥದ ವ್ಯಾಖ್ಯಾನವಿದೆ.

ಗಾಥೆ - ೧೪೭

ಗಾಥಾರ್ಥ :- [ಜದಿ] ಒಂದು ವೇಳೆ [ಅಪ್ಪಾ] ಆತ್ಮನು [ರತ್ತೋ] ಅನುರಕ್ತನಾಗಿ (ವಿಕಾರಿಯಾಗಿ) ವರ್ತಿಸುತ್ತ [ಉದಿಣ್ಣಂ] ಉದಯಾಗತ [ಜಂ ಸುಹಮಸುಹಂ ಭಾವಂ] ಶುಭ ಅಥವಾ ಅಶುಭ ಭಾವವನ್ನು [ಕರೇದಿ] ಮಾಡುತ್ತಿದ್ದರೆ [ಸೋ] ಆ ಆತ್ಮನು [ತೇಣ] ಆ ಭಾವದ ಮುಖಾಂತರ (ಆ ಭಾವದ ನಿಮಿತ್ತದಿಂದ) [ವಿವಿಹೇಣ ಪೋಗ್ಗಲಕಮ್ಮೇಣ] ವಿವಿಧ ಪುದ್ಗಲಕರ್ಮಗಳಿಂದ [ಬದ್ಧೋ ಹವದಿ] ಬದ್ಧನಾಗುತ್ತಾನೆ.

ಟೀಕೆ :- ಇದು ಬಂಧದ ಸ್ವರೂಪದ ಕಥನವಿದೆ.

ಜೋಗಣಿಮಿತ್ತಂ ಗಹಣಂ ಜೋಗೋ ಮಣವಯಣಕಾಯಸಂಭೂದೋ ।
ಭಾವಣಿಮಿತ್ತೋ ಬಂಧೋ ಭಾವೋ ರದಿರಾಗದೋಸಮೋಹಜುದೋ ॥೧೪೮॥

ಯೋಗನಿಮಿತ್ತಂ ಗ್ರಹಣಂ ಯೋಗೋ ಮನೋವಚನಕಾಯಸಂಭೂತಃ ।
ಭಾವನಿಮಿತ್ತೋ ಬಂಧೋ ಭಾವೋ ರತಿರಾಗದ್ವೇಷಮೋಹಯುತಃ ॥೧೪೮॥

ಬಹಿರಂಗಾಂತರಂಗಬಂಧಕಾರಣಾಖ್ಯಾನಮೇತತ್ ।

ಗ್ರಹಣಂ ಹಿ ಕರ್ಮಪುದ್ಗಲಾನಾಂ ಜೀವಪ್ರದೇಶವರ್ತಿಕರ್ಮಸ್ಕಂಧಾನುಪ್ರವೇಶಃ । ತತ್ ಖಲು ಯೋಗನಿಮಿತ್ತಮ್ । ಯೋಗೋ ವಾಙ್ಮನಃಕಾಯಕರ್ಮವರ್ಗಣಾಲಂಬನ ಆತ್ಮಪ್ರದೇಶಪರಿಸ್ಪಂದಃ । ಬಂಧಸ್ತು

ಒಂದು ವೇಳೆ ಈ ಆತ್ಮನು ನಿಜವಾಗಿ ಅನ್ಯದ (ಪುದ್ಗಲ ಕರ್ಮದ) ಆಶ್ರಯದ ಮುಖಾಂತರ ಅನಾದಿ ಕಾಲದಿಂದ ಅನುರಕ್ತನಾಗಿದ್ದು ಕರ್ಮೋದಯದ ಪ್ರಭಾವಯುಕ್ತರೂಪವಾಗಿ ವರ್ತಿಸುವುದರಿಂದ ಉದಯಾಗತ (ಪ್ರಕಟವಾಗುವಂಥ) ಶುಭ ಅಥವಾ ಅಶುಭ ಭಾವವನ್ನು ಮಾಡುತ್ತಿದ್ದರೆ ಆ ಆತ್ಮನು ಆ ನಿಮಿತ್ತಭೂತ ಭಾವದ ಮುಖಾಂತರ ವಿವಿಧ ಪುದ್ಗಲ ಕರ್ಮಗಳಿಂದ ಬದ್ಧನಾಗುತ್ತಾನೆ. ಆದುದರಿಂದ ಇಲ್ಲಿ ಮೋಹರಾಗದ್ವೇಷಗಳ ಮುಖಾಂತರ ಸ್ನಿಗ್ಧದಂಥ ಯಾವ ಜೀವದ ಶುಭ ಅಥವಾ ಅಶುಭ ಪರಿಣಾಮಗಳಿವೆ ಅದು ಭಾವಬಂಧವಿದೆ ಮತ್ತು ಅವುಗಳ (ಶುಭಾಶುಭ ಪರಿಣಾಮಗಳ) ನಿಮಿತ್ತದಿಂದ ಶುಭಾಶುಭ ಕರ್ಮರೂಪದಿಂದ ಪರಿಣತವಾದ ಪುದ್ಗಲಗಳದ್ದು ಜೀವದೊಡನೆ ಯಾವ ಅನ್ಯೋನ್ಯ ಅವಗಾಹನವಿದೆ (ವಿಶಿಷ್ಟ ಶಕ್ತಿಸಹಿತ ಏಕಕ್ಷೇತ್ರಾವಗಾಹ ಸಂಬಂಧವಿದೆ) ಅದು ದ್ರವ್ಯ ಬಂಧವಿದೆ (ಎಂದು ಹೇಳಿದ್ದಾರೆ).

ಗಾಥೆ - ೧೪೮

ಗಾಥಾರ್ಥ :- [ಜೋಗಣಿಮಿತ್ತಂ ಗಹಣಂ] ಗ್ರಹಣದ (ಕರ್ಮಗ್ರಹಣದ) ನಿಮಿತ್ತವು ಯೋಗವಿದೆ ; [ಜೋಗೋ ಮಣವಯಣಕಾಯಸಂಭೂದೋ] ಯೋಗವು ಮನವಚನಕಾಯಜನಿತವಿದೆ (ಆತ್ಮಪ್ರದೇಶದ ಪರಿಸ್ಪಂದವಿದೆ). [ಭಾವಣಿಮಿತ್ತೋ ಬಂಧೋ] ಬಂಧದ ನಿಮಿತ್ತವು ಭಾವವಿದೆ ; [ಭಾವೋ ರದಿರಾಗದೋಸ-ಮೋಹಜುದೋ] ಭಾವವು ರತಿ-ರಾಗ-ದ್ವೇಷ-ಮೋಹಗಳಿಂದ ಯುಕ್ತ (ಆತ್ಮಪರಿಣಾಮ)ವಿದೆ.

ಟೀಕೆ :- ಇದು ಬಂಧದ ಬಹಿರಂಗ ಕಾರಣ ಮತ್ತು ಅಂತರಂಗ ಕಾರಣದ ಕಥನವಿದೆ.

ಗ್ರಹಣ ಎಂದರೆ ಜೀವ ಪ್ರದೇಶಾವರ್ತಿಯಾದ (ಜೀವದ ಪ್ರದೇಶಗಳೊಡನೆ ಒಂದು ಕ್ಷೇತ್ರದಲ್ಲಿ ಸ್ಥಿರವಾದ) ಕರ್ಮಸ್ಕಂಧಗಳಲ್ಲಿ ಕರ್ಮ ಪುದ್ಗಲಗಳ ಪ್ರವೇಶ ; ಅದರ ನಿಮಿತ್ತವು ಯೋಗವಿದೆ. ಯೋಗ ಎಂದರೆ ವಚನವರ್ಗಣೆ, ಮನೋವರ್ಗಣೆ, ಕಾಯವರ್ಗಣೆ ಮತ್ತು ಕರ್ಮವರ್ಗಣೆಗಳ ಅವಲಂಬನೆಯು ಯಾವುದರಲ್ಲಿದೆ ಅಂಥ ಆತ್ಮ ಪ್ರದೇಶಗಳ ಪರಿಸ್ಪಂದನೆ (ಎಂದರೆ ಜೀವ ಪ್ರದೇಶಗಳ ಕಂಪನ).

ಯೋಗನಿಮಿತ್ತಗ್ರಹಣವಿದ್ದು, ಯೋಗಮನವಚನಕಾಯಸಂಭೂತವಿದೆ ।
ಹಾಗೆ ಭಾವನಿಮಿತ್ತ ಬಂಧವಿದ್ದು, ಭಾವ ರತಿರಾಗದ್ವೇಷಮೋಹಯುಕ್ತವಿದೆ ॥೧೪೮॥

ಕರ್ಮಪುದ್ಗಲಾನಾಂ ವಿಶಿಷ್ಟಶಕ್ತಿ ಪರಿಣಾಮೇನಾವಸ್ಥಾನಮ್ । ಸ ಪುನರ್ಜೀವಭಾವನಿಮಿತ್ತಃ । ಜೀವಭಾವಃ ಪುನಾ ರತಿರಾಗದ್ವೇಷಮೋಹಯುತಃ, ಮೋಹನೀಯವಿಪಾಕಸಂಪಾದಿತವಿಕಾರ ಇತ್ಯರ್ಥಃ । ತದತ್ರ ಪುದ್ಗಲಾನಾಂ ಗ್ರಹಣಹೇತುತ್ವಾದ್ಬಹಿರಂಗಕಾರಣಂ ಯೋಗಃ, ವಿಶಿಷ್ಟ ಶಕ್ತಿಸ್ಥಿತಿಹೇತುತ್ವಾದಂತರಂಗಕಾರಣಂ ಜೀವಭಾವ ಏವೇತಿ।

ಹೇದೂ ಚದುವ್ವಿಯಪ್ಪೋ ಅಟ್ಠವಿಯಪ್ಪಸ್ಸ ಕಾರಣಂ ಭಣಿದಂ ।
ತೇಸಿಂ ಪಿ ಯ ರಾಗಾದೀ ತೇಸಿಮಭಾವೇ ಣ ಬಜ್ಝಂತಿ ॥೧೪೯॥

ಹೇತುಶ್ಚತುರ್ವಿಕಲ್ಪೋऽವಿಕಲ್ಪಸ್ಯ ಕಾರಣಂ ಭಣಿತಮ್ ।
ತೇಷಾಮಪಿ ಚ ರಾಗಾದಯಸ್ತೇಷಾಮಭಾವೇ ನ ಬಧ್ಯಂತೇ ॥೧೪೯॥

ಬಂಧ ಎಂದರೆ ವಿಶಿಷ್ಟ ಶಕ್ತಿರೂಪ ಪರಿಣಾಮದೊಡನೆ ಕರ್ಮ ಪುದ್ಗಲಗಳ ಸ್ಥಿರವಿರುವಿಕೆಯು ; (ಎಂದರೆ ಇಂಥ ಅನುಭಾಗರೂಪ ಶಕ್ತಿಯೊಡನೆ ಇಂಥ ಕಾಲದವರೆಗೆ ಕರ್ಮ ಪುದ್ಗಲಗಳ ನಿಲ್ಲುವಿಕೆಯು) ಅದರ ನಿಮಿತ್ತವು ಜೀವಭಾವವಿದೆ. ಜೀವಭಾವವು ರತಿರಾಗದ್ವೇಷ ಮೋಹಯುಕ್ತ (ಪರಿಣಾಮ)ವಿದೆ ಎಂದರೆ ಮೋಹನೀಯದ ವಿಪಾಕದಿಂದ ಉತ್ಪನ್ನವಾಗುವಂಥ ವಿಕಾರವಿದೆ.

ಅದಕ್ಕಾಗಿ ಇಲ್ಲಿ (ಬಂಧದಲ್ಲಿ) ಬಹಿರಂಗ ಕಾರಣವು (ನಿಮಿತ್ತವು) ಯೋಗವಿದೆ, ಏಕೆಂದರೆ ಅದು ಪುದ್ಗಲಗಳ ಗ್ರಹಣದ ಹೇತವಿದೆ, ಮತ್ತು ಅಂತರಂಗ ಕಾರಣವು (ನಿಮಿತ್ತವು) ಜೀವದ ಭಾವವೇ ಇದೆ, ಏಕೆಂದರೆ ಅದು (ಕರ್ಮ ಪುದ್ಗಲಗಳ) ವಿಶಿಷ್ಟ ಶಕ್ತಿ ಹಾಗೂ ಸ್ಥಿತಿಯ ಹೇತುವಿದೆ.

ಭಾವಾರ್ಥ ಃ- ಪ್ರಕೃತಿಬಂಧ, ಪ್ರದೇಶಬಂಧ, ಸ್ಥಿತಿಬಂಧ ಮತ್ತು ಅನುಭಾಗ ಬಂಧವೆಂದು ಕರ್ಮಬಂಧ ಪರ್ಯಾಯದ ನಾಲ್ಕು ವಿಶೇಷಗಳಿವೆ. ಇದರಲ್ಲಿ ಸ್ಥಿತಿ-ಅನುಭಾಗಗಳೇ ಅತ್ಯಂತ ಮುಖ್ಯ ವಿಶೇಷಗಳಿವೆ, ಪ್ರಕೃತಿ ಪ್ರದೇಶಗಳಂತೂ ಅತ್ಯಂತ ಗೌಣ ವಿಶೇಷಗಳಿವೆ ; ಏಕೆಂದರೆ ಸ್ಥಿತಿ-ಅನುಭಾಗಗಳಿಲ್ಲದೆ ಕರ್ಮಬಂಧದ ಪರ್ಯಾಯವು ಹೆಸರಿಗೆ ಮಾತ್ರವೇ ಉಳಿಯುತ್ತದೆ. ಆದುದರಿಂದ ಇಲ್ಲಿ ಪ್ರಕೃತಿ - ಪ್ರದೇಶಬಂಧದ ಕಥನವನ್ನು ಕೇವಲ ''ಗ್ರಹಣ'' ಶಬ್ದದಿಂದ ಮಾಡಿದೆ ಮತ್ತು ಸ್ಥಿತಿ-ಅನುಭಾಗಬಂಧದ ಕಥನವನ್ನೇ 'ಬಂಧ' ಶಬ್ದದಿಂದ ಮಾಡಿದೆ.

ಜೀವದ ಯಾವುದೇ ಒಂದು ಪರಿಣಾಮದಲ್ಲಿ ವರ್ತಿಸುತ್ತಿರುವ ಯೋಗವು ಕರ್ಮದ ಪ್ರಕೃತಿ- ಪ್ರದೇಶದ ಎಂದರೆ ''ಗ್ರಹಣ'ದ ನಿಮಿತ್ತವಾಗುತ್ತದೆ ಮತ್ತು ಜೀವದ ಅದೇ ಪರಿಣಾಮದಲ್ಲಿ ವರ್ತಿಸುತ್ತಿರುವ ಮೋಹ ರಾಗ ದ್ವೇಷ ಭಾವವು ಕರ್ಮದ ಸ್ಥಿತಿ - ಅನುಭಾಗದ ಎಂದರೆ 'ಬಂಧ'ದ ನಿಮಿತ್ತವಾಗುತ್ತದೆ ; ಅದಕ್ಕಾಗಿ ಮೋಹ ರಾಗ ದ್ವೇಷ ಭಾವವನ್ನು 'ಬಂಧ'ದ ಅಂತರಂಗ ಕಾರಣ (ಅಂತರಂಗ ನಿಮಿತ್ತ)ವೆಂದು ಹೇಳಿದೆ ಮತ್ತು ಯೋಗವನ್ನು ಯಾವುದು 'ಗ್ರಹಣ'ದ ನಿಮಿತ್ತವಿದೆ ಅದನ್ನು - 'ಬಂಧ'ದ ಬಹಿರಂಗ ಕಾರಣ (ಬಾಹ್ಯ ನಿಮಿತ್ತ)ವೆಂದು ಹೇಳಿದೆ.

ಚತುರ್ವಿಧಹೇತು ಅಷ್ಟವಿಧಕರ್ಮಗಳಿಗೆ ಕಾರಣವೆಂದು ಹೇಳಿದೆ ।
ಮತ್ತವಕೆ ರಾಗಾದಿಕಾರಣವಿದ್ದು, ರಾಗಾದಿ ಅಭಾವದಿಂ ಜೀವಬದ್ಧನಿಲ್ಲ ॥೧೪೯॥

ಮಿಥ್ಯಾತ್ವಾದಿದ್ರವ್ಯಪರ್ಯಾಯಾಣಾಮಪಿ ಬಹಿರಂಗಕಾರಣದ್ಯೋತನಮೇತತ್ ।

ತಂತ್ರಾಂತರೇ ಕಾಲಾಷ್ಟವಿಕಲ್ಪಕರ್ಮಕಾರಣತ್ವೇನ ಬಂಧಹೇತುರ್ದ್ರವ್ಯಹೇತುರೂಪಶ್ಚತುರ್ವಿಕಲ್ಪಃ ಪ್ರೋಕ್ತಃ ಮಿಥ್ಯಾತ್ವಾಸಂಯಮಕಷಾಯಯೋಗಾ ಇತಿ । ತೇಷಾಮಪಿ ಜೀವಭಾವಭೂತಾ ರಾಗಾದಯೋ ಬಂಧಹೇತುತ್ವಸ್ಯ ಹೇತವಃ, ಯತೋ ರಾಗಾದಿಭಾವಾನಾಮಭಾವೇ ದ್ರವ್ಯಮಿಥ್ಯಾತ್ವಾಸಂಯಮಕಷಾಯಯೋಗಸದ್ಭಾವೇऽಪಿ ಜೀವಾ ನ ಬಧ್ಯಂತೇ । ತತೋ ರಾಗಾದೀನಾಮಂತರಂಗತ್ವಾನ್ನಿಶ್ಚಯೇನ ಬಂಧಹೇತುತ್ವಮವಸೇಯಮಿತಿ ।

-ಇತಿ ಬಂಧಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಗಾಥೆ - ೧೪೯

ಗಾಥಾರ್ಥ :- [ಚದುವ್ವಿಯಪ್ಪೋ ಹೇದೂ] (ದ್ರವ್ಯ ಮಿಥ್ಯಾತ್ವ ಮೊದಲಾದ) ನಾಲ್ಕು ಪ್ರಕಾರದ ಹೇತುಗಳು [ಅಟ್ಠವಿಯಪ್ಪಸ್ಸ ಕಾರಣಂ] ಎಂಟು ಪ್ರಕಾರದ ಕರ್ಮಗಳಿಗೆ ಕಾರಣವೆಂದು [ಭಣಿದಂ] ಹೇಳಲಾಗಿದೆ ; [ತೇಸಿಂ ಪಿ ಯ] ಅವುಗಳಿಗೂ [ರಾಗಾದಿ] (ಜೀವದ) ರಾಗ ಮೊದಲಾದ ಭಾವಗಳು ಕಾರಣವಾಗಿವೆ ; [ತೇಸಿಮಭಾವೇ] ಆ ರಾಗಾದಿ ಭಾವಗಳ ಅಭಾವದಲ್ಲಿ [ಣ ಬಜ್ಝಂತಿ] ಜೀವನು ಬದ್ಧನಾಗುವುದಿಲ್ಲ.

ಟೀಕೆ :- ಇದು ಮಿಥ್ಯಾತ್ವ ಮೊದಲಾದ ದ್ರವ್ಯ ಪರ್ಯಾಯಗಳಿಗೂ (ದ್ರವ್ಯ ಮಿಥ್ಯಾತ್ವ ಮೊದಲಾದ ಪುದ್ಗಲ ಪರ್ಯಾಯಗಳಿಗೂ) (ಬಂಧದ) ಬಹಿರಂಗ - ಕಾರಣತನದ ಪ್ರಕಾಶನವಿದೆ.[೧]

ಗ್ರಂಥಾಂತರದಲ್ಲಿ (ಇತರ ಶಾಸ್ತ್ರದಲ್ಲಿ) ಮಿಥ್ಯಾತ್ವ, ಅಸಂಯಮ, ಕಷಾಯ ಮತ್ತು ಯೋಗ - ಈ ನಾಲ್ಕು ಪ್ರಕಾರದ ದ್ರವ್ಯಹೇತುಗಳಿಗೆ (ದ್ರವ್ಯ ಪ್ರತ್ಯಯಗಳಿಗೆ) ಎಂಟು ಪ್ರಕಾರದ ಕರ್ಮಗಳ ಕಾರಣ ರೂಪದಿಂದ ಬಂಧ ಹೇತುವೆಂದು ಹೇಳಿದ್ದಾರೆ. ಅವುಗಳಿಗೂ ಬಂಧಹೇತುತ್ವದ ಹೇತುಗಳು ಜೀವಭಾವಭೂತ ರಾಗಾದಿಗಳಿವೆ ; ಏಕೆಂದರೆ ರಾಗಾದಿಭಾವಗಳ[೨] ಅಭಾವವಾಗುವುದರಿಂದ ದ್ರವ್ಯ ಮಿಥ್ಯಾತ್ವ, ದ್ರವ್ಯ-ಅಸಂಯಮ, ದ್ರವ್ಯಕಷಾಯ ಮತ್ತು ದ್ರವ್ಯಯೋಗದ ಸದ್ಭಾವದಲ್ಲೂ ಕೂಡ ಜೀವವು ಬದ್ಧವಾಗುವುದಿಲ್ಲ. ಆದುದರಿಂದ ರಾಗಾದಿ ಭಾವಗಳಿಗೆ ಅಂತರಂಗ ಬಂಧಹೇತುತ್ವವಿರುವ ಕಾರಣ ನಿಶ್ಚಯದಿಂದ[೩] ಬಂಧಹೇತುತ್ವವಿದೆಯೆಂದು ನಿರ್ಣಯ ಮಾಡುವುದು.

ಈ ಪ್ರಕಾರವಾಗಿ ಬಂಧ ಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

---

೧. ಪ್ರಕಾಶನ = ಪ್ರಸಿದ್ಧ ಮಾಡುವುದು ; ತಿಳಿಸುವುದು ; ತೋರಿಸಿಕೊಡುವುದು.

೨. ಜೀವಗಳ ರಾಗಾದಿರೂಪ ಭಾವಪ್ರತ್ಯಯಗಳ ಅಭಾವವಿರುವುದರಿಂದ ದ್ರವ್ಯಪ್ರತ್ಯಯಗಳ ವಿದ್ಯಮಾನತೆಯಲ್ಲೂ ಕೂಡ ಜೀವವು ಬದ್ಧವಾಗುವುದಿಲ್ಲ. ಒಂದು ವೇಳೆ ಜೀವಗತ ರಾಗಾದಿಭಾವಗಳ ಅಭಾವದಲ್ಲೂ ದ್ರವ್ಯಪ್ರತ್ಯಯಗಳ ಉದಯ ಮಾತ್ರದಿಂದ ಬಂಧವಾದರೆ ಯಾವಾಗಲೂ ಬಂಧವೇ ಉಳಿದೀತು (ಮೋಕ್ಷದ ಅವಕಾಶವೇ ಉಳಿಯಲಿಕ್ಕಿಲ್ಲ), ಏಕೆಂದರೆ ಸಂಸಾರಿಗಳಿಗೆ ಯಾವಾಗಲೂ ಕರ್ಮದ ವಿದ್ಯಮಾನತೆ ಇರುತ್ತದೆ.

೩. ಉದಯಗತ ದ್ರವ್ಯಮಿಥ್ಯಾತ್ವ ಮೊದಲಾದಪ್ರತ್ಯಯಗಳ ಹಾಗೆ ರಾಗಾದಿಭಾವಗಳು ಹೊಸ ಕರ್ಮಬಂಧದಲ್ಲಿಕ್ಕೇವಲ ಬಹಿರಂಗ ನಿಮಿತ್ತಗಳಲ್ಲ ಆದರೆ ಅವಂತೂ ಹೊಸ ಕರ್ಮಬಂಧದಲ್ಲಿ 'ಅಂತರಂಗ ನಿಮಿತ್ತ' ವಿರುವುದರಿಂದ ಅವಕ್ಕೆ 'ನಿಶ್ಚಯದಿಂದ ಬಂಧಹೇತುಗಳೆ'ಂದು ಹೇಳಿದೆ.

ಅಥ ಮೋಕ್ಷಪದಾರ್ಥವ್ಯಾಖ್ಯಾನಮ್ ।

ಹೇದುಮಭಾವೇ ಣಿಯಮಾ ಜಾಯದಿ ಣಾಣಿಸ್ಸ ಆಸವಣಿರೋಧೋ ।
ಆಸವಭಾವೇಣ ವಿಣಾ ಜಾಯದಿ ಕಮ್ಮಸ್ಸ ದು ಣಿರೋಧೋ ॥೧೫೦॥

ಕಮ್ಮಸ್ಸಾಭಾವೇಣ ಯ ಸವ್ವಣ್ಹೂ ಸವ್ವಲೋಗದರಿಸೀ ಯ ।
ಪಾವದಿ ಇಂದಿಯರಹಿದಂ ಅವ್ವಾಬಾಹಂ ಸುಹಮಣಂತಂ ॥೧೫೧॥

ಹೇತ್ವಭಾವೇ ನಿಯಮಾಜ್ಜಾಯತೇ ಜ್ಞಾನಿನಃ ಆಸ್ರವನಿರೋಧಃ ।
ಆಸ್ರವಭಾವೇನ ವಿನಾ ಜಾಯತೇ ಕರ್ಮಣಸ್ತು ನಿರೋಧಃ ॥೧೫೦॥

ಕರ್ಮಣಾಮಭಾವೇನ ಚ ಸರ್ವಜ್ಞಃ ಸರ್ವಲೋಕದರ್ಶೀ ಚ ।
ಪ್ರಾಪ್ನೋತೀಂದ್ರಿಯರಹಿತಮವ್ಯಾಬಾಧಂ ಸುಖಮನಂತಮ್ ॥೧೫೧॥

ದ್ರವ್ಯಕರ್ಮಮೋಕ್ಷಹೇತುಪರಮಸಂವರರೂಪೇಣ ಭಾವಮೋಕ್ಷಸ್ವರೂಪಾಖ್ಯಾನಮೇತತ್ ।

ಆಸ್ರವಹೇತುರ್ಹಿ ಜೀವಸ್ಯ ಮೋಹರಾಗದ್ವೇಷರೂಪೋ ಭಾವಃ । ತದಭಾವೋ ಭವತಿ ಜ್ಞಾನಿನಃ । ತದಭಾವೇ ಭವತ್ಯಾಸ್ರವಭಾವಾಭಾವಃ । ಆಸ್ರವಭಾವಾಭಾವೇ ಭವತಿ ಕರ್ಮಾಭಾವಃ । ಕರ್ಮಾಭಾವೇನ ಭವತಿ ಸಾರ್ವಜ್ಞಂ ಸರ್ವದರ್ಶಿತ್ವಮವ್ಯಾಬಾಧಮಿಂದ್ರಿಯವ್ಯಾಪಾರಾತೀತಮನಂತಸುಖಿತ್ವಂ ಚೇತಿ । ಸ ಏವ

ಈಗ ಮೋಕ್ಷ ಪದಾರ್ಥದ ವ್ಯಾಖ್ಯಾನವಿದೆ.

ಗಾಥೆ - ೧೫೦-೧೫೧

ಗಾಥಾರ್ಥ :- [ಹೇದುಮಭಾವೇ] (ಮೋಹರಾಗದ್ವೇಷರೂಪ) ಹೇತುವಿನ ಅಭಾವವಾಗಿರುವುದರಿಂದ [ಣಾಣಿಸ್ಸ] ಜ್ಞಾನಿಗೆ [ಣಿಯಮಾ] ನಿಯಮದಿಂದ [ಆಸವಣಿರೋಧೋ ಜಾಯದಿ] ಆಸ್ರವದ ನಿರೋಧವಾಗುತ್ತದೆ [ದು] ಮತ್ತು [ಆಸವಭಾವೇಣ ವಿಣಾ] ಆಸ್ರವಭಾವದ ಅಭಾವದಲ್ಲಿ [ಕಮ್ಮಸ್ಸ ಣಿರೋಧೋ ಜಾಯದಿ] ಕರ್ಮದ ನಿರೋಧವಾಗುತ್ತದೆ. [ಯ] ಮತ್ತು [ಕಮ್ಮಸ್ಸಾಭಾವೇಣ] ಕರ್ಮಗಳ ಅಭಾವವಾಗುವುದರಿಂದ ಅವನು [ಸವ್ವಣ್ಹೂ ಸವ್ವಲೋಗದರಿಸೀ ಯ] ಸರ್ವಜ್ಞ ಹಾಗೂ ಸರ್ವಲೋಕದರ್ಶಿಯಾಗುತ್ತ [ಇಂದಿಯರಹಿದಂ] ಇಂದ್ರಿಯ ರಹಿತವಾದ [ಅವ್ವಾಬಾಹಂ] ಅವ್ಯಾಬಾಧ, (ಅಣಂತಂ ಸುಹಂ ಪಾವದಿ] ಅನಂತಸುಖವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಹೇತುವಿನಭಾವದಿಂ ಜ್ಞಾನಿಗೆ ನಿಯಮದಿಂದಾಸ್ರವ ನಿರೋಧವಾಗುವುದು ।
ಮತ್ತದರಂತೆ ಆಸ್ರವಭಾವದಭಾವದಿಂ ಕರ್ಮದ ನಿರೋಧವಾಗುವುದು ॥೧೫೦॥

ಕರ್ಮಗಳಭಾವವಾಗುವುದರಿಂದ ಸರ್ವಜ್ಞ - ಸರ್ವಲೋಕದರ್ಶಿಯಾಗುತ್ತ ।
ಒರ್ಮೆಯೇ ಇಂದ್ರಿಯಗಳಿಲ್ಲದ, ಅವ್ಯಾಬಾಧ, ಅನಂತಸುಖ ಪಡೆಯುವನು ॥೧೫೧॥

ಜೀವನ್ಮುಕ್ತಿನಾಮಾ ಭಾವಮೋಕ್ಷಃ । ಕಥಮಿತಿ ಚೇತ್ । ಭಾವಃ ಖಲ್ವತ್ರ ವಿವಕ್ಷಿತಃ ಕರ್ಮಾವೃತಚ್ಛೈತನ್ಯಸ್ಯ ಕ್ರಮಪ್ರವರ್ತಮಾನಜ್ಞಪ್ತಿಕ್ರಿಯಾರೂಪಃ । ಸ ಖಲು ಸಂಸಾರಿಣೋಽನಾದಿಮೋಹನೀಯಕರ್ಮೋದಯಾನುವೃತ್ತಿವಶಾದಶುದ್ಧೋ ದ್ರವ್ಯಕರ್ಮಾಸ್ರವಹೇತುಃ । ಸ ತು ಜ್ಞಾನಿನೋ ಮೋಹರಾಗದ್ವೇಷಾನುವೃತ್ತಿರೂಪೇಣ ಪ್ರಹೀಯತೇ । ತತೋಽಸ್ಯ ಆಸ್ರವಭಾವೋ ನಿರುಧ್ಯತೇ । ತತೋ ನಿರುದ್ಧಾಸ್ರವಭಾವಸ್ಯಾಸ್ಯ ಮೋಹಕ್ಷಯೇಣಾತ್ಯಂತನಿರ್ವಿಕಾರಮನಾದಿಮುದ್ರಿತಾನಂತಚೈತನ್ಯವೀರ್ಯಸ್ಯ ಶುದ್ಧಜ್ಞಪ್ತಿಕ್ರಿಯಾರೂಪೇಣಾಂತರ್ಮುಹೂರ್ತಮತಿವಾಹ್ಯ ಯುಗಪಜ್ಜ್ಞಾನದರ್ಶನಾವರಣಾಂತರಾಯಕ್ಷಯೇಣ ಕಥಂಚಿತ್ ಕೂಟಸ್ಥಜ್ಞಾನತ್ವಮವಾಪ್ಯ ಜ್ಞಪ್ತಿಕ್ರಿಯಾರೂಪೇ ಕ್ರಮಪ್ರವೃತ್ತ್ಯಭಾವಾದ್ಭಾವಕರ್ಮ ವಿನಶ್ಯತಿ । ತತಃ ಕರ್ಮಾಭಾವೇ ಸ ಹಿ ಭಗವಾನ್ಸರ್ವಜ್ಞಃ ಸರ್ವದರ್ಶೀ ವ್ಯುಪರತೇಂದ್ರಿಯವ್ಯಾಪಾರಾವ್ಯಾಬಾಧಾನಂತಸುಖಶ್ಚ ನಿತ್ಯಮೇವಾವತಿಷ್ಠತೇ । ಇತ್ಯೇಷ ಭಾವಕರ್ಮಮೋಕ್ಷಪ್ರಕಾರಃ ದ್ರವ್ಯಕರ್ಮಮೋಕ್ಷಹೇತುಃ ಪರಮಸಂವರಪ್ರಕಾರಶ್ಚ ।

ಟೀಕೆ :- ದ್ರವ್ಯಕರ್ಮ ಮೋಕ್ಷದ[೧] ಹೇತುಭೂತವಾದ ಭಾವಮೋಕ್ಷದ ಸ್ವರೂಪವನ್ನು ಇಲ್ಲಿ ಪರಮಸಂವರರೂಪದಿಂದ ಕಥನ ಮಾಡಿದೆ.

ವಾಸ್ತವಿಕವಾಗಿ ಜೀವದ ರಾಗದ್ವೇಷರೂಪಭಾವವು ಆಸ್ರವದ ಹೇತುವಾಗಿದೆ. ಜ್ಞಾನಿಗೆ ಅದರ ಅಭಾವವಿರುತ್ತದೆ. ಅದರ ಅಭಾವವಿರುವುದರಿಂದ ಆಸ್ರವಭಾವದ ಅಭಾವವಾಗುತ್ತದೆ. ಆಸ್ರವ ಭಾವದ ಅಭಾವವಾಗುವುದರಿಂದ ಕರ್ಮದ ಅಭಾವವಾಗುತ್ತದೆ. ಕರ್ಮದ ಅಭಾವವಾಗುವುದರಿಂದ ಸರ್ವಜ್ಞತ್ವ, ಸರ್ವದರ್ಶಿತ್ವ ಮತ್ತು ಅವ್ಯಾಬಾಧವಾದ ಇಂದ್ರಿಯ ವ್ಯಾಪಾರಾತೀತ[೨], ಅನಂತ ಸುಖವಾಗುತ್ತದೆ. ಅದು ಈ ಜೀವನ್ಮುಕ್ತಿ[೩] ಯೆಂಬ ಹೆಸರಿನ ಭಾವಮೋಕ್ಷವಿದೆ. ಅದರ ಸ್ಪಷ್ಟೀಕರಣವು ಹೀಗಿದೆ-

ಇಲ್ಲಿ ಯಾವ 'ಭಾವ'ವು ವಿವಕ್ಷಿತವಿದೆ ಅದು ಕರ್ಮಾವೃತ (ಕರ್ಮದಿಂದ ಆವೃತವಾದ) ಚೈತನ್ಯದ ಕ್ರಮಕ್ಕನುಸರಿಸಿ ಪ್ರವರ್ತಿಸುವ ಜ್ಞಪ್ತಿ ಕ್ರಿಯಾರೂಪವಿದೆ ಅದು (ಕ್ರಮಾನುಸಾರ ಪ್ರವರ್ತಿಸುವ ಜ್ಞಪ್ತಿಕ್ರಿಯಾರೂಪಭಾವವು) ವಾಸ್ತವಿಕವಾಗಿ ಸಂಸಾರಿಗೆ ಅನಾದಿಕಾಲದಿಂದ ಮೋಹನೀಯಕರ್ಮದ ಉದಯದ ಅನುಸರಣೆ ಮಾಡುತ್ತಿರುವ ಪರಿಣತಿಯ ಕಾರಣ ಅಶುದ್ಧವಿದೆ, ದ್ರವ್ಯಕರ್ಮಾಸ್ರವದ ಹೇತುವಿದೆ. ಆದರೆ ಅದು (ಕ್ರಮಾನುಸಾರ ಪ್ರವರ್ತಿಸುವ ಜ್ಞಪ್ತಿಕ್ರಿಯಾರೂಪ ಭಾವವು) ಜ್ಞಾನಿಗೆ ಮೋಹರಾಗದ್ವೇಷವುಳ್ಳ ಪರಿಣತಿ ರೂಪದಿಂದ ಹಾನಿಗೆ ಪ್ರಾಪ್ತವಾಗುವುದರಿಂದ ಅವನಿಗೆ ಆಸ್ರವಭಾವದ ನಿರೋಧವಾಗುತ್ತದೆ. ಅದಕ್ಕಾಗಿ ಆಸ್ರವಭಾವದ ನಿರೋಧವಾಗಿರುವಂಥ ಆ ಜ್ಞಾನಿಗೆ ಮೋಹಕ್ಷಯದಿಂದ ಅತ್ಯಂತ ನಿರ್ವಿಕಾರತೆಯಾಗುವುದರಿಂದ ಅನಾದಿಕಾಲದಿಂದ ಅನಂತಚೈತನ್ಯ ಮತ್ತು (ಅನಂತ) ವೀರ್ಯವು ಮರೆಯಾಗಿರುವಂಥ ಆ ಜ್ಞಾನಿಯು (ಕ್ಷೀಣಮೋಹ ಗುಣಸ್ಥಾನದಲ್ಲಿ) ಶುದ್ಧಜ್ಞಪ್ತಿಕ್ರಿಯಾರೂಪದಿಂದ ಅಂತರ್ಮುಹೂರ್ತವನ್ನು ವ್ಯತೀತ ಮಾಡಿ ಯುಗಪದ್ ಜ್ಞಾನಾವರಣ, ದರ್ಶನಾವರಣ

---

೧. ದ್ರವ್ಯಕರ್ಮಮೋಕ್ಷ = ದ್ರವ್ಯಕರ್ಮವು ಸಂಪೂರ್ಣವಾಗಿ ಬಿಟ್ಟು ಹೋಗುವುದು ; ದ್ರವ್ಯಮೋಕ್ಷ. (ಇಲ್ಲಿ ಭಾವ ಮೋಕ್ಷ ಸ್ವರೂಪವನ್ನು ದ್ರವ್ಯಮೋಕ್ಷದ ನಿಮಿತ್ತಭೂತ ಪರಮ-ಸಂವರರೂಪದಿಂದ ತಿಳಿಸಲಾಗಿದೆ.)

೨. ಇಂದ್ರಿಯವ್ಯಾಪಾರಾತೀತ = ಇಂದ್ರಿಯವ್ಯಾಪಾರ ರಹಿತ.

೩. ಜೀವನ್ಮುಕ್ತಿ = ಜೀವಿಸಿರುತ್ತಿರುವಾಗ ಮುಕ್ತಿ ; ದೇಹವಿದ್ದರೂ ಮುಕ್ತಿ.

ದಂಸಣಣಾಣಸಮಗ್ಗಂ ಝಾಣಂ ಣೋ ಅಣ್ಣದವ್ವಸಂಜುತ್ತಂ ।।
ಜಾಯದಿ ಣಿಜ್ಜರಹೇದೂ ಸಭಾವಸಹಿದಸ್ಸ ಸಾಧುಸ್ಸ ।।೧೫೨।।

ದರ್ಶನಜ್ಞಾನಸಮಗ್ರಂ ಧ್ಯಾನಂ ನೋ ಅನ್ಯದ್ರವ್ಯಸಂಯುಕ್ತಮ್ ।
ಜಾಯತೇ ನಿರ್ಜರಾಹೇತುಃ ಸ್ವಭಾವಸಹಿತಸ್ಯ ಸಾಧೋಃ ।।೧೫೨।।

ದ್ರವ್ಯಕರ್ಮಮೋಕ್ಷಹೇತುಪರಮನಿರ್ಜರಾಕಾರಣಧ್ಯಾನಾಖ್ಯಾನಮೇತತ್ ।

ಮತ್ತು ಅಂತರಾಯದ ಕ್ಷಯವಾಗುವುದರಿಂದ ಕಥಂಚಿತ್ ಕೂಟಸ್ಥ [೧] ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ ಮತ್ತು ಹೀಗೆ ಅವನಿಗೆ ಜ್ಞಪ್ತಿ ಕ್ರಿಯೆಯ ರೂಪದಲ್ಲಿ ಕ್ರಮಪ್ರವೃತ್ತಿಯ ಅಭಾವವಾಗುವುದರಿಂದ ಭಾವಕರ್ಮದ ವಿನಾಶವಾಗುತ್ತದೆ. ಅದಕ್ಕಾಗಿ ಕರ್ಮದ ಅಭಾವವಾದ ಮೇಲೆ ಅವನು ವಾಸ್ತವಿಕವಾಗಿ ಭಗವಂತ, ಸರ್ವಜ್ಞ, ಸರ್ವದರ್ಶಿ ಮತ್ತು ಇಂದ್ರಿಯ ವ್ಯಾಪಾರಾತೀತ - ಅವ್ಯಾಬಾಧ - ಅನಂತ ಸುಖವುಳ್ಳವನಾಗಿ ಯಾವಾಗಲೂ ಇರುತ್ತಾನೆ.

ಹೀಗೆ ಇದು (ಈ ಮೇಲೆ ಹೇಳಿದಂತೆ) ಭಾವಕರ್ಮಮೋಕ್ಷದ [೨] ಪ್ರಕಾರ (ಸ್ವರೂಪ) ಮತ್ತು ದ್ರವ್ಯ ಕರ್ಮಮೋಕ್ಷದ ಹೇತುಭೂತವಾದ ಪರಮ ಸಂವರದ ಪ್ರಕಾರವಿದೆ.

ಗಾಥೆ - ೧೫೨

ಗಾಥಾರ್ಥ :- [ಸಭಾವಸಹಿದಸ್ಸ ಸಾಧುಸ್ಸ] ಸ್ವಭಾವ ಸಹಿತನಾದ ಸಾಧುವಿಗೆ (ಸ್ವಭಾವ ಪರಿಣತರಾದ ಕೇವಲೀಭಗವಂತರಿಗೆ) [ದಂಸಣಣಾಣಸಮಗ್ಗಂ] ದರ್ಶನ ಜ್ಞಾನದಿಂದ ಸಂಪೂರ್ಣವಾದ ಮತ್ತು [ಣೋ ಅಣ್ಣದವ್ವಸಂಜುತ್ತಂ] ಅನ್ಯದ್ರವ್ಯದಿಂದ ಅಸಂಯುಕ್ತವಾದಂಥ [ಝಾಣಂ] ಧ್ಯಾನವು [ಣಿಜ್ಜರಹೇದೂ ಜಾಯದಿ] ನಿರ್ಜರೆಯ ಹೇತುವಾಗುತ್ತದೆ.

ಟೀಕೆ :- ಇದು ದ್ರವ್ಯಕರ್ಮಮೋಕ್ಷಕ್ಕೆ ಹೇತುಭೂತವಾದಂಥ ಪರಮನಿರ್ಜರೆಗೆ ಕಾರಣಭೂತವಾದ ಧ್ಯಾನದ ಕಥನವಿದೆ.

ಆ ದರ್ಶನಜ್ಞಾನ ಪರಿಪೂರ್ಣಮೇಣನ್ಯದ್ರವ್ಯವಿರಹಿತ ಧ್ಯಾನವು ।
ಅದು ನಿರ್ಜರೆಗೆ ಹೇತುವಾಗುವುದು ಸ್ವಭಾವ ಪರಿಣತ ಸಾಧುವಿಗೆ ।।೧೫೨।।

---

೧. ಕೂಟಸ್ಥ = ಎಲ್ಲ ಕಾಲದಲ್ಲಿ ಏಕರೂಪವಿರುವಂಥ ; ಅಚಲ. (ಜ್ಞಾನಾವರಣಾದಿ ಘಾತಿಕರ್ಮಗಳ ನಾಶವಾದ ಮೇಲೆ ಜ್ಞಾನದಲ್ಲೂ ಸರ್ವಥಾ ಅಪರಿಣಾಮಿಯಾಗುವುದಿಲ್ಲ; ಆದರೆ ಅದು ಬೇರೆ-ಬೇರೆ ಜ್ಞೇಯಗಳನ್ನು ತಿಳಿಯುವ ರೂಪದಿಂದ ಪರಿವರ್ತಿಸುವುದಿಲ್ಲ - ಯಾವಾಗಲೂ ಮೂರು ಕಾಲದ ಸಂಪೂರ್ಣ ಜ್ಞೇಯಗಳನ್ನು ತಿಳಿಯುತ್ತಿರುತ್ತದೆ. ಅದಕ್ಕಾಗಿ ಕಥಂಚಿತ್ ಕೂಟಸ್ಥವೆಂದು ಹೇಳಿದೆ.)

೨. ಭಾವಕರ್ಮಮೋಕ್ಷ = ಭಾವಕರ್ಮದ ಸರ್ವಥಾ ಅಭಾವ ; ಭಾವಮೋಕ್ಷ. (ಜ್ಞಪ್ತಿಕ್ರಿಯೆಯಲ್ಲಿ ಕ್ರಮಪ್ರವೃತ್ತಿಯ ಅಭಾವವಾಗುವುದು ಅದು ಭಾವಮೋಕ್ಷವಿದೆ ಅಥವಾ ಸರ್ವಜ್ಞ-ಸರ್ವದರ್ಶಿತ್ವದ ಮತ್ತು ಅನಂತಾನಂದಮಯತ್ವದ ಪ್ರಕಟತೆಯು ಅದು ಭಾವಮೋಕ್ಷವಿದೆ.

ಏವಮಸ್ಯ ಖಲು ಭಾವಮುಕ್ತಸ್ಯ ಭಗವತಃ ಕೇವಲಿನಃ ಸ್ವರೂಪತೃಪ್ತತ್ವಾದ್ವಿಶ್ರಾಂತಸುಖದುಃಖಕರ್ಮ-ವಿಪಾಕಕೃತವಿಕ್ರಿಯಸ್ಯ ಪ್ರಕ್ಷೀಣಾವರಣತ್ವಾದನಂತಜ್ಞಾನದರ್ಶನಸಂಪೂರ್ಣಶುದ್ಧಜ್ಞಾನಚೇತನಾಮಯತ್ವಾದತ್ರೀಂದ್ರಿ-ಯತ್ವಾತ್ ಚಾನ್ಯದ್ರವ್ಯಸಂಯೋಗವಿಯುಕ್ತಂ ಶುದ್ಧಸ್ವರೂಪೇಽವಿಚಲಿತಚೈತನ್ಯವೃತ್ತಿರೂಪತ್ವಾತ್ಕಥಂಚಿದ್ಧ್ಯಾನ -ವ್ಯಪದೇಶಾರ್ಹಮಾತ್ಮನಃ ಸ್ವರೂಪಂ ಪೂರ್ವಸಂಚಿತಕರ್ಮಣಾಂ ಶಕ್ತಿಶಾತನಂ ಪತನಂ ವಾ ವಿಲೋಕ್ಯ ನಿರ್ಜರಾಹೇತುತ್ವೇನೋಪವರ್ಣ್ಯತ ಇತಿ ।

ಜೋ ಸಂವರೇಣ ಜುತ್ತೋ ಣಿಜ್ಜರಮಾಣೋಧ ಸವ್ವಕಮ್ಮಾಣಿ ।
ವವಗದವೇದಾಉಸ್ಸೋ ಮುಯದಿ ಭವಂ ತೇಣ ಸೋ ಮೋಕ್ಖೋ ॥೧೫೩॥

ಹೀಗೆ ವಾಸ್ತವಿಕವಾಗಿ ಈ (ಮೊದಲು ಹೇಳಿದ) ಭಾವಮುಕ್ತ (ಭಾವಮೋಕ್ಷವುಳ್ಳ) ಭಗವಾನ ಕೇವಲಿಗೆ - ಯಾರಿಗೆ ಸ್ವರೂಪ ತೃಪ್ತತೆಯ ಕಾರಣ ಕರ್ಮವಿಪಾಕಕೃತ [೧] ಸುಖದುಃಖರೂಪ ವಿಕ್ರಿಯೆಗಳು ನಿಂತು ಹೋಗಿವೆ ಅವರಿಗೆ - ಆವರಣದ ಪ್ರಕ್ಷೀಣತೆಯ ಕಾರಣ, ಅನಂತ ಜ್ಞಾನದರ್ಶನದಿಂದ ಸಂಪೂರ್ಣ ಶುದ್ಧಜ್ಞಾನ ಚೇತನಮಯತೆಯ ಕಾರಣ ಹಾಗೂ ಅತೀಂದ್ರಿಯತನದ ಕಾರಣ ಯಾವುದು ಇತರ ದ್ರವ್ಯದ ಸಂಯೋಗದಿಂದ ರಹಿತವಿದೆ ಮತ್ತು ಶುದ್ಧ ಸ್ವರೂಪದಲ್ಲಿ ಅವಿಚಲಿತವಾದ ಚೈತನ್ಯ ಪರಿಣತಿಯಾಗಿರುವ ಕಾರಣ ಯಾವುದು ಕಥಂಚಿತ್ 'ಧ್ಯಾನ'ವೆಂಬ ಹೆಸರಿಗೆ ಯೋಗ್ಯವಿದೆ ಇಂಥ ಆತ್ಮನ ಸ್ವರೂಪವನ್ನು (ಆತ್ಮನ ನಿಜಾವಸ್ಥೆಯನ್ನು) ಪೂರ್ವಸಂಚಿತ ಕರ್ಮಗಳ ಶಕ್ತಿಯ ಶಾತನ (ಕ್ಷೀಣತೆ) ಅಥವಾ ಪತನ(ನಾಶ)ವನ್ನು ನೋಡಿ ನಿರ್ಜರೆಯ ಹೇತುರೂಪದಿಂದ ವರ್ಣನೆ ಮಾಡಲಾಗುತ್ತದೆ.

ಭಾವಾರ್ಥ :- ಕೇವಲೀ ಭಗವಂತರ ಆತ್ಮನ ಅವಸ್ಥೆಯು ಜ್ಞಾನದರ್ಶನಾವರಣದ ಕ್ಷಯವುಳ್ಳದ್ದಾಗಿರುವ ಕಾರಣ, ಶುದ್ಧ ಚೇತನಮಯವಾಗಿರುವ ಕಾರಣ ಮತ್ತು ಇಂದ್ರಿಯ ವ್ಯಾಪಾರ ಮೊದಲಾದ ಬಾಹ್ಯದ್ರವ್ಯದ ಅವಲಂಬನೆಯಿಂದ ರಹಿತವಾಗಿರುವ ಕಾರಣ ಇತರ ದ್ರವ್ಯದ ಸಂಸರ್ಗದಿಂದ ರಹಿತವಿದೆ ಮತ್ತು ಶುದ್ಧ ಸ್ವರೂಪದಲ್ಲಿ ನಿಶ್ಚಲ ಚೈತನ್ಯ ಪರಿಣತಿರೂಪವಾಗಿರುವ ಕಾರಣ ಯಾವುದೇ ಪ್ರಕಾರದಿಂದ 'ಧ್ಯಾನ'ವೆಂಬ ಹೆಸರಿಗೆ ಯೋಗ್ಯವಿದೆ ಅವರ ಇಂಥ ಆತ್ಮದಶೆಯ ವರ್ಣನೆಯನ್ನು ನಿರ್ಜರೆಯ ನಿಮಿತ್ತರೂಪದಿಂದ ಮಾಡಲಾಗುತ್ತದೆ ಏಕೆಂದರೆ ಅವರಿಗೆ ಪೂರ್ವೋಪಾರ್ಜಿತ ಕರ್ಮಗಳ ಶಕ್ತಿಯು ಕುಂದುತ್ತ ಹೋಗುತ್ತದೆ ಮತ್ತು ಅವರ ಕರ್ಮಗಳು ಉದುರುತ್ತ ಹೋಗುತ್ತವೆ.

ಯಾವ ಸಂವರಸಹಿತನಾದ ಜೀವನೆಲ್ಲ ಕರ್ಮಗಳ ನಿರ್ಜರೆ ಮಾಡುತ್ತ ।
ಆ ವೇದನೀಯಾಯುರಹಿತನಾಗಿ ಭವಬಿಡುವುದರಿಂದದು ಮೋಕ್ಷವಿದೆ ॥೧೫೩॥

---

೧. ಕೇವಲಿ ಭಗವಂತರು ನಿರ್ವಿಕಾರ - ಪರಮಾನಂದಸ್ವರೂಪ ಸ್ವಾತ್ಮೋತ್ಪನ್ನ ಸುಖದಿಂದ ತೃಪ್ತರಿರುವುದರಿಂದ ಅವರಿಗೆ ಕರ್ಮದ ವಿಪಾಕವು ಯಾವುದರಲ್ಲಿ ನಿಮಿತ್ತಭೂತವಾಗುತ್ತದೆ ಅಂಥ ಸಂಸಾರದ ಸುಖದುಃಖರೂಪ (ಹರ್ಷವಿಷಾದರೂಪ) ವಿಕ್ರಿಯೆಗಳು ವಿರಾಮಕ್ಕೆ ಪ್ರಾಪ್ತವಾಗಿವೆ.

ಯಃ ಸಂವರೇಣ ಯುಕ್ತೋ ನಿರ್ಜರನ್ನಥ ಸರ್ವಕರ್ಮಾಣಿ ।
ವ್ಯಪಗತವೇದ್ಯಾಯುಷ್ಕೋ ಮುಂಚತಿ ಭವಂ ತೇನ ಸ ಮೋಕ್ಷಃ ॥೧೫೩॥

ದ್ರವ್ಯಮೋಕ್ಷಸ್ವರೂಪಾಖ್ಯಾನಮೇತತ್ ।

ಅಥ ಖಲು ಭಗವತಃ ಕೇವಲಿನೋ ಭಾವಮೋಕ್ಷೇ ಸತಿ ಪ್ರಸಿದ್ಧಪರಮಸಂವರಸ್ಯೋತ್ತರಕರ್ಮ-ಸಂತತೌ ನಿರುದ್ಧಾಯಾಂ ಪರಮನಿರ್ಜರಾಕಾರಣಧ್ಯಾನಪ್ರಸಿದ್ಧೌ ಸತ್ಯಾಂ ಪೂರ್ವಕರ್ಮಸಂತತೌ ಕದಾಚಿತ್ಸ್ವಭಾವೇನೈವ ಕದಾಚಿತ್ಸಮುದ್ಘಾತವಿಧಾನೇನಾಯುಃಕರ್ಮಸಮಭೂತಸ್ಥಿತ್ಯಾಮಾಯುಃಕರ್ಮಾನುಸಾರೇಣೈವ ನಿರ್ಜೀರ್ಯ-ಮಾಣಾಯಾಮಪುನರ್ಭವಾಯ ತದ್ಭವತ್ಯಾಗಸಮಯೇ ವೇದನೀಯಾಯುರ್ನಾಮಗೋತ್ರರೂಪಾಣಾಂ ಜೀವೇನ ಸಹಾತ್ಯಂತವಿಶ್ಲೇಷಃ ಕರ್ಮಪುದ್ಗಲಾನಾಂ ದ್ರವ್ಯಮೋಕ್ಷಃ ।

- ಇತಿ ಮೋಕ್ಷಪದಾರ್ಥವ್ಯಾಖ್ಯಾನಂ ಸಮಾಪ್ತಮ್ ।

ಸಮಾಪ್ತಂ ಚ ಮೋಕ್ಷಮಾರ್ಗಾವಯವರೂಪಸಮ್ಯಗ್ದರ್ಶನಜ್ಞಾನವಿಷಯಭೂತನವಪದಾರ್ಥ-ವ್ಯಾಖ್ಯಾನಮ್ ।

ಗಾಥೆ - ೧೫೩

ಗಾಥಾರ್ಥ ಃ- [ಜೋ ಸಂವರೇಣ ಜುತ್ತೋ] ಯಾವನು ಸಂವರದಿಂದ ಯುಕ್ತನಿದ್ದಾನೆ ಅಂಥ (ಕೇವಲಜ್ಞಾನಪ್ರಾಪ್ತ) ಜೀವನು [ಣಿಜ್ಜರಮಾಣೋ ಸವ್ವಕಮ್ಮಾಣಿ] ಎಲ್ಲ ಕರ್ಮಗಳ ನಿರ್ಜರೆ ಮಾಡುತ್ತ [ವವಗದವೇದಾಉಸ್ಸೋ] ವೇದನೀಯ ಮತ್ತು ಆಯುರಹಿತನಾಗಿ [ಭವಂ ಮುಯದಿ] ಭವವನ್ನು ಬಿಡುತ್ತಾನೆ [ತೇಣ] ಅದಕ್ಕಾಗಿ (ಹೀಗೆ ಎಲ್ಲ ಕರ್ಮಪುದ್ಗಲಗಳ ವಿಯೋಗವಾದ ಕಾರಣ) [ಸೋ ಮೋಕ್ಖೋ] ಅದು ಮೋಕ್ಷವಿದೆ.

ಟೀಕೆ ಃ- ಇದು ದ್ರವ್ಯಮೋಕ್ಷದ ಸ್ವರೂಪದ ಕಥನವಿದೆ.

ವಾಸ್ತವಿಕವಾಗಿ ಕೇವಲೀ ಭಗವಂತರಿಗೆ ಭಾವಮೋಕ್ಷವಾದ ಮೇಲೆ ಪರಮ ಸಂವರವು ಸಿದ್ಧವಾಗಿರುವ ಕಾರಣ ಉತ್ತರ [೧] ಕರ್ಮಸಂತತಿಯು ನಿರೋಧಕ್ಕೆ ಪ್ರಾಪ್ತವಾಗುತ್ತದೆ ಮತ್ತು ಪರಮ ನಿರ್ಜರೆಗೆ ಕಾರಣಭೂತವಾದ ಧ್ಯಾನವು ಸಿದ್ಧವಾಗಿರುವ ಕಾರಣ ಪೂರ್ವ [೨] ಕರ್ಮಸಂತತಿಯು - ಯಾವುದರ ಸ್ಥಿತಿಯು ಕದಾಚಿತ್ ಸ್ವಭಾವದಿಂದಲೇ ಆಯುಕರ್ಮದಷ್ಟಿರುತ್ತದೆ ಮತ್ತು ಕದಾಚಿತ್ ಸಮುದ್ಘಾತ ವಿಧಾನದಿಂದ [೩] ಆಯುಕರ್ಮದಷ್ಟಿರುತ್ತದೆ ಅದು - ಆಯುಕರ್ಮಕ್ಕನುಸರಿಸಿಯೇ ನಿರ್ಜರಿತವಾಗುತ್ತ ಅಪುನರ್ಭವದ [೪] ಸಲುವಾಗಿ ಅದು ಭವವನ್ನು ಬಿಡುವ

---

೧. ಉತ್ತರ ಕರ್ಮಸಂತತಿ = ಅನಂತರದ ಕರ್ಮಪ್ರವಾಹ ; ಭವಿಷ್ಯತ್ತಿನ ಕರ್ಮಪರಂಪರೆ.

೨. ಪೂರ್ವ ಕರ್ಮಸಂತತಿ = ಮೊದಲಿನ ಕರ್ಮ ಪರಂಪರೆ.

೩. ಕೇವಲೀ ಭಗವಂತರಿಗೆ ವೇದನೀಯ, ನಾಮ ಮತ್ತು ಗೋತ್ರ ಕರ್ಮದ ಸ್ಥಿತಿಯು ಎಂದಾದರೊಮ್ಮೆ ಸ್ವಭಾವದಿಂದಲೇ (ಎಂದರೆ ಕೇವಲೀ ಸಮುದ್ಘಾತರೂಪ ನಿಮಿತ್ತವಾಗದೆಯೇ) ಆಯುಕರ್ಮದಷ್ಟಿರುತ್ತದೆ ಮತ್ತು ಎಂದಾದರೊಮ್ಮೆ ಆ ಮೂರೂ ಕರ್ಮಗಳ ಸ್ಥಿತಿಯು ಆಯುಕರ್ಮಕ್ಕಿಂತ ಹೆಚ್ಚಿದ್ದರೂ ಕೂಡ ಆ ಸ್ಥಿತಿಯು ಕಡಿಮೆಯಾಗಿ ಆಯುಕರ್ಮದಷ್ಟೇ ಆಗುವಲ್ಲಿ ಕೇವಲೀ ಸಮುದ್ಘಾತವು ನಿಮಿತ್ತವಾಗುತ್ತದೆ.

೪. ಅಪುನರ್ಭವ = ಪುನಃ ಭವವಾಗದಿರುವುದು. (ಕೇವಲೀ ಭಗವಂತರಿಗೆ ಪುನಃ ಭವವಾಗದೆಯೇ ಆ ಭವದ ತ್ಯಾಗವಾಗುತ್ತದೆ; ಅದಕ್ಕಾಗಿ ನಿರಂತರದ ಸಲುವಾಗಿ ಅವರ ಆತ್ಮನಿಂದ ಸರ್ವಥಾ ಕರ್ಮ ಪುದ್ಗಲಗಳ ವಿಯೋಗವಾಗುತ್ತದೆ.)

ಅಥ ಮೋಕ್ಷಮಾರ್ಗಪ್ರಪಂಚಸೂಚಿಕಾ ಚೂಲಿಕಾ ।

ಜೀವಸಹಾವಂ ಣಾಣಂ ಅಪ್ಪಡಿಹದದಂಸಣಂ ಅಣಣ್ಣಮಯಂ ।
ಚರಿಯಂ ಚ ತೇಸು ಣಿಯದಂ ಅತ್ಥಿತ್ತಮಣಿಂದಿಯಂ ಭಣಿಯಂ ॥೧೫೪॥

ಜೀವಸ್ವಭಾವಂ ಜ್ಞಾನಮಪ್ರತಿಹತದರ್ಶನಮನನ್ಯಮಯಮ್ ।
ಚಾರಿತ್ರಂ ಚ ತಯೋರ್ನಿಯತಮಸ್ತಿತ್ವನಮನಿಂದಿತಂ ಭಣಿತಮ್ ॥೧೫೪॥

ಮೋಕ್ಷಮಾರ್ಗಸ್ವರೂಪಾಖ್ಯಾನಮೇತತ್ ।

ಜೀವಸ್ವಭಾವನಿಯತಂ ಚರಿತಂ ಮೋಕ್ಷಮಾರ್ಗಃ । ಜೀವಸ್ವಭಾವೋ ಹಿ ಜ್ಞಾನದರ್ಶನೇ ಅನನ್ಯಮಯತ್ವಾತ್। ಅನನ್ಯಮಯತ್ವಂ ಚ ತಯೋರ್ವಿಶೇಷಸಾಮಾನ್ಯಚೈತನ್ಯಸ್ವಭಾವಜೀವನಿರ್ವೃತ್ತತ್ವಾತ್ । ಅಥ ತಯೋರ್ಜೀವ-

---

ಸಮಯದಲ್ಲಾಗುವಂಥ ಯಾವ ವೇದನೀಯ - ಆಯು - ನಾಮ - ಗೋತ್ರರೂಪ ಕರ್ಮ ಪುದ್ಗಲಗಳದ್ದು ಜೀವದ ಜೊತೆಯಲ್ಲಿ ಅತ್ಯಂತ ವಿಶ್ಲೇಷ (ವಿಯೋಗ)ವು ಅದು ದ್ರವ್ಯಮೋಕ್ಷವಿದೆ.

ಈ ಪ್ರಕಾರವಾಗಿ ಮೋಕ್ಷಪದಾರ್ಥದ ವ್ಯಾಖ್ಯಾನವು ಸಮಾಪ್ತವಾಯಿತು.

ಮತ್ತು ಮೋಕ್ಷಮಾರ್ಗದ ಅವಯವರೂಪವಾದ ಸಮ್ಯಗ್ದರ್ಶನ ಹಾಗೂ ಸಮ್ಯಗ್ಜ್ಞಾನದ ವಿಷಯ ಭೂತಗಳಾದ ಒಂಭತ್ತು ಪದಾರ್ಥಗಳ ವ್ಯಾಖ್ಯಾನವೂ ಸಮಾಪ್ತವಾಯಿತು.

ಈಗ ಮೋಕ್ಷಮಾರ್ಗಪ್ರಪಂಚಸೂಚಕ [೧] ಚೂಲಿಕೆ [೨] ಯಿದೆ.

ಗಾಥೆ - ೧೫೪

ಗಾಥಾರ್ಥ :- [ಜೀವಸಹಾವಂ] ಜೀವದ ಸ್ವಭಾವವು [ಣಾಣಂ] ಜ್ಞಾನ ಮತ್ತು [ಅಪ್ಪಡಿಹದದಂಸಣಂ] ಅಪ್ರತಿಹತ ದರ್ಶನವಿದೆ - [ಅಣಣ್ಣಮಯಂ] ಇವು (ಜೀವದಿಂದ) ಅನನ್ಯಮಯವಿವೆ. [ತೇಸು] ಆ ಜ್ಞಾನದರ್ಶನಗಳಲ್ಲಿ [ಣಿಯದಂ] ನಿಯತವಾದಂಥ [ಅತ್ಥಿತ್ತಂ] ಅಸ್ತಿತ್ವವಿದೆ - [ಅಣಿಂದಿಯಂ] ಯಾವುದು ಅನಿಂದ್ಯವಿದೆ - [ಚರಿಯಂ ಚ ಭಣಿಯಂ] ಅದಕ್ಕೆ (ಜಿನೇಂದ್ರರು) ಚಾರಿತ್ರವೆಂದು ಹೇಳಿದ್ದಾರೆ.

ಟೀಕೆ :- ಇದು ಮೋಕ್ಷಮಾರ್ಗದ ಸ್ವರೂಪದ ಕಥನವಿದೆ.

ಜೀವ ಸ್ವಭಾವದಲ್ಲಿ ನಿಯತವಾದಂಥ ಚಾರಿತ್ರವು ಅದು ಮೋಕ್ಷಮಾರ್ಗವಿದೆ. ಜೀವ ಸ್ವಭಾವವು ವಾಸ್ತವಿಕವಾಗಿ ಜ್ಞಾನ-ದರ್ಶನಗಳಿವೆ, ಏಕೆಂದರೆ ಅವು (ಜೀವದಿಂದ) ಅನನ್ಯಮಯವಿವೆ. (ಜೀವದಿಂದ)

ಜೀವಸ್ವಭಾವವದು ಜ್ಞಾನಮೇಣಪ್ರತಿಹತದರ್ಶನವಾಗಿರುವುದು ।
ಯಾವ ಜ್ಞಾನದರ್ಶನ ನಿಯತ ಅನಿಂದ್ಯ ಅಸ್ತಿತ್ವವದು ತಾನೆ ಚಾರಿತ್ರವಿದೆ ॥೧೫೪॥

---

೧ ಮೋಕ್ಷಮಾರ್ಗಪ್ರಪಂಚಸೂಚಕ = ಮೋಕ್ಷಮಾರ್ಗದವಿಸ್ತಾರವನ್ನು ತಿಳಿಸಿಕೊಡುವಂಥ ; ವಿಸ್ತಾರದಿಂದ ಮೋಕ್ಷಮಾರ್ಗದ ಕಥನ ಮಾಡುವಂಥ.

೨. ಚೂಲಿಕೆಯ ಅರ್ಥದ ಕುರಿತು ಈ ಮೊದಲು ಬಂದ ಟಿಪ್ಪಣಿ ನೋಡುವುದು.

ಸ್ವರೂಪಭೂತಯೋರ್ಜ್ಞಾನದರ್ಶನಯೋರ್ಯನ್ನಿಯತಮವಸ್ಥಿತಮುತ್ಪಾದವ್ಯಯಧ್ರೌವ್ಯರೂಪವೃತ್ತಿಮಯಮಸ್ತಿತ್ವಂ ರಾಗಾದಿಪರಿಣತ್ಯಭಾವಾದನಿಂದಿತಂ ತಚ್ಚರಿತಂ; ತದೇವ ಮೋಕ್ಷಮಾರ್ಗ ಇತಿ । ದ್ವಿವಿಧಂ ಹಿ ಕಿಲ ಸಂಸಾರಿಷು ಚರಿತಂ – ಸ್ವಚರಿತಂ ಪರಚರಿತಂ ಚ; ಸ್ವಸಮಯಪರಸಮಯಾವಿತ್ಯರ್ಥಃ । ತತ್ರ ಸ್ವಭಾವಾವಸ್ಥಿತಾಸ್ತಿತ್ವಸ್ವರೂಪಂ ಸ್ವಚರಿತಂ, ಪರಭಾವಾವಸ್ಥಿತಾಸ್ತಿತ್ವಸ್ವರೂಪಂ ಪರಚರಿತಮ್ । ತತ್ರ ಯತ್ಸ್ವಭಾವಾವಸ್ಥಿತಾಸ್ತಿತ್ವರೂಪಂ ಪರಭಾವಾವಸ್ಥಿತಾಸ್ತಿತ್ವವ್ಯಾವೃತ್ತತ್ವೇನಾತ್ಯಂತಮನಿಂದಿತಂ ತದತ್ರ ಸಾಕ್ಷಾನ್ಮೋಕ್ಷಮಾರ್ಗತ್ವೇನಾವ ಧಾರಣೀಯಮಿತಿ।

ಜೀವೋ ಸಹಾವಣಿಯದೋ ಅಣಿಯದಗುಣಪಜ್ಜಓಧ ಪರಸಮಓ ।
ಜದಿ ಕುಣದಿ ಸಗಂ ಸಮಯಂ ಪಬ್ಭಸ್ಸದಿ ಕಮ್ಮಬಂಧಾದೋ ॥೧೫೫॥

ಜ್ಞಾನದರ್ಶನಗಳ ಅನನ್ಯಮಯತೆಯಿರುವ ಕಾರಣವೇನೆಂದರೆ ಯಾವುದರ ಸ್ವಭಾವವು ವಿಶೇಷ ಚೈತನ್ಯ[೩] ಮತ್ತು ಸಾಮಾನ್ಯಚೈತನ್ಯವಿದೆ ಅಂಥ ಜೀವದಿಂದ ಅವು ನಿಷ್ಪನ್ನವಿವೆ (ಎಂದರೆ ಜೀವದ ಮುಖಾಂತರ ಜ್ಞಾನದರ್ಶನಗಳು ರಚಿಸಲ್ಪಟ್ಟಿವೆ). ಈಗ ಜೀವದ ಸ್ವರೂಪಭೂತಗಳಾದಂಥ ಆ ಜ್ಞಾನದರ್ಶನಗಳಲ್ಲಿ ನಿಯತ[೪] ವಿದೆ – ಅವಸ್ಥಿತವಾದಂಥ ಯಾವ ಉತ್ಪಾದ ವ್ಯಯಧ್ರೌವ್ಯರೂಪ ವೃತ್ತಿ[೫]ಮಯ ಅಸ್ತಿತ್ವವಿದೆ – ಯಾವುದು ರಾಗಾದಿಪರಿಣಾಮದ ಅಭಾವದ ಕಾರಣವಾಗಿ ಅನಿಂದ್ಯವಿದೆ – ಅದು ಚಾರಿತ್ರವಿದೆ ; ಅದೇ ಮೋಕ್ಷಮಾರ್ಗವಿದೆ.

ಸಂಸಾರಿಗಳಲ್ಲಿ ಚಾರಿತ್ರವು ವಾಸ್ತವಿಕವಾಗಿ ೧) ಸ್ವಚಾರಿತ್ರ ಮತ್ತು ೨) ಪರಚಾರಿತ್ರವೆಂದು ಎರಡು ಪ್ರಕಾರವಾಗಿದೆ; ಇದಕ್ಕೆ ೧) ಸ್ವಸಮಯ ಮತ್ತು ೨) ಪರಸಮಯವೆಂದು ಅರ್ಥವಿದೆ. ಅಲ್ಲಿ ಸ್ವಭಾವದಲ್ಲಿ ಅವಸ್ಥಿತವಾದ ಅಸ್ತಿತ್ವ ಸ್ವರೂಪವು (ಚಾರಿತ್ರವು) ಅದು ಸ್ವಚಾರಿತ್ರವಿದೆ ಮತ್ತು ಪರಭಾವದಲ್ಲಿ ಅವಸ್ಥಿತವಾದ ಅಸ್ತಿತ್ವಸ್ವರೂಪವು (ಚಾರಿತ್ರವು) ಅದು ಪರಚಾರಿತ್ರವಿದೆ. ಅವುಗಳೊಳಗಿಂದ (ಎಂದರೆ ಎರಡು ಪ್ರಕಾರದ ಚಾರಿತ್ರಗಳೊಳಗಿಂದ) ಸ್ವಭಾವದಲ್ಲಿ ಅವಸ್ಥಿತವಾದ ಅಸ್ತಿತ್ವರೂಪ ಚಾರಿತ್ರವು ಯಾವುದು ಪರಭಾವದಲ್ಲಿ ಅವಸ್ಥಿತವಾದ ಅಸ್ತಿತ್ವದಿಂದ ಭಿನ್ನವಿರುವ ಕಾರಣ ಅತ್ಯಂತ ಅನಿಂದ್ಯವಿದೆ ಅದು – ಇಲ್ಲಿ ಪ್ರತ್ಯಕ್ಷ ಮೋಕ್ಷಮಾರ್ಗರೂಪವೆಂದು ತಿಳಿಯುವುದು.

[ಇಲ್ಲಿ ಚಾರಿತ್ರವು 'ಪರಮಾರ್ಥ' ಶಬ್ದದಿಂದ ವಾಚ್ಯವಾದಂಥ ಮೋಕ್ಷದ ಕಾರಣವಿದೆ, ಬೇರೆಯಿಲ್ಲ – ಎಂದು ತಿಳಿದುಕೊಳ್ಳದೆ, ಮೋಕ್ಷದಿಂದ ಭಿನ್ನವಾದಂಥ ಅಸಾರಸಂಸಾರಕ್ಕೆ ಕಾರಣಭೂತವಾದ ಮಿಥ್ಯಾತ್ವ ರಾಗಾದಿಗಳಲ್ಲಿ ಮಗ್ನವಾಗಿ ವರ್ತಿಸುತ್ತ ತಮ್ಮದು ಅನಂತಕಾಲವು ಕಳೆದು ಹೋಗಿದೆ ; ಎಂದು ತಿಳಿದುಕೊಂಡು ಅದೇ ಜೀವ ಸ್ವಭಾವನಿಯತ ಚಾರಿತ್ರದ್ದೇ – ಯಾವುದು ಮೋಕ್ಷಕ್ಕೆ ಕಾರಣಭೂತವಿದೆ ಅದರದೇ – ನಿರಂತರ ಭಾವನೆ ಭಾವಿಸುವುದು ಯೋಗ್ಯವಿದೆ. ಈ ಪ್ರಕಾರವಾಗಿ ಸೂತ್ರದ ತಾತ್ಪರ್ಯವಿದೆ.]

ಜೀವಸ್ವಭಾವಸ್ಥಿತನಿದ್ದನಿಯತ ಗುಣಪರ್ಯಾಯತ್ವ ಪರಸಮಯವಿದೆ ।
ಅವನೊಂದುಪಕ್ಷಸ್ವಸಮಯಮಾಡಿದರೆ ಕರ್ಮಬಂಧದಿಂ ಮುಕ್ತನಾಗುವನು ॥೧೫೫॥

---

೩. ವಿಶೇಷ ಚೈತನ್ಯವು ಅದು ಜ್ಞಾನವಿದೆ ಮತ್ತು ಸಾಮಾನ್ಯ ಚೈತನ್ಯವು ಅದು ದರ್ಶನವಿದೆ.

೪. ನಿಯತ = ಅವಸ್ಥಿತ ; ಸ್ಥಿತ ; ಸ್ಥಿರ ; ದೃಢರೂಪಸ್ಥಿರ.

೫. ವೃತ್ತಿ = ವರ್ತನೆ ; ಆಗುವುದು. (ಉತ್ಪಾದವ್ಯಯಧ್ರೌವ್ಯರೂಪ ವೃತ್ತಿಯು ಅದು ಅಸ್ತಿತ್ವವಿದೆ.)

ಜೀವಃ ಸ್ವಭಾವನಿಯತಃ ಅನಿಯತಗುಣಪರ್ಯಾಯೋಽಥ ಪರಸಮಯಃ ।
ಯದಿ ಕುರುತೇ ಸ್ವಕಂ ಸಮಯಂ ಪ್ರಭ್ರಶ್ಯತಿ ಕರ್ಮಬಂಧಾತ್ ॥೧೫೫॥

ಸ್ವಸಮಯಪರಸಮಯೋಪಾದಾನವ್ಯುದಾಸಪುರಸ್ಸರಕರ್ಮಕ್ಷಯದ್ವಾರೇಣ ಜೀವಸ್ವಭಾವನಿಯತಚರಿತಸ್ಯ ಮೋಕ್ಷಮಾರ್ಗತ್ವದ್ಯೋತನಮೇತತ್ ।

ಸಂಸಾರಿಣೋ ಹಿ ಜೀವಸ್ಯ ಜ್ಞಾನದರ್ಶನಾವಸ್ಥಿತತ್ವಾತ್ ಸ್ವಭಾವನಿಯತಸ್ಯಾಪ್ಯನಾದಿಮೋಹನೀಯೋದಯಾನುವೃತ್ತಿಪರತ್ವೇನೋಪರಕ್ತೋಪಯೋಗಸ್ಯ ಸತಃ ಸಮುಪಾತ್ತಭಾವವೈಶ್ವರೂಪ್ಯತ್ವಾದನಿಯತಗುಣಪರ್ಯಾಯತ್ವಂ ಪರಸಮಯಃ ಪರಚರಿತಮಿತಿ ಯಾವತ್ । ತಸ್ಯೈವಾನಾದಿಮೋಹನೀಯೋದಯಾನುವೃತ್ತಿಪರತ್ವಮಪಾಸ್ಯಾತ್ಯಂತಶುದ್ಧೋಪಯೋಗಸ್ಯ ಸತಃ ಸಮುಪಾತ್ತಭಾವೈಕ್ಯರೂಪ್ಯತ್ವಾನ್ನಿಯತಗುಣಪರ್ಯಾಯತ್ವಂ ಸ್ವಸಮಯಃ ಸ್ವಚರಿತಮಿತಿ ಯಾವತ್ । ಅಥ ಖಲು ಯದಿ ಕಥಂಚನೋದ್ಭಿನ್ನಸಮ್ಯಗ್ಜ್ಞಾನಜ್ಯೋತಿರ್ಜೀವಃ ಪರಸಮಯಂ ವ್ಯುದಸ್ಯ ಸ್ವಸಮಯಮುಪಾದತ್ತೇ ತದಾ ಕರ್ಮ ಬಂಧಾದವಶ್ಯಂ ಭ್ರಶ್ಯತಿ । ಯತೋ ಹಿ ಜೀವಸ್ವಭಾವನಿಯತಂ ಚರಿತಂ ಮೋಕ್ಷಮಾರ್ಗ ಇತಿ ।

ಗಾಥೆ - ೧೫೫

ಗಾಥಾರ್ಥ ಃ- [ಜೀವೋ] ಜೀವನು [ಸಹಾವಣಿಯದೋ] (ದ್ರವ್ಯ-ಅಪೇಕ್ಷೆಯಿಂದ) ಸ್ವಭಾವ ನಿಯತನಿದ್ದರೂ ಕೂಡ [ಅಣಿಯದಗುಣಪ್ಪಜ್ಜಓ ಪರಸಮಓ] ಒಂದು ವೇಳೆ ಅನಿಯತ ಗುಣಪರ್ಯಾಯವುಳ್ಳವನಾದರೆ ಪರಸಮಯನಿದ್ದಾನೆ. [ಜದಿ] ಒಂದು ವೇಳೆ ಅವನು [ಸಗಂ ಸಮಯಂ ಕುಣದಿ] (ನಿಯತಗುಣಪರ್ಯಾಯದಿಂದ ಪರಿಣಮಿತನಾಗಿ) ಸ್ವಸಮಯವನ್ನು ಮಾಡಿದರೆ [ಕಮ್ಮಬಂಧಾದೋ] ಕರ್ಮಬಂಧನದಿಂದ [ಪಬ್ಭಸ್ಸದಿ] ಬಿಡುಗಡೆ ಪಡೆಯುತ್ತಾನೆ.

ಟೀಕೆ ಃ- ಸ್ವಸಮಯದ ಗ್ರಹಣ ಮತ್ತು ಪರಸಮಯದ ತ್ಯಾಗಪೂರ್ವಕವಾಗಿ ಕರ್ಮಕ್ಷಯವಾಗುತ್ತದೆ. ಎಂಬ ಪ್ರತಿಪಾದನೆಯ ಮುಖಾಂತರ ಇಲ್ಲಿ (ಈ ಗಾಥೆಯಲ್ಲಿ) ''ಜೀವ ಸ್ವಭಾವದಲ್ಲಿ ನಿಯತವಾದ ಚಾರಿತ್ರವು ಅದು ಮೋಕ್ಷಮಾರ್ಗವಿದೆ''ಯೆಂದು ತಿಳಿಸಿಕೊಡಲಾಗಿದೆ.

ಸಂಸಾರೀ ಜೀವನು (ದ್ರವ್ಯ ಅಪೇಕ್ಷೆಯಿಂದ) ಜ್ಞಾನದರ್ಶನಗಳಲ್ಲಿ ಅವಸ್ಥಿತನಿರುವ ಕಾರಣ ಸ್ವಭಾವದಲ್ಲಿ ನಿಯತ (ನಿಶ್ಚಲರೂಪದಿಂದ ಸ್ಥಿರ)ನಿದ್ದರೂ ಕೂಡ ಅವನು ಯಾವಾಗ ಅನಾದಿ ಮೋಹನೀಯದ ಉದಯದ ಅನುಸರಣೆ ಮಾಡಿ ಪರಿಣತಿ ಮಾಡುವ ಕಾರಣ ಉಪರಕ್ತ[೧] ಉಪಯೋಗವುಳ್ಳವ (ಅಶುದ್ಧ ಉಪಯೋಗವುಳ್ಳವ) ನಾಗುತ್ತಾನೆ ಆಗ (ತಾನು) ಭಾವಗಳ ವಿಶ್ವರೂಪತೆಯನ್ನು (ಅನೇಕ ರೂಪತೆಯನ್ನು) ಗ್ರಹಣ ಮಾಡಿರುವ ಕಾರಣ AÊÜWÀ¸ÀÄ ÞÊÜA¯¿ áñÜ[೨] ಗುಣಪರ್ಯಾಯತೆಯಾಗುತ್ತದೆ ಅದು ಪರಸಮಯ ಎಂದರೆ ಪರಚಾರಿತ್ರವಿದೆ;

---

೧. ಉಪರಕ್ತ = ಉಪರಾಗಯುಕ್ತ. ಯಾವುದೇ ಪದಾರ್ಥದಲ್ಲಾಗುವಂಥ ಬೇರೆ ಉಪಾಧಿಯಅನುರೂಪ ವಿಕಾರವು (ಎಂದರೆ ಯಾವುದರಲ್ಲಿ ಅನ್ಯ ಉಪಾಧಿಯು ನಿಮಿತ್ತಭೂತವಿರುತ್ತದೆ ಅಂಥ ಔಪಾಧಿಕ ವಿಕೃತಿ - ಮಲಿನತೆ - ಅಶುದ್ಧಿ) ಅದು ಉಪರಾಗವಿದೆ.

೨. ಅನಿಯತ = ಅನಿಶ್ಚಿತ ; ಅನೇಕರೂಪ ; ವಿವಿಧ ಪ್ರಕಾರದ.

ಜೋ ಪರದವ್ವಮ್ಹಿ ಸುಹಂ ಅಸುಹಂ ರಾಗೇಣ ಕುಣದಿ ಜದಿ ಭಾವಂ ।
ಸೋ ಸಗಚರಿತ್ತಭಟ್ಠೋ ಪರಚರಿಯಚರೋ ಹವದಿ ಜೀವೋ ॥೧೫೬॥

ಯಃ ಪರದ್ರವ್ಯೇ ಶುಭಮಶುಭಂ ರಾಗೇಣ ಕರೋತಿ ಯದಿ ಭಾವಮ್ ।
ಸ ಸ್ವಕಚರಿತ್ರಭ್ರಷ್ಟಃ ಪರಚರಿತಚರೋ ಭವತಿ ಜೀವಃ ॥೧೫೬॥

ಪರಚರಿತಪ್ರವೃತ್ತಸ್ವರೂಪಾಖ್ಯಾನಮೇತತ್ ।

ಯೋ ಹಿ ಮೋಹನೀಯೋದಯಾನುವೃತ್ತಿವಶಾದ್ರಜ್ಯಮಾನೋಪಯೋಗಃ ಸನ್ ಪರದ್ರವ್ಯೇ ಶುಭಮಶುಭಂ ವಾ ಭಾವಮಾದಧಾತಿ, ಸ ಸ್ವಕಚರಿತ್ರಭ್ರಷ್ಟಃ ಪರಚರಿತ್ರಚರ ಇತ್ಯುಪಗೀಯತೇ ; ಯತೋ ಹಿ ಸ್ವದ್ರವ್ಯೇ ಶುದ್ಧೋಪಯೋಗವೃತ್ತಿಃ ಸ್ವಚರಿತಂ, ಪರದ್ರವ್ಯೇ ಸೋಪರಾಗೋಪಯೋಗವೃತ್ತಿಃ ಪರಚರಿತಮಿತಿ ।

ಅವನೇ (ಜೀವನೇ) ಯಾವಾಗ ಅನಾದಿ ಮೋಹನೀಯದ ಉದಯದ ಅನುಸರಣೆ ಮಾಡುವಂಥ ಪರಿಣತಿಯನ್ನು ಬಿಟ್ಟುಕೊಟ್ಟು ಅತ್ಯಂತ ಶುದ್ಧ ಉಪಯೋಗವುಳ್ಳವನಾಗುತ್ತಾನೆ ಆಗ (ತಾನು) ಭಾವದ ಏಕರೂಪತೆಯನ್ನು ಗ್ರಹಣ ಮಾಡಿರುವ ಕಾರಣ ಅವನಿಗೆ ಯಾವ ನಿಯತ[೧] ಗುಣಪರ್ಯಾಯತೆಯಾಗುತ್ತದೆ ಅದು ಸ್ವಸಮಯ ಎಂದರೆ ಸ್ವಚಾರಿತ್ರವಿದೆ.

ಈಗ ವಾಸ್ತವಿಕವಾಗಿ ಜೀವನು ಒಂದು ವೇಳೆ ಯಾವುದೇ ಪ್ರಕಾರದಿಂದ ಸಮ್ಯಗ್ಜ್ಞಾನಜ್ಯೋತಿಯನ್ನು ಪ್ರಕಟಪಡಿಸಿಕೊಂಡು ಪರಸಮಯವನ್ನು ಬಿಟ್ಟುಕೊಟ್ಟು ಸ್ವಸಮಯವನ್ನು ಸ್ವೀಕಾರ ಮಾಡಿದರೆ ಅವನು ಅವಶ್ಯವಾಗಿ ಕರ್ಮಬಂಧನದಿಂದ ಬಿಡುಗಡೆ ಹೊಂದುತ್ತಾನೆ ; ಆದುದರಿಂದ ವಾಸ್ತವಿಕವಾಗಿ ಜೀವಸ್ವಭಾವದಲ್ಲಿ ನಿಯತವಾದ ಚಾರಿತ್ರವು ಅದು ಮೋಕ್ಷಮಾರ್ಗವಿದೆ (ಎಂದು ನಿಶ್ಚಿತವಾಗುತ್ತದೆ).

ಗಾಥೆ - ೧೫೬

ಗಾಥಾರ್ಥ :- [ಜೋ] ಯಾವನು [ರಾಗೇಣ] ರಾಗದಿಂದ (-ಎಂದರೆ ಮಲಿನವಾದ ಉಪಯೋಗದಿಂದ) [ಪರದವ್ವಮ್ಹಿ] ಪರದ್ರವ್ಯಗಳಲ್ಲಿ [ಸುಹಂ ಅಸುಹಂ ಭಾವಂ] ಶುಭ ಅಥವಾ ಅಶುಭ ಭಾವವನ್ನು [ಜದಿ ಕುಣದಿ] ಮಾಡುತ್ತಾನೆ [ಸೋ ಜೀವೋ] ಆ ಜೀವನು [ಸಗಚರಿತ್ತಭಟ್ಠೋ] ತನ್ನ ಚಾರಿತ್ರದಿಂದ ಭ್ರಷ್ಟವಾದಂಥ [ಪರಚರಿಯಚರೋ ಹವದಿ] ಪರಚಾರಿತ್ರದ ಆಚರಣೆ ಮಾಡುವಂಥವನಿದ್ದಾನೆ.

ಟೀಕೆ :- ಇದು ಪರಚಾರಿತ್ರದಲ್ಲಿ ಪ್ರವರ್ತನೆ ಮಾಡುವಂಥವನ ಸ್ವರೂಪದ ಕಥನವಿದೆ.

ಯಾವನು (ಜೀವನು) ವಾಸ್ತವಿಕವಾಗಿ ಮೋಹನೀಯದ ಉದಯದ ಅನುಸರಣೆ ಮಾಡುವಂಥ ಪರಿಣತಿಯ ವಶದಿಂದ (ಎಂದರೆ ಮೋಹನೀಯದ ಉದಯದ ಅನುಸರಣೆ ಮಾಡಿ ಪರಿಣಮಿತವಾಗುವ

ಯಾವ ಜೀವನು ರಾಗದಿಂ ಪರದ್ರವ್ಯದಲಿ ಶುಭಾಶುಭಭಾವ ಮಾಡುವನು ।
ಅವನು ಸ್ವಚಾರಿತ್ರಭ್ರಷ್ಟ ಪರಚಾರಿತ್ರದಾಚರಣ ಮಾಡುವವನಿಹನು ॥೧೫೬॥

---

೧. ನಿಯತ - ನಿಶ್ಚಿತ ; ಏಕರೂಪ ; ಇಂಥ ಒಂದೇ ಪ್ರಕಾರದ.

ಆಸವದಿ ಜೇಣ ಪುಣ್ಣಂ ಪಾವಂ ವಾ ಅಪ್ಪಣೋಧ ಭಾವೇಣ ।
ಸೋ ತೇಣ ಪರಚರಿತ್ತೋ ಹವದಿ ತ್ತಿ ಜಿಣಾ ಪರೂವೇಂತಿ ॥೧೫೭॥

ಆಸ್ರವತಿ ಯೇನ ಪುಣ್ಯಂ ಪಾಪಂ ವಾತ್ಮನೋऽಥ ಭಾವೇನ ।
ಸ ತೇನ ಪರಚರಿತ್ರಃ ಭವತೀತಿ ಜಿನಾಃ ಪ್ರರೂಪಯಂತಿ ॥೧೫೭॥

ಪರಚರಿತಪ್ರವೃತ್ತೇರ್ಬಂಧಹೇತುತ್ವೇನ ಮೋಕ್ಷಮಾರ್ಗತ್ವನಿಷೇಧನಮೇತತ್ ।

ಇಹ ಕಿಲ ಶುಭೋಪರಕ್ತೋ ಭಾವಃ ಪುಣ್ಯಾಸ್ರವಃ, ಅಶುಭೋಪರಕ್ತಃ ಪಾಪಾಸ್ರವ ಇತಿ । ತತ್ರ ಪುಣ್ಯಂ ಪಾಪಂ ವಾ ಯೇನ ಭಾವೇನಾಸ್ರವತಿ ಯಸ್ಯ ಜೀವಸ್ಯ ಯದಿ ಸ ಭಾವೋ ಭವತಿ ಸ ಜೀವಸ್ತದಾ ತೇನ ಪರಚರಿತ ಇತಿ ಪ್ರರೂಪ್ಯತೇ । ತತಃ ಪರಚರಿತಪ್ರವೃತ್ತಿರ್ಬಂಧಮಾರ್ಗ ಏವ, ನ ಮೋಕ್ಷಮಾರ್ಗ ಇತಿ ।

ಕಾರಣದಿಂದ) ರಂಜಿತ ಉಪಯೋಗವುಳ್ಳವನಾಗಿ (ಉಪರಕ್ತ-ಉಪಯೋಗವುಳ್ಳವನಾಗಿ) ವರ್ತಿಸುತ್ತ ಪರದ್ರವ್ಯಗಳಲ್ಲಿ ಶುಭ ಅಥವಾ ಅಶುಭ ಭಾವವನ್ನು ಧಾರಣ ಮಾಡುತ್ತಾನೆ ಅವನು (ಜೀವನು) ಸ್ವಚಾರಿತ್ರದಿಂದ ಭ್ರಷ್ಟವಾದಂಥ ಪರಚಾರಿತ್ರದ ಆಚರಣೆ ಮಾಡುವಂಥವನೆಂದು ಕರೆಯಿಸಿಕೊಳ್ಳುತ್ತಾನೆ ; ಏಕೆಂದರೆ ವಾಸ್ತವಿಕ ಸ್ವದ್ರವ್ಯದಲ್ಲಿ ಶುದ್ಧೋಪಯೋಗರೂಪವಾದ ಪರಿಣತಿಯು ಅದು ಸ್ವಚಾರಿತ್ರವಿದೆ ಮತ್ತು ಪರದ್ರವ್ಯದಲ್ಲಿ ಸೋಪರಾಗ[೧] ಉಪಯೋಗರೂಪ ಪರಿಣತಿಯು ಅದು ಪರಚಾರಿತ್ರವಿದೆ.

ಗಾಥೆ - ೧೫೭

ಗಾಥಾರ್ಥ ಃ- [ಜೇಣ ಭಾವೇಣ] ಯಾವ ಭಾವಗಳಿಂದ [ಅಪ್ಪಣೋ] ಆತ್ಮನಿಗೆ [ಪುಣ್ಣಂ ಪಾವಂ ವಾ] ಪುಣ್ಯ ಅಥವಾ ಪಾಪಗಳು [ಅಧ ಆಸವದಿ] ಆಸ್ರವಿತವಾಗುತ್ತವೆ, [ತೇಣ] ಆ ಭಾವಗಳ ಮುಖಾಂತರ [ಸೋ] ಅವನು (ಜೀವನು) [ಪರಚರಿತ್ತೋ ಹವದಿ] ಪರಚಾರಿತ್ರನಿದ್ದಾನೆ [ತ್ತಿ] ಎಂದು [ಜಿಣಾ] ಜಿನೇಂದ್ರ ಭಗವಂತರು [ಪರೂವೇಂತಿ] ಪ್ರರೂಪಣೆ ಮಾಡುತ್ತಾರೆ.

ಟೀಕೆ ಃ- ಇಲ್ಲಿ ಪರಚಾರಿತ್ರವೃತ್ತಿಯು ಬಂಧಹೇತುಭೂತವಿರುವುದರಿಂದ ಅದಕ್ಕೆ ಮೋಕ್ಷಮಾರ್ಗತನದ ನಿಷೇಧ ಮಾಡಲಾಗಿದೆ (ಎಂದರೆ ಪರಚಾರಿತ್ರದಲ್ಲಿ ಪ್ರವರ್ತನೆ ಮಾಡುವುದು ಬಂಧದ ಹೇತುವಾಗಿರುವುದರಿಂದ ಅದು ಮೋಕ್ಷಮಾರ್ಗವಲ್ಲವೆಂದು ಈ ಗಾಥೆಯಲ್ಲಿ ತಿಳಿಸಿ ಕೊಡಲಾಗಿದೆ.)

ಯಾವ ಭಾವದಿಂದಾತ್ಮನಿಗೆ ಪುಣ್ಯವಿಲ್ಲವೆ ಪಾಪದಾಸ್ರವವಾಗುವುದು ।
ಅವನಾ ಭಾವದಿಂ ಪರಚಾರಿತ್ರನೆಂದು ಜಿನದೇವ ಪ್ರರೂಪಿಸುವರು ॥೧೫೭॥

---

೧ ಸೋಪರಾಗ = ಉಪರಾಗಯುಕ್ತ ; ಉಪರಕ್ತ ; ಮಲಿನ ; ವಿಕಾರವುಳ್ಳ ; ಅಶುದ್ಧ. [ಉಪಯೋಗದಲ್ಲಾಗುವಂಥ ಕರ್ಮೋದಯರೂಪದ ಉಪಾಧಿಯ ಅನುರೂಪವಾದ ವಿಕಾರವು (ಎಂದರೆ ಕರ್ಮೋದಯರೂಪದ ಉಪಾಧಿಯು ಯಾವುದರಲ್ಲಿ ನಿಮಿತ್ತಭೂತವಿರುತ್ತದೆ ಅಂಥ ಔಪಾಧಿಕ ವಿಕೃತಿಯು) ಅದು ಉಪರಾಗವಿದೆ.]

ಜೋ ಸವ್ವಸಂಗಮುಕ್ಕೋ ಣಣ್ಣಮಣೋ ಅಪ್ಪಣಂ ಸಹಾವೇಣ ।
ಜಾಣದಿ ಪಸ್ಸದಿ ಣಿಯದಂ ಸೋ ಸಗಚರಿಯಂ ಚರದಿ ಜೀವೋ ॥೧೫೮॥

ಯಃ ಸರ್ವಸಂಗಮುಕ್ತಃ ಅನನ್ಯಮನಾಃ ಆತ್ಮಾನಂ ಸ್ವಭಾವೇನ ।
ಜಾನಾತಿ ಪಶ್ಯತಿ ನಿಯತಂ ಸಃ ಸ್ವಕಚರಿತಂ ಚರತಿ ಜೀವಃ ॥೧೫೮॥

ಸ್ವಚರಿತಪ್ರವೃತ್ತರೂಪಾಖ್ಯಾನಮೇತತ್ ।

ಯಃ ಖಲು ನಿರುಪರಾಗೋಪಯೋಗತ್ವಾತ್ಸರ್ವಸಂಗಮುಕ್ತಃ ಪರದ್ರವ್ಯವ್ಯಾವೃತ್ತೋಪಯೋಗತ್ವಾದನನ್ಯ-ಮನಾಃ ಆತ್ಮಾನಂ ಸ್ವಭಾವೇನ ಜ್ಞಾನದರ್ಶನರೂಪೇಣ ಜಾನಾತಿ ಪಶ್ಯತಿ ನಿಯತಮವಸ್ಥಿತತ್ವೇನ, ಸ ಖಲು ಸ್ವಕಂ ಚರಿತಂ ಚರತಿ ಜೀವಃ । ಯತೋ ಹಿ ದೃಶಿಜ್ಞಪ್ತಿಸ್ವರೂಪೇ ಪುರುಷೇ ತನ್ಮಾತ್ರತ್ವೇನ ವರ್ತನಂ ಸ್ವಚರಿತಮಿತಿ ।

ಇಲ್ಲಿ ವಾಸ್ತವಿಕವಾಗಿ ಶುಭೋಪರಕ್ತಭಾವವು (-ಶುಭರೂಪವಿಕಾರಿಭಾವವು) ಅದು ಪುಣ್ಯಾಸ್ರವವಿದೆ ಮತ್ತು ಅಶುಭೋಪರಕ್ತಭಾವವು (-ಅಶುಭರೂಪವಿಕಾರಿಭಾವವು) ಅದು ಪಾಪಾಸ್ರವವಿದೆ. ಅಲ್ಲಿ ಪುಣ್ಯ ಅಥವಾ ಪಾಪಗಳು ಯಾವ ಭಾವಗಳಿಂದ ಆಸ್ರವಿತವಾಗುತ್ತವೆ ಆ ಭಾವಗಳು ಯಾವಾಗ ಯಾವ ಜೀವನಿಗೆ ಆಗುತ್ತವೆ ಆಗ ಆ ಜೀವನು ಆ ಭಾವಗಳ ಮುಖಾಂತರ ಪರಚಾರಿತ್ರನಿದ್ದಾನೆ - ಎಂದು (ಜಿನೇಂದ್ರರ ಮುಖಾಂತರ) ಪ್ರರೂಪಣೆ ಮಾಡಲಾಗುತ್ತದೆ. ಆದುದರಿಂದ ಪರಚಾರಿತ್ರದಲ್ಲಿನ ಪ್ರವೃತ್ತಿಯು ಅದು ಬಂಧಮಾರ್ಗವೇ ಇದೆ, ಮೋಕ್ಷಮಾರ್ಗವಲ್ಲ. (ಎಂಬುದು ನಿಶ್ಚಿತವಾಗುತ್ತದೆ.)

ಗಾಥೆ - ೧೫೮

ಗಾಥಾರ್ಥ ಃ- [ಜೋ] ಯಾವನು [ಸವ್ವಸಂಗಮುಕ್ಕೋ] ಸರ್ವಸಂಗದಿಂದ ಮುಕ್ತನಾಗಿ ಮತ್ತು [ಣಣ್ಣಮಣೋ] ಅನನ್ಯಮನಸ್ಕನಾಗಿ ವರ್ತಿಸುತ್ತ [ಅಪ್ಪಣಂ] ಆತ್ಮನನ್ನು [ಸಹಾವೇಣ] (ಜ್ಞಾನ ದರ್ಶನರೂಪ) ಸ್ವಭಾವದಿಂದ [ಣಿಯದಂ] ನಿಯತರೂಪದಿಂದ (ಸ್ಥಿರತೆಯೊಡನೆ) [ಜಾಣದಿ ಪಸ್ಸದಿ] ತಿಳಿಯುತ್ತಾನೆ ಮತ್ತು ನೋಡುತ್ತಾನೆ. [ಸೋ ಜೀವೋ] ಆ ಜೀವನು [ಸಗಚರಿಯಂ] ಸ್ವಚಾರಿತ್ರವನ್ನು [ಚರದಿ] ಆಚರಿಸುತ್ತಾನೆ.

ಟೀಕೆ ಃ- ಇದು ಸ್ವಚಾರಿತ್ರದಲ್ಲಿ ಪ್ರವರ್ತನೆ ಮಾಡುವಂಥವನ ಸ್ವರೂಪದ ಕಥನವಿದೆ.

ಯಾವನು (ಜೀವನು) ವಾಸ್ತವಿಕವಾಗಿ ನಿರುಪರಾಗ[೧] ಉಪಯೋಗವುಳ್ಳವನಾಗಿರುವ ಕಾರಣ ಸರ್ವ

ಯಾವನು ಸರ್ವಸಂಗಮುಕ್ತ ಅನನ್ಯಚಿತ್ತದಿಂದಾತ್ಮನನು ಸ್ವಭಾವದಿಂದ ।
ಅವಿರತದಿ ತಿಳಿಯುವ ನೋಡುವನವನು ಸ್ವಚಾರಿತ್ರವಾಚರಿಪನು ॥೧೫೮॥

---

೧ ನಿರುಪರಾಗ = ಉಪರಾಗವಿಲ್ಲದ ; ನಿರ್ಮಲ ;ಅವಿಕಾರಿ ; ಶುದ್ಧ. (ನಿರುಪರಾಗ ಉಪಯೋಗವುಳ್ಳ ಜೀವನು ಸಮಸ್ತ ಬಾಹ್ಯಾಭ್ಯಂತರ ಸಂಗದಿಂದ ಶೂನ್ಯನಿದ್ದರೂ ನಿಸ್ಸಂಗ ಪರಮಾತ್ಮನ ಭಾವನೆಯಿಂದ ಉತ್ಪನ್ನವಾದ ಸುಂದರಾನಂದಸ್ಯಂದಿ ಪರಮಾನಂದಸ್ವರೂಪ ಸುಖಸುಧಾರಸದ ಆಸ್ವಾದನೆಯಿಂದ ಪೂರ್ಣ ಕಲಶದಂತೆ ಸಂಪೂರ್ಣ ಆತ್ಮಪ್ರದೇಶದಲ್ಲಿ ಪರಿಪೂರ್ಣನಿರುತ್ತಾನೆ.)

ಚರಿಯಂ ಚರದಿ ಸಗಂ ಸೋ ಜೋ ಪರದವ್ವಪ್ಪಭಾವರಹಿದಪ್ಪಾ ।
ದಂಸಣಣಾಣವಿಯಪ್ಪಂ ಅವಿಯಪ್ಪಂ ಚರದಿ ಅಪ್ಪಾದೋ ॥೧೫೯॥

ಚರಿತಂ ಚರತಿ ಸ್ವಕಂ ಸ ಯಃ ಪರದ್ರವ್ಯಾತ್ಮಭಾವರಹಿತಾತ್ಮಾ ।
ದರ್ಶನಜ್ಞಾನವಿಕಲ್ಪಮವಿಕಲ್ಪಂ ಚರತ್ಯಾತ್ಮನಃ ॥೧೫೯॥

ಶುದ್ಧಸ್ವಚರಿತಪ್ರವೃತ್ತಿಪಥಪ್ರತಿಪಾದನಮೇತತ್ ।

ಯೋ ಹಿ ಯೋಗೀಂದ್ರಃ ಸಮಸ್ತಮೋಹವ್ಯೂಹಬಹಿರ್ಭೂತತ್ವಾತ್ಪರದ್ರವ್ಯಸ್ವಭಾವ ಭಾವರಹಿತಾತ್ಮಾ ಸನ್, ಸ್ವದ್ರವ್ಯಮೇಕಮೇವಾಭಿಮುಖ್ಯೇನಾನುವರ್ತಮಾನಃ ಸ್ವಸ್ವಭಾವಭೂತಂ ದರ್ಶನಜ್ಞಾನವಿಕಲ್ಪಮಪ್ಯಾತ್ಮನೋ೬-

---

ಸಂಗದಿಂದ ಮುಕ್ತನಾಗಿ ವರ್ತಿಸುತ್ತ ಪರದ್ರವ್ಯದಿಂದ ವ್ಯಾವೃತ್ತ[೧] ಉಪಯೋಗವುಳ್ಳವನಾಗಿರುವ ಕಾರಣ ಅನನ್ಯಮನಸ್ಕ[೨]ನಾಗಿ ವರ್ತಿಸುತ್ತ ಆತ್ಮನನ್ನು ಜ್ಞಾನ-ದರ್ಶನರೂಪ ಸ್ವಭಾವದ ಮುಖಾಂತರ ನಿಯತರೂಪದಿಂದ ಎಂದರೆ ಅವಸ್ಥಿತರೂಪದಿಂದ ತಿಳಿಯುತ್ತಾನೆ - ನೋಡುತ್ತಾನೆ ; ಆ ಜೀವನು ವಾಸ್ತವಿಕವಾಗಿ ಸ್ವಚಾರಿತ್ರ-ವನ್ನಾಚರಿಸುತ್ತಾನೆ ; ಏಕೆಂದರೆ ವಾಸ್ತವಿಕವಾಗಿ ದೃಶಿ[೩] ಜ್ಞಪ್ತಿಸ್ವರೂಪ ಪುರುಷನಲ್ಲಿ (ಆತ್ಮನಲ್ಲಿ) ತನ್ಮಾತ್ರರೂಪದಿಂದ ವರ್ತಿಸುವುದು ಅದು ಸ್ವಚಾರಿತ್ರವಿದೆ.

ಭಾವಾರ್ಥ ಃ- ಯಾವ ಜೀವನು ಶುದ್ಧೋಪಯೋಗದಿಂದ ವರ್ತಿಸುತ್ತ ಮತ್ತು ಅವನ ಪರಿಣತಿಯು ಪರದ ಕಡೆಗೆ ಹೋಗದ ಹಾಗೆ ವರ್ತಿಸುತ್ತ, ಸ್ವಭಾವಭೂತ ಜ್ಞಾನ-ದರ್ಶನ ಪರಿಣಾಮದ ಮುಖಾಂತರ ಆತ್ಮನನ್ನು ಸ್ಥಿರತೆಯೊಡನೆ ತಿಳಿಯುತ್ತಾನೆ - ನೋಡುತ್ತಾನೆ ಆ ಜೀವನು ಸ್ವಚಾರಿತ್ರದ ಆಚರಣೆ ಮಾಡುವಂಥವನಿದ್ದಾನೆ ; ಏಕೆಂದರೆ ದೃಶಿಜ್ಞಪ್ತಿಸ್ವರೂಪನಾದ ಆತ್ಮನಲ್ಲಿ ಕೇವಲ ದೃಶಿಜ್ಞಪ್ತಿರೂಪದಿಂದ ಪರಿಣಮಿತನಾಗಿರುವುದು ಅದು ಸ್ವಚಾರಿತ್ರವಿದೆ.

ಗಾಥಾ - ೧೫೯

ಗಾಥಾರ್ಥ ಃ- [ಜೋ] ಯಾವನು [ಪರದವ್ವಪ್ಪಭಾವರಹಿದಪ್ಪಾ] ಪರದ್ರವ್ಯಾತ್ಮಕವಾದ ಭಾವಗಳಿಂದ ರಹಿತವಾದ ಸ್ವರೂಪವುಳ್ಳವನಾಗಿ ವರ್ತಿಸುತ್ತ, [ದಂಸಣಣಾಣವಿಯಪ್ಪಂ] (ನಿಜಸ್ವಭಾವಭೂತ) ದರ್ಶನಜ್ಞಾನರೂಪ ಭೇದವನ್ನು [ಅಪ್ಪಾದೋ ಅವಿಯಪ್ಪಂ] ಆತ್ಮನಿಂದ ಅಭೇದರೂಪವಾಗಿ [ಚರದಿ] ಆಚರಿಸುತ್ತಾನೆ, [ಸೋ] ಅವನು [ಸಗಂ ಚರಿಯಂ ಚರದಿ] ಸ್ವಚಾರಿತ್ರವನ್ನು ಆಚರಿಸುತ್ತಾನೆ.

ಟೀಕೆ ಃ- ಇದು ಶುದ್ಧ ಸ್ವಚಾರಿತ್ರಪ್ರವೃತ್ತಿಯ ಮಾರ್ಗದ ಕಥನವಿದೆ.

ಪರದ್ರವ್ಯಾತ್ಮಕಭಾವರಹಿತ ಸ್ವರೂಪದಿಂ ದರ್ಶನ - ಜ್ಞಾನರೂಪ ಭೇದವು ।
ತೊರೆದಾತ್ಮನಿಂದ ಭೇದರೂಪವಾಚರಿಪನವ ಸ್ವಚಾರಿತ್ರವಾಚರಿಪನು ॥೧೫೯॥

---

೧ ವ್ಯಾವೃತ್ತಿ = ವಿಮುಖವಾದ ; ಬೇರೆಯಾದ ; ನಿವೃತ್ತವಾದ ; ನಿವೃತ್ತ ; ಭಿನ್ನ .

೨. ಅನನ್ಯಮನಸ್ಕ = ಪರಿಣತಿಯು ಅನ್ಯದ ಕುರಿತು ಇಲ್ಲದಂಥದು (ಮನ-ಚಿತ್ತ; ಪರಿಣತಿ ; ಭಾವ.)

೩. ದೃಶಿ = ದರ್ಶನಕ್ರಿಯೆ ; ಸಾಮಾನ್ಯ ಅವಲೋಕನ.

ವಿಕಲ್ಪತ್ವೇನ ಚರತಿ, ಸ ಖಲು ಸ್ವಕಂ ಚರಿತಂ ಚರತಿ । ಏವಂ ಹಿ ಶುದ್ಧದ್ರವ್ಯಾಶ್ರಿತಮಭಿನ್ನಸಾಧ್ಯಸಾಧನಭಾವಂ ನಿಶ್ಚಯನಯಮಾಶ್ರಿತ್ಯ ಮೋಕ್ಷಮಾರ್ಗಪ್ರರೂಪಣಮ್ । ಯತ್ತು ಪೂರ್ವಮುದ್ದಿಷ್ಟಂ ತತ್ಸ್ವಪರಪ್ರತ್ಯಯ-ಪರ್ಯಾಯಾಶ್ರಿತಂ ಭಿನ್ನಸಾಧ್ಯಸಾಧನಭಾವಂ ವ್ಯವಹಾರನಯಮಾಶ್ರಿತ್ಯ ಪ್ರರೂಪಿತಮ್ । ನ ಚೈತದ್ವಿಪ್ರತಿಷಿದ್ಧಂ ನಿಶ್ಚಯವ್ಯವಹಾರಯೋಃ ಸಾಧ್ಯಸಾಧನಭಾವತ್ವಾತ್ಸುವರ್ಣಸುವರ್ಣಪಾಷಾಣವತ್ । ಅತ ಏವೋಭಯನಯಾಯತ್ತಾ ಪಾರಮೇಶ್ವರೀ ತೀರ್ಥಪ್ರವರ್ತನೇತಿ ।

ಯಾವ ಯೋಗೀಂದ್ರರು ಎಲ್ಲ ಮೋಹವ್ಯೂಹದಿಂದ[೧] ಬಹಿರ್ಭೂತರಾಗಿರುವ ಕಾರಣ ಪರದ್ರವ್ಯದ ಸ್ವಭಾವರೂಪ ಭಾವಗಳಿಂದ ರಹಿತವಾದ ಸ್ವರೂಪವುಳ್ಳವರಾಗಿ ವರ್ತಿಸುತ್ತ, ಸ್ವದ್ರವ್ಯವೊಂದನ್ನೇ ಅಭಿಮುಖ ರೂಪದಿಂದ ಅನುಸರಿಸುತ್ತ ನಿಜಸ್ವಭಾವಭೂತ ದರ್ಶನಜ್ಞಾನಭೇದಗಳನ್ನೂ ಆತ್ಮನಿಂದ ಅಭೇದರೂಪವಾಗಿ ಆಚರಿಸುತ್ತಾರೆ ಅವರು ವಾಸ್ತವಿಕವಾದ ಸ್ವಚಾರಿತ್ರವನ್ನು ಆಚರಿಸುತ್ತಾರೆ.

ಹೀಗೆ ವಾಸ್ತವಿಕವಾಗಿ ಶುದ್ಧದ್ರವ್ಯದ[೨] ಆಶ್ರಿತವೂ, ಅಭಿನ್ನಸಾಧ್ಯಸಾಧನಭಾವವುಳ್ಳ[೩] ನಿಶ್ಚಯನಯದ ಆಶ್ರಯದಿಂದ ಮೋಕ್ಷಮಾರ್ಗದ ಪ್ರರೂಪಣೆಯನ್ನು ಮಾಡಲಾಗಿದೆ. ಮತ್ತು ಈ ಮೊದಲು (೧೦೭ ನೆಯ ಗಾಥೆಯಲ್ಲಿ) ತಿಳಿಸಿಕೊಡಲಾಗಿತ್ತು ಅದು ಸ್ವಪರಹೇತುಕ[೪] ಪರ್ಯಾಯದ ಆಶ್ರಿತವು, ಭಿನ್ನ[೫] ಸಾಧ್ಯಸಾಧನ

---

೧. ಮೋಹವ್ಯೂಹ = ಮೋಹಸಮೂಹ. (ಜಿನಮುನಿಗಳು ಎಲ್ಲ ಮೋಹಸಮೂಹದ ನಾಶಮಾಡಿರುವುದರಿಂದ 'ತಮ್ಮ ಸ್ವರೂಪವು ಪರದ್ರವ್ಯದ ಸ್ವಭಾವರೂಪ ಭಾವಗಳಿಂದ ರಹಿತವಿದೆ'ಯೆಂಬ ಪ್ರತೀತಿ ಮತ್ತು ಜ್ಞಾನವು ಅವರಿಗೆ ವರ್ತಿಸುತ್ತದೆ, ಅನಂತರ ಕೇವಲ ಸ್ವದ್ರವ್ಯದಲ್ಲೇ ನಿರ್ವಿಕಲ್ಪರೂಪದಿಂದ ಅತ್ಯಂತ ನಿಮಗ್ನರಾಗಿ ನಿಜಸ್ವಭಾವಭೂತ ದರ್ಶನಜ್ಞಾನ ಭೇದಗಳನ್ನು ಆತ್ಮನಿಂದ ಅಭೇದರೂಪವಾಗಿ ಆಚರಿಸುತ್ತಾರೆ ಆ ಮುನೀಂದ್ರರು ಸ್ವಚಾರಿತ್ರದ ಆಚರಣೆ ಮಾಡುವಂಥವರಿದ್ದಾರೆ.)

೨. ಇಲ್ಲಿ ನಿಶ್ಚಯನಯದ ವಿಷಯವು ಶುದ್ಧದ್ರವ್ಯ ಎಂದರೆ ಶುದ್ಧಪರ್ಯಾಯ ಪರಿಣತದ್ರವ್ಯವಿದೆ, ಎಂದರೆ ಏಕಾಕಿ ದ್ರವ್ಯದ (ಪರ ನಿಮಿತ್ತವಿಲ್ಲದ) ಶುದ್ಧಪರ್ಯಾಯವಿದೆ ; ಹೇಗೆಂದರೆ ನಿರ್ವಿಕಲ್ಪ ಶುದ್ಧಪರ್ಯಾಯ ಪರಿಣತರಾದ ಮುನಿಗಳಿಗೆ ನಿಶ್ಚಯನಯದಿಂದ ಮೋಕ್ಷಮಾರ್ಗವಿದೆ.

೩. ಯಾವ ನಯದಲ್ಲಿ ಸಾಧ್ಯ ಮತ್ತು ಸಾಧನಗಳು ಅಭಿನ್ನವಿವೆ (ಎಂದರೆ ಏಕಪ್ರಕಾರವಿವೆ) ಅದು ಇಲ್ಲಿ ನಿಶ್ಚಯನಯವಿದೆ ಹೇಗೆಂದರೆ ನಿರ್ವಿಕಲ್ಪ ಧ್ಯಾನಪರಿಣತರಾದ (ಶುದ್ಧಾತ್ಮಶ್ರದ್ಧೆಯ ಜ್ಞಾನಚಾರಿತ್ರ ಪರಿಣತರಾದ) ಮುನಿಗೆ ನಿಶ್ಚಯ ನಯದಿಂದ ಮೋಕ್ಷಮಾರ್ಗವಿದೆ ಏಕೆಂದರೆ ಅಲ್ಲಿ (ಮೋಕ್ಷರೂಪವಾದ) ಸಾಧ್ಯ ಮತ್ತು (ಮೋಕ್ಷಮಾರ್ಗರೂಪವಾದ) ಸಾಧನವು ಒಂದೇ ಪ್ರಕಾರದ ಎಂದರೆ ಶುದ್ಧಾತ್ಮರೂಪ (ಶುದ್ಧಾತ್ಮಪರ್ಯಾಯರೂಪ)ವಿದೆ.

೪. ಯಾವ ಪರ್ಯಾಯಗಳಲ್ಲಿ ಸ್ವ ಹಾಗೂ ಪರಗಳು ಕಾರಣವಿರುತ್ತವೆ ಎಂದರೆ ಉಪಾದಾನಕಾರಣ ಹಾಗೂ ನಿಮಿತ್ತ ಕಾರಣಗಳಿರುತ್ತವೆ ಆ ಪರ್ಯಾಯಗಳು ಸ್ವ-ಪರಹೇತುಕ ಪರ್ಯಾಯಗಳಿವೆ ; ಹೇಗೆಂದರೆ ಆರನೆಯ ಗುಣಸ್ಥಾನದಲ್ಲಿ (ದ್ರವ್ಯಾರ್ಥಿಕನಯದ ವಿಷಯಭೂತ; ಶುದ್ಧಾತ್ಮ ಸ್ವರೂಪದ ಆಂಶಿಕ ಅವಲಂಬನೆಯೊಡನೆ) ವರ್ತಿಸುತ್ತ ತತ್ತಾ ರ್ಥಶ್ರದ್ಧೆ (ನವಪದಾರ್ಥಗತಶ್ರದ್ಧೆ) ತತ್ತಾ ರ್ಥಜ್ಞಾನ (ನವಪದಾರ್ಥಗತಜ್ಞಾನ ಮತ್ತು ಪಂಚಮಹಾವ್ರತಾದಿರೂಪ ಚಾರಿತ್ರ-ಇವೆಲ್ಲವು ಸ್ವಪರಹೇತುಕ ಪರ್ಯಾಯಗಳಿವೆ. ಅವು ಇಲ್ಲಿ ವ್ಯವಹಾರನಯದ ವಿಷಯಭೂತವಿವೆ.

೫. ಯಾವ ನಯದಲ್ಲಿ ಸಾಧ್ಯ ಹಾಗೂ ಸಾಧನಗಳು ಭಿನ್ನವಿವೆ (ಭಿನ್ನ ಪ್ರರೂಪಣೆ ಮಾಡಲಾಗುವುದು) ಅದು ಇಲ್ಲಿ ವ್ಯವಹಾರನಯವಿದೆ ; ಹೇಗೆಂದರೆ ಆರನೆಯ ಗುಣಸ್ಥಾನದಲ್ಲಿ (ದ್ರವ್ಯಾರ್ಥಿಕನಯದ ವಿಷಯಭೂತ ಶುದ್ಧಾತ್ಮಸ್ವರೂಪದ ಆಂಶಿಕ ಅವಲಂಬನೆಯೊಡನೆ) ವರ್ತಿಸುತ್ತ ತತ್ತಾ ರ್ಥ ಶ್ರದ್ಧೆ (ನವಪದಾರ್ಥಸಂಬಂಧದ ಶ್ರದ್ಧೆ), ತತ್ತಾ ರ್ಥಜ್ಞಾನ ಮತ್ತು ಪಂಚಮಹಾವ್ರತಾದಿರೂಪ ಚಾರಿತ್ರವು ವ್ಯವಹಾರನಯದಿಂದ ಮೋಕ್ಷಮಾರ್ಗವಿದೆ ಏಕೆಂದರೆ (ಮೋಕ್ಷರೂಪ) ಸಾಧ್ಯವು ಸ್ವಹೇತುಕ ಪರ್ಯಾಯವಿದೆ ಮತ್ತು (ತತ್ತಾ ರ್ಥಶ್ರದ್ಧಾನಾದಿಮಯ ಮೋಕ್ಷಮಾರ್ಗರೂಪ) ಸಾಧನವು ಸ್ವಪರಹೇತುಕ ಪರ್ಯಾಯವಿದೆ.

ಧಮ್ಮಾದೀಸದ್ದಹಣಂ ಸಮ್ಮತ್ತಂ ಣಾಣಮಂಗಪುವ್ವಗದಂ ।
ಚೇಟ್ಠಾ ತವಮ್ಹಿ ಚರಿಯಾ ವವಹಾರೋ ಮೋಕ್ಖಮಗ್ಗೋ ತ್ತಿ ॥೧೬೦॥

ಭಾವವುಳ್ಳ ವ್ಯವಹಾರನಯದ ಆಶ್ರಯದಿಂದ (ವ್ಯವಹಾರನಯದ ಅಪೇಕ್ಷೆಯಿಂದ) ಪ್ರರೂಪಣೆ ಮಾಡಲಾಗಿತ್ತು. ಇದರಲ್ಲಿ ಪರಸ್ಪರ ವಿರೋಧವು ಬರುತ್ತದೆಂದೂ ಇಲ್ಲ, ಏಕೆಂದರೆ ಸುವರ್ಣ ಮತ್ತು ಸುವರ್ಣಪಾಷಾಣದ [೧] ಹಾಗೆ ನಿಶ್ಚಯ-ವ್ಯವಹಾರದಲ್ಲಿ ಸಾಧ್ಯ-ಸಾಧನತನವಿದೆ ; ಆದುದರಿಂದ ಪಾರಮೇಶ್ವರಿ (-ಜಿನಭಗವಂತರ) ತೀರ್ಥ ಪ್ರವರ್ತನೆಯು [೨] ಎರಡೂ [೩] ನಯಗಳ ಆಧೀನವಿದೆ.

ಗಾಥೆ - ೧೬೦

ಗಾಥಾರ್ಥ ಃ- [ಧಮ್ಮಾದೀಸದ್ದಹಣಂ ಸಮ್ಮತ್ತಂ] ಧರ್ಮಾಸ್ತಿಕಾಯ ಮೊದಲಾದವುಗಳ ಶ್ರದ್ಧೆಯು ಅದು ಸಮ್ಯಕ್ತ್ವವಿದೆ, [ಅಂಗಪುವ್ವಗದಂ ಣಾಣಂ] ಅಂಗಪೂರ್ವಸಂಬಂಧದ ಜ್ಞಾನವು ಅದು ಜ್ಞಾನವಿದೆ ಮತ್ತು [ತವಮ್ಹಿ ಚೇಟ್ಠಾ ಚರಿಯಾ] ತಪಸ್ಸಿನಲ್ಲಿ ಚೇಷ್ಟೆ (ಪ್ರವೃತ್ತಿ)ಯು ಅದು ಚಾರಿತ್ರವಿದೆ ; [ತ್ತಿ] - ಈ ಪ್ರಕಾರ [ವವಹಾರೋ ಮೋಕ್ಖಮಗ್ಗೋ] ವ್ಯವಹಾರ ಮೋಕ್ಷಮಾರ್ಗವಿದೆ.

ಧರ್ಮಾದಿಗಳ ಶ್ರದ್ಧೆಸಮ್ಯಕ್ತ್ವ ಅಂಗಪೂರ್ವಸಂಬಂಧಜ್ಞಾನವದು ಜ್ಞಾನವಿದ್ದು ।
ಕೂರ್ಮೆಯಿಂ ತಪಪ್ರವೃತ್ತಿ ಚಾರಿತ್ರವಿದೆ, ಹೀಗೆ ವ್ಯವಹಾರ ಮೋಕ್ಷಮಾರ್ಗವಿದೆ ॥೧೬೦॥

---

೧. ಯಾವ ಪಾಷಾಣದಲ್ಲಿ ಸುವರ್ಣವಿದೆ ಅದಕ್ಕೆ ಸುವರ್ಣ ಪಾಷಾಣವೆಂದು ಹೇಳಲಾಗುತ್ತದೆ. ಯಾವ ಪ್ರಕಾರ ವ್ಯವಹಾರನಯದಿಂದ ಸುವರ್ಣ ಪಾಷಾಣವು ಸುವರ್ಣದ ಸಾಧನವಿದೆ ; ಅದೇ ಪ್ರಕಾರ ವ್ಯವಹಾರನಯದಿಂದ ವ್ಯವಹಾರ ಮೋಕ್ಷ ಮಾರ್ಗವು ನಿಶ್ಚಯ ಮೋಕ್ಷಮಾರ್ಗದ ಸಾಧನವಿದೆ ; ಎಂದರೆ ವ್ಯವಹಾರನಯದಿಂದ ಭಾವಲಿಂಗಿ ಮುನಿಗೆ ಸವಿಕಲ್ಪಾವಸ್ಥೆಯಲ್ಲಿ ವರ್ತಿಸುತ್ತಿರುವ ತತ್ತಾ ರ್ಥಶ್ರದ್ಧೆ, ತತ್ತಾ ರ್ಥಜ್ಞಾನ ಮತ್ತು ಮಹಾವ್ರತಾದಿರೂಪ ಚಾರಿತ್ರಗಳು ನಿರ್ವಿಕಲ್ಪಾವಸ್ಥೆಯಲ್ಲಿ ವರ್ತಿಸುತ್ತಿರುವ ಶುದ್ಧಾತ್ಮಶ್ರದ್ಧೆಯು ಜ್ಞಾನಾನುಷ್ಠಾನದ ಸಾಧನವಾಗಿವೆ.

೨. ತೀರ್ಥ = ಮಾರ್ಗ (ಎಂದರೆ ಮೋಕ್ಷಮಾರ್ಗ) ; ಉಪಾಯ (ಎಂದರೆ ಮೋಕ್ಷದ ಉಪಾಯ) ; ಉಪದೇಶ ; ಶಾಸನ.

೩. ಜಿನಭಗವಂತರ ಉಪದೇಶದಲ್ಲಿ ಎರಡು ನಯಗಳಿಂದ ನಿರೂಪಣೆಯಾಗುತ್ತದೆ. ಅಲ್ಲಿ ನಿಶ್ಚಯನಯದಿಂದಂತೂ ಸತ್ಯಾರ್ಥನಿರೂಪಣೆ ಮಾಡಲಾಗುತ್ತದೆ ಮತ್ತು ವ್ಯವಹಾರನಯದಿಂದ ಅಭೂತಾರ್ಥ ಉಪಚರಿತ ನಿರೂಪಣೆ ಮಾಡಲಾಗುತ್ತದೆ.

ಪ್ರಶ್ನೆ ಃ- ಸತ್ಯಾರ್ಥ ನಿರೂಪಣೆಯನ್ನೇ ಮಾಡಬೇಕು ; ಅಭೂತಾರ್ಥ ಉಪಚರಿತ ನಿರೂಪಣೆಯನ್ನು ಏತಕ್ಕಾಗಿ ಮಾಡಲಾಗುತ್ತದೆ?

ಉತ್ತರ ಃ- ಯಾವನಿಗೆ ಸಿಂಹದ ಯಥಾರ್ಥವಾದ ಸ್ವರೂಪವು ನೇರವಾಗಿ ತಿಳಿವಲಿಕೆಯಲ್ಲಿ ಬಾರದಿದ್ದರೆ ಅವನಿಗೆ ಸಿಂಹದ ಸ್ವರೂಪದ ಉಪಚರಿತ ನಿರೂಪಣೆಯಲ್ಲಿ ಎಂದರೆ ಬೆಕ್ಕಿನ ಸ್ವರೂಪದ ನಿರೂಪಣೆಯಿಂದ ಸಿಂಹದ ಯಥಾರ್ಥಸ್ವರೂಪದ ತಿಳಿವಿನತ್ತ ಕೊಂಡೊಯ್ಯುತ್ತಾರೆ ; ಅದೇ ಪ್ರಕಾರ ಯಾವನಿಗೆ ವಸ್ತುವಿನ ಯಥಾರ್ಥಸ್ವರೂಪವು ನೇರವಾಗಿ ಅರಿವಿನಲ್ಲಿ ಬಾರದಿದ್ದರೆ ಅವನಿಗೆ ವಸ್ತುಸ್ವರೂಪದ ಉಪಚರಿತ ನಿರೂಪಣೆಯಿಂದ ವಸ್ತುಸ್ವರೂಪದ ಯಥಾರ್ಥ ಅರಿವಿನತ್ತ ಕೊಂಡೊಯ್ಯುತ್ತಾರೆ ಮತ್ತು ದೀರ್ಘಕಥನಕ್ಕೆ ಪ್ರತಿಯಾಗಿ ಸಂಕ್ಷಿಪ್ತ ಕಥನ ಮಾಡುವಲ್ಲಿಯೂ ವ್ಯವಹಾರನಯದಿಂದ ಉಪಚರಿತ ನಿರೂಪಣೆ ಮಾಡಲಾಗುತ್ತದೆ. ಯಾವ ಪುರುಷನು ಬೆಕ್ಕಿನ ನಿರೂಪಣೆಗೇ ಸಿಂಹದ ನಿರೂಪಣೆಯೆಂದು ಮನ್ನಿಸಿ ಬೆಕ್ಕನ್ನೇ ಸಿಂಹವೆಂದು ತಿಳಿದುಕೊಳ್ಳುವವನಂತೂ ಉಪದೇಶಕ್ಕೆ ಯೋಗ್ಯನಿಲ್ಲ ಅದೇ ಪ್ರಕಾರ ಯಾವ ಪುರುಷನು ಉಪಚರಿತ ನಿರೂಪಣೆಯನ್ನೇ ಸತ್ಯಾರ್ಥ ನಿರೂಪಣೆಯೆಂದಲ್ಲಿ ಮನ್ನಿಸಿ ವಸ್ತು ಸ್ವರೂಪವನ್ನು ಮಿಥ್ಯಾ ರೀತಿಯಿಂದ ತಿಳಿದುಕೊಂಡು ಕೂಡ್ರುವವನಂತೂ ಉಪದೇಶಕ್ಕೇನೇ ಯೋಗ್ಯನಿಲ್ಲವೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲು ಯೋಗ್ಯವಾಗಿದೆ.

ಧರ್ಮಾದಿಶ್ರದ್ಧಾನಂ ಸಮ್ಯಕ್ ತ್ವಂ ಜ್ಞಾನಮಂಗಪೂರ್ವಗತಮ್ ।
ಚೇಷ್ಟಾ ತಪಸಿ ಚರ್ಯಾ ವ್ಯವಹಾರೋ ಮೋಕ್ಷಮಾರ್ಗ ಇತಿ ॥೧೬೦॥

ನಿಶ್ಚಯಮೋಕ್ಷಮಾರ್ಗಸಾಧನಭಾವೇನ ಪೂರ್ವೋದ್ದಿಷ್ಟವ್ಯವಹಾರಮೋಕ್ಷಮಾರ್ಗನಿರ್ದೇಶೋಽಯಮ್।

ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ । ತತ್ರ ಧರ್ಮಾದೀನಾಂ ದ್ರವ್ಯಪದಾರ್ಥವಿಕಲ್ಪವತಾಂ ತತ್ತ್ವಾರ್ಥ ಶ್ರದ್ಧಾನಭಾವಸ್ವಭಾವಂಭಾವಾಂತರಂ ಶ್ರದ್ಧಾನಾಖ್ಯಂ ಸಮ್ಯಕ್ ತ್ವಂ ತತ್ತ್ವಾರ್ಥಶ್ರದ್ಧಾನನಿರ್ವೃತೌಸತ್ಯಾ-ಮಂಗಪೂರ್ವಗತಾರ್ಥಪರಿಚ್ಛಿತ್ತಿಜ್ಞಾನಮ್, ಆಚಾರಾದಿಸೂತ್ರಪ್ರಪಂಚಿತವಿಚಿತ್ರಯತಿವೃತಸಮಸ್ತಸಮುದಯ-ರೂಪೇ ತಪಸಿ ಚೇಷ್ಟಾ ಚರ್ಯಾ - ಇತ್ಯೇಷಃ ಸ್ವಪರಪ್ರತ್ಯಯಪರ್ಯಾಯಾಶ್ರಿತಂ ಭಿನ್ನಸಾಧ್ಯಸಾಧನಭಾವಂ ವ್ಯವಹಾರನಯಮಾಶ್ರಿತ್ಯಾನುಗಮ್ಯಮಾನೋ ಮೋಕ್ಷಮಾರ್ಗಃ ಕಾರ್ತಸ್ವರಪಾಷಾಣಾರ್ಪಿತದೀಪ್ತಜಾತವೇ - ದೋವತ್ಸಮಾಹಿತಾಂತರಂಗಸ್ಯ ಪ್ರತಿಪದಮುಪರಿತನಶುದ್ಧಭೂಮಿಕಾಸು ಪರಮರಮ್ಯಾಸು ವಿಶ್ರಾಂತಿಮಭಿನ್ನಾಂ

ಟೀಕೆ :- ನಿಶ್ಚಯಮೋಕ್ಷಮಾರ್ಗದ ಸಾಧನರೂಪದಿಂದ, ಮೊದಲು ಹೇಳಿದ (೧೦೭ನೆಯ ಗಾಥೆಯಲ್ಲಿ ಉಲ್ಲೇಖಿಸಿದ) ವ್ಯವಹಾರಮೋಕ್ಷಮಾರ್ಗದ ನಿರ್ದೇಶವು ಇದಾಗಿದೆ.

ಸಮ್ಯಗ್ದರ್ಶನ - ಜ್ಞಾನ - ಚಾರಿತ್ರವು ಅದು ಮೋಕ್ಷಮಾರ್ಗವಿದೆ. ಅಲ್ಲಿ (ಆರು) ದ್ರವ್ಯರೂಪ ಮತ್ತು (ಒಂಬತ್ತು) ಪದಾರ್ಥರೂಪಗಳು ಯಾವವುಗಳ ಭೇದಗಳಿವೆ ಅಂಥ ಧರ್ಮಾದಿಗಳ ತತ್ತ್ವಾರ್ಥಶ್ರದ್ಧಾನರೂಪ ಭಾವವು (ಧರ್ಮಾಸ್ತಿಕಾಯ ಮೊದಲಾದ ತತ್ತ್ವಾರ್ಥಪ್ರತೀತಿರೂಪಭಾವವು) ಯಾವುದರ ಸ್ವಭಾವವಿದೆ ಅಂಥ 'ಶ್ರದ್ಧೆ'ಯೆಂಬ ಹೆಸರಿನ ಭಾವವಿಶೇಷವು ಅದು ಸಮ್ಯಕ್ ತ್ವವಿದೆ, ತತ್ತ್ವಾರ್ಥಶ್ರದ್ಧಾನದ ಸದ್ಭಾವದಲ್ಲಿ ಅಂಗ ಪೂರ್ವಗತ ಪದಾರ್ಥಗಳ ಅವಬೋಧನೆಯು (ಜ್ಞಾನಮಾಡಿಕೊಳ್ಳುವಿಕೆಯು) ಅದು ಜ್ಞಾನವಿದೆ ; ಆಚಾರಾದಿ ಸೂತ್ರಗಳ ಮುಖಾಂತರ ಹೇಳಲಾದ ಅನೇಕವಿಧದ ಮುನಿ-ಆಚಾರಗಳ ಸಂಪೂರ್ಣ ಸಮುದಾಯರೂಪ ತಪಸ್ಸಿನಲ್ಲಿ ಚೇಷ್ಟೆಯು (ಪ್ರವೃತ್ತಿಯು) ಅದು ಚಾರಿತ್ರವಿದೆ ; - ಹೀಗೆ ಇದು ಸ್ವಪರಹೇತುಕ ಪರ್ಯಾಯದ ಆಶ್ರಿತವು, ಭಿನ್ನ ಸಾಧ್ಯಸಾಧನಭಾವವುಳ್ಳ ವ್ಯವಹಾರನಯದ ಆಶ್ರಯದಿಂದ (ವ್ಯವಹಾರನಯದ ಅಪೇಕ್ಷೆಯಿಂದ) ಅನುಸರಣೆ ಮಾಡಲಾಗುವಂಥ ಮೋಕ್ಷಮಾರ್ಗವು, ಸುವರ್ಣಪಾಷಾಣಕ್ಕೆ ತಗಲಿಸಲಾಗುವಂಥ ಪ್ರದೀಪ್ತ ಅಗ್ನಿಯ ಹಾಗೆ,

---

[ಇಲ್ಲಿ ಒಂದು ಉದಾಹರಣೆಯನ್ನು ಸ್ವೀಕರಿಸಲಾಗುತ್ತಿದೆ-

ಸಾಧ್ಯ-ಸಾಧನ ಸಂಬಂಧದ ಸತ್ಯಾರ್ಥ ನಿರೂಪಣೆಯು ಹೇಗಿದೆಯೆಂದರೆ - 'ಆರನೆಯ ಗುಣಸ್ಥಾನದಲ್ಲಿ ವರ್ತಿಸುತ್ತಿರುವ ಆಂಶಿಕ ಶುದ್ಧಿಯು ಏಳನೆಯ ಗುಣಸ್ಥಾನಯೋಗ್ಯ ನಿರ್ವಿಕಲ್ಪಶುದ್ಧಪರಿಣತಿಯ ಸಾಧನವಿದೆ' ಈಗ 'ಆರನೆಯಗುಣಸ್ಥಾನದಲ್ಲಿ ಎಂಥ ಅಥವಾ ಎಷ್ಟು ಶುದ್ಧಿಯಿರುತ್ತದೆ' - ಎಂಬ ಮಾತನ್ನೂ ಜೊತೆ-ಜೊತೆಯಲ್ಲೇ ತಿಳಿದುಕೊಳ್ಳುವದಿದ್ದರೆ ವಿಸ್ತಾರದಿಂದ ಹೀಗೆ ನಿರೂಪಣೆ ಮಾಡಲಾಗುತ್ತದೆ - 'ಯಾವ ಶುದ್ಧಿಯ ಸದ್ಭಾವದಲ್ಲಿ, ಅದರ ಜೊತೆ-ಜೊತೆ ಮಹಾವ್ರತಾದಿಗಳ ಶುಭವಿಕಲ್ಪವು ದುರಾಗ್ರಹವಿಲ್ಲದೆ ಸಹಜರೂಪದಿಂದ ಪ್ರವರ್ತಮಾನವಿದ್ದರೆ ಅದು ಆರನೆಯ ಗುಣಸ್ಥಾನಯೋಗ್ಯ ಶುದ್ಧಿಯು ಏಳನೆಯಗುಣಸ್ಥಾನಯೋಗ್ಯ ನಿರ್ವಿಕಲ್ಪಶುದ್ಧಪರಿಣತಿಯ ಸಾಧನವಿದೆ'. ಇಂಥ ದೀರ್ಘಕಥನಕ್ಕೆ ಪ್ರತಿಯಾಗಿ ಹೀಗೆ ಹೇಳಬಹುದು - 'ಆರನೆಯಗುಣಸ್ಥಾನದಲ್ಲಿ ಪ್ರವರ್ತಮಾನವಾದ ಮಹಾವ್ರತಾದಿಗಳ ಶುಭ ವಿಕಲ್ಪವು ಏಳನೆಯ ಗುಣಸ್ಥಾನ ಯೋಗ್ಯ ನಿರ್ವಿಕಲ್ಪ ಶುದ್ಧ ಪರಿಣತಿಯ ಸಾಧನವಿದೆ'ಯೆಂದರೆ ಅದು ಉಪಚರಿತ ನಿರೂಪಣೆಯಿದೆ. ಇಂಥ ಉಪಚರಿತ ನಿರೂಪಣೆಯೊಳಗಿಂದ 'ಮಹಾವ್ರತಾದಿಗಳ ಶುಭವಿಕಲ್ಪವಲ್ಲ, ಆದರೆ ಅವುಗಳಿಂದ ಯಾವ ಆರನೆಯ ಗುಣಸ್ಥಾನಯೋಗ್ಯ ಶುದ್ಧಿಯನ್ನು ತಿಳಿಸಿಕೊಡುವುದಿತ್ತು ಆ ಶುದ್ಧಿಯು ವಾಸ್ತವಿಕವಾಗಿ ಏಳನೆಯ ಗುಣಸ್ಥಾನಯೋಗ್ಯ ನಿರ್ವಿಕಲ್ಪ ಶುದ್ಧ ಪರಿಣತಿಯ ಸಾಧನವಿದೆ'ಯೆಂಬ ಅರ್ಥವನ್ನು ತೆಗೆಯಬೇಕಾಗುವುದು.]

ನಿಷ್ಪಾದಯನ್, ಜಾತ್ಯಕಾರ್ತಸ್ವರಸ್ಯೇವ ಶುದ್ಧಜೀವಸ್ಯ ಕಥಂಚಿದ್ಭಿನ್ನಸಾಧ್ಯಸಾಧನಭಾವಾಭಾವಾತ್ಸ್ವಯಂ ಶುದ್ಧಸ್ವಭಾವೇನ ವಿಪರಿಣಮಮಾನಸ್ಯಾಪಿ, ನಿಶ್ಚಯಮೋಕ್ಷಮಾರ್ಗಸ್ಯ ಸಾಧನಭಾವಮಾಪದ್ಯತ ಇತಿ ।

ಣಿಚ್ಚಯಣಏಣ ಭಣಿದೋ ತಿಹಿ ತೇಹಿಂ ಸಮಾಹಿದೋ ಹು ಜೋ ಅಪ್ಪಾ ।
ಣ ಕುಣದಿ ಕಿಂಚಿ ವಿ ಅಣ್ಣಂ ಣ ಮುಯದಿ ಸೋ ಮೋಕ್ಖಮಗ್ಗೋತ್ತಿ ॥೧೬೧॥

ಸಮಾಹಿತ[೧] ಅಂತರಂಗವುಳ್ಳ ಜೀವಕ್ಕೆ (ಎಂದರೆ ಯಾರ ಅಂತರಂಗವು ಏಕಾಗ್ರ-ಸಮಾಧಿ ಪ್ರಾಪ್ತವಿದೆ ಅಂಥ ಜೀವಕ್ಕೆ (ಮೆಟ್ಟಿಲು - ಮೆಟ್ಟಿಲು ಮೇಲೆ ಅತ್ಯಂತ ರಮ್ಯವಾದಂಥ ಮೇಲಿನ ಶುದ್ಧ ಭೂಮಿಕೆಗಳಲ್ಲಿ ಅಭಿನ್ನ ವಿಶ್ರಾಂತಿ (ಅಭೇದರೂಪಸ್ಥಿರತೆ)ಯನ್ನುಂಟು ಮಾಡುತ್ತ - ಉತ್ತಮ ಸುವರ್ಣದಂತೆ ಶುದ್ಧ ಜೀವವು ಕಥಂಚಿತ್ ಭಿನ್ನಸಾಧ್ಯಸಾಧನಭಾವದ ಅಭಾವದ ಮೂಲಕ ಸ್ವಯಂ (ತನ್ನಿಂದ ತಾನು) ಶುದ್ಧ ಸ್ವಭಾವದಿಂದ ಪರಿಣಮಿತವಾಗುತ್ತಿದ್ದರೂ - ನಿಶ್ಚಯಮೋಕ್ಷಮಾರ್ಗದ ಸಾಧನತನಕ್ಕೆ ಪ್ರಾಪ್ತನಾಗುತ್ತಾನೆ.

ಭಾವಾರ್ಥ ಃ- ಯಾವನಿಗೆ ಅಂತರಂಗದಲ್ಲಿ ಶುದ್ಧಿಯ ಅಂಶವು ಪರಿಣಮಿಸುತ್ತಿದೆ ಆ ಜೀವನಿಗೆ ತತ್ತ್ವಾರ್ಥಶ್ರದ್ಧೆ, ಅಂಗಪೂರ್ವಗತಜ್ಞಾನ ಮತ್ತು ಮುನಿ-ಆಚರಣದಲ್ಲಿ ಪ್ರವರ್ತಮಾನರೂಪ ವ್ಯವಹಾರ-ಮೋಕ್ಷಮಾರ್ಗವು ಹೆಚ್ಚು-ಹೆಚ್ಚು ಶುದ್ಧಿಯ ವ್ಯವಹಾರಸಾಧನವಾಗುತ್ತ, ನಿರ್ವಿಕಲ್ಪಶುದ್ಧಭಾವಪರಿಣತನಾದ ಜೀವನಿಗೆ ಪರಮಾರ್ಥದಿಂದಂತೂ ಉತ್ತಮ ಸುವರ್ಣದಂತೆ ಅಭಿನ್ನಸಾಧ್ಯಸಾಧನಭಾವದ ಮೂಲಕ ತಾನಾಗಿಯೇ ಶುದ್ಧಭಾವರೂಪವಾಗಿ ಪರಿಣಮನವಾಗುತ್ತಿದ್ದರೂ ವ್ಯವಹಾರನಯದಿಂದ ನಿಶ್ಚಯಮೋಕ್ಷಮಾರ್ಗದ ಸಾಧನತನಕ್ಕೆ ಪ್ರಾಪ್ತನಾಗುತ್ತಾನೆ.

[ಅಜ್ಞಾನಿ ದ್ರವ್ಯಲಿಂಗಿಮುನಿಯ ಅಂತರಂಗವು ತಿಲಮಾತ್ರವೂ ಸಮಾಹಿತವಿಲ್ಲದಿರುವುದರಿಂದ ಎಂದರೆ ಅವನಿಗೆ (ದ್ರವ್ಯಾರ್ಥಿಕನಯದ ವಿಷಯಭೂತವಾದ ಶುದ್ಧಾತ್ಮಸ್ವರೂಪದ ಅಜ್ಞಾನದ ಕಾರಣ) ಶುದ್ಧಿಯ ಅಂಶವೂ ಪರಿಣಮಿಸದಿರುವುದರಿಂದ ಅವನಿಗೆ ವ್ಯವಹಾರ ಮೋಕ್ಷಮಾರ್ಗವೂ ಇಲ್ಲ.]

ಯಾವಾತ್ಮನು ನಿಜದಿ ದರ್ಶನಜ್ಞಾನಚಾರಿತ್ರಗಳಿಂದ ಸಮಾಹಿತನಾಗುತ್ತ ।
ಅವನನ್ಯವೇನನು ಮಾಡನಿಲ್ಲವೆ ಬಿಡನದು ನಿಶ್ಚಯ ಮೋಕ್ಷಮಾರ್ಗವಿದೆ ॥೧೬೧॥

---

೧. ಸಮಾಹಿತ ಏಕಾಗ್ರ ; ಏಕತೆಗೆ ಪ್ರಾಪ್ತ ; ಅಭೇದತೆಗೆ ಪ್ರಾಪ್ತ ; ಭಿನ್ನಭಿನ್ನತೆಯಿಲ್ಲದ ; ಸಮಾಧಿ ಪ್ರಾಪ್ತ ; ಶುದ್ಧ ; ಪ್ರಶಾಂತ.

೨. ಈ ಗಾಥೆಯ ಶ್ರೀ ಜಯಸೇನಾಚಾರ್ಯಕೃತ ಟೀಕೆಯಲ್ಲಿ ಐದನೆಯ ಗುಣಸ್ಥಾನಾವರ್ತಿಯಾದ ಗೃಹಸ್ಥನಿಗೂ ವ್ಯವಹಾರ-ಮೋಕ್ಷಮಾರ್ಗವನ್ನು ಹೇಳಿದೆ. ಅಲ್ಲಿ ವ್ಯವಹಾರ ಮೋಕ್ಷಮಾರ್ಗದ ಸ್ವರೂಪದ ವರ್ಣನೆಯನ್ನು ಹೀಗೆ ಮಾಡಲಾಗಿದೆ - 'ವೀತರಾಗಸರ್ವಜ್ಞ ಪ್ರಣೀತ ಜೀವಾದಿಪದಾರ್ಥಗಳ ಸಂಬಂಧದ ಸಮ್ಯಕ್ ಶ್ರದ್ಧೆ ಹಾಗೂ ಜ್ಞಾನ ಇವೆರಡು, ಗೃಹಸ್ಥರಿಗೆ ಮತ್ತು ತಪೋಧನರಿಗೆ ಸಮಾನವಿರುತ್ತವೆ; ಚಾರಿತ್ರವು ತಪೋಧನರಿಗೆ ಆಚಾರಾದಿ ಚರಣಗ್ರಂಥಗಳಲ್ಲಿ ವಿಹಿತ ಮಾಡಲಾದ ಮಾರ್ಗಕ್ಕನುಸರಿಸಿ ಪ್ರಮತ್ತ - ಅಪ್ರಮತ್ತ ಗುಣಸ್ಥಾನಯೋಗ್ಯ ಪಂಚಮಹಾವ್ರತ-ಪಂಚಸಮಿತಿ-ತ್ರಿಗುಪ್ತಿ-ಷಡಾವಶ್ಯಕಾದಿರೂಪವಾಗಿರುತ್ತದೆ ಮತ್ತು ಗೃಹಸ್ಥರಿಗೆ ಉಪಾಸಕಾಧ್ಯಯನ ಗ್ರಂಥದಲಿ ವಿಹಿತ ಮಾಡಲಾದ ಮಾರ್ಗಕ್ಕನುಸರಿಸಿ ಪಂಚಮಗುಣಸ್ಥಾನ ಯೋಗ್ಯ ದಾನ-ಶೀಲ-ಪೂಜೆ-ಉಪವಾಸಾದಿರೂಪ ಅಥವಾ ದಾರ್ಶನಿಕ-ವ್ರತಿಕಾದಿ ಹನ್ನೊಂದು ಸ್ಥಾನರೂಪ (ಹನ್ನೊಂದು ಪ್ರತಿಮಾರೂಪ)ವಾಗಿರುತ್ತದೆ; ಈ ಪ್ರಕಾರವಾಗಿ ವ್ಯವಹಾರ ಮೋಕ್ಷಮಾರ್ಗದ ಲಕ್ಷಣವಿದೆ'-

ನಿಶ್ಚಯನಯೇನ ಭಣಿತಸ್ತ್ರಿಭಿಸ್ತೈಃ ಸಮಾಹಿತಃ ಖಲು ಯಃ ಆತ್ಮಾ ।
ನ ಕರೋತಿ ಕಿಂಚಿದಪ್ಯನ್ಯನ್ನ ಮುಂಚತಿ ಸ ಮೋಕ್ಷಮಾರ್ಗ ಇತಿ ॥೧೬೧॥

ವ್ಯವಹಾರಮೋಕ್ಷಮಾರ್ಗಸಾಧ್ಯಭಾವೇನ ನಿಶ್ಚಯಮೋಕ್ಷಮಾರ್ಗೋಪನ್ಯಾಸೋಽಯಮ್ ।

ಸಮ್ಯಗ್ದರ್ಶನಜ್ಞಾನಚಾರಿತ್ರಸಮಾಹಿತ ಆತ್ಮೈವ ಜೀವಸ್ವಭಾವನಿಯತಚಾರಿತ್ರತ್ವಾನ್ನಿಶ್ಚಯೇನಮೋಕ್ಷ -ಮಾರ್ಗಃ । ಅಥ ಖಲು ಕಥಂಚನಾನಾದ್ಯವಿದ್ಯಾವ್ಯಪಗಮಾದ್ವ್ಯವಹಾರಮೋಕ್ಷಮಾರ್ಗಮನುಪ್ರಪನ್ನೋ ಧರ್ಮಾದಿತತ್ತ್ವಾರ್ಥಶ್ರದ್ಧಾನಾಂಗಪೂರ್ವಗತಾರ್ಥಜ್ಞಾನತಪಶ್ಚೇಷ್ಟಾನಾಂ ಧರ್ಮಾದಿತತ್ತ್ವಾರ್ಥಶ್ರದ್ಧಾನಾಂಗ-ಪೂರ್ವಗತಾರ್ಥಜ್ಞಾನತಪಶ್ಚೇಷ್ಟಾನಾಂ ಚ ತ್ಯಾಗೋಪಾದಾನಾಯ ಪ್ರಾರಬ್ಧವಿವಿಕ್ತಭಾವವ್ಯಾಪಾರಃ ಕುತಶ್ಚಿದು-ಪಾದೇಯತ್ಯಾಗೇ ತ್ಯಾಜ್ಯೋಪಾದಾನೇ ಚ ಪುನಃ ಪ್ರವರ್ತಿತಪ್ರತಿವಿಧಾನಾಭಿಪ್ರಾಯೋ, ಯಸ್ಮಿನ್ಯಾವತಿ ಕಾಲೇ

ಗಾಥೆ - ೧೬೧

ಗಾಥಾರ್ಥ ಃ- [ಜೋ ಅಪ್ಪಾ] ಯಾವ ಆತ್ಮನು [ತೇಹಿಂ ತಿಹಿ ಹು ಸಮಾಹಿದೋ] ಇವು ಮೂರರಿಂದ ವಾಸ್ತವಿಕವಾಗಿ ಸಮಾಹಿತನಾಗುತ್ತ (ಎಂದರೆ ಸಮ್ಯಗ್ದರ್ಶನಜ್ಞಾನಚಾರಿತ್ರದಿಂದ ವಾಸ್ತವಿಕವಾಗಿ ಏಕಾಗ್ರಅಭೇದನಾಗುತ್ತ) [ಅಣ್ಣಂ ಕಿಂಚಿ ವಿ] ಬೇರೆ ಏನನ್ನೂ [ಣ ಕುಣದಿ ಣ ಮುಯದಿ] ಮಾಡುವುದಿಲ್ಲ ಅಥವಾ ಬಿಟ್ಟುಕೊಡುವುದಿಲ್ಲ, [ಸೋ] ಅವನು [ಣಿಚ್ಛಯಣಏಣ] ನಿಶ್ಚಯನಯದಿಂದ [ಮೋಕ್ಖಮಗ್ಗೋ ತ್ತಿ ಭಣಿದೋ] 'ಮೋಕ್ಷಮಾರ್ಗ'ನೆಂದು ಹೇಳಲಾಗಿದೆ.

ಟೀಕೆ ಃ- ಇದು ವ್ಯವಹಾರಮೋಕ್ಷಮಾರ್ಗದ ಸಾಧ್ಯರೂಪದಿಂದ ನಿಶ್ಚಯಮೋಕ್ಷಮಾರ್ಗದ ಕಥನವಿದೆ.

ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳಿಂದ ಸಮಾಹಿತ[೧] ನಾದ ಆತ್ಮನೇ ಜೀವಸ್ವಭಾವದಲ್ಲಿ ನಿಯತ ಚಾರಿತ್ರರೂಪವಿರುವ ಕಾರಣ ನಿಶ್ಚಯದಿಂದ ಮೋಕ್ಷಮಾರ್ಗವಿದ್ದಾನೆ.

ಈಗ (ಸ್ಪಷ್ಟೀಕರಣವು ಹೀಗಿದೆ--)ಈ ಆತ್ಮನು ವಾಸ್ತವಿಕವಾಗಿ ಕಥಂಚಿತ್ (ಯಾವುದೇ ಪ್ರಕಾರ, ನಿಜ ಉದ್ಯಮದಿಂದ) ಅನಾದಿ ಅವಿದ್ಯೆಯ ನಾಶದಿಂದ ವ್ಯವಹಾರಮೋಕ್ಷಮಾರ್ಗವನ್ನು ಪ್ರಾಪ್ತಮಾಡಿಕೊಳ್ಳುತ್ತ, ಧರ್ಮಾದಿಗಳ ಸಂಬಂಧದ ತತ್ತ್ವಾರ್ಥದ ಅಶ್ರದ್ಧೆಯ, ಅಂಗಪೂರ್ವಗತ ಪದಾರ್ಥಗಳ ಸಂಬಂಧದ ಅಜ್ಞಾನದ ಮತ್ತು ಅತಪಸ್ಸಿನಲ್ಲಿ ಪ್ರವೃತ್ತಿಯ ತ್ಯಾಗ ಹೇತುವಿನಿಂದ ಹಾಗೂ ಧರ್ಮಾದಿಗಳ ಸಂಬಂಧದ ತತ್ತ್ವಾರ್ಥ ಶ್ರದ್ಧೆಯ, ಅಂಗಪೂರ್ವಗತ ಪದಾರ್ಥಗಳ ಸಂಬಂಧದ ಜ್ಞಾನದ ಮತ್ತು ತಪಸ್ಸಿನಲ್ಲಿ ಪ್ರವೃತ್ತಿಯ ಗ್ರಹಣ ಹೇತುವಿನಿಂದ (ಮೂರರ ತ್ಯಾಗ ಹೇತು ಹಾಗೂ ಮೂರು ಗ್ರಹಣ ಹೇತುವಿನಿಂದ) ನಿಮಿತ್ತ[೨] ಭಾವರೂಪವಾಗಿ

---

೧. ಸಮಾಹಿತ - ಏಳನೆಯ ಗುಣಸ್ಥಾನವುಳ್ಳವನು.

೨. ವಿವಿಕ್ತ - ವಿವೇಕದಿಂದ ಬೇರೆ ಮಾಡಲ್ಪಟ್ಟ (ಎಂದರೆ ಹೇಯ ಮತ್ತು ಉಪಾದೇಯದ ವಿವೇಕ ಮಾಡಿ ವ್ಯವಹಾರದಿಂದ ಉಪಾದೇಯರೂಪವನ್ನು ತಿಳಿದುಕೊಂಡ) - [ಯಾವನು ಅನಾದಿ ಅಜ್ಞಾನದ ನಾಶಮಾಡಿ ಶುದ್ಧಿಯ ಅಂಶವನ್ನು ಪ್ರಕಟಮಾಡಿಕೊಂಡಿದ್ದಾನೆ. ಅಂಥ ವ್ಯವಹಾರ ಮೋಕ್ಷಮಾರ್ಗಿಯಾದ (ವಿಕಲ್ಪ) ಜೀವನಿಗೆ ನಿಃಶಂಕತೆ-ನಿಃಕಾಂಕ್ಷತೆ-ನಿರ್ವಿಚಿಕಿತ್ಸಾದಿ ಭಾವರೂಪ, ಸ್ವಾಧ್ಯಾಯವಿನಯಾದಿಭಾವರೂಪಮತ್ತು ನಿರತಿಚಾರ ವ್ರತಾದಿಭಾವರೂಪ ವ್ಯಾಪಾರಗಳೂ ಭೂಮಿಕೆಗನುಸರಿಸಿ ಆಗುತ್ತವೆ ಮತ್ತು ಯಾವುದೇ ಕಾರಣ ಉಪಾದೇಯ ಭಾವಗಳ (ವ್ಯವಹಾರದಿಂದ ಗ್ರಾಹ್ಯಭಾವಗಳ) ತ್ಯಾಗವಾದ ಮೇಲೆ ಮತ್ತು ತ್ಯಾಜ್ಯ ಭಾವಗಳ ಉಪಾದಾನ ಎಂದರೆ ಗ್ರಹಣವಾದ ಮೇಲೆ ಅದರ ಪ್ರತಿಕಾರರೂಪದಿಂದ ಪ್ರಾಯಶ್ಚಿತ್ತಾದಿ ವಿಧಾನಗಳೂ ಆಗುತ್ತವೆ.]

ವಿಶಿಷ್ಟಭಾವನಾಸೌಷ್ಠವವಶಾತ್ಸಮ್ಯಗ್ದರ್ಶನಜ್ಞಾನಚಾರಿತ್ರೈಃ ಸ್ವಭಾವಭೂತೈಃ ಸಮಮಂಗಾಂಗಿಭಾವಪರಿಣತ್ಯಾ ತತ್ಸಮಾಹಿತೋ ಭೂತ್ವಾ ತ್ಯಾಗೋಪಾದಾನವಿಕಲ್ಪಶೂನ್ಯತ್ವಾದ್ವಿಶ್ರಾಂತಭಾವವ್ಯಾಪಾರಃ ಸುನಿಷ್ಕಂಪಃ ಅಯಮಾತ್ಮಾವತಿಷ್ಠತೇ, ತಸ್ಮಿನ್ ತಾವತಿ ಕಾಲೇ ಅಯಮೇವಾತ್ಮಾ ಜೀವಸ್ವಭಾವನಿಯತಚರಿತತ್ವಾನ್ನಿಶ್ಚಯೇನ ಮೋಕ್ಷಮಾರ್ಗ ಇತ್ಯುಚ್ಯತೇ । ಅತೋ ನಿಶ್ಚಯವ್ಯವಹಾರಮೋಕ್ಷಮಾರ್ಗಯೋಃ ಸಾಧ್ಯಸಾಧನಭಾವೋ ನಿತರಾಮುಪಪನ್ನ ಇತಿ ।

ವ್ಯಾಪಾರಮಾಡುತ್ತ, ಮತ್ತು ಯಾವುದೇ ಕಾರಣದಿಂದ ಗ್ರಾಹ್ಯದ ತ್ಯಾಗವಾದ ಮೇಲೆ ಹಾಗೂ ತಾಜ್ಯದ ಗ್ರಹಣವಾದ ಮೇಲೆ ಅದರ ಪ್ರತಿವಿಧಾನದ [೧] ಅಭಿಪ್ರಾಯ ಮಾಡುತ್ತ ಮಾಡುತ್ತ, ಯಾವ ಕಾಲ ಮತ್ತು ಎಷ್ಟು ಕಾಲದವರೆಗೆ ವಿಶಿಷ್ಟ ಭಾವನಾಸೌಷ್ಠವದ [೨] ಕಾರಣ ಸ್ವಭಾವಭೂತವಾದ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದೊಡನೆ ಅಂಗ-ಅಂಗೀ[೩] ಭಾವದಿಂದ ಪರಿಣತಿಯ ಮುಖಾಂತರ ಅವುಗಳಿಂದ [೪] ಸಮಾಹಿತ [೫]ನಾಗಿ, ತ್ಯಾಗಗ್ರಹಣದ ವಿಕಲ್ಪದಿಂದ ಶೂನ್ಯತೆಯ ಕಾರಣ (ಭೇದಾತ್ಮಕ) ಭಾವರೂಪ ವ್ಯಾಪಾರವು ವಿರಾಮಕ್ಕೆ ಪ್ರಾಪ್ತವಾಗುವುದರಿಂದ (ಎಂದರೆ ಭೇದಭಾವರೂಪ-ಖಂಡಭಾವರೂಪ ವ್ಯಾಪಾರವು ನಿಂತು ಹೋಗುವುದರಿಂದ) ಸುನಿಷ್ಕಂಪರೂಪದಿಂದ ಇರುತ್ತಾನೆ, ಆ ಕಾಲ ಮತ್ತು ಅಷ್ಟು ಕಾಲದವರೆಗೆ ಇದೇ ಆತ್ಮನು ಜೀವಸ್ವಭಾವದಲ್ಲಿ ನಿಯತ ಚಾರಿತ್ರ ರೂಪವಾಗಿ ಪರಿಣಮಿಸುವ ಕಾರಣ ನಿಶ್ಚಯದಿಂದ 'ಮೋಕ್ಷಮಾರ್ಗ'ನೆಂದು ಕರೆಯಿಸಿಕೊಳ್ಳುತ್ತಾನೆ, ಅದಕ್ಕಾಗಿ ನಿಶ್ಚಯಮೋಕ್ಷಮಾರ್ಗ ಮತ್ತು ವ್ಯವಹಾರ-ಮೋಕ್ಷಮಾರ್ಗಕ್ಕೆ ಸಾಧ್ಯ-ಸಾಧಕತನವು ವಿಶೇಷವಾಗಿ ಸಂಭವಿಸುತ್ತದೆ.

ಭಾವಾರ್ಥ :- ನಿಶ್ಚಯಮೋಕ್ಷಮಾರ್ಗವು ನಿಜಶುದ್ಧಾತ್ಮನ ಅಭಿರುಚಿ, ಜ್ಞಪ್ತಿ ಮತ್ತು ನಿಶ್ಚಲ ಅನುಭೂತಿರೂಪವಿದೆ. ಅದರ ಸಾಧಕ (ಎಂದರೆ ನಿಶ್ಚಯಮೋಕ್ಷಮಾರ್ಗದ ವ್ಯವಹಾರ-ಸಾಧನ)ವಾದಂಥ ಯಾವ ಭೇದರತ್ನತ್ರಯಾತ್ಮಕವಾದ ವ್ಯವಹಾರಮೋಕ್ಷಮಾರ್ಗವಿದೆ ಅದನ್ನು ಜೀವನು ಕಥಂಚಿತ್) ಯಾವುದೇ ಪ್ರಕಾರ, ನಿಜ ಉದ್ಯಮದಿಂದ) ತನ್ನ ಸಂವೇದನದಲ್ಲಿ ಬರುವಂಥ ಅವಿದ್ಯೆಯ ವಾಸನೆಯ ವಿಲಯದಿಂದ

---

೧. ಪ್ರತಿವಿಧಾನ = ಪ್ರತಿಕಾರ ಮಾಡುವ ವಿಧಿ ; ಪ್ರತಿಕಾರದ ಉಪಾಯ.

೨. ವಿಶಿಷ್ಟ ಭಾವನಾಸೌಷ್ಠವ = ವಿಶೇಷ ಒಳ್ಳೆಯ ಭಾವನೆ (ಎಂದರೆ ವಿಶಿಷ್ಟ ಶುದ್ಧ ಭಾವನೆ) ; ವಿಶಿಷ್ಟ ಪ್ರಕಾರದ ಉತ್ತಮ ಭಾವನೆ.

೩. ಆತ್ಮನು ಅಂಗೀ ಇದ್ದರೆ ಸ್ವಭಾವಭೂತವಾದ ಸಮ್ಯಗ್ದರ್ಶನಜ್ಞಾನಚಾರಿತ್ರವು ಅದು ಅಂಗವಿದೆ.

೪. ಅವುಗಳಿಂದ-ಸ್ವಭಾವಭೂತವಾದ ಸಮ್ಯಗ್ದರ್ಶನ - ಜ್ಞಾನ - ಚಾರಿತ್ರದಿಂದ.

೫. ಜೀವನು ವ್ಯವಹಾರ ಮೋಕ್ಷಮಾರ್ಗವನ್ನೂ ಅನಾದಿ ಅವಿದ್ಯೆಯ ನಾಶ ಮಾಡಿಯೇ ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿದೆ; ಅನಾದಿ ಅವಿದ್ಯೆಯ ನಾಶವಾಗುವ ಮೊದಲಂತೂ (ಎಂದರೆ ನಿಶ್ಚಯನಯದ - ದ್ರವ್ಯಾರ್ಥಿಕನಯದ - ವಿಷಯಭೂತವಾದ ಶುದ್ಧಾತ್ಮಸ್ವರೂಪದ ಜ್ಞಾನ ಮಾಡಿಕೊಳ್ಳುವ ಮೊದಲಂತೂ) ವ್ಯವಹಾರ ಮೋಕ್ಷಮಾರ್ಗವೂ ಇರುವುದಿಲ್ಲವೆಂಬುದನ್ನಿಲ್ಲಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಪುನಃ 'ನಿಶ್ಚಯ ಮೋಕ್ಷಮಾರ್ಗ ಮತ್ತು ವ್ಯವಹಾರ ಮೋಕ್ಷಮಾರ್ಗಕ್ಕೆ ಸಾಧ್ಯ-ಸಾಧಕತನವು ವಿಶೇಷವಾಗಿ ಸಂಭವಿಸುತ್ತದೆ'ಂದು ಹೇಳಲಾಗಿದೆ ಅದು ವ್ಯವಹಾರನಯದಿಂದ ಮಾಡಲಾದ ಉಪಚರಿತ ನಿರೂಪಣೆಯಿದೆ. ಅದರೊಳಗಿಂದ 'ಆರನೆಯ ಗುಣಸ್ಥಾನದಲ್ಲಿ ವರ್ತಿಸುತ್ತಿರುವ ಶುಭ ವಿಕಲ್ಪಗಳಿಗಿಲ್ಲ, 'ಆದರೆ ಆರನೆಯ ಗುಣಸ್ಥಾನದಲ್ಲಿ ವರ್ತಿಸುತ್ತಿರುವ ಶುದ್ಧಿಯ ಅಂಶಕ್ಕೆ ಮತ್ತು ಏಳನೆಯ ಗುಣಸ್ಥಾನ ಯೋಗ್ಯ ನಿಶ್ಚಯ ಮೋಕ್ಷಮಾರ್ಗಕ್ಕೆ ವಾಸ್ತವಿಕವಾಗಿ ಸಾಧ್ಯ-ಸಾಧಕತನವಿದೆ'ಯೆಂಬ ಅರ್ಥವನ್ನು ತೆಗೆಯಬೇಕಾಗುವುದು. ಆರನೆಯ ಗುಣಸ್ಥಾನದಲ್ಲಿ ವರ್ತಿಸುವ ಶುದ್ಧಿಯ ಅಂಶವು ವೃದ್ಧಿಸಿ ಯಾವಾಗ ಮತ್ತು ಎಷ್ಟು ಕಾಲದವರೆಗೆ ಉಗ್ರಶುದ್ಧಿಗೆ ಕಾರಣವಾದ ಶುಭ ವಿಕಲ್ಪಗಳ ಅಭಾವವು ವರ್ತಿಸುತ್ತದೆ ಆಗ ಮತ್ತು ಅಷ್ಟು ಕಾಲದವರೆಗೆ ಏಳನೆಯ ಗುಣಸ್ಥಾನ ಯೋಗ್ಯ ನಿಶ್ಚಯ ಮೋಕ್ಷಮಾರ್ಗವಿರುತ್ತದೆ.

ಜೋ ಚರದಿ ಣಾದಿ ಪೇಚ್ಛದ್ದಿ ಅಪ್ಪಾಣಂ ಅಪ್ಪಣಾ ಅಣಣ್ಣಮಯಂ ।
ಸೋ ಚಾರಿತ್ತಂ ಣಾಣಂ ದಂಸಣಮಿದಿ ಣಿಚ್ಛಿದೋ ಹೋದಿ ॥೧೬೨॥

ಯಶ್ಚರತಿ ಜಾನಾತಿ ಪಶ್ಯತಿ ಆತ್ಮಾನಮಾತ್ಮನಾನ್ಯಮಯಮ್ ।
ಸ ಚಾರಿತ್ರಂ ಜ್ಞಾನಂ ದರ್ಶನಮಿತಿ ನಿಶ್ಚಿತೋ ಭವತಿ ॥೧೬೨॥

ಆತ್ಮನಶ್ಚಾರಿತ್ರಜ್ಞಾನದರ್ಶನತ್ವದ್ಯೋತನಮೇತತ್ ।

ಯಃ ಖಲ್ವಾತ್ಮಾನಮಾತ್ಮಮಯತ್ವಾದನನ್ಯಮಯಮಾತ್ಮನಾ ಚರಿ-ಸ್ವಭಾವನಿಯತಾಸ್ತಿತ್ವೇನಾನುವರ್ತತೇ, ಆತ್ಮನಾ ಜಾನಾತಿ-ಸ್ವಪರಪ್ರಕಾಶಕತ್ವೇನ ಚೇತಯತೇ, ಆತ್ಮನಾ ಪಶ್ಯತಿ-ಯಥಾತಥ್ಯೇನಾವಲೋಕಯತೇ, ಸ ಖಲ್ವಾತ್ಮೈವ ಚಾರಿತ್ರಂ ಜ್ಞಾನಂ ದರ್ಶನಮಿತಿ ಕರ್ತೃಕರ್ಮಕರಣಾನಾಮಭೇದಾನ್ನಿಶ್ಚಿತೋ ಭವತಿ । ಅತಶ್ಚಾರಿತ್ರಜ್ಞಾನದರ್ಶನರೂಪತ್ವಾಜ್ಜೀವಸ್ವಭಾವನಿಯತಚರಿತತ್ವಲಕ್ಷಣಂ ನಿಶ್ಚಯಮೋಕ್ಷಮಾರ್ಗತ್ವಮಾತ್ಮನೋ ನಿತರಾಮುಪಪನ್ನಮಿತಿ ।

ಪಡೆದುಕೊಳ್ಳುತ್ತ, ಯಾವಾಗ ಗುಣಸ್ಥಾನರೂಪ ಮೆಟ್ಟಿಲಿನ ಕ್ರಮಕ್ಕನುಸರಿಸಿ ನಿಜಶುದ್ಧಾತ್ಮದ್ರವ್ಯದ ಭಾವನೆಯಿಂದ ಉತ್ಪನ್ನವಾದ ನಿತ್ಯಾನಂದ ಲಕ್ಷಣವುಳ್ಳ ಸುಖಾಮೃತದ ರಸಾಸ್ವಾದದ ತೃಪ್ತಿರೂಪವಾದ ಶ್ರೇಷ್ಠ ಕಲೆಯ ಅನುಭವದ ಕಾರಣ ನಿಜಶುದ್ಧಾತ್ಮಾಶ್ರಿತವಾದ ನಿಶ್ಚಯದರ್ಶನಜ್ಞಾನಚಾರಿತ್ರರೂಪದಿಂದ ಅಭೇದ ರೂಪವಾಗಿ ಪರಿಣಮಿಸುತ್ತಾನೆ, ಆಗ ನಿಶ್ಚಯನಯದಿಂದ ಭಿನ್ನವಾದ ಸಾಧ್ಯ-ಸಾಧನದ ಅಭಾವದ ಕಾರಣ ಈ ಆತ್ಮನೇ ಮೋಕ್ಷಮಾರ್ಗವಿದ್ದಾನೆ. ಅದಕ್ಕಾಗಿ ಸುವರ್ಣ ಮತ್ತು ಸುವರ್ಣಪಾಷಾಣದಂತೆ ನಿಶ್ಚಯ ಮೋಕ್ಷಮಾರ್ಗ ಮತ್ತು ವ್ಯವಹಾರ ಮೋಕ್ಷಮಾರ್ಗಕ್ಕೆ ಸಾಧ್ಯ-ಸಾಧಕತನವು (ವ್ಯವಹಾರನಯದಿಂದ) ವಿಶೇಷ ಸಂಭವಿಸುತ್ತದೆಯೆಂಬುದು ಸಿದ್ಧವಾಯಿತು.

ಗಾಥೆ - ೧೬೨

ಗಾಥಾರ್ಥ :- [ಜೋ] ಯಾವನು (ಆತ್ಮನು) [ಅಣಣ್ಣಮಯಂ ಅಪ್ಪಾಣಂ] ಅನನ್ಯಮಯನಾದ ಆತ್ಮನನ್ನು [ಅಪ್ಪಣಾ] ಆತ್ಮನಿಂದ [ಚರದಿ] ಆಚರಿಸುತ್ತಾನೆ, [ಣಾದಿ] ತಿಳಿಯುತ್ತಾನೆ, [ಪೇಚ್ಛದ್ದಿ] ನೋಡುತ್ತಾನೆ, [ಸೋ] ಅವನು (ಆತ್ಮನೇ) [ಚಾರಿತ್ತಂ] ಚಾರಿತ್ರನಿದ್ದಾನೆ, [ಣಾಣಂ] ಜ್ಞಾನನಿದ್ದಾನೆ, [ದಂಸಣಂ] ದರ್ಶನನಿದ್ದಾನೆ [ಇದಿ] - ಎಂಬುದು [ಣಿಚ್ಛಿದೋ ಹೋದಿ] ನಿಶ್ಚಿತವಿದೆ.

ಟೀಕೆ :- ಇದು ಆತ್ಮನ ಚಾರಿತ್ರ - ಜ್ಞಾನ - ದರ್ಶನತನದ ಪ್ರಕಾಶನವಿದೆ (ಎಂದರೆ ಆತ್ಮನೇ ಚಾರಿತ್ರ, ಜ್ಞಾನ ಮತ್ತು ದರ್ಶನನಿದ್ದಾನೆಂದು ಇಲ್ಲಿ ತಿಳಿಸಿಕೊಡಲಾಗಿದೆ.)

ಯಾವನನನ್ಯಮಯ - ಆತ್ಮನನಾತ್ಮನಿಂದಾಚರಿಪ ತಿಳಿವ ನೋಡುವನು ।
ಅವನೆ ನಿಶ್ಚಯದಿ ಚಾರಿತ್ರನಿಹನು ಜ್ಞಾನನಿಹನು ದರ್ಶನನಿಹನು ॥೧೬೨॥

ಜೇಣ ವಿಜಾಣದಿ ಸವ್ವಂ ಪೇಚ್ಛದಿ ಸೋ ತೇಣ ಸೋಕ್ಖಮಣುಹವದಿ ।
ಇದಿ ತಂ ಜಾಣದಿ ಭವಿಓ ಅಭವಿಯಸತ್ತೋ ಣ ಸದ್ದಹದಿ ॥೧೬೩॥

ಯೇನ ವಿಜಾನಾತಿ ಸರ್ವಂ ಪಶ್ಯತಿ ಸ ತೇನ ಸೌಖ್ಯಮನುಭವತಿ ।
ಇತಿ ತಜ್ಜಾನಾತಿ ಭವ್ಯೋೇಽಭವ್ಯಸತ್ತ್ವೋ ನ ಶ್ರದ್ಧತ್ತೇ ॥೧೬೩॥

ಸರ್ವಸ್ಯಾತ್ಮನಃ ಸಂಸಾರಿಣೋ ಮೋಕ್ಷಮಾರ್ಗಾರ್ಹತ್ವನಿರಾಸೋೇಽಯಮ್ ।

ಯಾವನು (ಆತ್ಮನು) ವಾಸ್ತವಿಕವಾಗಿ ಆತ್ಮನನ್ನು - ಅವನು ಆತ್ಮಮಯನಿರುವುದರಿಂದ ಅನನ್ಯಮಯನಿದ್ದಾನೆ ಅವನನ್ನು - ಆತ್ಮನಿಂದ ಆಚರಿಸುತ್ತಾನೆ ಎಂದರೆ ಸ್ವಭಾವನಿಯತ[೧] ಅಸ್ತಿತ್ವದಿಂದ ಅನುವರ್ತಿಸುತ್ತಾನೆ (ಸ್ವಭಾವನಿಯತ ಅಸ್ತಿತ್ವರೂಪದಿಂದ ಪರಿಣಮಿಸಿ ಅನುಸರಿಸುತ್ತಾನೆ), (ಅನನ್ಯಮಯ ಆತ್ಮನನ್ನೇ) ಆತ್ಮನಿಂದ ತಿಳಿಯುತ್ತಾನೆ ಎಂದರೆ ಸ್ವಪರ ಪ್ರಕಾಶರೂಪದಿಂದ ಚೇತಿಸುತ್ತಾನೆ, (ಅನನ್ಯಮಯ ಆತ್ಮನನ್ನೇ) ಆತ್ಮನಿಂದ ನೋಡುತ್ತಾನೆ ಎಂದರೆ ಯಥಾತಥ್ಯರೂಪದಿಂದ ಅವಲೋಕನೆ ಮಾಡುತ್ತಾನೆ, ಆ ಆತ್ಮನೇ ವಾಸ್ತವಿಕವಾಗಿ ಚಾರಿತ್ರನಿದ್ದಾನೆ, ಜ್ಞಾನನಿದ್ದಾನೆ, ದರ್ಶನನಿದ್ದಾನೆಂದು ಕರ್ತೃ-ಕರ್ಮ-ಕರಣದ[೨] ಭೇದದ ಕಾರಣ ನಿಶ್ಚಿತವಿದೆ. ಇದರಿಂದ ಚಾರಿತ್ರ-ಜ್ಞಾನ-ದರ್ಶನರೂಪವಿರುವ ಕಾರಣ ಆತ್ಮನಿಗೆ ಜೀವಸ್ವಭಾವನಿಯತ ಚಾರಿತ್ರವು ಯಾವುದರ ಲಕ್ಷಣವಿದೆ ಅಂಥ ನಿಶ್ಚಯ ಮೋಕ್ಷಮಾರ್ಗತನವು ವಿಶೇಷ ಸಂಭವಿಸುತ್ತದೆಯೆಂಬುದು ನಿಶ್ಚಿತವಾಯಿತು. (ಎಂದರೆ ಆತ್ಮನೇ ಚಾರಿತ್ರ-ಜ್ಞಾನ-ದರ್ಶನವಿರುವ ಕಾರಣ ಆತ್ಮನೇ ಜ್ಞಾನದರ್ಶನರೂಪ ಜೀವಸ್ವಭಾವದಲ್ಲಿ ದೃಢರೂಪದಿಂದ ಸ್ಥಿರವಾದ ಚಾರಿತ್ರವು ಯಾವುದರ ಸ್ವರೂಪವಿದೆ ಅಂಥ ನಿಶ್ಚಯ ಮೋಕ್ಷಮಾರ್ಗನಿದ್ದಾನೆ.)

ಗಾಥೆ - ೧೬೩

ಗಾಥಾರ್ಥ :- [ಜೇಣ] ಯಾವುದರಿಂದ (ಆತ್ಮನು ಮುಕ್ತನಾದಮೇಲೆ) [ಸವ್ವಂ ವಿಜಾಣದಿ] ಎಲ್ಲವನ್ನೂ ತಿಳಿಯುತ್ತಾನೆ ಮತ್ತು [ಪೇಚ್ಛದಿ] ನೋಡುತ್ತಾನೆ, [ತೇಣ] ಅದರಿಂದ [ಸೋ] ಅವನು [ಸೋಕ್ಖಮಣುಹವದಿ] ಸೌಖ್ಯದ ಅನುಭವ ಮಾಡುತ್ತಾನೆ ; [ಇದಿ ತಂ] - ಎಂದು [ಭವಿಓ ಜಾಣದಿ] ಭವ್ಯ ಜೀವನು ತಿಳಿಯುತ್ತಾನೆ, [ಅಭವಿಯಸತ್ತೋ ಣ ಸದ್ದಹದಿ] ಅಭವ್ಯ ಜೀವನು ಶ್ರದ್ಧೆ ಮಾಡುವುದಿಲ್ಲ.

ಟೀಕೆ :- ಇದು ಎಲ್ಲ ಸಂಸಾರೀ ಆತ್ಮರುಗಳು ಮೋಕ್ಷಮಾರ್ಗಕ್ಕೆ ಯೋಗ್ಯರಿರುವುದರ ನಿರಾಕರಣೆಯಿದೆ.

ಸಕಲವನಾವುದರಿಂ ತಿಳಿಯುವ ಮೇಣ್ ನೋಡುವನದರಿಂದವನು ।
ಸುಖದನುಭವಮಾಡುವನೆಂದು ಭವ್ಯತಿಳಿವನಭವ್ಯ ಶ್ರದ್ಧೆಮಾಡನು ॥೧೬೩॥

---

೧. ಸ್ವಭಾವನಿಯತ-ಸ್ವಭಾವದಲ್ಲಿ ಅವಸ್ಥಿತ ; (ಜ್ಞಾನದರ್ಶನರೂಪ) ಸ್ವಭಾವದಲ್ಲಿ ದೃಢರೂಪದಿಂದ ಸ್ಥಿರ. ['ಸ್ವಭಾವನಿಯತ ಅಸ್ತಿತ್ವ'ದ ವಿಶೇಷ ಸ್ಪಷ್ಟತೆಗಾಗಿ ೧೫೪ ನೆಯ ಗಾಥೆಯ ಟೀಕೆ ನೋಡಿರಿ.]

೨. ಯಾವಾಗ ಆತ್ಮನು ಆತ್ಮನನ್ನು ಆತ್ಮನಿಂದ ಆಚರಿಸುತ್ತಾನೆ - ತಿಳಿಯುತ್ತಾನೆ - ನೋಡುತ್ತಾನೆ ಆಗ ಆತ್ಮನೇ ಕರ್ತೃ, ಆತ್ಮನೇ ಕರ್ಮ ಮತ್ತು ಆತ್ಮನೇ ಕರಣನಿದ್ದಾನೆ ; ಹೀಗೆ ಅಲ್ಲಿ ಕರ್ತೃ-ಕರ್ಮ-ಕರಣದ ಅಭಿನ್ನತೆಯಿದೆ.

ಇಹ ಹಿ ಸ್ವಭಾವಪ್ರಾತಿಕೂಲ್ಯಾಭಾವಹೇತುಕಂ ಸೌಖ್ಯಮ್ । ಆತ್ಮನೋ ಹಿ ದೃಶಿ-ಜ್ಞಪ್ತೀ ಸ್ವಭಾವಃ । ತಯೋರ್ವಿಷಯಪ್ರತಿಬಂಧಃ ಪ್ರಾತಿಕೂಲ್ಯಮ್ । ಮೋಕ್ಷೇ ಖಲ್ವಾತ್ಮನಃ ಸರ್ವಂ ವಿಜಾನತಃ ಪಶ್ಯತಶ್ಚ ತದಭಾವಃ । ತತಸ್ತದ್ಧೇತುಕಸ್ಯಾನಾಕುಲತ್ವಲಕ್ಷಣಸ್ಯ ಪರಮಾರ್ಥಸುಖಸ್ಯ ಮೋಕ್ಷೇऽನುಭೂತಿರಚಲಿತಾऽಸ್ತಿ । ಇತ್ಯೇತದ್ಭವ್ಯ ಏವ ಭಾವತೋ ವಿಜಾನಾತಿ, ತತಃ ಸ ಏವ ಮೋಕ್ಷಮಾರ್ಗಾರ್ಹಃ । ನೈತದಭವ್ಯಃ ಶ್ರದ್ದತ್ತೇ , ತತಃ ಸ ಮೋಕ್ಷಮಾರ್ಗಾನರ್ಹ ಏವೇತಿ । ಅತಃ ಕತಿಪಯೇ ಏವ ಸಂಸಾರಿಣೋ ಮೋಕ್ಷಮಾರ್ಗಾರ್ಹಾ, ನ ಸರ್ವ ಏವೇತಿ ।

ದಂಸಣಣಾಣಚರಿತ್ತಾಣಿ ಮೋಕ್ಖಮಗ್ಗೋ ತ್ತಿ ಸೇವಿದವ್ವಾಣಿ ।
ಸಾಧೂಹಿ ಇದಂ ಭಣಿದಂ ತೇಹಿಂ ದು ಬಂಧೋ ವ ಮೋಕ್ಖೋ ವಾ ॥೧೬೪॥

ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗ ಇತಿ ಸೇವಿತವ್ಯಾನಿ ।
ಸಾಧುಭಿರಿದಂ ಭಣಿತಂ ತೈಸ್ತು ಬಂಧೋ ವಾ ಮೋಕ್ಷೋ ವಾ ॥೧೬೪॥

ದರ್ಶನಜ್ಞಾನಚಾರಿತ್ರಾಣಾಂ ಕಥಂಚಿದ್ಬಂಧಹೇತುತ್ವೋಪದರ್ಶನೇನ ಜೀವಸ್ವಭಾವೇ ನಿಯತಚರಿತಸ್ಯ ಸಾಕ್ಷಾನ್ಮೋಕ್ಷಹೇತುತ್ವದ್ಯೋತನಮೇತತ್ ।

ವಾಸ್ತವಿಕವಾಗಿ ಸೌಖ್ಯದ ಕಾರಣವು ಸ್ವಭಾವದ ಪ್ರತಿಕೂಲತೆಯ [೧] ಅಭಾವವಿದೆ. ಆತ್ಮನ 'ಸ್ವಭಾವ'ವು ವಾಸ್ತವಿಕವಾಗಿ ದೃಶಿ-ಜ್ಞಪ್ತಿ (ದರ್ಶನ ಮತ್ತು ಜ್ಞಾನ) ಇದೆ. ಅವೆರಡಕ್ಕೆ ವಿಷಯ ಪ್ರತಿಬಂಧ [೨] ವಾಗುವುದು ಅದು 'ಪ್ರತಿಕೂಲತೆ'ಯಿದೆ. ವಾಸ್ತವಿಕವಾಗಿ ಮೋಕ್ಷದಲ್ಲಿ ಆತ್ಮನು ಎಲ್ಲವನ್ನು ತಿಳಿಯುತ್ತ ಮತ್ತು ನೋಡುತ್ತಿರುವುದರಿಂದ ಅದರ ಅಭಾವವಿರುತ್ತದೆ (ಎಂದರೆ ಮೋಕ್ಷದಲ್ಲಿ ಸ್ವಭಾವದ ಪ್ರತಿಕೂಲತೆಯ ಅಭಾವವಿರುತ್ತದೆ) ಆದುದರಿಂದ ಅದರ [೩] ಅಭಾವವು ಯಾವುದರ ಕಾರಣವಿದೆ ಅಂಥ ಅನಾಕುಲತೆಯ ಲಕ್ಷಣವುಳ್ಳ [೪] ಪರಮಾರ್ಥ ಸುಖದ ಅನುಭೂತಿಯು ಮೋಕ್ಷದಲ್ಲಿ ಅಚಲಿತವಾಗಿರುತ್ತದೆ. ಈ ಪ್ರಕಾರವಾಗಿ ಭವ್ಯ ಜೀವನೇ ಭಾವದಿಂದ [೫] ತಿಳಿಯುತ್ತಾನೆ, ಅದಕ್ಕಾಗಿ ಅವನೇ ಮೋಕ್ಷಮಾರ್ಗಕ್ಕೆ ಯೋಗ್ಯನಿದ್ದಾನೆ ; ಅಭವ್ಯ ಜೀವನು ಈ ಪ್ರಕಾರ ಶ್ರದ್ಧೆ ಮಾಡುವುದಿಲ್ಲ, ಅದಕ್ಕಾಗಿ ಅವನು ಮೋಕ್ಷಮಾರ್ಗಕ್ಕೆ ಅಯೋಗ್ಯನೇ ಇದ್ದಾನೆ.

ಇದರಿಂದ ಕೆಲವೇ ಸಂಸಾರಿಗಳು ಮೋಕ್ಷಮಾರ್ಗಕ್ಕೆ ಯೋಗ್ಯರಿದ್ದಾರೆ, ಎಲ್ಲರೂ ಇಲ್ಲ - ಎಂದು ಹೇಳಿದೆ.

ಆ ದರ್ಶನಜ್ಞಾನಚಾರಿತ್ರ ಮೋಕ್ಷಮಾರ್ಗವಿದ್ದವು ಸೇವನೆಯೋಗ್ಯವಿವೆಯೆಂದು ।
ಸಾಧು ಪೇಳಿರುವರಾದರವುಗಳಿಂದ ಬಂಧವದರಂತೆ ಮೋಕ್ಷವಾಗುವುದು ॥೧೬೪॥

---

೧. ಪ್ರತಿಕೂಲತೆ = ವಿರುದ್ಧತೆ ; ವಿಪರೀತತೆ.

೨. ವಿಷಯ ಪ್ರತಿಬಂಧ = ವಿಷಯದಲ್ಲಿ ಅಡ್ಡಿ ಎಂದರೆ ಮರ್ಯಾದಿತತನ. (ದರ್ಶನ ಮತ್ತು ಜ್ಞಾನದ ವಿಷಯದಲ್ಲಿ ಮರ್ಯಾದಿತತನವಿರುವುದು ಅದು ಸ್ವಭಾವದ ಪ್ರತಿಕೂಲತೆಯಿದೆ.)

೩. ಪಾರಮಾರ್ಥಿಕ ಸುಖದ ಕಾರಣವು ಸ್ವಭಾವದ ಪ್ರತಿಕೂಲತೆಯ ಅಭಾವವಿದೆ.

೪. ಪಾರಮಾರ್ಥಿಕ ಸುಖದ ಲಕ್ಷಣವು ಅಥವಾ ಸ್ವರೂಪವು ಅನಾಕುಲತೆಯಿದೆ.

೫. ಶ್ರೀ ಜಯಸೇನಾಚಾರ್ಯದೇವಕೃತ ಟೀಕೆಯಲ್ಲಿ ಆ ಅನಂತ ಸುಖವನ್ನು ಭವ್ಯಜೀವರುಗಳು ತಿಳಿಯುತ್ತಾರೆ, ಉಪಾದೇಯ ರೂಪದಿಂದ ಶ್ರದ್ಧೆ ಮಾಡುತ್ತಾರೆ ಮತ್ತು ತಮ್ಮ ತಮ್ಮ ಗುಣಸ್ಥಾನಕ್ಕನುಸರಿಸಿ ಅನುಭವ ಮಾಡುತ್ತಾರೆಂದು ಹೇಳಿದೆ.

अमूनि हि दर्शनज्ञानचारित्राणि कियन्मात्रयापि परसमयप्रवृत्त्या संवलितानि कृशानुसंवलितानीव घृतानि कथंचिद्विरुद्धकार्यकारणत्वरूढेर्बंधकारणान्यपि भवंति। यदा तु समस्तपरसमयप्रवृत्तिनिवृत्तिरूपया स्वसमयप्रवृत्त्यासंगच्छंते, तदा निवृत्तकृशानु-संवलनानीव घृतानि विरुद्धकार्यकारणभावाभावात्साक्षान्मोक्षकारणान्येव भवंति। ततः स्वसमयप्रवृत्तिनामैनं जीवस्वभावनियतचरितस्य साक्षान्मोक्षमार्गत्वमुपपन्नमिति।

ಗಾಥೆ - ೧೬೪

ಗಾಥಾರ್ಥ :- [दंसणणाणचरित्ताणि] ದರ್ಶನ-ಜ್ಞಾನ-ಚಾರಿತ್ರಗಳು [मोक्खमग्गो] ಮೋಕ್ಷಮಾರ್ಗವಿದೆ [त्ति] ಅದಕ್ಕಾಗಿ [सेविदव्वाणि] ಅವು ಸೇವನೆ ಮಾಡಲು ಯೋಗ್ಯವಿವೆ. [इदं साधूहि भणिदं] ಎಂದು ಸಾಧುಗಳು ಹೇಳಿದ್ದಾರೆ [तेहिं दु] ಆದರೆ ಅವುಗಳಿಂದ [बंधो व] ಬಂಧವೂ ಆಗುತ್ತದೆ ಮತ್ತು [मोक्खो वा] ಮೋಕ್ಷವೂ ಆಗುತ್ತದೆ.

ಟೀಕೆ :- ಇಲ್ಲಿ ದರ್ಶನ-ಜ್ಞಾನ-ಚಾರಿತ್ರದ ಕಥಂಚಿತ್ ಬಂಧಹೇತುತ್ವನ್ನು ತಿಳಿಸಲಾಗಿದೆ ಮತ್ತು ಈ ಪ್ರಕಾರ ಜೀವ ಸ್ವಭಾವದಲ್ಲಿ ನಿಯತವಾದ ಚಾರಿತ್ರದ ಸಾಕ್ಷಾತ್ ಮೋಕ್ಷಹೇತುತ್ವವನ್ನು ಪ್ರಕಟಪಡಿಸಿದೆ.

ಈ ದರ್ಶನ-ಜ್ಞಾನ-ಚಾರಿತ್ರಗಳು ಒಂದು ವೇಳೆ ಸ್ವಲ್ಪಾದರೂ ಪರಸಮಯ ಪ್ರವೃತ್ತಿಯೊಡನೆ ಮಿಳಿತವಾಗುತ್ತಿದ್ದರೆ ಅಗ್ನಿಯ ಜೊತೆಯಲ್ಲಿ ಮಿಳಿತವಾದತುಪ್ಪದ ಹಾಗೆ (ಎಂದರೆಉಷ್ಣತೆಯಿಂದ ಕೂಡಿದ ತುಪ್ಪದ [೧] ಹಾಗೆ) ಕಥಂಚಿತ್ ವಿರುದ್ಧ [೨] ಕಾರ್ಯದ ಕಾರಣತನದ ವ್ಯಾಪ್ತಿಯ ಕಾರಣ ಬಂಧಕ್ಕೆ ಕಾರಣಗಳೂ ಇವೆ ಮತ್ತು ಯಾವಾಗ ಅವು (ದರ್ಶನ-ಜ್ಞಾನ-ಚಾರಿತ್ರಗಳು ಸಮಸ್ತ ಪರಸಮಯ ಪ್ರವೃತ್ತಿಯಿಂದ ನಿವೃತ್ತ ರೂಪವಾದಂಥ ಸ್ವಸಮಯ ಪ್ರವೃತ್ತಿಯೊಡನೆ ಸಂಯುಕ್ತವಾಗುತ್ತವೆ ಆಗ ಅದಕ್ಕೆ ಅಗ್ನಿಯ ಜೊತೆಗಿರುವ ಮಿಳಿತತೆಯು ನಿವೃತ್ತವಾದಂಥ ತುಪ್ಪದ ಹಾಗೆ, ವಿರುದ್ಧ ಕಾರ್ಯದಕಾರಣ ಭಾವಗಳು ನಿವೃತ್ತವಾಗಿ ಹೋಗಿರುವುದರಿಂದ ಪ್ರತ್ಯಕ್ಷ ಮೋಕ್ಷಕಾರಣಗಳೇ ಇವೆ, ಆದುದರಿಂದ ''ಸ್ವಸಮಯ ಪ್ರವೃತ್ತಿ'ಯೆಂಬ ಹೆಸರಿನ ಯಾವುದು ಜೀವ ಸ್ವಭಾವದಲ್ಲಿನಿಯತವಾದಚಾರಿತ್ರವಿದೆ ಅದಕ್ಕೆ ಪ್ರತ್ಯಕ್ಷ ಮೋಕ್ಷಮಾರ್ಗತನವು ಸಂಭವಿಸುತ್ತದೆ.[೩]

---

೧. ತುಪ್ಪವು ಸ್ವಭಾವದಿಂದ ಶೀತಲತೆಗೆ ಕಾರಣಭೂತವಾಗಿದ್ದರೂ ಅದು ಒಂದುವೇಳೆ ಸ್ವಲ್ಪಾದರೂ ಉಷ್ಣತೆಯಿಂದ ಯುಕ್ತವಾದರೆ ಅದರಿಂದ (ಕಥಂಚಿತ್) ಸುಟ್ಟೂಹೋಗುತ್ತದೆ ; ಅದೇ ಪ್ರಕಾರ ದರ್ಶನ-ಜ್ಞಾನ-ಚಾರಿತ್ರಗಳು ಸ್ವಭಾವದಿಂದ ಮೋಕ್ಷಕ್ಕೆ ಕಾರಣಭೂತವಾಗಿದ್ದರೂ ಅವು ಒಂದು ವೇಳೆ ಸ್ವಲ್ಪಾದರೂ ಪರಸಮಯಪ್ರವೃತ್ತಿಯಿಂದ ಯುಕ್ತವಾದರೆ ಅವುಗಳಿಂದ (ಕಥಂಚಿತ್) ಬಂಧವೂ ಆಗುತ್ತದೆ.

೨. ಪರಸಮಯ ಪ್ರವೃತ್ತಿಯುಕ್ತ ದರ್ಶನ-ಜ್ಞಾನ-ಚಾರಿತ್ರಗಳಲ್ಲಿ ಕಥಂಚಿತ್ ಮೋಕ್ಷರೂಪ ಕಾರ್ಯದಿಂದ ವಿರುದ್ಧ ಕಾರ್ಯದ ಕಾರಣತನವು (ಎಂದರೆ ಬಂಧರೂಪಕಾರ್ಯದ ಕಾರಣತನವು) ಪ್ರಾಪ್ತವಾಗಿರುತ್ತದೆ.

[ಶಾಸ್ತ್ರಗಳಲ್ಲಿ ಒಮ್ಮೊಮ್ಮೆ ದರ್ಶನ-ಜ್ಞಾನ-ಚಾರಿತ್ರಗಳಿಗೂ, ಒಂದು ವೇಳೆ ಅವು ಪರಸಮಯ ಪ್ರವೃತ್ತಿಯುಕ್ತವಾದರೆ ಕಥಂಚಿತ್ ಬಂಧದ ಕಾರಣವೆಂದು ಹೇಳಲಾಗುತ್ತದೆ ; ಮತ್ತು ಎಂದಾದರೂ ಜ್ಞಾನಿಗೆ ವರ್ತಿಸುತ್ತಿರುವ ಶುಭ ಭಾವಗಳಿಗೂ ಕಥಂಚಿತ್ ಮೋಕ್ಷದ ಪರಂಪರೆಯ ಹೇತುವೆಂದು ಹೇಳಲಾಗುತ್ತದೆ. ಶಾಸ್ತ್ರಗಳಲ್ಲಿ ಬರುವ ಇಂಥ ಭಿನ್ನ-ಭಿನ್ನ ಪದ್ಧತಿಯ ಕಥನಗಳನ್ನು ಬಗೆಹರಿಸುತ್ತ, ಜ್ಞಾನಿಗೆ ಯಾವಾಗ ಶುದ್ಧರೂಪ ಮಿಶ್ರ ಪರ್ಯಾಯವು ವರ್ತಿಸುತ್ತದೆ ಆಗ ಅದು ಮಿಶ್ರಪರ್ಯಾಯವು ಏಕಾಂತದಿಂದ ಸಂವರ-ನಿರ್ಜರೆ-ಮೋಕ್ಷಕ್ಕೆ ಕಾರಣಭೂತವಾಗುವುದಿಲ್ಲ ಅಥವಾ ಏಕಾಂತದಿಂದ ಆಸ್ರವ-ಬಂಧಕ್ಕೆ ಕಾರಣಭೂತವಾಗುವುದಿಲ್ಲ, ಆದರೆ ಆ ಮಿಶ್ರ ಪರ್ಯಾಯದ ಶುದ್ಧ

ಅಣ್ಣಾಣಾದೋ ಣಾಣೇ ಜದಿ ಮಣ್ಣದಿ ಸುದ್ಧಸಂಪಓಗಾದೋ ।
ಹವದಿ ತ್ತಿ ದುಕ್ಖಮೋಕ್ಖಂ ಪರಸಮಯರದೋ ಹವದಿ ಜೀವೋ ॥೧೬೫॥

ಅಜ್ಞಾನಾತ್ ಜ್ಞಾನೀ ಯದಿ ಮನ್ಯತೇ ಶುದ್ಧಸಂಪ್ರಯೋಗಾತ್ ।
ಭವತೀತಿ ದುಃಖಮೋಕ್ಷಃ ಪರಸಮಯರತೋ ಭವತಿ ಜೀವಃ ॥೧೬೫॥

ಸೂಕ್ಷ್ಮಪರಸಮಯಸ್ವರೂಪಾಖ್ಯಾನಮೇತತ್ ।

ಅರ್ಹದಾದಿಷು ಭಗವತ್ಸು ಸಿದ್ಧಿಸಾಧನೀಭೂತೇಷು ಭಕ್ತಿಭಾವಾನುರಂಜಿತಾ ಚಿತ್ತವೃತ್ತಿರತ್ರ ಶುದ್ಧಸಂ-

---

ಗಾಥೆ - ೧೬೫

ಗಾಥಾರ್ಥ :- [ಸುದ್ಧಸಂಪಓಗಾದೋ] ಶುದ್ಧಸಂಪ್ರಯೋಗದಿಂದ (ಶುಭಭಕ್ತಿಭಾವದಿಂದ) [ದುಕ್ಖಮೋಕ್ಖಂ ಹವದಿ] ದುಃಖದ ಮೋಕ್ಷವಾಗುತ್ತದೆ [ತ್ತಿ]- ಎಂದು [ಜದಿ] ಒಂದು ವೇಳೆ [ಅಣ್ಣಾಣಾದೋ] ಅಜ್ಞಾನದ ಕಾರಣವಾಗಿ [ಣಾಣೇ] ಜ್ಞಾನಿಯು [ಮಣ್ಣದಿ] ಮನ್ನಿಸಿದರೆ [೧] ಅವನು [ಪರಸಮಯರದೋ ಜೀವೋ] ಪರಸಮಯರತನಾದ ಜೀವನು [ಹವದಿ] ಇದ್ದಾನೆ. 'ಅರಹಂತ ಮೊದಲಾದವರ ಕುರಿತು ಭಕ್ತಿ ಅನುರಾಗವುಳ್ಳ ಮಂದ ಶುದ್ಧಿಯಿಂದಲೂ ಕ್ರಮದಿಂದ ಮೋಕ್ಷವಾಗುತ್ತದೆ'-ಎಂದು ಒಂದು ವೇಳೆ ಅಜ್ಞಾನದ ಕಾರಣ (ಶುದ್ಧಾತ್ಮಸಂವೇದನದ ಅಭಾವದ ಕಾರಣ ರಾಗಾಂಶದ ಕಾರಣ)ವಾಗಿ ಜ್ಞಾನಿಗೂ ಕೂಡ (ಮಂದ ಪುರುಷಾರ್ಥವುಳ್ಳ) ಒಲವಿನ ವೃತ್ತಿಯಾದರೆ ಅಲ್ಲಿಯವರೆಗೆ ಅವನೂ ಕೂಡ ಸೂಕ್ಷ್ಮವಾದ ಪರಸಮಯದಲ್ಲಿ ಮಗ್ನನಿದ್ದಾನೆ.

ಟೀಕೆ :- ಇದು ಸೂಕ್ಷ್ಮ ಪರಸಮಯದ ಸ್ವರೂಪದ ಕಥನವಿದೆ.

ಸಿದ್ಧಿಗೆ ಸಾಧನಭೂತವಾದಂಥ ಅರಹಂತ ಮೊದಲಾದ ಭಗವಂತರುಗಳ ಕುರಿತು ಭಕ್ತಿಭಾವದಿಂದ ಅನುರಂಜಿತ [೨]ವಾದ ಚಿತ್ತವೃತ್ತಿಯು ಅದು ಇಲ್ಲಿ 'ಶುದ್ಧಸಂಪ್ರಯೋಗ'ವಿದೆ. ಈಗ ಅಲ್ಪ ಅಜ್ಞಾನದ ಆವೇಶದಿಂದ ಒಂದು ವೇಳೆ ಜ್ಞಾನವುಳ್ಳವನೂ 'ಆ ಶುದ್ಧಸಂಪ್ರಯೋಗದಿಂದ ಮೋಕ್ಷವಾಗುತ್ತದೆ'ಯೆಂಬ ಅಭಿಪ್ರಾಯದಿಂದ ಕಷ್ಟಪೂರ್ವಕವಾಗಿ ಅದರಲ್ಲಿ(ಶುದ್ಧಸಂಪ್ರಯೋಗದಲ್ಲಿ) ಪ್ರವರ್ತಿಸಿದರೆ ಅದುವರೆಗೆ ಅವನೂ ಅಲ್ಪರಾಗದ ಸದ್ಭಾವದ

ಜಿನವರಪ್ರಭುವಿನಭಕ್ತಿಯಿಂ ದುಃಖಮುಕ್ತಿಯಪ್ಪುದೆಂದು ಅಜ್ಞಾನದಿಂದ ।
ಜ್ಞಾನಿಯೂ ಮನ್ನಿಸಿದರೆ ಅವನು ಪರಸಮಯರತ ಜೀವನಿಹನು ॥೧೬೫॥

ಅಂಶವು ಸಂವರ-ನಿರ್ಜರೆ - ಮೋಕ್ಷಕ್ಕೆ ಕಾರಣಭೂತವಾಗುತ್ತದೆ ಮತ್ತು ಅಶುದ್ಧ ಅಂಶವು ಆಸ್ರವ-ಬಂಧಕ್ಕೆ ಕಾರಣಭೂತವಾಗುತ್ತದೆಯೆಂಬ ಸಾರಭೂತವಾದ ವಾಸ್ತವಿಕತೆಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.]

೩. ಈ ನಿರೂಪಣೆಯೊಡನೆ ತುಲನೆ ಮಾಡುವುದಕ್ಕಾಗಿ ಶ್ರೀ ಪ್ರವಚನಸಾರದ ಹನ್ನೊಂದನೆಯ ಗಾಥೆ ಮತ್ತು ಅದರ ತತ್ತ್ವಪ್ರದೀಪಿಕೆಯ ಟೀಕೆಯನ್ನು ನೋಡುವುದು.

೧. ಮನ್ನಿಸುವುದು = ಒಲವು ತೋರುವುದು ; ವಿಚಾರವಿಟ್ಟುಕೊಳ್ಳುವುದು ; ಇಚ್ಛೆ ಮಾಡುವುದು ; ಅಭಿಪ್ರಾಯವಿರುವುದು.

೨. ಅನುರಂಜಿತ = ಅನುರಕ್ತ ; ರಾಗವುಳ್ಳ ; ಸರಾಗ.

ಪ್ರಯೋಗಃ । ಅಥ ಖಿಲಜ್ಞಾನಲವಾವೇಶಾದ್ಯದಿ ಯಾವತ್ ಜ್ಞಾನವಾನಪಿ ತತಃ ಶುದ್ಧ ಸಂಪ್ರಯೋಗಾನ್ಮೋಕ್ಷೋ ಭವತೀತ್ಯಭಿಪ್ರಾಯೇಣ ಖಿದ್ಯಮಾನಸ್ತತ್ರ ಪ್ರವರ್ತತೇ ತದಾ ತಾವತ್ಸೋऽಪಿ ರಾಗಲವಸದ್ಭಾವಾತ್ಪರಸಮಯರತ ಇತ್ಯುಪಗೀಯತೇ । ಅಥ ನ ಕಿಂ ಪುನರ್ನಿರಂಕುಶರಾಗಕಲಿಕಲಂಕಿತಾಂತರಂಗವೃತ್ತಿರಿತರೋ ಜನ ಇತಿ ।

ಅರಹಂತಸಿದ್ಧಚೇದಿಯಪವಯಣಗಣಣಾಣಭತ್ತಿಸಂಪಣ್ಣೋ ।
ಬಂಧದಿ ಪುಣ್ಣಂ ಬಹುಸೋ ಣ ಹು ಸೋ ಕಮ್ಮಕ್ಖಯಂ ಕುಣದಿ ॥೧೬೬॥

ಅರ್ಹತ್ಸಿದ್ಧಚೈತ್ಯಪ್ರವಚನಗಣಜ್ಞಾನಭಕ್ತಿಸಂಪನ್ನಃ ।
ಬಧ್ನಾತಿ ಪುಣ್ಯಂ ಬಹುಸೋ ನ ಖಲು ಸ ಕರ್ಮಕ್ಷಯಂ ಕರೋತಿ ॥೧೬೬॥

ಕಾರಣವಾಗಿ 'ಪರಸಮಯರತ' [೧] ನೆಂದು ಕರೆಸಿಕೊಳ್ಳುತ್ತಾನೆ. ಎಂದ ಮೇಲೆ ನಿರಂಕುಶರಾಗರೂಪ ಕ್ಲೇಶದಿಂದ ಕಲಂಕಿತವಾದ ಅಂತರಂಗ ವೃತ್ತಿಯುಳ್ಳ ಇತರ ಜನರೇನು ಪರಸಮಯರತರೆಂದು ಕರೆಯಿಸಿಕೊಳ್ಳುವುದಿಲ್ಲ ? (ಅವಶ್ಯವಾಗಿಯೇ ಕರೆಯಿಸಿಕೊಳ್ಳುತ್ತಾರೆ.) [೨]

ಗಾಥೆ - ೧೬೬

ಗಾಥಾರ್ಥ :- [ಅರಹಂತಸಿದ್ಧಚೇದಿಯಪವಯಣಗಣಣಾಣಭತ್ತಿಸಂಪಣ್ಣೋ] ಅರಹಂತ, ಸಿದ್ಧ, ಚೈತ್ಯ (ಅರಹಂತಾದಿಗಳ ಪ್ರತಿಮೆ), ಪ್ರವಚನ (ಶಾಸ್ತ್ರ), ಮುನಿಗಣ ಮತ್ತು ಜ್ಞಾನದ ಕುರಿತು ಭಕ್ತಿ ಸಂಪನ್ನನಾದ ಜೀವನು [ಬಹುಸೋ ಪುಣ್ಣಂ ಬಂಧದಿ] ಬಹಳಷ್ಟು ಪುಣ್ಯವನ್ನು ಕಟ್ಟಿಕೊಳ್ಳುತ್ತಾನೆ, [ಣ ಹು ಸೋ ಕಮ್ಮಕ್ಖಯಂ ಕುಣದಿ] ಆದರೆ ವಾಸ್ತವಿಕವಾಗಿ ಅವನು ಕರ್ಮದ ಕ್ಷಯ ಮಾಡುವುದಿಲ್ಲ.

ಜೀವ ಜಿನ, ಸಿದ್ಧ, ಚೈತ್ಯ, ಪ್ರವಚನ, ಮುನಿಗಣ, ಜ್ಞಾನದ ಭಕ್ತಿ ಮಾಡಿದರೆ ।
ಅವನು ಬಹುಪುಣ್ಯಬದ್ಧನಾಗುವನಾದರೆ ಕರ್ಮಕ್ಷಯ ಮಾಡಲಾರನು ॥೧೬೬॥

---

೧. ಪರಸಮಯರತ = ಪರಸಮಯದಲ್ಲಿ ಅನುರಕ್ತ ; ಪರಸಮಯಸ್ಥಿತ; ಪರಸಮಯದತ್ತ ಒಲವುಳ್ಳವ; ಪರಸಮಯದಲ್ಲಿ ಆಸಕ್ತ.

೨. ಶ್ರೀ ಜಯಸೇನಾಚಾರ್ಯಕೃತ ಟೀಕೆಯಲ್ಲಿ ಈ ಗಾಥೆಯ ವಿವರಣೆ ಹೀಗಿದೆ - ಯಾವನೋ ಪುರುಷನು ನಿರ್ವಿಕಾರ ಶುದ್ಧಾತ್ಮಭಾವನಾಸ್ವರೂಪ ಪರಮೋಪೇಕ್ಷೆಯ ಸಂಯಮದಲ್ಲಿ ಸ್ಥಿರವಿರಲಪೇಕ್ಷಿಸುತ್ತಾನೆ, ಆದರೆ ಅದರಲ್ಲಿ ಸ್ಥಿರವಿರುವುದಕೆ ಅಶಕ್ತನಾಗಿ ವರ್ತಿಸುತ್ತ ಕಾಮಕ್ರೋಧಾದಿಗಳ ಅಶುಭ ಪರಿಣಾಮಗಳ ವಂಚನಾರ್ಥವಾಗಿ ಅಥವಾ ಸಂಸಾರಸ್ಥಿತಿಯ ವೇದನಾರ್ಥವಾಗಿ ಯಾವಾಗ ಪಂಚಪರಮೇಷ್ಠಿಗಳ ಕುರಿತು ಗುಣಸ್ತವನ ಮೊದಲಾದ ಭಕ್ತಿಯನ್ನು ಮಾಡುತ್ತಾನೆ ಆಗ ಅವನು ಸೂಕ್ಷ್ಮವಾದ ಪರಸಮಯರೂಪದಿಂದ ಪರಿಣತನಾಗಿ ವರ್ತಿಸುತ್ತ ಸರಾಗಸಮ್ಯಗ್ದೃಷ್ಟಿಯಿದ್ದಾನೆ ; ಮತ್ತು ಒಂದು ವೇಳೆ ಆ ಪುರುಷನು ಶುದ್ಧಾತ್ಮಭಾವನೆಯಲ್ಲಿ ಸಮರ್ಥನಾದ ಮೇಲೂ ಅದನ್ನು (ಶುದ್ಧಾತ್ಮಭಾವನೆಯನ್ನು) ಬಿಟ್ಟುಕೊಟ್ಟು 'ಶುಭೋಪಯೋಗದಿಂದಲೇ ಮೋಕ್ಷವಾಗುತ್ತದೆ'ಯೆಂಬ ಏಕಾಂತವನ್ನು ಮನ್ನಿಸಿದರೆ ಅವನು ಸ್ಥೂಲಪರಸಮಯರೂಪ ಪರಿಣಾಮದಿಂದ ಅಜ್ಞಾನಿ - ಮಿಥ್ಯಾದೃಷ್ಟಿಯಾಗುತ್ತಾನೆ.

ಉಕ್ತಶುದ್ಧಸಂಪ್ರಯೋಗಸ್ಯ ಕಥಂಚಿದ್ಬಂಧಹೇತುತ್ವೇನ ಮೋಕ್ಷಮಾರ್ಗತ್ವನಿರಾಸೋಽಯಮ್ ।

ಅರ್ಹದಾದಿಭಕ್ತಿಸಂಪನ್ನಃ ಕಥಂಚಿಚ್ಛುದ್ಧಸಂಪ್ರಯೋಗೋಽಪಿ ಸನ್ ಜೀವೋ ಜೀವದ್ರಾಗಲವತ್ವಾಚ್ಛುಭೋಪಯೋಗತಾಮಜಹತ್ ಬಹುಶಃ ಪುಣ್ಯಂ ಬಧ್ನಾತಿ, ನ ಖಲು ಸಕಲಕರ್ಮಕ್ಷಯಮಾರಭತೇ । ತತಃ ಸರ್ವತ್ರ ರಾಗಕಣಿಕಾಽಪಿ ಪರಿಹರಣೀಯಾ ಪರಸಮಯಪ್ರವೃತ್ತಿನಿಬಂಧನತ್ವಾದಿತಿ ।

ಜಸ್ಸ ಹಿದಏಣುಮೇತ್ತಂ ವಾ ಪರದವ್ವಮ್ಹಿ ವಿಜ್ಜದೇ ರಾಗೋ ।
ಸೋ ಣ ವಿಜಾಣದಿ ಸಮಯಂ ಸಗಸ್ಸ ಸವ್ವಾಗಮಧರೋ ವಿ ॥೧೬೭॥

ಯಸ್ಯ ಹೃದಯೇಽಣುಮಾತ್ರೋ ವಾ ಪರದ್ರವ್ಯೇ ವಿದ್ಯತೇ ರಾಗಃ ।
ಸ ನ ವಿಜಾನಾತಿ ಸಮಯಂ ಸ್ವಕಸ್ಯ ಸರ್ವಾಗಮಧರೋಽಪಿ ॥೧೬೭॥

ಸ್ವಸಮಯೋಪಲಂಭಾಭಾವಸ್ಯ ರಾಗೈಕಹೇತುತ್ವದ್ಯೋತನಮೇತತ್ ।

ಟೀಕೆ :- ಇಲ್ಲಿ ಮೊದಲು ಹೇಳಿದ ಶುದ್ಧಸಂಪ್ರಯೋಗಕ್ಕೆ ಕಥಂಚಿತ್ [೧] ಬಂಧಹೇತುತ್ವವಿರುವುದರಿಂದ ಅದರ ಮೋಕ್ಷಮಾರ್ಗತ್ವವನ್ನು ನಿರಸ್ತ [೨] ಮಾಡಿದೆ (ಎಂದರೆ ಜ್ಞಾನಿಗೆ ವರ್ತಿಸುತ್ತಿರುವ ಶುದ್ಧಸಂಪ್ರಯೋಗವು ನಿಶ್ಚಯದಿಂದಬಂಧಹೇತುಭೂತವಾಗಿರುವ ಕಾರಣ ಅದು ಮೋಕ್ಷಮಾರ್ಗವಲ್ಲವೆಂದು ಇಲ್ಲಿ ತಿಳಿಸಿದೆ.)

ಅರಹಂತ ಮೊದಲಾದವರ ಕುರಿತು ಭಕ್ತಿಸಂಪನ್ನನಾದ ಜೀವನು ಕಥಂಚಿತ್ 'ಶುದ್ಧ ಸಂಪ್ರಯೋಗಯುಕ್ತ [೩] ನಿದ್ದರೂ ಅಲ್ಪರಾಗವು ಜೀವಿತ (ವಿದ್ಯಮಾನ)ವಿರುವುದರಿಂದ 'ಶುಭೋಪಯೋಗತನ'ವನ್ನು ಬಿಟ್ಟುಕೊಡದೆ ಬಹಳಷ್ಟು ಪುಣ್ಯಕ್ಕೆ ಬದ್ಧನಾಗುತ್ತಾನೆ, ಆದರೆ ವಾಸ್ತವವಾಗಿ ಎಲ್ಲ ಕರ್ಮದ ಕ್ಷಯಮಾಡುವುದಿಲ್ಲ. ಅದಕ್ಕಾಗಿ ರಾಗದ ಕಣವನ್ನೂ ಕೂಡ ಯಾವಾಗಲೂ ಬಿಟ್ಟುಕೊಡುವುದು ಯೋಗ್ಯವಿದೆ, ಏಕೆಂದರೆ ಅದು ಪರಸಮಯಪ್ರವೃತ್ತಿಗೆ ಕಾರಣವಿದೆ.

ಯಾವನಿಗೆ ಪರದ್ರವ್ಯದ ಕುರಿತು ಹೃದಯದಿ ಅಣುಮಾತ್ರರಾಗವಿಹುದು ।
ಅವನು ಸರ್ವಾಗಮಧಾರಿಯಿದ್ದರೂ ನಿಜಸಮಯವನು ತಿಳಿಯನು ॥೧೬೭॥

---

೧. ಕಥಂಚಿತ್ = ಯಾವುದೇ ಪ್ರಕಾರದಿಂದ ; ಯಾವುದೇ ಒಂದು ಅಪೇಕ್ಷೆಯಿಂದ (ಎಂದರೆ ನಿಶ್ಚಯನಯದ ಅಪೇಕ್ಷೆಯಿಂದ) [ಜ್ಞಾನಿಗೆ ವರ್ತಿಸುತ್ತಿರುವ ಶುದ್ಧಸಂಪ್ರಯೋಗಕ್ಕೆ ಕದಾಚಿತ್ ವ್ಯವಹಾರದಿಂದ ಮೋಕ್ಷದ ಪರಂಪರಾಹೇತುವೆಂದು ಹೇಳಬಹುದು, ಆದರೆ ನಿಶ್ಚಯದಿಂದಂತೂ ಅದು ಬಂಧಹೇತುವೇ ಇದೆ, ಏಕೆಂದರೆ ಅಶುದ್ಧಿರೂಪದ ಅಂಶವಿದೆ.]

೨. ನಿರಸ್ತ ಮಾಡುವುದು = ಖಂಡಿತಗೊಳಿಸುವುದು ; ನಿಷಿದ್ಧಮಾಡುವುದು ; ತೆಗೆದುಹಾಕುವುದು.

೩. ಸಿದ್ಧಿಯ ನಿಮಿತ್ತಭೂತವಾದಂಥ ಅರಹಂತಾದಿಗಳ ಕುರಿತಾದ ಭಕ್ತಿಭಾವಕ್ಕೆ ಶುದ್ಧಸಂಪ್ರಯೋಗವೆಂದು ಮೊದಲು ಹೇಳಿತ್ತು. ಅದರಲ್ಲಿ 'ಶುದ್ಧ' ಶಬ್ದವಿದ್ದರೂ ಅದು 'ಶುಭ' ಉಪಯೋಗರೂಪವಾದ ರಾಗ ಭಾವವಿದೆ. ['ಶುಭ' ಎಂಬ ಅರ್ಥದಲ್ಲಿ ಯಾವ ಪ್ರಕಾರ ಕದಾಚಿತ್ 'ವಿಶುದ್ಧ' ಶಬ್ದದ ಪ್ರಯೋಗವಾಗುತ್ತದೆ ಅದೇ ಪ್ರಕಾರ ಇಲ್ಲಿ 'ಶುದ್ಧ' ಶಬ್ದದ ಪ್ರಯೋಗವಾಗಿದೆ.]

ಯಸ್ಯ ಖಲು ರಾಗರೇಣುಕಣಿಕಾऽಪಿ ಜೀವತಿ ಹೃದಯೇ ನ ನಾಮ ಸ ಸಮಸ್ತಸಿದ್ಧಾಂತಸಿಂಧುಪಾರಗೋऽಪಿ ನಿರುಪರಾಗಶುದ್ಧಸ್ವರೂಪಂ ಸ್ವಸಮಯಂ ಚೇತಯತೇ। ತತಃ ಸ್ವಸಮಯಪ್ರಸಿದ್ಧ್ಯರ್ಥಂ ಪಿಂಜನಲಗ್ನತೂಲನ್ಯಾಸ-ನ್ಯಾಯಮಧಿದಧತಾऽರ್ಹದಾದಿವಿಷಯೋऽಪಿ ಕ್ರಮೇಣ ರಾಗರೇಣುರಪಸಾರಣೀಯ ಇತಿ।

ಧರಿದುಂ ಜಸ್ಸ ಣ ಸಕ್ಕಂ ಚಿತ್ತುಬ್ಭಾಮಂ ವಿಣಾ ದು ಅಪ್ಪಾಣಂ।
ರೋಧೋ ತಸ್ಸ ಣ ವಿಜ್ಜದಿ ಸುಹಾಸುಹಕದಸ್ಸ ಕಮ್ಮಸ್ಸ ॥೧೬೮॥

ಧರ್ತುಂ ಯಸ್ಯ ನ ಶಕ್ಯಮ್ ಚಿತ್ತೋದ್ಭ್ರಮಂ ವಿನಾ ತ್ವಾತ್ಮಾನಮ್।
ರೋಧಸ್ತಸ್ಯ ನ ವಿದ್ಯತೇ ಶುಭಾಶುಭಕೃತಸ್ಯ ಕರ್ಮಣಃ ॥೧೬೮॥

ರಾಗಲವಮೂಲದೋಷಪರಂಪರಾಖ್ಯಾನಮೇತತ್।

ಗಾಥೆ - ೧೬೭

ಗಾಥಾರ್ಥ :- [ಜಸ್ಸ] ಯಾವನಿಗೆ [ಪರದವ್ವಮ್ಹಿ] ಪರದ್ರವ್ಯದ ಕುರಿತು [ಅಣುಮೇತ್ತಂ] ಅಣುಮಾತ್ರವಾದರೂ (ತಿಲಮಾತ್ರವಾದರೂ) [ರಾಗೋ] ಪ್ರೀತಿಯು [ಹಿದಏ ವಿಜ್ಜದೇ] ಹೃದಯದಲ್ಲಿ ವರ್ತಿಸುತ್ತಿದ್ದರೆ [ಸೋ] ಅವನು [ಸವ್ವಾಗಮಧರೋ ವಿ] ಬೇಕಾದರೆ ಎಲ್ಲ ಆಗಮಗಳ ಧಾರಿಯಾಗಿದ್ದರೂ [ಸಗಸ್ಸ ಸಮಯಂ ಣ ವಿಜಾಣದಿ] ತನ್ನ ಸಮಯವನ್ನು ತಿಳಿಯುವುದಿಲ್ಲ (ಅನುಭವ ಪಡೆಯುವುದಿಲ್ಲ).

ಟೀಕೆ :- ಇಲ್ಲಿ ಸ್ವಸಮಯದ ಉಪಲಬ್ಧಿಯ ಅಭಾವಕ್ಕೆ ರಾಗವು ಒಂದು ಹೇತುವಿದೆಯೆಂದು ಪ್ರಕಟಪಡಿಸಿದೆ (ಎಂದರೆ ಸಮಯದ ಪ್ರಾಪ್ತಿಯ ಅಭಾವಕ್ಕೆ ರಾಗವೇ ಒಂದು ಕಾರಣವಿದೆಯೆಂದು ಇಲ್ಲಿ ತಿಳಿಸಿದೆ.)

ಯಾವನಿಗೆ ರಾಗರೇಣುವಿನ ಒಂದು ಕಣವೂ ಹೃದಯದಲ್ಲಿ ಜೀವಂತವಿದೆ ಅವನು ಬೇಕಾದರೆ ಸಮಸ್ತ ಸಿದ್ಧಾಂತಸಾಗರದ ಪಾರಾಂಗತನಿದ್ದರೂ ನಿರುಪರಾಗ-ಶುದ್ಧಸ್ವರೂಪ[೧] ಸ್ವಸಮಯವನ್ನು ವಾಸ್ತವಿಕವಾಗಿ ಚೇತಿಸುವುದಿಲ್ಲ (ಅನುಭವಿಸುವುದಿಲ್ಲ). ಅದಕ್ಕಾಗಿ ಪಿಂಜನಕ್ಕೆ[೨] ಮೆತ್ತಿಕೊಂಡ ಅರಳೆಯ ನ್ಯಾಯವು ಇಲ್ಲಿ ಅನ್ವಯಿಸುವುದರಿಂದ ಜೀವಕ್ಕೆ ಸ್ವಸಮಯದ ಪ್ರಸಿದ್ಧಿಯ ಹೇತುವಾಗಿ ಅರಹಂತಾದಿಗಳ ವಿಷಯವಾಗಿರುವ ರಾಗರೇಣುವನ್ನೂ (ಅರಹಂತಾದಿಗಳ ಕಡೆಗಿರುವ ರಾಗರಜಸ್ಸನ್ನೂ) ಕ್ರಮದಿಂದ ದೂರ ಮಾಡುವುದು ಯೋಗ್ಯವಾಗಿದೆ.

ಯಾವನಿಗೆ ತನ್ನನು ಚಿತ್ತದಭ್ರಮಣವಿಲ್ಲದೆಯಿಡುವ ಸಾಧ್ಯತೆಯಿಲ್ಲ।
ಅವನಿಗೆ ಶುಭವಿಲ್ಲವೆ ಅಶುಭ ಕರ್ಮಗಳ ನಿರೋಧವಿರುವುದಿಲ್ಲ ॥೧೬೮॥

---

೧. ನಿರುಪರಾಗ - ಶುದ್ಧಸ್ವರೂಪ ಉಪರಾಗವಿಲ್ಲದ (ನಿರ್ವಿಕಾರ) ಶುದ್ಧವು ಸ್ವರೂಪವಿರುವಂಥದು.

೨. ಯಾವ ಪ್ರಕಾರ ಪಿಂಜನಕ್ಕೆ ಮೆತ್ತಿಕೊಂಡ ಸ್ವಲ್ಪವೇ ಅರಳೆಯು ಪಿಂಜನದ ಕಾರ್ಯದಲ್ಲಿ ವಿಘ್ನವನ್ನುಂಟು ಮಾಡುತ್ತದೆ ಅದೇ ಪ್ರಕಾರ ಸ್ವಲ್ಪವೇ ಇರುವ ರಾಗವು ಸ್ವಸಮಯದ ಉಪಲಬ್ಧರೂಪ ಕಾರ್ಯದಲ್ಲಿ ವಿಘ್ನವನ್ನುಂಟು ಮಾಡುತ್ತದೆ.

ಇಹ ಖಲ್ವರ್ಹದಾದಿಭಕ್ತಿರಪಿ ನ ರಾಗಾನುವೃತ್ತಿಮಂತರೇಣ ಭವತಿ । ರಾಗಾದ್ಯನುವೃತ್ತೌಚ ಸತ್ಯಾಂ ಬುದ್ಧಿಪ್ರಸರಮಂತರೇಣಾತ್ಮಾ ನ ತಂ ಕಥಂಚನಾಪಿ ಧಾರಯಿತುಂ ಶಕ್ಯತೇ । ಬುದ್ಧಿಪ್ರಸರೇ ಚ ಸತಿ ಶುಭಸ್ಯಾಶುಭಸ್ಯ ವಾ ಕರ್ಮಣೋ ನ ನಿರೋಧೋऽಸ್ತಿ । ತತೋ ರಾಗಕಲಿವಿಲಾಸಮೂಲ ಏವಾಯಮನರ್ಥಸಂತಾನ ಇತಿ ।

ತಮ್ಹಾ ಣಿವ್ವುದಿಕಾಮೋ ಣಿಸ್ಸಂಗೋ ಣಿಮ್ಮಮೋ ಯ ಹವಿಯ ಪುಣೋ ।
ಸಿದ್ಧೇಸು ಕುಣದಿ ಭತ್ತಿಂ ಣಿವ್ವಾಣಂ ತೇಣ ಪಪ್ಪೋದಿ ॥೧೬೯॥

ಗಾಥೆ - ೧೬೯

ಗಾಥಾರ್ಥ ಃ- [ಜಸ್ಸ] ಯಾವನಿಗೆ [ಅಪ್ಪಾಣಂ] ತನ್ನನ್ನು [ಚಿತ್ತುಬ್ಭಾಮಂ ವಿಣಾ ದು] (ರಾಗದ ಸದ್ಭಾವದ ಕಾರಣ) ಚಿತ್ತದ ಭ್ರಮಣವಿಲ್ಲದೆ [ಧರಿದುಂ ಣ ಸಕ್ಕಂ] ಇಡುವ ಸಾಧ್ಯತೆಯಿಲ್ಲ, [ತಸ್ಸ] ಅವನಿಗೆ [ಸುಹಾಸುಹಕದಸ್ಸ ಕಮ್ಮಸ್ಸ] ಶುಭಾಶುಭಕರ್ಮದ [ರೋಧೋ ಣ ವಿಜ್ಜದಿ] ನಿರೋಧವಿಲ್ಲ.

ಟೀಕೆ ಃ- ಇದು ಅಲ್ಪರಾಗದ ಮೂಲಕದೋಷಪರಂಪರೆಯ ನಿರೂಪಣೆಯಿದೆ (ಎಂದರೆ ಅಲ್ಪರಾಗವು ಮೂಲವಿರುವಂಥ ದೋಷಗಳ ಸಂತತಿಯ ಕಥನವು ಇಲ್ಲಿದೆ.)

ಇಲ್ಲಿ (ಈ ಲೋಕದಲ್ಲಿ) ವಾಸ್ತವಿಕವಾಗಿ ಅರಹಂತಾದಿಗಳ ಭಕ್ತಿಯೂ ರಾಗ ಪರಿಣತಿಯಿಲ್ಲದೆ ಆಗುವುದಿಲ್ಲ. ರಾಗಾದಿಗಳ ಪರಿಣತಿಯಿರುವುದರಿಂದ ಆತ್ಮನು ಬುದ್ಧಿಪ್ರಸಾರ [೩] ವಿಲ್ಲದ (ಚಿತ್ತದ ಭ್ರಮಣದಿಂದ ರಹಿತನಾಗಿ) ತನ್ನನ್ನು ಯಾವುದೇ ಪ್ರಕಾರದಿಂದ ಇಡುವ ಸಾಧ್ಯತೆಯಿಲ್ಲ ; ಮತ್ತು ಬುದ್ಧಿ ಪ್ರಸಾರವಿರುವುದರಿಂದ (ಚಿತ್ತದ ಭ್ರಮಣವಿರುವುದರಿಂದ) ಶುಭ ಹಾಗೂ ಅಶುಭ ಕರ್ಮಗಳ ನಿರೋಧವಾಗುವುದಿಲ್ಲ. ಆದುದರಿಂದ ಈ ಅನರ್ಥ ಸಂತತಿಯ ಮೂಲವು ರಾಗರೂಪವಾದ ಕ್ಲೇಶದ ವಿಲಾಸವೇ ಇದೆ.

ಭಾವಾರ್ಥ ಃ- ಅರಹಂತ ಮೊದಲಾದವರ ಭಕ್ತಿಯೂ ರಾಗರಹಿತವಾಗಿರುವುದಿಲ್ಲ, ರಾಗದಿಂದ ಚಿತ್ತದ ಭ್ರಮಣವಾಗುತ್ತದೆ ಚಿತ್ತದ ಭ್ರಮಣದಿಂದ ಕರ್ಮಬಂಧವಾಗುತ್ತದೆ. ಆದುದರಿಂದ ಈ ಎಲ್ಲ ಅನರ್ಥಗಳ ಪರಂಪರೆಗೆ ಮೂಲಕಾರಣವು ರಾಗವೇ ಇದೆ.[೧]

ಅದರಿಂದ ಮೋಕ್ಷಾರ್ಥಿಯಾದ ಜೀವ ನಿಃಸಂಗಮತ್ತದರಂತೆ ನಿರ್ಮಮನಾಗಿ ।
ಸಿದ್ಧರ ಭಕ್ತಿ ಮಾಡುವುದರಿಂದವನು ನಿರ್ವಾಣವನು ಪಡೆಯುವನು ॥೧೬೯॥

---

೩. ಬುದ್ಧಿಪ್ರಸಾರ = ವಿಕಲ್ಪಗಳ ವಿಸ್ತಾರ ; ಚಿತ್ತದ ಭ್ರಮಣ ; ಮನಸ್ಸಿನ ಸುತ್ತುವಿಕೆ ; ಮನಸ್ಸಿನ ಚಂಚಲತೆ.

೧. ಶ್ರೀ ಜಯಸೇನಾಚಾರ್ಯದೇವ ವಿರಚಿತ ಟೀಕೆಯಲ್ಲಿ ಈ ಗಾಥೆಯ ವಿವರಣೆಯು ಈ ಕೆಳಗಿನಂತಿದೆ,-

ಕೇವಲ ನಿತ್ಯಾನಂದವು ಯಾರ ಸ್ವಭಾವವಿದೆ ಅಂಥ ನಿಜಾತ್ಮನನ್ನು ಯಾವ ಜೀವನು ಭಾವಿಸುವುದಿಲ್ಲ, ಆ ಜೀವಕ್ಕೆ ಮಾಯೆ-ಮಿಥ್ಯೆ-ನಿದಾನಶಲ್ಯತ್ರಯಾದಿಗಳ ಸಮಸ್ತವಿಭಾವರೂಪ ಬುದ್ಧಿಪ್ರಸಾರವು ತಡೆಯಲ್ಪಡುವುದಿಲ್ಲ ಮತ್ತು ಅದು ನಿಲ್ಲದಿದ್ದರೆ (ಎಂದರೆ ಬುದ್ಧಿಪ್ರಸಾರದ ನಿರೋಧವಾಗದಿರುವುದರಿಂದ) ಶುಭಾಶುಭ ಕರ್ಮದ ಸಂವರವಾಗುವುದಿಲ್ಲ ; ಅದಕ್ಕಾಗಿ ಎಲ್ಲ ಅನರ್ಥಪರಂಪರೆಗಳಿಗೆ ರಾಗಾದಿಗಳ ವಿಕಲ್ಪವೇ ಮೂಲವಿದೆಯೆಂದು ಸಿದ್ಧವಾಯಿತು.

ತಸ್ಮಾನ್ನಿವೃತ್ತಿಕಾಮೋ ನಿಸ್ಸಂಗೋ ನಿರ್ಮಮಶ್ಚ ಭೂತ್ವಾ ಪುನಃ ।
ಸಿದ್ಧೇಷು ಕರೋತಿ ಭಕ್ತಿಂ ನಿರ್ವಾಣಂ ತೇನ ಪ್ರಾಪ್ನೋತಿ ॥೧೬೯॥

ರಾಗಕಲಿನಿಃಶೇಷೀಕರಣಸ್ಯ ಕರಣೀಯತ್ವಾಖ್ಯಾನಮೇತತ್ ।

ಯತೋ ರಾಗಾದ್ಯನುವೃತ್ತೌ ಚಿತ್ತೋದ್ಭ್ರಾಂತಿಃ, ಚಿತ್ತೋದ್ಭ್ರಾಂತೌ ಕರ್ಮಬಂಧ ಇತ್ಯುಕ್ತಮ್ ತತಃ ಖಲು ಮೋಕ್ಷಾರ್ಥಿನಾ ಕರ್ಮಬಂಧಮೂಲಚಿತ್ತೋದ್ಭ್ರಾಂತಿಮೂಲಭೂತಾ ರಾಗಾದ್ಯನುವೃತ್ತಿರೇಕಾಂತೇನ ನಿಃಶೇಷೀಕರಣೀಯಾ । ನಿಃಶೇಷಿತಾಯಾಂ ತಸ್ಯಾಂ ಪ್ರಸಿದ್ಧನೈಃಸಂಗ್ಯನೈರ್ಮಮ್ಯಃ ಶುದ್ಧಾತ್ಮದ್ರವ್ಯವಿಶ್ರಾಂತಿರೂಪಾಂ ಪಾರಮಾರ್ಥಿಕೀಂ ಸಿದ್ಧಭಕ್ತಿಮನುಬಿಭ್ರಾಣಃ ಪ್ರಸಿದ್ಧಸ್ವಸಮಯಪ್ರವೃತ್ತಿರ್ಭವತಿ । ತೇನ ಕಾರಣೇನ ಸ ಏವ ನಿಃಶೇಷಿತಕರ್ಮಬಂಧಃ ಸಿದ್ಧಿಮವಾಪ್ನೋತೀತಿ ।

ಗಾಥೆ - ೧೬೯

ಗಾಥಾರ್ಥ ಃ- [ತಮ್ಹಾ] ಅದಕ್ಕಾಗಿ [ಣಿವ್ವುದಿಕಾಮೋ] ಮೋಕ್ಷಾರ್ಥಿಯಾದ ಜೀವನು [ಣಿಸ್ಸಂಗೋ] ನಿಸ್ಸಂಗ [ಯ] ಮತ್ತು [ಣಿಮ್ಮಮೋ] ನಿರ್ಮಮನು [ಹವಿಯ ಪುಣೋ] ಆಗಿ [ಸಿದ್ಧೇಸು ಭತ್ತಿಂ] ಸಿದ್ಧರ ಭಕ್ತಿಯನ್ನು (ಶುದ್ಧಾತ್ಮದ್ರವ್ಯದಲ್ಲಿ ಸ್ಥಿರತೆಯರೂಪದ ಪಾರಮಾರ್ಥಿಕ ಸಿದ್ಧಭಕ್ತಿಯನ್ನು) [ಕುಣದಿ] ಮಾಡುತ್ತಾನೆ, [ತೇಣ] ಅದರಿಂದ ಅವನು [ಣಿವ್ವಾಣಂ ಪಪ್ಪೋದಿ] ನಿರ್ವಾಣಕ್ಕೆ ಪ್ರಾಪ್ತನಾಗುತ್ತಾನೆ.

ಟೀಕೆ ಃ- ಇದು ರಾಗರೂಪವಾದ ಕ್ಲೇಶವು ಸಂಪೂರ್ಣವಾಗಿ ನಾಶ ಮಾಡಲು ಯೋಗ್ಯವಿರುವುದರ ನಿರೂಪಣೆಯಿದೆ.

ರಾಗಾದಿಗಳ ಪರಿಣತಿಯಾಗುವುದರಿಂದ ಚಿತ್ತದ ಭ್ರಮಣವಾಗುತ್ತದೆ ಮತ್ತು ಚಿತ್ತದ ಭ್ರಮಣವಾಗುವು-ದರಿಂದ ಕರ್ಮದ ಬಂಧವಾಗುತ್ತದೆಯೆಂದು (ಮೊದಲು) ಹೇಳಲಾಗಿದೆ, ಅದಕ್ಕಾಗಿ ಮೋಕ್ಷಾರ್ಥಿಗೆ ಕರ್ಮಬಂಧದ ಮೂಲವಾದಂಥ ಆ ಚಿತ್ತದ ಭ್ರಮಣಕ್ಕೆ ಮೂಲಭೂತವಾದ ರಾಗಾದಿಪರಿಣತಿಯನ್ನು ಸರ್ವಥಾ ಸಂಪೂರ್ಣವಾಗಿ ನಾಶ ಮಾಡಲು ಯೋಗ್ಯವಿದೆ. ಅದರ ನಾಶವನ್ನು ನಿಃಶೇಷವಾಗಿ ಮಾಡುವುದರಿಂದ ಅವನಿಗೆ ನಿಃಸಂಗತಿ [೧] ಮತ್ತು ನಿರ್ಮಮತೆಯು [೨] ಪ್ರಸಿದ್ಧವಾಗಿರುವಂಥ ಆ ಜೀವನು ಶುದ್ಧಾತ್ಮದ್ರವ್ಯದಲ್ಲಿ ವಿಶ್ರಾಂತಿರೂಪ ಪಾರಮಾರ್ಥಿಕ ಸಿದ್ಧ ಭಕ್ತಿಯನ್ನು ಧಾರಣ ಮಾಡುತ್ತ ಸ್ವಸಮಯ ಪ್ರವೃತ್ತಿಯ ಪ್ರಸಿದ್ಧಿಗೆ [೩] ಪ್ರಾಪ್ತನಾಗುತ್ತಾನೆ. ಆ ಕಾರಣದಿಂದ ಆ ಜೀವನು ನಿಃಶೇಷವಾಗಿ ಕರ್ಮಬಂಧದ ನಾಶ ಮಾಡಿ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ.

---

೧. ನಿಃಸಂಗ-ಆತ್ಮತತ್ತ್ವದಿಂದ ವಿಪರೀತವಾದಂಥ ಯಾವ ಬಾಹ್ಯ-ಅಭ್ಯಂತರ ಪರಿಗ್ರಹಗಳಿವೆ ಅವುಗಳಿಂದ ರಹಿತವಾದ ಪರಿಣತಿಯು ಅದು ನಿಃಸಂಗತೆಯಿದೆ.

೨. ರಾಗಾದಿ-ಉಪಾಧಿಗಳಿಂದ ರಹಿತವಾದ ಚೈತನ್ಯ ಪ್ರಕಾಶವು ಯಾವುದರ ಲಕ್ಷಣವಿದೆ ಅಂಥ ಆತ್ಮತತ್ತ್ವದಿಂದ ವಿಪರೀತವಾದ ಮೋಹೋದಯದ ಉತ್ಪತ್ತಿಯಲ್ಲಿ ನಿಮಿತ್ತಭೂತವಾದಂಥ ಮಮಕಾರ-ಅಹಂಕಾರಾದಿರೂಪ ವಿಕಲ್ಪಸಮೂಹದಿಂದ ರಹಿತವಾದಂಥ ನಿರ್ಮೋಹ ಪರಿಣತಿಯು ಅದು ನಿರ್ಮಮತೆಯಿದೆ.

೩. ಸ್ವಸಮಯಪ್ರವೃತ್ತಿಯ ಪ್ರಸಿದ್ಧಿಯುಳ್ಳವ = ಯಾವನಿಗೆ ಸ್ವಸಮಯದಲ್ಲಿ ಪ್ರವೃತ್ತಿಯು ಪ್ರಸಿದ್ಧವಾಗಿದೆ. [ಯಾವ ಜೀವನು ಸಂಪೂರ್ಣವಾಗಿ ರಾಗಾದಿ ಪರಿಣತಿಯ ನಾಶ ಮಾಡಿ ನಿಸ್ಸಂಗ ಮತ್ತು ನಿರ್ಮಮನಾಗಿದ್ದಾನೆ ಅಲ್ಲಿ ಪರಮಾರ್ಥಸಿದ್ಧಭಕ್ತಿವಂತ ಜೀವನು ಸ್ವಸಮಯದಲ್ಲಿ ಪ್ರವೃತ್ತಿಯನ್ನು ಸಿದ್ಧ ಮಾಡಿರುವುದರಿಂದ ಸ್ವಸಮಯಪ್ರವೃತ್ತಿಯ ಕಾರಣ ಅದೇ ಜೀವನು ಕರ್ಮಬಂಧದ ನಾಶ ಮಾಡಿ ಮೋಕ್ಷವನ್ನು ಪಡೆದುಕೊಳ್ಳುತ್ತಾನೆ. ಇತರರಿಲ್ಲ.]

ಸಪಯತ್ಥಂ ತಿತ್ಥಯರಂ ಅಭಿಗದಬುದ್ಧಿಸ್ಸ ಸುತ್ತರೋಇಸ್ಸ ।
ದೂರತರಂ ಣಿವ್ವಾಣಂ ಸಂಜಮತವಸಂಪಉತ್ತಸ್ಸ ॥೧೭೦॥

ಸಪದಾರ್ಥಂ ತೀರ್ಥಂಕರಮಭಿಗತಬುದ್ಧೇಃ ಸೂತ್ರರೋಚಿನಃ ।
ದೂರತರಂ ನಿರ್ವಾಣಂ ಸಂಯಮತಪಃಸಂಪ್ರಯುಕ್ತಸ್ಯ ॥೧೭೦॥

ಅರ್ಹದಾದಿಭಕ್ತಿರೂಪಪರಸಮಯಪ್ರವೃತ್ತೇಃ ಸಾಕ್ಷಾನ್ಮೋಕ್ಷಹೇತುತ್ವಾಭಾವೇಽಪಿ ಪರಂಪರಯಾ ಮೋಕ್ಷಹೇತುತ್ವಸದ್ಭಾವದ್ಯೋತನಮೇತತ್ ।

ಯಃ ಖಲು ಮೋಕ್ಷಾರ್ಥಮುದ್ಯತಮನಾಃ ಸಮುಪಾರ್ಜಿತಾಚಿಂತ್ಯಸಂಯಮತಪೋಭಾರೋಽಪ್ಯ-ಸಂಭಾವಿತಪರಮವೈರಾಗ್ಯಭೂಮಿಕಾಧಿರೋಹಣಸಮರ್ಥಪ್ರಭುಶಕ್ತಿಃ ಪಿಂಜನಲಗ್ನತೂಲನ್ಯಾಸನ್ಯಾಯೇನ ನವಪದಾರ್ಥೈಃ ಸಹಾರ್ಹದಾದಿರುಚಿರೂಪಾಂ ಪರಸಮಯಪ್ರವೃತ್ತಿಂ ಪರಿತ್ಯಕ್ತುಂನೋತ್ಸಹತೇ, ಸ ಖಲು ನ ನಾಮ ಸಾಕ್ಷಾನ್ಮೋಕ್ಷಂ ಲಭತೇ, ಕಿಂತು ಸುರಲೋಕಾದಿಕ್ಲೇಶಪ್ರಾಪ್ತಿರೂಪಯಾ ಪರಂಪರಯಾ ತಮವಾಪ್ನೋತಿ ।

ಗಾಥೆ - ೧೭೦

ಗಾಥಾರ್ಥ ಃ- [ಸಂಜಮತವಸಂಪಉತ್ತಸ್ಸ] ಸಂಯಮತಪಸಂಯುಕ್ತನಾಗಿದ್ದರೂ ಕೂಡ [ಸಪಯತ್ಥಂ ತಿತ್ಥಯರಂ] ಒಂಬತ್ತು ಪದಾರ್ಥಗಳ ಹಾಗೂ ತೀರ್ಥಂಕರರ ಕುರಿತು [ಅಭಿಗದಬುದ್ಧಿಸ್ಸ] ಯಾವನ ಬುದ್ಧಿಯ ಒಲವು ವರ್ತಿಸುತ್ತಿದೆ ಮತ್ತು [ಸುತ್ತರೋಇಸ್ಸ] ಸೂತ್ರಗಳ ಕುರಿತು ಯಾವನಿಗೆ ರುಚಿ (ಪ್ರೀತಿ)ಯು ವರ್ತಿಸುತ್ತಿದೆ ಆ ಜೀವಕ್ಕೆ [ಣಿವ್ವಾಣಂ] ನಿರ್ವಾಣವು [ದೂರತರಂ] ದೂರತರ (ವಿಶೇಷ ದೂರ)ವಿದೆ.

ಟೀಕೆ ಃ- ಇಲ್ಲಿ ಅರಹಂತಾದಿಗಳ ಭಕ್ತಿರೂಪವಾದ ಪರಸಮಯಪ್ರವೃತ್ತಿಯಲ್ಲಿ ಸಾಕ್ಷಾತ್ ಮೋಕ್ಷ ಹೇತುತ್ವದ ಅಭಾವವಿದ್ದರೂ ಪರಂಪರೆಯಿಂದ ಮೋಕ್ಷ ಹೇತುತ್ವದ ಸದ್ಭಾವವನ್ನು [೧] ತಿಳಿಸಿಕೊಡಲಾಗಿದೆ.

ಯಾವನಿಗೆ ಸೂತ್ರ, ಪದಾರ್ಥ, ಜಿನವರರ ಕುರಿತು ಚಿತ್ತದಲಿ ಪ್ರೀತಿಯಿದೆ ।
ಅವನು ಸಂಯಮತಪಸಂಯುಕ್ತನಿದ್ದರೂ ನಿರ್ವಾಣವದುದೂರತರವಿದೆ ॥೧೭೦॥

---

೧. ಜ್ಞಾನಿಗೆ ಶುದ್ಧಾಶುದ್ಧರೂಪ ಮಿಶ್ರ ಪರ್ಯಾಯದಲ್ಲಿ ಯಾವ ಭಕ್ತಿ-ಮೊದಲಾದ ರೂಪದ ಶುಭ ಅಂಶವು ವರ್ತಿಸುತ್ತದೆ ಅದಂತೂ ಕೇವಲ ದೇವಲೋಕಾದಿಗಳ ಕ್ಲೇಶದ ಪರಂಪರೆಗೇ ಹೇತುವಿದೆ ಮತ್ತು ಅದರ ಜೊತೆಯಲ್ಲೇ ಜ್ಞಾನಿಗೆ ಯಾವ (ಮಂದಶುದ್ಧಿರೂಪ) ಶುದ್ಧ ಅಂಶವು ಪರಿಣಮಿಸುತ್ತದೆ ಅದು ಸಂವರ ನಿರ್ಜರೆಗೆ ಹಾಗೂ (ಅಷ್ಟು ಅಂಶದಲ್ಲಿ) ಮೋಕ್ಷದ ಹೇತುವಿದೆ. ನಿಜವಾಗಿ ಹೀಗಿದ್ದರೂ, ಶುದ್ಧ ಅಂಶದಲ್ಲಿ ಸ್ಥಿರವಾದ ಸಂವರ-ನಿರ್ಜರೆ-ಮೋಕ್ಷ ಹೇತುತ್ವದ ಆರೋಪವನ್ನು ಅದರ ಹತ್ತಿರದ ಭಕ್ತಿ-ಮೊದಲಾದ ರೂಪದ ಶುಭಅಂಶದಲ್ಲಿ ಮಾಡಿ ಆ ಶುಭ ಭಾವಗಳನ್ನು ದೇವಲೋಕಾದಿಗಳ ಕ್ಲೇಶದ ಪ್ರಾಪ್ತಿಯ ಪರಂಪರೆಯೊಡನೆ ಮೋಕ್ಷಪ್ರಾಪ್ತಿಗೆ ಹೇತುಭೂತವೆಂದು ಹೇಳಲಾಗಿದೆ. ಈ ಕಥನವನ್ನು ಉಪಚಾರದಿಂದ ಮಾಡಲಾಗಿದೆಯೆಂದು ತಿಳಿಯುವುದು. [ಇಂಥ ಕಥಂಚಿತ್ ಮೋಕ್ಷ ಹೇತುತ್ವದ ಆರೋಪವನ್ನೂ ಜ್ಞಾನಿಗೇ ವರ್ತಿಸುತ್ತಿರುವ ಭಕ್ತಿ-ಮೊದಲಾದ ರೂಪದ ಶುಭ ಭಾವಗಳಲ್ಲಿ ಮಾಡಲಾಗುತ್ತದೆ. ಅಜ್ಞಾನಿಗಂತೂ ಶುದ್ಧಿಯು ಅಂಶಮಾತ್ರವೂ ಪರಿಣಮನದಲ್ಲಿಲ್ಲದಿರುವುದರಿಂದ ಯಥಾರ್ಥ ಮೋಕ್ಷಹೇತುವು ಒಂದಿಷ್ಟೂ ಪ್ರಕಟವಾಗಿಯೇ ಇಲ್ಲ - ವಿದ್ಯಮಾನವೇ ಇಲ್ಲದಿದ್ದರೆ ಮತ್ತೆ ಅಲ್ಲಿ ಅದರ ಭಕ್ತಿ-ಮೊದಲಾದ ರೂಪದ ಶುಭಭಾವಗಳಲ್ಲಿ ಯಾವುದರ ಆರೋಪವನ್ನು ಮಾಡುವುದು?]

ಅರಹಂತಸಿದ್ಧಚೇದಿಯಪವಯಣಭತ್ತೋ ಪರೇಣ ಣಿಯಮೇಣ ।
ಜೋ ಕುಣದಿ ತವೋಕಮ್ಮಂ ಸೋ ಸುರಲೋಗಂ ಸಮಾದಿಯದಿ ॥೧೭೧॥

ಅರ್ಹತ್ಸಿದ್ಧಚೈತ್ಯಪ್ರವಚನಭಕ್ತಃ ಪರೇಣ ನಿಯಮೇನ ।
ಯಃ ಕರೋತಿ ತಪಃಕರ್ಮ ಸ ಸುರಲೋಕ ಸಮಾದತ್ತೇ ॥೧೭೧॥

ಯಾವ ಜೀವನು ನಿಜವಾಗಿ ಮೋಕ್ಷದ ಹೇತುವಿನಿಂದ ಉದ್ಯಮ ಚಿತ್ತವುಳ್ಳವನಾಗಿ ವರ್ತಿಸುತ್ತ ಅಚಿಂತ್ಯಸಂಯಮತಪಸ್ಸಿನ ಭಾರವನ್ನು ಪ್ರಾಪ್ತಮಾಡಿಕೊಂಡಿದ್ದರೂ ಪರಮವೈರಾಗ್ಯ ಭೂಮಿಕೆಯ ಆರೋಹಣ ಮಾಡುವಲ್ಲಿ ಸಮರ್ಥವಾದಂಥ ಪ್ರಭುಶಕ್ತಿಯು [೧] ಉತ್ಪನ್ನವಾಗದಿರುವುದರಿಂದ 'ಬಿಲ್ಲಿಗೆ ಅಂಟಿಕೊಂಡ ಅರಳೆ'ಯ ನ್ಯಾಯದಂತೆ ಒಂಭತ್ತು ಪದಾರ್ಥಗಳು ಹಾಗೂ ಅರಹಂತಾದಿಗಳ ರುಚಿರೂಪ (ಪ್ರೀತಿರೂಪ)ವಾದ ಪರಸಮಯ ಪ್ರವೃತ್ತಿಯ ಪರಿತ್ಯಾಗ ಮಾಡಲಾಗದ ಜೀವನು ವಾಸ್ತವಿಕವಾಗಿ ಪ್ರತ್ಯಕ್ಷ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳಲಾರನು; ಆದರೆ ದೇವಲೋಕಾದಿಗಳ ಕ್ಲೇಶದ ಪ್ರಾಪ್ತಿರೂಪ ಪರಂಪರೆಯಿಂದ ಅದನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಗಾಥೆ - ೧೭೧

ಗಾಥಾರ್ಥ :- [ಜೋ] ಯಾವನು (ಜೀವನು) [ಅರಹಂತಸಿದ್ಧಚೇದಿಯಪವಯಣಭತ್ತೋ] ಅರಹಂತ, ಸಿದ್ಧ, ಚೈತ್ಯ (ಅರಹಂತಾದಿಗಳ ಪ್ರತಿಮೆ) ಮತ್ತು ಪ್ರವಚನ (ಶಾಸ್ತ್ರ)ದ ಕುರಿತು ಭಕ್ತಿಯುಕ್ತನಾಗಿ ವರ್ತಿಸುತ್ತಾನೆ, [ಪರೇಣ ಣಿಯಮೇಣ] ಶ್ರೇಷ್ಠ ಸಂಯಮದೊಡನೆ [ತವೋಕಮ್ಮಂ] ತಪಸ್ಸಿನ ಕರ್ಮ (ತಪರೂಪಕಾರ್ಯ) [ಕುಣದಿ] ಮಾಡುತ್ತಾನೆ, [ಸೋ] ಅವನು [ಸುರಲೋಗಂ] ದೇವಲೋಕವನ್ನು [ಸಮಾದಿಯದಿ] ಪ್ರಾಪ್ತಮಾಡಿಕೊಳ್ಳುತ್ತಾನೆ.

ಅರಹಂತ, ಸಿದ್ಧ, ಚೈತ್ಯಮೇಣ್ ಪ್ರವಚನದ ಕುರಿತು ಭಕ್ತಿಯಿಂ ವರ್ತಿಸುತ್ತ ।
ಪರಮಸಂಯಮಸಹ ತಪಕರ್ಮಮಾಡುವ ಜೀವ ದೇವಲೋಕ ಪಡೆವನು ॥೧೭೧॥

---

೧. ಪ್ರಭುಶಕ್ತಿ = ಪ್ರಬಲಶಕ್ತಿ ; ಉಗ್ರಶಕ್ತಿ ; ಪ್ರಚುರಶಕ್ತಿ. [ಯಾವ ಜ್ಞಾನೀ ಜೀವನು ಪರಮ ಉದಾಸೀನತೆಯನ್ನು ಪ್ರಾಪ್ತ ಮಾಡಿಕೊಳ್ಳುವಲ್ಲಿ ಸಮರ್ಥವಾದಂಥ ಪ್ರಭುಶಕ್ತಿಯನ್ನು ಪಡೆದುಕೊಂಡಿಲ್ಲ ಆ ಜೀವನು ಕದಾಚಿತ್ ಶುದ್ಧಾತ್ಮಭಾವನೆಗೆ ಅನುಕೂಲ, ಜೀವಾದಿಪದಾರ್ಥಗಳ ಪ್ರತಿಪಾದನೆ ಮಾಡುವಂಥ ಆಗಮಗಳ ಕುರಿತು ರುಚಿ (ಪ್ರೀತಿ) ಮಾಡುತ್ತಾನೆ ; ಕದಾಚಿತ್ (ಯಾವ ಪ್ರಕಾರ ಯಾವನೋ ರಾಮಚಂದ್ರಾದಿ ಪುರುಷರು ದೇಶಾಂತರದಲ್ಲಿದ್ದ ಸೀತಾದಿ ಸ್ತ್ರೀಯರ ಹತ್ತಿರದಿಂದ ಬಂದಂಥ ಮನುಷ್ಯರನ್ನು ಪ್ರೀತಿಯಿಂದ ಕೇಳುತ್ತಾರೆ ಅವರ ಸನ್ಮಾನಾದಿಗಳನ್ನು ಮಾಡುತ್ತಾರೆ ಮತ್ತು ಅವರಿಗೆ ದಾನ ಕೊಡುತ್ತಾರೆ ಅದೇ ಪ್ರಕಾರ) ನಿರ್ದೋಷ-ಪರಮಾತ್ಮ ತೀರ್ಥಂಕರ ಪರಮದೇವರ ಮತ್ತು ಗಣಧರದೇವ-ಭರತ-ಸಗರ-ರಾಮ-ಪಾಂಡವಾದಿ ಮಹಾಪುರುಷರ ಚರಿತ್ರ ಪುರಾಣವನ್ನು ಶುಭಧರ್ಮಾನುರಾಗದಿಂದ ಕೇಳುತ್ತಾನೆ ಮತ್ತು ಕದಾಚಿತ್ ಗೃಹಸ್ಥಾವಸ್ಥೆಯಲ್ಲಿ ಭೇದಾಭೇದರತ್ನತ್ರಯ ಪರಿಣತರಾದ ಆಚಾರ್ಯ-ಉಪಾಧ್ಯಾಯ-ಸಾಧುಗಳ ಪೂಜಾದಿಗಳನ್ನು ಮಾಡುತ್ತಾನೆ ಮತ್ತು ಅವರಿಗೆ ದಾನ ಕೊಡುತ್ತಾನೆ - ಇತ್ಯಾದಿ ಶುಭಭಾವಗಳನ್ನು ಮಾಡುತ್ತಾನೆ. ಹೀಗೆ ಯಾವ ಜ್ಞಾನೀಜೀವನು ಶುಭರಾಗವನ್ನು ಸರ್ವಥಾ ಬಿಡುವುದಿಲ್ಲ ಅವನು ಸಾಕ್ಷಾತ್ ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುವುದಿಲ್ಲ ; ಆದರೆ ದೇವಲೋಕಾದಿಗಳ ಕ್ಲೇಶದ ಪರಂಪರೆಯನ್ನು ಪಡೆದು ಪುನಃ ಚರಮದೇಹದಿಂದ ನಿರ್ವಿಕಲ್ಪವಿಧಾನದಿಂದ ವಿಶುದ್ಧ ದರ್ಶನ ಜ್ಞಾನ ಸ್ವಭಾವವುಳ್ಳ ನಿಜಶುದ್ಧಾತ್ಮನಲ್ಲಿ ಸ್ಥಿರನಾಗಿ ಅದನ್ನು (ಮೋಕ್ಷವನ್ನು) ಪ್ರಾಪ್ತಮಾಡಿಕೊಳ್ಳುತ್ತಾನೆ.]

ಅರ್ಹದಾದಿಭಕ್ತಿಮಾತ್ರರಾಗಜನಿತಸಾಕ್ಷಾನ್ಮೋಕ್ಷಸ್ಯಾಂತರಾಯದ್ಯೋತನಮೇತತ್ ।

ಯಃ ಖಲ್ವರ್ಹದಾದಿಭಕ್ತಿ ವಿಧೇಯಬುದ್ಧಿಃ ಸನ್ ಪರಮಸಂಯಮಪ್ರಧಾನಮತಿತೀವ್ರಂ ತಪಸ್ತಪ್ಯತೇ, ಸ ತಾವನ್ಮಾತ್ರರಾಗಕಲಿಕಲಂಕಿತಸ್ವಾಂತಃ ಸಾಕ್ಷಾನ್ಮೋಕ್ಷಸ್ಯಾಂತರಾಯೀಭೂತಂ ವಿಷಯವಿಷದ್ರುಮಾಮೋದ-ಮೋಹಿತಾಂತರಂಗಂ ಸ್ವರ್ಗಲೋಕಂ ಸಮಾಸಾದ್ಯ , ಸುಚಿರಂ ರಾಗಾಂಗಾರೈಃಪಚ್ಯಮಾನೋಽಂತಸ್ತಾಮ್ಯತೀತಿ ।

ತಮ್ಹಾ ಣಿವ್ವುದಿಕಾಮೋ ರಾಗಂ ಸವ್ವತ್ಥ ಕುಣದು ಮಾ ಕಿಂಚಿ ।
ಸೋ ತೇಣ ವೀದರಾಗೋ ಭವಿಓ ಭವಸಾಯರಂ ತರದಿ ॥೧೭೨॥

ತಸ್ಮಾನ್ನಿರ್ವೃತ್ತಿಕಾಮೋ ರಾಗಂ ಸರ್ವತ್ರ ಕರೋತು ಮಾ ಕಿಂಚಿತ್ ।
ಸ ತೇನ ವೀತರಾಗೋ ಭವ್ಯೋ ಭವಸಾಗರಂ ತರತಿ ॥೧೭೨॥

ಟೀಕೆ :- ಇದು ಕೇವಲ ಅರಹಂತಾದಿಗಳ ಭಕ್ತಿಮಾತ್ರ ರಾಗದಿಂದ ಉತ್ಪನ್ನವಾಗುವಂಥ ಯಾವ ಸಾಕ್ಷಾತ್ ಮೋಕ್ಷದ ಅಂತರಾಯವಾಗುತ್ತದೆ ಅದರ ಪ್ರಕಟನೆಯಿದೆ.

ಯಾವನು (ಜೀವನು) ವಾಸ್ತವಿಕವಾಗಿ ಅರಹಂತಾದಿಗಳ ಭಕ್ತಿಯ ಆಧೀನ ಬುದ್ಧಿಯುಳ್ಳವನಾಗಿ ವರ್ತಿಸುತ್ತ, ಪರಮಸಂಯಮ ಪ್ರಧಾನ[೧] ಅತ್ಯಂತ ತೀವ್ರ ತಪಸ್ಸನ್ನಾಚರಿಸುತ್ತಾನೆ, ಅವನು (ಜೀವನು) ಅಷ್ಟು ಮಾತ್ರ ರಾಗರೂಪ ಕ್ಲೇಶದಿಂದ ಅವನ ನಿಜ ಅಂತಃಕರಣವು ಕಲಂಕಿತ (ಮಲಿನ)ವಾದಂತೆ ವರ್ತಿಸುತ್ತ, ವಿಷಯ ವಿಷವೃಕ್ಷದ ಆಮೋದದಿಂದ[೨] ಎಲ್ಲಿ ಅಂತರಂಗ (ಅಂತಃಕರಣ)ವು ಮೋಹಿತವಾಗುತ್ತದೆ ಅಂಥ ಸ್ವರ್ಗ ಲೋಕವನ್ನು - ಯಾವುದು ಪ್ರತ್ಯಕ್ಷ ಮೋಕ್ಷಕ್ಕೆ ಅಂತರಾಯಭೂತವಿದೆ ಅದನ್ನು - ಪ್ರಾಪ್ತಮಾಡಿಕೊಂಡು ಸುಚಿರಕಾಲದವರೆಗೆ (ಬಹಳಷ್ಟು ದೀರ್ಘಕಾಲದವರೆಗೆ) ರಾಗರೂಪದ ಬೆಂಕಿಯಿಂದ ಸುಟ್ಟುಹೋಗುತ್ತ ಅಂತರಂಗದಲ್ಲಿ ಸಂತಪ್ತ (ದುಃಖಿ, ವ್ಯಥಿತ)ನಾಗುತ್ತಾನೆ.

ಗಾಥೆ - ೧೭೨

ಗಾಥಾರ್ಥ :- [ತಮ್ಹಾ] ಅದಕ್ಕಾಗಿ [ಣಿವ್ವುದಿಕಾಮೋ] ಮೋಕ್ಷಾಭಿಲಾಷೆಯುಳ್ಳ ಜೀವನು [ಸವ್ವತ್ಥ] ಎಲ್ಲೆಡೆಗೆ [ಕಿಂಚಿ ರಾಗಂ] ಒಂದಿಷ್ಟೂ ರಾಗವನ್ನು [ಮಾ ಕುಣದು] ಮಾಡಕೂಡದು ; [ತೇಣ) ಹೀಗೆ ಮಾಡುವುದರಿಂದ [ಸೋ ಭವಿಓ] ಆ ಭವ್ಯ ಜೀವನು [ವೀದರಾಗೋ] ವೀತರಾಗನಾಗಿ [ಭವಸಾಯರಂ ತರದಿ] ಭವಸಾಗರವನ್ನು ದಾಟುತ್ತಾನೆ.

ಅದರಿಂ ಮೋಕ್ಷಭಿಲಾಷಿಯೆಲ್ಲೆಡೆ ಒಂದಿನಿತುರಾಗವನು ಮಾಡಕೂಡದು ।
ಇದರಿಂದಾ ಭವ್ಯಜೀವ ವೀತರಾಗನಾಗಿ ಭವಸಾಗರವ ದಾಟುವನು ॥೧೭೨॥

---

೧. ಪರಮಸಂಯಮ ಪ್ರಧಾನ = ಯಾವುದರಲ್ಲಿ ಉತ್ಕೃಷ್ಟವಾದ ಸಂಯಮವು ಮುಖ್ಯವಿದೆ ಅಂಥ.

೨. ಆಮೋದ = ಸುಗಂಧ ; ವಿನೋದ.

ಸಾಕ್ಷಾನ್ಮೋಕ್ಷಮಾರ್ಗಸಾರಸೂಚನದ್ವಾರೇಣ ಶಾಸ್ತ್ರತಾತ್ಪರ್ಯೋಪಸಂಹಾರೋಽಯಮ್ ।

ಸಾಕ್ಷಾನ್ಮೋಕ್ಷಮಾರ್ಗಪುರಸ್ಸರಂ ಹಿ ವೀತರಾಗತ್ವಮ್ । ತತಃ ಖಿಲ್ವರ್ಹದಾದಿಗತಮಪಿ ರಾಗಂ ಚಂದನನಗ-ಸಂಗತಮಗ್ನಿಮಿವ ಸುರಲೋಕಾದಿಕ್ಲೇಶಪ್ರಾಪ್ತ್ಯಾऽತ್ಯಂತಮಂತರ್ದಾಹಾಯ ಕಲ್ಪಮಾನಮಾಕಲಯ್ಯ ಸಾಕ್ಷಾನ್ಮೋಕ್ಷ-ಕಾಮೋ ಮಹಾಜನಃ ಸಮಸ್ತವಿಷಯಮಪಿ ರಾಗಮುತ್ಸ್ರಜ್ಯಾತ್ಯಂತವೀತರಾಗೋ ಭೂತ್ವಾ ಸಮುಚ್ಛಲಜ್ಜ್ವಲದ್ದುಃಖ-ಸೌಖ್ಯಕಲ್ಲೋಲಂ ಕರ್ಮಾಗ್ನಿತಪ್ತಕಲಕಲೋದಭಾರಪ್ರಾಗ್ಭಾರಭಯಂಕರಂ ಭವಸಾಗರಮುತ್ತೀರ್ಯ, ಶುದ್ಧಸ್ವರೂಪ-ಪರಮಾಮೃತಸಮುದ್ರಮಧ್ಯಾಸ್ಯ ಸದ್ಯೋ ನಿರ್ವಾತಿ ।

ಟೀಕೆ :- ಇದು ಸಾಕ್ಷಾತ್ ಮೋಕ್ಷಮಾರ್ಗದ ಸಾರ-ಸೂಚನೆಯಿಂದ ಶಾಸ್ತ್ರ ತಾತ್ಪರ್ಯರೂಪದ ಉಪಸಂಹಾರವಿದೆ (ಎಂದರೆ ಇಲ್ಲಿ ಪ್ರತ್ಯಕ್ಷ ಮೋಕ್ಷಮಾರ್ಗದ ಸಾರವು ಏನಿದೆಯೆಂಬುದರ ಕಥನದಿಂದ ಶಾಸ್ತ್ರದ ತಾತ್ಪರ್ಯವನ್ನು ಹೇಳುವ ರೂಪದ ಉಪಸಂಹಾರ ಮಾಡಿದೆ)

ಸಾಕ್ಷಾತ್ ಮೋಕ್ಷಮಾರ್ಗದಲ್ಲಿ ನಿಜವಾಗಿ ಸರ್ವಶ್ರೇಷ್ಠವಾದುದು ವೀತರಾಗತೆಯಿದೆ. ಅದಕ್ಕಾಗಿ ವಾಸ್ತವಿಕವಾಗಿ ಅರಹಂತಾದಿಗಳ [೧] ಕುರಿತಾದ ರಾಗಕ್ಕೂ ಕೂಡ ಚಂದನವೃಕ್ಷ ಸಂಯುಕ್ತವಾದ ಬೆಂಕಿಯ ಹಾಗೆ ದೇವಲೋಕಾದಿಗಳ ಕ್ಲೇಶದ ಪ್ರಾಪ್ತಿಯಿಂದ ತೀವ್ರ ಅಂತರ್ದಾಹಕ್ಕೆ ಕಾರಣವೆಂದು ತಿಳಿದುಕೊಂಡು, ಪ್ರತ್ಯಕ್ಷ ಮೋಕ್ಷದ ಅಭಿಲಾಷೆಯುಳ್ಳ ಮಹಾಜನರು ಎಲ್ಲ ಕಡೆಗಿರುವ ರಾಗವನ್ನು ಬಿಟ್ಟುಕೊಟ್ಟು ಪೂರ್ಣ ವೀತರಾಗರಾಗಿ ಯಾವುದರಲ್ಲಿ ಉಕ್ಕಿ ಬರುತ್ತಿರುವ ಸುಖದುಃಖದ ತರಂಗಗಳು ಎದ್ದು ಬೀಳುತ್ತಿವೆ ಮತ್ತು ಯಾವುದು ಕರ್ಮಾಗ್ನಿಯಿಂದ ತಪ್ತವಾಗಿ ಕುದಿಯುತ್ತಿರುವ ಜಲಸಮೂಹದ ಅತಿಶಯತೆಯಿಂದ ಭಯಂಕರವಿರುವಂಥ ಭವಸಾಗರವನ್ನು ದಾಟಿ, ಶುದ್ಧಸ್ವರೂಪ ಪರಮಾಮೃತ ಸಾಗರದಲ್ಲಿ ಮಿಂದು, ಬೇಗ ನಿರ್ವಾಣಕ್ಕೆ ಪ್ರಾಪ್ತರಾಗುತ್ತಾರೆ.

- ವಿಸ್ತಾರದಿಂದ ಸಾಕಾಯಿತು. ಯಾವುದು ಸಾಕ್ಷಾತ್ ಮೋಕ್ಷಮಾರ್ಗದ ಸಾರವಿರುವುದರಿಂದ ಶಾಸ್ತ್ರ ತಾತ್ಪರ್ಯಭೂತವಿದೆ ಅಂಥ ವೀತರಾಗತೆಯು ಜಯವಂತವಾಗಿರಲಿ !

ತಾತ್ಪರ್ಯವು ಸೂತ್ರ ತಾತ್ಪರ್ಯ [೨] ಮತ್ತು ಶಾಸ್ತ್ರ ತಾತ್ಪರ್ಯವೆಂದು ಎರಡು ವಿಧವಿದೆ. ಅದರಲ್ಲಿ ಸೂತ್ರ ತಾತ್ಪರ್ಯವನ್ನು ಪ್ರತಿಯೊಂದು ಸೂತ್ರದಲ್ಲಿ (ಪ್ರತಿಯೊಂದು ಗಾಥೆಯಲ್ಲಿ) ಪ್ರತಿಪಾದನೆ ಮಾಡಿದೆ ; ಮತ್ತು ಈಗ ಶಾಸ್ತ್ರ ತಾತ್ಪರ್ಯವನ್ನು ಪ್ರತಿಪಾದನೆ ಮಾಡಲಾಗುತ್ತದೆ.

ಎಲ್ಲ ಪುರುಷಾರ್ಥ[೩]ಗಳಲ್ಲಿ ಸಾರಭೂತವಾದಂಥ ಮೋಕ್ಷತತ್ತ್ವದ ಪ್ರತಿಪಾದನೆ ಮಾಡುವ ಉದ್ದೇಶದಿಂದ ಯಾವುದರಲ್ಲಿ ಪಂಚಾಸ್ತಿಕಾಯ ಮತ್ತು ಷಡ್‌ದ್ರವ್ಯದ ಸ್ವರೂಪದ ಪ್ರತಿಪಾದನೆಯಿಂದ ಸಮಸ್ತವಸ್ತುವಿನ ಸ್ವಭಾವವನ್ನು

---

೧. ಅರಹಂತಾದಿಗತರಾಗ = ಅರಹಂತಾದಿಗಳ ವಿಷಯವಾಗಿರುವ ಪ್ರೀತಿ ; ಅರಹಂತಾದಿಗಳ ಪ್ರೀತಿ. (ಯಾವ ಪ್ರಕಾರ ಚಂದನವೃಕ್ಷದ ಬೆಂಕಿಯೂ ಉಗ್ರರೂಪದಿಂದ ಸುಡುತ್ತದೆ ಅದೇ ಪ್ರಕಾರ ಅರಹಂತಾದಿಗಳ ರಾಗವೂ ದೇವಲೋಕಾದಿಗಳ ಕ್ಲೇಶದ ಪ್ರಾಪ್ತಿಯಿಂದ ಅಂತರಂಗದ ತೀವ್ರ ಜ್ವಲನಕ್ಕೆ ಕಾರಣವಾಗುತ್ತದೆ.)

೨. ಪ್ರತಿಯೊಂದು ಗಾಥಾಸೂತ್ರದ ತಾತ್ಪರ್ಯವು ಅದು ಸೂತ್ರತಾತ್ಪರ್ಯವಿದೆ ಮತ್ತು ಸಂಪೂರ್ಣ ಶಾಸ್ತ್ರದ ತಾತ್ಪರ್ಯವು ಅದು ಶಾಸ್ತ್ರತಾತ್ಪರ್ಯವಿದೆ.

೩. ಪುರುಷಾರ್ಥ= ಪುರುಷ-ಅರ್ಥ ; ಪುರುಷ-ಪ್ರಯೋಜನ. [ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂದು ಪುರುಷಾರ್ಥಗಳಲ್ಲಿ ನಾಲ್ಕು ವಿಭಾಗಗಳನ್ನು ಮಾಡಲಾಗಿದೆ; ಆದರೆ ಎಲ್ಲ ಪುರುಷ-ಅರ್ಥಗಳಲ್ಲಿ ಮೋಕ್ಷವೇ ಸಾರಭೂತ (ತಾತ್ವಿಕ) ಪುರುಷ-ಅರ್ಥವಿದೆ.]

ಅಲಂ ವಿಸ್ತರೇಣ । ಸ್ಪಷ್ಟಿ ಸಾಕ್ಷಾನ್ಮೋಕ್ಷಮಾರ್ಗಸಾರತ್ವೇನ ಶಾಸ್ತ್ರತಾತ್ಪರ್ಯಭೂತಾಯ ವೀತರಾಗತ್ವಾಯೇತಿ। ದ್ವಿವಿಧಂ ಕಿಲತಾತ್ಪರ್ಯಮ್ - ಸೂತ್ರತಾತ್ಪರ್ಯಂ ಶಾಸ್ತ್ರತಾತ್ಪರ್ಯಂಚೇತಿ । ತತ್ರಸೂತ್ರತಾತ್ಪರ್ಯಂ ಪ್ರತಿಸೂತ್ರಮೇವ ಪ್ರತಿಪಾದಿತಮ್ । ಶಾಸ್ತ್ರತಾತ್ಪರ್ಯಂ ತ್ವಿದಂ ಪ್ರತಿಪಾದ್ಯತೇ । ಅಸ್ಯ ಖಲು ಪಾರಮೇಶ್ವರಸ್ಯ ಶಾಸ್ತ್ರಸ್ಯ , ಸಕಲಪುರುಷಾರ್ಥಸಾರಭೂತಮೋಕ್ಷತತ್ತ್ವಪ್ರತಿಪತ್ತಿಹೇತೋಃ ಪಂಚಾಸ್ತಿಕಾಯಷಡ್ದ್ರವ್ಯಸ್ವರೂಪ-ಪ್ರತಿಪಾದನೇನೋಪದರ್ಶಿತಸಮಸ್ತವಸ್ತುಸ್ವಭಾವಸ್ಯ , ನವಪದಾರ್ಥಪ್ರಪಂಚಸೂಚನಾವಿಷ್ಕೃತಬಂಧಮೋಕ್ಷಸಂಬಂಧಿ

ತಿಳಿಸಿಕೊಡಲಾಗಿದೆ, ಒಂಬತ್ತು ಪದಾರ್ಥಗಳವಿಸ್ತಾರವಾದ ಕಥನದಿಂದ ಯಾವುದರಲ್ಲಿ ಬಂಧ ಮೋಕ್ಷದ ಸಂಬಂಧಿಯು (ಸ್ವಾಮಿಯು), ಬಂಧ-ಮೋಕ್ಷದ ಆಯತನ (ಸ್ಥಾನ) ಮತ್ತು ಬಂಧ-ಮೋಕ್ಷದ ವಿಕಲ್ಪ(ಭೇದ)ಗಳನ್ನು ಸ್ಪಷ್ಟಪಡಿಸಲಾಗಿದೆ, ಯಾವುದರಲ್ಲಿ ನಿಶ್ಚಯ-ವ್ಯವಹಾರರೂಪ ಮೋಕ್ಷಮಾರ್ಗದ ಸಮ್ಯಕ್ ನಿರೂಪಣೆಯನ್ನು ಮಾಡಲಾಗಿದೆ ಹಾಗೂ ಸಾಕ್ಷಾತ್ ಮೋಕ್ಷಕ್ಕೆ ಕಾರಣಭೂತವಾದ ಪರಮವೀತರಾಗತೆಯಲ್ಲಿ ಯಾವುದರ ಸಂಪೂರ್ಣ ಹೃದಯವು ನಿಹಿತವಿದೆ - ಅಂಥ ಯಥಾರ್ಥವಾದ ಈ ಪಾರಮೇಶ್ವರ[೧] ಶಾಸ್ತ್ರದ ತಾತ್ಪರ್ಯವು ಪಾರಮಾರ್ಥ್ಯದಿಂದ ವೀತರಾಗತೆಯೇ ಇದೆ.

ಆದ್ದರಿಂದ ಈ ವೀತರಾಗತೆಯನ್ನು ವ್ಯವಹಾರ-ನಿಶ್ಚಯದ ಅವಿರೋಧ[೨] ದಿಂದಲೇ ಅನುಸರಣೆ ಮಾಡಿದರೆ ಇಷ್ಟಸಿದ್ಧಿಯಾಗುತ್ತದೆ, ಅನ್ಯಥಾ ಇಲ್ಲ. (ಎಂದರೆ ವ್ಯವಹಾರ ಮತ್ತು ನಿಶ್ಚಯದ ಸುಸಂಬಂಧತೆಯಿರುವ ಹಾಗೆ ವೀತರಾಗತೆಯ ಅನುಸರಣೆ ಮಾಡಿದರೇನೇ ಐಚ್ಛಿತದ ಸಿದ್ಧಿಯಾಗುತ್ತದೆ, ಬೇರೆ ಪ್ರಕಾರದಿಂದಿಲ್ಲ.)

(ಮೇಲಿನ ಮಾತನ್ನೇ ಇನ್ನೂ ಸ್ಪಷ್ಟಪಡಿಸಲಾಗುವುದು.)

ಅನಾದಿಕಾಲದಿಂದ ಭೇದ ನೆಲೆಸಿದ ಬುದ್ಧಿಯಿರುವ ಕಾರಣ ಪ್ರಾಥಮಿಕ ಜೀವರುಗಳು ವ್ಯವಹಾರ ನಯದಿಂದ ಭಿನ್ನಸಾಧ್ಯ-ಸಾಧನಭಾವದ[೩] ಅವಲಂಬನೆ ಪಡೆದು ಸುಖದಿಂದ[೪] ತೀರ್ಥದ ಪ್ರಾರಂಭ ಮಾಡುತ್ತಾರೆ.

---

೧. ಪಾರಮೇಶ್ವರ = ಪರಮೇಶ್ವರರ ; ಜಿನಭಗವಂತರ ; ಭಾಗವತ ; ಪವಿತ್ರ.

೨. ಆರನೆಯ ಗುಣಸ್ಥಾನದಲ್ಲಿ ನಿರಂತರವಾಗಿ ಮುನಿಯೋಗ್ಯ ಶುದ್ಧಪರಿಣತಿಯಿರುವುದು ಮತ್ತು ಮಹಾವ್ರತಾದಿಗಳ ಸಂಬಂಧದ ಶುಭಭಾವವು ಯಥಾಯೋಗ್ಯರೀತಿಯಿಂದಿರುವುದು ಅದು ನಿಶ್ಚಯ ವ್ಯವಹಾರದ ಅವಿರೋಧದ (ಸುಮೇಲದ) ಉದಾಹರಣೆಯಿದೆ. ಐದನೆಯ ಗುಣಾಸ್ಥಾನದಲ್ಲಿ ನಿರಂತರವಾಗಿ ಗುಣಸ್ಥಾನಕ್ಕೆ ಯೋಗ್ಯವಾದ ಶುದ್ಧ ಪರಿಣತಿಯಿರುವುದು ಮತ್ತು ದೇಶವ್ರತಾದಿಗಳ ಸಂಬಂಧದ ಶುಭರಾಗವು ಯಥಾಯೋಗ್ಯರೂಪದಿಂದಿರುವುದು ಅದು ನಿಶ್ಚಯ-ವ್ಯವಹಾರದ ಅವಿರೋಧದ ಉದಾಹರಣೆಯಿದೆ.

೩. ಮೋಕ್ಷಮಾರ್ಗವು ಪ್ರಾಪ್ತವಾದ ಜ್ಞಾನೀ ಜೀವರುಗಳಿಗೆ ಪ್ರಾಥಮಿಕ ಭೂಮಿಕೆಯಲ್ಲಿ ಸಾಧ್ಯವಂತೂ ಪರಿಪೂರ್ಣ ಶುದ್ಧರೂಪದಿಂದ ಪರಿಣತನಾದ ಆತ್ಮನಿದ್ದಾನೆ ಮತ್ತು ಅದರ ಸಾಧನವು ವ್ಯವಹಾರನಯದಿಂದ (ಆಂಶಿಕಶುದ್ಧಿಯ ಜೊತೆಗಿರುವಂಥ) ಭೇದರತ್ನತ್ರಯರೂಪ ಪರಾವಲಂಬಿ ವಿಕಲ್ಪಗಳೆಂದು ಹೇಳಲಾಗುತ್ತದೆ. ಹೀಗೆ ಆ ಜೀವರುಗಳಿಗೆ ವ್ಯವಹಾರನಯದಿಂದ ಸಾಧ್ಯ ಮತ್ತು ಸಾಧನಗಳು ಭಿನ್ನ ಪ್ರಕಾರವೆಂದು ಹೇಳಲಾಗಿದೆ. (ನಿಶ್ಚಯನಯದಿಂದ ಸಾಧ್ಯ ಮತ್ತು ಸಾಧನಗಳು ಅಭಿನ್ನವಾಗಿರುತ್ತವೆ.)

೪. ಸುಖದಿಂದ = ಸುಗಮತೆಯಿಂದ ; ಸಹಜರೂಪದಿಂದ ; ಕಠಿಣತೆಯಿಲ್ಲದೆ. [ಯಾರು ದ್ರವ್ಯಾರ್ಥಿಕನಯದ ವಿಷಯಭೂತವಾದ ಶುದ್ಧಾತ್ಮಸ್ವರೂಪದ ಶ್ರದ್ಧಾದಿಗಳನ್ನು ಮಾಡಿದ್ದಾರೆ ಅಂಥ ಸಮ್ಯಗ್ಜ್ಞಾನಿ ಜೀವರುಗಳಿಗೆ ತೀರ್ಥಸೇವನೆಯ ಪ್ರಾಥಮಿಕ ಅವಸ್ಥೆಯಲ್ಲಿ (ಮೋಕ್ಷ ಮಾರ್ಗಸೇವನೆಯ ಮೊದಲ ಭೂಮಿಕೆಯಲ್ಲಿ) ಆಂಶಿಕಶುದ್ಧಿಯ ಜೊತೆಯಲ್ಲಿ ಶ್ರದ್ಧೆ-ಚಾರಿತ್ರ ಸಂಬಂಧದ ಪರಾವಲಂಬಿ ವಿಕಲ್ಪ (ಭೇದರತ್ನತ್ರಯ)ಗಳಿರುತ್ತವೆ, ಏಕೆಂದರೆ ಅನಾದಿಕಾಲದಿಂದ ಜೀವರುಗಳಿಗೆ ಭೇದವಾಸನೆಯಿಂದ ನೆಲೆಸಿದ ಪರಿಣತಿಯು ನಡೆಯುತ್ತ ಬಂದಿದೆ ಅದರ ಸಂಪೂರ್ಣನಾಶವು ಬೇಗನೆ ಆಗುವುದು ಕಠಿಣವಿದೆ.]

ಬಂಧಮೋಕ್ಷಾಯತನಬಂಧಮೋಕ್ಷವಿಕಲ್ಪಸ್ಯ , ಸಮ್ಯಗಾವೇದಿತನಿಶ್ಚಯವ್ಯವಹಾರರೂಪಮೋಕ್ಷಮಾರ್ಗಸ್ಯ , ಸಾಕ್ಷಾನ್ಮೋಕ್ಷಕಾರಣಭೂತಪರಮವೀತರಾಗತ್ವವಿಶ್ರಾಂತಸಮಸ್ತಹೃದಯಸ್ಯ , ಪರಮಾರ್ಥತೋ ವೀತರಾಗತ್ವಮೇವ ತಾತ್ಪರ್ಯಮಿತಿ । ತದಿದಂ ವೀತರಾಗತ್ವಂ ವ್ಯವಹಾರನಿಶ್ಚಯಾವಿರೋಧೇನೈವಾನುಗಮ್ಯಮಾನಂ ಭವತಿ ಸಮೀಹಿತ ಸಿದ್ಧಯೇ, ನ ಪುನರನ್ಯಥಾ । ವ್ಯವಹಾರನಯೇನ ಭಿನ್ನಸಾಧ್ಯಸಾಧನಭಾವಮವಲಂಬ್ಯಾನಾದಿಭೇದವಾಸಿತಬುದ್ಧಯಃ ಸುಖೇನೈವಾವತರಂತಿ ತೀರ್ಥಂ ಪ್ರಾಥಮಿಕಾಃ । ತಥಾ ಹೀದಂ ಶ್ರದ್ಧೇಯಮಿದಮಶ್ರದ್ಧೇಯಮಯಂ ಶ್ರದ್ಧಾತೇದಂ ಶ್ರದ್ಧಾನಮಿದಂ ಜ್ಞೇಯಮಿದಮಜ್ಞೇಯಮಯಂ ಜ್ಞಾತೇದಂ ಜ್ಞಾನಮಿದಂ ಚರಣೀಯಮಿದಮಚರಣೀಯಮಯಂ ಚರಿತೇದಂ ಚರಣಮಿತಿ ಕರ್ತವ್ಯಾಕರ್ತವ್ಯಕರ್ತೃಕರ್ಮವಿಭಾಗಾವಲೋಕನೋಲ್ಲಸಿತಪೇಶಲೋತ್ಸಾಹಾ- ಶನೈಃ-ಶನೈರ್ಮೋಹಮಲ್ಲಮುನ್ಮೂಲಯಂತಃ, ಕದಾಚಿದಜ್ಞಾನಾನ್ಮದಪ್ರಮಾದತಂತ್ರತಯಾ ಶಿಥಿಲಿತಾತ್ಮಾಧಿಕಾರಸ್ಯಾತ್ಮನೋ ನ್ಯಾಯ್ಯಪಥಪ್ರವರ್ತನಾಯ ಪ್ರಯುಕ್ತಪ್ರಚಂಡದಂಡನೀತಯಃ, ಪುನಃ ಪುನಃ ದೋಷಾನುಸಾರೇಣ ದತ್ತಪ್ರಾಯಶ್ಚಿತ್ತಾಃ ಸಂತತೋದ್ಯತಾಃ ಸಂತೋಽಥ ತಸ್ಯೈವಾತ್ಮನೋ ಭಿನ್ನವಿಷಯಶ್ರದ್ಧಾನಜ್ಞಾನಚಾರಿತ್ರೈರಧಿರೋ-

---

(ಎಂದರೆ ಸುಗಮರೂಪದಿಂದ ಮೋಕ್ಷಮಾರ್ಗದ ಪ್ರಾರಂಭಭೂಮಿಕೆಯ ಸೇವನೆ ಮಾಡುತ್ತಾರೆ). ಹೇಗೆಂದರೆ - ''೧) ಇದು ಶ್ರದ್ಧೇಯ (ಶ್ರದ್ಧೆ ಮಾಡಲು ಯೋಗ್ಯ)ವಿದೆ, ೨) ಇದು ಅಶ್ರದ್ಧೇಯವಿದೆ, ೩) ಇವನು ಶ್ರದ್ಧೆ ಮಾಡುವವನಿದ್ದಾನೆ ಮತ್ತು ೪) ಇದು ಶ್ರದ್ಧೆಯಿದೆ ; ೧) ಇದು ಜ್ಞೇಯವಿದೆ (ತಿಳಿದುಕೊಳ್ಳಲು ಯೋಗ್ಯವಿದೆ), ೨) ಇದು ಅಜ್ಞೇಯವಿದೆ, ೩) ಇವನು ಜ್ಞಾತಾ ಇದ್ದಾನೆ ಮತ್ತು ೪) ಇದು ಜ್ಞಾನವಿದೆ ; ೧) ಇದು ಆಚರಣೀಯವಿದೆ (ಆಚರಣೆ ಮಾಡಲು ಯೋಗ್ಯವಿದೆ,) ೨) ಇದು ಅನಾಚರಣೀಯವಿದೆ, ೩) ಇವನು ಆಚರಣೆ ಮಾಡುವವನಿದ್ದಾನೆ ಮತ್ತು ೪) ಇದು ಆಚರಣೆಯಿದೆ,''; - ಹೀಗೆ ೧) ಕರ್ತವ್ಯ (ಮಾಡಲು ಯೋಗ್ಯ), ೨) ಅಕರ್ತವ್ಯ , ೩) ಕರ್ತೃ ಮತ್ತು ಕರ್ಮರೂಪ ವಿಭಾಗಗಳ ಅವಲೋಕನೆಯಿಂದ ಅವರಿಗೆ ಕೋಮಲವಾದ ಉತ್ಸಾಹವು ಉಲ್ಲಸಿತವಾಗುತ್ತಿರುವಂಥ ಅವರು (ಪ್ರಾಥಮಿಕ ಜೀವರುಗಳು) ನಿಧಾನವಾಗಿ ಮೋಹಮಲ್ಲನನ್ನು (ರಾಗಾದಿಗಳನ್ನು) ಕಿತ್ತೆಸೆಯುತ್ತಾರೆ ; ಕದಾಚಿತ್ ಅಜ್ಞಾನದ ಕಾರಣ (ಸ್ವಸಂವೇದನ ಜ್ಞಾನದ ಅಭಾವದ ಕಾರಣ)ಮದ (ಕಷಾಯ)ಮತ್ತು ಪ್ರಮಾದದ ವಶವಾಗುವುದರಿಂದ ತಮ್ಮ ಆತ್ಮಾಧಿಕಾರವು (ಆತ್ಮನಲ್ಲಿನ ಅಧಿಕಾರವು) ಶಿಥಿಲವಾಗಿ ಹೋಗುವುದರಿಂದ ತಮ್ಮನ್ನು ನ್ಯಾಯಮಾರ್ಗದಲ್ಲಿ ಪ್ರವರ್ತಿಸುವುದಕ್ಕಾಗಿ ಅವರು ಪ್ರಚಂಡವಾದ ದಂಡನೀತಿಯ ಪ್ರಯೋಗ ಮಾಡುತ್ತಾರೆ ; ಪುನಃಪುನಃ(ತಮ್ಮ ಆತ್ಮನಿಗೆ) ದೋಷಾನುಸಾರವಾಗಿ ಪ್ರಾಯಶ್ಚಿತ್ತ ಕೊಡುತ್ತ ಅವರು ಯಾವಾಗಲೂ ಉದ್ಯಮಶೀಲರಾಗಿ ವರ್ತಿಸುತ್ತಾರೆ ; ಭಿನ್ನ ವಿಷಯವುಳ್ಳ [೧] ಶ್ರದ್ಧೆ-ಜ್ಞಾನ-ಚಾರಿತ್ರಗಳಿಂದ (ಆತ್ಮನಿಂದ ಬೇರೆ ವಿಷಯಗಳಾದಂಥ ಭೇದರತ್ನತ್ರಯದ ಮುಖಾಂತರ) ಯಾವುದರಲ್ಲಿ ಸಂಸ್ಕಾರಗಳು ಆರೋಪಿಸಲ್ಪಡುತ್ತವೆ ಅಂಥ ಭಿನ್ನಸಾಧ್ಯಸಾಧನಭಾವವುಳ್ಳ ತಮ್ಮ ಆತ್ಮನಲ್ಲಿ ಮಡಿವಾಳನಿಂದ ಶೀಲಾತಲದ ಮೇಲೆ ಅಪ್ಪಳಿಸಲ್ಪಡುವ, ನಿರ್ಮಲವಾದ ನೀರಿನಲ್ಲಿ ಮುಳುಗಿಸಲ್ಪಡುವ ಮತ್ತು ಕ್ಷಾರ(ಸೋಪು) ಹಚ್ಚಲ್ಪಡುವ ಮಲಿನ ಬಟ್ಟೆಯಂತೆ - ಅಲ್ಪ-ಸ್ವಲ್ಪ ವಿಶುದ್ಧಿ [೨]

---

೧. ವ್ಯವಹಾರ - ಶ್ರದ್ಧೆ ಜ್ಞಾನ ಚಾರಿತ್ರದ ವಿಷಯಗಳು ಆತ್ಮನಿಂದ ಭಿನ್ನವಿವೆ ; ಏಕೆಂದರೆ ವ್ಯವಹಾರ ಶ್ರದ್ಧೆಯ ವಿಷಯಗಳು ನವಪದಾರ್ಥಗಳಿದ್ದು ವ್ಯವಹಾರ ಜ್ಞಾನದ ವಿಷಯಗಳು ಅಂಗ-ಪೂರ್ವಗಳಿವೆ ಮತ್ತು ವ್ಯವಹಾರ ಚಾರಿತ್ರದ ವಿಷಯಗಳು ಆಚಾರಾದಿ ಸೂತ್ರಕಥಿತ ಮುನಿ-ಆಚಾರಗಳಿವೆ.

೨. ಯಾವ ಪ್ರಕಾರ ಮಡಿವಾಳನು ಪಾಷಾಣ, ನೀರು ಮತ್ತು ಸಬಕಾರದಿಂದ ಮಲಿನ ವಸ್ತ್ರದ ಶುದ್ಧಿಮಾಡುತ್ತಿರುತ್ತಾನೆ, ಅದೇ ಪ್ರಕಾರ ಪೂರ್ವಪದವಿಯಲ್ಲಿ ಸ್ಥಿತನಾದ ಜ್ಞಾನೀಜೀವನು ಭೇದರತ್ನತ್ರಯದಿಂದ ತನ್ನ ಆತ್ಮನಲ್ಲಿ ಸಂಸ್ಕಾರಗಳನ್ನು ಆರೋಪಣೆ ಮಾಡಿ ಸ್ವಲ್ಪ-ಸ್ವಲ್ಪ ಅದರ ಶುದ್ಧಿ ಮಾಡುತ್ತ ಹೋಗುತ್ತಾನೆಂದು ವ್ಯವಹಾರನಯದಿಂದ ಹೇಳಲಾಗುತ್ತದೆ. ಆ ಭೇದ ರತ್ನತ್ರಯವುಳ್ಳ ಜ್ಞಾನೀ ಜೀವಕ್ಕೆ

ಪ್ಯಮಾಣಸಂಸ್ಕಾರಸ್ಯ ಭಿನ್ನಸಾಧ್ಯಸಾಧನಭಾವಸ್ಯ ರಜಕಶಿಲಾತಲಸ್ಫಾಲ್ಯಮಾನವಿಮಲಸಲಿಲಾಪ್ಲುತವಿಹಿತೋಷ-ಪರಿಷ್ವಂಗಮಲಿನವಾಸಸ ಇವ ಮನಾಙ್ಮನಾಗ್ವಿಶುದ್ಧಿಮಧಿಗಮ್ಯನಿಶ್ಚಯನಯಸ್ಯ ಭಿನ್ನಸಾಧ್ಯಸಾಧನಭಾವಾ-ಭಾವಾದ್ದರ್ಶನಜ್ಞಾನಚಾರಿತ್ರಸಮಾಹಿತತ್ವರೂಪೇ ವಿಶ್ರಾಂತಸಕಲಕ್ರಿಯಾಕಾಂಡಾಡಂಬರನಿಸ್ತರಂಗಪರಮಚೈತನ್ಯ-ಶಾಲಿನಿ ನಿರ್ಭರಾನಂದಮಾಲಿನಿ ಭಗವತ್ಯಾತ್ಮನಿ ವಿಶ್ರಾಂತಿಮಾಸೂತ್ರಯಂತಃ ಕ್ರಮೇಣ ಸಮುಪಜಾತಸಮರಸೀ-ಭಾವಾಃ ಪರಮವೀತರಾಗಭಾವಮಧಿಗಮ್ಯ , ಸಾಕ್ಷಾನ್ಮೋಕ್ಷಮನುಭವಂತೀತಿ ।

ಅಥ ಯೇ ತು ಕೇವಲವ್ಯವಹಾರಾವಲಂಬಿನಸ್ತೇ ಖಲು ಭಿನ್ನಸಾಧ್ಯಸಾಧನಭಾವಾವಲೋಕನೇನಾऽನವರತಂ ನಿತರಾಂ ಖಿದ್ಯಮಾನಾ ಮುಹುರ್ಮುಹುರ್ಧರ್ಮಾದಿಶ್ರದ್ಧಾನರೂಪಾಧ್ಯವಸಾಯಾನುಸ್ಯೂತಚೇತಸ್ಯಃ ಪ್ರಭೂತ-ಶ್ರುತಸಂಸ್ಕಾರಾಧಿರೋಪಿತವಿಚಿತ್ರವಿಕಲ್ಪಜಾಲಕಲ್ಮಾಷಿತಚೈತನ್ಯವೃತ್ತಯಃ, ಸಮಸ್ತಯತಿವೃತ್ತಸಮುದಾಯರೂಪತಪಃ

ಗೊಳಿಸಿ, ಅದೇ ತಮ್ಮ ಆತ್ಮನನ್ನು ನಿಶ್ಚಯನಯದಿಂದ ಭಿನ್ನಸಾಧ್ಯಸಾಧನಭಾವದ ಅಭಾವದ ಕಾರಣ, ದರ್ಶನಜ್ಞಾನಚಾರಿತ್ರಗಳ ಸಮಾಹಿತತೆ (ಅಭೇದತೆ) ಯಾವುದರ ರೂಪು ಇದೆ, ಸಂಪೂರ್ಣ ಕ್ರಿಯಾಕಾಂಡದ ಆಡಂಬರದ ನಿವೃತ್ತಿಯ ಕಾರಣ (ಅಭಾವದ ಕಾರಣ) ಯಾವುದು ನಿಸ್ತರಂಗ ಪರಮಚೈತನ್ಯಶಾಲಿಯಿದೆ ಮತ್ತು ಯಾವುದು ನಿರ್ಭರ ಆನಂದದಿಂದ ಸಮೃದ್ಧವಿದೆ ಅಂಥ ಭಗವಾನಾತ್ಮನಲ್ಲಿ ವಿಶ್ರಾಂತಿಯನ್ನು ರಚಿಸುತ್ತ (ಎಂದರೆ ದರ್ಶನಜ್ಞಾನಚಾರಿತ್ರದ ಐಕ್ಯಸ್ವರೂಪ, ನಿರ್ವಿಕಲ್ಪ ಪರಮಚೈತನ್ಯಶಾಲಿ ಮತ್ತು ಪರಿಪೂರ್ಣ ಆನಂದಯುಕ್ತನಾದಂಥ ಭಗವಾನಾತ್ಮನಲ್ಲಿ ತನ್ನನ್ನು ಸ್ಥಿರಗೊಳಿಸುತ್ತ), ಕ್ರಮದಿಂದ ಸಮರಸಭಾವ ಸಮುತ್ಪನ್ನರಾಗುತ್ತ ಹೋಗುವುದರಿಂದ ಪರಮವೀತರಾಗತೆಯನ್ನು ಪಡೆದುಕೊಂಡು ಸಾಕ್ಷಾತ್ ಮೋಕ್ಷದ ಅನುಭವ ಮಾಡುತ್ತಾರೆ.

(ಈಗ ಕೇವಲ ವ್ಯವಹಾರಾವಲಂಬಿಯಾದ (ಅಜ್ಞಾನೀ) ಜೀವರುಗಳ ಪ್ರವರ್ತನೆ ಮತ್ತು ಅದರ ಫಲವನ್ನು ಹೇಳಲಾಗುತ್ತದೆ-)

ಆದರೆ ಯಾರು ಕೇವಲ ವ್ಯವಹಾರಾವಲಂಬಿಯಿದ್ದಾರೆ (ಕೇವಲ ವ್ಯವಹಾರದ ಅವಲಂಬನೆ ಮಾಡುವ ವವರಿದ್ದಾರೆ) ಅವರು ವಾಸ್ತವಿಕವಾಗಿ ಭಿನ್ನಸಾಧ್ಯಸಾಧನಭಾವದ [೧] ಅವಲೋಕನೆಯಿಂದ ನಿರಂತರವಾಗಿ ಅತ್ಯಂತ ಖೇದವನ್ನನುಭವಿಸುತ್ತ, ೧) ಪುನಃ ಪುನಃ ಧರ್ಮಾದಿಗಳ ಶ್ರದ್ಧೆಯ ರೂಪವಾದ ಅಧ್ಯವಸಾನದಲ್ಲಿ ಅವರ ಚಿತ್ತವು ತೊಡಗುತ್ತಿರುವುದರಿಂದ ೨) ನಾನಾ ಶ್ರುತದ (ದ್ರವ್ಯಶ್ರುತದ) ಸಂಸ್ಕಾರಗಳಿಂದ ಉತ್ಪನ್ನವಾಗುವಂಥ ವಿಚಿತ್ರ (ಅನೇಕ ಪ್ರಕಾರದ) ವಿಕಲ್ಪಗಳ ಜಾಲದಿಂದ ಅವರ ಚೈತನ್ಯವೃದ್ಧಿಯು ಚಿತ್ರ-ವಿಚಿತ್ರವಾಗುತ್ತಿರುವುದರಿಂದ ಮತ್ತು ೩) ಸಮಸ್ತ

ಶುಭಭಾವಗಳೊಡನೆ ಯಾವ ಶುದ್ಧಾತ್ಮಸ್ವರೂಪದ ಆಂಶಿಕ ಅವಲಂಬನೆಯು ವರ್ತಿಸುತ್ತದೆ ಅದೇ ಉಗ್ರವಾಗುತ್ತ-ಆಗುತ್ತ ವಿಶೇಷ ಶುದ್ಧಿಯಾಗುತ್ತದೆಯೆಂದು ಪರಮಾರ್ಥ ಹೇಳುತ್ತದೆ. ಅದಕ್ಕಾಗಿ ನಿಜವಾಗಿಯಂತೂ ಶುದ್ಧಾತ್ಮಸ್ವರೂಪದ ಅವಲಂಬನೆ ಮಾಡುವುದೇ ಶುದ್ಧಿಪ್ರಕಟಪಡಿಸುವ ಸಾಧನವಿದೆ ಮತ್ತು ಆ ಅವಲಂಬನವನ್ನು ಉಗ್ರಗೊಳಿಸುವುದೇ ಶುದ್ಧಿಯ ವೃದ್ಧಿ ಮಾಡುವ ಸಾಧನೆಯಿದೆ. ಜೊತೆಯಲ್ಲಿರುವ ಶುಭಭಾವಗಳಿಗೆ ಶುದ್ಧಿಯ ವೃದ್ಧಿಯ ಸಾಧನವೆಂದು ಹೇಳುವುದು ಅದಂತೂ ಕೇವಲ ಉಪಚಾರ ಕಥನವಿದೆ. ಶುದ್ಧಿಯ ವೃದ್ಧಿಯ ಉಪಚರಿತ ಸಾಧನತನದ ಆರೋಪವೂ ಯಾವ ಜೀವನು ಶುದ್ಧಿಯ ವೃದ್ಧಿಯ ಯಥಾರ್ಥ ಸಾಧನೆಯನ್ನು (ಶುದ್ಧಾತ್ಮಸ್ವರೂಪದ ಯಥೋಚಿತ ಅವಲಂಬನೆಯನ್ನು) ಪ್ರಕಟಪಡಿಸಿದ್ದಾನೆ ಅದೇ ಜೀವದ ಶುಭಭಾವಗಳಲ್ಲಿ ಬರುವ ಸಾಧ್ಯತೆಯಿದೆ.

೧. ನಿಜವಾಗಿ ಸಾಧ್ಯ ಮತ್ತು ಸಾಧನಗಳು ಅಭಿನ್ನವಾಗಿರುತ್ತವೆ. ಎಲ್ಲಿ ಸಾಧ್ಯ ಮತ್ತು ಸಾಧನಗಳು ಭಿನ್ನವೆಂದು ಹೇಳಲಾಗುವುದು). ಅಲ್ಲಿ ''ಇದು ಸತ್ಯಾರ್ಥ ನಿರೂಪಣೆಯಲ್ಲ. ಆದರೆ ವ್ಯವಹಾರ ನಯದಿಂದ ಉಪಚರಿತ ನಿರೂಪಣೆಯಿದೆ''ಯೆಂದು ತಿಳಿದುಕೊಳ್ಳಬೇಕು. ಕೇವಲ ವ್ಯವಹಾರಾವಲಂಬಿಗಳಾದ ಜೀವರುಗಳು ಆಳವಾಗಿ ಈ ಮಾತಿನ ಶ್ರದ್ಧೆ ಮಾಡದೆ ಎಂದರೆ ''ವಾಸ್ತವಿಕವಾಗಿ ಶುಭಭಾವರೂಪ ಸಾಧನೆಯಿಂದಲೇ ಶುದ್ಧಭಾವರೂಪ ಸಾಧ್ಯವು ಪ್ರಾಪ್ತವಾಗಬಹುದೆ''ಂಬ ಶ್ರದ್ಧೆಯ ಸೇವನೆಯನ್ನು ಆಳವಾಗಿ ಮಾಡುತ್ತ ಯಾವಾಗಲೂ ಅತ್ಯಂತ ದುಃಖಿಯಾಗಿರುತ್ತಾರೆ. [ವಿಶೇಷದ ಕುರಿತು ೧೬೬ನೇ ಗಾಥೆಯ ಮೇಲಿನ ಮೊದಲನೆಯ ಹಾಗೂ ನಾಲ್ಕನೆಯ ಟಿಪ್ಪಣಿ ನೋಡುವುದು.]

ಪ್ರವೃತ್ತಿರೂಪಕರ್ಮಕಾಂಡೋಡ್ಡಮರಾಚಲಿತಾಃ, ಕದಾಚಿತ್ಕಿಂಚಿದ್ಮೋಚಮಾನಾಃ, ಕದಾಚಿತ್ ಕಿಂಚಿದ್ವಿಕಲ್ಪಯಂತಃ, ಕದಾಚಿತ್ಕಿಂಚಿದಾಚರಂತಃ ದರ್ಶನಾಚರಣಾಯ ಕದಾಚಿತ್ಪ್ರಶಾಮ್ಯಂತಃ, ಕದಾಚಿತ್ಸಂವಿಜಮಾನಾಃ, ಕದಾಚಿದನು-ಕಂಪಮಾನಾಃ, ಕದಾಚಿದಾಸ್ತಿಕ್ಯಮುದ್ವಹಂತಃ, ಶಂಕಾಕಾಂಕ್ಷಾವಿಚಿಕಿತ್ಸಾಮೂಢದೃಷ್ಟಿತಾನಾಂ ವ್ಯುತ್ಥಾಪನನಿರೋಧಾಯ ನಿತ್ಯಬದ್ಧಪರಿಕರಾಃ, ಉಪಬೃಂಹಣಸ್ಥಿತಿಕರಣವಾತ್ಸಲ್ಯಪ್ರಭಾವನಾಂ ಭಾವಯಮಾನಾ ವಾರಂವಾರಮಭಿವರ್ಧಿತೋತ್ಸಾಹಾ, ಜ್ಞಾನಾಚರಣಾಯ ಸ್ವಾಧ್ಯಾಯಕಾಲಮವಲೋಕಯಂತೋ, ಬಹುಧಾ ವಿನಯಂ ಪ್ರಪಂಚಯಂತಃ, ಪ್ರವಿಹಿತದುರ್ಧರೋಪಧಾನಾಃ, ಸುಷ್ಠು ಬಹುಮಾನಮಾತನ್ವಂತೋ ನಿಹ್ನವಾಪತ್ತಿಂ ನಿತರಾಂ ನಿವಾರಯಂತೋಽರ್ಥವ್ಯಂಜನತದುಭಯಶುದ್ಧೌ ನಿತಾಂತಸಾವಧಾನಾಃ, ಚಾರಿತ್ರಾಚರಣಾಯ ಹಿಂಸಾನೃತಸ್ತೇಯಾಬ್ರಹ್ಮಪರಿಗ್ರಹಸಮಸ್ತವಿರತಿರೂಪೇಷು ಪಂಚಮಹಾವ್ರತೇಷು ತನ್ನಿಷ್ಠವೃತ್ತಯಃ, ಸಮ್ಯಗ್ಯೋಗ-

---

ಯತಿ - ಆಚರಣೆಯ ಸಮುದಾಯರೂಪ ತಪಸ್ಸಿನಲ್ಲಿ ಪ್ರವರ್ತನರೂಪ ಕರ್ಮಕಾಂಡದ ಗಲಾಟೆಯಲ್ಲಿ ಅವರು ಅಚಲಿತರಾಗಿರುವುದರಿಂದ, ೧) ಒಮ್ಮೊಮ್ಮೆ ಯಾವುದರದೋ (ಯಾವುದೇ ವಿಷಯದ) ಅಭಿರುಚಿ ಹೊಂದಿರುತ್ತಾರೆ, ೨) ಒಮ್ಮೊಮ್ಮೆ ಯಾವುದರದೋ (ಯಾವುದೇ ವಿಷಯದ) ವಿಕಲ್ಪಮಾಡುತ್ತಾರೆ ಮತ್ತು ೩) ಒಮ್ಮೊಮ್ಮೆ ಸ್ವಲ್ಪ ಆಚರಣೆ ಮಾಡುತ್ತಾರೆ ದರ್ಶನಾಚರಣೆಯಕುರಿತು - ಅವರು ಎಂದಾದರೂ ಪ್ರಶಮಿತರಾಗುತ್ತಾರೆ, ಎಂದಾದರೂ ಸಂವೇಗಕ್ಕೆ ಪ್ರಾಪ್ತರಾಗುತ್ತಾರೆ, ಎಂದಾದರೂ ಅನುಕಂಪಿತರಾಗುತ್ತಾರೆ, ಎಂದಾದರೂ ಆಸ್ತಿಕ್ಯವನ್ನು ಧಾರಣೆ ಮಾಡುತ್ತಾರೆ, ಶಂಕೆ, ಕಾಂಕ್ಷೆ, ವಿಚಿಕಿತ್ಸೆ ಮತ್ತು ಮೂಢದೃಷ್ಟಿಯ ಉತ್ಥಾನವನ್ನು ತಡೆಯುವ ಉದ್ದೇಶದಿಂದ ಯಾವಾಗಲೂ ತತ್ಪರರಿರುತ್ತಾರೆ, ಉಪಬೃಂಹಣ, ಸ್ಥಿತಿಕರಣ, ವಾತ್ಸಲ್ಯ ಮತ್ತು ಪ್ರಭಾವನೆಯನ್ನು ಭಾವಿಸುತ್ತ ಪುನಃ ಪುನಃ ಉತ್ಸಾಹವನ್ನು ಹೆಚ್ಚಿಸುತ್ತಾರೆ; ಜ್ಞಾನಾಚರಣೆಯ ಕುರಿತು, ಸ್ವಾಧ್ಯಾಯಕಾಲದ ಅವಲೋಕನೆ ಮಾಡುತ್ತಾರೆ, ಹಲವು ಪ್ರಕಾರಗಳಿಂದ ವಿನಯದ ವಿಸ್ತಾರಮಾಡುತ್ತಾರೆ, ಕಠಿಣತರವಾದ ಉಪಧಾನ ಮಾಡುತ್ತಾರೆ, ಸರಿಯಾದ ರೀತಿಯಲ್ಲಿ ಮರ್ಯಾದೆಯನ್ನು ಪ್ರಸಾರಿತಗೊಳಿಸುತ್ತಾರೆ - ನಿಹ್ನವ ದೋಷವನ್ನು ಸಾಕಷ್ಟು ನಿವಾರಿಸುತ್ತಾರೆ, ಅರ್ಥ, ವ್ಯಂಜನ ಮತ್ತು ತದುಭಯದ [೧] ಶುದ್ಧಿಯಲ್ಲಿ ಅತ್ಯಂತ ಸಾವಧಾನರಿರುತ್ತಾರೆ ; ಚಾರಿತ್ರಾಚರಣೆಯ ಕುರಿತು - ಹಿಂಸೆ, ಅಸತ್ಯ, ಸ್ತೇಯ, ಅಬ್ರಹ್ಮ ಮತ್ತು ಪರಿಗ್ರಹದ ಸರ್ವವಿರತಿರೂಪ ಪಂಚಮಹಾವ್ರತಗಳಲ್ಲಿತಲ್ಲೀನ ವೃತ್ತಿಯುಳ್ಳವರಾಗಿರುತ್ತಾರೆ, ಸಮ್ಯಕ್ ಯೋಗ ನಿಗ್ರಹವು ಯಾವವುಗಳ ಲಕ್ಷಣವಿದೆ (ಸರಿಯಾಗಿ ಯೋಗದ ನಿರೋಧ ಮಾಡುವುದು ಯಾವವುಗಳ ಲಕ್ಷಣವಿದೆ) ಅಂಥ ಗುಪ್ತಿಗಳಲ್ಲಿ ಅತ್ಯಂತ ಪ್ರಯತ್ನಶೀಲರಾಗಿರುತ್ತಾರೆ, ಈರ್ಯಾ, ಭಾಷಾ, ಏಷಣಾ, ಆದಾನನಿಕ್ಷೇಪ ಮತ್ತು ಉತ್ಸರ್ಗರೂಪ ಸಮಿತಿಗಳಲ್ಲಿ ಪ್ರಯತ್ನಪೂರ್ವಕವಾಗಿ ಪ್ರವೃತ್ತಿ ಮಾಡುತ್ತಾರೆ ; ತಪಾಚರಣೆಯ ಕುರಿತು-ಅನಶನ, ಅವಮೌದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ ಮತ್ತು ಕಾಯಕ್ಲೇಶದಲ್ಲಿ ಸತತವಾಗಿ ಉತ್ಸಾಹಿತರಾಗಿರುತ್ತಾರೆ, ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ವ್ಯುತ್ಸರ್ಗ, ಸ್ವಾಧ್ಯಾಯ ಮತ್ತು ಧ್ಯಾನರೂಪ ಪರಿಕರಗಳಿಂದ ತಮ್ಮ ಅಂತಃಕರಣವನ್ನು ಆಧೀನದಲ್ಲಿಟ್ಟುಕೊಳ್ಳುತ್ತಾರೆ ; ವೀರ್ಯಾಚರಣೆಯ ಕುರಿತು - ಕರ್ಮಕಾಂಡದಲ್ಲಿಸರ್ವಶಕ್ತಿಯಿಂದ ವ್ಯಾಪೃತ [೨] ರಿರುತ್ತಾರೆ ; ಹೀಗೆ ಮಾಡುತ್ತ ಕರ್ಮಚೇತನ ಪ್ರಧಾನತೆಯ ಕಾರಣ - ಅವರು ಅಶುಭಕರ್ಮ ಪ್ರವೃತ್ತಿಯ ತೀರ ನಿವಾರಣೆ ಮಾಡಿದ್ದರೂ - ಶುಭಕರ್ಮ ಪ್ರವೃತ್ತಿಯನ್ನು ಸರಿಯಾಗಿ ಗ್ರಹಣ ಮಾಡಿರುವಂಥ ಅವರು, ಎಲ್ಲ ಕ್ರಿಯಾಕಾಂಡದ ಆಡಂಬರದಿಂದ ಅತೀತವಾದ ದರ್ಶನಜ್ಞಾನಚಾರಿತ್ರದ

---

೧. ತದುಭಯ = ಅವೆರಡು (ಎಂದರೆ ಅರ್ಥ ಹಾಗೂ ವ್ಯಂಜನಗಳೆರಡು)

೨. ವ್ಯಾಪೃತ = ತಡೆದು ನಿಂತ ; ಸಿಕ್ಕಿಬಿದ್ದ ; ತೊಡಗಿಹೋದ ; ತಲ್ಲೀನ ; ಮಗ್ನ.

ನಿಗ್ರಹಲಕ್ಷಣಾಸು ಗುಪ್ತಿಷು ನಿತಾಂತಂ ಗೃಹಿತೋದ್ಯೋಗಾ, ಈರ್ಯಾಭಾಷೈಷಣಾದಾನನಿಕ್ಷೇಪೋತ್ಸರ್ಗರೂಪಾಸು ಸಮಿತಿಷ್ವತ್ಯಂತನಿವೇಶಿತಪ್ರಯತ್ನಾಃ , ತಪಆಚರಣಾಯಾನಶನಾವಮೌದರ್ಯವೃತ್ತಿಪರಿಸಂಖ್ಯಾನರಸಪರಿತ್ಯಾಗ-ವಿವಿಕ್ತಶಯ್ಯಾಸನಕಾಯಕ್ಲೇಶೇಷ್ವಭೀಕ್ಷ್ಣಮುತ್ಸಹಮಾನಾಃ, ಪ್ರಾಯಶ್ಚಿತ್ತವಿನಯವೈಯಾವೃತ್ಯವ್ಯುತ್ಸರ್ಗಸ್ವಾಧ್ಯಾಯ-ಧ್ಯಾನಪರಿಕರಾಂಕುಶಿತಸ್ವಾಂತಾ, ವೀರ್ಯಾಚರಣಾಯ ಕರ್ಮಕಾಂಡೇ ಸರ್ವಶಕ್ತ್ಯಾ ವ್ಯಾಪ್ರಿಯಮಾಣಾಃ, ಕರ್ಮಚೇತನಾಪ್ರಧಾನತ್ವಾದ್ದೂರನಿವಾರಿತಾऽಶುಭಕರ್ಮಪ್ರವೃತ್ತಯೋऽಪಿ ಸಮುಪಾತ್ತಶುಭಕರ್ಮಪ್ರವೃತ್ತಯಃ, ಸಕಲಕ್ರಿಯಾಕಾಂಡಾಡಂಬರೋತ್ತೀರ್ಣದರ್ಶನಜ್ಞಾನಚಾರಿತ್ರೈಕ್ಯಪರಿಣತಿರೂಪಾಂ ಜ್ಞಾನಚೇತನಾಂ ಮನಾಗಪ್ಯಸಂಭಾವಯಂತಃ, ಪ್ರಭೂತಪುಣ್ಯಭಾರಮಂಥರಿತಚಿತ್ತವೃತ್ತಯಃ ಸುರಲೋಕಾದಿಕ್ಲೇಶಪ್ರಾಪ್ತಿ-ಪರಂಪರಯಾ ಸುಚಿರಂ ಸಂಸಾರಸಾಗರೇ ಭ್ರಮಂತೀತಿ । ಉಕ್ತಂ ಚ - ''ಚರಣಕರಣಪ್ಪಹಾಣಾ ಸಸಮಯ-ಪರಮತ್ಥಮುಕ್ಕವಾವಾರಾ । ಚರಣಕರಣಸ್ಸ ಸಾರಂ ಣಿಚ್ಛಯಸುದ್ಧಂ ಣ ಜಾಣಂತಿ ॥''

ಏಕಪರಿಣತಿರೂಪವಾದ ಜ್ಞಾನಚೇತನವನ್ನು ಒಂದಿಷ್ಟೂ ಪ್ರಾಪ್ತ ಮಾಡಿಕೊಳ್ಳಲಾರದೆ, ಬಹಳಷ್ಟು ಪುಣ್ಯದ ಭಾರದಿಂದ ಮಂಥರ [೧] ವಾದ ಚಿತ್ತವೃತ್ತಿಯುಳ್ಳವರಾಗಿ ವರ್ತಿಸುತ್ತ, ದೇವಲೋಕಾದಿಗಳ ಕ್ಲೇಶದ ಪ್ರಾಪ್ತಿಯ ಪರಂಪರೆಯಿಂದ ತುಂಬ ದೀರ್ಘಕಾಲದವರೆಗೆ ಸಂಸಾರಸಾಗರದಲ್ಲಿ ಭ್ರಮಣ ಮಾಡುತ್ತಾರೆ. ಹಾಗೆ ಹೇಳಿಯೂ ಇದ್ದಾರೆ - ಚರಣಕರಣಪ್ರಧಾನಾಃ ಸ್ವಸಮಯಪರಮಾರ್ಥಮುಕ್ತವ್ಯಾಪಾರಾಃ । ಚರಣಕರಣಸ್ಯ ಸಾರಂ ನಿಶ್ಚಯಶುದ್ಧಂ ನ ಜಾನಂತಿ ॥ [೨] (ಎಂದರೆ ಯಾರು ಆಚರಣ ಪರಿಣಾಮ ಪ್ರಧಾನರಿದ್ದಾರೆ ಮತ್ತು ಸ್ವಸಮಯರೂಪ ಪರಮಾರ್ಥದಲ್ಲಿ ವ್ಯಾಪಾರರಹಿತರಿದ್ದಾರೆ ಅವರು ಆಚರಣ ಪರಿಣಾಮದ ಸಾರವಾದ ಯಾವ ನಿಶ್ಚಯಶುದ್ಧ (ಆತ್ಮ)ವಿದೆ ಅದನ್ನು ತಿಳಿದುಕೊಳ್ಳುವುದಿಲ್ಲ) [೩].

ಈಗ ಕೇವಲ ನಿಶ್ಚಯಾವಲಂಬಿಯಾದ (ಅಜ್ಞಾನಿ) ಜೀವರುಗಳ ಪ್ರವರ್ತನೆ ಮತ್ತು ಅದರ ಫಲವನ್ನು ಹೇಳಲಾಗುತ್ತದೆ-)

ಈಗ ಯಾರು ಕೇವಲ ನಿಶ್ಚಯಾವಲಂಬಿಯಾಗಿದ್ದಾರೆ, ಸಮಸ್ತ ಕ್ರಿಯಾಕರ್ಮಕಾಂಡದ ಆಡಂಬರದಿಂದ ವಿರಕ್ತಬುದ್ಧಿಯುಳ್ಳವರಾಗಿ ವರ್ತಿಸುತ್ತ, ಕಣ್ಣುಗಳನ್ನು ಅರ್ಧೋನ್ಮೀಲಿತವನ್ನಾಗಿಟ್ಟುಕೊಂಡು ಯಾವುದನ್ನೋ ತಮ್ಮ

---

೧. ಮಂಥರ = ಮಂದ ; ಜಡ ; ಸುಸ್ತ.

೨. ಇದು ಮೇಲೆ ಟೀಕೆಯಲ್ಲಿ ಉದಾಹರಿಸಿದ ಪ್ರಾಕೃತ ಗಾಥೆಯ ಸಂಸ್ಕೃತ ಛಾಯೆ ಇದೆ.

೩. ಶ್ರೀ ಜಯಸೇನಾಚಾರ್ಯದೇವಕೃತ ತಾತ್ಪರ್ಯವೃತ್ತಿ - ಟೀಕೆಯಲ್ಲಿ ವ್ಯವಹಾರ - ಏಕಾಂತದ ಸ್ಪಷ್ಟೀಕರಣವು ಹೀಗಿದೆ - ಯಾವ ಜೀವರುಗಳು ವಿಶುದ್ಧಜ್ಞಾನದರ್ಶನ ಸ್ವಭಾವವುಳ್ಳ ಶುದ್ಧಾತ್ಮತತ್ತ್ವದ ಸಮ್ಯಕ್ ಶ್ರದ್ಧೆ-ಜ್ಞಾನ-ಅನುಷ್ಠಾನರೂಪ ನಿಶ್ಚಯ ಮೋಕ್ಷಮಾರ್ಗದಿಂದ ನಿರಪೇಕ್ಷರಾಗಿ ಕೇವಲ ಶುಭಾನುಷ್ಠಾನರೂಪ ವ್ಯವಹಾರನಯಕ್ಕೇನೇ ಮೋಕ್ಷಮಾರ್ಗವೆಂದು ಮನ್ನಿಸುತ್ತಾರೆ ಅವರು ಅದರಿಂದ ದೇವಲೋಕಾದಿಗಳ ಕ್ಲೇಶದ ಪರಂಪರೆಯನ್ನು ಪ್ರಾಪ್ತಮಾಡಿಕೊಳ್ಳುತ್ತ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾರೆ ; ಆದರೆ ಒಂದು ವೇಳೆ ಶುದ್ಧಾತ್ಮಾನುಭೂತಿ ಲಕ್ಷಣವಾದ ನಿಶ್ಚಯ ಮೋಕ್ಷಮಾರ್ಗವನ್ನು ಮನ್ನಿಸಿದರೆ ಮತ್ತು ನಿಶ್ಚಯ ಮೋಕ್ಷಮಾರ್ಗದ ಅನುಷ್ಠಾನ ಮಾಡುವ ಶಕ್ತಿಯ ಅಭಾವದ ಕಾರಣ ನಿಶ್ಚಯ ಸಾಧಕರೆಂದು ಶುಭಾನುಷ್ಠಾನ ಮಾಡಿದರೆ ಅವರು ಸರಾಗ ಸಮ್ಯಗ್ದೃಷ್ಟಿಗಳಿದ್ದಾರೆ ಮತ್ತು ಪರಂಪರೆಯಿಂದ ಮೋಕ್ಷ ಪಡೆಯುತ್ತಾರೆ, - ಹೀಗೆ ವ್ಯವಹಾರ-ಏಕಾಂತದ ನಿರಾಕರಣೆಯ ಮುಖ್ಯತೆಯಿಂದ ಎರಡು ವಾಕ್ಯ ಹೇಳಲಾಗಿದೆ.

[ಇಲ್ಲಿ ಯಾವ 'ಸರಾಗ ಸಮ್ಯಗ್ದೃಷ್ಟಿ' ಜೀವಗಳೆಂದು ಹೇಳಿದೆ ಆ ಜೀವರುಗಳಿಗೆ ಸಮ್ಯಗ್ದರ್ಶನವಂತೂ ಯಥಾರ್ಥವೇ ಪ್ರಕಟವಾಗಿದೆ, ಆದರೆ ಚಾರಿತ್ರ ಅಪೇಕ್ಷೆಯಿಂದ ಅವರಿಗೆ ಮುಖ್ಯವಾಗಿ ರಾಗದ ಅಸ್ತಿತ್ವವಿರುವುದರಿಂದ 'ಸರಾಸಮ್ಯಗ್ದೃಷ್ಟಿ'ಯೆಂದು ಹೇಳಿರುವುದಾಗಿ ತಿಳಿದುಕೊಳ್ಳಬೇಕು. ಮತ್ತು ಅವರಿಗೆ ಯಾವ ಶುಭ ಅನುಷ್ಠಾನವಿದೆ ಅದು ಕೇವಲ ಉಪಚಾರದಿಂದಲೇ 'ನಿಶ್ಚಯಸಾಧಕ (ನಿಶ್ಚಯದ ಸಾಧನಭೂತ)'ವೆಂದು ಹೇಳಲಾಗಿದೆಯೆಂದು ತಿಳಿದುಕೊಳ್ಳಬೇಕು.]

ಯೇಽತ್ರ ಕೇವಲನಿಶ್ಚಯಾವಲಂಬಿನಃ ಸಕಲಕ್ರಿಯಾಕರ್ಮಕಾಂಡಾಡಂಬರವಿರಕ್ತಬುದ್ಧಯೋಽರ್ಧ-ಮೀಲಿತವಿಲೋಚನಪುಟಾಃಕಿಮಪಿ ಸ್ವಬುದ್ಧ್ಯಾವಲೋಕ್ಯ ಯಥಾಸುಖಮಾಸತೇ, ತೇ ಖಿಲ್ವವಧೀರಿತಭಿನ್ನಸಾಧ್ಯ-ಸಾಧನಭಾವಾ ಅಭಿನ್ನಸಾಧ್ಯಸಾಧನಭಾವಮಲಭಮಾನಾ ಅಂತರಾಲ ಏವ ಪ್ರಮಾದಕಾದಂಬರೀಮದಭರಾಲಸ-ಚೇತಸೋ ಮತ್ತಾ ಇವ, ಮೂರ್ಚ್ಛಿತಾ ಇವ, ಸುಷುಪ್ತಾ ಇವ, ಪ್ರಭೂತಘೃತಸಿತೋಪಲಪಾಯಸಾಸಾದಿತಸೌಹಿತ್ಯಾ ಇವ, ಸಮುಲ್ಬಣಬಲಸಂಜನಿತಜಾಡ್ಯಾ ಇವ, ದಾರುಣಮನೋಭ್ರಂಶವಿಹಿತ ಮೋಹಾ ಇವ, ಮುದ್ರಿತವಿಶಿಷ್ಟ-ಚೈತನ್ಯಾ ವನಸ್ಪತಯ ಇವ, ಮೌನೀಂದ್ರೀಂಕರ್ಮಚೇತನಾಂ ಪುಣ್ಯಬಂಧಭಯೇನಾನವಲಂಬಮಾನಾ ಅನಾಸಾದಿತ-ಪರಮನೈಷ್ಕರ್ಮ್ಯರೂಪಜ್ಞಾನಚೇತನಾವಿಶ್ರಾಂತಯೋ ವ್ಯಕ್ತಾವ್ಯಕ್ತಪ್ರಮಾದತಂತ್ರಾ ಅರಮಾಗತಕರ್ಮಫಲಚೇತನಾ-ಪ್ರಧಾನಪ್ರವೃತ್ತಯೋ ವನಸ್ಪತಯ ಇವ ಕೇವಲಂ ಪಾಪಮೇವ ಬಧ್ನಂತಿ । ಉಕ್ತಂ ಚ – ''ಣೆಚ್ಛಯಮಾಲಂಬಂತಾ ಣೆಚ್ಛಯದೋ ಣೆಚ್ಛಯಂ ಅಯಾಣಂತಾ । ಣಾಸಂತಿ ಚರಣಕರಣಂ ಬಾಹರಿಚರಣಾಲಸಾ ಕೇಈ ॥''

ಬುದ್ಧಿಯಿಂದ ಅವಲೋಕನ ಮಾಡಿ ಯಥಾಸುಖ [೧] ರಿರುತ್ತಾರೆ (ಎಂದರೆ ತಮ್ಮ ಮತಿಕಲ್ಪನೆಯಿಂದ ಯಾವುದೋ ಭಾಸದ ಕಲ್ಪನೆ ಮಾಡಿ ಇಚ್ಛಾನುಸಾರ - ಹೇಗೆ ಸುಖವು ಉತ್ಪನ್ನವಾಗುವುದು ಹಾಗೆ - ಇರುತ್ತಾರೆ) ಅವರು ವಾಸ್ತವಿಕವಾಗಿ ಭಿನ್ನಸಾಧ್ಯಸಾಧನಭಾವವನ್ನು [೨] ತಿರಸ್ಕರಿಸುತ್ತ, ಅಭಿನ್ನಸಾಧ್ಯಸಾಧನಭಾವವನ್ನು ದೊರಕಿಸಿಕೊಳ್ಳಲಾರದೆ ಮಧ್ಯದಲ್ಲಿಯೇ (ಶುಭ ಹಾಗೂ ಶುದ್ಧದ ಹೊರತಾಗಿ ಉಳಿದ ಮೂರನೆಯ ಅಶುಭಾವಸ್ಥೆಯಲ್ಲಿಯೇ) ಪ್ರಮಾದ ಮದ್ಯದ ಮದದಿಂದ ತುಂಬಿಹೋದ ಆಲಸ್ಯ ಚಿತ್ತವುಳ್ಳವರಾಗಿ ವರ್ತಿಸುತ್ತ ಮತ್ತ(ಉನ್ಮತ್ತ)ರಂತೆ, ಮೂರ್ಚ್ಛಿತರಂತೆ, ಸುಷುಪ್ತರಂತೆ, ಬಹಳಷ್ಟು ತುಪ್ಪ-ಸಕ್ಕರೆ-ಪಾಯಸಗಳನ್ನು ತಿಂದು ತೃಪ್ತಿಗೆ ಪ್ರಾಪ್ತ(ತೃಪ್ತ)ರಾದವರಂತೆ, ಸ್ಥೂಲಶರೀರದ ಕಾರಣ ಜಡತ್ವ (ಮಾಂದ್ಯತೆ, ನಿಷ್ಕ್ರಿಯತೆ) ಉತ್ಪನ್ನವಾದವರಂತೆ, ಭಯಂಕರವಾದ ಬುದ್ಧಿಭ್ರಂಶದಿಂದ ಮೂಢರಾಗಿ ಹೋದವರಂತೆ, ಯಾವುದರ ವಿಶಿಷ್ಟ ಚೈತನ್ಯವು ಮರೆಯಾಗಿ ಹೋಗಿದೆ ಅಂಥ ವನಸ್ಪತಿಯ ಹಾಗೆ, ಮುನೀಂದ್ರರ ಕರ್ಮಚೇತನವನ್ನು ಪುಣ್ಯಬಂಧದ [೩] ಭಯದಿಂದ ಅವಲಂಬಿಸದೆ ಮತ್ತು ಪರಮ ನೈಷ್ಕರ್ಮ್ಯರೂಪ ಜ್ಞಾನಚೇತನದಲ್ಲಿ

---

೧. ಯಥಾಸುಖ = ಇಚ್ಛಾನುಸಾರ ; ಹೇಗೆ ಸುಖವು ಉತ್ಪನ್ನವಾಗುವುದು ಹಾಗೆ ಯಥೇಚ್ಛರೂಪದಿಂದ. [ಯಾರಿಗೆ ದ್ರವ್ಯಾರ್ಥಿಕನಯದ (ನಿಶ್ಚಯನಯದ) ವಿಷಯಭೂತವಾದ ಶುದ್ಧಾತ್ಮ ದ್ರವ್ಯದ ಸಮ್ಯಕ್ ಶ್ರದ್ಧೆ ಅಥವಾ ಅನುಭವವಿಲ್ಲ ಹಾಗೂ ಅದಕ್ಕಾಗಿ ಉತ್ಸುಕತೆ, ಇಚ್ಛೆ ಅಥವಾ ಪ್ರಯತ್ನವಿಲ್ಲ, ಹೀಗಿದ್ದರೂ ಯಾರು ತಮ್ಮ ಕಲ್ಪನೆಯಿಂದ ತಮ್ಮಲ್ಲಿ ಸ್ವಲ್ಪ ಅಭಾಸವಾಗುವ ಕಲ್ಪನೆ ಮಾಡಿ ನಿಶ್ಚಿತರೂಪದಿಂದ ಸ್ವಚ್ಛಂದ ಪೂರ್ವಕವಾಗಿ ವರ್ತಿಸುತ್ತಾರೆ ''ಜ್ಞಾನೀ ಮೋಕ್ಷಮಾರ್ಗಿ ಜೀವರುಗಳಿಗೆ ಪ್ರಾಥಮಿಕ ಅವಸ್ಥೆಯಲ್ಲಿ ಆಂಶಿಕ ಶುದ್ಧಿಯ ಜೊತೆ-ಜೊತೆ ಭೂಮಿಕೆಗನುಸರಿಸಿ ಶುಭಭಾವಗಳೂ ಆಗುತ್ತವೆ''ಯೆಂಬ ಮಾತಿನ ಮೇಲೆ ಶ್ರದ್ಧೆ ಮಾಡುವುದಿಲ್ಲ ಅವರಿಗೆ ಇಲ್ಲಿ ಕೇವಲ ನಿಶ್ಚಯಾವಲಂಬಿಯೆಂದು ಹೇಳಿದೆ.]

೨. ಮೋಕ್ಷಮಾರ್ಗಿ ಜ್ಞಾನೀ ಜೀವರುಗಳಿಗೆ ಸವಿಕಲ್ಪ ಪ್ರಾಥಮಿಕ ಅವಸ್ಥೆಯಲ್ಲಿ (ಆರನೆಯ ಗುಣಸ್ಥಾನದವರೆಗೆ) ವ್ಯವಹಾರ ನಯದ ಅಪೇಕ್ಷೆಯಿಂದ ಭೂಮಿಕೆಗನುಸರಿಸಿ ಭಿನ್ನ ಸಾಧ್ಯಸಾಧನಭಾವಗಳಿರುತ್ತವೆ ಎಂದರೆ ಭೂಮಿಕೆಗನುಸರಿಸಿ ನವಪದಾರ್ಥಗಳ ಸಂಬಂಧದ, ಅಂಗ-ಪೂರ್ವ ಸಂಬಂಧದ ಮತ್ತು ಶ್ರಾವಕ-ಮುನಿಯ ಆಚರಣೆಯ ಸಂಬಂಧದ ಶುಭಭಾವಗಳಿರುತ್ತವೆ - ಈ ಮಾತನ್ನು ಕೇವಲ ನಿಶ್ಚಯಾವಲಂಬಿ ಜೀವರುಗಳು ಮನ್ನಿಸುವುದಿಲ್ಲ - ಎಂದರೆ (ಆಂಶಿಕ ಶುದ್ಧಿಯ ಜೊತೆಯ) ಶುಭಭಾವವುಳ್ಳ ಪ್ರಾಥಮಿಕಾವಸ್ಥೆಯನ್ನು ಶ್ರದ್ಧೆ ಮಾಡುವುದಿಲ್ಲ ಮತ್ತು ತಾವು ಅಶುಭ ಭಾವಗಳಲ್ಲಿ ವರ್ತಿಸುತ್ತಿದ್ದರೂ ತಮ್ಮಲ್ಲಿ ಉಚ್ಚ ಶುದ್ಧಾವಸ್ಥೆಯ ಕಲ್ಪನೆ ಮಾಡಿ ಸ್ವಚ್ಛಂದಿಯಿರುತ್ತಾರೆ.

೩. ಕೇವಲ ನಿಶ್ಚಯಾವಲಂಬಿ ಜೀವರುಗಳು ಪುಣ್ಯಬಂಧದ ಭಯದಿಂದ ಹೆದರಿ ಮಂದಕಷಾಯರೂಪ ಶುಭಭಾವವನ್ನು ಮಾಡುವುದಿಲ್ಲ ಮತ್ತು ಪಾಪಬಂಧಕ್ಕೆ ಕಾರಣಭೂತವಾದ ಅಶುಭ ಭಾವಗಳ ಸೇವನೆಯನ್ನಂತೂ ಮಾಡುತ್ತಿರುತ್ತಾರೆ. ಹೀಗೆ ಅವರು ಪಾಪಬಂಧವನ್ನೇ ಮಾಡಿಕೊಳ್ಳುತ್ತಾರೆ.

ಯೇ ತು ಪುನರಪುನರ್ಭವಾಯ ನಿತ್ಯವಿಹಿತೋದ್ಯೋಗಮಹಾಭಾಗಾ ಭಗವಂತೋ ನಿಶ್ಚಯ ವ್ಯವಹಾರಯೋರನ್ಯತರಾನವಲಂಬನೇನಾತ್ಯಂತಮಧ್ಯಸ್ಥೀಭೂತಾಃ ಶುದ್ಧಚೈತನ್ಯರೂಪಾತ್ಮತತ್ತ್ವವಿ -

---

ವಿಶ್ರಾಂತಿಯನ್ನು ಪಡೆಯದೆ, (ಕೇವಲ) ವ್ಯಕ್ತ-ಅವ್ಯಕ್ತ ಪ್ರಮಾದದ ಆಧೀನವಾಗಿ ವರ್ತಿಸುತ್ತ, ಪ್ರಾಪ್ತವಾದ ಕ್ಷುಲ್ಲಕ (ನಿಕೃಷ್ಟ) ಕರ್ಮಫಲ ಚೇತನದ ಪ್ರಾಧಾನ್ಯತೆಯಿರುವ ಪ್ರವೃತ್ತಿಯು ಯಾವುದಕ್ಕೆ ವರ್ತಿಸುತ್ತಿದೆ ಅಂಥ ವನಸ್ಪತಿಯ ಹಾಗೆ ಕೇವಲ ಪಾಪಕ್ಕೇನೇ ಬದ್ಧರಾಗುತ್ತಾರೆ. ಹಾಗೆ ಹೇಳಿಯೂ ಇದ್ದಾರೆ - ನಿಶ್ಚಯಮಾಲಂಬಂತೋ ನಿಶ್ಚಯತೋ ನಿಶ್ಚಯಮಜಾನಂತಃ । ನಾಶಯಂತಿ ಚರಣಕರಣಂ ಬಾಹ್ಯಚರಣಾಲಸಾಃ ಕೇಽಪಿ ॥ [೧] (ಎಂದರೆ ನಿಶ್ಚಯದ ಅವಲಂಬನೆ ತೆಗೆದುಕೊಳ್ಳುವಂಥ ಆದರೆ ನಿಶ್ಚಯದಿಂದ (ವಾಸ್ತವಿಕವಾಗಿ) ನಿಶ್ಚಯವನ್ನು ತಿಳಿದುಕೊಳ್ಳದಂಥ ಕೆಲ ಜೀವರುಗಳು ಬಾಹ್ಯಾಚರಣೆಯಲ್ಲಿ ಆಲಸ್ಯದಿಂದ ವರ್ತಿಸುತ್ತ ಚರಣ ಪರಿಣಾಮದ ನಾಶ ಮಾಡುತ್ತಾರೆ.)[೨]

(ಈಗ ನಿಶ್ಚಯ-ವ್ಯವಹಾರಗಳೆರಡರ ಸುಮೇಲ[೩] ಏರುವಂತೆ ಭೂಮಿಕೆಗೆ ಅನುಸರಿಸಿ ಪ್ರವರ್ತನೆ ಮಾಡುವಂಥ ಜ್ಞಾನೀ ಜೀವರುಗಳ ಪ್ರವರ್ತನೆ ಮತ್ತು ಅದರ ಫಲವನ್ನು ಹೇಳಲಾಗುತ್ತದೆ-)

---

೧. ಇದು ಮೇಲೆ ಟೀಕೆಯಲ್ಲಿ ಉದಾಹರಿಸಿದ ಪ್ರಾಕೃತಗಾಥೆಯ ಸಂಸ್ಕೃತಛಾಯೆಯಿದೆ.

೨. ಶ್ರೀ ಜಯಸೇನಾಚಾರ್ಯದೇವ ವಿರಚಿತ ಟೀಕೆಯಲ್ಲಿ (ವ್ಯವಹಾರ-ಏಕಾಂತದ ಸ್ಪಷ್ಟೀಕರಣ ಮಾಡಿದ ನಂತರ ಕೂಡಲೇ) ನಿಶ್ಚಯ-ಏಕಾಂತದ ಸ್ಪಷ್ಟೀಕರಣವನ್ನು ಹೀಗೆ ಮಾಡಲಾಗಿದೆ-

ಮತ್ತು ಯಾರು ಕೇವಲ ನಿಶ್ಚಯಾವಲಂಬಿಯಾಗಿ ವರ್ತಿಸುತ್ತ ರಾಗಾದಿ ವಿಕಲ್ಪಗಳಿಲ್ಲದ ಪರಮಸಮಾಧಿರೂಪ ಶುದ್ಧಾತ್ಮನನ್ನು ಪ್ರಾಪ್ತಮಾಡಿಕೊಳ್ಳದಿದ್ದರೂ, ಮುನಿಗಳಿಗೆ (ವ್ಯವಹಾರದಿಂದ) ಆಚರಣೆ ಮಾಡಲು ಯೋಗ್ಯ ಷಡ್‌ಆವಶ್ಯಕಾದಿರೂಪ ಅನುಷ್ಠಾನವನ್ನು ಹಾಗೂ ಶ್ರಾವಕರಿಗೆ (ವ್ಯವಹಾರದಿಂದ) ಆಚರಣೆ ಮಾಡಲು ಯೋಗ್ಯ ದಾನಪೂಜಾದಿರೂಪ ಅನುಷ್ಠಾನವನ್ನು ದೂಷಿಸುತ್ತಾರೆ, ಅವರೂ ಉಭಯಭ್ರಷ್ಟರಾಗಿ ವರ್ತಿಸುತ್ತ, ನಿಶ್ಚಯ ವ್ಯವಹಾರ - ಅನುಷ್ಠಾನ ಯೋಗ್ಯವಾದ ಅವಸ್ಥಾಂತರವನ್ನು ತಿಳಿದುಕೊಳ್ಳಲಾರದೆ ಪಾಪಕ್ಕೇನೇ ಬದ್ಧರಾಗುತ್ತಾರೆ (ಎಂದರೆ ಕೇವಲ ನಿಶ್ಚಯ-ಅನುಷ್ಠಾನರೂಪ ಶುದ್ಧ ಅವಸ್ಥೆಯಿಂದ ಭಿನ್ನವಾದಂಥ ಯಾವ ನಿಶ್ಚಯ-ಅನುಷ್ಠಾನ ಮತ್ತು ವ್ಯವಹಾರ-ಅನುಷ್ಠಾನವುಳ್ಳ ಮಿಶ್ರ ಅವಸ್ಥೆಯಿದೆ ಅದನ್ನು ತಿಳಿದುಕೊಳ್ಳದೆ ಪಾಪವನ್ನೇ ಕಟ್ಟಿಕೊಳ್ಳುತ್ತಾರೆ) ; ಆದರೆ ಒಂದು ವೇಳೆ ಶುದ್ಧಾತ್ಮಾನುಷ್ಠಾನರೂಪ ಮೋಕ್ಷಮಾರ್ಗವನ್ನು ಮತ್ತು ಅದಕ್ಕೆ ಸಾಧಕಭೂತ (ವ್ಯವಹಾರ ಸಾಧನರೂಪ)ವಾದ ವ್ಯವಹಾರ ಮೋಕ್ಷಮಾರ್ಗವನ್ನು ಮನ್ನಿಸಿದರೆ ಬೇಕಾದರೆ ಚಾರಿತ್ರಮೋಹದ ಉದಯದ ಕಾರಣ ಶಕ್ತಿಯ ಅಭಾವವಿರುವುದರಿಂದ ಶುಭ-ಅನುಷ್ಠಾನರಹಿತರಿದ್ದರೂ - ಅವರು ಶುದ್ಧಾತ್ಮಭಾವನಾಸಾಪೇಕ್ಷ ಶುಭ-ಅನುಷ್ಠಾನ ತತ್ಪರ ಪುರುಷರಂತಿಲ್ಲದಿದ್ದರೂ - ಸರಾಗ ಸಮ್ಯಕ್ತ್ವ ದಿಗಳಿಂದ ವ್ಯವಹಾರ ಸಮ್ಯಗ್ದೃಷ್ಟಿಗಳಿದ್ದಾರೆ ಮತ್ತು ಪರಂಪರೆಯಿಂದ ಮೋಕ್ಷ ಪಡೆಯುತ್ತಾರೆ - ಹೀಗೆ ನಿಶ್ಚಯ - ಏಕಾಂತದ ನಿರಾಕರಣದ ಮುಖ್ಯತೆಯಿಂದ ಎರಡು ವಾಕ್ಯ ಹೇಳಿದೆ.

[ಇಲ್ಲಿ ಯಾವ ಜೀವರುಗಳಿಗೆ 'ವ್ಯವಹಾರ ಸಮ್ಯಗ್ದೃಷ್ಟಿ'ಯೆಂದು ಹೇಳಿದೆ ಅವರು ಉಪಚಾರದಿಂದ ಸಮ್ಯಗ್ದೃಷ್ಟಿಯಿದ್ದಾರೆಂದು ತಿಳಿದುಕೊಳ್ಳಬಾರದು, ಆದರೆ ಅವರು ನಿಜವಾಗಿ ಸಮ್ಯಗ್ದೃಷ್ಟಿಯಿದ್ದಾರೆಂದು ತಿಳಿಯುವುದು ಅವರಿಗೆ ಚಾರಿತ್ರ ಅಪೇಕ್ಷೆಯಿಂದ ಮುಖ್ಯವಾಗಿ ರಾಗಾದಿಗಳು ವಿದ್ಯಮಾನವಿರುವುದರಿಂದ ಸರಾಗ ಸಮ್ಯಕ್ತ್ವ ವುಳ್ಳವರೆಂದು ಹೇಳಿ 'ವ್ಯವಹಾರ ಸಮ್ಯಗ್ದೃಷ್ಟಿ'ಯೆಂದಿದೆ. ಶ್ರೀ ಜಯಸೇನಾಚಾರ್ಯದೇವರು ತಾವೇ ೧೫೦-೧೫೧ ನೆಯ ಗಾಥೆಯ ಟೀಕೆಯಲ್ಲಿ ಹೀಗೆ ಹೇಳಿದ್ದಾರೆ - ಯಾವಾಗ ಈ ಜೀವನು ಆಗಮ ಭಾಷೆಯಿಂದ ಕಾಲಾದಿಲಬ್ಧಿರೂಪ ಮತ್ತು ಅಧ್ಯಾತ್ಮಭಾಷೆಯಿಂದ ಶುದ್ಧಾತ್ಮಾಭಿಮುಖ ಪರಿಣಾಮರೂಪ ಸ್ವಸಂವೇದನ ಪ್ರಾಪ್ತಮಾಡಿಕೊಳ್ಳುತ್ತಾನೆ ಆಗ ಮೊದಲಂತೂ ಅವನು ಮಿಥ್ಯಾತ್ವಾದಿ ಏಳು ಪ್ರಕೃತಿಗಳ ಉಪಶಮ ಮತ್ತು ಕ್ಷಯೋಪಶಮದಿಂದ ಸರಾಗ ಸಮ್ಯಗ್ದೃಷ್ಟಿಯಾಗುತ್ತಾನೆ.]

೩. ನಿಶ್ಚಯ-ವ್ಯವಹಾರದ ಸುಮೇಲದ ಸ್ಪಷ್ಟತೆಗಾಗಿ ೨೪೪ ಪುಟದ ಎರಡನೆಯ ಅಡಿ ಟಿಪ್ಪಣಿ ನೋಡಿರಿ.

ಶ್ರಾಂತಿವಿರಚನೋನ್ಮುಖಾಃ ಪ್ರಮಾದೋದಯಾನುವೃತ್ತಿನಿವರ್ತಿಕಾಂ ಕ್ರಿಯಾಕಾಂಡಪರಿಣತಿಂ ಮಾಹಾತ್ಮ್ಯನ್ನಿ-ವಾರಯಂತೋऽತ್ಯಂತಮುದಾಸೀನಾ ಯಥಾಶಕ್ತ್ಯಾऽऽತ್ಮಾನಮಾತ್ಮನಾऽऽತ್ಮನಿ ಸಂಚೇತಯಮಾನಾ ನಿತ್ಯೋಪಯುಕ್ತಾ ನಿವಸಂತಿ, ತೇ ಖಲು ಸ್ವತತ್ತ್ವವಿಶ್ರಾಂತ್ಯನುಸಾರೇಣ ಕ್ರಮೇಣ ಕರ್ಮಾಣಿ ಸನ್ಯಸಂತೋऽತ್ಯಂತ-ನಿಷ್ಪ್ರಮಾದಾ ನಿತಾಂತನಿಷ್ಕಂಪಮೂರ್ತಯೋ ವನಸ್ಪತಿಭಿರುಪಮೀಯಮಾನಾ ಅಪಿ ದೂರನಿರಸ್ತಕರ್ಮಫಲಾನು-ಭೂತಯಃ ಕರ್ಮಾನುಭೂತಿನಿರುತ್ಸುಕಾಃ ಕೇವಲಜ್ಞಾನಾನುಭೂತಿಸಮುಪಜಾತತಾತ್ತ್ವಿಕಾನಂದನಿರ್ಭರತರಾಸ್ತರಸಾ ಸಂಸಾರ- ಸಮುದ್ರಮುತ್ತೀರ್ಯ ಶಬ್ದಬ್ರಹ್ಮಫಲಸ್ಯ ಶಾಶ್ವತಸ್ಯ ಭೋಕ್ತಾರೋ ಭವಂತೀತಿ ।

ಆದರೆ ಯಾರು ಅಪುನರ್ಭವದ(ಮೋಕ್ಷದ)ಕುರಿತು ನಿತ್ಯ ಉದ್ಯೋಗ ಮಾಡುವಂಥ [೧] ಮಹಾಭಾಗ ಭಗವಂತರು ನಿಶ್ಚಯ - ವ್ಯವಹಾರಗಳೊಳಗಿಂದ ಯಾವುದೇ ಒಂದನ್ನೇ [೨] ಅವಲಂಬಿಸದೆ (ಕೇವಲ ನಿಶ್ಚಯಾವಲಂಬಿ ಅಥವಾ ಕೇವಲ ವ್ಯವಹಾರಾವಲಂಬಿಯಾಗದೆ) ಅತ್ಯಂತ ಮಾಧ್ಯಸ್ಥರಾಗಿ ವರ್ತಿಸುತ್ತ, ಶುದ್ಧ ಚೈತನ್ಯರೂಪ ಆತ್ಮ ತತ್ತ್ವದಲ್ಲಿ ವಿಶ್ರಾಂತಿಯ ವಿರಚನದತ್ತ [೩] ಅಭಿಮುಖರಾಗಿ ವರ್ತಿಸುತ್ತ ಪ್ರಮಾದದ ಉದಯದ ಅನುಸರಣೆ ಮಾಡುತ್ತಿರುವ ವೃತ್ತಿಯ ನಿವರ್ತನೆ ಮಾಡುವಂಥ (ನಿವಾರಿಸುವಂಥ) ಕ್ರಿಯಾಕಾಂಡ ಪರಿಣತಿಯನ್ನು ಮಹಾತ್ಮ್ಯದೊಳಗಿಂದ ತ್ಯಾಗಮಾಡುತ್ತ (ಶುಭ ಕ್ರಿಯಾಕಾಂಡ ಪರಿಣತಿಯು ಹಟವಿಲ್ಲದೆ ಸಹಜರೂಪದಿಂದ ಭೂಮಿಕೆಗನುಸರಿಸಿ ವರ್ತಿಸುತ್ತಿದ್ದರೂ ಅಂತರಂಗದಲ್ಲಿ ಅದಕ್ಕೆ ಗೌರವ ಕೊಡದೆ) ಅತ್ಯಂತ ಉದಾಸೀನರಾಗಿ ವರ್ತಿಸುತ್ತ ಯಥಾ ಶಕ್ತಿಯಾಗಿ ಆತ್ಮನನ್ನು ಆತ್ಮನಿಂದ ಆತ್ಮನಲ್ಲಿ ಸಂಚೇತಿಸುತ್ತ (ಅನುಭವಿಸುತ್ತ) ನಿತ್ಯ ಉಪಯುಕ್ತರಿರುತ್ತಾರೆ ಅವರು (ಆ ಮಹಾಭಾಗ ಭಗವಂತರು) ವಾಸ್ತವಿಕವಾಗಿ ಸ್ವತತ್ತ್ವದಲ್ಲಿ ವಿಶ್ರಾಂತಿಗೆ ಅನುಸರಿಸಿ ಕ್ರಮದಿಂದ ಕರ್ಮದ ಸಂನ್ಯಾಸ ಮಾಡುತ್ತ (ಸ್ವತತ್ತ್ವದಲ್ಲಿ ಸ್ಥಿರತೆಯಾಗುವುದಕ್ಕನುಸರಿಸಿ ಶುಭ ಭಾವಗಳನ್ನು ಬಿಟ್ಟುಕೊಡುತ್ತ) ಅತ್ಯಂತ ನಿಷ್ಪ್ರಮಾದರಾಗಿ ವರ್ತಿಸುತ್ತ, ಅತ್ಯಂತ ನಿಷ್ಕಂಪಮೂರ್ತಿಯಾಗಿರುವುದರಿಂದ ಅವರಿಗೆ ವನಸ್ಪತಿಯ ಉಪಮೆಯನ್ನು ಕೊಡಲಾಗುತ್ತಿದ್ದರೂ ಅವರು ಕರ್ಮಫಲಾನುಭೂತಿಯನ್ನು ಅತ್ಯಂತ ನಿರಸ್ತ (ನಷ್ಟ) ಮಾಡಿದವರಂತೆ ಕರ್ಮಾನುಭೂತಿಯ ಕುರಿತು ನಿರುತ್ಸುಕರಾಗಿ ವರ್ತಿಸುತ್ತ, ಕೇವಲಜ್ಞಾನಾನುಭೂತಿಯಿಂದ ಉತ್ಪನ್ನವಾದ ತಾತ್ವಿಕ ಆನಂದದಿಂದ ಅತ್ಯಂತ ಪರಿಪೂರ್ಣರಾಗಿ ವರ್ತಿಸುತ್ತ, ಶೀಘ್ರವಾಗಿಯೇ ಸಂಸಾರ ಸಮುದ್ರವನ್ನು ದಾಟಿ ಶಬ್ದ ಬ್ರಹ್ಮದ ಶಾಶ್ವತ ಫಲದ (-ನಿರ್ವಾಣ ಸುಖದ) ಭೋಕ್ತೃಗಳಾಗುತ್ತಾರೆ.

---

೧. ಮಹಾಭಾಗ - ಮಹಾಪವಿತ್ರ ; ಮಹಾಗುಣವಂತ ; ಮಹಾಭಾಗ್ಯಶಾಲಿ.

೨. ಮೋಕ್ಷಕ್ಕಾಗಿ ಯಾವಾಗಲೂ ಉದ್ಯಮಶೀಲರಾದಂಥ ಮಹಾಪವಿತ್ರ ಭಗವಂತರಿಗೆ (ಮೋಕ್ಷಮಾರ್ಗಿ ಜ್ಞಾನೀ ಜೀವರುಗಳಿಗೆ) ನಿರಂತರವಾಗಿ ಶುದ್ಧ ದ್ರವ್ಯಾರ್ಥಿಕನಯದ ವಿಷಯಭೂತವಾದ ಶುದ್ಧಾತ್ಮರೂಪದ ಸಮ್ಯಕ್ ಅವಲಂಬನವು ವರ್ತಿಸುತ್ತಿರುವುದರಿಂದ ಆ ಜೀವರುಗಳಿಗೆ ಆ ಅವಲಂಬನೆಯ ತರತಮತೆಗೆ ಅನುಸರಿಸಿ ಸವಿಕಲ್ಪಾವಸ್ಥೆಯಲ್ಲಿ ಭೂಮಿಕಾನುಸಾರವಾಗಿ ಶುದ್ಧಪರಿಣತಿ ಹಾಗೂ ಶುಭಪರಿಣತಿಯ (ಹಟವಿಲ್ಲದ) ಯಥೋಚಿತ ಸುಮೇಲವಿರುತ್ತದೆ ಅದಕ್ಕಾಗಿ ಆ ಜೀವರುಗಳು ಈ ಶಾಸ್ತ್ರದಲ್ಲಿ (೨೪೪ ಪುಟದ ಮೇಲೆ) ಯಾರಿಗೆ ಕೇವಲ ನಿಶ್ಚಯಾವಲಂಬಿಯೆಂದು ಹೇಳಿದೆ ಅಂಥ ಕೇವಲ ನಿಶ್ಚಯಾವಲಂಬಿಗಳಲ್ಲ ಮತ್ತು (೨೪೫ ಪುಟದ ಮೇಲೆ) ಯಾರಿಗೆ ಕೇವಲ ವ್ಯವಹಾರಾವಲಂಬಿಯೆಂದು ಹೇಳಿದೆ ಅಂಥ ಕೇವಲ ವ್ಯವಹಾರಾವಲಂಬಿಗಳಲ್ಲ.

೩. ವಿರಚನ = ವಿಶೇಷರೂಪದಿಂದ ರಚನೆ ; ರಚನೆ.

ಮಗ್ಗಪ್ಪಭಾವಣಟ್ಠಂ ಪವಯಣಭತ್ತಿಪ್ಪಚೋದಿದೇಣಮಯಾ ।
ಭಣಿಯಂ ಪವಯಣಸಾರಂ ಪಂಚತ್ಥಿಯಸಂಗಹಂ ಸುತ್ತಂ ॥೧೭೩॥

ಮಾರ್ಗಪ್ರಭಾವನಾರ್ಥಂ ಪ್ರವಚನಭಕ್ತಿಪ್ರಚೋದಿತೇನ ಮಯಾ ।
ಭಣಿತಂ ಪ್ರವಚನಸಾರಂ ಪಂಚಾಸ್ತಿಕಸಂಗ್ರಹಂ ಸೂತ್ರಮ್ ॥೧೭೩॥

ಕರ್ತುಃ ಪ್ರತಿಜ್ಞಾನಿರ್ವ್ಯೂಢಿಸೂಚಿಕಾ ಸಮಾಪನೇಯಮ್ ।

ಮಾರ್ಗೋ ಹಿ ಪರಮವೈರಾಗ್ಯಕರಣಪ್ರವಣಾ ಪಾರಮೇಶ್ವರೀ ಪರಮಾಜ್ಞಾ ; ತಸ್ಯಾಃ ಪ್ರಭಾವನಂ ಪ್ರಖ್ಯಾಪನದ್ವಾರೇಣ ಪ್ರಕೃಷ್ಟಪರಿಣತಿದ್ವಾರೇಣ ವಾ ಸಮುದ್ಯೋತನಮ್ ; ತದರ್ಥಮೇವ ಪರಮಾಗಮಾನುರಾಗವೇಗಪ್ರಚಲಿತಮನಸಾ ಸಂಕ್ಷೇಪಶಃ ಸಮಸ್ತವಸ್ತುತತ್ತ್ವಸೂಚಕತ್ವಾದತಿವಿಸ್ತೃತಸ್ಯಾಪಿ ಪ್ರವಚನಸ್ಯ ಸಾರಭೂತಂ ಪಂಚಾಸ್ತಿಕಾಯಸಂಗ್ರಹಾಭಿಧಾನಂ ಭಗವತ್ಸರ್ವಜ್ಞೋಪಜ್ಞತ್ವಾತ್ ಸೂತ್ರಮಿದಮಭಿಹಿತಂ ಮಯೇತಿ । ಅಥೈವಂ ಶಾಸ್ತ್ರಕಾರಃ ಪ್ರಾರಬ್ಧಸ್ಯಾಂತಮುಪಗಮ್ಯಾತ್ಯಂತಂ ಕೃತಕೃತ್ಯೋ ಭೂತ್ವಾ ಪರಮನೈಷ್ಕರ್ಮ್ಯರೂಪೇ ಶುದ್ಧಸ್ವರೂಪೇ ವಿಶ್ರಾಂತ ಇತಿ ಶ್ರದ್ಧೀಯತೇ ।

ಗಾಥೆ - ೧೭೩

ಗಾಥಾರ್ಥ :- [ಪವಯಣಭತ್ತಿಪ್ಪಚೋದಿದೇಣ ಮಯಾ] ಪ್ರವಚನದ ಭಕ್ತಿಯಿಂದ ಪ್ರೇರಿತನಾದಂಥ ನಾನು [ಮಗ್ಗಪ್ಪಭಾವಣಟ್ಠಂ] ಮಾರ್ಗದ ಪ್ರಭಾವನೆಯ ಕಾರಣ [ಪವಯಣಸಾರಂ] ಪ್ರವಚನದ ಸಾರಭೂತವಾದ [ಪಂಚತ್ಥಿಯಸಂಗಹಂ ಸುತ್ತಂ] 'ಪಂಚಾಸ್ತಿಕಾಯಸಂಗ್ರಹ' ಸೂತ್ರವನ್ನು [ಭಣಿಯಂ] ಹೇಳಿದೆನು.

ಟೀಕೆ :- ಇದು ಕರ್ತೃವಿನ ಪ್ರತಿಜ್ಞೆಯ ಪೂರ್ಣತೆಯನ್ನು ಸೂಚಿತಗೊಳಿಸುವಂಥ ಸಮಾಪ್ತಿಯಿದೆ. (ಎಂದರೆ ಇಲ್ಲಿ ಶಾಸ್ತ್ರ ಕರ್ತೃಗಳಾದ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವರು ತಮ್ಮ ಪ್ರತಿಜ್ಞೆಯ ಪೂರ್ಣತೆಯನ್ನು ಸೂಚಿತಗೊಳಿಸುತ್ತ ಶಾಸ್ತ್ರಸಮಾಪ್ತಿಯನ್ನು ಮಾಡುತ್ತಾರೆ.)

ಮಾರ್ಗ ಎಂದರೆ ಪರಮ ವೈರಾಗ್ಯ ಮಾಡುವುದರತ್ತ ಒಲಿಯುತ್ತಿರುವ ಪಾರಮೇಶ್ವರಿ ಪರಮ ಆಜ್ಞೆಯು (ಎಂದರೆ ಪರಮ ವೈರಾಗ್ಯ ಮಾಡುವ ಪರಮೇಶ್ವರರ ಪರಮ ಆಜ್ಞೆಯು) ; ಅದರ ಪ್ರಭಾವನೆ ಎಂದರೆ ಪ್ರಖ್ಯಾಪನದಿಂದ ಅಥವಾ ಪ್ರಕೃಷ್ಟ ಪರಿಣತಿಯಿಂದ ಅದರ ಸಮುದ್ಯೋತ ಮಾಡುವುದು ; (ಪರಮ ವೈರಾಗ್ಯ ಮಾಡುವ ಜಿನ ಭಗವಂತರ ಪರಮ ಆಜ್ಞೆಯ ಪ್ರಭಾವನೆ ಎಂದರೆ ೧) ಅದರ ಪ್ರಖ್ಯಾತಿ - ವಿಜ್ಞಾಪನೆ - ಮಾಡುವುದರಿಂದ ಅಥವಾ ೨)ಪರಮ ವೈರಾಗ್ಯಮಯ ಪ್ರಕೃಷ್ಟ ಪರಿಣಮನದಿಂದ ಅದರ ಉದ್ಯೋತವನ್ನು ಸಮ್ಯಕ್ ಪ್ರಕಾರದಿಂದಮಾಡುವುದು ;) ಅದರ ಕಾರಣವೇ (ಮಾರ್ಗದ ಪ್ರಭಾವನೆಯ ಕಾರಣವೇ) ಪರಮಾಗಮದ ಕಡೆಗಿರುವ ಅನುರಾಗದ ಭರದಿಂದ ಯಾರ ಮನಸ್ಸು ಅತ್ಯಂತ ಚಲಿತವಾಗುತ್ತಿತ್ತು ಅಂಥ ನಾನು ಈ 'ಪಂಚಾಸ್ತಿಕಾಯಸಂಗ್ರಹ'ವೆಂಬ ಹೆಸರಿನ ಸೂತ್ರವನ್ನು ಹೇಳಿದೆನು - ಅದು ಸರ್ವಜ್ಞ ಭಗವಂತರಿಂದ

ಪ್ರವಚನದ ಭಕ್ತಿಯಿಂ ಪ್ರೇರಿತನಾದ ನಾನು ಮಾರ್ಗಪ್ರಭಾವನೆಯ ಕುರಿತು ।
ಪ್ರವಚನದ ಸಾರಭೂತ 'ಪಂಚಾಸ್ತಿಕಾಯಸಂಗ್ರಹ' ಸೂತ್ರ ಪೇಳಿರುವೆನು ॥೧೭೩॥

ಇತಿ ಸಮಯವ್ಯಾಖ್ಯಾಯಾಂ ನವಪದಾರ್ಥಪುರಸ್ಸರಮೋಕ್ಷಮಾರ್ಗಪ್ರಪಂಚವರ್ಣನೋ ದ್ವಿತೀಯಃ ಶ್ರುತಸ್ಕಂಧಃ ಸಮಾಪ್ತಃ ॥

ಸ್ವಶಕ್ತಿಸಂಸೂಚಿತವಸ್ತುತತ್ತ್ವ - ವ್ಯಾಖ್ಯಾ ಕೃತೇಯಂ ಸಮಯಸ್ಯ ಶಬ್ದೈಃ ।
ಸ್ವರೂಪಗುಪ್ತಸ್ಯ ನ ಕಿಂಚಿದಸ್ತಿ ಕರ್ತವ್ಯಮೇವಾಮೃತಚಂದ್ರಸೂರೇಃ ॥೮॥

ಇತಿ ಪಂಚಾಸ್ತಿಕಾಯಸಂಗ್ರಹಾಭಿಧಾನಸ್ಯ ಸಮಯಸ್ಯ ವ್ಯಾಖ್ಯಾ ಸಮಾಪ್ತಾ ।

ಉಪಜ್ಞವಿರುವುದರಿಂದ (ವೀತರಾಗ ಸರ್ವಜ್ಞ ಜಿನ ಭಗವಂತರು ತಾವು ತಿಳಿದುಕೊಂಡು ಪ್ರಣೀತಮಾಡಿರುವುದರಿಂದ) 'ಸೂತ್ರ'ವಿದೆ, ಮತ್ತು ಯಾರು ಸಂಕ್ಷೇಪದಿಂದ ಸಮಸ್ತ ವಸ್ತುತತ್ತ್ವದ (ಎಲ್ಲ ವಸ್ತುಗಳ ಯಥಾರ್ಥ ಸ್ವರೂಪದ) ಪ್ರತಿಪಾದನ ಕರ್ತೃವಿರುವುದರಿಂದ ಅತ್ಯಂತ ವಿಸ್ತೃತವಾದಂಥದೂ ಕೂಡ ಪ್ರವಚನದ ಸಾರಭೂತವಿದೆ (ದ್ವಾದಶಾಂಗರೂಪದಿಂದ ವಿಸ್ತೀರ್ಣವಾದಂಥದೂ ಜಿನ ಪ್ರವಚನದ ಸಾರಭೂತವಿದೆ.)

ಈ ಪ್ರಕಾರ ಶಾಸ್ತ್ರಕಾರರು (ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವರು) ಪ್ರಾರಂಭ ಮಾಡಿದ ಕಾರ್ಯವು ಕೊನೆಯನ್ನು ತಲುಪಿ, ಅತ್ಯಂತ ಕೃತಕೃತ್ಯರಾಗಿ, ಪರಮನೈಷ್ಕರ್ಮ್ಯರೂಪ ಶುದ್ಧ ಸ್ವರೂಪದಲ್ಲಿ ವಿಶ್ರಾಂತರಾದರು (ಪರಮ ನಿಷ್ಕರ್ಮತನರೂಪವಾದ ಶುದ್ಧಸ್ವರೂಪದಲ್ಲಿ ಸ್ಥಿರರಾದರು) ಎಂದು ಪ್ರತೀತಿಯಾಗುತ್ತದೆ (ಎಂದರೆ ಹೀಗೆ ನಾವು ಶ್ರದ್ಧೆ ಮಾಡುತ್ತೇವೆ.)

ಈ ಪ್ರಕಾರವಾಗಿ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವ ಪ್ರಣೀತ ಶ್ರೀ ಪಂಚಾಸ್ತಿಕಾಯ ಸಂಗ್ರಹ ಶಾಸ್ತ್ರದ ಶ್ರೀಮದ್ ಅಮೃತಚಂದ್ರಾಚಾರ್ಯದೇವ ವಿರಚಿತ ಸಮಯವ್ಯಾಖ್ಯೆಯೆಂಬ ಹೆಸರಿನ ಟೀಕೆಯಲ್ಲಿ ನವಪದಾರ್ಥಪೂರ್ವಕ ಮೋಕ್ಷಮಾರ್ಗಪ್ರಪಂಚ ವರ್ಣನವೆಂಬ ಹೆಸರಿನ ದ್ವಿತೀಯಶ್ರುತಸ್ಕಂಧವು ಸಮಾಪ್ತವಾಯಿತು.

(ಈಗ 'ಈ ಟೀಕೆಯನ್ನು ಶಬ್ದಗಳು ಮಾಡಿವೆ, ಅಮೃತಚಂದ್ರಸೂರಿಯು ಮಾಡಿಲ್ಲ'ವೆಂಬ ಅರ್ಥದ ಒಂದು ಕೊನೆಯ ಶ್ಲೋಕವನ್ನು ಹೇಳಿ ಶ್ರೀ ಅಮೃತಚಂದ್ರಾಚಾರ್ಯದೇವರು ಟೀಕೆಯ ಪೂರ್ಣಾಹುತಿ ಮಾಡುತ್ತಾರೆ;)

ಶ್ಲೋಕಾರ್ಥ :- ಯಾವವು ವಸ್ತುವಿನ ತತ್ತ್ವವನ್ನು (ಯಥಾರ್ಥ ಸ್ವರೂಪವನ್ನು) ತಮ್ಮ ಶಕ್ತಿಯಿಂದ ಚನ್ನಾಗಿ ಹೇಳಿವೆ ಅಂಥ ಶಬ್ದಗಳು ಈ ಸಮಯದ ವ್ಯಾಖ್ಯೆಯನ್ನು (ಅರ್ಥಸಮಯದ ವ್ಯಾಖ್ಯಾನವನ್ನು ಅಥವಾ ಪಂಚಾಸ್ತಿಕಾಯಸಂಗ್ರಹ ಶಾಸ್ತ್ರದ ಟೀಕೆಯನ್ನು) ಮಾಡಿವೆ ; ಸ್ವರೂಪ ಗುಪ್ತರಾದ (ಅಮೂರ್ತಿಕ ಜ್ಞಾನಮಾತ್ರ ಸ್ವರೂಪದಲ್ಲಿ ಗುಪ್ತರಾದ) ಶ್ರೀ ಅಮೃತಚಂದ್ರಸೂರಿಯದು (ಅದರಲ್ಲಿ) ಸ್ವಲ್ಪವೂ ಕರ್ತವ್ಯವಿಲ್ಲ.

ಈ ಪ್ರಕಾರವಾಗಿ ಶ್ರೀಮದ್ ಭಗವತ್ಕುಂದಕುಂದಾಚಾರ್ಯದೇವ ಪ್ರಣೀತ ಶ್ರೀ ಪಂಚಾಸ್ತಿಕಾಯಸಂಗ್ರಹ ವೆಂಬ ಹೆಸರಿನ ಸಮಯದ ಎಂದರೆ ಶಾಸ್ತ್ರದ ಶ್ರೀಮದ್ ಅಮೃತಚಂದ್ರಾಚಾರ್ಯದೇವ ವಿರಚಿತ ಸಮಯ ವ್ಯಾಖ್ಯೆಯೆಂಬ ಹೆಸರಿನ ಟೀಕೆಯ ಶ್ರೀ ಹಿಮ್ಮತಲಾಲ ಜೇಠಾಲಾಲ ಶಾಹ, ಬಿ.ಎಸ್.ಸಿ. ಕೃತ ಗುಜರಾತಿ ಅನುವಾದದಿಂದ ಕನ್ನಡದಲ್ಲಿ ಶ್ರೀ ಎಂ. ಬಿ. ಪಾಟೀಲರು ಮಾಡಿದ ಅನುವಾದವು ಸಮಾಪ್ತವಾಯಿತು.

★★★★★

ಗಾಥೆಗಳ ವರ್ಣಾನುಕ್ರಮ ಸೂಚಿ

	ಗಾಥೆ	ಪುಟ
ಅ		
ಅಗುರುಲಘುಗೇಹಿಂ ಸಯಾಂ	೮೪	೧೨೭
ಅಗುರುಲಹುಗಾ ಅಣಂತಾ	೩೧	೫೯
ಅಣ್ಣಾಣಾದೋ ಣಾಣೀ	೧೬೫	೨೨೯
ಅಣ್ಣೋಣ್ಣಂ ಪವಿಸಂತಾ	೭	೧೭
ಅತ್ತಾಕುಣದಿ ಸಭಾವಂ	೬೫	೧೦೩
ಅಭಿವಂದಿಊಣ ಸಿರಸಾ	೧೦೫	೧೫೩
ಅರಸಮರೂವಮಗಂಧಂ	೧೨೭	೧೭೭
ಅರಹಂತಸಿದ್ಧಚೇದಿಯ	೧೬೬	೨೩೦
ಅರಹಂತಸಿದ್ಧಚೇದಿಯ	೧೭೧	೨೩೬
ಅರಹಂತಸಿದ್ಧಸಾಹುಸು	೧೩೬	೧೮೮
ಅವಿಭತ್ತಮಣಣ್ಣತ್ತಂ	೪೫	೭೯
ಅಂಡೇಸು ಪವಡ್ಢಂತಾ	೧೧೩	೧೬೩
ಆ		
ಆಗಾಸಕಾಲ ಜೀವಾ	೯೭	೧೪೧
ಆಗಾಸಕಾಲ ಪುಗ್ಗಲ	೧೨೪	೧೭೫
ಆಗಾಸಂ ಅವಗಾಸು	೯೨	೧೩೭
ಆದೇಸಮೇತ್ತಮುತ್ತೋ	೭೮	೧೧೮
ಆಭಿಣಿಸುದೋಧಿಮಣ	೪೧	೭೨
ಆಸವದಿ ಜೇಣ ಪುಣ್ಣಂ	೧೫೭	೨೧೬
ಇ		
ಇಂದಸದವಂದಿಯಾಣಂ	೧	೪
ಇಂದಿಯಕಸಾಯಸಣ್ಣಾ	೧೪೧	೧೯೪
ಉ		
ಉದಯಂ ಜಹ ಮಚ್ಛಾಣಂ	೮೫	೧೨೮
ಉದಯೇಣ ಉವಸಮೇಣ ಯ	೫೬	೯೨
ಉದ್ದಂಸಮಸಯಮಕ್ಖಿಯ	೧೧೬	೧೬೬
ಉಪ್ಪತ್ತೀವ ವಿಣಾಸೋ	೧೧	೨೬
ಉವಓಗೋ ಖಲು ದುವಿಹೋ	೪೦	೭೧
ಉವಭೋಜ್ಜಮಿಂದಿಏಹಿಂ	೮೨	೧೨೫
ಉವಸಂತಖೀಣಮೋಹೋ	೭೦	೧೦೯
ಏ		
ಏಕ್ಕೋ ಚೇದ ಮಹಪ್ಪಾ	೭೧	೧೧೦
ಏದೇ ಕಾಲಾಗಾಸಾ	೧೦೨	೧೪೮
ಏದೇ ಜೀವಣಿಕಾಯಾ	೧೨೦	೧೭೦
ಏದೇ ಜೀವಣಿಕಾಯಾ	೧೧೨	೧೬೨
ಏಯರಸವಣ್ಣಗಂಧಂ	೮೧	೧೨೩
ಏವಮಭಿಗಮ್ಮ ಜೀವಂ	೧೨೩	೧೭೪
ಏವಂ ಕತ್ತಾ ಭೋತ್ತಾ	೬೯	೧೦೮
ಏವಂ ಪವಯಣಸಾರಂ	೧೦೩	೧೪೯
ಏವಂ ಭಾವಮಭಾವಂ	೨೧	೪೨
ಏವಂ ಸದೋ ವಿಣಾಸೋ	೧೯	೩೭
ಏವಂ ಸದೋ ವಿಣಾಸೋ	೫೪	೯೦
ಓ		
ಓಗಾಢಗಾಢಣಿಚಿದೋ	೬೪	೧೦೨
ಕ		
ಕಮ್ಮಮಲವಿಪ್ಪಮುಕ್ಕೋ	೨೮	೫೩
ಕಮ್ಮಸ್ಸಾಭಾವೇಣ ಯ	೧೫೧	೨೦೭
ಕಮ್ಮಂ ಕಮ್ಮಂ ಕುವ್ವದಿ	೬೩	೧೦೧
ಕಮ್ಮಂ ಪಿಸಗಂ ಕುವ್ವದಿ	೬೨	೯೯
ಕಮ್ಮ ವೇದಯಮಾಣೋ ಜೀವೋ	೫೭	೯೪
ಕಮ್ಮಾಣಂ ಫಲಮೇಕ್ಕೋ	೩೮	೬೮
ಕಮ್ಮೇಣವಿಣಾ ಉದಯಂ	೫೮	೯೫
ಕಾಲೋ ತ್ತಿ ಯ ವವದೇಸೋ	೧೦೧	೧೪೭
ಕಾಲೋ ಪರಿಣಾಮಭವೋ	೧೦೦	೧೪೫

ಗಾಥೆಗಳ ವರ್ಣಾನುಕ್ರಮ ಸೂಚಿ

	ಗಾಥೆ	ಪುಟ
ಕುವ್ವಂ ಸಗಂ ಸಹಾವಂ	೬೧	೯೮
ಕೇಚಿತ್ತು ಅಣಾವಣ್ಣಾ	೩೨	೫೯
ಕೋಧೋವಜದಾಮಾಣೋ	೧೩೮	೧೯೧
ಖ		
ಖಿಂದಂ ಸಯಲಸಮತ್ಥಂ	೭೫	೧೧೪
ಖಿಂಧಾ ಯ ಖಿಂಧದೇಸಾ	೭೪	೧೧೩
ಖೀಣೇ ಪುವ್ವಣಿಬದ್ದೇ	೧೧೯	೧೬೯
ಗ		
ಗದಿಮಧಿಗದಸ್ಸ ದೇಹೋ	೧೨೯	೧೭೯
ಚ		
ಚರಿಯಂ ಚರದಿ ಸಗಂ	೧೫೯	೨೧೮
ಚರಿಯಾ ಪಮಾದ ಬಹುಲಾ	೧೩೯	೧೯೨
ಛ		
ಛಕ್ಕಾಪಕ್ಕಮಜುತ್ತೋ	೭೨	೧೧೧
ಜ		
ಜದಿ ಹವದಿ ಗಮಣಹೇದೂ	೯೪	೧೩೮
ಜದಿ ಹವದಿ ದವ್ವಮಣ್ಣಂ	೪೪	೭೮
ಜಮ್ಹಾ ಉಪರಿಟ್ಠಾಣಂ	೯೩	೧೩೮
ಜಮ್ಹಾ ತಮ್ಮಸ್ಸ ಫಲಂ	೧೩೩	೧೮೫
ಜಸ್ಸ ಜದಾ ಖಲು ಪುಣ್ಣಂ	೧೪೩	೧೯೬
ಜಸ್ಸ ಣ ವಿಜ್ಜದಿ	೧೪೬	೨೦೦
ಜಸ್ಸ ಣ ವಿಜ್ಜದಿ ರಾಗೋ	೧೪೨	೧೯೫
ಜಸ್ಸ ಹಿದಯೇಣುವೇತ್ತಂ	೧೬೭	೨೩೧
ಜಹ ಪಉಮರಾಯರಯಣಂ	೩೩	೬೧
ಜಹ ಪೋಗ್ಗಲ ದವ್ವಾಣಂ	೬೬	೧೦೪
ಜಹ ಹವದಿ ಧಮ್ಮದವ್ವಂ	೮೬	೧೨೯
ಜಂ ಸುಹಮಸುಹಮುದ್ದಿಣ್ಣಂ	೧೪೭	೨೦೨
ಜಾಣದಿ ಪಸ್ಸದಿ ಸವ್ವಂ	೧೨೨	೧೭೨
ಜಾದೋ ಅಲೋಗಲೋಗೋ	೮೭	೧೩೦
ಜಾದೋ ಸಯಂ ಚ ಚೇದಾ	೨೯	೫೬
ಜಾಯದಿ ಜೀವಸ್ಸೇವಂ	೧೩೦	೧೮೦
ಜೀವಸಹಾವಂ ಣಾಣಂ	೧೫೪	೨೧೨
ಜೀವಾ ಅಣಾಇಣಿಹಣಾ	೫೩	೮೮
ಜೀವಾಜೀವಾ ಭಾವಾ	೧೦೮	೧೫೭
ಜೀವಾ ಪೋಗ್ಗಲಕಾಯಾ	೬೭	೧೦೫
ಜೀವಾ ಪೋಗ್ಗಲಕಾಯಾ	೨೨	೪೪
ಜೀವಾ ಪೋಗ್ಗಲಕಾಯಾ	೪	೯
ಜೀವಾ ಪೋಗ್ಗಲಕಾಯಾ	೯೧	೧೩೬
ಜೀವಾ ಪೋಗ್ಗಲಕಾಯಾ	೯೮	೧೪೨
ಜೀವಾ ಸಂಸಾರತ್ಥಾ	೧೦೯	೧೫೯
ಜೀವೋ ತ್ತಿ ಹವದಿ ಚೇದಾ	೨೭	೫೧
ಜೀವೋ ಸಹಾವಣಿಯದೋ	೧೫೫	೨೧೩
ಜೂಗಾಗುಂಭೀಮಕ್ಕಣ	೧೧೫	೧೬೫
ಜೇ ಖಲು ಇಂದಿಯಗೇಜ್ಝಾ	೯೯	೧೪೪
ಜೇಣ ವಿಜಾಣದಿ ಸವ್ವಂ	೧೬೩	೨೨೬
ಜೇಸಿಂ ಅತ್ಥಿ ಸಹಾಓ	೫	೧೨
ಜೇಸಿಂ ಜೀವಸಹಾವೋ	೩೪	೬೪
ಜೋ ಖಲು ಸಂಸಾರತ್ಥೋ	೧೨೮	೧೭೯
ಜೋಗಣಿಮಿತ್ತಂ ಗಹಣಂ	೧೪೮	೨೦೪
ಜೋ ಚರದಿ ಣಾದಿ ಪೇಚ್ಚದಿ	೧೬೨	೨೨೫
ಜೋ ಪರದವ್ವಮ್ಮಿ ಸುಹ	೧೫೬	೨೧೫
ಜೋ ಸವ್ವಸಂಗಮುಕ್ಕೋ	೧೫೮	೨೧೭
ಜೋ ಸಂವರೇಣ ಜುತ್ತೋ	೧೪೫	೧೯೯
ಜೋ ಸಂವರೇಣ ಜುತ್ತೋ	೧೫೩	೨೧೦
ಣ		
ಣಕುದೋಚಿ ವಿ ಉಪ್ಪಣ್ಣೋ	೩೬	೬೫

ಗಾಥೆಗಳ ವರ್ಣಾನುಕ್ರಮ ಸೂಚಿ

	ಗಾಥೆ	ಪುಟ		ಗಾಥೆ	ಪುಟ
ಣತ್ತಿ ಚಿರಂ ವಾ ಖಿಪ್ಪಂ	೨೬	೪೯	ಧ		
ಣ ಯ ಗಚ್ಛದಿ ಧಮ್ಮತ್ಥಾ	೮೮	೧೩೨	ಧಮ್ಮತ್ಥಿಕಾಯಮರಸಂ	೮೩	೧೨೬
ಣ ವಿಯಪ್ಪದಿ ಣಾಣಾದೋ	೪೩	೭೭	ಧಮ್ಮಾದೀಸದ್ದಹಣಂ	೧೬೦	೨೨೦
ಣ ಹಿ ಇಂದಿಯಾಣಿ ಜೀವಾ	೧೨೧	೧೭೧	ಧಮ್ಮಾಧಮ್ಮಾಗಾಸಾ	೯೬	೧೪೦
ಣ ಹಿ ಸೋ ಸಮವಾಯಾದೋ	೪೯	೮೪	ಧರಿದುಂ ಜಸ್ಸ ಣ ಸಕ್ಕಂ	೧೬೮	೨೩೨
ಣಾಣಂಧಣಂ ಚ ಕುವ್ವದಿ	೪೭	೮೨	ಪ		
ಣಾಣಾವರಣಾದೀಯಾ ಭಾವಾ	೨೦	೩೯	ಪಜ್ಜಯವಿಜುದಂ ದವ್ವಂ	೧೨	೨೮
ಣಾಣೀ ಣಾಣಂ ಚ ಸದಾ	೪೮	೮೩	ಪಯಡಿಟ್ಠಿದಿ ಅಣುಭಾಗ	೭೩	೧೧೨
ಣಿಚ್ಚೋ ಣಾಣವಗಾಸೋ	೮೦	೧೨೧	ಪಾಣೇಹಿಂ ಚದುಹಿಂ ಜೀವದಿ	೩೦	೫೮
ಣಿಚ್ಚಯಣಯೇಣ ಭಣಿದೋ	೧೬೧	೨೨೨	ಪುಢವೀ ಯ ಉದಗಮಗಣೇ	೧೧೦	೧೬೦
ಣೇರಇಯತಿರಿಯಮಣುಆ	೫೫	೮೧	ಬಾದರಸುಹುಮಗದಾಣಂ	೭೬	೧೧೫
ತ			ಭ		
ತಮ್ಹಾ ಕಮ್ಮಂ ಕತ್ತಾ	೬೮	೧೦೭	ಭವಸ್ಸ ಣತ್ಥಿ ಣಾಸೋ	೧೫	೩೨
ತಮ್ಹಾ ಧಮ್ಮಾಧಮ್ಮಾ	೯೫	೧೩೯	ಭಾವಾ ಜೀವಾದೀಯಾ	೧೬	೩೩
ತಮ್ಹಾ ಣೆವ್ವದಿಕಾಮೋ	೧೬೯	೨೩೩	ಭಾವೋ ಕಮ್ಮಣಿಮಿತ್ತೋ	೬೦	೯೭
ತಮ್ಹಾ ಣೆವ್ವದಿಕಾಮೋ	೧೭೨	೨೩೭	ಭಾವೋ ಜದಿ ಕಮ್ಮಕದೋ	೫೯	೯೬
ತಿ ತ್ಥಾವರತಣುಜೋಗಾ	೧೧೧	೧೬೨			
ತಿಸಿದಂ ಬುಭುಕ್ಖಿದಂ	೧೩೭	೧೯೦	ಮ		
ತೇ ಚೇವ ಅತ್ಥಿಕಾಯಾ	೬	೧೬	ಮಗ್ಗಪ್ಪಭಾವಣಟ್ಠಂ	೧೭೩	೨೪೭
			ಮಣುಸತ್ತಣೇಣ ಣಟ್ಠೋ	೧೭	೩೫
ದ			ಮುಣಿಊಣ ಏತದಟ್ಠಂ	೧೦೪	೧೫೧
ದವಿಯದಿ ಗಚ್ಛದಿ	೯	೨೨	ಮುತ್ತೋ ಫಾಸದಿ ಮುತ್ತಂ	೧೩೪	೧೪೬
ದವ್ವಂ ಸಲ್ಲಕ್ಖಣಯಂ	೧೦	೨೪	ಮೋಹೋ ರಾಗೋ ದೋಸೋ	೧೩೧	೧೪೨
ದವ್ವೇಣ ವಿಣಾ ಣ ಗುಣಾ	೧೩	೨೯			
ದಂಸಣಣಾಣಚರಿತ್ತಾಣಿ	೧೬೪	೨೨೭	ರ		
ದಂಸಣಣಾಣಸಮಗ್ಗಂ	೧೫೨	೨೦೯	ರಾಗೋ ಜಸ್ಸ ಪಸತ್ಥೋ	೧೩೫	೧೪೭
ದಂಸಣಣಾಣಾಣಿ ತಹಾ	೫೨	೮೭			
ದಂಸಣಮವಿ ಚಕ್ಖು ಜುದಂ	೪೨	೭೫	ವ		
ದೇವಾ ಚಉಣ್ಣಿಕಾಯಾ	೧೧೪	೧೬೭	ವಣ್ಣರಸಗಂಧಪಾಸಾ	೫೧	೮೬
			ವವಗದ ಪಣವಣ್ಣರಸೋ	೨೪	೪೬

ಗಾಥೆಗಳ ವರ್ಣಾನುಕ್ರಮ ಸೂಚಿ

	ಗಾಥೆ	ಪುಟ		ಗಾಥೆ	ಪುಟ
ವವದೇಸಾ ಸಂತಾಣಾ	೪೬	೮೦	ಸವ್ವೇ ಖಲು ಕಮ್ಮಫಲಂ	೩೯	೬೯
ವಿಜ್ಜದಿ ಜೇಸಿಂ ಗಮಣಂ	೮೯	೧೩೪	ಸವ್ವೇಸಿಂ ಖಂಧಾಣಂ	೭೭	೧೧೭
			ಸವ್ವೇಸಿಂ ಜೀವಾಣಂ	೯೦	೧೩೫
ಸ			ಸಸ್ಸದಮಧ ಉಚ್ಛೇದಂ	೫೭	೬೬
ಸಣ್ಣಾಓ ಯ ತಿಲೇಸ್ಸಾ	೧೪೦	೧೯೩	ಸಂತಾಣಾ ಸಂಘಾದಾ	೧೨೬	೧೭೭
ಸತ್ತಾಸವ್ವಪಯತ್ಥಾ	೮	೧೮	ಸಂಬುಕ್ಕಮಾದುವಾಹಾ	೧೧೪	೧೬೪
ಸದ್ದೋ ಖಂಧಪ್ಪಭವೋ	೭೯	೧೨೦	ಸಂವರಜೋಗೇಹಿಂ ಜುದೋ	೧೪೪	೧೯೭
ಸಪಯತ್ಥಂ ತಿತ್ಥಯರಂ	೧೭೦	೨೩೫	ಸಿಯ ಅತ್ಥಿ ಣತ್ಥಿ ಉಹಯಂ	೧೪	೩೦
ಸಬ್ಭಾವಸಭಾವಾಣಂ	೨೩	೪೫	ಸುರಣರಣಾರಯತಿರಿಯಾ	೧೧೭	೧೬೬
ಸಮಓ ಣಿಮಿಸೋ ಕಟ್ಠಾ	೨೫	೪೭	ಸುಹದುಕ್ಖಜ್ಞಾಣಣಾವಾ	೧೨೫	೧೭೬
ಸಮಣಮುಹುಗ್ಗದಮಟ್ಠಂ	೨	೬	ಸುಹಪರಿಣಾಮೋ ಪುಣ್ಣಂ	೧೩೨	೧೪೩
ಸಮವತ್ತೀ ಸಮವಾಓ	೫೦	೮೫	ಸೋ ಚೇವ ಜಾದಿ ಮರಣಂ	೧೪	೩೬
ಸಮವಾಓ ಪಂಚಣ್ಹಂ	೩	೮			
ಸಮ್ಮತ್ತಣಾಣಜುತ್ತಂ	೧೦೬	೧೫೪	ಹ		
ಸಮ್ಮತ್ತಂ ಸದ್ದಹಣಂ	೧೦೭	೧೫೫	ಹೇದುಮಭಾವೇ ಣಿಯಮಾ	೧೫೦	೨೦೭
ಸವ್ವತ್ಥ ಅತ್ಥಿ ಜೀವೋ	೩೪	೬೩	ಹೇದೂ ಚದುವ್ವಿಯಪ್ಪೋ	೧೪೯	೨೦೫